ಕನಕಗಿರಿ ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

346-350

ಸಂಶೋಧಕರು

ನಾರಾಯಣ ಗಿರಿಯಪ್ಪ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

350

ಕನ್ನಡ ವಿಶ್ವವಿದ್ಯಾಲಯ, ಹಂಪಿ

AKSHARA GRANTHALAYA
ACC.NO. 049243

ಕನಕಗಿರಿ ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ನಾರಾಯಣ ಗಿರಿಯಪ್ಪ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

398.2
NAR K

049243

ಪ್ರಮಾಣ ಪತ್ರ

ಕನಕಗಿರಿ ಸಂಕಥನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ

ಶ್ರೀ ನಾರಾಯಣ ಗಿರಿಯಪ್ಪ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೮.೧೧.೨೦೦೯

ದೃಢೀಕರಣ ಪತ್ರ

ಶ್ರೀ ನಾರಾಯಣ ಗಿರಿಯಪ್ಪ ಅವರು ಕನಕಗಿರಿ ಸಂಕಥನ ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಪ್ರೌಢಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದಶಕರು

ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೮.೧೧.೨೦೦೯

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಹಾಗೂ, ಡಾ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಶ್ರೀ ವಿ.ಶಂಕರ್, ಶ್ರೀ ಎಸ್.ಎಸ್.ಪೂಜಾರ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು. ಆಡಳಿತ ವರ್ಗದ ಇತರ ಎಲ್ಲ ಹಿರಿಯರಿಗೆ, ಅಧ್ಯಯನಾಂಗದ ಹಿಂದಿನ ನಿರ್ದೇಶಕರಾದ ಪ್ರೊ.ಪಾಂಡುರಂಗಬಾಬು ಮತ್ತು ಇಂದಿನ ನಿರ್ದೇಶಕರಾದ ಪ್ರೊ.ವೀರೇಶ ಬಡಿಗೇರ ಅವರಿಗೆ ಹಾಗೂ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ.ಮಂಜುನಾಥ ಬೇವಿನಕಟ್ಟಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನ ಕ್ರಮವನ್ನು ಬೋಧಿಸಿ, ಪ್ರೀತಿಯಿಂದ, ತಾಳ್ಮೆಯಿಂದ ಮಾರ್ಗದರ್ಶನ ಮಾಡಿದ ಪ್ರೊ.ಮಂಜುನಾಥ ಬೇವಿನಕಟ್ಟಿ ಅವರಿಗೆ ಹೃದಯ ಪೂರ್ವಕ ಕೃತಜ್ಞತೆಗಳು. ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿದ ಡಾ.ಸ.ಚಿ.ರಮೇಶ್, ಡಾ.ಮೊಗಳ್ಳಿ ಗಣೇಶ್, ಡಾ.ಹೆಬ್ಬಾಲೆ ನಾಗೇಶ್, ಡಾ.ಹರಿಶ್ಚಂದ್ರ ದಿಗ್ಸಂಗೀಕರ್, ಪ್ರೊ.ಲಕ್ಷ್ಮಣ ತೆಲಗಾವಿ, ಡಾ.ತಾರೀಹಳ್ಳಿ ಹನುಮಂತಪ್ಪ, ಡಾ.ರವೀಂದ್ರನಾಥ, ಡಾ.ಶಿವಾನಂದ ವಿರಕ್ತಮಠ, ಡಾ.ಎಂ.ಕೊಟ್ರೇಶ್, ಶ್ರೀ ಅಜಿತ್, ಶ್ರೀ ವಿರೂಪಾಕ್ಷಯ್ಯ, ಅಜಿತ್, ಶ್ರೀ ಅಬ್ದುಲ್ ನಬಿ ಅವರುಗಳಿಗೂ ಹೂತ್ಪೂರ್ವಕ ಕೃತಜ್ಞತೆಗಳು.

ಸದಾ ನನ್ನ ಶ್ರೇಯಸ್ಸನ್ನೇ ಬಯಸುತ್ತ, ಪ್ರೋತ್ಸಾಹಿಸುತ್ತ ಬಂದಿರುವ ನನ್ನ ಪತ್ನಿ ಲಲಿತೆಗೆ, ಸಹೋದರರಾದ ಪಂಪಾಪತಿ, ಗೋಪಾಲಕೃಷ್ಣ, ನಾಗರಾಜ, ಶ್ರೀನಿವಾಸ ಅಂಗಡಿ, ಭಾವನವರಾದ ವೆಂಕಟನಾರಾಯಣ, ವೆಂಕಟಸುಬ್ಬಯ್ಯ, ಶ್ರೀಧರ, ನಾಗಭೂಷಣ, ಪಾಂಡುರಂಗ ಸಹೋದರಿಯರಾದ ಪದ್ಮಜಾ, ವಸಂತಲಕ್ಷ್ಮೀ, ನಾಗರತ್ನ, ಮಾವನವರಾದ ಜಗನ್ನಾಥ, ಅತ್ತೆಯವರಾದ ಸುಜಾತ, ಮೈದುನ ರಾಜೇಶ್, ಚಿಕ್ಕಪ್ಪನ ಮಕ್ಕಳಾದ ಲಕ್ಷ್ಮೀನಾರಾಯಣ, ಮಂಜುನಾಥ ಮತ್ತು ಇವರ ಕುಟುಂಬ ನನ್ನ ಮುದ್ದಿನ ಮಕ್ಕಳಾದ ನವ್ಯಶ್ರೀ, ಶಶಾಂಕ್, ಪುಟಾಣಿಗಳಾದ ಪ್ರೇಮ್‌ಕಿರಣ, ಕಾವ್ಯಶ್ರೀ, ರಾಘವೇಂದ್ರ, ಸುಮಂತ್, ಸಂಜನಾ, ಸಂಸ್ಕೃತಿ, ಸೃಷ್ಟಿ, ಸಂಕಲ್ಪ, ರೋಹನ್ ಇವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕನಕಗಿರಿಯ ಜನತೆ ನನ್ನೊಂದಿಗೆ ಸದಾ ಸ್ನೇಹ ಹಸ್ತ ಚಾಚಿ, ಸಹಕರಿಸಿ, ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ, ಬೇಕಾದ ಮಾಹಿತಿಯನ್ನು ನೀಡುತ್ತಾ ಇಂತಹದೊಂದು

ಪ್ರಬಂಧ ರೂಪುಗೊಳ್ಳಲು ನೆರವಾಗಿದ್ದಾರೆ ಇವರಿಗೆ, ಕನಕಗಿರಿ ಕ್ಷೇತ್ರದ ಶಾಸಕರೂ ಹಾಗೂ ಸಚಿವರಾದ ಶಿವರಾಜ್ ತಂಗಡಗಿ ಇವರಿಗೆ ಆತ್ಮೀಯ ನಮನಗಳು.

ನನ್ನ ಅಧ್ಯಯನಕ್ಕೆ ಬೇಕಾದ ಪೂರಕ ಮಾಹಿತಿಯನ್ನು ಒದಗಿಸಿದ ಮಿತ್ರ ಹಾಗೂ ಕಲ್ಮಠ ಮಹಿಳಾ ಕಾಲೇಜಿನ ಪ್ರಾಚಾರ್ಯರೂ ಆದ ಡಾ.ಶರಣಬಸಪ್ಪ ಕೋಲ್ಕಾರ್, ಕನಕಗಿರಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ.ದುರುಗಪ್ಪ ಮಾಳೆ, ಮಿತ್ರ ಅಲ್ಲಾಗಿರಿರಾಜ್, ದುರ್ಗಾದಾಸ್ ಯಾದವ್, ಮೆಹಬೂಬ್ ಹುಸೇನ್ ಅವರಿಗೆ ವಿಶೇಷವಾದ ಧನ್ಯವಾದಗಳು.

ನನಗೆ ಅಧ್ಯಯನದಲ್ಲಿ ಆಸಕ್ತಿ ಮೂಡಿಸಿ, ಪ್ರೋತ್ಸಾಹಿಸಿದ ಗಂಗಾವತಿಯ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಕೆ.ಹೆಚ್.ಅಂಗಡಿ ಮತ್ತು ಇಲ್ಲಿನ ಸಹೋದ್ಯೋಗಿ ಮಿತ್ರರು, ಹಿರಿಯ ಉಪನ್ಯಾಸಕರು, ಗಂಗಾವತಿ ಶಿಕ್ಷಣ ಸಂಸ್ಥೆಯ ಹೆಚ್.ಆರ್.ಗವಿಯಪ್ಪ, ಪ.ಪೂ. ಕಾಲೇಜಿನ ಪ್ರಾಚಾರ್ಯರಾದ ಎಫ್.ಹೆಚ್.ಚಿತ್ರಗಾರ, ರಾಮುಲು ಕಾಲೇಜಿನ ಪ್ರಾಚಾರ್ಯರಾದ ಆರ್.ಡಿ.ಧರ್ಮಟ್ಟಿ ಹಾಗೂ ಇಲ್ಲಿ ಹಿರಿಯ ಉಪನ್ಯಾಸಕರು, ಸಹೋದ್ಯೋಗಿ ಮಿತ್ರರು ಕಾರ್ಯದರ್ಶಿಗಳಾದ ಡಾ.ಎ.ಸೋಮರಾಜು ಅವರಿಗೆ ನನ್ನ ಆತ್ಮೀಯ ಸ್ನೇಹಿತರುಗಳಾದ ಶ್ರೀನಾಥ ಜೋಷಿ, ಬಸವರಾಜ ಅಯೋಧ್ಯ, ರಾಘವೇಂದ್ರ ದಂಡಿನ್, ಜನಾದ್ರಿದೊಡ್ಡಯ್ಯ, ಶ್ರೀನಾಥ ಜೋಷಿ, ಕೆ.ವಸಂತಕುಮಾರ್, ಶ್ರೀನಿವಾಸ ವಗ್ಗ, ವೆಂಕಟೇಶರೆಡ್ಡಿ, ದೇವರ ಕುರಿ ಓಬಯ್ಯ, ಜಗದೀಶ ಕುಮಾರ್ ಚ.ನಾಯಕ, ಶ್ರೀ ಹೊಳಿಬಸಪ್ಪ, ಪ್ರೇಮಾನಂದ್, ಪ್ರಕಾಶ್ ಬಳ್ಳಾರಿ, ಮೇಘನಾಥ ಮುಂತಾದವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಮಹಾಪ್ರಬಂಧವನ್ನು ಗಣಕಯಂತ್ರದಲ್ಲಿ ಸಂಯೋಜಿಸಿಕೊಟ್ಟ ಕೆ.ವೀರೇಶ ಅವರಿಗೆ ಸ್ನೇಹಪೂರ್ವಕ ವಂದನೆಗಳು.

ಶ್ರೀ ನಾರಾಯಣ ಗಿರಿಯಪ್ಪ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ವ್ಯಾಪ್ತಿ

ಅಧ್ಯಯನದ ಉದ್ದೇಶ ವ್ಯಾಪ್ತಿ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯು ಹಂಪೆಯಿಂದ ಉತ್ತರಕ್ಕೆ ೩೦.ಕಿ.ಮೀ. ದೂರದಲ್ಲಿದೆ. ಇದು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೊತ್ತು ನಿಂತ ಒಂದು ಐತಿಹಾಸಿಕ ಮತ್ತು ಕಲಾತ್ಮಕ ನೆಲೆ. ಪ್ರಾದೇಶಿಕ ಮಟ್ಟದಲ್ಲಿ ಇಂದು ಹಂಪೆಯ ಪ್ರತಿರೂಪದಂತಿದೆ. ಪಂಪಾವಿರೂಪಾಕ್ಷನ ಸನ್ನಿಧಿಯಿಂದ ಹಂಪೆ ಪವಿತ್ರ ತಾಣವಾದಂತೆ, ಕನಕಾಚಲ ಲಕ್ಷ್ಮೀ ನರಸಿಂಹನ ನೆಲೆಯಿಂದ ಕನಕಗಿರಿ ಪವಿತ್ರ ಕ್ಷೇತ್ರವೆನಿಸಿದೆ. ಹಂಪಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದರೆ ಕನಕಗಿರಿ ಅದರ ಅಧೀನ ಪಾಳೆಗಾರಿಕಾ ಕೇಂದ್ರವಾಗಿ ೫೦೦ವರ್ಷಗಳ ಸುದೀರ್ಘ ಆಳ್ವಿಕೆ ನಡೆಸಿದ ಏಕೈಕ ರಾಜಮನೆತನ ಎಂಬ ಖ್ಯಾತಿ ಗಳಿಸಿತು. ಅದು ಅಪೂರ್ವ ವಾಸ್ತುಶಿಲ್ಪ ಸ್ಮಾರಕಗಳಿಂದ ಜಾಗತಿಕ ಕಲಾನೆಲೆ ಎಂದೆನಿಸಿದರೆ ಇದು ತನ್ನದೇ ಪರಿಮಿತಿಯಲ್ಲಿ ಹಲವು ಸ್ಮಾರಕಗಳನ್ನು ಹೊಂದಿ ಪ್ರಾದೇಶಿಕ ಕಲಾಕೇಂದ್ರವಾಗಿದೆ. ಪರಸ್ಪರ ಈ ಸಾಮ್ಯತೆಗೆ ಹಂಪೆಯ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಗತಿ ಹಾಗೂ ಪ್ರಭಾವಗಳನ್ನು ಅದರ ನೆರೆಯ ಪ್ರದೇಶವೇ ಆದ ಕನಕಗಿರಿಯಲ್ಲಿ ಖಂಡಿತ ಗುರುತಿಸಬಹುದು. "ಕನಕಗಿರಿಯಲ್ಲಿ ೭೦೧ ದೇವಸ್ಥಾನಗಳು, ೭೦೧ ಬಾವಿಗಳು, ೭೦೧ ಗೊಲ್ಲರ ಮನೆಗಳು ಇದ್ದವು" ಎಂಬ ಈ ಮಾತು, ಕನಕಗಿರಿಯಲ್ಲಿ ಅತ್ಯಂತ ಜನಜನಿತವಾದ ಮಾತಾಗಿದೆ. ರಜಾಕರ ಹಾವಳಿಯಿಂದ ನಾಶವಾಗಿ ಅವು ಈಗ ನೋಡಲು ಸಿಗುವುದಿಲ್ಲ ಎಂಬ ವಿವರಣೆಯೂ ಜನರಿಂದ ದೊರೆಯುತ್ತದೆ. "ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪೆ ನೋಡಬೇಕು" ಎಂಬ ಜನವಾಣಿಯೂ ಸಹ ಈ ಭಾಗದಲ್ಲಿ ಪ್ರಚಲಿತವಾಗಿದೆ. ಆದಾಗ್ಯೂ ಹಂಪೆಗೆ ಸಿಕ್ಕ ಪ್ರಾಮುಖ್ಯತೆ ಕನಕಗಿರಿಗೆ ಸಿಗದಿರುವುದು ಅಚ್ಚರಿಯ ಸಂಗತಿಯಾಗಿದೆ.

ಕನಕಗಿರಿಯು ಪುರಾಣ ಕಾಲದಿಂದಲೂ ಗುರುತಿಸಲ್ಪಟ್ಟ ಸ್ಥಳ, ಇಲ್ಲಿ ರಾಜಕೀಯವಾಗಿ, ಧಾರ್ಮಿಕವಾಗಿ ಕನಕಾಚಲ ಲಕ್ಷ್ಮೀ ನರಸಿಂಹನೇ ಇಲ್ಲಿಯ ಅಧಿಪತಿ. ಈತನ ಜಾತ್ರೆ ಉತ್ಸವ ಕರ್ನಾಟಕದಲ್ಲೇ ವಿಶಿಷ್ಟವಾಗಿದೆ. ಕನಕಗಿರಿಯ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಕನಕಾಚಲ ದೇವರಿಂದ ಪ್ರತ್ಯೇಕಿಸಿ ಗ್ರಹಿಸಲು ಅಸಾಧ್ಯ. ಈ ಹಿನ್ನೆಲೆಯಲ್ಲಿ ದರ್ಶನವೇ ಪ್ರಧಾನವಾಗಿ ಧಾರ್ಮಿಕ ಹಾಗೂ ರಾಜಕೀಯ ಕಾರಣಗಳಿಂದ ನಾಡಿನ ಸಂತ ಕನಕ ಮುನಿ ತಿಂಥಿಣಿ ಮೋನಪ್ಪಯ್ಯ, ಪುರಂದರದಾಸರು, ವಿಜಯದಾಸರು, ಕೂಡಲಿ ಶೃಂಗೇರಿ ಮಠದ ಶ್ರೀಶಂಕರ ಭಾರತೀಸ್ವಾಮಿಗಳು ಇಲ್ಲಿಯವರೇ ಆದ ಪಂಚಮ ನರಸಿಂಹ ಸ್ವಾಮಿಗಳು, ಚಿದಾನಂದವಧೂತರು ಇಲ್ಲಿಗೆ ಭೇಟಿ ನೀಡಿದ್ದರು.

ಕಲಾತ್ಮಕ ದೇವಾಲಯಗಳನ್ನು ಮಾತ್ರ ಹೊಂದಿರದೆ ಅಚ್ಚರಿಗೊಳಿಸುವ ಸ್ಮಾರಕಗಳು, ಧಾರ್ಮಿಕ ಮತ್ತು ಲೌಕಿಕಮೂರ್ತಿ ಶಿಲ್ಪಗಳು, ಕಲಾತ್ಮಕ ಬಾವಿಗಳು, ಲೌಕಿಕ ಕಟ್ಟಡಗಳು, ಪುಷ್ಕರಣಿಗಳು, ಕೋಟೆ ಕೊತ್ತಲುಗಳು, ಶಾಸನಗಳು, ಐತಿಹ್ಯಗಳು, ಬೆಟ್ಟಗಳು, ನದಿ (ಇಂದಿನ ನಾಲಾಗಳು)ಗಳು, ಕೆರೆಗಳು, ಬಾವಿ, ಮಣ್ಣು, ಸಸ್ಯ, ಪ್ರಾಣಿವೈವಿಧ್ಯ, ಹೇರಳವಾದ ಲಿಖಿತ ಮತ್ತು ಮೌಖಿಕ ಮಾಹಿತಿ ಇಂತಹ ಹತ್ತು ಹಲವಾರು ವಿಶಿಷ್ಟವಾದ ಹಾಗೂ ಅಚ್ಚರಿಮೂಡಿಸುವ ಅಂಶಗಳನ್ನು ಮೈಗೂಡಿಸಿಕೊಂಡಿರುವ ಕನಕಗಿರಿಯು ಸಹಜವಾಗಿಯೆ ನನ್ನನ್ನು ಸೂಜಿಗಲ್ಲಿನಂತೆ ಸೆಳೆಯಿತು. ಇಂತಹ ವೈಶಿಷ್ಟ್ಯತೆಗಳನ್ನು ಒಳಗೊಂಡಿರುವ ಕನಕಗಿರಿಯ ಸ್ಮಾರಕ ಹಾಗೂ ಮೂರ್ತಿಶಿಲ್ಪಗಳ ಬಗೆಗೆ ಅಧ್ಯಯನ ನಡೆದಿದೆ. ಕೆಲವು ಬಿಡಿ ಲೇಖನ, ಕಿರು ಹೊತ್ತಿಗೆಗಳು ಹೊರಬಂದಿವೆಯಾದರೂ ಇಲ್ಲಿನ ವಿಶಿಷ್ಟ ಐತಿಹಾಸಿಕ ಪರಂಪರೆಯ ಜೊತೆ ಜೊತೆಗೆ ಸಾಗಿ ಬಂದ ಜನಪದರ ಕುರಿತಾದ ಜಾನಪದೀಯ ಅಧ್ಯಯನ ನಡೆದಿಲ್ಲ. ಒಂದು ನಾಡಿನ ಸಂಸ್ಕೃತಿಯನ್ನು ಮೈವೆತ್ತಿ ನಿಲ್ಲಿಸಿರುವುದು ಆ ಪ್ರದೇಶದ, ನಾಡಿನ ಜಾನಪದ ಅಂಶಗಳು, ಜನರ ಮೂಲಭೂತ ಆ ಸಂಸ್ಕೃತಿಯ ಅಂಶಗಳು ಹಾಗೂ ಜನಪದರ ಐತಿಹಾಸಿಕ, ಪೌರಾಣಿಕ ಪ್ರಜ್ಞೆ. ಹಿಂದೆ ಮಂಡಲ ಮಟ್ಟದಲ್ಲಿ ಇದ್ದ ಕನಕಗಿರಿಯು ಸಾಮಾಜಿಕ, ಭೌಗೋಳಿಕ, ಧಾರ್ಮಿಕ, ಆರ್ಥಿಕ ಮುಂತಾದ ಸ್ಥಿತ್ಯಂತರಗಳಿಗೊಳಗಾಗಿ ನಗರೀಕರಣದ ಸಂಕ್ರಮಣಾವಸ್ಥೆಯಲ್ಲಿದೆ. ಭಾರತದ ಗ್ರಾಮಗಳ ಬಗ್ಗೆ ಶಾಸ್ತ್ರೋಕ್ತವಾದ ಅಧ್ಯಯನದ ಅಗತ್ಯವಿರುವಂತೆ ಬೆಳೆಯುತ್ತಿರುವ ಅಥವಾ ಸಂಕ್ರಮಣಾವಸ್ಥೆಯಲ್ಲಿರುವ ಪಟ್ಟಣಗಳಲ್ಲಿನ ಜನಪದರ ಸಂಸ್ಕೃತಿಯ ಬಗೆಗಿನ ಅಧ್ಯಯನ ಅಷ್ಟೆ ಅಗತ್ಯವೆನಿಸಿದೆ. ಈ ಎಲ್ಲಾ ಪ್ರಮುಖ ಅಂಶಗಳನ್ನು ಗಮನಿಸಿದಾಗ ಕನಕಗಿರಿಯ ಬಗೆಗೆ ಇತಿಹಾಸವನ್ನು ಅನುಲಕ್ಷಿಸಿ ಒಂದು ಸಮಗ್ರವಾದ ಜಾನಪದೀಯ ಅಧ್ಯಯನ ನಡೆಯಬೇಕಾದ ಅಗತ್ಯತೆ ನನಗೆ ಕಂಡುಬಂದಿತು. ಆದಕಾರಣ ಈ ಎಲ್ಲ ಪ್ರಮುಖ ಅಂಶಗಳನ್ನು ಹಿನ್ನೆಲೆಯಾಗಿರಿಸಿಕೊಂಡು 'ಕನಕಗಿರಿ ಸಂಕಥನ' ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ಕೈಗೊಂಡು, ಕನಕಗಿರಿಯ ಪರಿಸರದ ಮೇಲೆ ಸ್ವಲ್ಪ ಮಟ್ಟಿಗೆ ಬೆಳಕನ್ನು ಚೆಲ್ಲುವಂತಹ ಪುಟ್ಟ ಪ್ರಯತ್ನವನ್ನು ಈ ಮೂಲಕ ಮಾಡಿದ್ದೇನೆ.

ಒಂದು ಕಾಲಕ್ಕೆ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕಷ್ಟೇ ಸೀಮಿತವಾಗಿದ್ದ ಕರ್ನಾಟಕ ಜಾನಪದ ಕ್ಷೇತ್ರ, ಕಾಲಕಳೆದಂತೆ ಅದರ ಅಧ್ಯಯನವು ಇತರ ಅಂಶಗಳ ಕಡೆಗೂ ಗಮನಹರಿಸಿತು. ಹಾಗಾಗಿ ಜಾನಪದದ ಬಗೆಗಿನ ಪರಿಕಲ್ಪನೆಗಳು ಇಂದು ಬಹಳಷ್ಟು ಬದಲಾಗಿವೆ. ಜಾನಪದ ಎಂದರೆ ಜನಪದ ಗೀತೆ, ಕಥೆ ಅಷ್ಟೇ ಎಂಬ ಮನೋಭಾವನೆ ಹೋಗಿ ಜಾನಪದದ ಎಲ್ಲಾ ಅಂಗ ಉಪಾಂಗಗಳನ್ನು ಅದರ ಸಂಕೀರ್ಣತೆಯೊಂದಿಗೆ ಅಧ್ಯಯನ ಮಾಡಬೇಕೆಂಬ ಪ್ರವೃತ್ತಿ ಇಂದು ವಿಶೇಷವಾಗಿ ಕಂಡುಬರುತ್ತದೆ. ಅಷ್ಟೇ ಅಲ್ಲ ಜಾನಪದ ಕೇವಲ ಹಳ್ಳಿಗಳಲ್ಲಿ ಮಾತ್ರವಲ್ಲ ಪಟ್ಟಣ ಮತ್ತು ನಗರಗಳಲ್ಲೂ ಇದೆ. ಎಲ್ಲ ವರ್ಗದ ಜನರಲ್ಲೂ ಇದೆ ಎಂಬ ವಿಶಾಲ ದೃಷ್ಟಿಕೋನ ಇಂದು ಲಭ್ಯವಾಗಿದೆ. ಆದರೆ ಸಂಸ್ಕೃತಿಯ ಅಧ್ಯಯನದಲ್ಲಿ ಬುಡಕಟ್ಟಿನ ಅಧ್ಯಯನದಷ್ಟೇ ನಗರ ಜೀವನದ ಅಧ್ಯಯನ ಹಾಗೆಯೇ ಒಂದು ಗ್ರಾಮದ ಅಧ್ಯಯನವೂ ಅರ್ಥಪೂರ್ಣವಾಗುತ್ತದೆ. ಹಾಗಾಗಿ ಈಚಿನ ದಿನಗಳಲ್ಲಿ ಜಾನಪದ ವಿದ್ಯಾರ್ಥಿಗಳು ಗ್ರಾಮಗಳ

ಅಧ್ಯಯನದತ್ತ ವಾಲಿಕೊಳ್ಳುತ್ತಿದ್ದಾರೆ. ಈ ಎಲ್ಲ ಹಿನ್ನೆಲೆಗಳೂ ಸಹ ಕನಕಗಿರಿಯ ಜಾನಪದೀಯ ಅಧ್ಯಯನದ ಪ್ರಮುಖ ಉದ್ದೇಶಗಳಾಗಿವೆ.

ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಇತ್ಯಾದಿ ಮೂಲಾಂಶಗಳ ನೆಲೆಯನ್ನು ಕಂಡುಕೊಳ್ಳಲು ಈವರೆಗೆ ನಡೆದ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಇವುಗಳೆಲ್ಲವು ಲಿಖಿತ ಮತ್ತು ಭೌತಿಕ ಆಧಾರಗಳ ಮೇಲೆ ರಚನೆಯಾಗಿರುವುದು ಸ್ಪಷ್ಟವಾಗುತ್ತದೆ. ಆದರೆ ಈ ನಾಡಿನ ಕಥೆಯೇ ಬೇರೆ. ಇಲ್ಲಿನ ಚರಿತ್ರೆ ಇಲ್ಲಿನ ನಾಲಿಗೆಗಳಲ್ಲಿ ದಾಖಲಾಗಿರುತ್ತದೆ. ಅಂತಹ ಮೌಖಿಕ ದಾಖಲೆಗಳು ಲಿಖಿತ ದಾಖಲೆಗಳಷ್ಟೆ ಮಹತ್ವದ್ದಾಗಿವೆ. ಅಷ್ಟೇ ಅಲ್ಲ ಸಂಸ್ಕೃತಿ ಅಧ್ಯಯನದ ದೃಷ್ಟಿಯಿಂದ ಪ್ರಮುಖ ಆಕರಗಳೂ ಆಗಿವೆ. ಆದರೆ ವಸಾಹತೀಕರಣಕ್ಕೊಳಪಟ್ಟ ವಿದ್ವಾಂಸರು ಚರಿತ್ರೆ, ಸಂಸ್ಕೃತಿ, ಪರಂಪರೆಯನ್ನು ಕಂಡುಕೊಳ್ಳುವಾಗ ಭಾರತದಂತಹ ಮೌಖಿಕ ಪರಂಪರೆಯನ್ನು ನಿರ್ಲಕ್ಷಿಸತೊಡಗಿದ್ದಾರೆ. ಈ ಬಗೆಯ ನಿರ್ಲಕ್ಷತೆಯಿಂದಾಗಿ ಅನೇಕ ಬಗೆಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಆಡಳಿತ ನಡೆಸುವವರ ಜೊತೆಗೆ ತಮ್ಮನ್ನು ಗುರುತಿಸಿಕೊಂಡ ಅಕ್ಷರಸ್ಥರು ಬಹುಸಂಖ್ಯಾತರಿಂದ ಸಹಜವಾಗಿ ದೂರ ಉಳಿಯುತ್ತಾರೆ. ಸಾಮಾನ್ಯವಾಗಿ ರಾಜರುಗಳು ನಡೆಸಿದ ಆಡಳಿತ, ವೈಭವ, ಯುದ್ಧಗಳು, ಕೆತ್ತಿಸಿದ ಮೂರ್ತಿ ಶಿಲ್ಪಗಳು, ನಡೆಸಿದ ಸಮಾರಂಭಗಳು, ಕಟ್ಟಿಸಿದ ದೇವಸ್ಥಾನಗಳು, ಕೊಟ್ಟ ದತ್ತಿ, ದಾನ, ಹೋರಾಡಿ ಮಡಿದ ವೀರಯೋಧರ ಉಲ್ಲೇಖಗಳಿಗೆ ಮಾತ್ರ ಸೀಮಿತವಾಗುತ್ತವೆ. ದೇವಸ್ಥಾನ ಕಟ್ಟಿಸಿದವರ ವಿವರುಗಳು ಬರುತ್ತವೆಯೇ ಹೊರತು ಕಟ್ಟಿದವರ ವಿವರಗಳಿಲ್ಲ. ರಾಜ ಮಹಾರಾಜರ ಬದುಕು-ಬರಹದ ವಿವರಗಳು ಬರುತ್ತವೆಯೆ ಹೊರತು ರಾಜರ ಅಧೀನದಲ್ಲಿ ಬಾಳಿ ಬದುಕಿದ ಜನಪದರ ಸಂಸ್ಕೃತಿಯ ವಿವರಗಳಿಲ್ಲ. ಬಹುಸಂಖ್ಯಾತ ಪ್ರಜೆಗಳು ಅಥವಾ ಜನಸಾಮಾನ್ಯರು ಮತ್ತು ಅವರ ಬದುಕು, ಭಾವನೆ, ಕಲೆ, ಧರ್ಮ, ದೈವ, ಐತಿಹಾಸಿಕ ಪ್ರಜ್ಞೆ, ಸಾಹಿತ್ಯ ಇತ್ಯಾದಿಗಳು ಪೂರ್ಣವಾಗಿ ನಿರಾಕರಣೆಗೆ ಒಳಪಟ್ಟಿವೆ. ಇವರದೇ ಆದಂತಹ ಚರಿತ್ರೆ ಇದ್ದರೂ ದಾಖಲಾಗದೇ ಹೋಗುತ್ತದೆ.

ಒಂದು ಪ್ರದೇಶದ ಜನ ಅಲ್ಲಿಯ ಸಂಸ್ಕೃತಿಯನ್ನು, ಚರಿತ್ರೆಯನ್ನು, ಪರಂಪರೆಯನ್ನು ಇನ್ನೂ ಸಾಕಷ್ಟು ಅಂಶಗಳನ್ನು ಮೌಖಿಕ ರೂಪದಲ್ಲಿ ಬಳಸಿಕೊಂಡು ಬಂದಿರುತ್ತಾರೆ. ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು ಎಂಬ ಗಾದೆಯಿಂದ ಜನಪದರ ಮಾತಿನಬದ್ಧತೆ ಅಳೆಯಬಹುದು. ಲಿಖಿತ ಮಾಹಿತಿ ಒದಗಿಸುವಷ್ಟು ನಿಖರ ಮಾಹಿತಿಯನ್ನು ಮೌಖಿಕ ಪರಂಪರೆ ಒದಗಿಸುತ್ತಾ ಬಂದಿದೆ. 'ಆನೆ ಬಂತೊಂದಾನೆ ಬಿಜಾಪುರ ಆನೆ.....' ಇದು ಕೇವಲ ಚಿಕ್ಕ ಮಕ್ಕಳನ್ನು ಸಂತೋಷಪಡಿಸಲಿಕ್ಕೆ ಮಾತ್ರ ಹುಟ್ಟಿಕೊಂಡ ಹಾಡಲ್ಲ. ಬಿಜಾಪುರ ಅರಸರ ಧಾಳಿಕೋರ, ಅರಾಜಕ ಪ್ರವೃತ್ತಿ, ಸ್ಥಳೀಯರ ಅಸಹಾಯಕ ಪರಿಸ್ಥಿತಿಯ ವಿವರಗಳನ್ನೊದಗಿಸುತ್ತದೆ. ಇತಿಹಾಸದ ಇಂತಹ ಇನ್ನೂ ಅನೇಕ ನೆನಪುಗಳನ್ನು ಮಾತಿನ ಮೂಲಕ ಸುರಕ್ಷಿತವಾಗಿ ರಕ್ಷಿಸಿಕೊಂಡು ಬಂದಿದ್ದಾರೆ. ಬಹಳ ಕುತೂಹಲದ ಅಂಶವೆಂದರೆ ಕೆಲವು ಸಂದರ್ಭಗಳಲ್ಲಿ ಮೌಖಿಕ ಮತ್ತು ಲಿಖಿತ ಸಾಮಗ್ರಿಗಳಲ್ಲಿ ಸಾಮ್ಯತೆ ಕಂಡುಬರುವುದಿಲ್ಲ. ಹಾಗೆಂದ

ಮಾತ್ರಕ್ಕೆ ಮೌಖಿಕ ಮಾಹಿತಿಯನ್ನು ನಾವು ಇಲ್ಲಿ ಕಡೆಗಣಿಸಲು ಬರುವುದಿಲ್ಲ. ಇದು ಅಧ್ಯಯನದ ಉದ್ದೇಶವೂ ಅಲ್ಲ.

ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನೆಗೆ ಅವಶ್ಯವಾಗಿರುವಂತೆ ಅಧ್ಯಾಯಗಳನ್ನು ರಚಿಸಿಕೊಳ್ಳಲಾಗಿದೆ. ಈ ಮೂಲಕ ಕನಕಗಿರಿ ಸಂಸ್ಕೃತಿಯ ಎಳೆಗಳನ್ನು ಗುರುತಿಸಲು ಪ್ರಯತ್ನ ಮಾಡಲಾಗಿದೆ. ಕನಕಗಿರಿ ಸಂಕಥನದಲ್ಲಿ ಜನಾಂಗಿಕ, ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯಕ, ರಾಜಕೀಯ ವೈವಿಧ್ಯತೆ ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ಹಲವು ಧರ್ಮದ ಜನವರ್ಗಗಳು ವಾಸಮಾಡಿಕೊಂಡಿರುವಾಗ ಸಹಜವಾಗಿಯೇ ಅವರ ಬದುಕು ಭಿನ್ನವಾಗಿದ್ದು, ಅವರದೇ ಆದ ಆಚರಣೆಗಳು ನಂಬಿಕೆ, ವಿಧಿ ನಿಷೇಧಗಳು ಭಿನ್ನವಾಗಿವೆ. ಹಾಗೆಯೇ ಕೊಡುಕೊಳ್ಳುವಿಕೆ ನಡೆದಿವೆ. ಇಲ್ಲಿ ಹಲವಾರು ಜನಪದ ವರ್ಗಗಳಿರುವುದರಿಂದ ಅವರ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡು ವಿಶ್ಲೇಷಣೆಗೊಳಪಡಿಸಲಾಗಿದೆ. ಕನಕಗಿರಿಯನ್ನು ಗ್ರಾಮಾಧ್ಯಯನದ ದೃಷ್ಟಿಯಿಂದ ನೋಡಿದ್ದರೂ, ಆ ಪ್ರಕಾರ ಇದು ಗ್ರಾಮವೂ ಅಲ್ಲ, ಪಟ್ಟಣವೂ ಅಲ್ಲ. ಕನಕಗಿರಿ ಒಂದು ಕಡೆ ತನ್ನ ಪಾರಂಪರಿಕ ಸಾಂಸ್ಕೃತಿಕತೆಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಸಂದರ್ಭದಲ್ಲಿಯೇ ಆಧುನಿಕತೆ ಹಾಗೂ ನಾಗರೀಕತೆಯು ದಟ್ಟವಾಗಿ ತನ್ನ ಕರಾಳ ಬಾಹುಗಳನ್ನು ಚಾಚುತ್ತಿದೆ. ಹಾಗಾಗಿ ಅಂತರಿಕದಲ್ಲಿ ಗ್ರಾಮೀಣತೆಯನ್ನು, ಬಾಹ್ಯದಲ್ಲಿ ನಾಗರೀಕತೆಯನ್ನು ತೋರುತ್ತಾ ಒಂದು ರೀತಿಯಲ್ಲಿ ಅರೆಬೆಂದ ಆಹಾರದಂತಿದೆ. ಹಾಗಾಗಿ ಇಂತಹ ಅಧ್ಯಯನಕ್ಕೆ ಕೇವಲ ಜಾನಪದ ಒಂದರ ಶಿಸ್ತಿನ ಚೌಕಟ್ಟು ಕೆಲವೊಮ್ಮೆ ಸಾಲದೆನಿಸುತ್ತದೆ.

ಪ್ರಸ್ತುತದಲ್ಲಿ ಜಾನಪದೀಯ ಅಧ್ಯಯನ ಕೈಗೊಂಡಿದ್ದರೂ ಸಹ ಅನ್ಯಜ್ಞಾನಶಿಸ್ತುಗಳ ಸಹಾಯವನ್ನು ಸಹ ಉಪಯೋಗಿಸಲಾಗಿದೆ. ಇದು ಕನಕಗಿರಿಯ ಅಧ್ಯಯನವಾದರೂ ಇಲ್ಲಿನ ಮಾಹಿತಿಗಳ ಲಕ್ಷಣಗಳು ಉತ್ತರ ಕರ್ನಾಟಕದ ಜಿಲ್ಲೆಗಳ ಇತರ ಗ್ರಾಮಗಳಿಗೂ ಅನ್ವಯವಾಗಬಹುದಾಗಿದೆ. ಆದರೆ ಕನಕಗಿರಿಯಲ್ಲಿರುವ ಹಲವು ಧರ್ಮದವರ ಆಚಾರ-ವಿಚಾರಗಳು ಹಲವು ಸಂದರ್ಭಗಳಲ್ಲಿ ಸೂಕ್ಷ್ಮ ವ್ಯತ್ಯಾಸ ಬಂದಿರುವುದರಿಂದ ಕನಕಗಿರಿಯ ಅಧ್ಯಯನ ಈ ಭಾಗದ ಅಧ್ಯಯನವೇ ಆಗಿದೆ ಎಂದು ಹೇಳುವುದು ಕಷ್ಟ.

ಇತರ ಅಧ್ಯಯನಕಾರರು ಮಾಹಿತಿಗಳನ್ನು ಎಂದಾದರೂ ಸುಲಭವಾಗಿ ಹೋಲಿಸಿ ನೋಡಲೆಂದು ಅಥವಾ ಅವರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದಲೇ ಆಚಾರ, ಸಂಪ್ರದಾಯ ಮುಂತಾದವುಗಳನ್ನು ಆದಷ್ಟು ವಿವರವಾಗಿಯೇ ದಾಖಲಿಸಲಾಗಿದೆ. ವಿಷಯಕ್ಕೆ ಪೂರಕವಾಗಿ ಛಾಯಾಚಿತ್ರ ಅಳವಡಿಸಲಾಗಿದೆ. ಅಧ್ಯಯನದಲ್ಲಿ ಕಂಡುಕೊಂಡ ವಿಶಿಷ್ಟ ಅಂಶಗಳನ್ನು ಮತ್ತು ಅದರ ಕೊಡುಗೆಗಳನ್ನು ಸಹ ಗುರುತಿಸಲಾಗಿದೆ. ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ.

ಈ ಸಂಶೋಧನ ಪ್ರಬಂಧವನ್ನು ನಿರ್ದಿಷ್ಟವಾಗಿ ಕನಕಗಿರಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಅಗತ್ಯವೆನಿಸಿದ ಕಡೆಗಳಲ್ಲಿ ಮಾತ್ರ ಕನಕಗಿರಿ ಪರಿಸರದ ಕಡೆಗೆ ಗಮನಹರಿಸಲಾಗಿದೆ. ಪ್ರಬಂಧಕ್ಕೆ ಪೂರಕವಾಗಿ

ಕನಕಗಿರಿಯ ಬಗೆಗೆ ಈಗಾಗಲೆ ಪ್ರಕಟವಾಗಿರುವ ಹಾಗೂ ಇತರೆ ಗ್ರಾಮಾಧ್ಯಯನದ ಕೃತಿಗಳಿಂದ, ವಿದ್ವಾಂಸರಿಂದ ಹಾಗೂ ಸ್ಥಳೀಯ ವಕ್ತೃಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಮಾಹಿತಿ ಸಂಗ್ರಹದ ಜೊತೆಗೆ ಅಧ್ಯಯನದ ಅವಶ್ಯಕತೆಗೆ ಪೂರಕವಾದ ಜನಪದ ಹಾಗೂ ಶಿಷ್ಟ ಸಾಹಿತ್ಯವನ್ನು ಸಂಗ್ರಹಿಸಿದ್ದೇನೆ. ಕ್ಷೇತ್ರಕಾರ್ಯದಲ್ಲಿ ಮಾಹಿತಿಗಳು ಸಂಗ್ರಹ ದಾಖಲೀಕರಣ ಮುಂತಾದ ವಿಧಾನಗಳನ್ನು ಅನುಸರಿಸಿ ಸಂಗ್ರಹಿಸಿ ಮಾಹಿತಿಗಳನ್ನು ಒಟ್ಟುಗೂಡಿಸಿ, ಈ ಸಂಶೋಧನ ಪ್ರಬಂಧವನ್ನು ಕಟ್ಟುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಾಯ - ೨

ಕನಕಗಿರಿ ಪರಿಚಯ

ಕನಕಗಿರಿ ಪರಿಚಯ

೨.೧. ಭೌಗೋಳಿಕ ವಿವರ

ಕರ್ನಾಟಕ ರಾಜ್ಯದ ಈಶಾನ್ಯ ದಿಕ್ಕಿನಲ್ಲಿರುವ ಹಾಗೂ ತುಂಗಭದ್ರಾ ಅಣೆಕಟ್ಟಿನ ಎಡಭಾಗದಲ್ಲಿರುವ ಕೊಪ್ಪಳ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಬೌದ್ಧರ, ಜೈನರ ಧರ್ಮ ಕೇಂದ್ರವಾಗಿತ್ತು. ರನ್ನನ ಕಾವ್ಯದಲ್ಲಿ ಕಂಡುಬರುವ "ಕೊಪಣಾಚಲದಂತೆ ಪವಿತ್ರಮತ್ತಿಮಬ್ಬೆಯ ಚರಿತಂ" ಎಂಬ ಸಾಲುಗಳು ಕೊಪ್ಪಳ ಪ್ರದೇಶದ ಪಾವಿತ್ರ್ಯವನ್ನು ಸಾರಿವೆ. ಸ್ವತಂತ್ರ ಪೂರ್ವದಲ್ಲಿ ಜಹಾಗೀರು ಜಿಲ್ಲೆಯಾಗಿತ್ತು. ಹೀಗೆ ಹತ್ತು ಹಲವಾರು ವೈಶಿಷ್ಟ್ಯತೆಗಳಿಂದ ಹೆಸರಾದ ಕೊಪ್ಪಳದಿಂದ ೫೦ ಕಿ.ಮೀ. ದೂರದಲ್ಲಿರುವ ಕನಕಗಿರಿ ಗ್ರಾಮವು ಗಂಗಾವತಿ ತಾಲ್ಲೂಕಿನ ಎಂಟು ಹೋಬಳಿಗಳಲ್ಲಿ ಒಂದಾಗಿದೆ.

ಹಂಪೆಯಿಂದ ಉತ್ತರಕ್ಕೆ ೩೫ ಕಿ.ಮೀ ದೂರದಲ್ಲಿರುವ ಕನಕಗಿರಿಯು ಗಂಗಾವತಿ ತಾಲ್ಲೂಕಿನ ಎರಡನೇ ಎಂ.ಎಲ್.ಎ. ಮತಕ್ಷೇತ್ರವಾಗಿ ಮಹತ್ವ ಪಡೆದುಕೊಂಡಿದೆ. ಕನಕಗಿರಿಯ ಉತ್ತರಕ್ಕೆ ಹುಲಿಹೈದರ್, ತಾವರಗೇರಾಗಳಿದ್ದರೆ, ದಕ್ಷಿಣಕ್ಕೆ ೨೫ ಕಿ.ಮೀ. ಅಂತರದಲ್ಲಿ ಭತ್ತದ ಕಣಜವೆಂದು ಹೆಸರುವಾಸಿಯಾದ ಗಂಗಾವತಿ ಇದೆ. ಪೂರ್ವಕ್ಕೆ ಕೊಪ್ಪಳ ಇದ್ದರೆ ಪಶ್ಚಿಮಕ್ಕೆ ಕಾರಟಗಿ ಇದೆ. ಈ ಎಲ್ಲ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ ಚನ್ನಾಗಿರುತ್ತದೆ ಕನಕಗಿರಿ ಒಣಬೇಸಾಯದ ಪ್ರದೇಶವಾಗಿದ್ದರೂ ಪಟ್ಟಣವಾಗಿ ಪರಿವರ್ತನೆಯಾಗಿರುವ ಕಾರಣದಿಂದ ಈ ಭಾಗದ ಪ್ರಮುಖ ವ್ಯವಹಾರದ ಕೇಂದ್ರವಾಗಿದೆ. ಕೃಷಿ, ಗುಡಿ ಕೈಗಾರಿಕೆ, ಕುರಿಸಾಕಾಣಿಕೆ ಈ ಭಾಗದ ಪಾರಂಪರಿಕ ವೃತ್ತಿಗಳಾಗಿವೆ. ಕನಕಗಿರಿಯು ಒಟ್ಟು ೩,೭೦೦ ಮನೆಗಳನ್ನು ಹೊಂದಿದ್ದು, ೧೩೮ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ೨೦೦೦-೨೦೦೧ರ ಜನಗಣತಿಯ ಪ್ರಕಾರ ೧೯೦೦೦ ಜನಸಂಖ್ಯೆಯನ್ನು ಹೊಂದಿದೆ.

ನದಿ, ಹಳ್ಳ, ಕೆರೆ ಮತ್ತು ಬಾವಿ

ಕನಕಗಿರಿ ಪ್ರದೇಶದ ಉತ್ತರಕ್ಕೆ ಕೃಷ್ಣಾನದಿಯು ಮತ್ತು ಆಗ್ನೇಯಕ್ಕೆ ೨೫ ಕಿ.ಮೀ. ದೂರದಲ್ಲಿ ಪ್ರಸಿದ್ಧ ನದಿ ತುಂಗಭದ್ರಾ ಹರಿಯುತ್ತದೆ. ಕನಕಗಿರಿ ಗ್ರಾಮದ ಉತ್ತರದ ಮೇರೆಗೆ ಮೂರು ಹಳ್ಳಗಳು ಸಂಗಮಿಸಿವೆ. ಅಲ್ಲಿಂದ ಅದು ಕನಕನಾಲಾ ಎಂದು ಕರೆಯಿಸಿಕೊಂಡು ಮುಂದೆ ತುಂಗಭದ್ರಾ ನದಿಯನ್ನು ಸೇರುತ್ತದೆ. ಈ ಪ್ರದೇಶದ ಇತರ ಹಳ್ಳಗಳಲ್ಲಿ ಸಣ್ಣಕೆರೆ, ಲಕ್ಷ್ಮೀದೇವಿ ಕೆರೆ, ತಿಪ್ಪನಾಳ ಕೆರೆ, ಕಾಟಾಪುರ

ಕೆರೆ, ರಾಂಪುರ ಕೆರೆ, ಬಸರಾಳ ಕೆರೆ, ನಾಗಲಾಪುರ ಕೆರೆ ಪ್ರಮುಖವಾದವುಗಳು. ಇಲ್ಲಿ ೨೦೦ ಬಾವಿಗಳಿವೆ ಎಂಬ ಪ್ರತೀತಿ ಇದೆ. ಗ್ರಾಮ ಮತ್ತು ಹೊಲಗಳಲ್ಲಿರುವ ಬಾವಿಗಳನ್ನು ಸೇರಿಸಿ ೨೦೦ ಎಂದು ಹೇಳಿರಬೇಕು. ಈಗ ಅಷ್ಟು ಬಾವಿಗಳು ನೋಡಲು ಸಿಗುವುದಿಲ್ಲ. ವೆಂಕಟಪತಿ ಬಾವಿ, ಪುಷ್ಕರಣಿ, ಗಿಂಡಿಬಾವಿ, ಚಿಕ್ಕಕನಕಪ್ಪನ ಬಾವಿ, ಸಿಹಿನೀರಿನ ಬಾವಿ, ಕನಕರಾಯನ ಬಾವಿ, ಅಟೆಲ್‌ಭಾಷಾ ಬಾವಿ, ಮಾಟರಾಯನ ಬಾವಿ, ಕಲ್ಮಠ ಬಾವಿ ಇತ್ಯಾದಿ ಪ್ರಮುಖ ಬಾವಿಗಳು ಇಲ್ಲಿ ಕಂಡುಬರುತ್ತವೆ.

ಹವಾಗುಣ, ಮಳೆ

ಈ ಪ್ರದೇಶದಲ್ಲಿ ಹವಾಗುಣ ಸಾಮಾನ್ಯವಾಗಿ ತಂಪಾಗಿರದೆ ಒಣ ಹವೆ, ಬಿಸಿಲು ಮತ್ತು ಸೆಕೆಯಿಂದ ಕೂಡಿದೆ. ಬೇಸಿಗೆಯಲ್ಲಿ ಅತಿ ಉಷ್ಣ ಚಳಿಗಾಲದಲ್ಲಿ ಅತಿ ಚಳಿಯಿಂದ ಕೂಡಿದ ಹವಾಗುಣವಿರುತ್ತದೆ.

ಈ ಪ್ರದೇಶವು ವಿರಳ ಮಳೆಯಿಂದ ಕೂಡಿದ್ದಾಗಿದೆ. ಏಕೆಂದರೆ ಇದು 'ಪರ್ಜನ್ಯ ಛಾಯಾ ಪ್ರದೇಶ' (Rain Shadow) ದಲ್ಲಿ ಬರುವುದೆಂದು ಇಲ್ಲಿಯ ವಾಡಿಕೆ. ಮಳೆ ಪ್ರಮಾಣ ೫೯೯ ಮಿ.ಮೀ. ವಾಸ್ತವಿಕ ಸರಾಸರಿಮಳೆ ೪೮೯ ಮಿ.ಮೀ.

ಮಣ್ಣು, ಶಿಲೆ, ಬೆಟ್ಟ

ಈ ಪ್ರದೇಶದಲ್ಲಿ ಎರೆ (ಕಪ್ಪು), ಕೆಂಪು ಮಸಾರಿ ಕೆಲವು ಕಡೆ ಸವುಳು ಭೂಮಿ ಹಾಗೂ ಜೇಡಿ ಮಣ್ಣಿನಿಂದ ಕೂಡಿದ ಕ್ಷಾರ ಲವಣವನ್ನೊಳಗೊಂಡ ಫಲವತ್ತಾದ ಭೂಮಿ ಇದೆ.

ಗ್ರಾಮದಲ್ಲಿ ಲಕ್ಷ್ಮೀ ಗುಡ್ಡ ಲೋಕಪ್ಪನ ಮರಡಿಗುಡ್ಡ, ತಿಮ್ಮಪ್ಪನ ಗುಡ್ಡಗಳಿವೆ. ಗ್ರಾಮದ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಮರೆಗುಡ್ಡ, ಎಮ್ಮೆಗುಡ್ಡ, ನಿಶಾನಿಗುಡ್ಡಗಳಿವೆ. ಅಲ್ಲಲ್ಲಿ ಕಣಶಿಲೆ (ಗ್ರೈನೈಟ್)ಯ ಗುಡ್ಡಗಳು ಟ್ರಾಪ್‌ಶಿಲೆಗಳ ಉಬ್ಬುಗಳು ಈ ಗುಡ್ಡದ ಸ್ವರೂಪಗಳಾಗಿವೆ.

ಪ್ರಾಣಿ, ಪಶುಪಕ್ಷಿಗಳು

ಪಶುಪಕ್ಷಿಗಳು ನಿಸರ್ಗದ ಹಾಗೆ ಮನುಷ್ಯನ ಒಂದು ಭಾಗ. ಇಲ್ಲಿ ದನ, ಎಮ್ಮೆ ಕುರಿಗಳ ಸಂಖ್ಯೆ ಸಾಕಷ್ಟಿದೆ. ಇಲ್ಲಿ ಗೌಳಿಗರು ಮನೆಯಲ್ಲಿ ಎಮ್ಮೆಗಳನ್ನು ಸಾಕಿ-ಹೈನುಗಾರಿಕೆಯನ್ನು ಪ್ರಮುಖ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಹಿಂದೆ ಪ್ರಯಾಣಕ್ಕೆ ಎತ್ತಿನ ಬಂಡಿ (ಚಕ್ಕಡಿ) ಬಳಸುತ್ತಿದ್ದರು. ಇಂದು ವಾಹನ ಸೌಕರ್ಯ ಚನ್ನಾಗಿರುವುದರಿಂದ ಎತ್ತಿನ ಬಂಡಿಯ ಪ್ರಮಾಣ ಕೇವಲ ಹೊಲ ಮನೆಗಷ್ಟೆ ಸೀಮಿತವಾಗಿದೆ. ಮತ್ತು ಎತ್ತುಗಳನ್ನು ಪ್ರಮುಖವಾಗಿ ಮಡಿಕೆ, ಕುಂಟೆ, ದಿಂಡು ಹೊಡೆಯಲು ಇತ್ಯಾದಿ ಕೃಷಿ ಕೆಲಸಕ್ಕೆ ಉಪಯೋಗಿಸುತ್ತಾರೆ.

ಕೆಲವರು ದನಗಳ ಸಗಣಿಯಿಂದ ಕುಳ್ಳುಮಾಡಿದರೆ ಇನ್ನು ಕೆಲವರು ಗೊಬ್ಬರಕ್ಕಾಗಿ ಸಗಣಿಯನ್ನು ಬಳಸುತ್ತಾರೆ. ಕೆಲವರು ಕುರಿಗಳನ್ನು ಸಾಕಿಕೊಂಡು ಅದನ್ನೆ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಮುಸ್ಲಿಂ ಸಮುದಾಯವು ಆಗಾಗ ತಮಗೆ ತಿನ್ನಲುಬೇಕಾಗುವ ಕಾರಣಕ್ಕಾಗಿ ಕೋಳಿಗಳನ್ನು ಸಾಕಿಕೊಂಡಿದ್ದಾರೆ.

ಕೊರವರು ಹಂದಿಗಳನ್ನು ಸಾಕಿಕೊಂಡಿದ್ದಾರೆ. ಹಾಗೆಯೇ ಕಾಮದೇನುವಿನ ಸಂಕೇತವಾಗಿರುವ ಹಸು (ಆಕಳು)ಗಳನ್ನು ಸಹ ರೈತರು ಸಾಕಿಕೊಂಡಿದ್ದಾರೆ. ಯಾರದೇ ಮನೆಯಲ್ಲಿ ಗೃಹ ಪ್ರವೇಶ ನಡೆದಾಗಲೂ ಆಕಳನ್ನು ಮನೆಯೊಳಗೆ ಕರೆದುಕೊಂಡು ಬಂದು ಪೂಜೆ ಮಾಡಿ, ಅಕ್ಕಿ ಬೆಲ್ಲ ಕೊಟ್ಟು ನಂತರವೇ ಮುಂದಿನ ಕಾರ್ಯಗಳು ಜರುಗುವುದು.

ಇಲ್ಲಿಗೆ ಆಗಾಗ ವಲಸೆ ಬಂದವರಲ್ಲಿ ಕುದುರೆ, ಒಂಟೆಗಳನ್ನು ಕಾಣಬಹುದು. ನಾಯಿ, ಬೆಕ್ಕು ಇಲ್ಲಿ ಸಾಕಿಕೊಂಡವರಿದ್ದಾರೆ. ನಾಯಿಯನ್ನು ಮನೆ ಕಾಯಲು ಸಾಕುತ್ತಾರೆ. ಕೆಲವರಿಗೆ ಬೇಟೆಗೆ ಸಹಾಯ ಮಾಡಲು ನಾಯಿ ಬೇಕು.

ವನ್ಯ ಪ್ರಾಣಿಗಳಲ್ಲಿ ಮುಖ್ಯವಾಗಿ ಜಿಂಕೆಯ ಸಣ್ಣಸಣ್ಣ ಹಿಂಡುಗಳು ಹಿಂದೆ ಕಾಣುತ್ತಿದ್ದವಾದರೂ ಈಗ ವಿರಳ. ಪೊದೆಗಳಲ್ಲಿ ಭದ್ರತೆ ಇಲ್ಲದುದರಿಂದ ಚುಕ್ಕೆ ಜಿಂಕೆಗಳು ಮತ್ತು ನೀಲ್‌ಗಾಂಟ್ ಈ ಪ್ರದೇಶದಲ್ಲಿ ಪೂರ್ಣವಾಗಿ ನಶಿಸಿಹೋಗಿವೆ. ಸುತ್ತಮುತ್ತಲಿನ ಪ್ರದೇಶದ ಗುಡ್ಡಗಳಲ್ಲಿ ಕರಡಿ, ನರಿ, ತೋಳ, ಮೊಲ, ಮುಳ್ಳು ಹಂದಿ ಮತ್ತು ಕೆಂಪು ಮುಖದ ಹಾಗೂ ಕಪ್ಪು ಮುಖದ ಮಂಗಗಳು ಇಲ್ಲಿನ ಕಾಡುಪ್ರಾಣಿಗಳಾಗಿವೆ.

ಇಲ್ಲಿನ ಪಕ್ಷಿ ಲೋಕವು ಅಂತಹ ವಿಶಿಷ್ಟತೆಯೇನು ಪಡೆದಿಲ್ಲ. ಕಾಗೆಗಳು, ಗೂಬೆಗಳು ಅನಿಷ್ಟದ, ತಿರಸ್ಕಾರದ ಸಂಕೇತ. ಅವುಗಳು ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತವೆ. ಗುಬ್ಬಿಗಳು ಮರಗಳಲ್ಲಿ ಮತ್ತು ಕೆಲವರ ಮನೆಯಲ್ಲಿ ಗೂಡು ಕಟ್ಟಿಕೊಂಡು ವಾಸಮಾಡುತ್ತವೆ. ಮನೆಗಳಲ್ಲಿ ಏನಾದರು ಗುಬ್ಬಿಗಳು ವಾಸಮಾಡುತ್ತಿದ್ದರೆ, ಅವರಿಗೆ ವ್ಯವಹಾರದಲ್ಲಿ ಪ್ರಗತಿ ಎಂಬ ನಂಬಿಕೆ ಇಲ್ಲಿನ ಜನರಲ್ಲಿದೆ. ಹೀಗಾಗಿ ಗುಬ್ಬಿ ಮನೆಯಲ್ಲಿ ವಾಸವಾಗಿದ್ದರೆ ಅವು ತಾವಾಗಿಯೇ ಹೊರಗೆ ಹೋಗುವ ತನಕ ಅವುಗಳನ್ನು ಓಡಿಸುವುದಿಲ್ಲ. ಮೊಬೈಲ್ ಟಾವರ್‌ಗಳಿಂದ ಹೊರಡುವ ತರಂಗಗಳಿಂದ ಗುಬ್ಬಿಗಳು ಸಾಯುತ್ತವೆ ಎಂದು ವಿಜ್ಞಾನಿಗಳು ವರದಿ ಮಾಡಿದ್ದಾರೆ. ಹಾಗಾಗಿ ಗುಬ್ಬಿಗಳ ಸಂತತಿ ಕಡಿಮೆಯಾಗತೊಡಗಿದೆ.

ಕೆಲವರು ಪಾರಿವಾಳಗಳನ್ನು ಸಾಕುತ್ತಾರೆ. ಗಿಣಿ, ಗೊರವಂಕ, ಕೋಗಿಲೆ, ಬೆಳ್ಳಕ್ಕಿ, ಮರಕುಟಿಗ ಮತ್ತು ಬುರಲಿ ಕಂಡುಬರುತ್ತವೆ. ಸೂರ್ಯಪಾನ ಬೆಳೆ ಬೆಳೆವ ರೈತರಿಗೆ ಗಿಣಿ ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಗಿಣಿಗಳಿಗೆ ಸೂರ್ಯಪಾನ ಕಾಳೆಂದರೆ ತಿನ್ನಲು ತುಂಬಾ ಇಷ್ಟ. ಒಟ್ಟಾರೆ ಇಲ್ಲಿನ ನೈಸರ್ಗಿಕ ಸಂಪತ್ತು ಸಮೃದ್ಧಿಯಿಂದ ಪ್ರಕೃತಿ ಮಾತೆಯ ಮಡಿಲಲ್ಲಿ ನೋಡುವವರ ಕಣ್ಣಿಗೆ ಹಬ್ಬವನ್ನುಂಟುಮಾಡುವಂತಿದೆ.

ಸಾರಿಗೆ ಸಂಪರ್ಕ

ಇದು ಒಂದು ಹೋಬಳಿ ಪ್ರದೇಶವಾಗಿದ್ದು, ಹತ್ತಾರು ಹಳ್ಳಿಗಳಿಗೆ ವ್ಯಾಪಾರದ ಕೇಂದ್ರ ಸ್ಥಾನವಾಗಿದೆ. ಊರಿಗೆ ನಾಲ್ಕೂ ದಿಕ್ಕುಗಳಿಂದ ವಾಹನ ಸೌಕರ್ಯಗಳಿವೆ. ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ದೂರ ದೂರದ ಊರಗಳಿಗೆ ಹೋಗಲು ತೊಂದರೆ ಎನಿಸುವುದಿಲ್ಲ. ಇಲ್ಲಿನ ಸುತ್ತಮುತ್ತಲಿನ ಹಳ್ಳಿಗಳಿಗೆ

ಸರ್ಕಾರಿ ಬಸ್ಸುಗಳು ಕಡಿಮೆ. ಆದರೆ ಖಾಸಗಿ ಜೀಪು, ಟಂಟಂ ವಾಹನಗಳು, ಗೂಡ್ಸ್ ಲಾರಿಗಳು, ಪ್ಯಾಸೆಂಜರ್ ಆಟೋಗಳು ಪ್ರತಿಯೊಂದು ಹಳ್ಳಿಗಳಿಗೆ ಹೋಗುತ್ತಿರುತ್ತವೆ. ಈ ಹಿಂದೆ ಕನಕಗಿರಿಯ ತೇರು ಬೀದಿಯ ಮುಖಾಂತರ ವಾಹನಗಳು ಚಲಿಸುತ್ತಿದ್ದವು. ಬೈಪಾಸ್ ರಸ್ತೆ, ಹೊಸಬಸ್ ನಿಲ್ದಾಣವಾದ ಮೇಲೆ ಊರ ಹೊರಗಿನಿಂದ ವಾಹನ ಚಲಿಸುತ್ತವೆ.

ಓಣಿಗಳು ಅಥವಾ ಕೇರಿಗಳು

ಎಲ್ಲಾ ಊರುಗಳಲ್ಲಿ ಇರುವಂತೆ ಇಲ್ಲಿಯೂ ಓಣಿಗಳು ಕೇರಿಗಳು ಇವೆ. ಕನಕಗಿರಿಯಲ್ಲಿ ಒಟ್ಟು ೧೧ ವಾರ್ಡುಗಳಿದ್ದು ಈ ಎಲ್ಲ ವಾರ್ಡುಗಳಲ್ಲಿ ವಾಸಿಸುವ ಜಾತಿ, ಸಮುದಾಯಕ್ಕನುಗುಣವಾಗಿ ಓಣಿಗಳ ಹೆಸರುಗಳು ಹುಟ್ಟಿಕೊಂಡಿವೆ. ಅವು ಕುಂಬಾರ ಓಣಿ, ಎಣ್ಣೇರ ಓಣಿ, ಕಲ್ಲುಕುಟಿಗರ ಓಣಿ, ಮುಲ್ಲಾರ ಓಣಿ, ಚಲುವಾದೇರ ಓಣಿ, ಹರಿಜನರ ಓಣಿ, ಮುಚ್ಚಿಗರ ಓಣಿ, ತೆಗ್ಗಿನಮನಿ ಓಣಿ, ಬ್ರಾಹ್ಮಣರ ಓಣಿ, ಗೌಡ್ರ ಓಣಿ, ಸುಣ್ಣಗಾರ ಓಣಿ, ಕಟಗರ ಓಣಿ, ಕೊರವರ ಓಣಿ ಮುಂತಾದವುಗಳು.

೨.೨. ಕನಕಗಿರಿ ಹೆಸರಿನ ಮೂಲ

೨.೨.೧. ಪುರಾಣಗಳಲ್ಲಿ

ಸ್ಕಂದ ಪುರಾಣದ ತುಂಗಾಮಹಾತ್ಮೆಯಲ್ಲಿ 'ಕನಕಗಿರಿ'ಯ ಸ್ಥಳವರ್ಣನೆ ಹಾಗೂ ಇಲ್ಲಿನ ಅಧಿದೇವತೆ 'ಕನಕಾಚಲಪತಿ' ದೇವರ ಅಷ್ಟೋತ್ತರ ಶತನಾಮ ಸ್ತೋತ್ರವಿದೆ. ಈ ಸ್ತೋತ್ರದಲ್ಲಿ ಸ್ಥಳವರ್ಣನೆಗೆ ಸಂಬಂಧಿಸಿದ ಕೆಲವು ವಿಶೇಷ ಉಲ್ಲೇಖಗಳಿವೆ.

ಕನಕಾಚಲ ಲಕ್ಷ್ಮೀ ನರಸಿಂಹ ದೇವರನ್ನು ಇಲ್ಲಿ 'ಸ್ವರ್ಣಾದ್ರೀಶ', 'ಸ್ವರ್ಣಗಿರೀಶ್ವರ', 'ಕನಕಾಚಲವಾಡಿ', 'ಸ್ವರ್ಣಪುರೀಂದ್ರ', 'ಜಯಂತೀ ತೀರ ನಿಲಯ', 'ತುಂಗಾಚೋತ್ತರಗೇಹಶ್ಚ', 'ಅಂಗಜೋತ್ಪಾದಕೋ ವಿಭೋ', 'ವಿರೂಪಾಕ್ಷಾತ್ಕ್ರೋಶಷಟ್ಕ ಸದನಂ', ಮತ್ತು 'ಲಿಂಗಾಕಾರೋಕ್ಷಿಗೋಚರಂ' ಎಂದೆಲ್ಲಾ ವರ್ಣಿಸಲಾಗಿದೆ.

ಈ ಎಲ್ಲಾ ವರ್ಣನೆಗಳಿಂದ ಕನಕಗಿರಿಗೆ ಹಿಂದೆ 'ಸುವರ್ಣಗಿರಿ' ಎಂತಲೂ ಹೆಸರಿದ್ದು, ಅದು ತುಂಗಾತೀರದ ವಿರೂಪಾಕ್ಷ ಕ್ಷೇತ್ರ (ಹಂಪೆ)ದಿಂದ ೨೦ ಮೈಲು ದೂರದಲ್ಲಿತ್ತು. ಅಲ್ಲಿ ಪುಷ್ಪಾಜಯಂತಿ, ಮತ್ತು ಗೋಪಿಕಾ ನದಿಗಳ ಸಂಗಮ ತೀರದಲ್ಲಿ ಸ್ವರ್ಣಗಿರೀಶ್ವರನು ಸ್ವರ್ಣಮುನಿ (ಕನಕಮುನಿ)ಯಿಂದ ವಂದಿತನು ಆದ ಲಕ್ಷ್ಮೀನರಸಿಂಹನು ಸಾಲಿಗ್ರಾಮ (ಲಿಂಗ) ಆಕಾರದಲ್ಲಿ ನೆಲೆಸಿದ್ದನು ಎಂಬುದಾಗಿ ತಿಳಿಯುತ್ತದೆ.

ಇಲ್ಲಿಯ ವರ್ಣನೆಗಳು ಪ್ರಸ್ತುತ ಕನಕಗಿರಿಯ ಭೌಗೋಳಿಕ ಸನ್ನಿವೇಶಕ್ಕೆ ಹೋಲಿಕೆಯಾಗುತ್ತದೆ. ಸಧ್ಯ ಕನಕಗಿರಿಯು ಹಂಪೆಯಿಂದ ೨೦ ಮೈಲು ದೂರದಲ್ಲಿದ್ದು, ಗ್ರಾಮದ ಉತ್ತರದ ಮೇರೆಗೆ ಎರಡು ದೊಡ್ಡ ಹಳ್ಳ(ನಾಲಾ)ಗಳು ಮತ್ತು ಒಂದು ಚಿಕ್ಕ ಹಳ್ಳ (ನಾಲಾ)ಗಳು ಸೇರಿ ಹರಿಯುತ್ತಿವೆ. (ಇವು ಮೂರು

ಹಳ್ಳಗಳು ಅಂದು ನದಿಯಾಗಿ ಹರಿಯುತ್ತಿದ್ದವು). ಈ ಹಳ್ಳಗಳ ಸಂಗಮ ಸ್ಥಾನದ ತೀರದಲ್ಲಿಯೇ ಪ್ರಸ್ತುತ ಕನಕಾಚಲ ಲಕ್ಷ್ಮೀ ನರಸಿಂಹ ದೇವಸ್ಥಾನ ಇರುವುದು. ಗರ್ಭಗೃಹದಲ್ಲಿ ಸಾಲಿಗ್ರಾಮದ ರೂಪದಲ್ಲಿ ಲಕ್ಷ್ಮೀನರಸಿಂಹನಿದ್ದಾನೆ. ಹೀಗೆ ಸ್ಕಂದ ಪುರಾಣದಲ್ಲಿ ಕನಕಗಿರಿಯ ಉಲ್ಲೇಖ, ಪ್ರಾಚೀನತೆ ಮತ್ತು ಸ್ಥಳದ ಮಹತ್ವವನ್ನು ನಿರೂಪಿಸುತ್ತವೆ.

೨.೨.೨. ಐತಿಹ್ಯಗಳಲ್ಲಿ

ಸುವರ್ಣವೃಷ್ಟಿ: ಕನಕಗಿರಿಯು ಸಾಧಕರಿಗೆ ಪುಣ್ಯಭೂಮಿಯಾಗಿ ತಪೋವನವಾಗಿ ಕಂಡ ಬಗೆ ವರ್ಣನೆಗಳಿವೆ. ಉದಾಹರಣೆಗೆ

ಪರ್ವತಾಗ್ರೇ ನದೀ ತೀರೇ ಪುಣ್ಯಕ್ಷೇತ್ರ ವಿಶೇಷತಃ ||

ಗೋಷ್ಠೇ ವೃಂದಾವನೇಶ್ವತ್ಥೇಪುನಶ್ಚರಣ ಮೀರಿತಮ್ ||

ಜಪತಪಗಳಿಗೆ ಪ್ರಶಸ್ತ್ಯವಾದ ಸ್ಥಳ ಇದಾಗಿತ್ತು. ಅಂತೆಯೇ ಲೋಕಕಲ್ಯಾಣಕ್ಕಾಗಿ ಸ್ವರ್ಣಮಹರ್ಷಿಗಳು (ಕನಕಮುನಿ) ಈ ತ್ರಿವೇಣಿ ತಟದಲ್ಲಿ ತಪಗೈಯ್ಯುತ್ತಾನೆ. ಈತನ ತಪಸ್ಸಿಗೆ ಮೆಚ್ಚಿ ಲಕ್ಷ್ಮೀನರಸಿಂಹನು ಒಂದು ಕ್ಷಣಕಾಲ ಸುವರ್ಣ ವೃಷ್ಟಿ ಅಂದರೆ ಬಂಗಾರದ ಮಳೆ ಸುರಿಸಿದನು. ಮಳೆಯಾದಕೂಡಲೆ ಜಯಂತೀ ನದಿಯ ಪ್ರದೇಶದಲ್ಲಿನ ಬಂಗಾರಮಯವಾಗಿ ಹೊಳೆಯಲಾರಂಭಿಸಿತು. ಬಂಗಾರವೇ ನೀರಾಗಿ ಹರಿಯುತ್ತಿದೆಯೋ ಎಂಬಂತೆ, ದೃಶ್ಯ ಕಣ್ಣಿಗೆ ಕಾಣಿಸುತ್ತಿತ್ತು. ಹೀಗೆ ದಂತಕತೆಯಲ್ಲಿ ಕನಕಗಿರಿಯ ಹಿನ್ನೆಲೆ ವ್ಯಕ್ತವಾಗುತ್ತದೆ. ಈ ಕತೆ ಇಲ್ಲಿ ಪ್ರತಿಯೊಬ್ಬರ ನಾಲಿಗೆಯ ಮೇಲೆ ನಲಿದಾಡುವುದು. ಅಲ್ಲದೆ ಈ ದಂತಕತೆಯನ್ನು ಕನಕಗಿರಿಗೆ ಸಂದರ್ಶಿಸಿದ್ದ ವಿಜಯದಾಸರು ತಮ್ಮ ಸುಳಾದಿ ಹಾಡುಗಳಲ್ಲಿ ಪ್ರಸ್ತಾಪಿಸಿದ್ದಾರೆ. (ಗೊರಬಾಳ್ ಹನುಮಂತರಾವ್ ಕೆ. ೧೯೪೯:೧೭೭-೧೮೦).

ನಾಯಕನಿಗೆ ಕಂಡ ಕನಕರಾಯಸ್ವಾಮಿ

ಬೇಹುಗಾರನಾಗಿ ತ್ರಿವೇಣಿ ಸಂಗಮಕ್ಕೆ ಬಂದು ವಾಸಮಾಡಿದ ಪರಸಪ್ಪ ನಾಯಕನ ಗೋಸಂಪತ್ತು ಬಹಳ ದೊಡ್ಡದು. ನಾಯಕನ ಅನೇಕ ಆಕಳುಗಳಲ್ಲಿ 'ನಂದಿನಿ' ಎಂಬ ಹೆಸರಿನ ಆಕಳು ನಾಯಕನಿಗೆ ಬಲು ಪ್ರೀತಿ. ಅದರ ಬಗ್ಗೆ ವಿಶೇಷ ವಾತ್ಸಲ್ಯವೂ ಇತ್ತು. ಒಂದು ದಿನ ನಂದಿನಿ ಪರಸಪ್ಪನ ಪರ್ಣಶಾಲೆಯ ಪರಿಸರದಲ್ಲಿ ಹುಲುಸಾಗಿ ಬೆಳೆದು ನಿಂತ ಹುಲ್ಲು ಮೇಯುತ್ತ ಬೃಹದಾಕಾರವಾಗಿ ಬೆಳೆದು ನಿಂತ ಹಾವಿನ ಹುತ್ತು ನೋಡಿತು. ಕೂಡಲೆ ಅದರ ಮೈಯಲ್ಲಿ ಮಿಂಚು ಹೊಳೆದಂತಾಯಿತು. ಹುತ್ತವನ್ನು ನೋಡಿದ 'ನಂದಿನಿ' ತಕ್ಷಣ ಅದರ ಮೇಲೆ ಹತ್ತಿ ನಿಂತು ತನ್ನ ಕೆಚ್ಚಲಿನ ಎಲ್ಲ ಹಾಲನ್ನು ಪುರುಷ ಪ್ರಯತ್ನವಿಲ್ಲದೆ ಧಾರಾಕಾರವಾಗಿ ತನ್ನಷ್ಟಕ್ಕೆ ತಾನೇ ಕರೆದುಕೊಳ್ಳುತ್ತ, ಹುತ್ತಿನೊಳಗೆ ಇರುವ ಕನಕಾಚಲನಿಗೆ ಕ್ಷೀರಾಭಿಷೇಕ ಮಾಡಿತು. ನಂದಿನಿ ಕರೆದ ಹಾಲು ಕ್ಷೀರಸಾಗರವೇ ಆಗಿ ಮೆರೆಯಿತು.

ಮತ್ತೊಂದು ದಿನ, ಎಂದಿನಂತೆ ನಂದಿನಿ ಹುತ್ತದ ಮೇಲೆ ಹತ್ತಿ ನಿಂತು ಹಾಲು ಸುರಿಸತೊಡಗಿತು. ಇದನ್ನು ಕಂಡ ಪರಸಪ್ಪ ನಾಯಕನು ಅಚ್ಚರಿಗೊಂಡ. ತನ್ನ ಮನೆ ದೇವರಾದ ತಿರುಮಲಗಿರಿಯ ತಿಮ್ಮಪ್ಪನನ್ನು ನೆನೆದು ಸುಮ್ಮನಾದ.

ಇನ್ನೊಂದು ಸಲ ಪರಸಪ್ಪನ ಪರಿವಾರದವನೊಬ್ಬ, ಈ ಹುತ್ತವನ್ನು ನೋಡಿದ. ಇದರೊಳಗಿರುವ ನಾಗರಹಾವುಗಳಿಂದ ಆಕಳುಗಳನ್ನು ರಕ್ಷಿಸಬೇಕೆಂದುಕೊಂಡು, ಹಾರೆಯಿಂದ ಹುತ್ತವನ್ನು ಒಡೆಯಲಾರಂಭಿಸಿದ. ಒಡೆದ ಸ್ವಲ್ಪ ಹೊತ್ತಿನಲ್ಲೇ ಹೊಡೆಯುತ್ತಿರುವವನು ದೊಪ್ಪನೆ ನೆಲಕ್ಕುರುಳಿ ಮೂರ್ಛೆ ಹೋದ. ವಿಷಯ ತಿಳಿದ ಪರಸಪ್ಪ ಸ್ಥಳಕ್ಕೆ ಬಂದು ನೋಡಿದರೆ ಒಂದು ಕಡೆ ಮೂರ್ಛೆಹೋದ ವ್ಯಕ್ತಿ, ಇನ್ನೊಂದು ಕಡೆಗೆ ಹುತ್ತಿನ ಕೆಳಭಾಗದಲ್ಲಿ ಹರಿದು ಬರುತ್ತಿರುವ ರಕ್ತಧಾರೆ, ಬರಬರುತ್ತ ಆ ರಕ್ತ ಹೊಳೆಯಂತೆ ಹರಿಯಿತು. ಈ ದೃಶ್ಯವನ್ನು ಕಂಡು ನಾಯಕ ತೀವ್ರ ದುಃಖಿತನಾದ. ಎದೆ ನಡುಗಿತು. ಯಾವ ಮಹಾಪಾತಕದಿಂದ ಈ ಘಟನೆ ಸಂಭವಿಸಿರಬಹುದು ಎಂದು ಚಿಂತಾಕ್ರಾಂತನಾಗಿ ಯೋಚಿಸುತ್ತ ಮಲಗಿದ. ಅದೇ ದಿನ ಬೆಳಗಿನ ಜಾವ (ಬ್ರಾಹ್ಮಿಮುಹೂರ್ತದಲ್ಲಿ) ದಿವ್ಯವಾದ ಬೆಳಕೊಂದು ನಾಯಕನಿಗೆ ಗೋಚರಿಸಿತು. (ಇದನ್ನು ಕೆಲವರು ಕನಸೆಂದೂ, ಕೆಲವರು ಅಪರೋಕ್ಷ ಜ್ಞಾನವೆಂತಲೂ ಹೇಳುತ್ತಾರೆ). "ನಾಯಕ ನೀನೇನು ಚಿಂತಿಸಬೇಡ. ನೀನು ಅಂದುಕೊಂಡಂತೆ ವೆಂಕಟಾಚಲಪತಿಯಾದ ನಾನೇ ಇಲ್ಲಿ ಇದ್ದೇನೆ. ಈ ಹಿಂದೆ ಕನಕ ಮಹಾಮುನಿಗೈದ ತಪಸ್ಸಿನಿಂದ ಮೆಚ್ಚಿ ಲೋಕೋದ್ಧಾರ ಮಾಡಲು ಲಕ್ಷ್ಮೀನರಸಿಂಹನಾಗಿ, ಸ್ವರ್ಣಗಿರೀಶನಾಗಿ ಸಾಲಿಗ್ರಾಮದ ರೂಪದಲ್ಲಿ ಅವತರಿಸಿದ್ದೇನೆ" ಎಂದು ಭಗವಂತ ಹೇಳಿದಂತಾಯಿತು. ಎಚ್ಚೆತ್ತುಕೊಂಡ ನಾಯಕ ಹುತ್ತವಿದ್ದ ಸ್ಥಳಕ್ಕೆ ಹೋಗಿ ನೋಡಿದರೆ ಕನಕ ಕಾಂತಿಯಿಂದ ಹೊಳೆಯುವ ಲಕ್ಷ್ಮೀ ನರಸಿಂಹನ ಸಾಲಿಗ್ರಾಮ (ಲಿಂಗ) ಕಣ್ಣಿಗೆ ಕಾಣಿಸಿತು. ಸಂತೋಷ ತಡೆಯಲಾಗದೆ ಕುಣಿಕುಣಿದು ನರ್ತನ ಸೇವೆ ಮಾಡಿದ, ಹೆಜ್ಜೆಗೆ ಹೆಜ್ಜೆ ಜೋಡಿಸಿ ಹೆಜ್ಜೆ ನಮಸ್ಕಾರ ಹಾಕಿದ. ಸಾಷ್ಟಾಂಗ, ಅಷ್ಟಾಂಗ ನಮಸ್ಕಾರ ಮಾಡಿದ, ದಣಿಯದೆ ದಿಂಡುರುಳಿಕೆ ನಮಸ್ಕಾರವನ್ನು ಹಾಕಿದ. ಗಂಡಾರತಿ ಸೇವೆ ಸಲ್ಲಿಸಿದ. ಯೋಗಿಯಾದ, ಜೋಗಿಯಾದ, ಕೊನೆಗೆ ಗುಜ್ಜಲ ವಂಶೀಯ ಜೋಗದ ಪರಸಪ್ಪ ನಾಯಕನೆನಿಸಿ ಧನ್ಯನಾದ ಕನಕಾಚಲನಿಗೆ ದೇವಸ್ಥಾನವನ್ನು ಕಟ್ಟಿಸಿ ದೇವರ ಅಪಾರ ಮಹಿಮೆಯನ್ನು ಲೋಕಕ್ಕೆ ಸಾರಿದ. ಲಕ್ಷ ಲಕ್ಷ ಭಕ್ತರು ಸೇರುವ ಸುಕ್ಷೇತ್ರವನ್ನು ಮಾಡಿದ. ಹೀಗೆ ಪರಸಪ್ಪ ನಾಯಕನಿಗೆ ಕಂಡ ಕನಕರಾಯನ ಕುರಿತಾದ ಐತಿಹ್ಯಗಳು ಇಲ್ಲಿ ಕಂಡುಬರುತ್ತವೆ.

ಇಲ್ಲಿಗೆ ಹರಕೆ ತೀರಿಸಲು ಬರುವ ಭಕ್ತರು ಈಗಲೂ ಹೆಜ್ಜೆ ನಮಸ್ಕಾರ, ಸಾಷ್ಟಾಂಗ ಮತ್ತು ಅಷ್ಟಾಂಗ ನಮಸ್ಕಾರ ಹಾಕುವುದು, ದಿಂಡುರುಳಿಕೆ ನಮಸ್ಕಾರ ಹಾಕುವುದು, ಗಂಡಾರತಿ ಸೇವೆ ಸಲ್ಲಿಸುವುದನ್ನು ಕಾಣಬಹುದು.

ಮಾಂಸದ ಮುದ್ದೆ ಮಗುವಾದ ಪವಾಡ:

ಕುಲದೈವ ಕನಕರಾಯನು ದಾಸಯ್ಯನ ರೂಪದಲ್ಲಿ ಬಂದು ಮಕ್ಕಳಾಗುವ ಸಲುವಾಗಿ ಮಾವಿನ ಹಣ್ಣನ್ನು ನಾಯಕ ದಂಪತಿಗಳಿಗೆ ತಿನ್ನಲು ಕೊಡುತ್ತಾನೆ. ಹಣ್ಣನ್ನು ಸೇವಿಸಿದುವರ ಫಲವಾಗಿ ಹೆರಿಗೆ

ಬೇನೆಯಲ್ಲಿದ್ದ ರಾಜಾ ಪರಸಪ್ಪ ನಾಯಕನ ಪತ್ನಿಗೆ ಅವಯವಗಳಿಲ್ಲದ ಮಾಂಸದ ಮುದ್ದೆಯೊಂದು ಜನಿಸುತ್ತದೆ. ಪುತ್ರಾಗಮನ ತವಕದಲ್ಲಿದ್ದ ನಾಯಕನಿಗೆ ದಿಗ್ಭ್ರಮೆಯಾಗುತ್ತದೆ. ತನ್ನೊಡೆಯ ಕನಕಾಚಲನ ಬಗ್ಗೆ ಮುನಿಸಾಗಿ ಆ ಮಾಂಸದ ಮುದ್ದೆಯನ್ನು ಒಂದು ಬಿದಿರು ಪುಟ್ಟಿಯಲ್ಲಿಟ್ಟು, ಕನಕಾಚಲನ ಮುಂದೆ ಇಟ್ಟು ಬೀಗ ಹಾಕಿಕೊಂಡು ಬರುತ್ತಾನೆ. ನಾಯಕ ಕೆಲವು ದಿನ ಬಿಟ್ಟು ಕನಕಾಚಲ ದೇವಸ್ಥಾನಕ್ಕೆ ಹೋದರೆ ಆಶ್ಚರ್ಯ ಕಾದಿತ್ತು. ದೇವಸ್ಥಾನಕ್ಕೆ ಹಾಕಿದ ಬೀಗ ತಾನಾಗಿಯೇ ತೆಗೆದು, ಘಂಟೆ, ಜಾಗಟೆಗಳ ಘೋಷದ ಮಧ್ಯೆದಲ್ಲಿ ಕನಕಾಚಲನ ಗರ್ಭಗೃಹದಿಂದ ಬಾಯ್ತುಂಬ ಹಾಲು ತುಳುಕುತ್ತಿರುವ ಮುದ್ದಾದ ಮಗುವೊಂದು ಕಿಲಕಿಲನೆ ನಗುತ್ತ ಹೊರಬರುವುದನ್ನು ಕಂಡರು ಭಕ್ತಿ, ಆನಂದ ಪರವಶನಾದ ನಾಯಕ ಮಗುವನ್ನೆತ್ತಿಕೊಂಡು ಗೋವಿಂದಾ ಗೋವಿಂದಾ ಎಂದು ಮಗುವನ್ನು ಮುದ್ದಾಡಿದ. ಮಗುವಿಗೆ ಯಾರು ಹಾಲುಕುಡಿಸಿದರು. ಎಂದು ಗಾಬರಿಯಾಗಿ ಅತ್ತಿತ ನೋಡಲಾಗಿ ಪಕ್ಕದಲ್ಲಿರುವ ಕನಕಾಚಸಸ್ವಾಮಿಯ ಮಡದಿ ಲಕ್ಷ್ಮೀದೇವಿ ಒಡಲಲ್ಲಿ ಹಾಲುಕಡಲಾಗಿ ಉಕ್ಕೇರುತ್ತ ಅವಳ ವಕ್ಷಸ್ಥಳದಿಂದ ಹಾಲು ಧಾರಾಕಾರವಾಗಿ ಬರುತ್ತ ಉಡಿತುಂಬಿ ನಿಂತಿರುವುದನ್ನು ಕಂಡ. ಆ ಸಿರಿದೇವಿಯೇ ತನ್ನ ಮಗನಿಗೆ ಹಾಲು ನೀಡಿ ಕಾಪಾಡಿದ್ದಾಳೆಂದು ತಿಳಿದು ಧನ್ಯನಾದೆ, ಸತ್ಪುತ್ರನನ್ನು ಪಡೆದು ಧನ್ಯನಾದೆ ಎಂದು ಭಕ್ತಿಯಿಂದ ಭಾವುಕನಾಗಿ ನಾಯಕ ಕುಣಿಯುತ್ತಾನೆ. ಲಕ್ಷ್ಮೀದೇವಿಯ ಉಡಿಯಲ್ಲಿರುವ ಹಾಲು ತನ್ನ ಮಗನನ್ನು ಕಾಪಾಡಿದ್ದಕ್ಕಾಗಿ ಮಗನಿಗೆ ಉಡಿಚಲುವಪ್ಪ ಎಂದು ಹೆಸರಿಟ್ಟ. ಲಕ್ಷ್ಮೀದೇವಿಯನ್ನು ಉಡಿಚಲುವಮ್ಮ ಎಂದು ಮತ್ತೊಂದು ಹೆಸರಿನಿಂದ ಕರೆದ, ಆದರೆ ಈ ಹೆಸರುಗಳು ಈಗ 'ಉಡಚಪ್ಪ', 'ಉಡುಚಮ್ಮ', ಎಂದು ರೂಢಿಯಲ್ಲಿ ಉಳಿದಿವೆ. ವಾಲ್ಮೀಕಿ ಜನರಲ್ಲಿ ಈಗಲೂ ಉಡಚಪ್ಪ, ಉಡಚಮ್ಮ ಹೆಸರುಗಳನ್ನಿಡುವುದು ಕಾಣಬಹುದು. ಹೀಗೆ ಮಾಂಸದ ಮುದ್ದೆಯು ಮಗುವಾದ ಬಗೆಗಿನ ಸಂಗತಿಯನ್ನು ಇಲ್ಲಿನ ಜನ ತುಂಬ ಭಕ್ತಿಭಾವದಿಂದ ಹೇಳುತ್ತಾರೆ.

ಭಕ್ತ ರಂಗರಾವ್ ಕನಸಿನ ಕಥೆ:

ಹೀಗೊಂದು ಕಥೆ ಈ ಭಾಗದಲ್ಲಿ ಪ್ರಚಲಿತ ಕನಕಗಿರಿಯ ಕನಕರಾಯನ ಜಾತ್ರೆಯ ಕಾಲಕ್ಕೆ ಕೆಲವಡಿ ರಂಘುನಾಥನ ಜಾತ್ರೆಯೂ, ಮುಂಡರಗಿ ಕನಕರಾಯನ ಜಾತ್ರೆಯೂ ನಡೆಯುತ್ತದೆ. ಕೆಲವಡಿ ರಂಗನಾಥ ದೇವರು ಕನಕಗಿರಿಯ ಕನಕರಾಯನ ತಮ್ಮನೆಂದೂ ಆ ಭಾಗದ ಜನರ ನಂಬಿಕೆಯಾಗಿದೆ. ಮುಂಡರಗಿ ಭೀಮರಾಯನ ತಂದೆ ರಂಗರಾವ್ ಕನಕಗಿರಿಯ ಕನಕರಾಯನ ಪರಮಭಕ್ತರಾಗಿದ್ದರು. ಅವರು ಪ್ರತಿಶನಿವಾರ ತಪ್ಪದೆ ಕನಕಗಿರಿಯ ಕನಕರಾಯನ ದರ್ಶನಕ್ಕೆ ಬರುತ್ತಿದ್ದರು. ವಯಸ್ಸಾದರೂ ಬಂದು ಹೋಗುವುದನ್ನು ನಿಲ್ಲಿಸಲಿಲ್ಲ. ಈ ಭಕ್ತನನ್ನು ಮೆಚ್ಚಿ ಒಮ್ಮೆ ರಂಗರಾವರ ಕನಸಿನಲ್ಲಿ ಕನಕಗಿರಿಯ ಕನಕರಾಯನು "ಭಕ್ತ ನೀನು ಇಲ್ಲಿಗೆ ಬರುವುದು ಬೇಡ, ನಿನ್ನ ಭಕ್ತಿಗೆ ನಾನು ಸೋತಿರುವೆ, ನಿನ್ನ ಮತ್ತು ನಿನ್ನ ಪರಿವಾರಕ್ಕೆ ಹಾಗೂ ಅಲ್ಲಿನ ಜನರಿಗೆ ದರ್ಶನ ಭಾಗ್ಯ ನೀಡುವೆ. ನೀನು ಕನಕಗಿರಿಗೆ ಇನ್ನು ಮುಂದೆ ಬರುವುದು ಬೇಡ. ನಾನು ಮುಂಡರಗಿ ಗುಡ್ಡದ ಪಶ್ಚಿಮ ಭಾಗದಲ್ಲಿ ಬೆಂಕಿ ಜ್ವಾಲೆಯಾಗಿ ಕಾಣಿಸಿಕೊಳ್ಳುತ್ತೇನೆ. ಅಲ್ಲಿಯೇ ಒಂದು ಗುಡಿಯನ್ನು ಕಟ್ಟಿಸು" ಎಂದು ಹೇಳಿದನೆಂದೂ, ಅಲ್ಲಿಯೇ ಕನಕರಾಯನ ಗುಡಿಯನ್ನು ಕಟ್ಟಿಸಲಾಯಿತೆಂದೂ ಈ ಮನೆತನದ ವಂಶಸ್ಥರಾದ ಮುಂಡರಗಿಯ ಯಂಕಣ್ಣ ನಾಡಗೌಡರು ಹೇಳುತ್ತಾರೆ.

ತೇರಿನ ಗಾಲಿಯ ಅಚ್ಚು ಮುರಿದ ಘಟನೆ :

೧೯೮೩ರಲ್ಲಿ ಕನಕರಾಯನ ಜಾತ್ರೋತ್ಸವ ದಿನದಂದು ನಡೆದ ಅಚ್ಚರಿಯ ಒಂದು ಘಟನೆಯನ್ನು ಇಲ್ಲಿನ ಜನರು ಈಗಲೂ ಭಾವುಕರಾಗಿ ಕಣ್ಣಾರೆ ನೋಡಿದವರಂತೆ ಹೇಳುತ್ತಾರೆ. ಸು.೭೨ ಅಡಿ ಎತ್ತರದ ತೇರಿನ ಗಾಲಿಯ ಅಚ್ಚು ಮುರಿದು ಮರವೊಂದರ ಮೇಲೆ ವಾಲಿಕೊಂಡು ಬಿತ್ತು. ಆ ಸ್ಥಳದಲ್ಲಿ ಸಹಸ್ರಾರು ಭಕ್ತರು ಇದ್ದರೂ ಸಹ ಆಗ ಯಾರಿಗೂ ಯಾವ ಪ್ರಾಣಾಪಾಯ ಆಗಲಿಲ್ಲ. ಇದೆಲ್ಲವೂ ಕನಕರಾಯನ ಪವಾಡವಲ್ಲದೆ ಇನ್ನೇನು" ಎಂದು ಪ್ರಶ್ನಿಸುತ್ತಾ ಕನಕರಾಯನ ಮಹಿಮೆಯನ್ನು ಕೊಂಡಾಡುತ್ತಾರೆ.

೨.೨.೩. ಶಾಸನಗಳಲ್ಲಿ

ಕನಕಗಿರಿಯ ಪ್ರಾಚೀನತೆ ಮತ್ತು ಅದರ ವರ್ಣನೆಗೆ ಸಂಬಂಧಿಸಿದಂತೆ ಕ್ರಿ.ಶ. ೧೬೪೭ರ ಇಮ್ಮಡಿ ಉಡಚನಾಯಕನ ಶಾಸನವೊಂದರ ಆರಂಭ ಶ್ಲೋಕ..... ಶ್ರೀಮತ್ಸ್ವರ್ಣಗಿರೀಶಶ್ಯ ನಾರಸಿಂಹಸ್ಯ..... ಎನ್ನುವುದನ್ನು ಬಿಟ್ಟರೆ ಉಳಿದಂತೆ ಯಾವ ಶಾಸನಗಳಲ್ಲಿ ವಿವರಣೆಗಳು ಇಲ್ಲ. ಹೀಗಾಗಿ ಕನಕಗಿರಿಯ ಸ್ಥಳ, ಹಿನ್ನೆಲೆ ಅಥವಾ ಪ್ರಾಚೀನ ಕನಕಗಿರಿಯ ವರ್ಣನೆಗಳು ಶಾಸನಗಳಿಂದ ತಿಳಿದುಬರುವುದಿಲ್ಲ. ಆದರೂ ಈ ಮೇಲಿನ ಶಾಸನದ 'ಶ್ರೀಮತ್ಸ್ವರ್ಣಗೀರೀಶಶ್ಯ ನಾರಸಿಂಹಸ್ಯ' ಎಂಬ ಉಲ್ಲೇಖ ಮಹತ್ವದ್ದಾಗಿದೆ. ಇಲ್ಲಿ 'ಸ್ವರ್ಣಗಿರಿಯ ನರಸಿಂಹ' ಎಂದಿರುವುದು ಕನಕಗಿರಿಗೆ 'ಸುವರ್ಣಗಿರಿ' ಎಂತಲೂ ಕರೆಯುತ್ತಿದ್ದರೆಂಬುದನ್ನು ಸೂಚಿಸುತ್ತದೆ. ಹಾಗಾಗಿ ಅಶೋಕನ ಶಾಸನೋಕ್ತ 'ಸುವರ್ಣಗಿರಿ' ಈ ಕನಕಗಿರಿಯೇ ಎಂದು ಹೇಳುವಲ್ಲಿ ಈ ಉಲ್ಲೇಖ ಗಮನಾರ್ಹವಾಗಿದೆ.

ಮೇಲಿನ ಪುರಾಣ, ಐತಿಹ್ಯ ಅಥವಾ ದಂತಕತೆ ಮತ್ತು ಶಾಸನಗಳಲ್ಲಿ ಇಷ್ಟು ಮಾತ್ರ ಐತಿಹಾಸಿಕ ಅಂಶಗಳು ಇವೆ ಎಂದು ಹೇಳಬಹುದು. ಕನಕಗಿರಿಯು ಹಿಂದೆ 'ಸುವರ್ಣಗಿರಿ' ಎಂಬ ಹೆಸರನ್ನು ಹೊಂದಿ ಪುಷ್ಪಾ ಮತ್ತು ಜಯಂತೀ ಎಂಬ ನದಿಗಳ ಬಯಲಿನ ಪ್ರದೇಶದಲ್ಲಿ ಇತ್ತು. ಈ ಪ್ರದೇಶದಲ್ಲಿ ಕನಕಮುನಿಯು 'ನರಸಿಂಹ'ನನ್ನು ಕುರಿತಾಗಿ ಅನೇಕ ವರ್ಷಗಳ ಕಾಲ ತಪಗೈದನು. ಇವನ ತಪಸ್ಸಿಗೆ ನರಸಿಂಹನು ಅನುಗ್ರಹಿತನಾಗಿ ಮುನಿಯ ಅಭೀಷ್ಟೆಯಂತೆ ಒಂದು ಕ್ಷಣಕಾಲ ಕನಕವೃಷ್ಟಿಗೆ ಕಾರಣನಾದ ದೇವರನ್ನು ಕನಕಾಚಲನೆಂದು ಹೆಸರಿಸಲಾಯಿತು.

ಭೂವಿಜ್ಞಾನಿಗಳು ಹೇಳುವಂತೆ ಕನಕಗಿರಿ ಸೇರಿದಂತೆ ಮಸ್ಕಿ, ಹೊಂಡಳ್ಳಿ, ಮತ್ತು ಹಟ್ಟಿ ಪ್ರದೇಶದಲ್ಲಿ ಚಿನ್ನದ ನಿಕ್ಷೇಪವಿದೆ. ಈ ಪ್ರದೇಶದಲ್ಲಿ ಪುರಾತನ ಕಾಲದಲ್ಲಿ ಚಿನ್ನದ ಅದಿರನ್ನು ಸಂಗ್ರಹಿಸಲು ತೆಗೆದ ಆ ಕಾಲದ ಗುಂಡಿಗಳು ಇನ್ನೂ ಇವೆ. ಕನಕಗಿರಿ ಪ್ರದೇಶವು ಪ್ರಾಯಶಃ ಒಂದು ವ್ಯಾಪಾರ ಕೇಂದ್ರವಾಗಿದ್ದು, (ಟಾಲಾಮಿಯು ಉಲ್ಲೇಖಿಸಿದ 'ಕಲ್ಲಿಗೇರಿಯಸ್' ಕನಕಗಿರಿ ಎನ್ನುವುದನ್ನು ಗಮನದಲ್ಲಿರಿಸಿ) ಇಲ್ಲಿ ಚಿನ್ನವನ್ನು ಹೆಚ್ಚಾಗಿ ಕನಕಗಿರಿ ಪ್ರದೇಶದವರೇ ಸಂಗ್ರಹಿಸುತ್ತಿದ್ದರೇನೋ ಅಂದರೆ ಈ ಚಿನ್ನದ ಅದಿರನ್ನು ಸಂಗ್ರಹಿಸುವ ರೂಢಿಬದ್ಧ ತಾಂತ್ರಿಕತೆಯನ್ನು ಹೊಂದಿದ ಜನರು ಈ ಪ್ರದೇಶದಲ್ಲಿರಬಹುದು. ಚಿನ್ನದ ಅದಿರನ್ನು ಸಂಗ್ರಹಿಸುವ ಸ್ಥಳವನ್ನು ಕನಕಗಿರಿ ಎಂದು ಕರೆದಿರುವ ಸಾಧ್ಯತೆ ಇದೆ.

ಶ್ರೀಲಕ್ಷ್ಮೀ ನರಸಿಂಹ ಸಾಲಿಗ್ರಾಮದಲ್ಲಿಯೂ ಚಿನ್ನದ ಅದಿರು ಇದ್ದು, ಅದನ್ನು ಪೂಜೆಗೆ ಯೋಗ್ಯವೆಂದು ಸ್ಥಾಪಿಸಿರಬಹುದು. ಈ ಎಲ್ಲ ಅಭಿಪ್ರಾಯಗಳು ಇಲ್ಲಿಯ ಪರಿಸರವನ್ನು ಅನುಲಕ್ಷಿಸಿ ಮಾಡಿರಬಹುದು. ಒಟ್ಟಿನಲ್ಲಿ ಈ ಕಥೆಗಳಲ್ಲಿ ಈ ಪ್ರದೇಶದ ಖನಿಜ ಸಂಪತ್ತಿನ ಅಂಶವು ಮತ್ತು ಈ ಖನಿಜಗಳನ್ನು ಸಂಗ್ರಹಿಸುವ ಕಾರ್ಯವು ಮೊದಲಾದ ಅಂಶಗಳಿವೆ. ಆದ್ದರಿಂದ ಇವು ಪೂರ್ಣ ದಂತಕತೆಯಾಗಿಲ್ಲ. ಆದರೆ ಈ ಕಥೆಗಳಿಂದ ಕನಕಾಚಲ ದೇವಾಲಯ ಸ್ಥಾಪನೆ ಹೊರತಾಗಿ ಮತ್ತೇನು ಐತಿಹಾಸಿಕ ಅಂಶಗಳು ತಿಳಿದುಬರುವುದಿಲ್ಲ. ಕನಕಮುನಿಯ ಬಗ್ಗೆ ಪುರಾಣಗಳಲ್ಲಿ ಪ್ರಾಚೀನ ಋಷಿ ಪರಂಪರೆಯಲ್ಲಿ ತೋರಿಬಂದಿಲ್ಲ. ಆದರೆ ಬೌದ್ಧ ಮತದ ಸಾಹಿತ್ಯದಲ್ಲಿ ೫೬ ಜನ ಬುದ್ಧರ ಉಲ್ಲೇಖವಿದೆ. ಅದರಲ್ಲಿ ಕೊನೆಯ ೭ ಜನ ತಥಾಗತರಲ್ಲಿ ಕನಕಮುನಿಯೂ ಒಬ್ಬ (ಲಿಲಿಅಸ್ ಗೆಟ್ಟಿ;೧೯೬೨:೧೧). ಈ ಮುನಿಯ ಸ್ತೂಪವನ್ನು ಮೌರ್ಯ ದೊರೆ ಅಶೋಕನು ಜೀರ್ಣೋದ್ಧಾರ ಮಾಡಿದನೆಂದು ಪ್ರತೀತಿ. ಈ ಸಂದರ್ಭದಲ್ಲಿ ಅಶೋಕನ ನಿಗಾಲಿಸಾಗರ ಸ್ತಂಭಶಾಸನ (ಹುಲಿ, ಇ;೧೯೨೫:೧೬೫)ವನ್ನು ಉಲ್ಲೇಖಿಸಬಹುದು. ಈ ಮುನಿಯ ಸ್ತೂಪವನ್ನು ಜೀರ್ಣೋದ್ಧಾರ ಮಾಡುವ ಕಾಲದಲ್ಲಿ ಅದನ್ನು ಎರಡು ಪಟ್ಟು ವಿಸ್ತಾರ ಮಾಡಿದ ವಿಷಯವನ್ನು ಅದರಲ್ಲಿ ಹೇಳಿದ. ಈ ಕೊನಕಮನ, ಕನಕಮುನಿ ಶಬ್ದದ ಪ್ರಾಕೃತ ರೂಪವಾಗಿದ್ದಲ್ಲಿ ಈ ಕನಕಮುನಿಗೂ ಮತ್ತು ಈ ಸ್ಥಳಕ್ಕೂ ಯಾವ ಸಂದರ್ಭದಲ್ಲಿ ಸಂಬಂಧ ಉಂಟಾಗಿರಬಹುದೆಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಒಂದು ವೇಳೆ ಈ ಮುನಿಯು ಬೌದ್ಧ ಪ್ರಚಾರಕ್ಕೋಸ್ಕರ ದಕ್ಷಿಣಕ್ಕೆ ಬಂದಾಗ ಈ ಪ್ರದೇಶದಲ್ಲಿ ಅವನ ಪಾತ್ರವಿದ್ದೀತೆ ಹೇಗೆ ಇವೆಲ್ಲವನ್ನು ಪರಿಶೀಲಿಸಬೇಕಾಗುತ್ತದೆ. ಒಂದು ವೇಳೆ ಈ ಮುನಿಯು ಈ ಪ್ರದೇಶಕ್ಕೆ ಬಂದಲ್ಲಿ ಪೌರಾಣಿಕ ದೇವರಾದ ಲಕ್ಷ್ಮೀ ನರಸಿಂಹನ ಆರಾಧನೆಯನ್ನು ಈ ಮುನಿಯು ಮಾಡಿದನೆ? ಬೌದ್ಧ ಮುನಿಯಾಗಿದ್ದು ಪೌರಾಣಿಕ ದೇವತೆಯ ಆರಾಧನೆಯನ್ನು ಮಾಡುವ ಸಂದರ್ಭವೇನಿತ್ತು? ಅಥವಾ ಈ ಬೌದ್ಧ ಮತದ ಕನಕ ಮುನಿಯೇ ಬೇರೆ. ಸ್ಥಳೀಯ ದಂತಕತೆಗಳಲ್ಲಿ ಬರುವ ಕನಕಮುನಿಯೇ ಬೇರೆಯೇ ಎಂದು ಕೂಲಂಕುಷವಾಗಿ ಪರಿಶೀಲಿಸಬೇಕಾಗಿದೆ. ಇವರಿಗೆ (ಕನಕಮುನಿ) ಸಂಬಂಧಪಟ್ಟ ಎಲ್ಲ ಸಾಹಿತ್ಯವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಅಗತ್ಯ.

೨.೨.೪. ಕನಕಗಿರಿಯಲ್ಲಿ ವಿಜಯನಗರ ಪೂರ್ವದ ಅವಶೇಷಗಳು

ಕನಕಗಿರಿಯಲ್ಲಿ ತಕ್ಕಮಟ್ಟಿಗೆ ಕೂಲಂಕುಷವಾಗಿ ಮಾಡಿದ ಅನ್ವೇಷಣೆಯಲ್ಲಿ ವಿಜಯನಗರ ಪೂರ್ವಕಾಲದ ಒಂದೆರಡು ಕಂಬಗಳು ಒಂದು ಶಿಲ್ಪ ಹಾಗೂ ಒಂದು ಶಾಸನ ಬಿಟ್ಟರೆ ಬೇರೆ ಯಾವುದೇ ರೀತಿಯ ಅವಶೇಷಗಳು ಕಂಡು ಬಂದಿಲ್ಲ. ಊರಿನ ಹೊರಬದಿಯಲ್ಲಿ ಮತ್ತು ಲಕ್ಷ್ಮೀಗುಡ್ಡದಲ್ಲಿ ಜನವಸತಿಯ ನೆಲೆಗಳಿದ್ದು ಈ ನೆಲೆಗಳಲ್ಲಿ ಮೃತ್ ಪಾತ್ರೆಗಳ ಚೂರುಗಳು ಮೊದಲಾದ ಅವಶೇಷಗಳಿವೆ. ಇವೆಲ್ಲವೂ ಸುಮಾರು ೧೦ನೇ ಶತಮಾನದಿಂದ ೧೫ನೇ ಶತಮಾನದ ಕಾಲದವೆಂದು ತರ್ಕಿಸಬಹುದು.

ಊರ ಹೊರಗಡೆ ಇರುವ ದೇವಾಲಯಗಳಲ್ಲಿ ಜಕ್ಕಮ್ಮ ದೇವಾಲಯ ಒಂದಿದೆ. ಇದು ವಿಜಯನಗರ (ನಾಯಕರ) ಕಾಲದ್ದು. ಆದರೆ ಇದರ ಮುಖಮಂಟಪ ಮುಂಬದಿಯಲ್ಲಿರುವ ಸಾಲು ಕಂಬಗಳು (ಪೀಠಬಿಟ್ಟು)

ಮತ್ತು ಅವುಗಳ ಮೇಲಿನ ಬೋದುಗೆಗಳು ಕ್ರಿ.ಶ. ೧೧-೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ. ದೇವಾಲಯದ ಕಂಬಗಳು ಬಹುಮಟ್ಟಿಗೆ ಇದರ ಗರ್ಭಗುಡಿಯ ದ್ವಾರಬಂಧವು ಕೂಡ ಅದೇ ಕಾಲದ್ದೆಂದು ಅನಿಸುತ್ತದೆ. ಊರೊಳಗಿನ ಪ್ರಧಾನ ದೇವಾಲಯವಾದ ಕನಕಾಚಲಪತಿ ದೇವಾಲಯಕ್ಕೆ ಹೊಂದಿಕೊಂಡಿರುವ ಸಂಜೀವಮೂರ್ತಿ ದೇವಾಲಯದ ಮುಂಭಾಗದ ಕಂಬದಡಿಯಲ್ಲಿ ಪ್ರಾಚೀನ ಶಿಲಾಶಾಸನದ ಒಂದು ತುಂಡು ಇದೆ. ಇದರಲ್ಲಿ ಶಿವಲಿಂಗದ ಉಬ್ಬುಶಿಲ್ಪವಿದೆ. ಆದರೆ ಇದರ ಮೇಲಿನ ಅಕ್ಷರಗಳೆಲ್ಲವು ಗುರುತಿಸಲಾರದಷ್ಟು ಸವೆದು ಹೋಗಿದೆ. ಆದರೂ ಇದರ ಮೇಲಿನ ಉಬ್ಬುಶಿಲ್ಪ ಶಿವಲಿಂಗದ ಲಕ್ಷಣಗಳನ್ನು ಗಮನಿಸಿದರೆ ಪ್ರಾಯಶಃ ಇದು ೧೧ನೇ ಶತಮಾನದ ಶಾಸನವೆಂದು ಹೇಳಬಹುದು. ಅದರಂತೆ ಕನಕಾಚಲ ದೇವಾಲಯದ ಮುಂದಿನ ಚಿಕ್ಕ ದೇವಾಲಯದಲ್ಲಿ ಇರುವ ಗಜಾನನ ಶಿಲ್ಪವು (ಪೀಠ ಮತ್ತು ಪ್ರಭಾವಳಿ ಬಿಟ್ಟು) ಕೂಡ ೧೨ನೇ ಶತಮಾನದ್ದೆಂದು ತೋರುತ್ತದೆ. ಒಟ್ಟಿನಲ್ಲಿ ವಿಜಯನಗರ ಪೂರ್ವಕಾಲದ ಸುಮಾರು ೧೧-೧೨ನೇ ಶತಮಾನದ ದೇವಾಲಯದ ಕಂಬಗಳು ಒಂದು ಶಿಲ್ಪ ಮತ್ತೊಂದು ಶಾಸನವು ಹಾಗೂ ತತ್ ಸಂಬಂಧ ಎರಡು ಜನವಾಸ್ತವ್ಯ ನೆಲೆಗಳನ್ನು ಬಿಟ್ಟರೆ ಯಾವುದೇ ಪ್ರಕಾರದ ಈ ಕಾಲದ ಮತ್ತು ಇದರ ಹಿಂದಿನ ಕಾಲದ ಪುರಾತನ ಅವಶೇಷಗಳು ದೃಷ್ಟಿಗೆ ಗೋಚರವಾಗುವುದಿಲ್ಲ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕನಕಗಿರಿಯು ಒಂದು ನಗರವೇ ಆಗಿದ್ದು ಅಲ್ಲಿ ಒಂದು ಶಿಷ್ಠ ಸಂಪ್ರದಾಯದ ಒಂದು ಶಿಲಾ ದೇವಾಲಯ ನಿರ್ಮಿತವಾಗಿದ್ದ ಕಾರಣ ಜಕ್ಕಮ್ಮ ದೇವಾಲಯದ ದ್ವಾರಬಂಧದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಪ್ರಾಯಶಃ ಈಗ ಕನಕಾಚಲಪತಿ ದೇವಾಲಯ ಇರುವ ಸ್ಥಳದಲ್ಲಿಯೇ ಕಲ್ಯಾಣ ಚಾಲುಕ್ಯರ ದೇವಾಲಯವಿದ್ದು ಪ್ರಾಯಶಃ ಮಲ್ಲಿಕಾಫರನ ದಕ್ಷಿಣ ದಂಡಯಾತ್ರೆ (ಕ್ರಿ.ಶ. ೧೩೦೭-೧೩೧೩)ಯಲ್ಲಿ ಅದು ಹಾಳಾಗಿದ್ದಿರಬಹುದು. ತರುವಾಯ ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರವಾಗಿ ಅಭಿವೃದ್ಧಿಯಾಗಿರುವಂತೆ ತೋರುತ್ತದೆ. ಒಟ್ಟಿನಲ್ಲಿ ವೈಷ್ಣವ ಸಂಪ್ರದಾಯದ ಪ್ರಸಿದ್ಧ ಕನಕಾಚಲಪತಿಯ ಪರಂಪರೆಗೆ ಅಲ್ಪವಾದರೂ ಈ ಅವಶೇಷಗಳು ಸೂಕ್ತ ಹಿನ್ನೆಲೆಯನ್ನು ಒದಗಿಸಿಕೊಡುವಂತೆ ಕಾಣುತ್ತದೆ.

೨.೨.೫. ಗ್ರಾಮದ ಸ್ವವಿರ:

ಕೊಷ್ಟಕ

೧.ಭೌಗೋಳಿಕ ವಿಸ್ತೀರ್ಣ	೧೩೮ ಹೆಕ್ಟೇರ್
೨. ಕೆರೆಗಳು	೭
೩. ನದಿಗಳು	೩ (ಇವು ಈಗ ೩ ಸೇರಿ ನಾಲೆಯಾಗಿದೆ)
೪.ಒಟ್ಟು ಖಾತೆದಾರರ ಸಂಖ್ಯೆ	
೫.ಬಾವಿಗಳು	೨೫
೬.ಬ್ಯಾಂಕುಗಳು	೧

೭.ಸರ್ಕಾರಿ ಹಾಸ್ಟೆಲ್‌ಗಳು	೩
೮.ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗಳು	೫
೯.ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳು	೨
೧೦.ಪ್ರೌಢಶಾಲೆಗಳು	೧
೧೧.ಪದವಿ ಪೂರ್ವ ಮಹಾವಿದ್ಯಾಲಯಗಳು	೧
೧೨.ಪ್ರಥಮ ದರ್ಜೆ ಕಾಲೇಜುಗಳು	೧
೧೩.ಆಂಗ್ಲಮಾಧ್ಯಮ ಖಾಸಗಿ ಶಾಲೆ	೧
೧೪.ಕನ್ನಡ ಮಾಧ್ಯಮ ಖಾಸಗಿ ಶಾಲೆ	೧
೧೫.ಪ್ರಾಥಮಿಕ ಆರೋಗ್ಯಕೇಂದ್ರ	೧
೧೬.ಟೆಲಿಫೋನ್ ಸೌಕರ್ಯ	ಇದೆ
೧೭.ಬೀದಿ ದೀಪಗಳು ಸಂಖ್ಯೆ	೭೫೦೦
೧೮.ಪೋಲೀಸ್ ಸ್ಟೇಶನ್	೧
೧೯.ಅಂಚೆ ಕಛೇರಿ	೧
೨೦.ಕುಡಿಯುವ ನೀರಿನ ವ್ಯವಸ್ಥೆ	ಇದೆ
೨೧.ದನದ ಆಸ್ಪತ್ರೆ	೧
೨೨.ಕೊಳವೆ ಭಾವಿಗಳು	ಇವೆ
೨೩.ಮಿನಿಟ್ಯಾಂಕ್‌ಗಳು	೬
೨೪.ವಿದ್ಯುತ್ ಸೌಕರ್ಯ	ಇದೆ
೨೫.ಸಹಕಾರಿ ಸಂಘಗಳು	೧
೨೬.ಹಿಟ್ಟಿನ ಗಿರಿಣಿಗಳು	೭
೨೭.ಅಕ್ಕಿ/ಎಣ್ಣೆ ಗಿರಣಿಗಳು	೧
೨೮.ನ್ಯಾಯಬೆಲೆ ಅಂಗಡಿಗಳು	೨
೨೯.ಸಿನಿಮಾ ಮಂದಿರಗಳು	೩

೩೦.ಊರಿನ ಒಟ್ಟು ಮನೆಗಳು	೩೭೦೦
೩೧.ಗ್ರಂಥಾಲಯಗಳು	೨
೩೨.ಅಂಬೇಡ್ಕರ್ ಯೋಜನೆಯಲ್ಲಿ ನಿವೇಶನ ಪಡೆದವರು	೬
೩೩.ದೇವಾಲಯಗಳು	
೩೪.ಮಸೀದಿಗಳು	೩
೩೫.ಮಠಗಳು	೩
೩೬.ವಾರ್ಡ್‌ಗಳು	೧೧
೩೭.ಒಟ್ಟು ಜಾತಿಗಳು	೪೦ಕ್ಕೂ ಮೇಲ್ಪಟ್ಟು
೩೮.ಒಟ್ಟು ಜನಸಂಖ್ಯೆ	೧೯೦೦೦
೩೯.ರೇಷ್ಮೆ ಇಲಾಖೆ	೧
೪೦.ಒಕ್ಕಲುತನ ಹುಟ್ಟುವಳಿ ಮಾರುಕಟ್ಟೆ ಸಮಿತಿ	೧
೪೧.ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಶಾಖೆ	೧
೪೨.ಸಹಾಯಕ ಕೃಷಿ ಅಧಿಕಾರಿಗಳ ಕಾರ್ಯಾಲಯ	೧
೪೩.ಗ್ರಾಮೀಣ ಕ್ರೀಡಾಂಗಣ	೧
೪೪.ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರ	೧
೪೫.ಸಾಮಿಲ್‌ಗಳು	೩
೪೬.ಹೋಟೆಲ್‌ಗಳು	೨೫
೪೭.ಕಿರಾಣಿ ಅಂಗಡಿಗಳು	೪೭
೪೮.ಮೆಡಿಕಲ್ ಸ್ಟೋರ್ಸ್	೫
೪೯.ಅಂಗನವಾಡಿ ಕೇಂದ್ರಗಳು	೧೧

ಅಧ್ಯಾಯ - ೩

ಕನಕಗಿರಿ : ಚಾರಿತ್ರಿಕ ಹಿನ್ನೆಲೆ

೩.೧. ಕನಕಗಿರಿ ಪ್ರದೇಶದ ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲ

೩.೨. ಕನಕಗಿರಿ ನಾಯಕ ಅರಸರ ಇತಿಹಾಸ

೩.೩. ಕನಕನಗಿರಿ ನಾಯಕರ ಕೊಡುಗೆಗಳು

- ೩.೩.೧. ಕಲೆ ಮತ್ತು ವಾಸ್ತುಶಿಲ್ಪ
- ೩.೩.೨. ಪುಷ್ಕರಣಿಗಳು, ಬಾವಿಗಳು ಮತ್ತು ಮದ್ದಿನ ಸಂಗ್ರಹಾಲಯಗಳು
- ೩.೩.೩. ಕೋಟೆ

೩.೪. ನಾಯಕರ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು

೩.೫. ಕನಕಗಿರಿಯಲ್ಲಿ ದೊರೆತ ಶಾಸನಗಳು

ಕನಕಗಿರಿ : ಚಾರಿತ್ರಿಕ ಹಿನ್ನೆಲೆ

೩.೧. ಕನಕಗಿರಿ ಪ್ರದೇಶ ಇತಿಹಾಸಪೂರ್ವ ಹಾಗೂ ಇತಿಹಾಸ

೩.೧.೧. ಇತಿಹಾಸಪೂರ್ವ ಕಾಲ: ಕನಕಗಿರಿ ಪ್ರದೇಶವು ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ ಸಶಕ್ತವಾದ ದಖ್ಖನ್ ಪ್ರಸ್ಥಭೂಮಿಯಲ್ಲಿದೆ. ಈ ಪ್ರದೇಶವು ಪ್ರಾಚೀನ ಮಾನವನ ಪೂರ್ವ ಚಟುವಟಿಕೆಗಳಿಗೆ ಪೂರಕವಾದದ್ದರಿಂದ ಇದು ಆ ಕಾಲದ ಮಾನವನ ವಾಸ್ತವ್ಯದ ಪ್ರಮುಖ ಸ್ಥಳವಾಗಿತ್ತೆಂದು ಊಹಿಸಬಹುದು. ಕನಕಗಿರಿಯ ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ಕ್ರಮವಾಗಿ ತುಂಗಭದ್ರಾ ಮತ್ತು ಕೃಷ್ಣಾನದಿಗಳು ಹರಿಯುತ್ತಿದ್ದು ಜನವಸತಿಗೆ ಆಯಕಟ್ಟಿನ ಪ್ರದೇಶವಾಗಿತ್ತು. ಆದ್ದರಿಂದ ಈ ಪ್ರದೇಶದಲ್ಲಿ ಸುಮಾರು ೧೮೪೨ರಿಂದ ಒಂದಲ್ಲಾ ಒಂದು ಹಂತದ ಪ್ರಾಗಿತಿಹಾಸ ಮಾನವನ ವಸ್ತು ಅವಶೇಷಗಳು ಹೆಚ್ಚಾಗಿ ಆಕಸ್ಮಿಕವಾಗಿ ಶೋಧವಾಗಿವೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಲಿಂಗಸೂರು (ರಾಯಚೂರು ಜಿಲ್ಲೆ), ಎಡಹಳ್ಳಿ (ಗುಲ್ಬರ್ಗಾ ಜಿಲ್ಲೆ)ಗಳಲ್ಲಿ ಬಳ್ಳಾರಿ ಜಿಲ್ಲೆಯ ಶಿರುಗುಪ್ಪಾದ ನಿಟ್ಟೂರಿನಲ್ಲಿ ಕಲ್ಲಿನ ಆಯುಧಗಳನ್ನು ಶೋಧಿಸಲಾಗಿದೆ. ಈಶಾನ್ಯಕ್ಕಿರುವ ಪಿಕ್ಲಿಹಾಳ್, ಮತ್ತು ಮಸ್ಕಿಗಳಲ್ಲಿ ನೂತನ ಶಿಲಾಯುಗದ, ಕಬ್ಬಿಣದ ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳು ಈ ಮೊದಲೇ ಶೋಧವಾಗಿವೆ. ಕನಕಗಿರಿಯ ದಕ್ಷಿಣಕ್ಕೆ ಸುಮಾರು. ೩೦ ಕಿ.ಮೀ. ದೂರದಲ್ಲಿರುವ ಗಂಗಾವತಿ ಕೊಪ್ಪಳ ಮಧ್ಯದ ಪರ್ವತ ಶ್ರೇಣಿಗಳಲ್ಲಿ ಹಲವಾರು ನೂತನ ಶಿಲಾಯುಗದ, ಬೃಹತ್ ಶಿಲಾಯುಗದ ಮತ್ತು ಇತಿಹಾಸ ಆರಂಭ ಕಾಲದ ನೆಲೆಗಳು, ಹಲವಾರು ಕಲ್ಗೋರಿಗಳು, ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು ಗವಿಗಳು ಇವೆ. ಉಲ್ಲೇಖಿತ ಪ್ರದೇಶಗಳಲ್ಲಿ ವೈಜ್ಞಾನಿಕ ಕ್ರಮದಿಂದ ಉತ್ಖನನ ಮಾಡಲಾಗಿದೆ. ಎಲ್ಲಾ ಉತ್ಖನನಗಳ ವರದಿ ಪ್ರಕಟವಾಗಿದ್ದು, ಅವುಗಳಲ್ಲಿ ನೂತನ ಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭಕಾಲದ ಜನಜೀವನ ಚಿತ್ರವನ್ನು ಸ್ಥೂಲವಾಗಿ ವಿವರಿಸಲಾಗಿದೆ. ಆದ್ದರಿಂದ ಕನಕಗಿರಿ ಪ್ರದೇಶದಲ್ಲಿ ಆದಿ ಹಳೆಯ ಶಿಲಾಯುಗದ ಕಾಲದಿಂದ ಇತಿಹಾಸ ಆರಂಭ ಕಾಲದವರೆಗಿನ ಜನಜೀವನ ಚಿತ್ರವನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ.

ಹೀಗೆ ತಿಳಿದ ಮಟ್ಟಿಗೆ ಹಳೆ ಶಿಲಾಯುಗದ ಜನಜೀವನ ಚಿತ್ರದಲ್ಲಿ ನಾಲ್ಕು ಹಂತಗಳನ್ನು ಕಾಣಬಹುದಾಗಿದೆ. ಅವುಗಳು ಆದಿ ಹಳೆಯ ಶಿಲಾಯುಗ, ಮಧ್ಯ ಹಳೆಯ ಶಿಲಾಯುಗ, ಅಂತ್ಯ

ಹಳೆಯ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗ ಮತ್ತೆ ಈ ಕೊನೆಯ ಹಂತದಿಂದ ಅನುಕ್ರಮವಾಗಿ ನೂತನ ಶಿಲಾಯುಗದಲ್ಲಿಯೇ ಶಿಲಾ-ತಾಮ್ರಯುಗದ ಹಂತ, ಬೃಹತ ಶಿಲಾಯುಗ ಮತ್ತು ಇತಿಹಾಸ ಆರಂಭಕಾಲದ ಹಂತಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಇಲ್ಲಿ ಕಂಡುಬರುವ ಅನೇಕ ಸಂಸ್ಕೃತಿಗಳಲ್ಲಿ ವಿಶೇಷವಾಗಿ ನಮ್ಮ ಗಮನಸೆಳೆಯುವುದೆಂದರೆ, ಕಬ್ಬಿಣ ಯುಗದ ಬೃಹತ್ ಶಿಲಾಸಂಸ್ಕೃತಿ. ಈ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಸತ್ತವರ ಸಂಸ್ಕಾರ ಮಾಡುವ ಕ್ರಮ ನೈಸರ್ಗಿಕವಾಗಿ ದೊರೆಯುವ ಒರಟಾದ ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ಉಪಯೋಗಿಸಿ ಗೋರಿಗಳನ್ನು ಕಟ್ಟುತ್ತಿದ್ದರೆಂಬುದಕ್ಕೆ ಹಿರೇಬೆಣಕಲ್‌ನ ಕಲ್ಗೋರಿಗಳು ನಿದರ್ಶನಗಳಾಗಿವೆ. ಕನಕಗಿರಿ ಸಮೀಪದ ಹಿರೇಬೆಣಕಲ್ ಮಲ್ಲಾಪುರ, ಆನೆಗುಂದಿ, ಕೊಪ್ಪಳ, ಬಿಳೆಬಾವಿ, ತಿಮ್ಮಲಾಪುರ, ನಾರಾಯಣಪುರ, ಬಂಡಿಹರ್ಲಾಪುರ (ಎಲ್ಲವೂ ಗಂಗಾವತಿ ತಾಲ್ಲೂಕು) ಮುಂತಾದ ಕಡೆಗಳಲ್ಲಿ ಗವಿಚಿತ್ರಗಳು ಹೇರಳವಾಗಿ ಕಂಡುಬರುತ್ತವೆ. ಗುಹೆಗಳಲ್ಲಿ ನವಿಲು, ಟಗರಿ, ಮನುಷ್ಯರ ಸಾಲು ನೃತ್ಯದ ಚಿತ್ರಗಳಿವೆ. ಪ್ರಾಚೀನ ನೆಲೆಗಳ ಮತ್ತು ಚಿತ್ರಗಳ ಶೈಲಿ, ವಿಷಯಗಳ ಆಧಾರದ ಮೇಲೆ ಈ ಚಿತ್ರಗಳ ಕಾಲವನ್ನು ಬಹುಶಃ ಶಿಲಾ ತಾಮ್ರಯುಗದ ಕೊನೆಯ ಹಂತ ಮತ್ತು ಬೃಹತ್ ಶಿಲಾಯುಗದ (ಕ್ರಿ.ಪೂ. ಸುಮಾರು ೧೯೦೦-೮೦೦) ಸಂಸ್ಕೃತಿಯ ಆದಿ ಮಧ್ಯ ಭಾಗದ (ಕ್ರಿ.ಪೂ. ಸುಮಾರು ೧೦೦-೫೦೦) ಕಾಲದವೆಂದು ನಿರ್ಣಯಿಸಬಹುದು.

೩.೧.೨. ಇತಿಹಾಸ ಕಾಲ

ಇತಿಹಾಸ ಪ್ರಾರಂಭ ಕಾಲದ ಸಂಸ್ಕೃತಿ (ಕ್ರಿ.ಪೂ. ೪ನೇ ಶತಮಾನ ಕ್ರಿ.ಶ. ೩ನೇಶತಮಾನ)

ಕನಕಗಿರಿ ಪ್ರದೇಶವು ಕ್ರಿ.ಪೂ. ೪-೩ನೇ ಶತಮಾನದ ಹೊತ್ತಿಗೆ ಮೌರ್ಯ ಸಾಮ್ರಾಜ್ಯದಲ್ಲಿ ಸೇರಿಹೋಗಿದ್ದಿತು. ಇದಕ್ಕೆ ಸಾಕ್ಷಿಯಾಗಿ ಈ ಪ್ರದೇಶದ ಗವಿಮಠ, ಪಾಲ್ಕಿಗುಂಡು (ಕೊಪ್ಪಳ), ಮಸ್ಕಿ, ನಿಟ್ಟೂರ್, ಕನಕಗಿರಿ ಪ್ರದೇಶದ ಉತ್ತರಕ್ಕೆ ಸನ್ನತಿ-ದಕ್ಷಿಣಕ್ಕೆ ಬ್ರಹ್ಮಗಿರಿ ಬಳಗದ ಅಶೋಕನ ಶಾಸನಗಳು ದೊರೆತಿವೆ. ಈ ಎಲ್ಲಾ ಸ್ಥಳಗಳ ಮಧ್ಯ ಕನಕಗಿರಿ ಪ್ರದೇಶ ಇರುವುದರಿಂದ ಅದು ನಿಸ್ಸಂದೇಹವಾಗಿ ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತೆಂದು ಹೇಳಬಹುದು. ವಿಶೇಷವೆಂದರೆ ಕನಕಗಿರಿಯನ್ನೆ ಮೌರ್ಯರ ದಕ್ಷಿಣ ಪ್ರಾಂತ್ಯದ ರಾಜಧಾನಿ ಎಂದು ಗುರುತಿಸಲಾಗಿದೆ. ಅಶೋಕನ ಬ್ರಹ್ಮಗಿರಿ ಬಳಗದ ಶಾಸನಗಳು "ಸುವಂಣ ಗಿರೀತೇ ಅಯತ ಪುತಸ ಮಹಾಮಾತಾಣಂ ಚವಚನೇನ ಇಸಿಲಸಿ ಮಹಾಮಾತಾ ಆರೋಗಿಯಂ ವಿತಮಿಯಾ ಹೇವಾ...." ಎಂಬುದಾಗಿ ಪ್ರಾರಂಭಗೊಳ್ಳುತ್ತದೆ. ಅಂದರೆ ಈ ಶಾಸನಗಳು ಅಶೋಕನ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯದ ಉಪರಾಜಧಾನಿಯಾಗಿದ್ದಿರಬಹುದಾದ ಸುವರ್ಣಗಿರಿಯಲ್ಲಿ ಇದ್ದು, ಆರ್ಯಪುತ್ರ ಹಾಗೂ ಸುವರ್ಣಗಿರಿ ಮಹಾಮಾತ್ರರಿಗೆ ಉದ್ದೇಶಿಸಿದವು. ಇದರಿಂದ ಸುವರ್ಣಗಿರಿ ಮೌರ್ಯ ಸಾಮ್ರಾಜ್ಯದ ಮುಖ್ಯ ಆಡಳಿತ ಕೇಂದ್ರಗಳಲ್ಲಿ ಒಂದಾಗಿತ್ತೆಂದು ಸ್ಪಷ್ಟವಾಗುತ್ತದೆ. ಆದರೆ ಇಲ್ಲಿಯ ಸುವರ್ಣಗಿರಿಯನ್ನು ಗುರುತಿಸುವಲ್ಲಿ ವಾದವಿವಾದಗಳಿವೆ.

ಕನಕಗಿರಿ ಪ್ರದೇಶಕ್ಕೆ ಸುತ್ತಮುತ್ತಲಿನ ಸ್ಥಳಗಳಲ್ಲಿ ದೊರೆತ ಸಮಕಾಲೀನ ನೆಲೆ, ಶಾಸನಗಳು ಮತ್ತು ಮೂರ್ತಿ ಶಿಲ್ಪಗಳಿಂದ ತರ್ಕಿಸಬಹುದಾದ ವಿಷಯವೇನೆಂದರೆ, ಕನಕಗಿರಿ ಪ್ರದೇಶವು ಕದಂಬರ, ಬಾದಾಮಿ

ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ, ಕಳಚೂರ್ಯರ, ದೇವಗಿರಿಯ ಸೇವುಣರ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತೆಂಬುದು ಕನಕಗಿರಿ ಪ್ರದೇಶದ ಇತಿಹಾಸ ಪೂರ್ವ ಹಾಗೂ ಇತಿಹಾಸದ ಕಾಲವನ್ನು ನಾನು ಆಯ್ದುಕೊಂಡ ಪಿಎಚ್.ಡಿ. ಪ್ರಬಂಧದ ವಿಷಯದ ಇತಿಮಿತಿಯಲ್ಲಿ ಮಾತ್ರ ನೋಡಿದ್ದೇನೆ. ವಿವರ ಮಾಹಿತಿಗಾಗಿ ಡಾ. ಶರಣಬಸಪ್ಪ ಕೋಲ್ಕಾರ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾಧರಪಡಿಸಿ ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು (ಪುಟ ೮-೪೩) ಎಂಬ ಪ್ರಬಂಧವನ್ನು ನೋಡಿ.

೩.೨. ಕನಕಗಿರಿ ನಾಯಕ ಅರಸರ ಇತಿಹಾಸ

ಪರಸಪ್ಪ ಉಡಿಚನಾಯಕ ಕ್ರಿ.ಶ. (೧೪೩೬-೧೫೧೦)

ಗುಜ್ಜಲ ವಂಶಕ್ಕೆ ಹಾಗೂ ಬೇಡರ ಸಮುದಾಯಕ್ಕೆ ಸೇರಿದ ಪರಸಪ್ಪ ಉಡಿಚನಾಯಕನು ಕನಕಗಿರಿ ಸಂಸ್ಥಾನದ ಮೊದಲ ದೊರೆ. ಇವನು ಕ್ರಿ.ಶ. ೧೪೩೬ರ ಹೊತ್ತಿಗೆ ಕನಕಗಿರಿ ಪ್ರದೇಶದಲ್ಲಿ ಪ್ರಸಿದ್ಧಿಗೆ ಬಂದನು. ಇವನು ಶ್ರೀಶೈಲ ಪ್ರದೇಶದಿಂದ ಬಂದವನು ಮತ್ತು ಹೇಮಗುಡ್ಡ ಪ್ರದೇಶದಿಂದ ಬಂದವನೆಂಬ ಅಭಿಪ್ರಾಯಗಳಿವೆ. ಪರಸಪ್ಪ ಉಡಿಚನಾಯಕನು ದನಗಾಹಿಗಳ ನಾಯಕನಾಗಿದ್ದು ತನ್ನ ಗೋಸಂಪತ್ತಿನೊಂದಿಗೆ ಶ್ರೀಶೈಲ ಪರ್ವತಾವಳಿ ಪ್ರದೇಶದಿಂದ ಕನಕಗಿರಿ ಪ್ರದೇಶಕ್ಕೆ ಬಂದವನು ಎಂಬುದು ಅವನೊಬ್ಬ ದನಗಾಹಿಗಳ ನಾಯಕನೆಂಬ ಕಾರಣಗಳ ಹಿನ್ನೆಲೆಯಲ್ಲಿ ಹೇಳಲಾಗುತ್ತಿದೆ. ಹಿಂದೊಮ್ಮೆ ಶ್ರೀಶೈಲ ಪರ್ವತಾವಳಿ ಪ್ರದೇಶವು ಬೇಡರಂತಹ ಗುಡ್ಡಗಾಡು ಜನರ ಕೇಂದ್ರವಾಗಿತ್ತೆಂಬುದನ್ನು ಗಮನಿಸಿದಾಗ ಪರಸ್ಪರನಾಯಕನ ಪೂರ್ವಜರು ಅಲ್ಲಿಂದ ಬಂದಿರಬೇಕೆಂದು ಕಾಣಿಸುತ್ತದೆ. ಏಕೆಂದರೆ ಕನ್ನಡದ ಮೊದಲ ಅರಸು ಮನೆತನವಾದ ಕದಂಬರ ದೊರೆ ಮಯೂರಶರ್ಮನಿಗೆ ಶ್ರೀಶೈಲ ಪರ್ವತಾವಳಿ ಪ್ರದೇಶದಲ್ಲಿ ಸಹಾಯ ಮಾಡಿದವರೆಂದರೆ ಬೇಡರೇ. ಈ ಕಾಲಕ್ಕಾಗಲೇ ಬೇಡರು ಸೇನಾ ತರಬೇತಿಯಲ್ಲಿ ಪ್ರಸಿದ್ಧರಾಗಿರಬೇಕು.

ಸ್ಥಳೀಯ ಹೇಳಿಕೆ ಮತ್ತು ಐತಿಹಾಸಿಕ ಸ್ಥಳ ಹಾಗೂ ಸ್ಮಾರಕಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಪರಸಪ್ಪ ಉಡಿಚನಾಯಕನು ಹಂಪಿ ಪ್ರದೇಶವಾದ ಕುಮ್ಮಟದುರ್ಗದ ಸಮೀಪ ಇರುವ ಹೇಮಗುಡ್ಡ ಪ್ರದೇಶದಿಂದ ಬಂದವನೆಂಬುದು ಸತ್ಯಕ್ಕೆ ಸಮೀಪವಾಗಿದೆ. ಗುಜ್ಜಲವಂಶಕ್ಕೆ ಸೇರಿದ ಪರಸಪ್ಪನಾಯಕನ ಪೂರ್ವಜರು ಹೇಮಗುಡ್ಡ ಪ್ರದೇಶದಲ್ಲಿ ಬೇಹುಗಾರರಾಗಿ ಕೆಲಸ ಮಾಡುತ್ತಿದ್ದರು. ಕಂಪಲಿರಾಯನ ಹೆಂಡತಿ ಹರಿಯಾಲದೇವಿ ಗುಜ್ಜಲವಂಶಕ್ಕೆ ಸೇರಿದವಳು. ಇವಳು ಈ ಪರಸಪ್ಪನಾಯಕನ ರಕ್ತ ಸಂಬಂಧಿಯಾಗಿದ್ದಳು. ಈ ಹರಿಯಾಲದೇವಿಯ ಬಗ್ಗೆ ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳುವುದೇನೆಂದರೆ, ಹರಿಯಾಲದೇವಿಯು ಬಹುಶಃ ಗುಜರಾತ್ ಪ್ರದೇಶ ಗುಜ್ಜರಿಯನ್ನಾಳುತ್ತಿದ್ದ ಚಾಮರಾಯನೆಂಬ ಆರ್ಯ (ಮರಾಠಿ) ರಾಜನೊಬ್ಬನ ಮಗಳೆಂದೂ, ಇವನು ಅಲೆಮಾರಿಯಾಗಿ ಕೃಷ್ಣಾನದಿ ದಾಟಿ ತೋರಣಗಲ್ಲು, ಬಾದಾಮಿ, ನಂತರ ಕುಮ್ಮಟ ದುರ್ಗಕ್ಕೆ ಬಂದು ಕಂಪಲಿರಾಯನಲ್ಲಿ

ಆಶ್ರಯಪಡೆದನು ಎಂದು ಹೇಳುತ್ತಾರೆ. ಹರಿಯಾಲದೇವಿ ಹೆಸರಿನವರು ಇಂದಿಗೂ ಬೇಡ ಸಮುದಾಯದಲ್ಲಿದ್ದಾರೆ. ಗುಜ್ಜಲ ಎಂಬುದು ಬೇಡ ಸಮುದಾಯದಲ್ಲಿ ಬರುವ ಒಂದು ಬೆಡಗು ಆಗಿದೆ. ೧೩-೧೪ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ ಪ್ರದೇಶದಲ್ಲಿ ಅನೇಕ ಬೇಡ ಸಮುದಾಯದ ಗುಜ್ಜಲವಂಶಕ್ಕೆ ಸೇರಿದ ನಾಯಕರು ದಾನದತ್ತಿ ನೀಡುವಲ್ಲಿ, ಕೆರೆಕಟ್ಟೆಗಳನ್ನು ಕಟ್ಟಿಸುವಲ್ಲಿ ಹೆಸರಾಗಿದ್ದರೆಂಬುದು ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಅಂದರೆ ಈ ಪ್ರದೇಶವು ಬೇಡ ಸಮುದಾಯದಲ್ಲಿರುವ ಬೆಡಗುಗಳಲ್ಲಿ ಗುಜ್ಜಲ ಎಂಬ ಬೆಡಗಿನವರು ಪ್ರಸಿದ್ಧರಾಗಿದ್ದರೆಂಬುದು ತಿಳಿಯುತ್ತದೆ. ಉದಾಹರಣೆಗೆ ಕ್ರಿ.ಶ. ೧೪.೫.೧೫೪೩ರಲ್ಲಿ ಗುಜ್ಜಲ ಮುಂಮಡಿ ಮೇದಿನಿರಾಯನು ಸೂಳೆಯಕೆರೆಯಗಡಿಯಲ್ಲಿ ಶಾಂತಮಲ್ಲಿಕಾರ್ಜುನ ದೇವರ ಅಮೃತ ಪಡಿಗೆ ಯಿಕುಳದ ಬೂಮಿಯನ್ನು ದಾನ ನೀಡಿದನು. ಹಾಗೆಯೇ, ಗುಜ್ಜಲಮುಂಮಡಿ ರಾಯಣನಾಯಕ, ಯಿಂಮಡಿ ಹನುಮಂತನಾಯಕ, ಇವನ ಮಗ ಯಿಂಮಡಿ ಹನುಮಂತನಾಯಕ, ಕುಷ್ಠಿಗೆಯ ಗುಜ್ಜಲ ಯಿಂಮಡಿ ಮರನದಿನಾಯಕ, ಮುಂಮಡಿ ಮಂಗಪನಾಯಕ, ಗುಜ್ಜಲಯಿಮ್ಮಡಿ ಯರಪನಾಯಕ ಇವನ ಮಗ ಮುಮ್ಮಡಿ ಯರಪನಾಯಕ, ಗುಜ್ಜಲ ಬೊಂಮಣನಾಯಕನ ಮಗ ಯಿಮ್ಮಡಿ ಹನುಮಂತನಾಯಕ, ಗುಜ್ಜಲ ಬೊಂಮಣನಾಯಕನ ಮಗ ಲಖಿಮಣನಾಯಕ ಮತ್ತು ಬೊಮ್ಮನಾಗತಿ ಮುಂತಾದ ಗುಜ್ಜಲ ನಾಯಕ, ನಾಗತಿಯರು ಶಿಲಾ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾರೆ. ಈ ಅಂಶವನ್ನು ಪರಿಗಣಿಸಲಾಗಿ ಪರಸಪ್ಪ ಉಡಿಚನಾಯಕನ ಪೂರ್ವಜರು ಹೇಮಗುಡ್ಡ ಪ್ರದೇಶದಲ್ಲಿಯೇ ನೆಲೆಸಿರಬೇಕು. ಕಂಪಿಲರಾಯನ ಸೈನ್ಯದಲ್ಲಿ ಅವರು ಬೇಹುಗಾರರಾಗಿ ಕೆಲಸ ಮಾಡುತ್ತಿರಬೇಕೆಂದು ಕಾಣಿಸುತ್ತದೆ. ಜೊತೆಗೆ ಕುಮಾರರಾಮನ ರಕ್ಷಣೆಯಲ್ಲಿ ನಿಂತಿರಬೇಕು. ಹುಲ್ಲೂರು ಶ್ರೀನಿವಾಸಜೋಯಿಸರು ದಿಲ್ಲಿಯ ಸೈನ್ಯದ ವಿರುದ್ಧ ಹೋರಾಟದಲ್ಲಿ ಕುಮಾರರಾಮನ ಜೊತೆ ಕನಕಗಿರಿ ನಾಯಕರು ಭಾಗವಹಿಸಿದ್ದರೆಂದು ತಿಳಿಸುತ್ತಾರೆ.

ಕುಮಾರರಾಮನ ನಂತರ ಕುಮ್ಮಟದುರ್ಗ ಹಾಳಾಯಿತು. ಇದೇ ಪ್ರದೇಶದಲ್ಲಿ ಹರಿಹರ ಮತ್ತು ಬುಕ್ಕರಾಯರು ವಿಜಯನಗರ ಸಾಮ್ರಾಜ್ಯವನ್ನು ಕ್ರಿ.ಶ. ೧೩೩೬ರಲ್ಲಿ ಸ್ಥಾಪಿಸಿದರು. ಆಗಲೂ ಈ ನಾಯಕನ ಮನೆತನದವರು ಬೇಹುಗಾರಿಕೆ ವೃತ್ತಿಯಲ್ಲಿ ಮುಂದುವರೆದರು. ಹರಿಹರ ಮತ್ತು ಬುಕ್ಕರು ಕಂಪಿಲರಾಯನ ಸಂಬಂಧಿಕರಾಗಿದ್ದರು. ಮೇಲಾಗಿ ಅವರು ಮುಸ್ಲಿಂ ದಾಳಿಗಳನ್ನು ತಡೆಯಲು ನಂಬಿಕೆಗೆ ಅರ್ಹರಾದ ಸಂಬಂಧಿಗಳನ್ನು, ಆಯಕಟ್ಟಿನ ಸ್ಥಳಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿದ್ದರು. ಈ ಸಂಪ್ರದಾಯವು ಮುಂದುವರೆದು ವಿಜಯನಗರ ಸಾಮ್ರಾಜ್ಯವು ಅನೇಕ ಸಾಮಂತ ನಾಯಕರ ಒಕ್ಕೂಟ ಸಾಮ್ರಾಜ್ಯವಾಗಿ ಬೆಳೆದು ಬಂದಿರುವುದು ನಮಗೆಲ್ಲ ಗೊತ್ತಿರುವ ಸಂಗತಿ. ಏಕೆಂದರೆ, ವಿಜಯನಗರ ಸಾಮ್ರಾಜ್ಯದಲ್ಲಿದ್ದ ಸಾಮಂತ ನಾಯಕರಲ್ಲಿ ಬೇಡರೇ ಅಧಿಕ ಸಂಖ್ಯೆಯಲ್ಲಿದ್ದರು. ಪರಸಪ್ಪ ಉಡಿಚನಾಯಕನು ವಿಜಯನಗರದ ಅರಸ ಪ್ರೌಢದೇವರಾಯನ ಕಾಲದಲ್ಲಿ ಹೇಮಗುಡ್ಡ-ಕನಕಗಿರಿ ಪ್ರದೇಶದಲ್ಲಿ ಬೇಹುಗಾರನಾಗಿ ಕಾರ್ಯನಿರ್ವಹಿಸುತ್ತಿದ್ದನು. ಇವನು ಶೂರನೂ ಮಹಾ ದೈವ ಭಕ್ತನೂ ಆಗಿದ್ದನು. ಪ್ರೌಢದೇವರಾಯನು ಇವನಿಗೆ ಸೋದರ ಮಾವನಾಗಬೇಕೆಂಬುದು ಒಂದು ಅಭಿಪ್ರಾಯ. ಆ

ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯವಾದರೂ ಕಂಪಿಲರಾಯನ ಸಂಬಂಧಿಗಳಾದ ಹಕ್ಕಬುಕ್ಕರ ಸಂತತಿಯವನಾದ ಪ್ರೌಢದೇವರಾಯನು ಪರಸಪ್ಪನಾಯಕನ ಸಂಬಂಧಿ ಆಗಿರಬಹುದು ಎಂದು ಕಾಣಿಸುತ್ತದೆ. ಬೇಡ ಸಮುದಾಯದಲ್ಲಿ ಕೆಂಪಣ್ಣ, ಬುಕ್ಕಣ್ಣ, ಮಾರಣ್ಣ ಎಂಬ ಹೆಸರಿನವರು ಇಂದಿಗೂ ಕಾಣಸಿಗುತ್ತಾರೆ. ಬಹುಮನಿ ಸುಲ್ತಾನರ ದಾಳಿಗಳನ್ನು ಎದುರಿಸುವಲ್ಲಿ ಪರಸಪ್ಪನಾಯಕನು ಪ್ರಮುಖ ಪಾತ್ರವಹಿಸಿದ್ದನು. ಒಮ್ಮೆ ಪರಸಪ್ಪನಾಯಕನ ಬಲಾಬಲ ಪರೀಕ್ಷೆ ಮಾಡಲು ಪ್ರೌಢದೇವರಾಯನು ತನ್ನ ಆಸ್ಥಾನಕ್ಕೆ ಕರೆಸಿಕೊಂಡನು. ತಾನು ಮದವೇರಿದ ಗಜವನ್ನೇರಿ ಕುಳಿತು, ಈ ಆನೆಯ ಬಾಲವನ್ನು ಹಿಡಿದು ಎಳೆದು ನಿಲ್ಲಿಸುವಂತೆ ಸ್ಪರ್ಧೆಗೆ ಆಹ್ವಾನವಿತ್ತನು. ಶೂರನಾದ ಪರಸಪ್ಪ ಉಡಿಚನಾಯಕನು ಆ ಗಜದ ಬಾಲವನ್ನು ಹಿಡಿದು ನಿಲ್ಲಿಸಿದನು. ಇದರಿಂದ ಸಂತೃಪ್ತಗೊಂಡ ಪ್ರೌಢದೇವರಾಯನು ತನ್ನ ಆಸ್ಥಾನದಲ್ಲಿ ಬಲಗಡೆ ಪಾರ್ಶ್ವ ರಾಜಮರ್ಯಾದೆಯನ್ನು ಕೊಟ್ಟು ಹಸಿರು ನಿಶಾನೆ ಹೊಂದಲು ಅನುಮತಿ ನೀಡಿದನು. ಹೇಮಗುಡ್ಡ ಪ್ರದೇಶದಲ್ಲಿ ಜನರ ಭಯಕ್ಕೆ ಕಾರಣವಾಗಿದ್ದ ಹೆಬ್ಬುಲಿಯೊಂದನ್ನು ಕೊಂದು ಹಾಕಿದ ಕೀರ್ತಿ ಪರಸಪ್ಪ ಉಡಿಚನಾಯಕನಿಗೆ ಸಲ್ಲುತ್ತದೆ. ಶೌರ್ಯ, ಸಾಹಸಗಳಿಂದ ಹೆಸರುವಾಸಿಯಾಗಿದ್ದ ಈ ನಾಯಕನು ಅನೇಕ ಗೋವುಗಳ ಒಡೆಯನಾಗಿದ್ದನು.

ಪರಸಪ್ಪನಾಯಕನ ಶೌರ್ಯ, ಸಾಹಸಗಳು ಹೇಗೆ ಪ್ರೌಢದೇವರಾಯನನ್ನು ಮುಟ್ಟಿದವೋ ಹಾಗೆಯೇ ಆತನ ಭಕ್ತಿಯೂ ಮುಟ್ಟಿತು. ಇದರಿಂದ ಪುಲಕಿತಗೊಂಡ ಪ್ರೌಢದೇವರಾಯನು ೧೦-೧೪೩೬ರಲ್ಲಿ ಕನಕಗಿರಿಪೇಟೆಯನ್ನು ಕನಕಗಿರಿನಾಥ ದೇವರ ಅಮೃತಪಡಿ ನೈವೇದ್ಯಕ್ಕಾಗಿ ಬಿಟ್ಟುಕೊಟ್ಟನು. ಶ್ರೀಮನ್ ಲಕ್ಷ್ಮೀನರಸಿಹನ ಪೂಜಾ ಕಾರ್ಯಗಳಿಂದ ಪರಸಪ್ಪನಾಯಕನು ದಿನದಿಂದ ದಿನಕ್ಕೆ ಪ್ರಸಿದ್ಧಿಯನ್ನು ಪಡೆದನು. ಅನೇಕ ಜನರು, ಸಾಮಂತರು ಈ ಕನಕಗಿರಿಗೆ ಬಂದು ಹೋದರು, ಕನಕಗಿರಿ ಧಾರ್ಮಿಕ ಕೇಂದ್ರವಾಗಿ ಹೆಸರಾಯಿತು. ಶ್ರೀ ಲಕ್ಷ್ಮೀನರಸಿಂಹ ದೇವರಿಗೆ ದೇವಾಲಯ ನಿರ್ಮಾಣಗೊಂಡಿತಲ್ಲದೆ, ಅದರ ಎಡ ಭಾಗದಲ್ಲಿ ಮಹಾಲಕ್ಷ್ಮೀ ದೇವಾಲಯವೂ ಕಟ್ಟಲ್ಪಟ್ಟಿತು. ಧರ್ಮ ಕಾರ್ಯಗಳಿಂದ ಕನಕಗಿರಿ ಜನನಿಬಿಡವಾಯಿತು. ಪ್ರೌಢದೇವರಾಯನ ಆಸರೆಯಿಂದ ಪರಸಪ್ಪನಾಯಕನು 'ನಾಯಕ' ಸ್ಥಾನಕ್ಕೇರಿದನು. ಈ ಪ್ರದೇಶದಲ್ಲಿದ್ದ ಅನೇಕ ಬೇಡ, ಗೊಲ್ಲ, ಕುರುಬ ಯುವಕರನ್ನು ಸೇರಿಸಿಕೊಂಡು ಸೈನ್ಯವನ್ನು ಕಟ್ಟಿದನು. ಕೋಟೆಯನ್ನು ಕಟ್ಟುವ ಯೋಜನೆ ರೂಪಿಸಿದನು. ಅತ್ತ ಪ್ರೌಢದೇವರಾಯನು ಕ್ರಿ.ಶ. ೧೪೩೮ರಲ್ಲಿ ಕನಕಗಿರಿನಾಥನ ಅಮೃತಪಡಿಗೆ ಗೋಡಿನಾಳ ಮತ್ತು ಖ್ಯಾಡ ಗ್ರಾಮಗಳನ್ನು ಬಿಟ್ಟುಕೊಟ್ಟನು. ಬಹುಮನಿ ಸುಲ್ತಾನರ ದಾಳಿಗಳನ್ನು ತಡೆಯುವಲ್ಲಿ ಪರಸಪ್ಪನಾಯಕನು ಪ್ರಮುಖ ಪಾತ್ರ ನಿರ್ವಹಿಸುತ್ತಾ ವಿಜಯನಗರ ಅರಸರ ಆಪ್ತನಾಗಿ ಬೆಳೆಯುತ್ತಾ ಬಂದನು. ಇದರಿಂದಾಗಿ ಕನಕಗಿರಿ ಒಂದು ಸಂಸ್ಥಾನವಾಗಿ ರೂಪುಗೊಂಡಿತು. ಪರಸಪ್ಪನಾಯಕನು ರಾಜನ ಸ್ಥಾನಮಾನಗಳನ್ನು ಗಳಿಸಲು ಆರಂಭಿಸಿದನು. ಆರ್ಥಿಕವಾಗಿ ಸಬಲನಾದ ಈ ನಾಯಕನು ತ್ರಿವೇಣಿ ನದಿಗಳಿಂದ ಕಪ್ಪುಶಿಲೆ (ಲಕ್ಷ್ಮೀನರಸಿಂಹ ಸಾಲಿಗ್ರಾಮ)ಗೆ ಆಗುತ್ತಿದ್ದ ಹಾನಿಯನ್ನು ತಡೆಯಲು ಕೋಟೆಯ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದನು. ಜನರಿಂದ ತುಂಬಿ ತುಳುಕುವಂತೆ ಕನಕಗಿರಿಯನ್ನು ಅಭಿವೃದಿಪಡಿಸಿದ ಪರಸಪ್ಪನಾಯಕನ ವಾರ್ಷಿಕ ಆದಾಯ ೪೦ ಲಕ್ಷ

ವರಹ ಇದ್ದಿತು. ವಿಜಯನಗರದ ಸಂಗಮ ದೊರೆಗಳ ಅನುಗ್ರಹದಿಂದ ಕನಕಗಿರಿಯು ವಿಜಯನಗರ ಸಾಮ್ರಾಜ್ಯದ ಒಂದು ಪ್ರಮುಖ ಸಂಸ್ಥಾನವಾಗಿ ರೂಪುಗೊಂಡಿತು.

ನವಾಬ ಉಡಿಚನಾಯಕ ಕ್ರಿ.ಶ. (೧೫೧೦-೧೫೩೩)

ಪರಸಪ್ಪ ಉಡಿಚನಾಯಕನ ಮಗನಾದ ಇವನು ಕ್ರಿ.ಶ. ೧೫೧೦ರಲ್ಲಿ ಅಧಿಕಾರಕ್ಕೆ ಬಂದನು. ಈತನಿಗೆ 'ಹಿಂದುಪಾಳೆಗಾರರ ಗಂಡ', 'ಗುಜ್ಜಲಭೂಪತಿ' ಎಂಬ ಬಿರುದುಗಳಿದ್ದವು. ಅತ್ತ ವಿಜಯನಗರ ಸಾಮ್ರಾಜ್ಯದಲ್ಲಿ ಶ್ರೀಕೃಷ್ಣದೇವರಾಯನು ಅಧಿಕಾರಕ್ಕೆ ಬಂದಿದ್ದುದು ಕನಕಗಿರಿ ಅನೇಕ ರೀತಿಯಲ್ಲಿ ಅಭಿವೃದ್ಧಿಗೊಳ್ಳುವುದಕ್ಕೆ ಒಂದು ಕಾರಣವಾಯಿತು. ನವಾಬ ಉಡಿಚನಾಯಕನು ಅನೇಕ ಮುಸ್ಲಿಂ ಸೇನಾನಿಗಳನ್ನು, ಸುಲ್ತಾನರನ್ನು ಸೋಲಿಸುವಲ್ಲಿ ಯಶಸ್ವಿಯಾದನು. ಈ ವಿಜಯದ ನೆನಪಿನಲ್ಲಿ ಉಡಿಚನಾಯಕನಿಗೆ 'ನವಾಬ' ಎಂಬ ಬಿರುದು ಪ್ರಾಪ್ತಿಯಾಯಿತು. ತನ್ನ ತಂದೆ ಪರಸಪ್ಪನಾಯಕನು ಹಾಕಿಕೊಂಡ ಯೋಜನೆಗಳನ್ನು ಒಂದೊಂದಾಗಿ ಪೂರ್ಣಗೊಳಿಸಲು ಉಡಿಚನಾಯಕನು ಪ್ರಯತ್ನ ಮಾಡಿದನು. ತ್ರಿವೇಣಿ ನದಿಗಳಿಂದ ಸಾಲಿಗ್ರಾಮಕ್ಕೆ ಆಗುವ ಹಾನಿಯನ್ನು ತಡೆಯಲು ಕೋಟೆಯನ್ನು ಕಟ್ಟಲು ಆರಂಭ ಮಾಡಿದ ಆತನ ತಂದೆಯ ಕೆಲಸವನ್ನು ಪೂರ್ಣಗೊಳಿಸಿದನು. ಕೋಟೆಯೊಳಗೆ ರಾಜಪುರೋಹಿತರಿಗಾಗಿ ಅಗ್ರಹಾರ ನಿರ್ಮಾಣ ಮಾಡಿದನು. ಅರಮನೆ, ಸೈನಿಕರ ವಸತಿ ಕಟ್ಟಡಗಳನ್ನು ಕಟ್ಟಿಸಿದನು. ಕನಕಗಿರಿ ಒಂದು ರಾಜಧಾನಿ ಸ್ವರೂಪಕ್ಕೆ ಬರಲು ಬೇಕಾಗುವ ಎಲ್ಲಾ ಸವಲತ್ತುಗಳನ್ನು ಮಾಡಿದನು. ಅಪೂರ್ವ ಕಲಾಕೆತ್ತನೆಯಿಂದ ಕೂಡಿದ ಕನಕಾಚಲದೇವಾಲಯದ ರಂಗಮಂಟಪವನ್ನು ಯಾವುದೇ ಗೋಡೆಯ ಆಸರೆ ಇಲ್ಲದೆ ನಿರ್ಮಿಸಿ ತನ್ನ ಕಲಾ ಪ್ರೌಢಿಮೆಯನ್ನು ತೋರಿಸಿದ್ದಾನೆ. ಧಾರ್ಮಿಕ ಅಭಿವೃದ್ಧಿ ಕಾರ್ಯಗಳನ್ನು ಕೇವಲ ಕನಕಗಿರಿಗೆ ಸೀಮಿತಗೊಳಿಸದೆ ಸುತ್ತಮುತ್ತಲ ಪ್ರದೇಶದಲ್ಲೂ ವಿಸ್ತರಿಸಿದ ನಾಯಕನು ನವಲಿಯಲ್ಲಿ ಬೋಗಾಪುರೇಶ್ವರ (ಹನುಮಂತ) ದೇವಾಲಯವನ್ನು ಕಟ್ಟಿಸಿದನು. ಕೃಷ್ಣದೇವರಾಯನು ಈ ನಾಯಕನ ಧರ್ಮಪರ ಕಾರ್ಯಗಳನ್ನು ಕಣ್ಣಾರೆ ಕಂಡು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಸತ್ಕರಿಸಿ ರಾಜಮರ್ಯಾದೆಯನ್ನು ನೀಡಿದನು. ಕ್ರಿ.ಶ. ೧೫೧೨ರಲ್ಲಿ ಕನಕಗಿರಿ ಕನಕರಾಯನ ಅಮೃತಪಡಿಗೆ ಕನಕಗಿರಿ ಪೇಟೆ ಸ್ಥಳ ಸುಂಕ, ತಳವಾರಿಕೆ ಸುಂಕ, ಚಿನ್ನಾಪುರ, ಇಲಕಲ್, ಯತಗಲ್, ಕಳಸ, ಬೈರಾಪುರ (ನವಲಿ ಸರಹದ್ದಿನ ಪ್ರದೇಶಗಳು) ಗ್ರಾಮಗಳನ್ನು ದಾನವಾಗಿ ನೀಡಿದನು. ಪ್ರತಿಯಾಗಿ ನವಾಬ ಉಡಿಚನಾಯಕನು ಕೃಷ್ಣದೇವರಾಯನಿಗೆ ಒಳ್ಳೆಯ ಸಾಮಂತ ವ್ಯಕ್ತಿಯಾಗಿ ಯಾವುದೇ ಪ್ರತಿರೋಧ ತೋರದೆ ನಡೆದುಕೊಂಡನು. ಹಂಪೆಯಲ್ಲಿನ ವಿರೂಪಾಕ್ಷ ದೇವಾಲಯದ ಉತ್ತರ ಭಾಗದ ಒಂದು ಬೃಹತ್ ಗೋಪುರವನ್ನು ಕಟ್ಟಿಸಿದನು. ಈ ಗೋಪುರವು 'ಕನಕಗಿರಿ ಗೋಪುರ'ವೆಂದು ಹೆಸರಾಗಿದೆ.

ಕನಕಗಿರಿಯಲ್ಲಿ ರಾಜಬೀದಿ ನಿರ್ಮಾಣಗೊಂಡಿತು. ಈ ಬೀದಿಯ ಎರಡು ಬದಿಗೂ ಅನೇಕ ದೇವಾಲಯಗಳ ನಿರ್ಮಾಣದ ಕನಸು ಕಂಡು ಕೆಲವು ದೇವಾಲಯಗಳನ್ನು ಕಟ್ಟಿಸಿದನು. ಕನಕಾಚಲ ದೇವಾಲಯದ ಮೂರು ಮುಖ್ಯ ಗೋಪುರಗಳ ನಿರ್ಮಾಣ ಕಾರ್ಯ ಆರಂಭಿಸಿದನು. ಕನಕಗಿರಿಯ

ಸುತ್ತಲೂ ಕೋಟೆ ನಿರ್ಮಾಣಗೊಂಡಿತು, ಮೂರು ಅಗಸಿಯ ಈ ಕೋಟೆಯು ಮುಸ್ಲಿಂ ದಾಳಿಗಳಿಂದ, ವೈರಿಗಳಿಂದ ರಕ್ಷಣೆ ಪಡೆಯಲು ಅಷ್ಟೊಂದು ಸೂಕ್ತವಾಗಿರಲಿಲ್ಲ. ಕಾರಣ, ಯಾವುದೇ ನೈಸರ್ಗಿಕ ಬೆಟ್ಟ ಗುಡ್ಡಗಳ, ದೊಡ್ಡನದಿಗಳ ಆಸರೆ ಇದಕ್ಕೆ ಇರಲಿಲ್ಲ ಎಂಬ ವಿಷಯವನ್ನು ಅರಿತೂ ನವಾಬ ಉಡಿಚನಾಯಕನು ಕನಕಗಿರಿಯನ್ನೇ ಮುಖ್ಯರಾಜಧಾನಿಯನ್ನಾಗಿ ಮಾಡಿಕೊಂಡನು. ಏಕೆಂದರೆ ಶ್ರೀಮನ್ ಲಕ್ಷ್ಮೀವೆಂಕಟರಮಣನ ಸನ್ನಿಧಿಯಿಂದ ದೂರವಿರಲು ಅವನಿಂದ ಆಗಲಿಲ್ಲ. ಅದಕ್ಕಾಗಿ ಕನಕಚಾಲ ದೇವಾಲಯದ ದಕ್ಷಿಣದ ಗೋಪುರದಿಂದ ಸ್ವಲ್ಪವೇ ದೂರದಲ್ಲಿ ಅರಮನೆಯನ್ನು, ಕಟ್ಟಿಕೊಂಡು ದಿನನಿತ್ಯ ಸ್ವಾಮಿಯ ಪೂಜಾ ಕಾರ್ಯಗಳನ್ನು ಪೂರೈಸಿ, ಜನರ ಸೇವೆಯನ್ನು ಮಾಡುತ್ತಿದ್ದನು. ಎರಡನೇ ರಾಜಧಾನಿಯಾಗಿ ತನ್ನ ತಂದೆಯ ಪೂರ್ವಜರ ನೆಲೆಯಾಗಿದ್ದ ಹೇಮಗುಡ್ಡವನ್ನು ಆಯ್ದುಕೊಂಡು ಅಲ್ಲಿ ಒಂದು ಕೋಟೆಯನ್ನು, ಕೋಟೆಯೊಳಗೊಂದು ಕನಕರಾಯ ದೇವಾಲಯವನ್ನು, ಹನುಮಂತ ದೇವಾಲಯವನ್ನು, ದುರ್ಗಾ ದೇವಾಲಯವನ್ನು ಅರಮನೆಯನ್ನು ಕಟ್ಟಿಸಿದನು. ಈ ಅರಮನೆ ಕಟ್ಟಡ ಮದ್ದುಗುಂಡುಗಳ ಕೇಂದ್ರ ಕಟ್ಟಡವೆಂಬುದು ಕೆಲವು ಜನರ ಹೇಳಿಕೆ. ಈ ಹೇಮಗುಡ್ಡವು ಗಂಗಾವತಿ ಪ್ರದೇಶದ ಏಳುಗುಡ್ಡ ಪರಿಸರದಲ್ಲಿ ಬರುತ್ತದೆ. ಇದು ಗುಡ್ಡಗಳಿಂದ ಅವೃತವಾಗಿದೆ. ಕುಮ್ಮಟ ದುರ್ಗವು ಈ ಹೇಮಗುಡ್ಡಕ್ಕೆ ತೀರಾ ಸಮೀಪವಾಗಿದೆ. ವೈರಿಗಳಿಂದ ಯುದ್ಧದ ಸಮಯದಲ್ಲಿ ತಪ್ಪಿಸಿಕೊಂಡು, ಅವಿತುಕೊಂಡು, ಯುದ್ಧ ಮಾಡಲು ಇದು ಸೂಕ್ತ ಸ್ಥಳವಾಗಿತ್ತು. ಅಂದಿನ ಸೇನಾ ತಯಾರಿ, ತರಬೇತಿ, ಮದ್ದು ಗುಂಡುಗಳ ಸಂಗ್ರಹ ಮತ್ತು ತಯಾರಿಕೆಗಾಗಿ ನವಾಬ ಉಡಿಚನಾಯಕನು ಹಂಪಸದುರ್ಗದ ಗುಡ್ಡದ ಮೇಲೆ ಒಂದು ಕೋಟೆಯನ್ನು ಕಟ್ಟಿಸಿದನು. ಈ ಕೋಟೆಯು ಹೇಮಗುಡ್ಡ ಮತ್ತು ಕನಕಗಿರಿ ಪ್ರದೇಶಗಳ ಮಧ್ಯೆ ಬರುತ್ತದೆ.

ಕನಕಗಿರಿಯು ನವಾಬ ಉಡಿಚನಾಯಕನ ಕಾಲದಲ್ಲಿ ತುಂಬಾ ಪ್ರಸಿದ್ಧಿಗೆ ಬಂದಿತು. ಅನೇಕ ಕಸುಬುದಾರರು ನಾಯಕನ ಆಸರೆ ಬಯಸಿ ಕನಕಗಿರಿ ಕೋಟೆಯ ಹೊರಭಾಗದಲ್ಲಿ ನೆಲೆಸಿದರು. ಗೊಲ್ಲರವಾಡಿ, ಸುಣ್ಣಗಾರವಾಡಿ, ಹೂಗಾರವಾಡಿ, ಬೇಡರವಾಡಿ, ರಡ್ಡೇರವಾಡಿ ಮುಂತಾದ ಜನವಸತಿ ಕೇಂದ್ರಗಳು ಹುಟ್ಟಿಕೊಂಡವು.

ಕೆಲವಡಿ ಉಡಿಚನಾಯಕ (ಕ್ರಿ.ಶ ೧೫೩೩-೧೫೭೮)

ನವಾಬ ಉಡಿಚನಾಯಕನ ಮಗನಾದ ಇವನು ಕ್ರಿ.ಶ. ೧೫೩೩ರಿಂದ ೧೫೭೮ರವರೆಗೆ ಆಳ್ವಿಕೆ ಮಾಡಿದನು. ತನ್ನ ತಂದೆಯಷ್ಟೇ ಧರ್ಮನಿಷ್ಠನಾದ ಇವನು ಕನಕಗಿರಿಯಲ್ಲಿ ಅನೇಕ ಧರ್ಮೋದ್ಧಾರ ಕಾರ್ಯಗಳನ್ನು ಕೈಗೊಂಡನು. ಇವನ ಕಾಲಕ್ಕೆ ಸೇರಿದ ಕ್ರಿ.ಶ. ೧೫೪೨ ಶಿಲಾಶಾಸನವೊಂದು ಕನಕಗಿರಿಯ ನರಸಿಂಹತೀರ್ಥ ಬಳಿ ಇದೆ. ಅದು ಅಳಿಸಿಹೋಗಿದ್ದು, ಅರ್ಧಭಾಗ ಮಾತ್ರ ಇದೆ. ಈ ಶಾಸನದಲ್ಲಿ ನಾಯಕ ಮಹಾಚಾರ್ಯ ಎಂದು ಕಂಡುಬರುತ್ತದೆ. ಹಾಗೂ ದಾನ ನೀಡಿದ ಬಗ್ಗೆ ಮಾಹಿತಿ ನೀಡುತ್ತದೆ. ವಿಜಯನಗರದ ಅಚ್ಯುತದೇವರಾಯನು ಕ್ರಿ.ಶ. ೧೫೩೪ರಲ್ಲಿ ಕನಕಗಿರಿನಾಥಸ್ವಾಮಿಯ ಅಮೃತಪಡಿಗೆ

ನೈವೇದ್ಯ, ಪೂಜೆ ದೀಪಾರಾಧನೆ ಮುಂತಾದವುಗಳಿಗೆ ಕುಷ್ಟಿಗೆ ಸೀಮೆಯಲ್ಲಿನ ಇಂಗಳದಹಾಳ, ರಾಮಾಪುರ ಈ ನಾಲ್ಕು ಗ್ರಾಮಗಳನ್ನು ದಾನವಾಗಿ ನೀಡಿದನು. ಅಳಿಯ ರಾಮರಾಯ, ತಿರುಮಲರಾಜನು ಕ್ರಿ.ಶ. ೧೫೫೧ರಲ್ಲಿ ನಾವಿಂದರಾದ ತಿಂಬೋಜ, ಕೊಂಡೋಜರಿಗೆ ಕನಕಗಿರಿಯಲ್ಲಿ ಬಿಟ್ಟಿಬಿರಾಡ ಅನ್ನ-ಪನ್ನ ಮುಂತಾದ ತೆರಿಗೆಗಳನ್ನು ಬಿಟ್ಟಂತೆ ಮತ್ತು ಇವನ ದಳವಾಯಿ ಚಂಡತ್ರಯ್ಯ ಎಂಬುವನು ಕನಕಗಿರಿನಾಥದೇವರಿಗೆ ತನ್ನ ಒಂದು ಕೊಳಗದ ಭೂಮಿಯನ್ನು ಕ್ರಯವಾಗಿ ಕೊಂಡು ಭೂದಾನ ಮಾಡಿದನೆಂದು ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಇದರಿಂದಾಗಿ ವಿಜಯನಗರ ಅರಸರೊಂದಿಗೆ ಈ ನಾಯಕನು ಒಳ್ಳೆಯ ಸಂಬಂಧವನ್ನು ಹೊಂದಿದ್ದನೆಂದು ತಿಳಿದುಕೊಳ್ಳಬಹುದು. ಅಳಿಯರಾಮನು ತನ್ನ ರಾಜಕೀಯ ಅತಿಯಾದ ಮಹತ್ವಾಕಾಂಕ್ಷೆಯಿಂದ ಷಾಹಿಸುಲ್ತಾನರೊಡನೆ ನಡೆಸಿದ ಯುದ್ಧಗಳಲ್ಲಿ ಕೆಲವಡಿ ಉಡಿಚನಾಯಕನು ಭಾಗವಹಿಸಿದ್ದನೆಂದು ತಿಳಿಯುತ್ತದೆ.

ಈ ನಾಯಕನಿಗೆ ಕೆಲವಡಿ ಉಡಿಚನಾಯಕನೆಂದು ಏಕೆ ಕರೆಯುವರು ಎಂಬುದು ನನ್ನನ್ನು ಕಾಡಿತು. ಈ ನಾಯಕನು ಕೆಲವಡಿಯಿಂದ ಬಂದವನು ಎಂದು ಈ ಕನಕಗಿರಿ ಸಂಸ್ಥಾನ ಮನೆತನದ ವಂಶಸ್ಥರೊಬ್ಬರು ಹೇಳುತ್ತಾರೆ. ಈ ನಾಯಕನು ಕನಕಗಿರಿಯ ನಾಯಕರ ಕಾಲದಲ್ಲಿ ಕೆಲವಡಿಯ ಪ್ರಾಂತಾಧಿಕಾರಿಯಾಗಿದ್ದನೆಂದು ಸಹ ಹೇಳುವರು. ಈ ಬಗ್ಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕೆಲವಡಿಗೂ ಇವನಿಗೂ ಏನಾದರೂ ಸಂಬಂಧವಿದೆಯೇ ಎಂದು ತಿಳಿಯಲು ಪ್ರತ್ಯಕ್ಷವಾಗಿ ಆ ಊರಿಗೆ ಹೋದಾಗ ಅಲ್ಲಿನ ಲಕ್ಷ್ಮೀರಂಗನಾಥ ದೇವಾಲಯ ಮತ್ತು ಕನಕಗಿರಿ ಲಕ್ಷ್ಮೀನರಸಿಂಹ ದೇವಾಲಯಕ್ಕೂ ಸಂಬಂಧವಿರುವುದು ಕಂಡುಬಂದಿತು. ದೇವಾಲಯುಗಳ ವಾಸ್ತುದೃಷ್ಟಿಯಿಂದ ಭಿನ್ನವಾಗಿದ್ದರೂ ದೇವರ ಅರಾಧನೆ ದೃಷ್ಟಿಯಿಂದ ನೋಡಿದಾಗ ಕನಕಗಿರಿ ಲಕ್ಷ್ಮೀನರಸಿಂಹ ಕೆಲವಡಿ ರಂಗನಾಥನ ಅಣ್ಣ ಎಂದು ಆ ಭಾಗದ ಜನರ ನಂಬಿಕೆ. ಅಲ್ಲಿಯೂ ಕೆಲವಡಿಯ ಸಮೀಪದ ಊರಿನಲ್ಲಿ ಕನಕರಾಯನ ಪುಟ್ಟಗುಡಿಯೊಂದಿದೆ. ಈ ಊರಿನಲ್ಲಿ ಬೇಡರು ಅಧಿಕ ಸಂಖ್ಯೆಯಲ್ಲಿರುವುದು ವಿಶೇಷ. ಈ ದೇವಾಲಯದ ಗೋಡೆಯಲ್ಲಿ ಇತ್ತೀಚೆಗೆ ಸೇರಿಸಲ್ಪಟ್ಟ ಕ್ರಿ.ಶ. ೧೦೫೩ರಲ್ಲಿ ೧ನೇ ಸೋಮೇಶ್ವರನ ಕಾಲಕ್ಕೆ ಸೇರಿದ ಶಿಲಾಶಾಸನವೊಂದು ಇದೆ. ಕೆಲವಡಿ ಕೆರೆಗಾಗಿ ಸುರಪ್ಪರಸನಿಂದ ಭೂದಾನ ನೀಡಿದ ಬಗ್ಗೆ ಈ ಶಾಸನ ಮಾಹಿತಿಯನ್ನು ನೀಡುತ್ತದೆ. ಈ ನಾಯಕನು ಕೆಲವಡಿಯಿಂದ ಬಂದವನು ಎಂಬ ಸ್ಥಳೀಯ ಹೇಳಿಕೆಗೆ ಅಷ್ಟೊಂದು ಮಹತ್ವವಿಲ್ಲವೆಂದು ಕಾಣಿಸುತ್ತದೆ. ಈ ಬಗ್ಗೆ ಕನಕಗಿರಿ ನಾಯಕರಿಗೆ ಸಂಬಂಧಿಸಿದಂತೆ ಯಾವುದೇ ಆಧಾರಗಳು ಅಲ್ಲಿ ಇಲ್ಲ. ಈ ಕನಕಗಿರಿಯಲ್ಲೂ ಇಲ್ಲ. ಆದರೆ ಆ ಪ್ರದೇಶದ ಅನೇಕ ಜನರಿಗೆ ಕನಕಗಿರಿಯ ಕನಕರಾಯ ಮನೆದೇವರಾಗಿರುವುದು ಗಮನ ಸೆಳೆಯುವ ಅಂಶವಾಗಿದೆ.

ಕೆಲವಡಿ ಉಡಿಚನಾಯಕನು ಕನಕಾಚಲ ದೇವಾಲಯದ ಮೂರು ಮುಖ್ಯ ಗೋಪುರಗಳನ್ನು ಕಟ್ಟಿಸಿದನು. ಅನೇಕ ಗಾರೆಶಿಲ್ಪಗಳನ್ನು, ಮೂರ್ತಿಶಿಲ್ಪಗಳನ್ನು ನಿರ್ಮಿಸಿದ. ಇವನು ಈ ದೇವಾಲಯದ ರಂಗಮಂಟಪದ ಛತ್ತಿನ ಒಳಭಾಗದಲ್ಲಿ ಸುಂದರ ಚಿತ್ರಕಲೆಯನ್ನು ರೂಪಿಸಿದನು. ಆದರೆ ಇಂದು ಆ ಚಿತ್ರಕಲೆ ನಶಿಸಿ

ಹೋಗಿ ಸ್ವಲ್ಪವೇ ಭಾಗ ಉಳಿದಿದೆ. ರಥೋತ್ಸವಕ್ಕಾಗಿ ಎರಡು ಬೃಹತ್ ರಥಗಳನ್ನು ಕಟ್ಟಿಸಿದನು. ಆದರೆ ಇಂದು ಕೇವಲ ಒಂದೇ ಒಂದು ಬೃಹತ್ ರಥವನ್ನು ಬಳಸಲಾಗುತ್ತಿದೆ. ಇನ್ನೊಂದು ಇಲ್ಲ. ಪ್ರತಿ ವರ್ಷಕ್ಕೊಮ್ಮೆ ೧೪ ದಿವಸಗಳ ಉತ್ಸವಗಳನ್ನು ಆರಂಭಿಸಿದನು. ಅವುಗಳಲ್ಲಿನ ಗರಡೋತ್ಸವ ಮತ್ತು ರಥೋತ್ಸವಗಳಲ್ಲಿ ವಿವಿಧ ಭಾಗಗಳಿಂದ ಬಂದ ಸಾಕಷ್ಟು ಜನರು ಪಾಲ್ಗೊಳ್ಳುತ್ತಾರೆ.

ರಾಮರಾಯನು ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಷಾಹಿ ಸುಲ್ತಾನರಲ್ಲಿ ಉಂಟುಮಾಡಿದ ಒಳಜಗಳದ ನಾಟಕ ಬಹಳ ದಿನಗಳ ಕಾಲ ಮುಂದುವರೆಯಲಿಲ್ಲ. ರಾಮರಾಯನ ಕುತಂತ್ರವನ್ನು ಅರಿತ ಷಾಹಿ ಸುಲ್ತಾನರು ಪುನಃ ಒಂದುಗೂಡಿ ವಿಜಯನಗರದ ಮೇಲೆ ದಾಳಿ ಮಾಡಿದರು. ಈ ನಡುವೆ ಕನಕಗಿರಿಯ ನಾಯಕನು ರಾಮರಾಯನಿಗೆ ಆಗಾಗ ಸೈನ್ಯದ ನೆರವು ನೀಡುತ್ತಾ ತನ್ನ ಸ್ಥಳದಲ್ಲಿ ಅನೇಕ ಅಭಿವೃದ್ಧಿಕಾರ್ಯಗಳನ್ನು ಹಾಕಿಕೊಂಡು ಆರಾಮವಾಗಿದ್ದನು. ಆದರೆ ಕ್ರಿ.ಶ. ೧೫೬೫ರಲ್ಲಿ ನಡೆದ ತಾಳಿಕೋಟೆ (ರಕ್ಕಸಗಿ-ತಂಗಡಗಿ) ಕದನದಲ್ಲಿ ವಿಜಯನಗರದ ರಾಮರಾಯನು ಕೊಲ್ಲಲ್ಪಟ್ಟನು. ಗೆದ್ದ ಮುಸ್ಲಿಂ ಸೈನ್ಯವು ವಿಜಯನಗರದ ಮೇಲೆ ದಾಳಿ ಮಾಡಿತು. ಈ ಕಾಲದಲ್ಲಿ ಕನಕಗಿರಿಯ ನಾಯಕನೂ ಅನೇಕ ಕಷ್ಟ-ನಷ್ಟವನ್ನು ಅನುಭವಿಸಬೇಕಾಯಿತು. ಕೆಲವು ದೇವಾಲಯಗಳು ಮುಸ್ಲಿಂ ದಾಳಿಗೆ ತುತ್ತಾದವು. ನಂತರ ನಾಯಕನು ಆದಿಲ್ ಶಾಹಿಗಳ ಅಧೀನವನ್ನು ಸ್ವೀಕರಿಸುವ ಮೂಲಕ ಕನಕಗಿರಿಯ ಕೆಲವು ಸ್ಮಾರಕಗಳನ್ನು ರಕ್ಷಿಸಿದನು.

ಒಂದನೇ ಕನಕಪ್ಪ ಉಡಿಚನಾಯಕ (ಕ್ರಿ.ಶ. ೧೫೭೮-೧೬೧೮)

ಕೆಲವಡಿ ಉಡಿಚನಾಯಕನ ಮಗನಾದ ಇವನು ಕ್ರಿ.ಶ. ೧೫೭೮ರಿಂದ ೧೬೧೮ರವರೆಗೆ ಆಳಿದನು. ಮುಸ್ಲಿಂ ಷಾಹಿಸುಲ್ತಾನರ ದಾಳಿಗಳಿಂದ ತತ್ತರಿಸಿ ಹೋದ ಕನಕಗಿರಿಯಲ್ಲಿ ಅಧಿಕಾರಕ್ಕೆ ಬಂದ ಇವನು ಯಾವುದೇ ಯುದ್ಧಗಳನ್ನು ಮಾಡುವ ಸ್ಥಿತಿಯಲ್ಲಿರಲಿಲ್ಲ. ಹಾಳಾದ ದೇವಾಲಯಗಳನ್ನು ಮತ್ತು ಕೆಲವು ಧಾರ್ಮಿಕ ಕಾರ್ಯಗಳು ನಡೆಯುವುದಕ್ಕಾಗಿ ಕೆಲವು ಕಟ್ಟಡಗಳನ್ನು ಕಟ್ಟಿಸುವುದರ ಕಡೆ ಗಮನ ನೀಡಿದನು. ಚಿತ್ರದುರ್ಗದ ದೊರೆಗಳ ಜೊತೆಯಲ್ಲಿ ವೈವಾಹಿಕ ಸಂಬಂಧವನ್ನು ಮಾಡಿದನು. ಇವನ ಸಹೋದರ ರಂಗಪ್ಪನಾಯಕ (ಗಡ್ಡದ ಮದಕರಿ ನಾಯಕ)ನಿಗೆ ಕೊಟ್ಟು ಮದುವೆ ಮಾಡಿದನು. ವಿಜಯನಗರ ನಂತರದ ದಿನಗಳಲ್ಲುಂಟಾದ ರಾಜಕೀಯ ಸಂಬಂಧಗಳು ಆರಂಭವಾಗಿದ್ದುದು. ಇಂತಹ ರಕ್ತಸಂಬಂಧಗಳಿಂದ ಎಂದು ಹೇಳಿದರೂ, ಇಂತಹ ರಕ್ತ ಸಂಬಂಧ ಸಂಸ್ಥಾನಿಕರಲ್ಲಿ ಅಧಿಕಾರದ ದಾಹ, ಸ್ವತಂತ್ರಪ್ರವೃತ್ತಿ ಮುಂತಾದವುಗಳು ಕಂಡುಬಂದವು ಎಂಬುದನ್ನು ಇತಿಹಾಸದಲ್ಲಿ ನೋಡುತ್ತೇವೆ. ಚಿತ್ರದುರ್ಗದಂತಹ ಅರಸರ ಸಂಬಂಧವು ಈ ಸಂದರ್ಭದಲ್ಲಿ ಕನಕಗಿರಿನಾಯಕನಲ್ಲಿ ಸ್ವಲ್ಪ ಮಾನಸಿಕ ನೆಮ್ಮದಿಯನ್ನು ತಂದಿರಬೇಕು. ಏಕೆಂದರೆ, ಷಾಹಿ ಸುಲ್ತಾನರ ದಾಳಿಗಳಿಂದ ತತ್ತರಿಸಿ ಹೋಗಿದ್ದ ಈ ಪ್ರದೇಶದಲ್ಲಿ ರಕ್ತಸಂಬಂಧಿಕರೇ ಆಸರೆಯಾಗಿದ್ದರೆನ್ನುವುದು ಕಾಣುತ್ತದೆ.

ಧಾರ್ಮಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿದ್ದ ೧ನೇ ಕನಕಪ್ಪ ಉಡಿಚನಾಯಕನು ಕನಕಗಿರಿಯ ರಾಜಬೀದಿಯಲ್ಲಿರುವ ತೇರು ಹನುಮಪ್ಪ, ಸಂಜೀವರಾಯ ದೇವಾಲಯಗಳನ್ನು ಮತ್ತು ಈ

ದೇವಾಲಯಗಳ ಮುಂದೆ ಚಿಕ್ಕದಾದ ಬಣ್ಣದ (ಹೋಳಿ) ಹೊಂಡಗಳನ್ನು ಕಟ್ಟಿಸಿದನು. ಇವುಗಳು ಇಂದು ಮುಚ್ಚಲ್ಪಟ್ಟಿವೆ. ಕನಕಗಿರಿಯ ಉತ್ತರ ಭಾಗದ ಮಣ್ಣಿನ ದಿನ್ನೆಯ ಮೇಲೆ ತೊಂಡೆತೇವರ ಪ್ರಾಣದೇವರ ದೇವಾಲಯವನ್ನೂ ಕಟ್ಟಿಸಿದನು. ಈ ಪ್ರಾಣದೇವರನ್ನು ಕಂಠಿರಂಗ ಎಂದು ಕರೆಯಲಾಗುತ್ತಿದೆ. ತಿರುಪತಿಯಲ್ಲಿರುವ ಪುಷ್ಕರಣಿಯಂತೆ ಕನಕಗಿರಿಯ ತ್ರಿವೇಣಿ ಸಂಗಮದ ಉತ್ತರಕ್ಕೆ ನರಸಿಂಹ ತೀರ್ಥವೆಂದು ಕರೆಯುವ ಪುಷ್ಕರಿಣಿಯನ್ನು ಕಟ್ಟಿಸಿದನು. ಈ ಪುಷ್ಕರಿಣಿಯಂತೆ ಚಿಕ್ಕದಾದ ಇನ್ನೊಂದು ಪುಷ್ಕರಿಣಿಯನ್ನು ಇದರ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ನಿರ್ಮಿಸಿದನು. ಈ ಪುಷ್ಕರಣಿಯು ವೆಂಕಟರಮಣ ದೇವಾಲಯ ಎಂದು ಕರೆಯುವ ದೇವಾಲಯದ ಮುಂದಿದೆ. ನರಸಿಂಹತೀರ್ಥ ಪುಷ್ಕರಿಣಿ ಸುತ್ತಮುತ್ತ ಅನೇಕ ದೇವಾಲಯಗಳನ್ನು ನಿರ್ಮಿಸಿದನು. ಈ ಪುಷ್ಕರಿಣಿಯು ಕಲಾತ್ಮಕವಾಗಿದ್ದು ಬೃಹತ್ತದ್ದಾಗಿದೆ. ಇಲ್ಲಿ ಭಕ್ತಾದಿಗಳು ತಮ್ಮ ತಲೆಮಂಡಿಯನ್ನು ಅರ್ಪಿಸಿ ಸ್ನಾನ ಮಾಡುವ ಸಂಪ್ರದಾಯವಿದೆ. ಇವನ ಸಹೋದರ ವೆಂಕಟಪತಿನಾಯಕನು ಕ್ರಿ.ಶ. ೧೫೮೬ರಲ್ಲಿ ಈ ಪುಷ್ಕರಿಣಿಯ ಈಶಾನ್ಯಕ್ಕೆ ಒಂದು ಸುಂದರ ಕಲಾತ್ಮಕ ಬಾವಿಯನ್ನು ೧ ಲಕ್ಷ ವರಹ ವೆಚ್ಚಮಾಡಿ ಕಟ್ಟಿಸಿದನು. ಈಗಲೂ ಈ ಬಾವಿಯನ್ನು 'ವೆಂಕಟಪತಿಬಾವಿ' ಎಂದು ಕರೆಯಲಾಗುತ್ತಿದೆ. ಕರ್ನಾಟಕದ ಕೆಲವೇ ಕಲಾತ್ಮಕ ವಿಶೇಷ ಬಾವಿಗಳಲ್ಲಿ ಇದೂ ಒಂದು. ವೆಂಕಟಪ್ಪನಾಯಕನು ಕೆಲವು ದಿನಗಳ ಕಾಲ ಆಳಿರಬೇಕೆಂದು ಕೆಲವರ ಅಭಿಮತ. ಆದರೆ ಈ ಬಗ್ಗೆ ದಾಖಲೆಗಳು ದೊರೆಯುವುದಿಲ್ಲ. ಒಂದನೇ ಕನಕಪ್ಪ ಉಡಿಚನಾಯಕನ ರಾಣಿ ಲಕ್ಷ್ಮೀದೇವಿ ಮಹಾ ದೈವಭಕ್ತೆಯಾಗಿದ್ದಳು. ಶ್ರೀಮನ್ ಲಕ್ಷ್ಮೀನರಸಿಂಹನು ಇವಳ ಭಕ್ತಿಯನ್ನು ಮೆಚ್ಚಿ ಮಾನವ ರೂಪಿಯಾಗಿ ದರ್ಶನ ನೀಡುತ್ತಿದ್ದನು ಮತ್ತು ರಾಣಿ ಲಕ್ಷ್ಮೀದೇವಿಯೊಡನೆ ಪಗಡೆಯಾಟವನ್ನು ಆಡುತ್ತಿದ್ದನೆಂದು ಹೇಳಲಾಗುತ್ತಿದೆ. ಒಮ್ಮೆ ತನ್ನ ರಾಣಿ ಲಕ್ಷ್ಮೀದೇವಿಯು ಮಾನವ ರೂಪದಲ್ಲಿದ್ದ ಶ್ರೀಮನ್ ವೆಂಕಟರಮಣನೊ (ಕನಕರಾಯ)ಡನೆ ಪಗಡೆಯಾಟ ಆಡುವುದನ್ನು ನೋಡಿದ ನಾಯಕನು ತನ್ನ ಖಡ್ಗವನ್ನು ಎತ್ತಿ ಆತನನ್ನು ಕತ್ತರಿಸಲು ಮುಂದಾದನು. ಆಗ, ತನ್ನ ನಿಜ ಸ್ವರೂಪವನ್ನು ತೋರಿದ ಕನಕರಾಯನು "ನಿನ್ನ ರಾಣಿ ಮಹಾಸಾಧ್ವಿ, ಮಹಾದೈವಭಕ್ತೆ, ಇವಳ ಭಕ್ತಿಯನ್ನು ಮೆಚ್ಚಿ ಅವಳ ಕುಶಲೋಪರಿ ವಿಚಾರಿಸಲು ಬಂದಿರುವೆ" ಎಂದು ಹೇಳಿದನು. ಇದರಿಂದ ತನ್ನ ತಪ್ಪನ್ನು ಮನ್ನಿಸುವಂತೆ ನಾಯಕನು ಬೇಡಿಕೊಂಡನು ಮತ್ತು ಅಂದಿನಿಂದ ರಾಣಿ ಲಕ್ಷ್ಮೀದೇವಿಯನ್ನು ತಾಯಿಯ ಸ್ಥಾನಮಾನದಲ್ಲಿಟ್ಟು ಆರಾಧಿಸಿದನು. ಅವಳ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಿದನು. ಈಗಲೂ ಆ ಕೆರೆಯು ಕನಕಗಿರಿಯ ಪಶ್ಚಿಮಕ್ಕೆ ಇದ್ದು, ಲಕ್ಷ್ಮೀದೇವಿ ಕರೆಯೆಂದು ಕರೆಯಲಾಗುತ್ತಿದೆ. ಇದರ ಹತ್ತಿರದಲ್ಲಿ ಕಾಣಿಸುವ ಗುಡ್ಡದ ಇಳಿಜಾರಿನಲ್ಲಿ ಲಕ್ಷ್ಮೀದೇವಿ ಗುಡಿಯನ್ನು ಕಟ್ಟಿಸಿದನು ಹಾಗೂ ಗುಡ್ಡದ ಮೇಲೆ ಗಾಳಿಮಂಟಪವನ್ನು ನಿರ್ಮಿಸಿದನು. ಅಂದಿನಿಂದ ಈ ಗುಡ್ಡವು ಲಕ್ಷ್ಮೀದೇವಿ ಗುಡ್ಡವೆಂದೇ ಹೆಸರಾಗಿದೆ. ಈ ಲಕ್ಷ್ಮೀದೇವಿಯ ಕಥೆಯನ್ನು ಹೋಲುವಂತಹ ಕಥೆಯು ಈ ಕನಕರಾಯನ (ಲಕ್ಷ್ಮೀನರಸಿಂಹ) ತಮ್ಮನೆಂದು ಕರೆಯುತ್ತಿರುವ ಕೆಲವಡಿ ರಂಗನಾಥಸ್ವಾಮಿ ಬಗ್ಗೆಯೂ ಇರುವುದು ತಿಳಿದುಬರುತ್ತದೆ.

ಇಮ್ಮಡಿ ಉಡಿಚನಾಯಕ (ಕ್ರಿ.ಶ. ೧೬೧೮-೧೬೮೯)

ಈ ನಾಯಕನನ್ನು ಮುಮ್ಮಡಿ ಉಡಿಚನಾಯಕನೆಂದು ಕೆಲವು ಶಾಸನಗಳಲ್ಲಿ ಕರೆಯಲಾಗಿದೆ. ನವಾಬ ಉಡಿಚನಾಯಕನ, ಕೆಲವಡಿ ಉಡಿಚನಾಯಕ, ಒಂದನೇ ಕನಕಪ್ಪ ಉಡಿಚನಾಯಕ ನಂತರ ಮುಮ್ಮಡಿ ಉಡಿಚನಾಯಕ ಅಧಿಕಾರಕ್ಕೆ ಬಂದನು ಎಂಬುದು ಸೂಕ್ತ ಎನಿಸಿದರೂ 'ಮುಮ್ಮಡಿ' 'ಇಮ್ಮಡಿ' ಎನ್ನುವ ಪದಗಳು ಸಂಖ್ಯಾವಾಚಕಗಳಾಗಿದೇ ಅವು ಬಿರುದು ಸಂಕೇತವಾಗಿವೆ ಎಂಬುದು ವಿದ್ವಾಂಸರ ಅಭಿಮತವಾಗಿದೆ. ಈ ಬಗ್ಗೆ ಕನಕರಾಯನ ಬಾವಿಯಲ್ಲಿರುವ ಕ್ರಿ.ಶ. ೧೬೬೮ರ ಶಿಲಾಶಾಸನದಲ್ಲಿ ಮುಮ್ಮಡಿ ಉಡಿಚನಾಯಕ ಎಂದು ಕಂಡುಬರುತ್ತದೆ. ಒಂದನೇ ಕನಕಪ್ಪ ಉಡಿಚನಾಯಕನ ಮಗನಾದ ಇವನು ಕ್ರಿ.ಶ. ೧೬೧೮ರಿಂದ ೧೬೮೯ರವರೆಗೆ ಆಳಿದನು. ಈತನನ್ನು ಕನಕಗಿರಿಯ ನಾಯಕರಲ್ಲಿ ಶ್ರೇಷ್ಠ ನಾಯಕನೆಂದು ಕರೆಯಲಾಗಿದೆ. ಸ್ವತಂತ್ರವಾಗಿ ಆಳ್ವಿಕೆಯನ್ನು ನಡೆಸಿದ ಇವನನ್ನು "ಗುಜ್ಜಲವಂಶೋದ್ಭವ" "ಶ್ರೀಮನ್ ಮಹಾನಾಯಕಾಚಾರ್ಯ", "ನಾಯಕ ಶಿರೋಮಣಿ" "ಕನಕಗಿರಿ ಲಕ್ಷ್ಮೀನಾಗತಿ ಮುಮ್ಮಡಿ ಉಡಿಚನಾಯಕ" ಎಂದು ಕರೆಯಲಾಗಿದೆ. ಬಿಜಾಪುರದ ಸುಲ್ತಾನರೊಡನೆ ಹೋರಾಡಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಎರಡನೇ ಇಬ್ರಾಹಿಂ ಅದಿಲ್‌ಷಾಹನ ದಂಡನಾಯಕ ಅಫಜಲ್‌ಖಾನ್‌ನು ಕನಕಗಿರಿಯ ಮೇಲೆ ದಾಳಿ ಮಾಡಿದನು. ಆರಂಭದಲ್ಲಿ ಇಮ್ಮಡಿ ಉಡಿಚನಾಯಕನು ಅಫಜಲ್‌ಖಾನನ ವಿರುದ್ಧ ಗೆಲವು ಸಾಧಿಸಿದನಾದರೂ ನಂತರ ಸೋಲು ಅನುಭವಿಸಿ, ಆದಿಲ್‌ಷಾಹನ ಅಧೀನನಾದನು. ಎರಡನೇ ಇಬ್ರಾಹಿಂನ ನಂತರ ಅಧಿಕಾರಕ್ಕೆ ಬಂದ ಮಹಮ್ಮದ್ ಆದಿಲ್‌ಷಾಹನು ದಕ್ಷಿಣ ಪ್ರದೇಶಗಳ ಮೇಲೆ ದಾಳಿ ಮಾಡಲು ರಣದುಲ್ಲಾಖಾನ್ ಮತ್ತು ಷಹಜಿಯನ್ನು ಕಳುಹಿಸಿದನು. ಈ ಸಂದರ್ಭದಲ್ಲಿ ಇಮ್ಮಡಿ ಉಡಿಚನಾಯಕನು ಬಿಜಾಪುರ ಸುಲ್ತಾನನನ್ನು ಕಡೆಗಾಣಿಸಿ ಸ್ವತಂತ್ರವಾಗಿರಬೇಕು. ಕ್ರಿ.ಶ. ೧೬೩೫ರಲ್ಲಿ ರಣದುಲ್ಲಾಖಾನನು ಕನಕಗಿರಿಯ ಮೇಲೆ ದಾಳಿ ಮಾಡಿ ಇಮ್ಮಡಿ ಉಡಿಚನಾಯಕನನ್ನು ಸೋಲಿಸಿದನು. ಕ್ರಿ.ಶ. ೧೬೩೪ರಲ್ಲಿ ಪುನಃ ಕನಕಗಿರಿಯ ಮೇಲೆ ದಾಳಿ ಮಾಡಿ ನಾಯಕನನ್ನು ಸೋಲಿಸಿ ಸಾಕಷ್ಟು ಹಣವನ್ನು ಪಡೆದುಕೊಂಡು ಹೋದನು. ಶತ್ರುಗಳಿಗೆ ಹಣವನ್ನು ಕೊಟ್ಟು ಕಳುಹಿಸಿ ದಾಳಿಗಳಿಂದ ತಾತ್ಕಾಲಿಕ ಪರಿಹಾರ ಕಂಡುಕೊಂಡು ಮತ್ತೆ ಸ್ವತಂತ್ರವಾಗಿ ಆಡಳಿತವನ್ನು ನಡೆಸುತ್ತಾ ಸುಲ್ತಾನನ್ನೂ ಧಿಕ್ಕರಿಸುತ್ತಿದ್ದ ಇಮ್ಮಡಿ ಉಡಿಚನಾಯಕನನ್ನು ಸಂಪೂರ್ಣವಾಗಿ ಸೋಲಿಸಿ ಅತನ ಸೊಕ್ಕನ್ನು ಮುರಿಯಲು ಷಹಜಿಯ ನೇತೃತ್ವದ ಸೈನ್ಯವು ಕ್ರಿ.ಶ. ೧೬೩೭ರಲ್ಲಿ ಕನಕಗಿರಿಯ ಮೇಲೆ ದಾಳಿ ಮಾಡಿತು. ಈ ದಾಳಿಯಿಂದ ತಪ್ಪಿಸಿಕೊಳ್ಳದೆ ಸೋತು ತತ್ತರಿಸಿ ಹೋದ ಇಮ್ಮಡಿ ಉಡಿಚನಾಯಕನು ಆದಿಲ್ ಷಾಹನೊಂದಿಗೆ ಒಪ್ಪಂದ ಮಾಡಿಕೊಂಡು ಸಾಕಷ್ಟು ಕಪ್ಪಕಾಣಿಕೆಯನ್ನು ನೀಡಿದನು. ನಂತರದ ದಾಳಿಯ ಸಂದರ್ಭದಲ್ಲಿ ಸಾಂಬಾಜಿ ೧೬೫೯ರಲ್ಲಿ ಕನಕಗಿರಿಯಲ್ಲಿ ಜೀವ ಕಳೆದುಕೊಂಡನೆಂದು ಹೇಳಲಾಗಿದೆ. ಆದರೆ ಇಮ್ಮಡಿ ಉಡಿಚನಾಯಕನ ಸ್ವತಂತ್ರ ಪ್ರವೃತ್ತಿ ಸುಮ್ಮನೆ ಕೂಡಿಸಲಿಲ್ಲ. ಕೆಲವು ದಿನಗಳ ನಂತರ ಇಮ್ಮಡಿ ಉಡಿಚನಾಯಕನು ದೇವದುರ್ಗ ಸಮೀಪದಲ್ಲಿರುವ ಕೆಲವು ಹಳ್ಳಿಗಳನ್ನು ಗೆದ್ದುಕೊಂಡನು. ಈ ಹಳ್ಳಿಗಳು ಸುರಪುರದ ದೊರೆಗಳಿಗೆ ಸೇರಿದ್ದವು. ದೇವದುರ್ಗದ ದೊರೆಗಳ ಸಂಬಂಧಿಗಳಾದ ಸುರಪುರ

ದೊರೆಗಳಿಗೆ ಇದು ಸರಿಕಾಣಲಿಲ್ಲ. ಇಮ್ಮಡಿ ಉಡಿಚನಾಯಕನು ವಶಪಡಿಸಿಕೊಂಡ ಈ ಹಳ್ಳಿಗಳನ್ನು ಬಿಡಿಸಿಕೊಡಬೇಕೆಂದು ಸುರಪುರದ ದೊರೆ ಬಿಜಾಪುರ ಸುಲ್ತಾನನಿಗೆ ಪತ್ರ ಬರೆದನು. ಬಲಿಷ್ಠ ಸಂಸ್ಥಾನವಾಗಿದ್ದ ಸುರಪುರದ ದೊರೆಗಳ ಮನವಿಯನ್ನು ಮನ್ನಿಸಿದ ಸುಲ್ತಾನ ಈ ಹಳ್ಳಿಗಳನ್ನು ಗೆದ್ದು ಸುರಪುರದ ದೊರೆಗೆ ಕೊಡುವ ಮೂಲಕ ವಿಶ್ವಾಸಗಳಿಸಿದನು. ಇದರಿಂದಾಗಿ ಕನಕಗಿರಿಯ ನಾಯಕನು ಬಿಜಾಪುರ ಸುಲ್ತಾನ ಮತ್ತು ಸುರಪುರ ನಾಯಕರೊಡನೆ ಒಳ್ಳೆಯ ಸಂಬಂಧವನ್ನು ಮುಂದುವರಿಸಲೇಬೇಕಾಯಿತು. ಈ ಸಂದರ್ಭದಲ್ಲಿ ಔರಂಗಜೇಬನು ದಕ್ಷಿಣದ ದಂಡಯಾತ್ರೆಯಲ್ಲಿದ್ದಾಗ ಸುರಪುರದ ದೊರೆಗಳಿಗೆ ಸೇರಿದ ವಾಗನಗೇರಿಯನ್ನು ಗೆದ್ದುಕೊಂಡನು. ಇದರಿಂದ ಹೆದರಿದ ಸುರಪುರದ ದೊರೆ ಬಹರಿಪಿಡ್ಡನಾಯಕನು ತನ್ನ ಸಂಬಂಧಿ ಗುಡಗುಂಟಿ ದೊರೆ ಹಟ್ಟಿ ಸೋಮನಾಯಕನ ಜೊತೆ ಕನಕಗಿರಿಗೆ ಓಡಿಬಂದನು. ಕನಕಗಿರಿನಾಯಕನು ಮೊಗಲ್ ಸಾಮ್ರಾಟ ಔರಂಗಜೇಬನ ದಾಳಿಯ ಭಯವನ್ನು ಲೆಕ್ಕಿಸದೇ ಬಹರಿಪಿಡ್ಡನಾಯಕನಿಗೆ ಹೇಮಗುಡ್ಡದಲ್ಲಿ ರಕ್ಷಣೆ ನೀಡಿದನು. ಇದರಿಂದ ಸುರಪುರದ ದೊರೆಗಳು ಮತ್ತು ಆದಿಲ್ ಷಾಹಿಗಳೊಡನೆ ಕನಕಗಿರಿನಾಯಕರ ಸಂಬಂಧವು ಮತ್ತಷ್ಟು ಗಟ್ಟಿಯಾಯಿತು.

ಚಿತ್ರದುರ್ಗದ ದೊರೆಗಳೊಡನೆ ಇವನು ವೈವಾಹಿಕ ಸಂಬಂಧವನ್ನು ಮುಂದುವರೆಸಿದನು. ತನ್ನ ಮಗಳು ಕನಕವ್ವನಾಗತಿಯನ್ನು ಚಿತ್ರದುರ್ಗದ ಬಿಚ್ಚುಗತ್ತಿ ಭರಮಪ್ಪ ನಾಯಕನಿಗೆ ಕೊಟ್ಟು ಮದುವೆ ಮಾಡಿದನು. ಈ ಕನಕನಾಗತಿಯ ಗರ್ಭದಲ್ಲಿ ಹುಟ್ಟಿದವನೇ ಹಿರೇಮದಕರಿನಾಯಕ. ಬಿಚ್ಚುಗತ್ತಿ ಭರಮಪ್ಪನಾಯಕನು ತನ್ನ ಮಗಳನ್ನು ಇಮ್ಮಡಿ ಉಡಿಚನಾಕನ ಮಗ ಇಮ್ಮಡಿ ಕನಕಪ್ಪನಿಗೆ ಕೊಟ್ಟು ಮದುವೆ ಮಾಡಿದನು. ಈ ನಾಯಕ ಮನೆತನಗಳ ನಡುವಿನ ಪರಸ್ಪರ ವೈವಾಹಿಕ ಸಂಬಂಧ ಈ ಇಬ್ಬರು ನಾಯಕರಲ್ಲಿ ಉತ್ಸಾಹವನ್ನು ಇಮ್ಮಡಿಗೊಳಿಸಿತು. ತಮ್ಮ ತಮ್ಮ ಪ್ರದೇಶದಲ್ಲಿ ಅನೇಕ ಜನಪರ ಕೆಲಸಗಳನ್ನು ಕೈಗೊಂಡರು. ಈ ನಾಯಕನ ಕಾಲದಲ್ಲಿ ಕನಕಗಿರಿಯು ಆರ್ಥಿಕವಾಗಿ ಶ್ರೀಮಂತವಾಗಿತ್ತು. ರಾಜ್ಯದ ವಾರ್ಷಿಕ ಆದಾಯವು ೩೨ ಲಕ್ಷ ವರಹಕ್ಕೂ ಹೆಚ್ಚು ಇತ್ತು. ಮಹಾವಿಷ್ಣು ಭಕ್ತನಾದ ಇಮ್ಮಡಿ ಉಡಿಚನಾಯಕನು ತ್ರಿಮೂರ್ತಿಗಳಲ್ಲಿ ವಿಷ್ಣುವೇ ಶ್ರೇಷ್ಠವೆಂದು, ಜಗತ್ತಿನ ತಂದೆಯೆಂದು ಸಾರಿ ಶಿಲಾಶಾಸನವನ್ನು ಕ್ರಿ.ಶ. ೧೬೭೪ರಲ್ಲಿ ಬರೆಸಿದನು. ವೈಷ್ಣವ ಧರ್ಮದ ಮಹಾನ್ ವ್ಯಕ್ತಿಗಳೆನಿಸಿದ ಶ್ರೀಮದ್ ಆಳ್ವರ್‌ರ ಹನ್ನೆರಡು ಮೂರ್ತಿಗಳನ್ನು ಕನಕಾಚಲ ದೇವಾಲಯದ ಪ್ರಾಕಾರದ ಒಳಭಾಗದಲ್ಲಿ ಪ್ರತಿಷ್ಠಾಪಿಸಿದನು. ಈತನು ದಾನಧರ್ಮದಲ್ಲಿ ಹಿಂದೆ-ಮುಂದೆ ನೋಡುತ್ತಿರಲಿಲ್ಲ. ಕ್ರಿ.ಶ. ೧೬೭೨ರಲ್ಲಿ ನರಭಕ್ಷಕ ಪ್ರಾಣಿಯನ್ನು ಕೊಂದ ವಿಠಲಾಪುರದ ವೆಂಕಪ್ಪನ ಮಗ ಸೊಲಬಾಯನಿಗೆ ೧೨ ಎಕರೆ ಗದ್ದೆಯನ್ನು ನೀಡಿ ಸನ್ಮಾನಿಸಿದನು. ಮತ್ತು ಕ್ರಿ.ಶ. ೧೬೭೩ರಲ್ಲಿ ಕೂಕನಕೆ ನಿಜಗುಣಪಂಡಿತರಿಗೆ ದಾನನೀಡಿದನು. ಇಮ್ಮಡಿ ಉಡಿಚನಾಯಕನಿಗೆ ಕನಕಮ್ಮ, ಚಿನ್ನಮ್ಮ ಮತ್ತು ಅಚ್ಚಮ್ಮ ಎಂಬ ರಾಣಿಯರಿದ್ದರು. ಇವರು ಮಹಾದೈವಭಕ್ತರು, ಪ್ರಜಾಪರರೂ, ಸುಧಾರಕರೂ ಆಗಿದ್ದರು. ನಾಯಕನು ಈ ರಾಣಿಯರ ಸ್ವಾತಂತ್ರ್ಯಕ್ಕೆ ಅಡ್ಡ ಬರಲಿಲ್ಲ. ಅವರ ಪ್ರಜಾಪರ ಕಾರ್ಯಗಳಿಗೆ ಬೆಂಬಲ ನೀಡಿದನು. ರಾಣಿ ಕನಕಮ್ಮಳು ಕ್ರಿ.ಶ. ೧೬೭೮ರಲ್ಲಿ ಲಕ್ಷ್ಮಿಗುಡ್ಡ ಉತ್ತರಭಾಗದ ಇಳಿಜಾರಿನಲ್ಲಿ ಕನಕರಾಯನ ಹೆಸರಿನಲ್ಲಿ ಬಾವಿಯೊಂದನ್ನು

ನಿರ್ಮಿಸಿದಳು. ಈ ಬಾವಿಯಲ್ಲಿರುವ ಶಿಲಾಶಾಸನವು ಈ ಬಗ್ಗೆ ಬೆಳಕು ಚೆಲ್ಲುತ್ತದೆ. ರಾಣಿ ಚಿನ್ನಮ್ಮಳು ಕ್ರಿ.ಶ. ೧೬೭೫ರಲ್ಲಿ ಕನಕಾಚಲ ದೇವಾಲಯದ ಪ್ರಾಕಾರದಲ್ಲಿ ನೆಲಕ್ಕೆ ಕಲ್ಲುಹಾಸಿಗೆಗಳನ್ನು ಹಾಕಿಸಿದಳು. ಗರುಡ ಗುಡಿಯ ಪಕ್ಕದಲ್ಲಿರುವ ಶಿಲಾಶಾಸನವು ಈ ವಿಷಯವನ್ನು ತಿಳಿಸುತ್ತದೆ. ಇನ್ನೊಂದು ಶಿಲಾ ಶಾಸನದ ಪ್ರಕಾರ ಕ್ರಿ.ಶ. ೧೬೭೯ರಲ್ಲಿ ರಾಣಿ ಚಿನ್ನಮ್ಮಳು ಪೇಟೆ ಬಸವೇಶ್ವರ ದೇವಾಲಯವನ್ನು ನಿರ್ಮಿಸಿದಳು. ಉಡಿಚನಾಯಕನ ಇನ್ನೊಬ್ಬ ರಾಣಿ ಅಚ್ಚಮ್ಮಳು ಸೋಮಸಾಗರದ ಸಮೀಪ ಬಾವಿಯೊಂದನ್ನು ಕಟ್ಟಿಸಿದಳು. ಈ ಬಾವಿಯನ್ನು ಅಚ್ಚಮ್ಮ ಬಾವಿಯೆಂದು ಕರೆಯಲಾಗುತ್ತದೆ. ಈ ಬಾವಿಯ ಪ್ರವೇಶದ ಗೋಡೆಯೊಳಗಿನ ಪುಟ್ಟ ಗುಡಿಯಲ್ಲಿರುವ ಆದಿಶೇಷರಂಗನಾಥದೇವರ ವಿಗ್ರಹವು ನೋಡುಗರ ಗಮನ ಸೆಳೆಯುತ್ತದೆ. ಒಟ್ಟಿನಲ್ಲಿ ಇಮ್ಮಡಿ ಉಡಿಚನಾಯಕನ ಕಾಲದಲ್ಲಿ ಅನೇಕ ದೇವಾಲಯಗಳು, ಕೆರೆಗಳು, ಬಾವಿಗಳು, ನಿರ್ಮಾಣಗೊಂಡು ಸಮಾಜೋ ಧರ್ಮೋದ್ಧಾರ ಕಾರ್ಯಗಳು ವಿಪುಲವಾಗಿ ನಡೆದುವು.

ಇಮ್ಮಡಿ ಕನಕಪ್ಪ ಉಡಿಚನಾಯಕ (ಕ್ರಿ.ಶ. ೧೬೮೯-೧೭೪೫)

ಇಮ್ಮಡಿ ಉಡಿಚನಾಯಕನ ಮಗನಾದ ಇವನು ಕ್ರಿ.ಶ. ೧೬೮೦ರಿಂದ ೧೭೪೫ರವರೆಗೆ ಆಳಿರಬೇಕು. ಇವನನ್ನು ಚಿಕ್ಕಕನಕಪ್ಪ ನಾಯಕ ಎಂದು ಕರೆಯಲಾಗಿದೆ. ಇವನು ಕೂಡಾ ದಾನ ಧರ್ಮಗಳಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿದ್ದನು. ಚಿತ್ರದುರ್ಗದ ಅರಸರೊಡನೆ ಇವನ ಕಾಲದಲ್ಲೂ ವೈವಾಹಿಕ ಸಂಬಂಧ ಏರ್ಪಟ್ಟಿತ್ತು. ಹಿರೇಮದಕರಿನಾಯಕನಿಗೆ ತನ್ನ ಮಗಳು ವೆಂಕಟಾಚಲಮ್ಮಳನ್ನು ಕೊಟ್ಟು ಮದುವೆ ಮಾಡಿದನು. ಚಿದಾನಂದ ಅವಧೂತರು ಕನಕಗಿರಿಗೆ ಆಗಮಿಸಿದಾಗ ಅದ್ದೂರಿಯಿಂದ ಸ್ವಾಗತಿಸಿದ್ದನು. ಅವಧೂತರು ನಾಯಕನ ಸ್ವಭಾವಕ್ಕೆ ಮಾರು ಹೋದರು. ಹಿಂದಿನ ನಾಯಕರೆಲ್ಲ ಮಾಡಿದ ಧರ್ಮಕಾರ್ಯಗಳನ್ನು ಕೇಳಿ ತಿಳಿದುಕೊಂಡ ಅವಧೂತರು ಕನಕಗಿರಿಯಲ್ಲಿಯೇ ಉಳಿದುಕೊಳ್ಳುವ ಇಚ್ಛೆ ವ್ಯಕ್ತಪಡಿಸಿದರು. ಈ ಸುದ್ದಿಯನ್ನು ಕೇಳಿದ ನಾಯಕನು ಖುಷಿಗೊಂಡನು ಮತ್ತು ಅವಧೂತರಿಗಾಗಿ ಒಂದು ಮಠವನ್ನು ಕಟ್ಟಿಸಿದನು. ಈ ಮಠವನ್ನು ಚಿದಾನಂದ ಮಠವೆಂದು ಕರೆಯಲಾಗುತ್ತದೆ. ಬಂಕಾಪುರಕ್ಕೆ ಹೋಗುವ ಹಾದಿಯ ಬಳಿ ಒಂದು ಬಾವಿಯನ್ನು, ಕಟ್ಟಿಸಿದನು. ಈ ಬಾವಿಯು ಚಿಕ್ಕಕನಕಪ್ಪ ಬಾವಿ ಎಂದು ಹೆಸರಾಗಿದೆ. ಈ ಬಾವಿಯ ಬಳಿ ಇರುವ ಒಂದು ದೇವಾಲಯದಲ್ಲಿ ತನ್ನೆರಡು ಕೈಮುಗಿದು ನಿಂತ ಕಪ್ಪು ಶಿಲೆ, ಕನಕಪ್ಪ ನಾಯಕನದೇ ಎಂದು ಹೇಳಲಾಗುತ್ತಿದೆ.

ಮುಮ್ಮಡಿ ಕನಕಪ್ಪ ಉಡಿಚನಾಯಕ (ಕ್ರಿ.ಶ. ೧೭೪೫-೧೭೫೨)

ಈ ನಾಯಕನು ಕ್ರಿ.ಶ. ೧೭೪೫ರಿಂದ ೧೭೫೨ರವರೆಗೆ ಆಳಿದ ಬಗ್ಗೆ ತಿಳಿದುಬರುತ್ತದೆ. ಈತನು ದೇವರ ಶಿಷ್ಯನು "ಶ್ರೀಮನ್ ನಾಯಕಾಚಾರ್ಯ", "ನಾಯಕಶಿರೋಮಣಿ", ಕನಕಗಿರಿ ಲಕ್ಷ್ಮೀನಾಗತಿ ರಾಜಾರಾಮ ಜಯಸಿಂಹ ಮುಮ್ಮಡಿ ಕನಕಪ್ಪ ಉಡಿಚನಾಯಕ ಎಂದು ಕರೆಯಲಾಗಿದೆ. ಇವನು ಮೂರನೇ ಕರ್ನಾಟಕ ಯುದ್ಧದಲ್ಲಿ ಬಿಜಾಪುರ ಸುಲ್ತಾನ (ಬಹುಶಃ ಹೈದ್ರಾಬಾದಿನ ನಿಜಾಮನ ಪರವಾಗಿ ಇರಬೇಕು)ನ

ಪರವಾಗಿ ೫ ಸಾವಿರ ಕುದುರೆ, ೩ ಸಾವಿರ ಆನೆ ಒಂದು ಲಕ್ಷ ಕಾಲ್ಬಲ ಸೈನ್ಯದೊಂದಿಗೆ ಭಾಗವಹಿಸಿದ್ದನೆಂದು ಹೇಳಲಾಗುತ್ತಿದೆ. ಆದರೆ ಇಷ್ಟೊಂದು ಸೈನ್ಯವನ್ನು ಈ ನಾಯಕನು ಹೊಂದಿದ್ದನೇ ಎಂಬುದು ಅನುಮಾನಕ್ಕೆ ಕಾರಣವಾಗಿದೆ. ಏಕೆಂದರೆ ಇಷ್ಟೊಂದು ಸೈನ್ಯವನ್ನು ಈ ಮೂರು ಕರ್ನಾಟಕ ಯುದ್ಧಗಳಲ್ಲಿ ಯಾವುದೇ ಒಬ್ಬ ನಾಯಕನು ಬಳಸಿರುವುದು ಕಂಡುಬರುವುದಿಲ್ಲ. ಇನ್ನೊಂದು ಅಂಶವೆಂದರೆ ಬಿಜಾಪುರ ಆದಿಲ್ ಷಾನ ಜೊತೆಯಲ್ಲಿ ಈ ನಾಯಕನು ಯುದ್ಧದಲ್ಲಿ ಭಾಗವಹಿಸಿದನು ಎಂದು ಹೇಳವುದು ಸಹ ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಏಕೆಂದರೆ ಅಷ್ಟೊತ್ತಿಗೆ ಅಧಿಕಾರದಲ್ಲಿದ್ದ ಬಿಜಾಪುರದ ದೊರೆ ಯಾರು ಎಂಬ ಸಮಸ್ಯೆ ಎದುರಾಗುತ್ತಿದೆ; ಅಷ್ಟೇ ಅಲ್ಲದೆ ಕ್ರಿ.ಶ. ೧೬೮೬ಕ್ಕೆ ಬಿಜಾಪುರ ಆದಿಲ್ ಷಾಹಿಗಳ ಆಳ್ವಿಕೆ ಕೊನೆಗೊಂಡಿರುವುದನ್ನು ಗಮನಿಸಿದಾಗ ಕೇವಲ ಈ ನಾಯಕನ ಶೌರ್ಯ, ಸಾಹಸವನ್ನು ಉತ್ಪ್ರೇಕ್ಷೆ ಮಾಡಲು ಈ ಯುದ್ಧದ ಕಥೆಯನ್ನು ಕಟ್ಟಿದಂತಿದೆ.

ಈ ಮುಮ್ಮಡಿ ಕನಕಪ್ಪ ಉಡಿಚನಾಯಕನು ಶೃಂಗೇರಿ ಶ್ರೀ ಶಂಕರ ಭಾರತಿಸ್ವಾಮಿಗಳಿಗೆ ಕನಕಗಿರಿ ಸೀಮೆಯ ತೊಂಡಿಹಾಳ ಗ್ರಾಮವನ್ನು ದಾನವಾಗಿ ನೀಡಿದನು. ಈತನ ಬಗ್ಗೆ ಒಂದು ಕಥೆಯು ತುಂಬಾ ಪ್ರಸಿದ್ಧವಾಗಿದೆ. ಅದು, ಶೂರನೂ, ಮಹಾದೈವಭಕ್ತನಾಗಿದ್ದ ಈ ನಾಯಕನು ಶ್ರೀಮನ್ ಲಕ್ಷ್ಮೀನರಸಿಂಹನ ಅನುಗ್ರಹದಿಂದ ಜನಿಸಿದವನು ಎಂದು ಹೇಳಲಾಗುತ್ತಿದೆ. ಎಲ್ಲಿಯವರೆಗೆ ಕನಕಾಚಲ ದೇವರ ಪೂಜೆಗೆ ಬಳಸುವ (ಈ ದೇವಾಲಯದ ಪ್ರಾಕಾರದೊಳಗಿರುವ ಸಿಹಿನೀರು ಬಾವಿಯಿಂದ) ನೀರನ್ನು ಕುಡಿಯುವನೋ ಅಲ್ಲಿಯವರೆಗೆ ಇವನಿಗೆ ಸಾವಿಲ್ಲ. ಒಂದು ವೇಳೆ ಬೇರೆ ನೀರನ್ನು ಕುಡಿದರೆ ಅಂದೇ ಮರಣ ಬರುವುದು ಎಂದು ಮೊದಲೇ ಗುರುಗಳೊಬ್ಬರು ಹೇಳಿದ್ದರಂತೆ. ಆ ಪ್ರಕಾರ ಈ ನಾಯಕನು ಎಲ್ಲಿಗೆ ಹೋಗಲಿ ಕನಕಗಿರಿಯಿಂದಲೇ ಆತನಿಗೆ ನೀರು ಸರಬರಾಜು ಆಗುತ್ತಿತ್ತು. ಒಮ್ಮೊಮ್ಮೆ ಯುದ್ಧಗಳಲ್ಲಿ ಸ್ವತಃ ಕನಕರಾಯನೇ ಈ ನಾಯಕನ ಸಹಾಯಕ್ಕೆ ನಿಂತು ಗೆಲ್ಲುವಂತೆ ಮಾಡುತ್ತಿದ್ದನು ಎಂದೂ ಹೇಳಲಾಗುತ್ತಿದೆ. ಒಮ್ಮೆ ವೈರಿಗಳು ನಾಯಕನ ಈ ಜನ್ಮ ರಹಸ್ಯ ಅರಿತು ಯುದ್ಧಭೂಮಿಗೆ ಕನಕಗಿರಿಯಿಂದ ಬರುತ್ತಿದ್ದ ನೀರಿನ ಬಂಡಿಗಳನ್ನು ಅರ್ಧದಾರಿಯಲ್ಲಿಯೇ ತಡೆದು ಚೆಲ್ಲಿದರಂತೆ. ಆಗ ನಾಯಕನು ಯುದ್ಧದಲ್ಲಿ ಗೆಲ್ಲುವ ಹಂತ ಮುಟ್ಟಿದನಾದರೂ ನೀರಿನ ದಾಹದಿಂದ ನೀರು... ನೀರು ... ಎಂದು ಕೊರಗುತ್ತಾ ಅಲ್ಲಿದ್ದ ಬೇರೆ ನೀರನ್ನು ಕುಡಿದು ಸತ್ತನೆಂದು, ಅಷ್ಟೊತ್ತಿಗೆ ಕನಕರಾಯನ ಅನುಗ್ರಹವೂ ಈ ನಾಯಕನಿಗೆ ದೊರಕಲಿಲ್ಲ ಎಂದೂ ಹೇಳುತ್ತಾರೆ.

ಹಿರೇ ರಂಗಪ್ಪನಾಯಕ (ಕ್ರಿ.ಶ. ೧೭೫೨-೧೭೭೬)

ಎರಡು ತಾಮ್ರ ಪತ್ರಗಳು ಮತ್ತು ಒಂದು ಸನದು ಆಧಾರಗಳಿಂದ ಮುಮ್ಮಡಿ ಕನಕಪ್ಪ ಉಡಿಚನಾಯಕನ ನಂತರ ಅವನ ಮಗ ರಂಗಪ್ಪ ನಾಯಕನು ಅಧಿಕಾರಕ್ಕೆ ಬಂದನೆಂದು ಹೇಳಲಾಗಿದೆ. ಈತನನ್ನು ಹಿರೇರಂಗಪ್ಪನಾಯಕ ಎಂದು ಕರೆಯಲಾಗುತ್ತಿದೆ. ಇವನು ಕ್ರಿ.ಶ. ೧೭೫೨ರಿಂದ ೧೭೭೬ರವರೆಗೆ ಆಳ್ವಿಕೆ ನಡೆಸಿರಬೇಕು. ಈತನು ಸುರಪುರದ ದೊರೆ ಇಮ್ಮಡಿ ವೆಂಕಟಪ್ಪನಾಯಕನಿಗೆ ತನ್ನ ಹೆಣ್ಣುಮಕ್ಕಳಾದ

ಕನಕಮ್ಮ, ನರಸಿಂಗಮ್ಮ ಮತ್ತು ರಾಮಮ್ಮರನ್ನು ಕೊಟ್ಟು ಮದುವೆ ಮಾಡಿದನು. ಚಿತ್ರದುರ್ಗದ ನಾಯಕರೊಡನೆ ಮೊದಲಿದ್ದ ಸಂಬಂಧವನ್ನು ಕಳೆದುಕೊಂಡ ಈ ನಾಯಕನು ತನ್ನ ಇಬ್ಬರು ಮಕ್ಕಳ ಜೊತೆಯಲ್ಲಿ ಚಿತ್ರದುರ್ಗದ ಐದನೇ ಮದಕರಿನಾಯಕನ ವಿರುದ್ಧ ಹೈದರಾಲಿಯ ಪರವಾಗಿ ಸೈನ್ಯವನ್ನು ಕಳುಹಿಸಿದನು. ಕ್ರಿ.ಶ. ೧೭೭೯ರಲ್ಲಿ ಚಿತ್ರದುರ್ಗ ಹೈದರಾಲಿಯ ವಶವಾಯಿತು. ನಂತರ ಕನಕಗಿರಿ ನಾಯಕನೂ ಹೈದರಾಲಿಯ ಹಿಡಿತಕ್ಕೊಳಪಡಬೇಕಾದುದು ದುರಂತ ಸಂಗತಿಯಾಗಿದೆ.

ರಂಗಪ್ಪನಾಯಕನು ತನ್ನ ಆಸ್ಥಾನಕ್ಕೆ ಭೇಟಿ ನೀಡಿದ ಶೃಂಗೇರಿ ಮಠದ ನರಸಿಂಹ ಭಾರತಿ ಸ್ವಾಮಿಗಳನ್ನು ಆದರದಿಂದ ಬರಮಾಡಿಕೊಂಡು ತಮ್ಮ ತಂದೆಯವರು ದಾನವಾಗಿ ನೀಡಿದ್ದ ತೊಂಡೆಹಾಳ ಗ್ರಾಮದ ಬದಲಾಗಿ ಜೂಲದೊಡ್ಡಿ, ಮತ್ತು ಸೂಕುಂಟಿ ಗ್ರಾಮಗಳನ್ನು ಕ್ರಿ.ಶ. ೧೭೬೯ರಲ್ಲಿ ದಾನವಾಗಿ ನೀಡಿದನೆಂದು ತಾಮ್ರಪತ್ರಗಳು ತಿಳಿಸುತ್ತವೆ. ಈತನು ರಾಜ ಪುರೋಹಿತರಿಗೆ ಭೂಮಿದಾನ ಮಾಡಿದ ಬಗ್ಗೆ ಒಂದು ಸನದು ತಿಳಿಸುತ್ತದೆ. ಅನೇಕ ವಿದ್ವಾಂಸರಿಗೆ ಈ ನಾಯಕನು ಆಶ್ರಯ ನೀಡಿದ್ದನು. ಅವರಲ್ಲಿ ಅಪರಾಳ ತಮ್ಮಣ್ಣ, ಚಿದಾನಂದ ಅವಧೂತರು ಮತ್ತು ಜಯವೆಂಕಟಾಚಾರ್ಯರು ಪ್ರಮುಖರು. ಅಪರಾಳ ತಮ್ಮಣ್ಣನವರು ಶ್ರೀ ಕೃಷ್ಣಪಾರಿಜಾತ ಎಂಬ ದೊಡ್ಡಾಟವನ್ನು ರಚಿಸಿದರು. ಈ ನಾಟಕದ ಕೊನೆಯ ಕೆಲವು ಭಾಗಗಳನ್ನು ಶಿರಗುಪ್ಪಿ ಸದಾಶಿವಯ್ಯ ಎಂಬುವರು ರಚಿಸಿ ಪೂರ್ಣಗೊಳಿಸಿದರು. ಈ ದೊಡ್ಡಾಟದಲ್ಲಿ ಕನಕಾಚಲ ದೇವರ ಗರುಡೋತ್ಸವ ಮತ್ತು ಈ ನಾಯಕನ ವರ್ಣನೆಯು ಕಂಡುಬರುತ್ತದೆ. ಚಿದಾನಂದ ಅವಧೂತರು ಚಿದಾನಂದ ವಚನ, ಚಿದಾನಂದಕೀರ್ತಿ, ಕಾಮವಿಡಂಬನೆ ಮುಂತಾದ ಕೃತಿಗಳನ್ನು ಬರೆದರು. ಜಯವೆಂಕಟಾಚಾರ್ಯರು ಕನ್ನಡ ಮತ್ತು ಸಂಸ್ಕೃತದಲ್ಲಿ ಅಪಾರ ವಿದ್ವತ್ ಗಳಿಸಿದ್ದರು. ಅವರು ಕನ್ನಡದಲ್ಲಿ ದಂಡಕ ಒಂದು ಸಂಸ್ಕೃತ ಛಂದೋವೃತ್ತ)ವನ್ನು ಮತ್ತು ಸಂಸ್ಕೃತದಲ್ಲಿ ಭಟ್ಟಂಗಿಗಳನ್ನು ರಚಿಸಿದ್ದಾರೆ. "ಭಟ್ಟಂಗಿಗಳು 'ಕನಕಾದ್ರಿಪರಂಗ ದಯಾಪಯೋಗಿದೇ'" ಎಂಬ ಘೋಷಣೆಯೊಂದಿಗೆ ಅಂತ್ಯವಾಗುತ್ತವೆ.

ಸಾಧಕರೂ ಚಿಂತಕರೂ ಆದಂತಹ ಚಿದಾನಂದ ಅವಧೂತರು ಒಮ್ಮೆ ಈ ನಾಯಕನ ಕುರಿತು "ರಾಜನೇ ಪ್ರಜೆಗಳ ಹಿತಕ್ಕಾಗಿ ಮತ್ತು ನಿನ್ನ ವಂಶಾಭಿವೃದ್ಧಿ ಶ್ರೇಯಸ್ಸಿಗಾಗಿ ನನ್ನ ದೇಹವು ಚೈತನ್ಯಹೀನವಾದ ಕೂಡಲೇ ಅದನ್ನು ಕಡಿದು ತುಂಡರಿಸಿ, ವೈಭವದಿಂದ ಗ್ರಾಮದ ಸುತ್ತಲೂ ಚರಗವನ್ನು ಚೆಲ್ಲುವುದರಿಂದ ನಿನ್ನ ವಂಶವು ಸೂರ್ಯ ಚಂದ್ರ ಇರುವವರಿಗೂ ರಾಜ್ಯವಾಳುತ್ತದೆ" ಎಂದು ಹೇಳಿದನು. ಇದರಿಂದ ಭಯಭೀತನಾದ ನಾಯಕನು ಅವಧೂತರ ಕಾಲಿಗೆ ಬಿದ್ದು ತನ್ನಿಂದ ಏನಾದರೂ ಅಪರಾಧವಾದರೆ ಮನ್ನಿಸಬೇಕೆಂದು ಕೇಳಿಕೊಂಡನು. ಅಂತಹ ಗುರು-ದ್ರೋಹ ಕೆಲಸಕ್ಕೆ ನಾನು ತಯಾರಿಲ್ಲ ಎಂದು ಹೇಳಿದನು. ಇದರಿಂದ ಗುರುಗಳು ಏನು ಹೇಳಿದರೋ ಗೊತ್ತಿಲ್ಲ. ತಮ್ಮಲ್ಲಿದ್ದ ಕೊಡಲಿಯನ್ನು ರಂಗಪ್ಪನಾಯಕನಿಗೆ ಕಾಣಿಕೆಯಾಗಿ ಕೊಟ್ಟನು. ಕನಕಾಚಲ ದೇವಾಲಯದಲ್ಲಿ ಈ ಕೊಡಲಿ ಇದೆ. ಚಿದಾನಂದ ಅವಧೂತರು ತಮ್ಮ ಕೊನೆಯ ದಿನಗಳನ್ನು ಕನಕಗಿರಿಯಲ್ಲಿಯೇ ಕಳೆದು ಸಮಾಧಿಗ್ರಸ್ತರಾದರು. ಈ ಸ್ಥಳವೇ ಇಂದು ಚಿದಾನಂದ ಮಠ ಎಂದು ಕರೆಯಲಾಗುತ್ತಿದೆ.

ಹಿರೇನಾಯಕ (ಕ್ರಿ.ಶ. ೧೭೭೬-೧೮೦೦)

ಈ ನಾಯಕನು ಕ್ರಿ.ಶ. ೧೭೭೬-೭೮ರ ಹೊತ್ತಿಗೆ ಅಧಿಕಾರಕ್ಕೆ ಬಂದನೆಂದು ಗೊತ್ತಾಗುತ್ತದೆ. ಇವನು ಶೂರನೂ ಧೀರನೂ ಆಗಿದ್ದನು. ಇವನ ಆಳ್ವಿಕೆಯ ಕಾಲಾವಧಿಯಲ್ಲಿ ಕನಕಗಿರಿ ಸಂಸ್ಥಾನವು ಸಿಂಧನೂರು, ಕುಷ್ಟಗಿ, ಗಂಗಾವತಿ, ಹರಿಹರ ಮತ್ತು ದಾವಣಗೆರೆ ಪ್ರದೇಶದವರೆಗೂ ವಿಸ್ತರಿಸಿತ್ತು; ಆರ್ಥಿಕವಾಗಿಯೂ ಶ್ರೀಮಂತವಾಗಿತ್ತು. ಟಿಪ್ಪು ಸುಲ್ತಾನನನ್ನು ಉತ್ತರದ ದಾಳಿಯ ಸಂದರ್ಭದಲ್ಲಿ ಕನಕಗಿರಿ ಪ್ರದೇಶದಲ್ಲಿ ಬಿಡಾರ ಹೂಡಿ ತಕ್ಷಣವೇ ಬಂದು ಭೇಟಿಯಾಗಬೇಕೆಂದು ಹಿರೇನಾಯಕನಿಗೆ ಸಂದೇಶ ಕಳುಹಿಸಿಕೊಟ್ಟನು. ಆಗ ನಾಯಕನು 'ಕನಕಲಕ್ಷ್ಮಿಯರ ಪೂಜೆಯಲ್ಲಿದ್ದೇನೆ. ಆಮೇಲೆ ಬಂದು ಭೇಟಿಯಾಗುತ್ತೇನೆ' ಎಂದು ಹೇಳಿ ಕಳುಹಿಸಿದನು. ಆದರೆ ಉದ್ದೇಶಪೂರ್ವಕವಾಗಿಯೇ ನಾಯಕನು ಈ ರೀತಿ ಹೇಳಿ ಕಳುಹಿಸಿದ್ದಾನೆ ಎಂದು ತಿಳಿದ ಟಿಪ್ಪುಸುಲ್ತಾನ ಕನಕಗಿರಿಯ ಮೇಲೆ ದಾಳಿ ಮಾಡಿ ನಾಯಕನನ್ನು ಸೋಲಿಸಿದನು. ಟಿಪ್ಪುವಿನ ಸೈನಿಕರು ಖಜಾನೆಯನ್ನು ಲೂಟಿ ಮಾಡಿದರು. ದೇವಾಲಯಗಳನ್ನು ಕೊಳ್ಳೆ ಹೊಡೆದು ಅಲ್ಲಿದ್ದ ಎರಡು ತೇರಿನಲ್ಲಿ ಒಂದಕ್ಕೆ ಬೆಂಕಿ ಹಚ್ಚಿದರು. ಟಿಪ್ಪುಸುಲ್ತಾನನ ಜೊತೆ ಬಂದಿದ್ದ ಹರಪನಹಳ್ಳಿ ನಾಯಕನು ಕನಕಾಚಲ ನರಸಿಂಹ ದೇವರ ರತ್ನಖಚಿತ ಕಿರೀಟವನ್ನು ಕೊಳ್ಳೆ ಹೊಡೆದುಕೊಂಡು ಹೋದನು ಎಂದು ಹೇಳಲಾಗುತ್ತಿದೆ.

ಹಿರೇನಾಯಕನು ಸ್ವಾಭಿಮಾನಿ, ಸ್ವತಂತ್ರ ಪ್ರವೃತ್ತಿಯುಳ್ಳ ವೀರನಾಗಿದ್ದನು. ನಿಜಾಮನು ಇವನನ್ನು ತನ್ನ ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದನು. ಕಪ್ಪ ಕಾಣಿಕೆಯನ್ನು ತನಗೆ ನೀಡಿ, ತನ್ನ ಅಧೀನನಾದರೆ ನಿನಗೆ ಒಳ್ಳೆಯದು ಎಂದು ತನ್ನ ಸಹಚರರೊಂದಿಗೆ ಸಂದೇಶ ಕಳುಹಿಸಿದನು. ನಿಜಾಮನ ಶರಣಾಗತಿ ನೀತಿಯನ್ನು ಅಲ್ಲಗಳೆದ ಹಿರೇನಾಯಕನು ಸೈನ್ಯ, ಮದ್ದುಗುಂಡುಗಳ ರಕ್ಷಣೆಯಲ್ಲಿ ತೊಡಗಿದನು. ಇದೇ ಸಮಯದಲ್ಲಿ ನಿಜಾಮನ ಮಂತ್ರಿ ಚಂದೂಲಾಲನು ತಿರುಪತಿ ವೆಂಕಟರಮಣನ ದರ್ಶನ ಪಡೆದುಕೊಂಡು ನಂತರ ಹಂಪಿ ವಿರೂಪಾಕ್ಷನ ದರ್ಶನ ಪಡೆದುಕೊಂಡು ಹೈದ್ರಾಬಾದ್‌ಗೆ ಮರಳಿದರಾಯ್ತು ಎಂದು ಹಂಪಿಗೆ ಬಂದನು. ವಿರೂಪಾಕ್ಷ ದೇವರ ದರ್ಶನವನ್ನು ಮುಗಿಸಿಕೊಂಡು ನಂತರ ಕನಕಗಿರಿಗೆ ಭೇಟಿ ನೀಡಿ ನಿಜಾಮನಿಗೆ ಕಪ್ಪಕಾಣಿಕೆಯನ್ನು ಕೊಡುವಂತೆ ಹಿರೇನಾಯಕನನ್ನು ಕೇಳಿದನು. ಇದರಿಂದ ಸಿಟ್ಟಿಗೆದ್ದ ಹಿರೇನಾಯಕನು ಚಂದುಲಾಲನ (ರಕ್ಷಣಾಪಡೆ) ಸೈನ್ಯವನ್ನು ದಿಕ್ಕಾಪಾಲಾಗಿ ಹೊಡೆದು ಓಡಿಸಿದನು. ಈ ಸುದ್ದಿಯು ನಿಜಾಮನಿಗೆ ಮುಟ್ಟಿತು. ಹಿರೇನಾಯಕನನ್ನು ಸದೆಬಡಿಯಲು ಮತ್ತು ಸೆರೆಹಿಡಿದು ತರುವಂತೆ ಸುರಪುರದ ದೊರೆ ಪಾಮನಾಯಕನಿಗೆ ಹೇಳಿದನು. ಈ ನಡುವೆ ಹಿರೇನಾಯಕನು ಮುಂಡರಗಿ ದೇಸಾಯಿಯ ಮಗಳನ್ನು, ಬಹದ್ದೂರ ಬಂಡಿ ದೇಸಾಯಿಯ ಹೆಂಡತಿಯನ್ನು ಬಲವಂತವಾಗಿ ಅಪಹರಿಸಿದ್ದನೆಂದೂ ಮತ್ತು ಮಾನಸಿಕ ಅಸ್ವಸ್ತನಾಗಿ ರಾಣಿವಾಸದವರನ್ನು ಶಿಶುಗಳನ್ನು ಚಾಕುವಿನಿಂದ ಚುಚ್ಚಿ ಕೊಲ್ಲುತ್ತಿದ್ದನೆಂದು ಹೇಳಲಾಗುತ್ತಿದೆ. ಈ ವಿಷಯವೂ ನಿಜಾಮನನ್ನು ಸಿಟ್ಟಿಗೇಳಿಸಿತ್ತು ಎಂದು ತಿಳಿಯುತ್ತದೆ. ಆದರೆ ಪಾಮನಾಯಕನ ಕಾಲಮಾನಕ್ಕೂ (೧೭೨೬-೪೧) ಈ ನಾಯಕನ ಕಾಲಮಾನಕ್ಕೂ ವ್ಯತ್ಯಾಸವಿರುವುದು

ಮೇಲ್ನೋಟದಲ್ಲಿ ಕಂಡುಬರುತ್ತದೆ. ಆದ್ದರಿಂದ ನಿಜಾಮನು ಹಿರೇನಾಯಕನನ್ನು, ಸೆರೆಹಿಡಿಯಲು ಯಾರನ್ನು ಕಳುಹಿಸಿದ್ದನು ಎಂಬುದು ಹೆಚ್ಚಿನ ಅಧ್ಯಯನದಿಂದ ತಿಳಿಯಬೇಕಾಗಿದೆ. ಚಂದುಲಾಲನನ್ನು ಬಂಧಿಸಿದ ಮತ್ತು ಅವನಿಗೆ ಕಾವಲಿದ್ದ ಸೈನ್ಯವನ್ನು ಹೊಡೆದೋಡಿಸಿ ನಾಯಕನು ತನ್ನ ಮೇಲೆ ನಿಜಾಮನ ಸೈನ್ಯವು ದಾಳಿ ಮಾಡಬಹುದು ಎಂದು ಮೊದಲೇ ನಿರೀಕ್ಷಿಸಿದ್ದ ಹಿರೇನಾಯಕನು ಸಾಕಷ್ಟು ಸೈನ್ಯವನ್ನು ಸಜ್ಜುಗೊಳಿಸಿದನು. ಇದೇ ವೇಳೆಗೆ ನಿಜಾಮನ ಸೈನ್ಯವು ಕನಕಗಿರಿಯ ಮೇಲೆ ದಾಳಿ ಮಾಡಿ ಆರಂಭದಲ್ಲಿ ನಾಯಕನು ನಿಜಾಮನ ಸೈನ್ಯವನ್ನು ನುಚ್ಚುನೂರು ಮಾಡಿದನು. ಈ ಸುದ್ದಿ ತಿಳಿದ ನಿಜಾಮನು ಪ್ರಸಿದ್ಧ ಸೇನಾನಾಯಕರ ಜೊತೆಯಲ್ಲಿ ಸಾಕಷ್ಟು ಸೈನ್ಯವನ್ನು ಕನಕಗಿರಿಯ ಮೇಲೆ ದಾಳಿ ಮಾಡಲು ಕಳುಹಿಸಿದನು. ಈ ಸೈನ್ಯದ ದಾಳಿಯಿಂದ ಹಿರೇನಾಯಕನು ಸೋಲುಂಡನು. ತನ್ನ ಅರಮನೆಯವರನ್ನು, ಸಂಪತ್ತನ್ನು ಹೇಮಗುಡ್ಡಕ್ಕೆ ಸಾಗಿಸಿಕೊಟ್ಟನು. ಅಲ್ಲಿಗೂ ನಿಜಾಮನ ಸೈನ್ಯವು ದಾಳಿ ಮಾಡಿತು. ಸುಮಾರು ತಿಂಗಳುಗಳ ಕಾಲ ಯುದ್ಧ ಮುಂದುವರೆಯಿತು. ಕೊನೆಗೆ, ಅಲ್ಲಿನ ಮದ್ದಿನ ಮನೆಯನ್ನು (ಅರಮನೆಯ) ನಿಜಾಮನ ಸೈನ್ಯವು ಸ್ಫೋಟಿಸಿತು. ಹಿರೇನಾಯಕನು ದಿಕ್ಕುತೋಚದೇ ಮತ್ತೆ ಕನಕಗಿರಿಗೆ ಓಡಿಬಂದನು. ಕನಕಾಚಲದೇವರ ದರ್ಶನಕ್ಕೆ ಹೋದನು. ನಾಯಕನಿಗೆ ಅಲ್ಲಿಯೂ ನಿರಾಸೆ ಕಾದಿತ್ತು. ದೇವರ ದರ್ಶನವೂ ಸರಿಯಾಗಿ ಆಗಲಿಲ್ಲ. ತೊಂಡೆತೇವರ ಪ್ರಾಣದೇವರ ಸನ್ನಿಧಿಗೆ ಓಡಿ ಹೋಗಿ "ವೈರಿಗಳನ್ನು ಹೊಡೆದು ಓಡಿಸುವ ಶಕ್ತಿ ನೀಡು ತಂದೆ" ಎಂದು ಬೇಡಿದನು. ಅಲ್ಲಿಯೂ ಹಿರೇನಾಯಕನಿಗೆ ದೇವರ ದರ್ಶನದಲ್ಲಿ ವ್ಯತ್ಯಯವಾಯಿತು. ಹಿರೇನಾಯಕ ಮಧ್ಯವ್ಯಸನಿ, ಸ್ತ್ರೀಲೋಲ ಆಗಿದ್ದರಿಂದ ದೇವರು ದರ್ಶನ ನೀಡಲಿಲ್ಲವೆಂದು ಹೇಳಲಾಗುತ್ತದೆ. ಇದರಿಂದ ವಿಚಲಿತನಾದ ನಾಯಕನು ಕುಸಿದುಬಿದ್ದನು. ದೇವರೆ ಕೈಬಿಟ್ಟಾಗ ನನ್ನ ಕೊನೆ ಆಗಿಯೇ ಹೋಯಿತು ಎಂದು ಮಮ್ಮಲ ಮರುಗಿದನು. ಇದೇ ಸಮಯದಲ್ಲಿ ನಿಜಾಮನ ಸೈನ್ಯವು ಹಿರೇನಾಯಕನನ್ನು ಅಟ್ಟಿಸಿಕೊಂಡು ಹೋಯಿತು. ಸೋತ ಸೈನಿಕರು ದಿಕ್ಕಾಪಾಲಾದರು. ಸೋಲುಂಡ ಹಿರೇನಾಯಕನು ನಿಜಾಮನ ಸೈನ್ಯಕ್ಕೆ ಶರಣಾದನು. ನಿಜಾಮನನ್ನು ಕಡೆಗಣಿಸಿ ಸಾಕಷ್ಟು ತೊಂದರೆಯನ್ನುಂಟುಮಾಡಿದ ಹಿರೇನಾಯಕನನ್ನು ಕನಕಗಿರಿಯ ನೈರುತ್ಯ ಭಾಗದಲ್ಲಿ ಫಿರಂಗಿ ಸಿಡಿಸಿ ಕೊಂದು ಹಾಕಿದರು. ಇವನ ದೇಹವು ಚೂರು ಚೂರಾಗಿ ಚೆಲ್ಲಾಪಿಲ್ಲಿಯಾಗಿ ಸಿಡಿದುಬಿದ್ದವು. ಇವನ ದೇಹದ ಚೂರುಗಳು ಬಿದ್ದಭಾಗದಲ್ಲಿ ಪುಟ್ಟ ಮಂಟಪಗಳನ್ನು ಕಟ್ಟಿಸಲಾಗಿದೆ ಎಂಬುದು ಕನಕಗಿರಿ ಜನರ ಅಭಿಮತವಾಗಿದೆ. ಈ ರೀತಿಯ ಪುಟ್ಟ ಮಂಟಪಗಳು ಕನಕಗಿರಿ ಸುತ್ತಮುತ್ತಲು ಇಂದಿಗೂ ಕಂಡುಬರುತ್ತವೆ.

ಈ ಪ್ರದೇಶದಲ್ಲಿ ಒಂದು ಪುಟ್ಟ ಗುಡಿ ಇದೆ. ಈ ಗುಡಿಯನ್ನು ಇಲ್ಲಿನ ಜನರು ಹಿರೇನಾಯಕ, ವೀರನಾಯಕನ ಗುಡಿ ಎಂದು ಕರೆಯುತ್ತಾರೆ. ಈ ಗುಡಿಯೊಳಗೆ ಎರಡು ವೀರಗಲ್ಲುಗಳಿವೆ. ನಿಜಾಮನ ಸೈನ್ಯದೊಡನೆ ಹೋರಾಡಿ ಕೊನೆಗೆ ಫಿರಂಗಿಗೆ ತುತ್ತಾದ ಈ ಹಿರೇನಾಯಕನೇ ಈ ವೀರನಾಯಕ ಇರಬಹುದೇ ಎಂದು ಯೋಚಿಸಿದಾಗ ಈ ವೀರಗಲ್ಲಿನ ಕಾಲಮಾನವು ಈ ನಾಯಕನ ಕಾಲಕ್ಕೆ ಸರಿಹೊಂದಲಾರದೆನ್ನಿಸುತ್ತದೆ. ಏಕೆಂದರೆ, ಈ ವೀರಗಲ್ಲಿನ ಕಾಲಮಾನ ಸರಿಸುಮಾರು ೧೫-೧೬ನೇ ಶತಮಾನವಿರಬಹುದು. ಒಟ್ಟಿನಲ್ಲಿ ಕನಕಗಿರಿಯಲ್ಲಿ ಪರಸಪ್ಪ ಉಡಿಚನಾಯಕನಿಂದ ಆರಂಭವಾದ ಆಳ್ವಿಕೆಯು ಈ ಹಿರೇನಾಯಕನಿಂದ

ಮುಕ್ತಾಯವಾಯಿತು. ಆದರೆ ಇವನ ನಂತರದಲ್ಲಿ ಬಂದ ಇವನ ಮಗ ರಂಗನಾಥಪ್ಪ ನಾಯಕನು ಕನಕಗಿರಿಯಿಂದ ಅಧಿಕಾರ ಆರಂಭಿಸಿದನಾದರೂ ಬಹಳ ದಿನಗಳ ಕಾಲ ಇಲ್ಲಿರಲಿಲ್ಲ. ನಿಜಾಮನಿಂದ ಸೋತು ಹುಲಿ ಹೈದರ್‌ನಿಂದ ಆಳ್ವಿಕೆಯನ್ನು ಆರಂಭಿಸಿದನು. ಆತನು ಹುಲಿಹೈದರ್‌ನ ದೊರೆಯೆಂದೇ ಹೆಸರಾದನು.

ಹುಲಿಹೈದರ್ ಸಂಸ್ಥಾನ

ರಂಗನಾಥನಾಯಕ: ಇವನು ಕ್ರಿ.ಶ. ೧೮೦೦ರ ಸುಮಾರಿನಲ್ಲಿ ಕನಕಗಿರಿಯಲ್ಲಿ ಅಧಿಕಾರಕ್ಕೆ ಬಂದನಾದರೂ ನಿಜಾಮನ ವಿರುದ್ಧ ಹೋರಾಟದಲ್ಲೇ ಕಾಲ ಕಳೆದನು. ತನ್ನ ತಂದೆಯ ಬರ್ಬರ ಕೊಲೆಯ ನೆನಪಿನಲ್ಲಿ ಗಡ್ಡವನ್ನು ತೆಗೆಸಲಿಲ್ಲ. ಹೀಗಾಗಿ ಇವನನ್ನು ಗಡ್ಡದ ದೊರೆಯೆಂದೂ ಕರೆಸಿಕೊಂಡನು. ನಿಜಾಮನು ಇವನು ಬೆಳೆಯಲು ಬಹಳ ದಿನಗಳ ಕಾಲ ಬಿಡಲಿಲ್ಲ. ಕನಕಗಿರಿ ಪ್ರದೇಶದಲ್ಲಿ ಇವನ ಬಂಡಾಯವನ್ನು ಸಂಪೂರ್ಣವಾಗಿ ಸದೆಬಡಿದನು. ಇನ್ನು ನಿಜಾಮನ ಜೊತೆಯಲ್ಲಿ ಸೆಣಸಾಡುವುದು ವ್ಯರ್ಥ ಪ್ರಯತ್ನ ಎಂದು ತಿಳಿದ ನಾಯಕನು ಶರಣಾದನು. ಕನಕಗಿರಿ ಪ್ರದೇಶದಲ್ಲಿ ಮತ್ತೆ ಈ ನಾಯಕನು ಮುಂದೊಂದು ದಿನ ನನ್ನ ವಿರುದ್ಧ ಬಂಡಾಯವೇಳಬಹುದೆಂದು ಯೋಚಿಸಿದ ನಿಜಾಮನು ಕನಕಗಿರಿಯ ಮೇಲಿದ್ದ ನಾಯಕನ ಸಂಪೂರ್ಣ ಹಿಡಿತವನ್ನು ಕಿತ್ತುಹಾಕಿದನು. ಆತನಿಗೆ ಹದಿನಾರು ಹಳ್ಳಿಗಳನ್ನು ಜಹಗೀರು ನೀಡಿ ಕನಕಗಿರಿ ಸಮೀಪದ ಹುಲಿಹೈದರವನ್ನು ಕೇಂದ್ರಸ್ಥಾನವನ್ನಾಗಿ ಮಾಡಿದನು. ಇದರಿಂದಾಗಿ ರಂಗನಾಥಪ್ಪನಾಯಕನು ಹುಲಿಹೈದರ್‌ನಲ್ಲಿ ಉಳಿದುಕೊಳ್ಳಬೇಕಾಯಿತು. ಕನಕಗಿರಿಯಲ್ಲಿದ್ದ ನಾಯಕರ ಅರಮನೆ ಮತ್ತು ಇತರ ಕಟ್ಟಡಗಳು ಕ್ರಮೇಣ ಹಾಳಾಗುತ್ತಾ ಬಂದವು. ಅರಮನೆಯ ಯಾವ ಅವಶೇಷವೂ ಇಂದು ಉಳಿದಿಲ್ಲ. ಕನಕಗಿರಿ ನಾಯಕರ ಆಶ್ರಯದಲ್ಲಿದ್ದ ಬೇಡರವಾಡಿಯ ಬೇಡರು ಪಕ್ಕದ ಹಳ್ಳಿಗಳನ್ನು ಸೇರಿದರು. ಇಂದಿಗೂ ಕನಕಗಿರಿಯಲ್ಲಿ ಕೆಲವೇ ಕೆಲವು ಬೇಡರ ಮನೆಗಳಿವೆ. ಆದರೆ ಈ ಊರಿನ ಸುತ್ತುಮುತ್ತ ಹಳ್ಳಿಗಳಲ್ಲಿ ಬೇಡರು ದಟ್ಟವಾಗಿ ನೆಲೆಸಿರುವುದು ಕಂಡುಬರುತ್ತದೆ. ರಂಗನಾಥಪ್ಪನಾಯಕ ಸಹೋದರನಾದ ಹನುಮಪ್ಪನಾಯಕನು ಗೋಡಿನಾಳ ಗ್ರಾಮವನ್ನು ಜಹಗೀರಾಗಿ ಪಡೆದುಕೊಂಡು ಬೇರೆಯಾದನು. ಇದರಿಂದ ಹುಲಿಹೈದರ ಸಂಸ್ಥಾನವು ಅವನತಿಯತ್ತಾ ಹೋಗಲು ಒಂದು ಕಾರಣವಾಯಿತು. ಆರ್ಥಿಕವಾಗಿ ಅಧೋಗತಿಯತ್ತಾ ಹೊರಟ ಈ ಸಂಸ್ಥಾನಕ್ಕೆ ನಿಜಾಮನು ನೀಡುತ್ತಿದ್ದ ಕೆಲವು ಸವಲತ್ತುಗಳನ್ನೂ ನಿಲ್ಲಿಸಿದನು. ನಿಜಾಮನು ಜಹಗೀರುಗಳನ್ನು ಒತ್ತೆಯಿಟ್ಟುಕೊಂಡು ಸಾಲ ಕೊಡುವುದನ್ನು ಪ್ರಾರಂಭಿಸಿದನು. ಕನಕಗಿರಿಯ ಲಕ್ಷ್ಮೀನರಸಿಂಹ ದೇವರ ಪೂಜಾ ಕಾರ್ಯಗಳಿಗೆ ನೀಡುತ್ತಿದ್ದ ಮೂರು ಸಾವಿರ ಸಹಾಯ ಹಣವನ್ನು ಕೊಡುವುದನ್ನು ಸಹಾ ನಿಲ್ಲಿಸಿದನು. ಆಗ ರಂಗನಾಥಪ್ಪನಾಯಕನೇ ಸ್ವಂತ ಹಣದಿಂದ ದೇವರ ಪೂಜಾಕಾರ್ಯಗಳು ನಡೆದುಕೊಂಡು ಬರುವಂತೆ ನೋಡಿಕೊಂಡನು. ಹನುಮಪ್ಪ ನಾಯಕನನ್ನು ಗೋಡಿನಾಳ ದೊರೆಯೆಂದು ಕರೆಯಲಾಯಿತು. ಆತನ ವಂಶಜರು ಇಂದಿಗೂ ಗೋಡಿನಾಳದಲ್ಲಿಯೇ ನೆಲೆಸಿದ್ದಾರೆ.

ರಂಗನಾಥಪ್ಪನಾಯಕನ ನಂತರ ಅಧಿಕಾರಕ್ಕೆ ಬಂದ ರಂಗಪ್ಪನಾಯಕನ ಕಾಲದಲ್ಲಿ ಕನಕಪ್ಪನಾಯಕನ ಮತ್ತು ಜಮ್ಮಾಳ ನಾಯಕರು ಸೋಮಸಾಗರ ಮತ್ತು ಗುಂತಮಡುವಿನ ಗ್ರಾಮಗಳ ಜಹಗೀರನ್ನು ಪಡೆದುಕೊಂಡು ಬೇರೆಯಾದರು. ರಂಗಪ್ಪನಾಯಕನಿಗೆ ಲಕ್ಷ್ಮಮ್ಮ, ದಂಡೆಮ್ಮ ಮತ್ತು ಹಿರಿಯಮ್ಮ ಎಂಬ ಹೆಣ್ಣ ಮಕ್ಕಳು ಮಾತ್ರ ಇದ್ದರು. ಆದ್ದರಿಂದ ರಾಣಿ ವೆಂಕಮ್ಮಳು ಸೋಮಸಾಗರದ ಕನಕಪ್ಪನಾಯಕನ ಮಗ ಉಡಿಚನಾಯಕನನ್ನು ದತ್ತು ತೆಗೆದುಕೊಂಡಳು. ಈ ರಾಣಿ ಕೆಲವು ದಿನಗಳ ಕಾಲ ಅಧಿಕಾರವನ್ನು ನಡೆಸಿದಳು. ರಂಗಪ್ಪನಾಯಕನು ೧೮೧೨ರಲ್ಲಿ ದೇವಾಲಯವೊಂದಕ್ಕೆ ಭೂದಾನ ನೀಡಿದ ಬಗ್ಗೆ ಶಿಲಾಶಾಸನವೊಂದು ಕನಕಗಿರಿಯಲ್ಲಿದೆ. ಅದು ಪೂರ್ಣ ಮಾಹಿತಿಯನ್ನು ನೀಡುವುದಿಲ್ಲ.

ರಂಗಪ್ಪನಾಯಕನ ನಂತರ ಅಧಿಕಾರಕ್ಕೆ ಬಂದ ಉಡಿಚನಾಯಕನಿಗೆ ಅಧಿಕಾರದಲ್ಲಿ ಉತ್ಸಾಹವಿರಲಿಲ್ಲ. ಇವರು ಅಂತಹ ಸಾಧನೆಯೇನೂ ಮಾಡಲಿಲ್ಲ. ಇವನ ನಂತರ ಅಧಿಕಾರಕ್ಕೆ ಬಂದ ರಾಜಾರಂಗಪ್ಪನಾಯಕನು ಅಪ್ರಾಪ್ತನಾಗಿದ್ದರಿಂದ ರಾಣಿ ಗೌರಮ್ಮಳು ಕೆಲವು ದಿನಗಳ ಕಾಲ ಅಧಿಕಾರವನ್ನು ನಡೆಸಿದಳು. ರಾಣಿ ಗೌರಮ್ಮಳ ಕಾಲಕ್ಕೆ ಸ್ವಲ್ಪ ಅಭಿವೃದ್ಧಿ ಕಾರ್ಯಗಳು ನಡೆದವು. ಕನಕಾಚಲದೇವರ ರಥೋತ್ಸವವನ್ನು ಅದ್ದೂರಿಯಾಗಿ ನಡೆಯುವಂತೆ ಮಾಡಿದಳು. ತೇರು ನಿಲ್ಲುವುದಕ್ಕೆ ಒಂದು ತೇರಿನ ಮನೆಯನ್ನು ನಿರ್ಮಿಸಿದಳು. ಆದರೆ ಈ ರಾಣಿಯ ಅಧಿಕ ಖರ್ಚುಗಳಿಂದಾಗಿ, ಆದಾಯದ ಕೊರತೆಯಿಂದಾಗಿ ಅನೇಕ ತೊಂದರೆಗೆ ಒಳಗಾದಳು. ಅನೇಕ ಹಳ್ಳಿಗಳನ್ನು ಹೈದ್ರಾಬಾದ್‌ನಲ್ಲಿದ್ದ (ನಿಜಾಮ ನೀಡಿದ್ದ) ಮನೆಯನ್ನು ನಿಜಾಮನಿಗೆ ಒತ್ತೆ ಹಾಕಿದಳು. ಇದೇ ವೇಳೆಯಲ್ಲಿ ರಾಜಾರಂಗಪ್ಪನಾಯಕನು ಅಕಾಲ ಮರಣಕ್ಕೆ ಒಳಗಾದನು. ಇದರಿಂದ ಸಂಸ್ಥಾನಕ್ಕೆ ಉತ್ತರಾಧಿಕಾರಿ ಸಮಸ್ಯೆ ಎದುರಾಯಿತು. ಆಗ ಸೋಮಸಾಗರದ ರಂಗನಾಥಪ್ಪನ ಮಗ ರಂಗಪ್ಪನಾಯಕನನ್ನು ದತ್ತು ತೆಗೆದುಕೊಂಡಳು. ಈ ಸಮಯದಲ್ಲಿ ನಿಜಾಮನು ದುರಾಡಳಿತದ ನೆಪ ಹೇಳಿ ಹುಲಿಹೈದರನ್ನು ತನ್ನ ವಶಕ್ಕೆ ತೆಗೆದುಕೊಂಡನು. ರಾಣಿ ಗೌರಮ್ಮ ಮತ್ತು ದತ್ತುಪುತ್ರ ರಂಗಪ್ಪನಾಯಕನನ್ನು ಹೈದ್ರಾಬಾದಿನಲ್ಲಿ ಇಟ್ಟು ವರ್ಷಾಸನ ನೀಡಲಾಯಿತು. ಹುಲಿಹೈದರ್ ಸಂಸ್ಥಾನಕ್ಕೆ ದತ್ತು ಪುತ್ರರನ್ನು ನೀಡಿದ ಸೋಮಸಾಗರದ ನಾಯಕನ ವಂಶವೇನಾಗಿದೆ ಎಂಬುದು ತಿಳಿದಿಲ್ಲ. ಸೋಮಸಾಗರದಲ್ಲಿ ಅವರ ವಂಶಸ್ಥರಾರು ಇಲ್ಲ. ಗುಂತುಮಡು ಜಹಗೀರನ್ನು ಪಡೆದುಕೊಂಡ ಜುಮ್ಮಾಳ ನಾಯಕನ ವಂಶಸ್ಥರು ಇಂದು ಹುಲಿಹೈದರ ಪಕ್ಕದ ಹೊಲವೊಂದರಲ್ಲಿ ನೆಲೆಸಿದ್ದಾರೆ. ಅವರು ಗುಂತಮಡು ಮತ್ತು ಶಿಡ್ಲಬಾವಿ ಜಹಗೀರನ್ನು ಅನುಭವಿಸುತ್ತಾ ಬಂದ ಬಗ್ಗೆ ಅವರಲ್ಲಿರುವ ಕಾಗದ ಪತ್ರಗಳು ತಿಳಿಸುತ್ತವೆ. ರಂಗಪ್ಪನಾಯಕನ ವಂಶಸ್ಥರು ಇಂದು ಹುಲಿಹೈದರಿನ ದರ್ಬಾರಿನಲ್ಲಿದ್ದಾರೆ. ಅವರು ನಾಯಕ ಸಮುದಾಯಕ್ಕೆ ಗುರುಗಳಾಗಿ ಉಳಿದೆಲ್ಲಾ ಸಮುದಾಯಗಳಿಗೆ ಮತ್ತು ನಾಯಕ ಸಮುದಾಯಕ್ಕೆ ದೊರೆಗಳಾಗಿ ಗುರುತಿಸಿಕೊಂಡಿದ್ದಾರೆ.

೩.೩. ಕನಕಗಿರಿ ನಾಯಕರ ಕೊಡುಗೆಗಳು

೩.೩.೧. ಕಲೆ ಮತ್ತು ವಾಸ್ತುಶಿಲ್ಪ: ಕನಕಗಿರಿಯ ನಾಯಕರು ಮತ್ತು ರಾಣಿಯರು ಕಲೆಯು

ಆಸಕ್ತರಾಗಿದ್ದರು. ವಿಜಯನಗರ ಕಲೆಯನ್ನು ಅನುಸರಿಸಿದ ಇವರು ಅನೇಕ ದೇವಾಲಯಗಳನ್ನು, ಬಾವಿಗಳನ್ನು, ಪುಷ್ಕರಿಣಿಗಳನ್ನು, ಕೋಟೆಗಳನ್ನು, ಮಂಟಪಗಳನ್ನು, ಅರಮನೆಗಳನ್ನು ಮಠಗಳನ್ನು ಕಟ್ಟಿಸಿದರು. ಕೆಲವು ನಾಯಕ ದೊರೆಗಳು ತಮ್ಮ ಮತ್ತು ರಾಣಿ, ಮಕ್ಕಳ ಶಿಲ್ಪಗಳನ್ನು ಕೆತ್ತಿಸಿ ಅವುಗಳಿಗೆ ದೇವಾಲಯವನ್ನು ಕಟ್ಟಿಸಿರುವುದು ಒಂದು ವಿಶಿಷ್ಟ ಅಂಶವಾಗಿದೆ. ಕನಕಗಿರಿಯಲ್ಲಿ ೭೦೧ ಬಾವಿಗಳು, ೭೦೧ ದೇವಾಲಯಗಳು ಇದ್ದವೆಂದು ಹೇಳುತ್ತಾರೆ. ಹಂಪಿಯಲ್ಲಿ ಎತ್ತ ನೋಡಿದರತ್ತ ಒಂದು ಮಂಟಪ, ಇಲ್ಲವೇ ಒಂದು ದೇವಾಲಯ ಕಾಣುತ್ತವೆ. ಹಾಗೆಯೇ ಕನಕಗಿರಿಯಲ್ಲಿ ಒಂದಲ್ಲ ಒಂದು ದೇವಾಲಯ, ಮಂಟಪ, ಮಠ, ಪುಷ್ಕರಿಣಿಗಳು ಕಾಣುತ್ತವೆ. ರಾಜಕೀಯವಾಗಿ ಪ್ರಸಿದ್ಧಿಯನ್ನು ಪಡೆದಷ್ಟೇ ಕಲೆ ಮತ್ತು ಧರ್ಮದ ಹಿನ್ನೆಲೆಯಲ್ಲಿಯೂ ಕನಕಗಿರಿಯು ಸುಪ್ರಸಿದ್ಧಿಯಾಗಿದೆ. ಕನಕಗಿರಿಯನ್ನು ಆಳಿದ ಪ್ರತಿಯೊಬ್ಬ ನಾಯಕನು ಒಂದಲ್ಲ ಒಂದು ದೇವಾಲಯವನ್ನು ಕಟ್ಟಿಸಿದ್ದಾನೆ. ಈ ಹಿನ್ನೆಲೆಯಲ್ಲಿಯೇ "ಕಣ್ಣಿದ್ದವರು ಕನಕಗಿರಿ ನೋಡಬೇಕು ಕಾಲಿದ್ದವರು ಹಂಪಿ ನೋಡಬೇಕು" ಎಂಬ ನಾಣ್ನುಡಿ ನಾಡಿನಾದ್ಯಂತ ಜನಪ್ರಿಯತೆಯನ್ನು ಪಡೆದಿದೆ. ಕನಕಗಿರಿ ನಾಯಕರ ಕಾಲದ ಪ್ರಮುಖ ದೇವಾಲಯಗಳಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವಾಲಯ ಅತ್ಯಂತ ಮುಖ್ಯವಾಗಿದೆ.

ಲಕ್ಷ್ಮೀನರಸಿಂಹ ದೇವಾಲಯ (ಕನಕಾಚಲದೇವಾಲಯ): ಈ ದೇವಾಲಯವು ಕನಕಗಿರಿಯ ದೇವಾಲಯಗಳಲ್ಲಿಯೇ ಅತ್ಯಂತ ಪ್ರಮುಖ ದೇವಾಲಯ. ಇದು ವಿಜಯನಗರ ವಾಸ್ತುಶೈಲಿಯಲ್ಲಿ ರಚನೆಯಾಗಿದ್ದು, ಏಕಕಾಲಕ್ಕೆ ನಿರ್ಮಾಣಗೊಂಡಿಲ್ಲ. ಈ ದೇವಾಲಯದ ಗರ್ಭಗೃಹ, ಸುಖನಾಸಿಯನ್ನು ಪರಸಪ್ಪ ಉಡಿಚನಾಯಕನು ಕಟ್ಟಿಸಿದನು. ಆಮೇಲೆ ಅಧಿಕಾರಕ್ಕೆ ಬಂದ ನವಾಬ ಉಡಿಚನಾಯಕನು ಈ ದೇವಾಲಯದ ಮಧ್ಯರಂಗ ಮಂಟಪವನ್ನು ಕಟ್ಟಿಸಿದನು. ನಂತರ ಕೆಲವಡಿ ಉಡಿಚನಾಯಕನು ಈ ದೇವಾಲಯದಲ್ಲಿರುವ ಗಾರೆಶಿಲ್ಪಗಳನ್ನು ಮತ್ತು ಮೂರು ಮುಖ್ಯ ಬೃಹತ್ ಗೋಪುರಗಳನ್ನು, ಪ್ರಾಕಾರವನ್ನು ನಿರ್ಮಿಸಿದನು (ಕನಕಾಚಲ ದೇವಾಲಯ ಹಾಗು ಇತರೆ ದೇವಾಲಯಗಳ ವಿವರ ಮಾಹಿತಿಗೆ ಈ ಪ್ರಬಂಧದ ಅಧ್ಯಾಯ ಐದರಲ್ಲಿ ಧರ್ಮ, ದೇವಾಲಯಗಳು ಉಪಶೀರ್ಷಿಕೆಯಲ್ಲಿ ನೋಡಿ).

ಲಕ್ಷ್ಮೀ ದೇವಾಲಯ: ಕನಕಾಚಲ ದೇವಾಲಯಕ್ಕೆ ತಾಗಿಕೊಂಡು ಎಡಭಾಗದಲ್ಲಿ ಈ ಲಕ್ಷ್ಮೀ ದೇವಾಲಯವಿದೆ. ಪರಸಪ್ಪ ಉಡಿಚನಾಯಕನು ಈ ದೇವಾಲಯವನ್ನು ಕಟ್ಟಿಸಿದನು. ಗರ್ಭಗೃಹ ಮತ್ತು ಸುಖನಾಸಿ ಹೊಂದಿದ ಈ ದೇವಾಲಯವು ಗರ್ಭಗೃಹದ ಮೇಲೆ ದ್ರಾವಿಡಶೈಲಿಯ ಶಿಖರವಿದೆ. ಗರ್ಭಗೃಹದಲ್ಲಿ ಕಪ್ಪು ಗ್ರಾನೈಟ್ ಶಿಲೆಯ ಲಕ್ಷ್ಮೀ ವಿಗ್ರಹವಿದೆ. ಸುಖನಾಸಿಯ ಕಂಬಗಳು ಸಾಧಾರಣ ಕೆತ್ತನೆಯನ್ನು ಹೊಂದಿವೆ.

ಶ್ರೀಮದ್ ಆಳ್ವಾರ್: ಉತ್ತರದ ಗೋಪುರದ ಎಡಭಾಗದ ಪ್ರಾಕಾರವನ್ನೇ ದೇವಾಲಯ ರೂಪಕ್ಕೆ ತಂದು ಶ್ರೀಮದ್ ಆಳ್ವಾರ್ ೧೨ ವಿಗ್ರಹಗಳನ್ನು ಅಲ್ಲಿ ಪ್ರತಿಷ್ಠಾಪಿಸಲಾಗಿದೆ. ದೇವಸ್ಥಾನದ ಮುಂಭಾಗದಲ್ಲಿ ಸಂಜೀವರಾಯನ ಗುಡಿ ಇದ್ದು, ಮುಂಭಾಗದಲ್ಲಿ ಹಿಂದೂ-ಮುಸ್ಲಿಂ ಶೈಲಿಯ 'ಮಹಲಿನ ಮನೆ' ಎಂದು

ಕರೆಯುವ ಕಟ್ಟಡವಿದೆ. ಇಲ್ಲಿ ನಿಜಾಮನ ಕಾಲದಲ್ಲಿ ತೆರಿಗೆ ಸಂಗ್ರಹ ಮಾಡಲಾಗುತ್ತಿತ್ತು. ಎಂದು ಹೇಳುತ್ತಾರೆ.

ಇತರೆ ದೇವಾಲಯಗಳು: ಕನಕಾಚಲ ದೇವಾಲಯದ ಹಿಂಭಾಗದಲ್ಲಿ ಗೋಪಾಲಕೃಷ್ಣ, ಶಂಕರಲಿಂಗ ದೇವಾಲಯಗಳಿವೆ. ದೇವಾಲಯಗಳು ಜೋಡಿಯಾಗಿದ್ದು ಗರ್ಭಗೃಹ ಮತ್ತು ಮುಖ ಮಂಟಪವನ್ನು ಮಾತ್ರ ಹೊಂದಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರಗಳನ್ನು ಹೊಂದಿವೆ. ಗೋಪಾಲಕೃಷ್ಣನನ್ನು ಗೋಪಿಕಾಸ್ತ್ರೀಯರ ನಡುವೆ ಇರುವಂತೆ ಮತ್ತು ಶಂಕರಲಿಂಗ ನಂದಿಯನ್ನು ಏಕಶಿಲೆಯಲ್ಲಿ ಕೆತ್ತಿದ ಮೂರ್ತಿಗಳು ಗರ್ಭಗೃಹದಲ್ಲಿವೆ. ಈ ದೇವಾಲಯಗಳ ಬಲಕ್ಕಿದ್ದ ಖಾಲಿ ದೇವಾಲಯದಲ್ಲಿ ಗಾಂಧಿ ಪ್ರತಿಮೆಯನ್ನು ಪ್ರತಿಷ್ಠಾನ ಮಾಡಲಾಗಿದೆ. ಅದು ಗಾಂಧಿಮಂಟಪ (ದೇವಾಲಯ) ಎಂದು ಕರೆಯಲಾಗುತ್ತಿದೆ.

ಕನಕಗಿರಿಯ ಅತ್ಯಂತ ಆಕರ್ಷಣೆ ಎಂದರೆ ರಾಜಬೀದಿ. ಕನಕಾಚಲ ದೇವಾಲಯದಿಂದ ಒಂದು ಕಿ.ಮೀ. ದೂರವಿರುವ ಇದು ಎದರುಹನುಮಪ್ಪ (ತೇರು ಹನುಮಪ್ಪ) ದೇವಾಲಯದವರೆಗೆ ಇದೆ. 'ರಾಜಬೀದಿ', 'ರಾಜಮಾರ್ಗ' ಎಂದು ಹೆಸರಾದ ರಸ್ತೆಯಲ್ಲಿಯೇ ಪ್ರತಿ ವರ್ಷ ಉತ್ಸವಗಳು ನಡೆಯುತ್ತವೆ. ರಾಜರು ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭಿಸುವ ಮುನ್ನ ಈ ರಸ್ತೆಯ ಎರಡೂ ಬದಿಯ ಅನೇಕ ದೇವಾಲಯಗಳಲ್ಲಿರುವ ದೇವರಿಗೆ ನಮಸ್ಕರಿಸಿ ಬರುತ್ತಿದ್ದರು. ಮತ್ತು ಉತ್ಸವಗಳ ನಾಯಕತ್ವವನ್ನೂ ವಹಿಸುತ್ತಿದ್ದರು. ಹಾಗಾಗಿ ಈ ಬೀದಿಯು ರಾಜಬೀದಿ, ರಾಜಮಾರ್ಗ ಎಂದು ಹೆಸರಾಗಿದೆ. ನೀಲಕಂಠೇಶ್ವರ ನಗರೇಶ್ವರ, ಪಂಪಾಪತಿ, ಮಲ್ಲೇಶ್ವರ, ಪೇಟೆ ಬಸವಣ್ಣ, ಯಲ್ಲಮ್ಮ, ಅಗಸಿ ಹನುಮಪ್ಪ (ತೇರು ಹನುಮಪ್ಪ), ಗಜಲಕ್ಷ್ಮಿ, ವೀರಭದ್ರ, ಮಹಿಷಾಸುರ ಮರ್ದನಿ ಮುಂತಾದ ಅನೇಕ ದೇವಾಲಯಗಳು ದ್ರಾವಿಡ ಶೈಲಿಯ ಶಿಖರವನ್ನು, ಗರ್ಭಗೃಹ ಸುಖನಾಸಿ, ಮುಖಮಂಟಪಗಳನ್ನು ಹೊಂದಿವೆ. ಮಲ್ಲೇಶ್ವರ, ಗಜಲಕ್ಷ್ಮಿ ವೀರಭದ್ರ ದೇವಾಲಯದ ಗರ್ಭಗೃಹದಲ್ಲಿರುವ ಮೂರ್ತಿಗಳು ಕಲಾತ್ಮಕವಾಗಿವೆ. ಗಾರೆಶಿಲ್ಪಗಳು ಅಳಿದುಳಿದುಕೊಂಡಿರುವುದು ಈ ಎಲ್ಲ ದೇವಾಲಯಗಳಲ್ಲಿ ಕಂಡುಬರುತ್ತದೆ. ಪೇಟೆ ಬಸವಣ್ಣ ದೇವಾಲಯವನ್ನು ರಾಣಿ ಚನ್ನಮ್ಮಳು ಕಟ್ಟಿಸಿದಳೆಂದು ಈ ದೇವಾಲಯದ ಗರ್ಭಗೃಹ ಬಾಗಿಲುವಾಡದ ಎಡಪಟ್ಟಿಕೆಯ ಮೇಲೆ ಇರುವ ಶಾಸನದಿಂದ ತಿಳಿದುಬರುತ್ತದೆ. ಉಳಿದ ಕೆಲವು ದೇವಾಲಯಗಳು ನವಾಬ ಉಡಿಚನಾಯಕನ ಕಾಲದಲ್ಲಿ ಕಟ್ಟಲ್ಪಟ್ಟವು. ಒಂದನೇ ಕನಕಪ್ಪ ಉಡಿಚನಾಯಕನ ಕಾಲದಲ್ಲಿ ತೊಂಡೆತೇವರಪ್ಪ, ತೇರುಹನುಮಪ್ಪ ಮತ್ತು ಸಂಜೀವರಾಯ ದೇವಾಲಯಗಳು ಕಟ್ಟಲ್ಪಟ್ಟವು. ತೇರು ಹನುಮಪ್ಪ, ತೊಂಡೆ ತೇವರಪ್ಪ ದೇವಾಲಯಗಳು ಮುಖಮಂಟಪ, ಸುಖನಾಸಿ, ಗರ್ಭಗೃಹಗಳನ್ನು ಹೊಂದಿವೆ. ಗರ್ಭಗೃಹಗಳಲ್ಲಿ ಹನುಮಂತನ ವಿಗ್ರಹಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರಗಳಿವೆ. ಈ ದೇವಾಲಯಗಳ ಮುಂಭಾಗದಲ್ಲಿ ದ್ವೀಪಸ್ತಂಭಗಳಿವೆ. ಕನಕನಗಿರಿಯ ಹಳೇ ಕಲ್ಮಠದ ಬಲಭಾಗದಲ್ಲಿ ಕಲ್ಲುಮಸೀದಿ (ವೆಂಕಟರಮಣ ದೇವಾಲಯದ ಅಧಿಷ್ಠಾನ?) ಇದೆ. ಹೀಗೆ ಕನಕಗಿರಿಯ ನಾಯಕರುಗಳು ನೂರಾರು ದೇವಾಲಯಗಳನ್ನು ಕಟ್ಟಿಸಿ ದೈವೀಭಕ್ತಿ ಮೆರೆದದ್ದಲ್ಲದೆ ಕಲೆ ವಾಸ್ತುಶಿಲ್ಪಕ್ಕೆ ಸಾಕಷ್ಟು ಕೊಡಿಗೆ ನೀಡಿದ್ದಾರೆ.

೩.೩.೨. ಪುಷ್ಕರಣಿಗಳು, ಬಾವಿಗಳು ಮತ್ತು ಮದ್ದು ಸಂಗ್ರಹಾಲಯಗಳು

ಪುಷ್ಕರಣಿಗಳು: ಕನಕಯ್ಯ ಉಡಿಚನಾಯಕನು ಕನಕಗಿರಿಯಲ್ಲಿ ಎರಡು ಪುಷ್ಕರಣಿಗಳನ್ನು ಕಟ್ಟಿಸಿದನು. ಪುಷ್ಪ, ಜಯಂತಿ ಮತ್ತು ಗೋಪಿಕಾ ನದಿಗಳ ಸಮೀಪದಲ್ಲಿ ನರಸಿಂಹತೀರ್ಥವೆಂದು ಕರೆಯುವ ಪುಷ್ಕರಣಿಯನ್ನು ಮತ್ತು ಇದರ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಇನ್ನೊಂದು ಪುಷ್ಕರಣಿಯನ್ನು ಧಾರ್ಮಿಕ ಉತ್ಸವ ಕಾರ್ಯಕ್ರಮಗಳಿಗೆ ಇವುಗಳನ್ನು ಕಟ್ಟಿಸಿದನು. ಈ ನರಸಿಂಹ ತೀರ್ಥ ತಿರುಪತಿಯಲ್ಲಿರುವ ಪುಷ್ಕರಣಿಯನ್ನು ಹೋಲುತ್ತದೆ. ಇದು ೧೫ ಅಡಿಗಳಷ್ಟು ಆಳ ೩೪೦ ಅಡಿ ಉದ್ದ ಮತ್ತು ೨೦೦ ಅಡಿಗಳಷ್ಟು ಅಗಲವಾಗಿದೆ. ಈ ಪುಷ್ಕರಣಿಯನ್ನು ಕಲ್ಲುಗಳಿಂದ ನೆಲದ ಮಟ್ಟದಲ್ಲಿಯೇ ನಿರ್ಮಿಸಲಾಗಿದೆ. ಪಶ್ಚಿಮಾಭಿಮುಖವಾಗಿ ಈ ಪುಷ್ಕರಣಿಯನ್ನು ಪ್ರವೇಶಿಸಬಹುದು. ಮೆಟ್ಟಿಲುಗಳಂತೆ ಸುತ್ತಲೂ ಕಟ್ಟಲ್ಪಟ್ಟಿರುವ ಈ ಪುಷ್ಕರಣಿಯ ನಡುವೆ ಚೌಕಾಕರದ ಒಂದು ಅಧಿಷ್ಠಾನವನ್ನು, ಕಲ್ಲಿನಿಂದ ಕಟ್ಟಲಾಗಿದೆ. ಈ ಅಧಿಷ್ಠಾನದ ಮೇಲೆ ಮಂಟಪವನ್ನು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಕಟ್ಟಲಾಗಿದೆ. ಈ ಮಂಟಪವು ಪುಷ್ಕರಣಿಯ ಮೆರುಗನ್ನು ಹೆಚ್ಚಿಸಿದೆ. ಪುಷ್ಕರಣಿಯ ವಾಯುವ್ಯ ಮೂಲೆಯೊಳಗೆ ಗಂಗಾಪರಮೇಶ್ವರಿ ದೇವಾಲಯವನ್ನು ಕಟ್ಟಿಸಲಾಗಿದೆ. ಈ ಪುಷ್ಕರಣಿಯೊಳಗೆ ನದಿಗಳಿಂದ ನೀರು ಒಳಬರುವ ಮತ್ತು ಹೊರಹೋಗುವ ವ್ಯವಸ್ಥೆಯನ್ನು ಮಾಡಲಾಗಿದೆ. ಸ್ವಚ್ಛತೆಯ ಹಿನ್ನೆಲೆಯಲ್ಲಿ ಹೀಗೆ ನಿರ್ಮಿಸಿರಬಹುದು. ಈ ಪುಷ್ಕರಣಿಯನ್ನು ಧಾರ್ಮಿಕ ಉತ್ಸವ ಕಾರ್ಯಕ್ರಮಗಳಿಗಾಗಿ ನಿರ್ಮಿಸಲಾಗಿತ್ತು. ಕನಕರಾಯ ದೇವರ ತೆಪ್ಪೋತ್ಸವನ್ನು ಇಲ್ಲಿ ಈ ಹಿಂದೆ ನಡೆಸಲಾಗುತ್ತಿತ್ತೆಂದು ಹೇಳಲಾಗುವುದು. ಭಕ್ತರು ತಮ್ಮ ತಲೆಮಂಡಿಯನ್ನು ದೇವರಿಗೆ ಅರ್ಪಿಸಿದ ನಂತರ ಈ ಪುಷ್ಕರಣಿಯಲ್ಲಿ ಸ್ನಾನ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ (ಚಿಕ್ಕ ಹಳ್ಳಗಳು) ನೀರು ಇಲ್ಲದೇ ಇದ್ದುದರಿಂದ ಪುಷ್ಕರಣಿಯಲ್ಲೂ ನೀರಿಲ್ಲದೆ ತನ್ನ ಮೊದಲಿನ ಸೌಂದರ್ಯವನ್ನು ಕಳೆದುಕೊಂಡಿದೆ. ಆದರೆ ಪ್ರತಿವರ್ಷ ಜಾತ್ರೆಯ ಸಮಯದಲ್ಲಿ ಇಲ್ಲಿಯೇ ಭಕ್ತರ ತಲೆಮಂಡಿ ಕೊಡುವ ಕಾರ್ಯ ನಡೆಯುತ್ತದೆ. ಭಕ್ತರಿಗೆ ಬೇಕಾದ ನೀರಿನ ವ್ಯವಸ್ಥೆಯನ್ನು ದೇವಾಸ್ಥಾನ ಸಮಿತಿಯು ಮಾಡಿಕೊಡುತ್ತದೆ. ಕೆಲವರು ಈ ಪುಷ್ಕರಣಿಯನ್ನು 'ಗಜಕೊಂಡ' ಎಂದು ಕರೆಯುವರು. ರಾಜನು ಗಜವನ್ನೇರಿ ಈ ಕೊಂಡದೊಳಗೆ ಸುತ್ತುಹಾಕಿ ಮಧ್ಯದಲ್ಲಿರುವ ಮಂಟಪದಲ್ಲಿ ಕುಳಿತುಕೊಳ್ಳುತ್ತಿದ್ದನೆಂದು ಹೇಳುವರು. ಈ ಪುಷ್ಕರಣಿಯ ಪೂರ್ವದ ಮೇಲ್ಭಾಗದಲ್ಲಿ ದೇವರಿಲ್ಲದ ಅನೇಕ ಭಗ್ನಗೊಂಡ ದೇವಾಲಯಗಳಿವೆ. ಅದರಲ್ಲಿ ತಮ್ಮ ಎರಡು ಕೈ ಮೇಲೆತ್ತಿ ಜೋಡಿಸಿ ಕೈ ಮುಗಿದು ನಿಂತ ಸ್ತ್ರೀ ವಿಗ್ರಹಗಳಿವೆ. ಒಂದು ಸಾಲಿನ (ಸುತ್ತಲೂ) ಶಾಸನವಿದ್ದು ಅಕ್ಷರಗಳು ಅಸ್ಪಷ್ಟವಾಗಿ ಕಾಣುತ್ತವೆ. ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ ಈ ದೇವಾಲಯವು ಗರ್ಭಗೃಹ, ಸುಖನಾಸಿ ಮತ್ತು ಮುಖಮಂಟಪವನ್ನು ಹೊಂದಿದೆ. ಇದರ ಪಕ್ಕದಲ್ಲಿ ಶಿವಾಲಯವೊಂದು ಇದೆ. ಗರ್ಭಗೃಹದಲ್ಲಿ ಮೂರ್ತಿ ಇಲ್ಲ. ಅಧಿಷ್ಠಾನದಲ್ಲಿ ನಂದಿ, ಶಿವ ಶಿಲ್ಪಗಳಿವೆ. ದಕ್ಷಿಣದ ಪುಟ್ಟಗುಡಿಯಲ್ಲಿ ಶಿವಲಿಂಗವಿದೆ. ಪೂರ್ವಕ್ಕೆ ಚಿಗರಿಕಟ್ಟೆ ಇದೆ. ಉತ್ತರದಲ್ಲಿನ ಅನೇಕ ಮಂಟಪ, ದೇವಾಲಯಗಳು ಹಾಳಾಗಿ ನಿಂತಿವೆ. ಪುಷ್ಕರಣಿಯ ಪಶ್ಚಿಮಕ್ಕೆ ಇರುವ ಇನ್ನೊಂದು ಪುಷ್ಕರಣಿಯು ಸರಳವಾಗಿದ್ದು ಯಾವುದೇ ಆಕರ್ಷಣೆಯನ್ನು

ಹೊಂದಿರುವುದಿಲ್ಲ. ಈ ಪುಷ್ಕರಣಿಯ ಮೇಲ್ಭಾಗದಲ್ಲಿ ಪಶ್ಚಿಮಕ್ಕೆ ವೆಂಕಟರಮಣ ದೇವಾಲಯ ಎಂದು ಕರೆಯುವ ದೇವರಿಲ್ಲದ ದೇವಾಲಯವಿದೆ.

ಕಲಾತ್ಮಕ ಬಾವಿಗಳು: ಕನಕಗಿರಿಯಲ್ಲಿ ೭೦೧ ಬಾವಿಗಳು ಇದ್ದವೆಂದು ಹೇಳಲಾಗುತ್ತಿದೆ. ಯಾವುದೇ ಬೃಹತ್ ನದಿಗಳ ಸಂಪರ್ಕವನ್ನು ಕನಕಗಿರಿ ಹೊಂದಿಲ್ಲ. ಕೆರೆ, ಬಾವಿ, ಕಟ್ಟೆಗಳೇ ಈ ಪ್ರದೇಶದ ಜನರ ಜೀವನಾಡಿ. ಈ ಹಿನ್ನೆಲೆಯಲ್ಲಿ ಕನಕಗಿರಿ ನಾಯಕರು ಅನೇಕ ಕೆರೆಗಳನ್ನು, ಬಾವಿಗಳನ್ನು ಕಟ್ಟಿಸಿದರು. ಕೃಷಿ ಮತ್ತು ಜಾನುವಾರುಗಳಿಗೆ ಉಪಯೋಗ ಮತ್ತು ಜನರು ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಕೆರೆಗಳನ್ನು, ಬಾವಿಗಳನ್ನು ಕಟ್ಟಿಸುವಾಗ ಕಲೆಯನ್ನು ಮರೆಯಲಿಲ್ಲ ಈ ನಾಯಕರು. ಚಿನ್ನದೇವಿ ಕೆರೆ, ಲಕ್ಷ್ಮೀದೇವಿ ಕೆರೆ, ರಾಂಪುರ ಕೆರೆ, ಚಿಕ್ಕಸೂಳೆಕೆರೆ, ಕಾಟಾಪುರಕೆರೆ ಹೀಗೆ ಅನೇಕ ಕೆರೆಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಇಂತಹ ಕೆರೆಗಳು ಸಮೀಪದಲ್ಲಿ, ಇಲ್ಲವೆ ಹಳ್ಳಗಳ ಪಕ್ಕದಲ್ಲಿ ಸುಂದರ ಬಾವಿಗಳನ್ನು ಕನಕಗಿರಿ ನಾಯಕರು ಕಟ್ಟಿಸಿದರು. ಅಂತಹ ಕಲಾತ್ಮಕ ಬಾವಿಗಳಲ್ಲಿ ಪ್ರಮುಖವಾದವುಗಳೆಂದರೆ ವೆಂಕಟಪತಿಬಾವಿ, ಅಚ್ಚಮ್ಮಬಾವಿ, ಚಿಕ್ಕಕನಕಪ್ಪನಬಾವಿ, ಮಹಂತರಮಠದಬಾವಿ, ಕನಕರಾಯನಬಾವಿ, ಜಕ್ಕಮ್ಮನಬಾವಿ, ತವರಿನಬಾವಿ, ರಾಮತಿಮ್ಮಪ್ಪನಬಾವಿ ಮುಂತಾದವುಗಳು.

ವೆಂಕಟಪತಿ ಬಾವಿ: ಕರ್ನಾಟಕದ ಅಪರೂಪದ ಬಾವಿಗಳಲ್ಲಿ ಕನಕಗಿರಿಯ ವೆಂಕಟಪತಿ ಬಾವಿಯೂ ಒಂದು. ಈ ಬಾವಿಯನ್ನು ಒಂದನೇ ಕನಕಪ್ಪ ಉಡಿಚನಾಯಕನ ಸಹೋದರ ವೆಂಕಟಪ್ಪನಾಯಕನು ಕ್ರಿ.ಶ. ೧೫೮೬ರಲ್ಲಿ ಕಟ್ಟಿಸಿದನು. ಈ ಬಾವಿಯ ನಿರ್ಮಾಣದ ಅಂದಿನ ವೆಚ್ಚ ಒಂದು ಲಕ್ಷ ವರಹಗಳು ಮಾತ್ರ. ತನ್ನ ಸಹೋದರನು ಅನೇಕ ದೇವಾಲಯಗಳನ್ನು, ಪುಷ್ಕರಣಿಗಳನ್ನು ಕಟ್ಟಿಸಿದ್ದನ್ನು ನೋಡಿದ ಇವನು ತಾನೂ ಏನಾದರೊಂದು ನಿರ್ಮಿಸಬೇಕೆಂದು ಯೋಚಿಸಿದನು. ಅವನ ಯೋಚನೆಯ ಫಲವೇ ಈ ಅದ್ಭುತ ಕೆತ್ತನೆಯ, ವಾಸ್ತುವಿನ್ಯಾಸದ ವೆಂಕಟಪತಿಬಾವಿ. ಅರಮನೆಯವರಿಗಾಗಿಯೇ ನಿರ್ಮಾಣಗೊಂಡ ಈ ಬಾವಿಯನ್ನು 'ರಾಣಿ ಬಾವಿ' ಎಂದು ಜನಪದರು ಕರೆಯುವುದು ವಾಡಿಕೆ. ಬಾವಿಯಿಂದ ನೀರನ್ನು ಮೇಲೆತ್ತಿ ಕಾಲುವೆ ಮೂಲಕ ಹೂದೋಟಕ್ಕೆ ನೀರನ್ನು ಹರಿಸುವ ವ್ಯವಸ್ಥೆ ಮಾಡಲಾಗಿತ್ತು. ಗಾರೆ ಮತ್ತು ಕಲ್ಲುಹರಳುಗಳಿಂದ ಮಾಡಿದ ಈ ಕಾಲುವೆಯನ್ನು ಇಂದಿಗೂ ಕಾಣಬಹುದು. ಏತದಿಂದ ನೀರನ್ನು ಮೇಲೆತ್ತುತಿದ್ದರೆಂದು ತಿಳಿದುಬರುತ್ತದೆ. ನೆಲದ ಮಟ್ಟದಲ್ಲಿಯೇ ಇರುವ ಈ ಬಾವಿಯು ೩೦ ಅಡಿಗೂ ಹೆಚ್ಚು ಆಳವನ್ನು ಹೊಂದಿದ್ದು, ಸುತ್ತಲೂ ಸೈಜು ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ಒಂದು ದೃಷ್ಟಿಯಲ್ಲಿ ಈ ಬಾವಿಯು ದೇವಾಲಯವೂ ಹೌದು. ಏಕೆಂದರೆ ವಿಷ್ಣು, ಶಿವ ಮತ್ತು ಬ್ರಹ್ಮ ದೇವರ ಗುಡಿಗಳು ಈ ಬಾವಿಯಲ್ಲಿ ಇವೆ. ಸಂಗೀತದ ಸಪ್ತಸ್ವರಗಳನ್ನು ಹೊರಡಿಸುವ ಕಂಬಗಳೂ ಇಲ್ಲುಂಟು. ಪೂರ್ವದ ಬಾಲ್ಕನಿ ಕಟ್ಟಡವು ಅತ್ಯಂತ ಸುಂದರವಾಗಿದೆ. ಕನಕಾಚಲದೇವಾಲಯದ ವಾಸ್ತುವಿನಂತೆ ಈ ಬಾವಿಯು ಇದೆ. ಈ ದೇವಾಲಯದ ಮಧ್ಯದಲ್ಲಿ ವೆಂಕಟರಮಣ (ವಿಷ್ಣು) ಎಡಕ್ಕೆ ಬ್ರಹ್ಮ ಮತ್ತು ಬಲಕ್ಕೆ ಈಶ್ವರ ದೇವಾಲಯಗಳಿದ್ದಂತೆ ಈ ಬಾವಿಯಲ್ಲಿಯೂ ಕಾಣಬಹುದು. ಆದರೆ ಈ ದೇವಾಲಯಗಳಲ್ಲಿ ಮೂರ್ತಿಗಳೇ

ಇಲ್ಲ. ಈಶ್ವರ ದೇವಾಲಯದಲ್ಲಿ ಮಾತ್ರ ಭಗ್ನಗೊಂಡ ಲಿಂಗವಿದೆ. ಈ ದೇವಾಲಯಗಳ ಮುಂಭಾಗವೇ ವೆಂಕಟಪತಿ ಬಾವಿ. ವಿಷ್ಣುದೇವಾಲಯದಲ್ಲಿ ಯಾವುದೇ ಮೂರ್ತಿ ಇಲ್ಲ. ಈ ದೇವಾಲಯದ ಮುಖಮಂಟಪದ ಕಂಬಗಳ ಸಾಲು ಭಿನ್ನ ಕೆತ್ತನೆಯಿಂದ ನೋಡುಗರ ಗಮನ ಸೆಳೆಯುತ್ತವೆ. ಈ ದೇವಾಲಯದ ಮುಂದುಗಡೆ ಅಂಗಳವಿದೆ ಯಾವುದೇ ಮೇಲಛತ್ತು ಇಲ್ಲ. ಸ್ವಲ್ಪ ಮುಂದೆ ಹೋದಾಗ ಹಿಂದೂ-ಮುಸ್ಲಿಂ ಶೈಲಿಯ ಪ್ರವೇಶ ಕಮಾನು ಕಟ್ಟಡ ಬರುತ್ತದೆ. ಈ ಪ್ರವೇಶದ ಮೂಲಕ ಮೆಟ್ಟಿಲುಗಳನ್ನು ಇಳಿಯುತ್ತಾ ಹೋದಾಗ ಬಾವಿಯ ಪ್ರವೇಶವಾಗುತ್ತದೆ. ಮೆಟ್ಟಿಲುಗಳಿಂದ ರಚನೆಯಾದ ಬಾವಿಯು ಇಲ್ಲಿ ತಳಕ್ಕೆ ಬಂದಂತೆ ಕಿರಿದಾಗುತ್ತಾ ಬಂದಿದೆ. ಚೌಕಾಕಾರವಿರುವ ಈ ಬಾವಿಯು ಸುತ್ತಲೂ ವಿಜಯನಗರ ಶೈಲಿಯ ಸಂಯುಕ್ತ ಕಂಬಗಳಿಂದ ಕೂಡಿದ ಪ್ರದಕ್ಷಿಣೆ ಮಂಟಪವನ್ನು ಹೊಂದಿದೆ.

ಈ ಬಾವಿಯ ಮುಖ್ಯ ಪ್ರವೇಶ ಉತ್ತರಾಭಿಮುಖವಾಗಿ ಬಾವಿಯ ನೈರುತ್ಯ ಮೂಲೆಯಿಂದ ಆಗುತ್ತದೆ. ಈ ಬಾವಿಯ ಈಶಾನ್ಯ, ವಾಯುವ್ಯ ಮತ್ತು ಆಗ್ನೇಯ ಮೂಲೆಗಳಲ್ಲಿ L ಆಕಾರದ ಚಿಕ್ಕ ಪ್ರವೇಶಗಳಿವೆ. ಈ ಪ್ರವೇಶಗಳಿಗೆ ಛಾವಣಿ ಇದೆ. ಬಾಲ್ಕನಿ ಕಟ್ಟಡ ಪ್ರವೇಶವನ್ನು ಉತ್ತರಾಭಿಮುಖವಾಗಿ ಮತ್ತು ದಕ್ಷಿಣಾಭಿಮುಖವಾಗಿ ಎರಡೂ ಕಡೆಯಿಂದ ಮಾಡಬಹುದು. ಈ ಕಟ್ಟಡದ ಮೇಲೆಯೇ ಏತದ ವ್ಯವಸ್ಥೆಯನ್ನು ಮಾಡಿದ್ದಾರೆ. ಬಾವಿಯ ಮುಖ್ಯ ಪ್ರವೇಶದ ಎಡಗೋಡೆಯ ಮೇಲಿರುವ ಹತ್ತು ಭುಜಗಳುಳ್ಳ ಗಜಸಂಹಾರ ಶಿವನ ಶಿಲ್ಪ ಮತ್ತು ಎರಡು ನಾಗಶಿಲ್ಪಗಳು ನೋಡುಗರ ಗಮನ ಸೆಳೆಯುತ್ತವೆ. ಆನೆಯ ರೂಪದ ಗಜಾಸುರನ ಹೊಟ್ಟೆಯನ್ನು ಸೀಳಿ ಶಿವನು ವಿವಿಧ ಆಯುಧಗಳನ್ನು ಹಿಡಿದು ನೃತ್ಯ ಮಾಡುವ ಈ ಶಿಲ್ಪ ಬಾವಿಯ ಕಲಾವಂತಿಕೆಯನ್ನು ಹೆಚ್ಚಿಸಿದೆ. ಬಾವಿಯ ಪಶ್ಚಿಮದ ಗುಡಿಯ ಮುಂಬಾಗದ ಕಂಬಗಳು ಕೆಳಗೆ ಅಧಿಷ್ಠಾನದಲ್ಲಿ ಸಿಂಹ, ನೃತ್ಯ ಮತ್ತು ಸಂಗೀತಗಾರರ ಶಿಲ್ಪಗಳಿವೆ. ಇಲ್ಲಿನ ಏಳು ಕಂಬಗಳು ವಿಭಿನ್ನ ಕೆತ್ತನೆಯಿಂದ ಗಮನ ಸೆಳೆಯುತ್ತವೆ. ಮೊದಲನೆ ಕಂಬದಲ್ಲಿ ಗರುಡ, ನೃತ್ಯ ಮಾಡುವ ಮಾನವ ಶಿಲ್ಪವನ್ನು, ಎರಡನೇ ಕಂಬದಲ್ಲಿ ವ್ಯಾಳಿ ಮೇಲೇರಿದ ಖಡ್ಗ ಮತ್ತು ಗುರಾಣಿ ಹಿಡಿದ ಸವಾರ, ಅಧಿಷ್ಠಾನದಲ್ಲಿ ಇಬ್ಬರು ಸಂಗೀತಗಾರರ ಶಿಲ್ಪಗಳು, ಮೂರನೇ ಕಂಬದಲ್ಲಿ ಹಿಂಗಾಲಿನ ಮೇಲೆ ನಿಂತ ಕುದುರೆಯನ್ನು ಏರಿದ ಸವಾರ, ಅಧಿಷ್ಠಾನದಲ್ಲಿ ಸಂಗೀತಗಾರ ಮತ್ತು ನೃತ್ಯಗಾರ್ತಿ, ನಾಲ್ಕನೇ ಕಂಬದಲ್ಲಿ ಖಡ್ಗವನ್ನು ಹಿಡಿದು ಗಡ್ಡಧಾರಿಯನ್ನು ಕುದುರೆ ತನ್ನೆರಡು ಮುಂಗಾಲಿನಿಂದ ತುಳಿಯುವ ಮತ್ತು ಅಧಿಷ್ಠಾನದಲ್ಲಿ ನೃತ್ಯಗಾರ್ತಿ ಶಿಲ್ಪ, ಐದನೇ ಕಂಬದಲ್ಲಿ ವ್ಯಾಳಿಯ ಮೇಲಿನ ಸವಾರ ಖಡ್ಗವನ್ನು ಹಿಡಿದಿರುವ, ಆರನೇ ಕಂಬದಲ್ಲಿನ ಮಜ್ಜಿಗೆ ಕಡೆಯುವ ಸ್ತ್ರೀ ಶಿಲ್ಪ, ಏಳನೇ ಕಂಬದಲ್ಲಿ ರಾಕ್ಷಸ ಸಂಹಾರ, ಆಂಜನೇಯ ಮುಂತಾದ ಶಿಲ್ಪಗಳು ಗಮನ ಸೆಳೆಯುತ್ತವೆ. ಉತ್ತರ ಮತ್ತು ದಕ್ಷಿಣಕ್ಕೆ ಇರುವ ಗುಡಿಗಳ ಬಲ ಮತ್ತು ಎಡಭಾಗದಲ್ಲಿರುವ ಕಂಬಗಳಲ್ಲಿ ಸಪ್ತ ಸ್ವರಗಳು ಹೊರಡುತ್ತವೆಂದು ಇಲ್ಲಿಗೆ ಬಂದವರು ಪರೀಕ್ಷಿಸುತ್ತಾರೆ. ಆದರೆ ವಿಜಯವಿಠ್ಠಲ ದೇವಾಲಯದ ಕಂಬಗಳಷ್ಟು ಇವು ಸ್ಪಷ್ಟ ಸ್ವರಗಳನ್ನು ಹೊರಡಿಸಲಾರವು ಎಂಬುದು ಅವರ ಕೊನೆಯ ಮಾತು. ಪೂರ್ವದ ಬಾಲ್ಕನಿ ಕಟ್ಟಡವು ಮುಂದೆ ಚಾಚಿದ ಜಗಲಿಯ ಮೇಲಿರುವ ಕಂಬಗಳ ಮೇಲೆ ರಚನೆಗೊಂಡಿದೆ. ಈ ಕಂಬಗಳೆರಡರಲ್ಲಿ ಸಿಂಹದ

ಮೇಲೆ ಖಡ್ಗಧಾರಿ ಸವಾರ ಕುಳಿತಿದ್ದಾನೆ. ಸಿಂಹಗಳು ಆನೆಯ ಮೇಲೆ ಹಿಂಗಾಲುಗಳನ್ನಿಟ್ಟು ನಿಂತಿವೆ. ಈ ಸಿಂಹಗಳ ಬಾಯಿಯಲ್ಲಿ ಕಲ್ಲು ಗುಂಡುಗಳಿದ್ದವು. ಅವುಗಳನ್ನು ಕೈಯಿಂದ ತಿರುಗಿಸಬಹುದಾಗಿತ್ತು. ಆದರೆ ನಿಧಿಚೋರರ ಕೃತ್ಯದಿಂದ ಆ ಗುಂಡುಗಳು ಹಾಳಾಗಿಹೋಗಿವೆ. ಈ ಬಾಲ್ಕನಿ ಕಟ್ಟಡವು ಕಮಾನುಗಳಿಂದ ಮಿಥುನ ಶಿಲ್ಪಗಳಿಂದ ಗಮನ ಸೆಳೆಯುತ್ತದೆ. ಕುಸ್ತಿ ಆಡುವ, ನೃತ್ಯ, ಸಂಗೀತಗಾರರ, ಗಿಳಿ, ಹೂವು, ಎಲೆಗಳ ಶಿಲ್ಪವೂ ಇಲ್ಲುಂಟು. ಒಳಮಾಳಿಗೆಯಲ್ಲಿ ವಿವಿಧ ರಂಗವಲ್ಲಿಗಳು ಅಲಂಕಾರವಾಗಿವೆ.

ಅಚ್ಚಮ್ಮನ ಬಾವಿ: ಅಚ್ಚಮ್ಮಬಾವಿಯನ್ನು ಮುಮ್ಮಡಿ ಉಡಿಚನಾಯಕನ ರಾಣಿ ಅಚ್ಚಮ್ಮದೇವಿ ಕಟ್ಟಿಸಿದಳು. ಲಕ್ಷ್ಮೀದೇವಿ ಕೆರೆಯ ಅಂಗಳದಲ್ಲಿರುವ ಈ ಬಾವಿಯು ೫೦ ಅಡಿ ಉದ್ದ ೫೦ ಅಡಿ ಅಗಲವನ್ನು ಹೊಂದಿದೆ. ೩೦ ಅಡಿಗಳಷ್ಟು ಆಳವಾಗಿದೆ. ಬಾವಿಯು ಚೌಕಾಕಾರವಾಗಿದ್ದು ೩೦ ಅಡಿಗಳಷ್ಟು ಉದ್ದವಾದ ಪ್ರವೇಶವನ್ನು ಪೂರ್ವಭಾಗದಲ್ಲಿ ಹೊಂದಿದೆ. ಮೆಟ್ಟಿಲುಗಳ ಮೂಲಕ ಬಾವಿಯನ್ನು ಪ್ರವೇಶಿಸುವಾಗ ಎಡಕ್ಕೆ ಮತ್ತು ಬಲಕ್ಕೆ ಎರಡು ಪುಟ್ಟ ಗುಡಿಗಳು ಕಂಡುಬರುತ್ತವೆ. ಬಲಕ್ಕೆ ಇರುವ ಗುಡಿಯೊಳಗೆ ಆದಿಶೇಷಶಯನನಾದ ಮಹಾವಿಷ್ಣು ವಿಗ್ರಹವು ಗಮನ ಸೆಳೆಯುತ್ತದೆ. ಇದು ಕನಕಾಚಲ ದೇವಾಲಯದ ಪ್ರವೇಶ ಬಾಗಿಲ ತೋರಣದ ಮೇಲಿನ ಶಿಲ್ಪದಂತಿದೆ. ಪ್ರವೇಶ ಗೋಡೆಯಲ್ಲಿರುವ ೧೬ ದಳದ ಕಮಲ, ಗಜಲಕ್ಷ್ಮೀ, ನಾಗಶಿಲ್ಪಗಳು, ಮಜ್ಜಿಗೆ ಕಡೆಯುವ ಸ್ತ್ರೀ, ಕಾಮಧೇನು (ಪುರುಷ ಮೃಗ) ತನ್ನ ಕೈಯಲ್ಲಿ ಗಂಟೆ ಹಿಡಿದು ಶಿವಲಿಂಗಕ್ಕೆ ಮಂಗಳಾರತಿ ಮಾಡುವ ಹಂಸ, ಶಂಖ, ನಾಮ, ಚಕ್ರ, ಜಗಳ ನಿರತ ಗಜಗಳು, ತಳಕು, ಆಮೆ, ಮಾನವ ಮಿಥುನ, ಮೀನ ಮುಂತಾದ ಶಿಲ್ಪಗಳು ಬಾವಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಈ ಬಾವಿಯೂ ಏತ ಕಟ್ಟಡವನ್ನು ಹೊಂದಿದೆ.

ಚಿಕ್ಕಪ್ಪನ ಬಾವಿ: ಚಿಕ್ಕಪ್ಪನ ಬಾವಿ ಚಿಕ್ಕಕನಕಪ್ಪನ ಬಾವಿಯನ್ನು ಚಿಕ್ಕ ಕನಕಪ್ಪನಾಯಕನು ಕಟ್ಟಿಸಿದನು. ಚೌಕಾಕಾರದಲ್ಲಿರುವ ಈ ಬಾವಿಯ ಏತ ಕಟ್ಟಡವು ಸುಂದರ ಕೆತ್ತನೆಗಳಿಂದ ಕೂಡಿದೆ. ಎರಡು ಕಂಬಗಳ ಮೇಲೆ ಏತ ಕಟ್ಟಡ ನಿಂತಿದೆ. ಈ ಭಾಗದ ಗೋಡೆಯಲ್ಲಿ ವಿಘ್ನೇಶ್ವರ, ನಂದಿ, ಈಶ್ವರ, ಗಜಲಕ್ಷ್ಮಿ ಶಿಲ್ಪಗಳನ್ನು ಕಾಣಬಹುದು. ಕುಪ್ಪಳಿಸುವ ಸಿಂಹ ಶಿಲ್ಪಗಳು ಈ ಬಾವಿಯಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಇಂತಹ ೧೨ ಶಿಲ್ಪಗಳು ಈ ಬಾವಿಯಲ್ಲಿವೆ. ಈ ಬಾವಿಯಲ್ಲಿದ್ದಂತೆ ಈಶ್ವರನಂದಿ ವಿಘ್ನೇಶ್ವರ ಮೂರ್ತಿಗಳು ದೆವ್ವದ ಗುಡಿ ಬಾವಿ ಎಂದು ಕರೆಯುವ ಬಾವಿಯಲ್ಲಿವೆ. ಹಾಗಾಗಿ ಈ ಬಾವಿಯನ್ನು ಈ ಚಿಕ್ಕಕನಕಪ್ಪನೇ ಕಟ್ಟಿಸಿರಬೇಕು. ಈ ಬಾವಿಯ ಪ್ರವೇಶದ ಬಲಭಾಗದಲ್ಲಿ ಚಿಕ್ಕಕನಕಪ್ಪನ ಗುಡಿ ಇದೆ. ಈ ಗುಡಿಯಲ್ಲಿ ಏಕ ಶಿಲೆಯಲ್ಲಿ ಮಾಡಲಾದ ಚಿಕ್ಕ ಕನಕಪ್ಪನ ಕಪ್ಪು ಶಿಲೆಯ ವಿಗ್ರಹವಿದೆ. ಈ ದೇವಾಲಯದ ಕಂಬಗಳಲ್ಲಿ ಮಿಥುನ, ಶಿಲ್ಪಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ.

ಮಹಂತರ ಮಠದ ಬಾವಿ: ಕನಕಗಿರಿಯ ಮೌನೇಶ್ವರ ಮಠವನ್ನು ಈ ಹಿಂದೆ ಮಹಂತರ ಮಠ ಎಂದು ಕರೆಯಲಾಗುತ್ತಿತ್ತು. ಕನಕಗಿರಿಗೆ ಬಂದಂತಹ ಶರಣರ, ಸನ್ಯಾಸಿಗಳ, ಸಾಧುಗಳ ಆಶ್ರಯಕ್ಕೆ ಈ

ಸ್ಥಳವನ್ನು ಕೊಡಲಾಗುತ್ತಿತ್ತು. ಹಾಗಾಗಿ ಅದನ್ನು ಮಹಂತರ ಮಠ ಎಂದು ಕರೆಯಲಾಯಿತು. ಈ ಮಠವು ಒಂದು ಕಾಲಕ್ಕೆ ವೈಷ್ಣವ ದೇವಾಲಯವಾಗಿತ್ತು. ಮಠದ ಪ್ರವೇಶ ಮತ್ತು ಬಾವಿಯ ಪ್ರವೇಶದಲ್ಲಿ ಶಂಕ, ನಾಮ, ಚಕ್ರ ಶಿಲ್ಪಗಳನ್ನು ಈಗಲೂ ನೋಡಬಹುದು. ಮೌನೇಶ್ವರರು ತಿಂಥಣಿಯಿಂದ ಇಲ್ಲಿಗೆ ಬಂದು ಬಹಳ ದಿನಗಳ ಕಾಲ ನೆಲೆಸಿದ್ದರೆಂದೂ, ಹಾಗಾಗಿ ಅಂದಿನಿಂದ ಈ ಸ್ಥಳವು ಮೌನೇಶ್ವರ ಮಠವಾಯಿತೆಂದು ಹೇಳಲಾಗುತ್ತಿದೆ. ಮಹಂತರ ಮಠದ ಬಾವಿಯು ಮಠದ ಹೊರಭಾಗದಲ್ಲಿದ್ದು ಪ್ರವೇಶವು ಮಠದ ಒಳಭಾಗದಲ್ಲಿದೆ. ಈ ಬಾವಿಯನ್ನು ಮೂರು ಹೆಸರಿನಿಂದ ಕರೆಯಲಾಗುತ್ತಿದೆ. ೧. ಹೊಕ್ಕು ತುಂಬೋಬಾವಿ, ೨. ಗಿಂಡಿಬಾವಿ ೩. ಸೇದಬಾವಿ. ಮಠದ ಒಳಗಿನಿಂದ ಪೂಜೆಗಾಗಿ ಬಾವಿಯೊಳಗೆ ಹೊಕ್ಕು (ಪ್ರವೇಶಿಸಿ) ನೀರು ತುಂಬುವುದರಿಂದ ಹೊಕ್ಕು ತುಂಬೋ ಬಾವಿಯೆಂದು, ಮಠದ ಹೊರಗಿನಿಂದ ಸಾರ್ವಜನಿಕರು ನೀರನ್ನು ಸೇದಿಕೊಳ್ಳುವುದರಿಂದ ಸೇದಬಾವಿಯೆಂದು ಮತ್ತು ಮಠದ ಮೇಲಿನ ಅಂತಸ್ತಿನಿಂದ ಗಿಂಡಿಯನ್ನು ಬಿಟ್ಟು ನೀರನ್ನು ಸೇದಿಕೊಳ್ಳುವುದರಿಂದ ಗಿಂಡಿಬಾವಿಯೆಂದು ಕರೆಯುತ್ತಾರೆ. ಬಾವಿಯ ಪ್ರವೇಶದ ಗೋಡೆಗಳಲ್ಲಿ ಮುಂಗಸಿ ಹಾವನ್ನು ಹಿಡಿಯುತ್ತಿರುವ, ನಾಗ ಮಿಥುನ, ಹುಲಿಯನ್ನು ಭರ್ಚಿಯಿಂದ ತಿವಿದ ವೀರ, ಆಮೆ, ತಪಸ್ಸುನಿರತ ವ್ಯಕ್ತಿ ಮುಂತಾದ ಶಿಲ್ಪಗಳು ಕಂಡುಬರುತ್ತವೆ. ಈ ಮಠದೊಳಗೆ ಗರುಡಗಂಬ, ಶಿವಲಿಂಗ, ಹಾಳಾದ ಗುಡಿಗಳಿವೆ.

ಇತರ ಬಾವಿಗಳು: ಲಕ್ಷ್ಮೀ ಗುಡ್ಡದ ಉತ್ತರಭಾಗದ ಇಳಿಜಾರಿನಲ್ಲಿರುವ ಕನಕರಾಯನ ಬಾವಿಯನ್ನು ಮುಮ್ಮಡಿ ಉಡಿಚನಾಯಕನ ರಾಣಿ ಕನಕಮ್ಮ ರಾಣಿಯು ಕ್ರಿ.ಶ. ೧೬೬೮ರಲ್ಲಿ ಕಟ್ಟಿಸಿದಳು. ಈ ಬಾವಿಯು ೪೦ ಅಡಿ ಉದ್ದ ೪೦ ಅಡಿ ಅಗಲವನ್ನು ಹೊಂದಿದೆ. ೨೫ ಅಡಿ ಆಳವನ್ನು ಹೊಂದಿದೆ. ಶಂಕ, ನಾಮ, ಚಕ್ರ, ಮೀನು, ಆಮೆ ಮುಂತಾದ ಶಿಲ್ಪಗಳನ್ನು ಬಾವಿಯಲ್ಲಿ ಕೆತ್ತಲಾಗಿದೆ. ಈ ಬಾವಿಯ ಏತಕಟ್ಟಡದ ಭಾಗವು ಆಕರ್ಷಣೀಯವಾಗಿದೆ. ಬಾವಿಯ ಮೇಲ್ಭಾಗದ ಪಶ್ಚಿಮದಲ್ಲಿ ಒಂದು ಹಾಳಾದ ದೇವಾಲಯವಿದೆ. ಅದೇ ರೀತಿಯಲ್ಲಿ ಜಕ್ಕಮ್ಮನ ಬಾವಿ, ದೆವ್ವದ ಗುಡಿ ಬಾವಿ ಗರುಡನ ಬಾವಿ, ಹನುಮಂತನ ಬಾವಿ, ತವರಿನ ಬಾವಿ, ರಾಮತಿಮ್ಮಪ್ಪನ ಬಾವಿಗಳು ಕಲೆ ಮತ್ತು ವಾಸ್ತು ದೃಷ್ಟಿಯಲ್ಲಿ ಗಮನ ಸೆಳೆಯುತ್ತವೆ.

ಮದ್ದಿನ ಸಂಗ್ರಹಾಲಯಗಳು :

ಹೇಮಗುಡ್ಡ (ಹೇಮಗಿರಿ): ಹೇಮಗುಡ್ಡ ಗಂಗಾವತಿ ತಾಲೂಕಿನ ಒಂದು ಐತಿಹಾಸಿಕ ಪ್ರಮುಖ ಸ್ಥಳವಾಗಿದೆ. ಗಂಗಾವತಿ ತಾಲೂಕಿನ ಏಳು ಗುಡ್ಡ ಪರಿಸರದಲ್ಲಿ ಈ ಪ್ರದೇಶವೂ ಒಂದು. ಅನೇಕ ಪ್ರಾಗೈತಿಹಾಸಿಕ ಕುರುಹುಗಳು ಈ ಪ್ರದೇಶದ ಸುತ್ತಮುತ್ತಲಿನಲ್ಲಿ ದೊರೆತಿವೆ. ಗಂಡುಗಲಿ ಕುಮಾರರಾಮನ ರಾಜಧಾನಿ ಕುಮ್ಮಟದುರ್ಗಕ್ಕೆ ತೀರಾ ಹತ್ತಿರದಲ್ಲಿರುವ ಈ ಹೇಮಗುಡ್ಡವನ್ನು ಜನರು ಎಮ್ಮೆಗುಡ್ಡವೆಂದು ಕರೆಯುತ್ತಾರೆ. ಹೇಮಗಿರಿಯೆಂದೂ ಇದನ್ನು ಕರೆಯಲಾಗಿದೆ. ಕನಕಗಿರಿಯ ಮೂಲಪುರುಷ ಪರಸಪ್ಪ ಉಡಿಚನಾಯಕನು ಈ ಸ್ಥಳದಿಂದಲೇ ಬಂದವನು ಎಂದು ಹೇಳಲಾಗುತ್ತದೆ. ಅವರ ಕಾಲದಲ್ಲಿ ಇದು ಎರಡನೇ ರಾಜಧಾನಿಯಾಗಿತ್ತೆಂದೂ ಗೊತ್ತಾಗುತ್ತದೆ.

ಹೇಮಗುಡ್ಡ ಕನಕಗಿರಿ ನಾಯಕರ ಕಾಲದಲ್ಲಿ ಕೂಟಯುದ್ಧದ ಕೇಂದ್ರವಾಗಿತ್ತು. ನವಾಬ ಉಡಿಚನಾಯಕನು ಹೇಮಗುಡ್ಡದಲ್ಲಿ ಕೋಟೆಯನ್ನು, ಲಕ್ಷ್ಮೀನರಸಿಂಹ ದೇವಾಲಯವನ್ನು (ಕನಕರಾಯ ದೇವಾಲಯವೆಂದೇ ಹೆಸರು), ಈಶ್ವರ ದೇವಾಲಯವನ್ನು, ದುರ್ಗಾ, ಆಂಜನೇಯ ದೇವಾಲಯಗಳನ್ನು ಮತ್ತು ಅರಮನೆಯನ್ನು (ಮದ್ದಿನ ಮನೆ) ಕಟ್ಟಿಸಿದನೆಂದು ತಿಳಿದುಬರುತ್ತದೆ. ಹೇಮಗುಡ್ಡ ಕೋಟೆಯ ಒಂದು ಗಿರಿದುರ್ಗವಾಗಿದೆ; ಪೂರ್ವಭಾಗದ ಕೋಟೆಯು ಕಲ್ಲಿನಿಂದ ಕಟ್ಟಲ್ಪಟ್ಟರೆ ಕೋಟೆಯ ಉಳಿದ ಭಾಗ ಬೆಟ್ಟಗುಡ್ಡಗಳೇ ನಿರ್ಮಿಸಿವೆ. ಕೋಟೆಯ ಮುಖ್ಯ ಪ್ರವೇಶ ಪೂರ್ವದಲ್ಲಿದೆ. ಪಶ್ಚಿಮದ ಗುಡ್ಡಗಳೆರಡರ ಮೇಲಿನ ನಡುವಿನ ಸಂದಿನಲ್ಲಿ ಇನ್ನೊಂದು ಪ್ರವೇಶವಿದೆ. ಕೋಟೆಯೊಳಗೆ ಅರಮನೆ, ದುರ್ಗಾ ದೇವಾಲಯ, ಹನುಮಂತ, ಕನಕರಾಯ, ಈಶ್ವರ ದೇವಾಲಯಗಳಿವೆ. ಇಲ್ಲಿನ ಗುಂಡೊಂದರ ಮೇಲೆ 'ಅಚ್ಚುತಾಪುರದ ಸುಲಿಪ ಬಸವಣ್ಣನ ಮಾನ' ಎಂದು ಬರೆದ ಒಂದು ಸಾಲಿನ ಶಾಸನವಿದೆ. ಈ ಶಾಸನದ ಪೂರ್ಣ ಮಾಹಿತಿಯು ಗೊತ್ತಾಗುವುದಿಲ್ಲ. ಅರಮನೆಯ ಕಟ್ಟಡವು ಶೇ. ೯೦ರಷ್ಟು ಹಾಳಾಗಿದೆ. ಇದೊಂದು ಮದ್ದುಗುಂಡುಗಳ ಉಗ್ರಾಣವಾಗಿತ್ತೆಂದು ಕೆಲವರು ಅಭಿಪ್ರಾಯ. ಯುದ್ಧದ ಸಂದರ್ಭದಲ್ಲಿ ಮದ್ದುಗುಂಡುಗಳು ಸಿಡಿದು ಇದು ಹಾಳಾಗಿದೆ ಎಂಬುದು ಅವರ ಮುಂದುವರಿದ ವಾದ. ಪೂರ್ವಭಾಗದ ಈ ಕಟ್ಟಡ ಕಮಾನುಗಳಿಂದ ಕೂಡಿದ್ದು, ಆಕರ್ಷಣೀಯವಾಗಿ ಕಾಣುತ್ತದೆ. ಎರಡು ಅಂತಸ್ತು ಹೊಂದಿದ ಸುಳಿವು ಈ ಕಟ್ಟಡದಲ್ಲಿ ಕಾಣಸುತ್ತದೆ. ಮತ್ತು ಗುಪ್ತ ಅಡಗು ಕೋಣೆಗಳಿರುವುದು ಕಾಣಸುತ್ತದೆ. ಒಂದು ದೃಷ್ಟಿಯಲ್ಲಿ ಇದು ಆಪತ್ತಿನ ವೇಳೆಯಲ್ಲಿ ಅಡಗಿಕೊಳ್ಳಲಿಕ್ಕೆಂದೇ ಮಾಡಿಸಿದ್ದರೆಂದು ತಿಳಿದುಬರುವುದು. ಹಿರೇನಾಯಕನು ತಾನು ಯುದ್ಧದಲ್ಲಿ ಸೋತಾಗ ತನ್ನ ಪರಿವಾರವನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವುದು, ತಿಂಗಳುಗಟ್ಟಲೇ ವೈರಿಗಳನ್ನು ಇಲ್ಲಿಂದ ದೂರವಿಟ್ಟು ಹೋರಾಡಿದ್ದುದನ್ನು ನೋಡಿದಾಗ ಈ ಸ್ಥಳವು ಯುದ್ಧಕ್ಕೆ ಆಯಕಟ್ಟಿನ ಸ್ಥಳವಾಗಿತ್ತು. ಈ ಸ್ಥಳವು ಕನಕಗಿರಿ ನಾಯಕರ ಕೂಟ ಯುದ್ಧದ ಕೇಂದ್ರವಾಗಿತ್ತು ಎಂದು ತಿಳಿಯುತ್ತದೆ. ಕನಕಗಿರಿ ನಾಯಕರ ಸಂಪತ್ತನ್ನೆ ಇಲ್ಲಿಯೇ ಇಟ್ಟಿದ್ದರು ಎಂಬ ಮಾತುಗಳೂ ಕೇಳಿಬರುತ್ತವೆ.

ಅರಮನೆಯ ಎಡಭಾಗದಲ್ಲಿ ಕನಕರಾಯ ದೇವಾಲಯವಿದೆ. ಗರ್ಭಗೃಹದಲ್ಲಿ ಭಗ್ನಗೊಂಡ ಲಕ್ಷ್ಮೀನರಸಿಂಹ ವಿಗ್ರಹವಿದೆ. ದೇವಾಲಯದ ಶಿಖರವು ಕದಂಬನಾಗರ ಶೈಲಿಯಲ್ಲಿದೆ ಮತ್ತು ಶಿಖರ ನಿರ್ಮಾಣದಲ್ಲಿ ಗಾರೆಯನ್ನೇ ಬಳಸಿಲ್ಲದಿರುವುದು ಒಂದು ವಿಶೇಷ. ದೇವಾಲಯದ ಪ್ರವೇಶ ದ್ವಾರವೂ ಆಕರ್ಷಣೀಯವಾಗಿದೆ. ಈಶ್ವರದೇವಾಲಯವು ಮುಖಮಂಟಪ, ಸುಖನಾಸಿ ಮತ್ತು ಗರ್ಭಗೃಹವನ್ನು ಹೊಂದಿದೆ. ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ವಿಗ್ರಹವಿಲ್ಲ; ಅಧಿಷ್ಠಾನ ಮಾತ್ರ ಇದೆ. ಕೊಪ್ಪಳ ಲೋಕಸಭಾ ಕ್ಷೇತ್ರದ ಮಾಜಿ ಸದಸ್ಯರಾದ ಶ್ರೀ ಹೆಚ್.ಜಿ. ರಾಮುಲು ಅವರು ಈ ಕೋಟೆಯೊಳಗೆ ಅನೇಕ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ದುರ್ಗಾ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ದಿನನಿತ್ಯ ಪೂಜೆ ನಡೆಯುವ ವ್ಯವಸ್ಥೆ ಮಾಡಿದ್ದಾರೆ ಮತ್ತು ಪ್ರತಿ ವರ್ಷವೂ ದಸರಾ ಹಬ್ಬವನ್ನು ಇಲ್ಲಿ ಅದ್ದೂರಿಯಾಗಿ ಆಚರಿಸುವ ಸಕಲ ವ್ಯವಸ್ಥೆಯನ್ನು ಮಾಡಿದ್ದಾರೆ. ಮೇಗಳ

ಪೇಟೆ, ಕೋಟೆ ಮತ್ತು ಪೇಟೆ ಎಂದು ಮೂರು ಭಾಗಗಳಲ್ಲಿ ಗುರುತಿಸಲ್ಪಡುವ ಹೇಮಗಿರಿಯು ಕನಕಗಿರಿ ನಾಯಕರ ಕಾಲದಲ್ಲಿ ಒಂದು ಪ್ರಸಿದ್ಧ ಸ್ಥಳವಾಗಿತ್ತು ಔರಂಗಜೇಬನ ದಾಳಿಗೆ ಅಂಜಿ ತಪ್ಪಿಸಿಕೊಂಡು ಓಡಿ ಬಂದ ಸುರಪುರದ ಪಿತಾಂಬರಿ ಬಹರಿ ಪಿಡ್ಡನಾಯಕನನ್ನು ಕನಕಗಿರಿ ನಾಯಕನು ಇಲ್ಲಿಯೇ ಅಡಗಿಸಿಟ್ಟು ರಕ್ಷಿಸಿದ್ದನು. ಅಂತಹ ಸುರಕ್ಷ ಹಾಗೂ ಕೂಟಯುದ್ಧಕ್ಕಾಗಿ ಹೇಳಿ ಮಾಡಿಸಿದ ಸ್ಥಳವಾಗಿ ಹೇಮಗುಡ್ಡವು ಹೆಸರಾಗಿತ್ತು.

೩.೩.೩. ಕೋಟೆ

ಕನಕಗಿರಿಯ ಕೋಟೆಯನ್ನು ನವಾಬ ಉಡಿಚನಾಯಕನು ಕಟ್ಟಿಸಿದನು. ಮೇಲ್ನೋಟದಲ್ಲಿ ಆಯತ ವೃತ್ತಾಕಾರದಲ್ಲಿ ಕಾಣುವ ಈ ಕೋಟೆಯು ಮೂರು ಅಗಸಿ (ಪ್ರವೇಶ)ಗಳನ್ನು ಹೊಂದಿದೆ. ಕನಕರಾಯನ ಅಗಸಿಯೇ ಈ ಕೋಟೆಯ ಮುಖ್ಯ ಪ್ರವೇಶ. ಇನ್ನೊಂದು ಆನೆಗೊಂದಿ ಅಗಸಿ ಮತ್ತೊಂದು ಕೊಪ್ಪಳದಲ್ಲಿ ಅಗಸಿ. ಈ ಕೋಟೆಯ ಅಡಿಪಾಯವನ್ನು ದೊಡ್ಡ ದೊಡ್ಡ ಕಲ್ಲುಗಳಿಂದ ಮತ್ತು ಕೋಟೆಯ ಗೋಡೆಯನ್ನು, ಬುರುಜುಗಳನ್ನು ಚಿಕ್ಕ ಚಿಕ್ಕ ಕಲ್ಲು ತುಂಡುಗಳಿಂದ ಕಟ್ಟಲಾಗಿದೆ. ಉತ್ತರ ಮತ್ತು ಪೂರ್ವದ ಭಾಗದಲ್ಲಿ ನದಿಯ ಆಸರೆಯನ್ನು ಬಿಟ್ಟರೆ ಈ ಕೋಟೆಗೆ ಪ್ರಕೃತಿಯ ಯಾವುದೇ ದೊಡ್ಡ ನದಿಗಳ ಇಲ್ಲವೇ, ಗುಡ್ಡಬೆಟ್ಟಗಳ ಆಸರೆಯನ್ನು ಹೊಂದಿಲ್ಲ. ಉತ್ತರ ಮತ್ತು ಪೂರ್ವ ಭಾಗದಲ್ಲಿ ಕೋಟೆಯ ಅಸ್ತಿತ್ವವನ್ನು ಇಂದು ಸ್ವಲ್ಪ ನೋಡಬಹುದು. ಇನ್ನುಳಿದ ಭಾಗದಲ್ಲಿ ಕೋಟೆಯೇ ಮನೆಗಳ ಬುನಾದಿಯಾಗಿದೆ. ಅಲ್ಲಲ್ಲಿ ಕೋಟೆಯ ಕೆಲವು ಬುರುಜುಗಳು ಮಾತ್ರ ಉಳಿದುಕೊಂಡಿವೆ. ಉತ್ತರ ಭಾಗದ ಕೋಟೆಯ ಬುರುಜೊಂದರಲ್ಲಿ ವರಾಹ ಗಜ, ನವಿಲು, ಚಿತ್ತಾರಗಳನ್ನು ಸುಂದರವಾಗಿ ಕೆತ್ತಲಾಗಿದೆ. ಇದರ ಪಕ್ಕದ ಬುರುಜಿನ ಪಕ್ಕದ (ಕೋಟೆಯ) ಗೋಡೆಯ ಕಲ್ಲೊಂದರಲ್ಲಿ ಶಂಕ, ನಾಮ, ಚಕ್ರ ಕೆತ್ತಲಾಗಿದ್ದು, ಯದಡಿ ಅಸಿಯ್ಯನ ಮಗಳ ಸೀತಮ್ಮ ಎಂದು ಬರೆಯಲಾಗಿದೆ. ಬಹುಶಃ ಈ ಕೋಟೆಯನ್ನು ಕಟ್ಟಲು ಸಹಾಯ ಮಾಡಿದವಳು ಈ ಸೀತಮ್ಮ ಇರಬೇಕು? ಇಲ್ಲವೆ ಅವಳ ನೆನಪಿನಲ್ಲಿ ಸಹಾಯ ನೀಡಿರಬಹುದು. ದೇವಾಲಯದ ಒಳಭಾಗದ ನೀರು ನದಿ ಸೇರುವ ಹೊರಭಾಗದ ಸಂದುವಿನ ಕೋಟೆಯ ಗೋಡೆಯ ಪಕ್ಕದಲ್ಲಿ ಇನ್ನೊಂದು ಶಿಲಾ ಶಾಸನವಿದೆ. ಇಲ್ಲಿ ಯೀರಾಪು ಬೊಕರಿತಿಂನ್ನುಯಗಾರಿತಾವು || ಎಂದು ೩ ಸಾಲಿನಲ್ಲಿ ಬರೆಯಲಾಗಿದೆ. ಕೋಟೆಯನ್ನು ಕಟ್ಟಿದವನು, ಇಲ್ಲವೇ ಕೋಟೆಯನ್ನು ಕಟ್ಟಲು ಕಲ್ಲುಗಳನ್ನು ಸಹಾಯ ಮಾಡಿದವನ ಹೆಸರು ಇರಬೇಕೆಂದು ಕಾಣುತ್ತದೆ. ಏಕೆಂದರೆ ರಾಯಿ ಎಂದರೆ ತೆಲುಗಿನಲ್ಲಿ ಕಲ್ಲು ಎಂದರ್ಥ. ಈ ಕೋಟೆಯ ಒಳಭಾಗದಲ್ಲಿ ಮೊದಲಿಗೆ ರಾಜಬೀದಿ, ಕನಕಾಚಲ ದೇವಾಲಯ, ಅಗ್ರಹಾರ, ಸೈನಿಕರ ನೆಲೆ ಮತ್ತು ರಾಜರ ಅರಮನೆ ಮಾತ್ರ ಇದ್ದವೆಂದೂ ಕೋಟೆಯ ಹೊರಭಾಗದಲ್ಲಿ ಜನವಸತಿ ನೆಲೆಗಳಿದ್ದವೆಂದು ಕಂಡುಬರುತ್ತದೆ. ಅತ್ತ ಪೂರ್ಣ ಜಲದುರ್ಗವಾಗದೇ ಇತ್ತ ಗಿರಿದುರ್ಗವೂ ಆಗದೇ ಇರುವ ಈ ಕೋಟೆಯ ಪರಿಸ್ಥಿತಿ ಇಂದು ಶೋಚನೀಯ ಸ್ಥಿತಿ ತಲುಪಿದೆ. ಕನಕಗಿರಿಯ ಕೋಟೆಯ ಈ ಭೌಗೋಳಿಕ ಸ್ಥಿತಿಯನ್ನು ಮನಗಂಡ ಕನಕಗಿರಿ ನಾಯಕರು ಕೂಟ ಯುದ್ಧಕ್ಕಾಗಿ ಹೇಮಗುಡ್ಡದಲ್ಲಿ ಮತ್ತು ಹಂಪಸದುರ್ಗದಲ್ಲಿ ಇನ್ನೆರಡು ಕೋಟೆಗಳನ್ನು ಕಟ್ಟಿಕೊಂಡಿರೆಂದು ಕಾಣಿಸುತ್ತದೆ.

ಹಂಪಸದುರ್ಗ

ಕನಕಗಿರಿಯ ದೊರೆ ನವಾಬ ಉಡಿಚನಾಯಕನ ಕಾಲದಲ್ಲಿ ಹಂಪಸದುರ್ಗದ ಗುಡ್ಡದ ಮೇಲೆ ಒಂದು ಕೋಟೆಯನ್ನು ಕಟ್ಟಲಾಯಿತು. ಈ ಹಂಪಸದುರ್ಗವು ಸುತ್ತಲೂ ಗುಡ್ಡಗಳಿಂದ ಆವೃತವಾದ ಆಯಕಟ್ಟಿನ ಸ್ಥಳವಾಗಿದೆ. ಕನಕಗಿರಿ ಸಮೀಪದ ಚಿಕ್ಕ ಮಾದಿನಾಳ ಗ್ರಾಮದಿಂದ ದಕ್ಷಿಣಕ್ಕೆ ಇರುವ ಈ ದುರ್ಗವು ಕೆಳಗಿನಿಂದ ನಿಂತು ನೋಡಿದಾಗ ಕಣ್ಣಿಗೆ ಕಾಣಿಸುವುದೇ ಇಲ್ಲ. ಇದು ಗಿರಿದುರ್ಗವಾಗಿದ್ದು, ಗುಡ್ಡದ ಮೇಲಿನ ತುದಿಯಲ್ಲಿ ಕೋಟೆಯನ್ನು ಕಟ್ಟಲಾಗಿದೆ. ವೈರಿಗಳಿಗೆ ಇದು ಸರಳವಾಗಿ ವಶವಾಗುತ್ತಿರಲಿಲ್ಲ. ಈ ಗುಡ್ಡದ ನೈರುತ್ಯ ಭಾಗದಲ್ಲಿ ಉತ್ತರಾಭಿಮುಖವಾಗಿ ಏರುತ್ತಾ ಅಂಕು ಡೊಂಕಾಗಿ ಮೇಲಕ್ಕೆ ಹೋದಾಗ ಕೋಟೆಯ ಮೊದಲ ಪ್ರವೇಶ ದ್ವಾರ ಎದುರಾಗುತ್ತದೆ. ನಂತರ ಎರಡನೇ ಪ್ರವೇಶದ್ವಾರ ಬರುತ್ತದೆ. ಈದ್ವಾರವನ್ನು ದಾಟಿದ ತಕ್ಷಣವೇ ಎಡಬಾಗದಲ್ಲಿ ಚಿಕ್ಕದಾದ ಆಂಜನೇಯ ದೇವಾಲಯವಿದೆ. ಇಲ್ಲಿನ ಗುಂಡೊಂದರ ಮೇಲೆ ವೀರಗಲ್ಲನ್ನು ಕೆತ್ತಲಾಗಿದೆ. ನಂತರ ಸ್ವಲ್ಪ ಗುಡ್ಡವನ್ನೇರಿ ಹೋದರೆ ವಿಶಾಲ ಬಯಲು ಪ್ರದೇಶ ಬರುತ್ತದೆ. ಈ ಪ್ರದೇಶದಲ್ಲಿ ಸೈನಿಕರ ವಸತಿ ಗೃಹಗಳಿವೆ. ಮತ್ತು ಮದ್ದು ತಯಾರಿಸುವ ಬಂಡೆ, ಧಾನ್ಯ ಸಂಗ್ರಹ ಕಣಜಗಳು ಈ ಪ್ರದೇಶದಲ್ಲಿವೆ. ಪೂರ್ವದಲ್ಲಿ ಕಳ್ಳ ಅಗಸಿ ಎಂದು ಕರೆಯುವ ಕಿರಿದಾದ ಬಾಗಿಲನ್ನು ಕೋಟೆಯು ಹೊಂದಿದೆ. ಈ ಕೋಟೆಯ ಮೇಲೆ ಎಲ್ಲರ ಗಮನವನ್ನು ಸೆಳೆಯುವ ಕಟ್ಟಡಗಳೆಂದರೆ ಮದ್ದಿನ ಮನೆಗಳು. ಎರಡು ಮದ್ದಿನ ಮನೆಗಳು ಇಂದಿಗೂ ಕಂಡುಬರುತ್ತವೆ. ವೃತ್ತಾಕಾರವಾಗಿ ಕಲ್ಲಿನಿಂದ ನಿರ್ಮಿಸಲಾದ ಈ ಮನೆಗಳಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಲಾಗುತ್ತಿತ್ತು. ಈ ಕಟ್ಟಡಗಳ ಮೇಲಿನ ಭಾಗದಲ್ಲಿ ಪುಟ್ಟದಾದ ಕಿಂಡಿಗಳೇ ಬಾಗಿಲುಗಳಾಗಿವೆ. ಕಲ್ಲು ಚಪ್ಪಡಿಗಳ ಮೂಲಕ ಮೇಲಿನ ಭಾಗವನ್ನು ಮುಚ್ಚಲಾಗಿದೆ. ಕೋಟೆಯ ಬಯಲು ಪ್ರದೇಶದಲ್ಲಿ ಸೈನಿಕರಿಗೆ ತರಬೇತಿಯನ್ನು ಕೊಡಲಾಗುತ್ತಿತ್ತು. ಮತ್ತು ಮದ್ದು ಗುಂಡುಗಳನ್ನು ತಯಾರಿಸಲಾಗುತ್ತಿತ್ತು. ಬೀಸುವ ಕಲ್ಲುಗಳ ಕುರುಹುಗಳು ಇಲ್ಲಿವೆ. ನೀರಿನ ಮೂಲವಾಗಿ ದೋಣಿಗಳೆರಡಿವೆ. ಈ ದುರ್ಗದ ಪೂರ್ವಕ್ಕೆ ಮೇರರ ಮನೆಗಳಿವೆ. ಇವು ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿವೆ.

೩.೪. ನಾಯಕರ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು

ಕ್ರಿ.ಶ. ೧೪೩೬ರಿಂದ ಕ್ರಿ.ಶ. ೧೬೩೭ರವರೆಗೆ ಕನಕಗಿರಿಯಿಂದಲೂ ಮತ್ತು ಅಲ್ಲಿಂದ ಮುಂದೆ ಕ್ರಿ.ಶ. ೧೯೫೦ರವರೆಗೆ ಹುಲಿಹೈದರದಿಂದಲೂ ಕನಕಗಿರಿ ಪ್ರದೇಶವನ್ನು ಆಳಿದ ನಾಯಕರು ಕರ್ನಾಟಕದ ಇತಿಹಾಸಕ್ಕೆ ಆಡಳಿತ ವ್ಯವಸ್ಥೆ, ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಮುಂತಾದ ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

೩.೪.೧. ಆಡಳಿತ ವ್ಯವಸ್ಥೆ

ಅರಸ: ಕನಕಗಿರಿ ನಾಯಕರು ವಿಜಯನಗರದ ಆಧೀನ ಮಾಂಡಲಿಕರಾಗಿದ್ದರಿಂದ ಅವರ ಆಡಳಿತ ಪದ್ಧತಿಯನ್ನು ಅನುಸರಿಸಿದರು. ಅರಸನನ್ನು ಸಾಮಾನ್ಯವಾಗಿ ನಾಯಕನೆಂದು ಕರೆಯಲಾಗುತ್ತಿತ್ತು. ಹಿಂದೂ

ಆಡಳಿತ ಪದ್ಧತಿಯಂತೆ ಅರಸೊತ್ತಿಗೆಯ ಅಧಿಕಾರವು ತಂದೆಯಿಂದ ಮಗನಿಗೆ ಹಸ್ತಾಂತರವಾಗುತ್ತಿತ್ತು. ನಾಯಕರು ಪಾಳೆಯಗಾರರಾದರೂ ಅವರ ಪ್ರಭುತ್ವ ಪ್ರಬಲವಾಗಿದ್ದಿತು. ಅವರು ತಮ್ಮನ್ನು ಶ್ರೀಮನ್ ಮಹಾನಾಯಕಾಚಾರ್ಯ; ನಾಯಕಶಿರೋಮಣಿ (ಅನುಬಂಧ-೨, ೪, ೭, ೮, ೯, ೧೦) ಎಂದು ಕರೆದು ಕೊಂಡಿದ್ದಾರೆ. ಅರಸನ ಪ್ರಯಾಣ ಇಲ್ಲವೆ. ಮೆರವಣಿಗೆಯ ಸಂದರ್ಭದಲ್ಲಿ ಛತ್ರ, ಚಾಮರ, ಪತಾಕೆಗಳನ್ನು ಹಿಡಿಯಲಾಗುತ್ತಿತ್ತು.

೩.೪.೨. ರಾಜ್ಯದ ವಿಂಗಡನೆ

ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಸೀಮೆ, ಸಮ್ಮತ, ಗ್ರಾಮಗಳೆಂದು ವಿಂಗಡಿಸಲಾಗಿತ್ತು. ಸೀಮೆಯನ್ನು ಸರದೇಸಾಯಿಗಳಿಗೆ ಉಮ್ಮಳಿ ಹಾಕಿ ಕೊಡುತ್ತಿದ್ದರಿಂದ ಸಾಮಾನ್ಯವಾಗಿ ಸರದೇಸಾಯಿ ಅವರೇ ಸೀಮೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

೩.೪.೩. ಸೈನ್ಯ

ನಾಯಕರು ಪ್ರಬಲವಾದ ಸೈನ್ಯವನ್ನು ಸಂಘಟಿಸಿದ್ದರು. ಸೈನ್ಯದಲ್ಲಿ ಕಾಲ್ದಳ ಹಾಗೂ ಅಶ್ವದಳ ಎಂಬ ಎರಡು ಪಡೆಗಳಿದ್ದವು. ಕೋವಿ, ಈಟಿ, ಬಿಲ್ಲು-ಬಾಣ ಮತ್ತು ಖಡ್ಗ (ಛಾಯಾಚಿತ್ರ ೧೦೩) ಮುಂತಾದ ಶಾಸ್ತ್ರಸ್ತ್ರಾಗಳನ್ನು ಬಳಸುತ್ತಿದ್ದರು. ಕನಕಗಿರಿ ಸೈನ್ಯ ಬಲಿಷ್ಟವಾಗಿದ್ದರಿಂದಲೇ ಇಮ್ಮಡಿ ಉಡಚನಾಯಕನು ಬಿಜಾಪುರದ ಸೈನ್ಯವನ್ನು ಸೋಲಿಸಲು ಸಾಧ್ಯವಾದದ್ದು ಮತ್ತು ಅವನು ಸುರಪುರದ ಪಿಡ್ಡಾನಾಯಕನಿಗೆ ಔರಂಗಜೇಬನಿಂದ ರಕ್ಷಣೆ ನೀಡುವ ಧೈರ್ಯ ಮಾಡಿದ್ದು.

೩.೪.೪. ಕೋಟೆ

ರಾಜಧಾನಿ ಕನಕಗಿರಿಯ ಸುತ್ತಲೂ ಬಲಾಢ್ಯವಾದ ಕೋಟೆಯನ್ನು ನಿರ್ಮಿಸಲಾಗಿತ್ತು. ಮತ್ತು ಚಿಕ್ಕ ಮಾದಿನಾಳ ಹತ್ತಿರದ ಬೆಟ್ಟದಲ್ಲಿ, ಗಂಗಾವತಿಯ ಯಮ್ಮಿಗುಡ್ಡದಲ್ಲಿ ಗುಪ್ತವಾದ ಕಿಲ್ಲೆಗಳನ್ನು ನಿರ್ಮಿಸಿದ್ದರು. ಈ ಕಿಲ್ಲೆಗಳು ಅದೆಷ್ಟು ಗುಪ್ತ ಹಾಗೂ ದುರ್ಗಮ ವಾಗಿದ್ದವೆಂದರೆ, ಯಮ್ಮಿಗುಡ್ಡ ಕಿಲ್ಲೆಯನ್ನಾಶ್ರಮಿಸಿದ್ದ ಹಿರೇನಾಯಕನನ್ನು ಪಾಮನಾಯಕನು ಅಪಾರ ಸೈನ್ಯ ಹೊಂದಿದ್ದನು. ನೇರವಾಗಿ ಜಯಿಸಲು ಸಾಧ್ಯವಾಗಲಿಲ್ಲ.

೩.೪.೫. ಸಾಮಾಜಿಕ ಸ್ಥಿತಿ

ವರ್ಗಗಳು: ಸಮಾಜದಲ್ಲಿ ಜಾತಿಯಾಧಾರಿತ ಬ್ರಾಹ್ಮಣ, ವೈಶ್ಯ, ವೀರಶೈವ, ಅಸ್ಪೃಶ್ಯ ಎಂಬ ಮೊದಲಾದ ವರ್ಗಗಳಿದ್ದವು. ಹಾಗೂ ಗೊಲ್ಲ (ಬೇಡ-ನಾಯಕ), ಅಕ್ಕ ಸಾಲಿಗ, ಬಡಿಗ, ಕಮ್ಮಾರ, ಕುಂಬಾರ, ಕ್ಷೌರಿಕ ಎಂಬ ವೃತ್ತಿಯಾಧಾರಿತ ಉಪವರ್ಗಗಳಿದ್ದವು. ಬ್ರಾಹ್ಮಣರು, ತಮ್ಮ ಷಟ್ಕರ್ಮ್ಮಾರ ಜೊತೆಗೆ ಅರ್ಚಕತ್ವ ನಡೆಸುತ್ತಿದ್ದರು. ವೈಶ್ಯರು ವ್ಯಾಪಾರವನ್ನು, ವೀರಶೈವರು ಹಾಗೂ ಇತರ ಉಪವರ್ಗದವರು ತಮ್ಮ ತಮ್ಮ ಕಸಬುಗಳ ಜೊತೆಗೆ ಕೃಷಿಕಾರ್ಯವನ್ನು ನಡೆಸುತ್ತಿದ್ದರು. ಬ್ರಾಹ್ಮಣರು, ವೈಶ್ಯರು, ವೀರಶೈವರು ಸಮಾಜದಲ್ಲಿ ಉತ್ತಮವಾದ ಸ್ಥಾನಮಾನವನ್ನು ಹೊಂದಿದ್ದರು. ಅಸ್ಪೃಶ್ಯರಿಗೆ ವಿಶೇಷವಾಗಿ ಕನಕಗಿರಿಯ ಕನಕಾಚಲಪತಿ ದೇವಾಲಯದಲ್ಲಿ ಮಾತ್ರ ಪ್ರವೇಶವಿತ್ತು.

೩.೪.೬. ಕುಟುಂಬ ಹಾಗೂ ಸ್ತ್ರೀಯ ಸ್ಥಾನಮಾನ

ಸಾಮಾನ್ಯವಾಗಿ ಅವಿಭಕ್ತ ಕುಟುಂಬ ಪದ್ಧತಿ ಅಸ್ತಿತ್ವದಲ್ಲಿತ್ತು. ತಂದೆ ಮನೆಯ ಯಜಮಾನನಾಗಿದ್ದನು. ಕುಟುಂಬದಲ್ಲಿ ಸ್ತ್ರೀ ಉತ್ತಮವಾದ ಸ್ಥಾನಮಾನ ಹೊಂದಿದ್ದಳು. ಅರಮನೆಯ ಸ್ತ್ರೀಯರು (ರಾಣಿಯರು) ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ಇಮ್ಮಡಿ ಉಡಿಚನಾಯಕನ ರಾಣಿಯರಾದ ಅಚ್ಚಮ್ಮ, ಚಿನ್ನಮ್ಮ, ಕನಕಮ್ಮನವರು ದೇವಾಲಯ, ಬಾವಿ, ಕೆರೆಗಳನ್ನು ನಿರ್ಮಿಸಿದ್ದಾರೆ. ರಾಣಿ ಕಾಟಮ್ಮ ಮೌನೇಶ್ವರ ಮತವನ್ನು ನಿರ್ಮಿಸಿದ್ದಾಳೆ. ರಾಜ್ಯದಲ್ಲಿ ದೇವದಾಸಿ ಪದ್ಧತಿ ರೂಢಿಯಲ್ಲಿತ್ತು. ಬಸವಿಯರು ಜಾತ್ರೆಯ ಸಂದರ್ಭದಲ್ಲಿ ನೃತ್ಯ ಸೇವೆಯನ್ನು ಸಲ್ಲಿಸುತ್ತಿದ್ದರು.

೩.೪.೭. ಉಡುಪು ಮತ್ತು ಆಭರಣ

ನಾಯಕರ ಕಾಲದ ಉಡುಗೆ ತೊಡುಗೆಗಳ ಬಗ್ಗೆ ತಿಳಿಯಲು ಅವರ ಸಮಕಾಲೀನ ಲೌಕಿಕ ಶಿಲ್ಪಗಳು ಸಹಾಯಕವಾಗಿವೆ. ಪುರುಷರು ತಲೆಗೆ ಪೇಟ, ಉದ್ದವಾದ ನಿಲುವಂಗಿ, ಸೊಂಟಕ್ಕೆ ವಸ್ತ್ರ ಮತ್ತು ಧೋತ್ರವನ್ನು ಉಡುತ್ತಿದ್ದರು. ಸಮಾಜದಲ್ಲಿ ಅವರವರ ಸ್ಥಾನಮಾನಕ್ಕೆ ತಕ್ಕಂತೆ ವೇಷಭೂಷಣಗಳು ಬೇರೆ ಬೇರೆಯಾಗಿದ್ದವು. ಅರಸನು ಕೂಡ ತಲೆಗೆ ಪೇಟವನ್ನು ಧರಿಸುತ್ತಿದ್ದನು ಮತ್ತು ಅರಸು ಮನೆತನದವರು ಕಿವಿಯಲ್ಲಿ ಪುಷ್ಪಕುಂಡಲ, ಬೆರಳಿಗೆ ಉಂಗುರಗಳನ್ನು, ಕೊರಳಲ್ಲಿ ಪದಕಹಾರ, ಮಣಿಸರ, ಕಾಲ್ಗಡಗವನ್ನು ಧರಿಸುತ್ತಿದ್ದರು.

049243

ಸ್ತ್ರೀಯರು ಕುಬಸ ಮತ್ತು ಸೀರೆಯನ್ನು ಉಡುತ್ತಿದ್ದರು. ದೊರೆಸಾನಿಯು (ರಾಜಮಾತೆ) ಮಾತ್ರ ತಲೆಗೆ ಪೇಟ (ಮುಂಡಾಸು)ವನ್ನು ಸುತ್ತುತ್ತಿದ್ದಳು. ರಾಣಿಯರು ಮತ್ತು ಇತರ ಸ್ತ್ರೀಯರು ತಮ್ಮ ಕೇಶವನ್ನು ಹಿಂದಕ್ಕೆ ಬಾಚಿ ವಿವಿಧ ಬಗೆಯ ತುರುಬನ್ನು ಕಟ್ಟಿಕೊಳ್ಳುತ್ತಿದ್ದರು. ಕೊರಳಲ್ಲಿ ವಿವಿಧ ಬಗೆಯ ಸರಗಳು, ಕಿವಿಯೋಲೆ, ತೋಳ್ಬಂದಿ, ಸೊಂಟಪಟ್ಟಿ, ಪಾದಸರ, ಉಂಗುರ ಮುಂತಾದ ಆಭರಣಗಳನ್ನು ಅಲಂಕಾರಕ್ಕಾಗಿ ಬಳಸುತ್ತಿದ್ದರು.

೩.೪.೮. ಆರ್ಥಿಕ ಸ್ಥಿತಿ

ಕೃಷಿಯು ಬಹುಜನರ ಮುಖ್ಯ ಉದ್ಯೋಗವಾಗಿತ್ತು. ಅರಸರು ನೀರಾವರಿಗಾಗಿ ರಾಜ್ಯದಲ್ಲೆಲ್ಲಾ ಕೆರೆ, ಬಾವಿಗಳನ್ನು ತೋಡಿಸಿದ್ದರಿಂದ ಕೃಷಿ ಉತ್ತಮ ಸ್ಥಿತಿಯಲ್ಲಿತ್ತು. ಈಗಲೂ ಏತ ವ್ಯವಸ್ಥೆಯ ಇಂಥ ಅನೇಕ ಬಾವಿಗಳು ಅಲ್ಲಲ್ಲಿ ಇವೆ. ಜೋಳ, ನವಣೆ, ಸಜ್ಜೆ, ನೆಲಗಡಲೆ, ಭತ್ತ ಮುಂತಾದ ಧಾನ್ಯಗಳನ್ನು ಮುಖ್ಯವಾಗಿ ಬೆಳೆಯಲಾಗುತ್ತಿತ್ತು. ಅತಿ ಹೆಚ್ಚು ಬೆಳೆದ ರೈತರನ್ನು ಅರಸನ ಪಕ್ಕದ ಆಸನದಲ್ಲಿ ಕೂಡಿಸಿ ಸತ್ಕರಿಸಲಾಗುತ್ತಿತ್ತು. ಭೂಕಂದಾಯವೇ ರಾಜ್ಯದ ಪ್ರಮುಖ ವರಮಾನವಾಗಿತ್ತು. ಸರಿಯಾಗಿ ಬೆಳೆ ಬಾರದ ಸಂದರ್ಭದಲ್ಲಿ ಕಡ್ಡಾಯವಾಗಿ ತೆರಿಗೆಯನ್ನು ವಸೂಲಿ ಮಾಡುತ್ತಿರಲಿಲ್ಲ.

೩.೪.೯. ಧಾರ್ಮಿಕ ಸ್ಥಿತಿ

ವೈಷ್ಣವ: ರಾಜ್ಯದಲ್ಲಿ ವೈಷ್ಣವ ಮತವು ಅತ್ಯಂತ ಜನಪ್ರಿಯವಾಗಿತ್ತು. ಅರಸರು ಸ್ವತಃ ವಿಷ್ಣುವಿನ

ಪರಮಭಕ್ತರಾಗಿದ್ದರು. ಪ್ರಾಯಶಃ ಇದೆ ಸಂದರ್ಭದಲ್ಲಿ ವಿಜಯನಗರದ ತುಳು ವಂಶದವರು ವಿಶೇಷವಾಗಿ ವೈಷ್ಣವ ಧರ್ಮವನ್ನು ಅನುಸರಿಸಿ ಪ್ರೋತ್ಸಾಹ ನೀಡಿದ್ದು, ನಾಯಕರ ಮೇಲೂ ಪ್ರಭಾವ ಬೀರಿರಬೇಕು ಅಲ್ಲದೆ ಕನಕಗಿರಿ ಪ್ರದೇಶದ ಪ್ರಧಾನ ದೇವಾಲಯ ವೈಷ್ಣವ ಸಂಪ್ರದಾಯದ ಶ್ರೀ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯ. ತಿರುಪತಿ ವೆಂಕಟೇಶ ಇಲ್ಲಿ ಕನಕಗಿರನಾಥನಾಗಿ ನೆಲೆಗೊಂಡನೆಂಬುದು ಸ್ಥಳೀಯ ನಂಬಿಕೆ. ವಿಷ್ಣು ಸರ್ವೋತ್ತಮತೆಯನ್ನು ಹೇಳುವ ಶಾಸನವೊಂದನ್ನು ಇಮ್ಮಡಿ ಉಡಿಚನಾಯಕ ಕನಕಾಚಲಪತಿ ದೇವಾಲಯದಲ್ಲಿ ನಿಲ್ಲಿಸಿದ್ದು, ಇದರಿಂದ ನಾಯಕರು ವಿಷ್ಣುವಿನ ಶ್ರೇಷ್ಠ ಭಕ್ತರಾಗಿದ್ದರು ಎಂದು ತಿಳಿಯುತ್ತದೆ. ರಾಜ್ಯದಲ್ಲಿ ವೈಷ್ಣವ ಸಂಪ್ರದಾಯದ ಕೇಶವ, ರಂಗನಾಥ, ಅನಂತಶಯನ, ಅಷ್ಟಮಹಿಷಿಕೃಷ್ಣ ಮುಂತಾದ ದೇವಾಲಯಗಳನ್ನು ನಿರ್ಮಿಸಿರುವರು.

ಶೈವ: ರಾಜ್ಯದಲ್ಲಿ ಬಹುಸಂಖ್ಯಾತರು ಶೈವರಾಗಿದ್ದರು. ವೀರಶೈವರು ಅಧಿಕ ಸಂಖ್ಯೆಯಲ್ಲಿದ್ದರು. ಅರಸರು ವೈಷ್ಣವರಾಗಿದ್ದರೂ ಕೂಡ ಶೈವ ಧರ್ಮವನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಉದಾಹರಣೆಗೆ ಶಂಕರಲಿಂಗ ಮತ್ತು ಅಷ್ಟಮಹಿಷಿಕೃಷ್ಣ ದೇವಾಲಯಗಳನ್ನು ಒಂದಕ್ಕೊಂದು ಹೊಂದಿಕೊಂಡಂತೆ ನಿರ್ಮಿಸಿರುವುದನ್ನು ಕಾಣಬಹುದು. ಹಾಗೆಯೇ ನಾಯಕರು ಪಂಪಾಪತಿ, ವೀರಭದ್ರ, ಮಲ್ಲಿಕಾರ್ಜುನ, ನಗರೇಶ್ವರ ಮುಂತಾದ ಶೈವ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ವಿಷ್ಣು, ಶಿವನ ಆರಾಧಾನೆಯ ಜೊತೆಗೆ ಆಂಜನೇಯ ಮತ್ತು ಶಕ್ತಿದೇವತೆಗಳ ಆರಾಧನೆಯು ಜನಪ್ರಿಯವಾಗಿತ್ತೆಂದು ತೋರುತ್ತದೆ. ರಾಜ್ಯದಲ್ಲಿ ಸಂಜೀವಮೂರ್ತಿ, ತೊಂಡೆತೆವರಪ್ಪ, ತೇರಿನ ಹನುಮಪ್ಪ, ಬೋಗಾಪುರೇಶ ಇತ್ಯಾದಿ ಹೆಸರಿನಲ್ಲಿ ಅನೇಕ ಆಂಜನೇಯನ ದೇವಾಲಯಗಳಿವೆ. ಹಾಗೆ ಲಕ್ಷ್ಮಿ, ಗಜಲಕ್ಷ್ಮಿ, ಮಹಿಷಾಸುರ ಮರ್ದನಿ, ರೇಣುಕಾ, ಎಲ್ಲಮ್ಮ, ದುರ್ಗೆ, ಕಾಳಿಕಾದೇವಿ ಮುಂತಾದ ಅನೇಕ ಶಕ್ತಿ ದೇವಾಲಯಗಳು ಇವೆ.

ಅರಸರು ಸಾಧು-ಸಂತರಲ್ಲಿ ಗೌರವ ಭಕ್ತಿಯನ್ನು ಹೊಂದಿದ್ದರು. ಇಮ್ಮಡಿ ಕನಕಪ್ಪ ನಾಯಕ ಹಾಗೂ ಅವನ ಮಗ ಹಿರೇರಂಗಪ್ಪ ನಾಯಕರು ಶೃಂಗೇರಿ ಮಠಕ್ಕೆ ಗ್ರಾಮಗಳನ್ನು ದಾನ ನೀಡಿದ್ದರು ಮತ್ತು ಇವರೆ ಯತಿಗಳಾದ ಚಿದಾನಂದಾವಧೂತರನ್ನು ರಾಜಧಾನಿಗೆ ಕರೆಸಿಕೊಂಡು ಅವರು ಅಲ್ಲಿಯೆ ನೆಲೆಸುವಂತೆ ಸಕಲ ಸೌಕರ್ಯವನ್ನು ಮಾಡಿಕೊಟ್ಟರು. ಮೇಲೆ ನೋಡಿದಂತೆ ನಾಯಕರು ಸಾರ್ವಜನಿಕ ಬಾವಿ, ಕೊಳಗಳಲ್ಲಿ ಸಹ ಶಿವ, ವಿಷ್ಣುವಿನ ಗೃಹಗಳನ್ನು ನಿರ್ಮಿಸಿ ಧರ್ಮ ಸಮನ್ವಯತೆಯನ್ನು ಸಾಧಿಸಿದ್ದರು. ವೆಂಕಟಪತಿ ಕೊಳ, ಅಚ್ಚಮ್ಮ ಬಾವಿ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಶಿವ, ಅನಂತಶಯನ, ಬ್ರಹ್ಮ, ಈ ದೇವತೆಗಳ ದೇವತಾಗೃಹಗಳನ್ನು ಕಾಣಬಹುದು. ಹೀಗಾಗಿ ಸಮಾಜದಲ್ಲಿ ಮತಸಂಘರ್ಷವಿರದೆ ಸಾಮರಸ್ಯವಿತ್ತು.

೩.೫. ಶಾಸನಗಳು

೧. ಕನಕಗಿರಿಯ ನರಸಿಂಹ ತೀರ್ಥ ಬಳಿ ಇರುವ ಏಳು ಹೆಡೆ ನಾಗಶಿಲ್ಪದ ಬಳಿ ಅರ್ಧ ಶಿಲೆಯ

ಮೇಲೆ ೬ ಸಾಲುಗಳಲ್ಲಿ ಬರೆಯಲಾಗಿದೆ. ಶಾಸನವು ಶಾಲಿವಾಹನ ಶಕವರ್ಷ ೧೪೬೪ಕ್ಕೆ ಸೇರಿದ್ದು ಅಂದರೆ ಕ್ರಿ.ಶ. ೧೫೪೨ರ ಕಾಲಕ್ಕೆ ಸಂಬಂಧಿಸಿದ್ದು ಎಂದು ಗೊತ್ತಾಯಿತ್ತಾದರೂ ಶಾಸನದಲ್ಲಿನ ಬಹುತೇಕ ಅಕ್ಷರಗಳು ಅಳಿಸಿ ಹೋಗಿರುವುದರಿಂದ ಪೂರ್ಣ ಓದಲು ಸಾಧ್ಯವಾಗುವುದಿಲ್ಲ ಈ ಶಾಸನದಲ್ಲಿ.

ಜಯಭ್ಯುದಯ ಶಾಲಿವಾಹನ ಶಕ ವರ್ಷ...

೧೪೬೪ನೇ ಶುಭು...ಯ ಖದಚಯತಶು

ಪುಣ್ಯ. ಕಾಲದಲು ದರಮ...

ಜರಾಚಾಕಸು ಶಕ. ಣದಿರ...

ಚತ..ನು.....ಪುಣ್ಯಕ್ಕಾಗಿ

ನಾಯಕ ಮಹಾಚಾರ್ಯ.. ಕನಕಗಿರಿ....

ಎಂದಿದ್ದು ಈ ಶಾಸನದ ಇನ್ನರ್ಧ ಭಾಗ ಎಲ್ಲಿ ಹೋಗಿದೆಯೋ ತಿಳಿದಿಲ್ಲ.

೨. ಇನ್ನೊಂದು ಶಾಸನವು ಕೋಟೆಯ ಉತ್ತರಭಾಗದ ಬುರುಜೊಂದರ ಪಕ್ಕದಲ್ಲಿದೆ. ಮದ್ರಾಸ್ ಕಟ್ಟಡದ ಹಿಂಭಾಗ ಈ ಶಾಸನದಲ್ಲಿ ಶಂಕ, ನಾಮ, ಚಕ್ರವಿದ್ದು ಎರಡು ಸಾಲುಗಳಲ್ಲಿದೆ. ಶಾಸನ ಪಾಠ ಇಂತಿದೆ.

೧. ಯದ ಅನಿಯ್ಯನ

೨. ಮಗಳ ಸೀತಮ್ಮ

ಮತ್ತೊಂದು ಶಾಸನ ಕನಕರಾಯನ ದೇವಾಲಯದೊಳಗಿನ ನೀರು ಹೊರಭೀಳುವ ಕೋಟೆಯ ಹೊರಭಾಗದ ಗೋಡೆಯ ಭಾಗದಲ್ಲಿದೆ. ಶಾಸನ ಪಾಠ ಇಂತಿದೆ.

೧. ಯೀರಾಯಿಪ್ರ ಬೊ

೨. ಕರಿತಿಂಮ್ನುಯಗೌರಿ

೩. ತಾಯಿಪ್ರ

ಈ ಶಾಸನಗಳು ಇಲ್ಲಿಯವರಿಗೂ ಎಲ್ಲೂ ಪ್ರಕಟವಾಗಿಲ್ಲ. ಇವುಗಳನ್ನು ಹೊಸದಾಗಿ ಪತ್ತೆ ಹಚ್ಚಲಾಗಿದೆ.

೩

ಕನಕಗಿರಿ

ಶಂಕರಪ್ಪಯ್ಯನ ಮಠದ ಅಧಿಷ್ಠಾನದ ಮೇಲೆ

(ನಾಡುನುಡಿ, ದೀ.ವಿ. ೧೯೯೭; IK III. NO. ४೦३)

ಶಾಲಿವಾಹನ ಶಕ ೧೪೭೪ನೆಯ ಪ್ಲವಂಗ ಸಂವತ್ಸರದ (ಪರಿಧಾವಿ) ಶ್ರಾವಣ, (ಪಾಲ್ಗುಣ) ಶು. ೧೨ರಲ್ಲಿ ಅಂದರೆ ಕ್ರಿ.ಶ. ೧.೮.೧೫೫೨ರ ಸೋಮವಾರದಂದು ರಾಮರಾಜಯ್ಯ ತಿರುಮಲರಾಜಯ್ಯನ ಕಾರ್ಯಕರ್ತನಾದ ದಳವಾಯಿ ಚಂಡತ್ರಯ್ಯ ಎಂಬುವವನು ಕನಕಗಿರಿ ದೇವರಿಗೆ ಒಂದು ಕೊಳಗದ ಭೂಮಿಯನ್ನು ಕ್ರಯವಾಗಿ ಕೊಂಡು ಭೂದಾನ ಮಾಡಿದಂತೆಯೂ, ಇದರಲ್ಲಿ ದೇವರ ಕೊಳದ ಸ್ನಾನ ಮಂಟಪದಲ್ಲಿ? ಹನುಮಂತ ಮತ್ತು ಆಳ್ವಾರ ದೇವರ ಪೂಜೆ ಮಾಡಬೇಕೆಂದು ವಿಧಿಸಿದಂತೆ ತಿಳಯುತ್ತದೆ.

೧. ಶುಭಮಸ್ತು ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೭೪ನೆಯ ಪರಿಧಾವಿನಾಮ ಸಂವತ್ಸರದ ಪಾಲ್ಗುಣ ಶು ೧೨ ಲು ಶ್ರೀಮನ್ಮಹಾಮಂಡಲೇಶ್ವರ ರಾಮರಾಜಯ್ಯ ತಿರುಮಲರಾಜ ಯ್ಯದೇವರು || ಅ

೨. ವರಕಾರ್ಯಕೆ ಕರ್ತನಾದ ದಳವಾಯಿ ಚಂಡತ್ರಯ್ಯನವರೂ ಶ್ರೀಕನಕಗಿರಿನಾಥ ದೇವರಿಗೆ ಕ್ರಯವಾಗಿ ಕೊಂಡು ಸಮರ್ಪಿಸಿದೆ ಪೂಜೆ ದೇವರ ಕೊಳಕಿಸಿದ ಸ್ನಾನಮಂಟದೊಳಗೆ ಹನುಮಂತ ಆಳುವಾರ....

೩. ಕೊಳಗದ ಮಾನ್ಯ ಮಂಗಳ ಮಹಾಶ್ರೀ ಶ್ರೀ ಶ್ರೀ (ಪರಿಷ್ಕೃತ ಪಾಠ)

೪

ಕನಕಗಿರಿ ಚಿಕ್ಕಮಾದಿನಾಳ ರಸ್ತೆಯಲ್ಲಿ ಮಡಿವಾಳಪ್ಪನ ಹೊಲ

(ಸಶುಕಾ. VI (೩-೪) ೬-೭೨; IIK. III. No. ೪೦೪)

ತ್ರುಟಿತ. ಶಾಲಿವಾಹನ ಶಕವರ್ಷ ೧೫೫೨, ಶಾರ್ವರಿ, ಚಯಿತ್ರ ..., ಅಂದರೆ ಕ್ರಿ.ಶ. ೧೬೬೦ರಲ್ಲಿ ಗುಜ್ಜಲ ಇಮ್ಮಿ ಉಡಿಸಿನಾಯಕನ ಪತ್ನಿ ಚಿಣ್ಣಮ್ಮನು ಕನಕರಾಯನ ಕೆರೆಯನ್ನು ಕಟ್ಟಿಸಿದಂತೆ ತೋರುತ್ತದೆ.

೧. ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ

೨. ಶಕವರುಷ ೧೫೫೨ ಶಾರ್ವರಿ ಸಂವತ್ಸರ

೩. ಚಯಿತ್ರ ಶು. ಯಲು ಗುಜ್ಜಲ ಯಿಂಮಡಿ ವುಡಿಸಿ

೪. ನಾಯಕರ ರಾಣಿವಾಸ ಚಿಂಣಮ ಕನಕರಾಯ

೫. ಕೆರೆ.........................ಶ್ರೀ

೫

ಸುಂಕ್ಲಮ್ಮನ ಗುಡಿಯ ಸಮೀಪದ ಬಂಡೆಯ ಮೇಲೆ

ತ್ರುಟಿತ. ಶಾಲಿವಾಹನ ಶಕವರುಷ ೧೭೩೪ ಪ್ರಭವ, ಆಶ್ವೀಜ, ಶು. ೧೦ ಅಂದರೆ ಕ್ರಿ.ಶ. ೧೮೧೨ರಲ್ಲಿ ರಂಗಪ್ಪ ನಾಯಕನು ದೇವಾಲಯವೊಂದಕ್ಕೆ ಭೂದಾನ ನೀಡಿದಂತೆ ತಿಳಿಯುತ್ತದೆ.

೧. ಶ್ರೀ ಕನಕಗಿರಿನಾಥ ಶರಣು

೨. ಶ್ರೀ ಜಯಾಬ್ಬುದಯ ಶಾಲಿ

೩. ವಾಹನ ಶಕವರುಷಂಗಳು ೧೭೩೪

೪. ನೆ ಪ್ರ॥ ಸಂವಚ್ಛರದ ಆಶ್ವಿಜ ಶುದ್ಧ ದಶಮಿ

೫. ಶ್ರೀಮನ್ಮಹಾನಾಯಕ ಬಾಚ

೬. ..... ಶ್ರೀರಂಗಪ್ಪ ನಾಯಕರು

೭. ಭೂದಾನ ಯಿ ದೇವಾಲಯಕ್ಕೆ

೮. ಕೊಟ್ಟ ನಮ್ಮಪ್ಪಸ್ವಾಮಿ....

೬

ಅದೇ ಗುಂಡಿನ ಇನ್ನೊಂದು ಬದಿಗೆ

ತ್ರುಟಿತ. ವೀರಪ ಕಾಳಾಚಾರ್ಯನನ್ನು ಹೆಸರಿಸುತ್ತದೆ.

೧. ಶ್ರೀ ವೀರಪ ಕಾಳಾ

೨. ಚಾರ್ಯನ ಮಗ

೩. . . . .

೭

ಪೇಟೆ ಬಸವಣ್ಣ ದೇವರ ಗುಡಿಯ ಗರ್ಭಗೃಹ

ಬಾಗಿಲುವಾಡದ ಎಡಪಟ್ಟಿಕೆಯ ಮೇಲೆ

(ಸಶುಕಾ. VI. (3-4). 6-72; IK. III No. 402)

ಶಾಲಿವಾಹನ ಶಕ ೧೬೦೧, ಸಿದ್ಧಾರ್ಥಿ; ಮಾಘ, ಸು. ೭, ರಥಸಪ್ತಮಿಯೆಂದು ಅಂದರೆ ಕ್ರಿ.ಶ. ೨೭-೧-೧೬೮೦ರಂದೂ ಕನಕಗಿರಿಯ ಉಡಿಚನಾಯಕನ ರಾಣಿ ಚಿನ್ನಮ್ಮನು ಬಸವಣ್ಣದೇವರ ಗುಡಿಯನ್ನು ಕಟ್ಟಿಸಿದಂತೆ ಹೇಳಿದೆ.

೧. ಸ್ವಸ್ತಿಶ್ರೀ ಜಯಬ್ಬುದಯ ಶಾಲಿ.

೨. ವಾಹನ ಶಕವರುಷಂಗಳು ೧೬೦೧

೩. ನೆಯ ಸಿದ್ಧಾರ್ತಿ ನಾಮ ಸಂ॥ ದ ಮಾ

೪. ಘ ಶುದ್ಧ ೭ ರಥಸಪ್ತಮಿಲು

೫. ಕನಕಗಿರಿ ಉಡಿಚನಾಯಕ

೬. ಕರ ರಾಣಿವಾಸ ಚಿಂನಂ

೭. ಮನವರು ಬಸವಂಣ

೮. ದೇವರ ಗುಡಿ ಸಂಪೂರ್ಣ

೯. ಮಾಡಿಸಿದರು ಶ್ರೀ

೮

ಲಕ್ಷ್ಮೀನರಸಿಂಹ ಗುಡಿಯ ಮುಂಭಾಗದ ಗರುಡ ಗುಡಿಯ ಬಲದಲ್ಲಿ ಹಾಸುಗಲ್ಲಿನ ಮೇಲೆ

(Ar. No. B 135 of 1972-73; IK. III. No. 74)

೧. ಶ್ರೀ ಶುಭಮಸ್ತು॥ ಶಾಲಿ

೨. ವಾಹನ ಶಕ ವ

೩. ರುಷ ೧೫೩೬ನೆಯ

೪. ಆನಂದ ನಾಮ ಸಂ

೫. ಪಾಲ್ಗುಣ ಶು ೧೪ ಲು

೬. ದೇವ ದೇವೋತ್ತಮ ಶ್ರೀ ಕನ

೭. ಕಗಿರಿನಾಥಸ್ವಾಮಿ ಗುಡಿ

೮. ಪವುಳಿಯ ಕಲ್ಲಹಾಸಿಗೆ ಸೇ

೯. ವೆ ಗುಜ್ಜಲ ವಂಶೋದ್ಭವ ಕ

೧೦. ಕನಕಗಿರಿಯ ಯಿಂಮಡಿ ವು

೧೧. ಡಚಿನಾಯಕರ ರಾಣಿವಾ

೧೨. ಸ ಚಿಂನಾಂಜಂನವರು

೧೩. ಶ್ರೀ ಶ್ರೀ ಶ್ರೀ

ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದಲ್ಲಿರು ಶಾಸನ

(ಸಶುಕಾ. VII. (3-4); AR.No. B 13-132 of 1972; IK. III No. 6-71)

ಈ ಶಾಸನದಲ್ಲಿ ಬೇರೆ ಬೇರೆ ಕಾಲಕ್ಕೆ ಸೇರಿದ ನಾಲ್ಕು ಶಾಸನಗಳಿದ್ದು ಇವೆಲ್ಲವೂ ಕನಕಚಾಲ ಲಕ್ಷ್ಮೀನರಸಿಂಹ ಸ್ವಾಮಿಗೆ ನೀಡಿದ ದಾನದ ವಿವರಗಳನ್ನು ಒಳಗೊಂಡಿವೆ. ಶಾಸನದ ಆರಂಭದಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ಸ್ತೋತ್ರವಿದೆ.

೧. ಶಾಲಿವಾಹನ ಶಕವರುಷ ೧೩೫೮ನೆಯ ನಳಸಂವತ್ಸರದ ಕಾರ್ತಿಕ ಶು. ೧೨ ಎಂದಿದ್ದು ಇದು ಅನಳ ಸಂವತ್ಸರವಾದಲ್ಲಿ ಕ್ರಿ.ಶ. ೨೧-೧೦-೧೪೩೬ಕ್ಕೆ ಸರಿಹೊಂದುತ್ತದೆ. ವಿಜಯನಗರದ ಪ್ರಭುದೇವರಾಯನು ಕನಕಗಿರಿಪೇಟೆಯನ್ನು ಕನಕಗಿರಿನಾಥದೇವರ ಅಮೃತಪಡಿ ನೈವೇದ್ಯಕ್ಕಾಗಿ ಬಿಡುತ್ತಾನೆ.

೨. ಶಾಲಿವಾಹನ ಶಕವರುಷ ೧೪೧೦ನೆಯ ಕೀಲಕ, ಶ್ರಾವಣ, ಬ. ಅರಲ್ಲಿ ಅಂದರೆ ಕ್ರಿ.ಶ. ೧-೭-೧೪೮೮ರಲ್ಲಿ ನರಸಿಂಗದೇವರಾಯನು ರಾಜ್ಯವನ್ನು ಆಳುತ್ತಿದ್ದು ಕನಕಗಿರಿನಾಥಸ್ವಾಮಿಯ ಅಮೃತಪಡಿಗೆ ಕನಕಗಿರಿಯ ವಾಯುವ್ಯ ದಿಕ್ಕಿನ ಗೋಡಿರಹಾಳ ಗ್ರಾಮವನ್ನು ಮತ್ತು ಅದಕ್ಕೆ ಸೇರುವ ಗೊವರಹಾಳನ್ನು ನೀಡುತ್ತಾನೆ.

೩. ಶಾಲಿವಾಹನ ಶಕವರುಷ ೧೪೩೪ನೆಯ ಆಂಗಿರಸ ಸಂವತ್ಸರದ ಆಷಾಡ, ಶು. ೧೨ರಲ್ಲಿ ಅಂದರೆ ಕ್ರಿ.ಶ. ೨೬-೬-೧೫೧೨ಲ್ಲಿ ಕೃಷ್ಣದೇವಮಹಾರಾಯನು ರಾಜ್ಯಭಾರ ಮಾಡುತ್ತಿದ್ದಾಗ ಕನಕಗಿರಿನಾಥದೇವರ ಅಮೃತಪಡಿಗೆ ಕಕನಗಿರಿಪೇಟೆಯ ಸ್ಥಳದ ಸುಂಕ, ತಳವಾರಿಕೆ ಸುಂಕ, ಚಂನ್ನಪುರ, ತೊರಗಲ್ಲು ಸೀಮೆಯ ಯಡಿಗಲ್ಲ ಕಳಸಗ್ರಾಮ, ನವಿಲೆಯ ಸೀಮೆಯಲ್ಲಿನ ಬಾರಾಪುರ ಒಟ್ಟು ಮೂರು ಗ್ರಾಮಗಳನ್ನು ನೀಡುತ್ತಾನೆ.

೪. ಶಾಲಿವಾಹನ ಶಕವರುಷ ೧೪೫೫ನೆಯ ವಿಜಯ, ಮಾಘ, ಶು. ೭ರಲ್ಲಿ ಅಂದರೆ ಕ್ರಿ.ಶ. ೨೧-೧-೧೫೩೪ರಲ್ಲಿ ಅಚ್ಯುತದೇವರಾಯನು ಆಳುತ್ತಿದ್ದಾಗ ಕನಕಗಿರಿನಾಥಸ್ವಾಮಿಯ ಅಮೃತಪಡಿಗೆ ನೈವೇದ್ಯ ಪೂಜೆ, ದೀಪಾರಾಧನೆ ಅಂಗರಂಗ ವೈಭೋಗಗಳಿಗಾಗಿ ತಿರುನಾಳು, ಪಂಚವರ್ಷ ಮುಂತಾದವು ಸಾಂಗವಾಗಿ ನಡೆಯಬೇಕೆಂದು ಕುಸ್ಟಿಗೆಸೀಮೆಯಲ್ಲಿನ ಯಿಂಗಳದಹಾಳು, ಗುಡ್ಡ ಗಂಗಾವತಿಯ ಸೀಮೆಯಲ್ಲಿನ ಆಚುತರಾಯ ಮಲ್ಲಾಪುರ, ಸಿದ್ದನಹಾಳ, ರಾಮಾಪುರ ಈ ನಾಲ್ಕು ಗ್ರಾಮಗಳ ಚುತಸ್ಸೀಮೆಯೊಳಗಣ ನಿಧಿನಿಕ್ಷೇಪ ಜಲಪಾಷಾಣ ಮುಂತಾದವುಗಳ ಸಹಿತವಾಗಿ ನೀಡಿರುತ್ತಾನೆ.

೧. ಶುಭಮಸ್ತು || ಶ್ರೀ ಕನಕಗಿರಿನಾಥಾಯ ನಮಃ ಲಕ್ಷ್ಮೀನೃ

೨. ಸಿಂಹ ಮುನೀಶ್ವರಂ | ಕನಕಾಚಲವಾಸಿನ ಪಾತುವಃ ಸರ್ವ

೩. ಲೋಕೇಶಃ ವಾಂಚಿತಾರ್ಥ ಪ್ರದಾಯಕಃ ಬ್ರಹ್ಮೇಂದ್ರ

೪. ಮೌಳಿ ಮಾಣಿಕ್ಯ ರಂಜಿತ ಶ್ರೀಪದಾಂಬುಜಂ | ಕೆಲವಡಿ ಕರ್ಮ

೫. ನಾಥೋಯಂ || ಪಾತುವಃ ತ್ರಿಜಗತ್ಪತ್ತಿ ಸ್ವಸ್ತಿ ಶ್ರೀ ಜಯಾಭ್ಯು

೬. ದಯ ಶಾಲಿವಾಹನ ಶಕವರುಷ ೧೩೫೮ನೆಯ ನಳಸಂವತ್ಸರದ

೭. ಕಾರ್ತಿಕ ಶು ೧೨ ಪುಣ್ಯಕಾಲದಲು ಶ್ರೀ ಮನಮಹಾರಾಜಾದಿರಾಜ

೮. ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ಪ್ರಭುದೇವರಾಯ ಮ

೯. ಹಾರಾಯರು ಪೃಥ್ವಿರಾಜ್ಯವಂಗೈಯುತ್ತಿರಲು ಶ್ರೀಕನಕಗಿ

೧೦. ರಿನಾಥದೇವರ ಅಮೃತಪಡಿ ನೈವೇದ್ಯ ಅಂಗರಂಗ ವೈಭೋಗಗಳಿ

೧೧. ಗೆ ಸಮರ್ಪಿಸಿದ ಪೇಟೆಗ್ರಾಮ || ಶಾಲಿವಾಹನ ಶಕವ

೧೨. ರುಷ ೧೪೧೧ನೆಯ ಕೀಲಕ ಸಂವತ್ಸರದ ಶ್ರಾವಣ ಬ ೮ ಪುಣ್ಯ

೧೩. ಕಾಲದಲ್ಲೂ ಪರಮೇಶ್ವರ ಶ್ರೀ ಮಹಾರಾಜಧಿರಾಜ ರಾಜಪರಮೇಶ್ವರ

೧೪. ವೀರಪ್ರತಾಪ ಧರಣಿವರಹಂತಧಾರಿ ಸಾಳ್ವಶ್ರೀ ನರಸಿಂಗದೇವರಾ

೧೫. ಯ ಮಹಾರಾಯರು ಪ್ರಥ್ವಿರಾಜ್ಯಂಗೆ ಉತ್ತ ಶ್ರೀ ಕನಕಗಿರಿನಾ

೧೬. ಥದೇವರಿಗೆ ಅಮೃತಪಿಡಿಗೆ ಸಮರ್ಪಿಸಿದ್ದು ಯಿ ಕನಕಗಿರಿಗ್ರಾಮ

೧೭. ಕ್ಕೆ ವಾಯುವ್ಯದಿಕ್ಕಿನ ಗೋಡಿರಹಾಳ ಗ್ರಾ ೧ | ಅದಕ್ಕೆ ಸಲ್ಲುವ ಕಾಲು

೧೮. ಮಳಿ ಗೋವರಹಾಳಿಗೆ ಉತ್ತರಭಾಗದಲ್ಲಿ ಪಡೆದ ಗ್ರಾಮ ||೧||

೧೯. ಶಾಲಿವಾಹನ ಶಕವರುಷ ೧೪೩೪ನೆಯ ಆಂಗಿರ ಸಂವ

೨೦. ತ್ಸರದ ಆಶಾಢ ಶು ೧೨ ಪುಣ್ಯಕಾಲದಲೂ ಶ್ರೀಮ(ನ)ಮ

೨೧. ಹಾರಾಜಾಧಿರಾಜ ರಾಜಪರಮೇಶ್ವರ | ಶ್ರೀ ವೀರಪ್ರತಾಪ ಶ್ರೀ

೨೨. ಕ್ರಿಷ್ಣದೇವರಾಯ ಮಹಾರಾಯರು ಪ್ರಿಥ್ವಿರಾಜ್ಯಂಗೆಉತ್ತಿರೆ

೨೩. ಶ್ರೀ ಕನಕಗಿರಿನಾಥ ದೇವರ ಅಮ್ರುತಪಡಿಗೆ ಸಮರ್ಪಿಸಿದ ಕ

೨೪. ನಕಗಿರಿಪೇಟೆ ಗ್ರಾಮದ ಸ್ಥಳ ಸುಂಕ ತಳವಾರಿಕೆ ಪ ರಿಸುಂ

೨೫. ಕ | ಚಿಂನಾಪುರದ ಗ್ರಾಮ ೧ ತೊರಗಲ್ಲು ಸೀಮೆ ವಳಗಣ ಯಡಿಗಲ್ಲ

೨೬. ಕಳಸ ಗ್ರಾಮ ೧ ನವಿಲೆಯಸೀಮೆಯ ವಳಗಣ ಬಯಿರಾಪುರದ

೨೭. ಗ್ರಾ ೧ || ಶಾಲಿವಾಹನ ಶಕವರುಷ ೧೪೫೫ನೆಯ ವಿಜಯ ಸಂವ

೨೮. ತ್ಸರದ ಮಾಘ ಶು ೭ ಪುಣ್ಯಕಾಲದಲು ಶ್ರೀಮನ್ಮಹಾರಾ

೨೯. ಜಾಧಿರಾಜ ರಾಜಪರಮೇಶ್ವರ| ಶ್ರೀ ವೀರಪ್ರತಾಪ ಶ್ರೀ ಅಚ್ಯುತದೇ

೩೦. ವರಾಯ ಮಹಾರಾಯರು ಪೃಥ್ವಿರಾಜ್ಯಂಗೆ ಇ ಉತ್ತಲೂ| ಶ್ರೀ ಕ

೩೧. ನಕಗಿರಿನಾಥದೇವರ ಅಮ್ರುತಪಡಿ ನಡವೇದ್ಯ ಪೂಜೆ ಪುನಸ್ಕಾರ ದೀಪಾ

೩೨. ನಿತ್ಯ ನ ಇಮಿತ್ಯಗಳು ಸಾಂಗವಾಗಿ ನಡೆಯಬೇಕೆಂದು

೩೩. ನಿತ್ಯನ ಇಮಿತ್ಯಗಳು ಸಾಂಗವಾಗಿ ನಡೆಯಬೇಕೆಂದು

೩೪. ಗ್ರಾಮ| ಕುಸ್ಟಿಗೆಯ ಸೀಮೆಯ ವಳಗಣ ಸಮರ್ಪಿಸಿದ ಯಿಂಗಳದಹಾಳ ಗ್ರಾ ೧||

೩೫. ಗಂಗಾವತಿಯ ಸೀಮೆಯ ವಳಗಣ ಅಚುತರಾಯ ಮಲ್ಲಾಪುರದ ಗ್ರಾ ೧,

೩೬. ಸಿದ್ದನಹಾಳಗ್ರಾಮ ೧ ರಾಮಾಪುರದಗ್ರಾಮ ಯೀ ಗ್ರಾಮಗಳ ಚತುಸೀ

೩೭. ಮೆಯ ವಳಗಣ ನಿಧಿನೀಕ್ಷೇಪ ಜಲಪಾಷಾಣ ಅಕ್ಷೀಣೆ ಆಗಾಮಿ ಸಿದ ಸಾ

೩೮. ದ್ಯಂಗಳೆಂಬ ಅಷ್ಟಬೋಗ ತೇಜಸ್ವಾಂಮ್ಯ ಸಹಿತ ಸಮಸ್ತ ಬೆಳೆ ಸಹಿತವಾಗಿ

೩೯. ಸರ್ವಮಾಂನ್ಯವಾಗಿ ಸಹಿರಂಣ್ಯೋದಕ ದಾನ ಧಾರಾಪುರ್ವಕವಾಗಿ ತ್ರಿವಾ

೪೦. ಚಕವಾಗಿ ತ್ರಿಕರಣಶುದ್ಧಿಯಾಗಿ ಶ್ರೀ ಕನಗಿರಿನಾಥದೇವರಿಗೆ ಸಮರ್ಪಿ

೪೧. ಸಿದೆಉ ಯೆಂದು ಕೊಟ್ಟ ಧರ್ಮಶಾಸನ| ಯಿ ಧರ್ಮ ಶಾಸನಕೆ ಯಾ

೪೨. ರಾದರೊಬ್ಬರು ಅಳುಪಿದರೆ ತಂಮ ತಾಯಿ ತಂದೆಯನ್ನು (ವಾರ)

೪೩. ಣಾಸಿಯಲಿ ವಧಿಸಿದಂತಥಾ ಪಾತಕಕ್ಕೆ ಹೊಹರು

೧೦

ಅದೇ ದೇವಾಲಯದ ಆವರಣದಲ್ಲಿನ ಮತ್ತೊಂದು ಶಾಸನ

(ಸಶುಕಾ. VII. (3-4); AR. No. B 133 of 1972-73; IK III No. 72)

ಶಾಲಿವಾಹನ ಶಕವರುಷ ೧೫೫೬ನೆಯ ಆನಂದ ಸಂವತ್ಸರ ಚೈತ್ರಮಾಸದ ಶು. ೧ ಸ್ಥಿರವಾರದಲ್ಲಿ ಅಂದರೆ ಕ್ರಿ.ಶ. ೨೮.೩.೧೬೭೪ರಲ್ಲಿ ಕನಕಾಚಲ ಲಕ್ಷ್ಮೀನರಸಿಂಹಸ್ವಾಮಿಯ ಸನ್ನಿಧಿಯಲ್ಲಿ ಮಹಾನಾಯಕಾಚಾರ್ಯ ಲಕ್ಷ್ಮಿನಾಗತಿ ಯಿಂಮಡಿ ಉಡಿಸಿನಾಯಕನು ತಿಳದ ವಿಷಯವನ್ನು ಈ ಶಾಸನದಲ್ಲಿ ವಿವರಿಸಲಾಗಿದೆ.

ಸಕಲ ಇತಿಹಾಸ ಪುರಾಣಗಳನ್ನು ಓದಿಸಿ ತಿಳಿದ ವಿಷಯವನ್ನು ಮಥಿಸಿದಾಗ ಲಕ್ಷ್ಮೀಪತಿಯೇ ಸೃಷ್ಟಿ, ಸ್ಥಿತಿ, ಲಯದ ಮೂರುಗುಣಗಳನ್ನು ಹೊಂದಿದ್ದು ಈ ಸ್ವಾಮಿಯೇ ಸರ್ವಶ್ರೇಷ್ಠನೆಂದು ನಿಶ್ಚಯಿಸುತ್ತಾನೆ. ಇದಕ್ಕೆ ಪ್ರಮಾಣವಾಗಿ ಪುರಾಣಗಳ ಕೆಲವು ಶ್ಲೋಕಗಳನ್ನು ಉದ್ಧರಿಸಿರುತ್ತಾನೆ. ಹೀಗೆ ಜಗತ್ಪಿತ್ರು,

ಜಗದ್ಗುರು, ಜಗತ್ಸ್ವಾಮಿಯಾದ ಈ ದೇವರನ್ನು ನಂಬಿ ಭಜಿಸಿದವರಿಗೆ ಸದ್ಗತಿ ಉಂಟು ಎಂದು ಹೇಳಿದೆ.

೧. ಶುಭಮಸ್ತು

೨. ಶ್ರೀ ಪಂಚಾಶ್ಯಯುತ ಕಲ್ಯಾಣ ಪೀಠಮದ್ಯಸ್ತಿತ ಸೈವಂ ಶ್ರೀಮತ್ಸ್ವರ್ಣ ಗಿರೀಶಶ್ಯ ನಾರಸಿಂಹ

೩. ಸ್ಯ ಶಾಸನಂ || ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷಗಳು ೧೫೫೬ನೆಯ ಆನಂದನಾ

೪. ಮಸಂವತ್ಸರದ ಚೈತ್ರ ಶುದ್ಧ ೧ ಸ್ಥಿರವಾರದಲ್ಲಿ ಶ್ರೀಮದಖಿಳಾಂಡ ಕೋಟಿ ಬ್ರಹ್ಮಾಂಡನಾ

೫. ಯಕರಾದ ವೇದಾಂತ ವೇದ್ಯ ಪುರಾಣ ಪುರುಷೋತ್ತಮರಾದ ಶ್ರೀ ಕನಕಾಚಲಲಕ್ಷ್ಮೀ

೬. ನರಸಿಂಹಸ್ವಾಮಿಯ ಸಂನ್ನಿಂದಿಯಲ್ಲು ಶ್ರೀಮಂನ್ ಮಹಾನಾಯಕಾಚಾರ್ಯ ನಾಯಕ

೭. ಸಿರೋಮಣಿಗಳಾದ ಕನಕಗಿರಿಯ ಲಕ್ಷ್ಮಿನಾಗತಿ ಯಿಂಮಡಿ ವುಡಸಿನಾಯಕರು

೮. ತಂಮ ಯಿಷ್ಟದೇವತೆಯಾದಂಥ ಕನಕಾಚಲ ಲಕ್ಷ್ಮೀನರಸಿಂಹಸ್ವಾಮಿಯ ಪರಮಾ

೯. ನುಗ್ರಹದಿಂದ ಸಕಲಿತಿಹಾಸ ಪುರಾಣಂಗಳನು ಜ್ಞಾನಿಗಳ ಮುಖದಿಂದ ಕೇಳಿ ಮತ್ತೆ

೧೦. ಮತ್ತೇ ಕೇಲಿ ಮತತ್ರಯದ ಸಂಖ್ಯೆ ಸಬ್ಯರಿಂದಲೂ ಮದಿಸಿ ನಿರ್ಣಯಿಸಿದ ತತ್ವನಿರ್ಣಯ

೧೧. ಮಾಡಲು ಸರ್ವಶಬ್ದ ವಾಚ್ಯ ಪರತತ್ವವಾದಂಥಾ ಶ್ರೀಮಂನ್ನಾರಾಯಣಸ್ವಾಮಿಯೇ

೧೨. ಲಕ್ಷ್ಮೀಪತಿಯೆನಿಸಿ, ಗುಣತ್ರಯವನ್ನು ಸೃಷ್ಟಿ ಸ್ಥಿತಿ ಸಂಹಾರಾರ್ಥವಾಗಿ ಧರಿಸಿದ

೧೩. ರಜೋಗುಣದಿಂದ ಶಿಷ್ಟಕಾರಣಮೂರ್ತಿಯಾದ ಬ್ರಹ್ಮನೇ ಜಗತ್ತಿನ ತಂದೆಯೆ

೧೪. ನಿಸಿದ ತಮೋಗುಣದಿಂದ ಸಂಹಾರ ಕಾರಣ ಮೂರ್ತಿಯಾದಂಥಾ ಮಹೇಶ್ವರನೆ

೧೫. ಜಗದ್ಗುರುವೆನಿಸಿದ ಸತ್ವಗುಣಗಳಿಂದ ಪರಿಪಾಲನೆಯ ಮಾಡುತ್ತಿದ್ದಂಥಾ ಲಕ್ಷ್ಮಿಪ

೧೬. ತಿಯಾದ ಶ್ರೀಮಹಾವಿಷ್ಣುವೇ ಜಗತ್ತಿಗೆ ಸ್ವಾಮಿಯನಿಸಿ ಕಡೇಲಿ ಶ್ರೀಮನ್ನಾರಯ

೧೭. ಣಸ್ವಾಮಿಯೇ ಯಿಷ್ಟುಕ್ಕು ವಬ್ಬನೆ ಕರ್ತನೆಂದು ನಿಶ್ಚಯಿಸಿದೆವು ಯಿದಕ್ಕೆ ಪ್ರಮಾಣವೇನು

೧೮. ಯೆದಂಡೆ ಬ್ರಹ್ಮಮೂರ್ತಿ ಪಿತಾಮಹ ಬ್ರಹ್ಮಾಯಂಬ ವಚನ ಪ್ರಮಾಣ

೧೯. ದಿಂದ ಜಗತ್ತಿಗೆ ಬ್ರಹ್ಮದೇವರು ತಂದೆಯಂತೆ ನಿಶ್ಚಯಿಸಿದೆವು ಜ್ಞಾನಮಿಚ್ಛೇದಾ

೨೦. ತುಯೆಂಬ ವಚನದಿಂದಲೂ ಕಾಶಿಯಲ್ಲಿ ತಾರಕ ಬ್ರಹ್ಮ ವ್ಯಾಜಪೇಯಯೆಂಬ

೨೧. ಪ್ರಮಾಣದಿಂದಲೂ ಶ್ರೀಮಂತ್ರವ ಜಪಿಸಿ ಮಾಡುತ್ತಿಹರಿಂದ ಪರಮೇಶ್ವರ

೨೨. ನು ಜಗತ್ತಿಗೆ ಗುರುವೆಂದು ನಿಶ್ಚಯಿಸಿದೆವು ಮೋಕ್ಷಮಿತಿಚ್ಛೆ ಜನಾರ್ಧನಾತ್ ನ ದೈವಂ

೨೩. ಕೇಶವಶ್ಚಕಂ| ನಾಸ್ತಿ ನಾರಾಯಣತ್ಪರಂ| ಯಿತಾದ್ಯಿ ಪ್ರಮಾಣಗಳಿಂದ ಶ್ರೀಮನ್ನಾರಾ

೨೪. ಯಣನೆ ಜಗತ್ತಿಗೆ ಸ್ವಾಮಿಯೆಂದು ನಿಶ್ಚಿಯಿಸಿದೆವು ಯಿ ಮೂರು ಮೂರ್ತಿಗಳಲ್ಲಿ ಜಗ

೨೫. ತ್ಪಿತ್ರು ಜಗದ್ಗುರು ಜಗತ್ಸಾಮಿಯೆಂದು ಜ್ಞಾನದ ದ್ರಢವಾಗಿ ನಂಬಿ ಭಜಿಸಿದವರಿಗೆ

೨೬. ಸದ್ಗತಿಯುಂಟು ಯಿ ಪ್ರಕಾರ ನಡೆವಂಥಾ ಜನರ . . ವನಿಪ ಗುರು ಮಾತ್ರಪಿತ್ರ

೨೭. ಭಕ್ತಿವುಳ್ಳಂತವರು ಯಿ ಮಾರ್ಗಕೆ ವಿರೋಧಿಗಳಾದವರು ನರಕಭಾಜನರಾಗಿ ಪ

೨೮. ವರಿಸಿ ಗುರು ಮಾತ್ರ ಪಿತ್ರಭಕ್ತಿ ಹೀನರಾಗಿ ಯಂದೆಂದಿಗೂ ಕಡೆಯಾದಂಥಾ ಅಂಧ

೨೯. ತಮಸ್ಸಿನೊಲಗೆ ಬೀಳುವರು ಯಿಲ್ಲಿ ನೋಡಿದರೂ ಅವರಿಗೆ ಪ್ರಾಯಶ್ಚಿತವಿಲ್ಲವು

೩೦. ...ಶ್ಲೋಕವು ಅಬ್ದೇಹ್ಯಾ ವಂದನಾಮ್ನಿ ಪ್ರತಿಥಗುಣಗಣೇ ಚೌತ್ರಮಾ . .

೩೧. ಚಾ ಶ್ವೇತ್ವಾದ್ಯೇ ದಿನೇ. ಸ್ಥಿರತರ ದಿವಸೇ ದಿವ್ಯಲಗ್ನೇ ಬುದೇಂದ್ಯೈಃ ಸಂಯುಕ್ತೇ

೩೨. ಸಕ್ತಃ ಸರಳಮತಿತಯಾ ಸಾರವಿದ್ಯಾಸವಾಚಂ ನಿರ್ನ್ನೇಯಂ ನಿರ್ನ್ನಿತಾಯ . ಧು

೩೩. ಲಗುಣಗಣೋಹುಡಿಚಭೂಪಾಲಮೌಳಿಯೇಕೋಪಿತ್ರಿ ಪರಿಪಾಲಕಃ ಪರಂಪರ್ಯೈಃ ಪಾರಾ

೩೪. ಚಗುಣ್ಯೆಯಸ್ಸತ್ವಾದಿಭೀಃ ಸಂಯುದ್ಯೈಃ ಮೆರ್ಯಾದಾ ಪರಿಪಾಲಕಃ ಪರಂಪರ್ಯೈಃ ಪಾರಾ

೩೫. ಯಣೋಯಂ ತ್ರಿಧಾ| ತಾತಃ ಪಂಕಜ ಸಂಭವೋಹಿ ಜಗತಾಂ ಜ್ಞಾನೋಪದೇಷ್ಟಾತಿ.

೩೬. ಪಃ ಶ್ರೀವಿಷ್ಣುಸ್ಸುರ ಮೌನಿಯೋಗಿ ವಿನುತಃ ಸ್ವಾಮಿ ರಮಾವಲ್ಲಭಃ| .....

೩೭. . . . ಧೇಯೋ ಭವದ್ಭಿಃ ಸತಾಂ ಸಿತ್ಯೈ . . . . ನ್ಯೋಯಂ ಸದಾ ಮಿಪ್ರಾ.....

೧೧

ಪೇಟೆ ಬಸವಣ್ಣ ದೇವಾಲಯದ ಎಡಕ್ಕೆ ಬಿದ್ದಿರುವ ತ್ರುಟಿತ ಶಾಸನ

(ನಾಡುನುಡಿ, ದೀ. ವಿ. ೧೯೯೭; IK. III. No. 399)

ತ್ರುಟಿತ. ಶಾಲಿವಾಹನ ಶಕ ೧೪೭೩, ಸಾರ್ವರಿ, ಜೇಷ್ಟ, ಬ. ೫ ಎಂದಿದ್ದು, ಇದು ಕ್ರಿ.ಶ. ೨೪.೫.೧೫೫೧ಕ್ಕೆ ಸರಿಹೊಂದುತ್ತದೆ. ಸದಾಶಿವದೇವರಾಯನು ಆಳುತ್ತಿದ್ದಾಗ ಮಹಾಮಂಡಲೇಶ್ವರ ಅಳಿಯ ತಿರುಮಲರಾಜನು ನಾವಿಂದರಾದ ತಿಂಮೋಜ, ಕೊಂಡೋಜರಿಗೆ ಕನಕಗಿರಿಯಲ್ಲಿ ಬಿಟ್ಟಿ-ಬಿರಾಡ, ಅನ್ನು-ಪನ್ನು ಮುಂತಾದ ತೆರಿಗೆಗಳನ್ನು ಬಿಟ್ಟಂತೆ ಉಲ್ಲೇಖವಿದೆ.

೧. ಸ್ವಸ್ತಿ ಶ್ರೀ .....

೨. ಶಕ ವರುಶ ೧೪೭೩ನೆಯ ಸಾರ್ವರಿ

೩. ವಸ್ತರದ ಜೇಷ್ಟ ಬ ೫ ಲೂ

೪. ... (ಜಾ)ಧಿರಾಜ) ರಾಜಪರಮೇಶ್ವರ

೫. ಸದಾಸಿವದೇವ ಮಹಾರಾಯರು

೬. ..ಮಂನ್ ಮಹಾಮಹಾಮಂಡಲೇಶ್ವರ ಅಳಿ

೭. ಯ ತಿರುಮಲರಾಜ ಅಯ

೮. ಮನ್ನೆಯ ನಾವಿಂದೆ ತ್ರಿಂವೋ

೯. ಕೊಂಡೋಜಗೆ ಕನಕಗಿರಿಯಲು ಯಾ

೧೦. .. ದಾನ .. ದೆರವ . ಜಗ ...

೧೧. .. ಟ್ಟಿ ಬಿರಾಡ ಅಂನು ಪಂನು ಸಿದಾಯ

೧೨. ಕಡಾಯ ಎಲ್ಲಲ್ಲುಯಿಲ್ಲದೆ ಸರ್ವಮಾ

೧೩. ಂನ್ಯವಾಗಿ ಪಾಲಿಸಿದೆಉ ಯೆ

೧೪. ಂದು ನಾ . ಸಿಲಾ ಸಾಸನವ

೧೫. .. ಯಿದಕೆ ಅವನಾನೊಬ್ಬನೊ

೧೬. ತಪಿದರೆ ವಾರಣಾಸಿಯಲೂ

೧೭. ... ಪಕೆ ಹೋಹರು ಯೆಂದು ಪಾಲಿ

೧೮. ಸಿದ ಸಾಶನಕ್ಕೆ ಮಂಗಳ ಮಹಾ.

೧೯. ಶ್ರೀ ಶ್ರೀ

೧೨

ಅದೇ ಗ್ರಾಮದ ಪಂಪಾಪತಿ ದೇವಾಲಯದ ಎಡಬದಿಯಲ್ಲಿ

ತ್ರುಟಿತ. ಕ್ರಿ.ಶ. ೧೬-೧೭ನೆಯ ಶತಮಾನದ ಈ ಶಾಸನವು ಸಂಸ್ಕೃತ ಭಾಷೆಯಲ್ಲಿದೆ ಹಾಗೂ ಅರ್ಥ ಸ್ಪಷ್ಟತೆಯಿಲ್ಲ.

೧. ....

೨. ....

೩. ಟೆ| .. ಯಾ ಶಂಕರೇಶ್ವರ್ಣ್ಯ| ಮದಕಾ

೪. .. ಥ . ಕಾರಿ .. ಲಾಗಿ ವಿಶಾಲಾಂ ಚ . ಪ್ರೇತಾ

೫. .... ತಾ| ಆರಾತಿದ ಸೇವಾ

೬. ... ಮರರಾಷ . ಚಾ .

೭. ... ಣಂತಯ್ಯಾದೇವ | ವಾಣಿ ತಪದಾ ...

೮. ....

೧೩

ಹಿರೇಮಾದಿನಾಳ

ಕುಲಕರ್ಣಿಯವರ ಹೊಲದಲ್ಲಿನ ಬಂಡೆಗಳಲ್ಲಿನ ಮೇಲೆ

(ಸಶುಕಾ. VI (3-4) P. 6-72; IK. III No. 398)

ಶಾಲಿವಾಹನ ಶಕವರುಷ ೧೫೮೪ ಶುಭಕೃತ್, ಶ್ರಾವಣ, ಶು. ೧೧ ಅಂದರೆ ಕ್ರಿ.ಶ. ೧೬-೭-೧೬೬೨ರಲ್ಲಿ ಕನಗಿರಿಯ ಲಕ್ಷ್ಮಿನಾಗತಿ ಯಿಂಮಡಿ ಉಡಸಿನಾಯಕನು ನರಭಕ್ಷಕ ಪ್ರಾಣಿಯನ್ನು ಕೊಂದ ವಿಠಲಾಪುರದ ವೀರಪ್ಪನ ಮಗ ಸೊಲಬಾಯನಿಗೆ ೧೨ ಎಕ್ರೆ? ಗದ್ದೆಯನ್ನು ನೀಡುತ್ತಾನೆ.

೧. ಶುಭಕೃತ ನಾಮ ಸ|| ಶ್ರಾವಣ ಶು ೧೧ ೧೫೮೪

೨. ಶ್ರೀಮಂನ್ಮ ಮಹಾನಾಯಕಾಚಾರ್ಯ ನಾಯ

೩. ಕ ಶಿರೋಮಣಿಗಳಾದಂಥ ಕನಕಗಿರಿಯ ಲಕ್ಷ್ಮಮ

೪. ನಾಗತಿ ಯಿಂಮಡಿ ಉಡಸಿನಾಯಕರ ಕೊ. ನರಮೇದ ಶಿ

೫. ಕಾರ ವಿಠಲಾಪುರದ ವೀರಪ್ಪನ ಮಗ ಸೊಲಬಾಯ

೬. ರ ಬರಸಿ ಕೊಡಸಿ ಹನ್ನೆ .. ಗದೆಯೂ ಸಂ||

೧೪

ಓಬಳಬಂಡಿ

ಹೊಲದ ಗುಂಡಿನಲ್ಲಿ

ತ್ರುಟಿತ. ಶಕ ೧೫. ಪ್ರಮಾದೀಚ, ಜೇಷ್ಠ, ಶು. ೧೫ರಲ್ಲಿ ಅಂದರೆ ಕ್ರಿ.ಶ.ಸು. ೨೦-೫-೧೬೭೩ರಲ್ಲಿ ಕನಕಗಿರಿ ಲಕ್ಷ್ಮಿನಾಗತಿ ಯಿಂಮಡಿ (ಉಡು) ಸಿನಾಯಕರ ಕಾಲದಲ್ಲಿ ಕೊಕನಕೆ ನಿಜಗುಣಪಂಡಿತನಿಗೆ

ದಾನ ನೀಡಿದಂತೆ? ತಿಳಿಯುತ್ತದೆ.

೧. ಪ್ರಮಾದಿಚ ನಾಮ ಸಂ॥ ಜೇಷ್ಠ ಶು ೧೫ಯಲು

೨. ಶ್ರೀಮಂನ್ ಮಾಹಾ ನಾಯಕಾಚಾರ್ಯ ನಾಯಕಶಿರೋ

೩. ಮಣಿಗಳಾದಂಥಾ ಕನಕಗಿರಿ ಲಕ್ಷ್ಮಿನಾಗತಿ ಯಿಂಮಡಿ

೪. .. ಸಿ ನಾಯಕರು ಕೊಕ್ಕನಕೆ ನಿಜಗುಣಪಂಡಿತಾ

೫. .. ದೇವ ನಟದೇವನೂರ ಸೆಹಾವಣನೂಗೆ

೬. ದು ಕಾಲಾರಿ ದೇವಲತ ಜರೆದು ಕಾಲು ....

೭. ಅರಸಪ್ಪ ೬। ೦॥ ೦ ಕೊಟ ....

೧೬

ಅದೇ ಗ್ರಾಮದಲ್ಲಿ

ಬಸಿರರ ಅಗೆಮ್ಮನನ್ನು ಹೆಸರಿಸುತ್ತದೆ.

೧. ಸ್ವಸ್ತಿ ಶ್ರೀ ಬಸಿರಜ ಅಗೆಮ್ಮ

೧೭

ಬಸ್ರಿಹಾಳ

ಕನಕಗಿರಿಯ ಪಶ್ಚಿಮಕ್ಕೆ ಲಕ್ಷ್ಮೀಗುಡ್ಡದ ಬುಡದಲ್ಲಿನ ಬಾವಿಯ ಗೋಡೆಯ ಮೇಲೆ

(ಸಶುಕಾ VI (3-4) P 6-72; IK.III No. 405)

ತ್ರುಟಿತ. ಶಾಲಿವಾಹನ ಶಕವರುಷ ೧೫೫೦ನೆಯ ಆಶ್ವೀಜ, ಶು. ೧೦ರಲ್ಲಿ ಅಂದರೆ ಕ್ರಿ.ಶ. ಸುಮಾರು ೫-೧೦-೧೬೭೮ರಲ್ಲಿ ಕನಕಗಿರಿ ಯಿಂಮಡಿ ಉಡುಸಿನಾಯಕನ ಹೆಂಡತಿ ಕನಕಮ್ಮನು ಬಾವಿಯನ್ನು ಕಟ್ಟಿಸಿದಂತೆ ತಿಳಿಯುತ್ತದೆ.

೧. ಶಾಲಿವಾಹನ ಶಕ ವರುಷ ೧೫೫೦ನೆಯ

೨. ಸ॥ ಅಶ್ವಿಜ ಶು॥ ೧೦ ಯಲು ಗು

೩. ಜ್ಜಲ ವಂಶೋದ್ಭವ ಕನಕಗಿರಿಯ ಯಿಂಮಡಿ ವು

೪. ಡಸಿನಾಯಕರ ರಾಣಿವಾಸ ಕನಕಂಮನವರು

೫. ಶ್ರೀಗುಡದ ಲಕ್ಷ್ಮಮನ ಸೆಖ ಕಟಿಸಿದ ಬಾವಿ

ತಾಮ್ರಶಾಸನ ೧

ಶ್ರೀ ಶ್ರೀ ಸಂ.ಪ್ರಾ.ಲೆ.ಸಂ., ಭಾಗ ೧, ಸಂಖ್ಯೆ ೧೩೧

ಕನಕಪ್ಪ ಉಡಚನಾಯಕ ಕ್ರಿ.ಶ. ೧೭೩೫

ಶೃಂಗೇರಿ ಮಠಕ್ಕೆ ತೊಂಡಿಹಾಳ ಗ್ರಾಮದಾನ

ಶುಭಮಸ್ತು। ನಮಸ್ತುಂಗ ಶಿರಶ್ಚುಂಬಿ। ಚಂದ್ರಚಾಮರ ಚಾರವೇ

ತ್ರೈಲೋಕ್ಯನಗರಾರಂಭ। ಮೂಲಸ್ತಂಭಾಯ ಶಂಭವೇ॥

ಹರೇರ್ಲೀವರಾಹಸ್ಯಾ। ದಂಷ್ಟ್ರಾ ದಂಡಸ್ಸಪಾತುನಃ। ಹೇಮಾ

ದ್ರಿಶಿಖರಾಯತ್ರ ದಾತ್ರೀಛದ್ರಶ್ರೀಯಂದಧೌ॥

ಸ್ವಸ್ತಿಶ್ರೀಜಯಾಭ್ಯುದಯ ಶಾಲೀವಾಹನಶಕ ವರ್ಷ ೧೬೫೭ನೆಯ ರಾಕ್ಷಸನಾಮಸಂ। ವೈಶಾಖ ಶು ೧೫ರಲ್ಲೂ ಶ್ರೀಮತ್ಸರಮಹಂಸ ಪರಿವ್ರಾಚಕಾಚಾರ್ಯ ವರ್ಯ। ಪದವಾಕ್ಯ ಪ್ರಮಾಣ ಪಾರಾವಾರಪಾರೀಣಯ ಮನಿಯಮಾಸನಪ್ರಾಣಾ ಯಾಮ ಪ್ರತ್ಯಾಹಾರ ಧ್ಯಾನ ಧಾರಣಾಸಮಾಧ್ಯಷ್ಟಾಂಗ ಯೋಗನಿರತರಾದ ಶೃಂಗೇರಿ ಶ್ರೀ ನೃಸಿಂಹಭಾರತೀಸ್ವಾಮಿ ಕರಕಮಲಸಂಜಾತರಾದ ಶೃಂಗೇರಿ ಶ್ರೀ ಶಂಕರಭಾರತೀಸ್ವಾಮಿಗಳ್ಯೆಯ್ಯನವರ ಮಠಧರ್ಮಕ್ಕೆ

ದೇವರವರ ಶಿಷ್ಯರಣ ಶ್ರೀರ್ಮ ಮಹಾನಾಯಕಾಚಾರ್ಯ ನಾಯಕ ಶಿರೋಮಣಿಗಳಾದ ಕನಕಗಿರಿ ಲಕ್ಷ್ಮಿನಾಗತಿ ರಾಜಾರಾಮ ಜಯಶಿಂಗ ಮುಮ್ಮಡಿ ಉಡಿಶಿನಾಯಕರ ಕೊಮಾರ ಕನಕಪ್ಪ ಉಡಶಿನಾಯಕರು ಬರೆಸಿಕೊಟ್ಟ ಅಗ್ರಹಾರ ಗ್ರಾಮದ ದಾನಪಟ್ಟೇವು ಅದಾಗಿ ದೇವರವರು ದಿಗ್ವಿಜಯ ಮಾಡಿ ನಮ್ಮ ಮೇಲೆ ದಯಚಿತ್ತವಿಟ್ಟುಬಂದು ಶ್ರೀ....ಸ್ವಾಮಿ ದರ್ಶನವ ಮಾಡಿಸಿ ನಮ್ಮ ಪುನೀತರ ಮಾಡಿದಲ್ಲಿ ನಮ್ಮ ಮಾತಾಪಿತೃಗಳಿಗೆ ಪುಣ್ಯಲೋಕ ಪ್ರಾಪ್ತಿಯಾಗಬೇಕೆಂದು ಈ ವೈಶಾಖ ಶು ೧೫ ಪುಣ್ಯಕಾಲದಲ್ಲಿ ನಮ್ಮ ನಗರಕ್ಕೆ ಸಲ್ಲುವ ಗ್ರಾಮದ ೧ ನಮ್ಮ ಶೀಮೆವಳ ಗಣ ತೊಂಡೇಹಾಳ ಗ್ರಾಮವನ್ನು ನಿಮ್ಮಿಗೆ ಉಮ್ಮಳ ಸಹಿರಣ್ಯೋದಕ ಧಾರಾಪೂರ್ವಕವಾಗಿ ಕೃಷ್ಣಾರ್ಪರ್ಣವಾಗಿ ಕೊಟ್ಟುಯಿಧೇವೆ ಈ ಗ್ರಾಮಕ್ಕೆ ಸಲ್ಲುವ ಚತುರ್ದಿಕವಳಗಣ ನಿಧಿನಿಕ್ಷೇಪ ಜಲಪಾಷಾಣ, ಅಕ್ಷಿಣಿ ಆಗಮಿಸಿದ್ಧ ಪುತ್ರಪೌತ್ರಪಾರಂಪರ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಅನುಭವಿಸಿಕೊಂಡು ಬಹುದೆಂದು ಬರೆಸಿಕೊಟ್ಟ ಗ್ರಾಮದಾನಪಟ್ಟೇ ಉ।

॥ಆದಿತ್ಯ ಚಂದ್ರಾವನಿಲೋನಲಶ್ಚ ಶ್ಲೋಕಗಳು ದ್ಯೌರ್ಭೂಮಿರಾಪೋ ಹೃದಯಂಯಮಶ್ಚ ಅಹಶ್ಚರಾತ್ರಿಶ್ಚ ಉಭೇಚಸಂಧ್ಯೆ ಧರ್ಮಶ್ಚಜಾನಾತಿನರಶ್ಚ ವೃತ್ರಂ। ಸ್ವದತ್ತಾ ದ್ವಿಗುಣಂ ಪುಣ್ಯ। ಪಂಪತ್ತಾನು ಪಾಲನಂ ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂಭವೇತ್ ॥೨॥ ಯಿಂದ್ರ ಪೃಭೃತಿ ಚಾಂಡಲಿ।

ಕಿಮಿದಂಪಚ್ಯತೇತ್ವಯಾ| ಕ್ಷಮಾಂಸಂಸುರ ಯಾಯುಕ್ತಂ| ಕರ್ಪಾನಜಿತಾಗ್ನಿ| ನಾ ಯೋಬ್ರಾಹ್ಮಣ ವೃತ್ತಿಶ್ಚಾ ನಾಶಯಂತಿ ಹರಂತಿಚ| ತೇಷಾಂಪಾದರ ಜೋಜಿತ್ತ ಕರ್ಮಣಾ ಪಹಿತಂಮಾಯಾ ||೨|| ಉಪಾಯನಾರ್ಥ ಶುಕ್ಲಾರ್ಥಂ ಗ್ರಾಮರಕ್ಷಾರ್ಥವೇವಯೆ ಗೃಹ್ಯಗ್ರಾಹರೆ ಸನ್, ದಂತ್ತೆ ಮಾತ್ರಗಾಮಿನಾ ||೪|| ಮಾತ್ಮಜಾಪರ ಮಹೀಪತಿ ವಂಶಜಾವಾ ಅನ್ಯನೃಪಾಸತತಮು ಜ್ವಲ ಧರ್ಮಚಿತ್ತಾಮಧರ್ಮ ಮ್ಯೆಮುನಪಂ ಎರಪಾಲಯಂತಾಕತ್ರಾದ ಕದ್ವ ಮಹಂಸಿರಸಾಸಹಾಮಿ ||೫|| ವಾಗ್ದತ್ತಂಮ ನೋದತ್ತಂ ಧಾರದತ್ತಂದಿನೇ ದಿನೇ ಷಷ್ಠಿರ್ವರ್ಷಸಹಪ್ರಾಣಿ ವಿಷ್ಠಾಯಾಂಜಾಯತೇಕ್ರಿಮಿಃ ||೬|| ಸ್ವದತ್ತಾ ಪುತ್ರಿ ಕಾಧಾತ್ರಿ ಪಿತೃದತ್ತಾ ಸಹೋದರೀ ಪರದತ್ತಾ ಸ್ವಮಾತಾಚದತ್ತಾಂ ಭೂಮಿ ಪರಿತ್ಯಜೇತ ||೭|| ಯೇತೈವಭಗಿನೀಲೋಕೇ ಸರ್ವೇಷಾಮೇವ ಭೂಭೂಜಾಂ| ನಭೊಜ್ಯನಕರ ಗ್ರಾಹ್ಯ ವಿಪ್ರದತ್ತಾವಸುಂಧರಾ ||೮||

೧೯

ತಾಮ್ರಶಾಸನ ೨

ಶ್ರೀ ಶ್ರೀ ಸಂ.ಪ್ರಾ.ಲೆ.ಸಂ., ಭಾಗ೧, ಸಂಖ್ಯೆ ೧೩೨

ರಂಗಪ್ಪನಾಯಕ, ಕ್ರಿ.ಶ. ೧೭೬೯

ಶೃಂಗೇರಿ ಮಠಕ್ಕೆ ಜೂಲದೊಡ್ಡಿ ಗ್ರಾಮದಾನ

ಶುಭಮಸ್ತು ನಮಸ್ತುಂಗಶಿರಶ್ಚುಂಬಿ ಚಂದ್ರ ಚಾಮರ ಚಾರವೆ ತ್ರೈಲೋಕ್ಯನಗರಾರಂಭ ಮೂಲಸ್ತಂಭಾ ಯಶಂಥವೇ ||೧|| ಸ್ವಸ್ತಿ ಶ್ರೀ ಜಯಾಭ್ಯುದಯ, ಶಾಲಿವಾಹನ ಶಕವರ್ಷಂಗಳು ೧೬೯೦ನೆಯ ಸರ್ವಧಾರಿಸಂ| ರದ ಮಾಘ ಶು ೫ ಲ್ಲೂ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯಪದವಾಕ್ಯ ಪ್ರಮಾಣ ಪಾರವಾರ ಪಾರೀಣ ಯಮನಿ ಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗನಿರತರಾದ ಶೃಂಗೇರಿ ಶ್ರೀವಿದ್ಯಾಶಂಕರ ದೇವರ ದಿವ್ಯ ಶ್ರೀಪಾದಪದ್ಮಾರಾಧಕರಾದ ಶೃಂಗೇರಿ ಶ್ರೀ ಶಂಕರ ಭಾರತೀಸ್ವಾಮಿಗಳ್ಯೆಯ್ಯನವರ ಕರಕಮಲ ಸಂಜಾತರಾದ ಶೃಂಗೇರಿ ಶ್ರೀ ನರಸಿಂಹ ಭಾರತೀಸ್ವಾಮಿಗಳ್ಯೆಯ್ಯನವರ ಮಠದ ಧರ್ಮಕ್ಕೆ.

ದೇವರ ಶಿಷ್ಯನು. ಶ್ರೀಮನ್ ಮಹಾನಾಯಕಾಚಾರ್ಯ ನಾಯಕ ಶಿರೋಮಣಿ, ಕನಕಗಿರಿ ಲಕ್ಷ್ಮಪ ನಾಗತಿ ರಾಜರಾಮ ಜಯಸಿಂಗ ಮುಮ್ಮಡಿ ಕನಕಪ್ಪ ಉಡಿಸಿ ನಾಯಕರ ಕುಮಾರ ರಂಗನಾಯಕನು ಬರ್ಯೆಸಿ ಕೊಟ್ಟ ಗ್ರಾಮದ ದಾನಪತ್ರ ಕ್ರಮವೆಂತ್ತಂದರೆ | ಪೂರ್ವದಲ್ಲಿ ರಾಜೇ ಶ್ರೀ ನಮ್ಮ ಹೀರೇ ಕರ್ತರು ಶ್ರೀ ಶೇವೆಗೆಮ ತೊಂಡೇಹಾಳು ಗ್ರಾಮವನ್ನು ಸಮರ್ಪಣೆ ಮಾಡಿಯಿಧೇವೆಂಬ ಹಾಗೆ ದಾನ ಪಾತ್ರ ಬರಕೊಟ್ಟದಲ್ಲಿ ಅದು ಅನುಭವಯಿಲ್ಲದೆ ಇದ್ದ ಕಾರಣ ಸಾಂಪ್ರತಾಯೀಸಂ| ರದಲ್ಲಿ ದೇವರವರು ನಮ್ಮ ಸ್ಥಳಕ್ಕೆ ಅನುಗ್ರಹಮಾಡಿ ಬಂದು ನಮ್ಮನು ಮಡಿತ್ತನ ಮಾಡಿದಲ್ಲಿ ತೊಂಡೇಹಾಳು ಗ್ರಾಮವಾದರೂ

ನಲುಲಶೀಮೆ, ಸರದೆ ತಾಯಿಕೆ ಉಮ್ಮಳಿ ಕೊಟ್ಟ ಕಾರಣ ಅದರ ಬದಲಿಗೆ ತ|| ತಲೆಕಾನಹಾಳು ಸಮ್ಮತ್ತಿನಾಗಮೆ || ಜೂಲು ದೊಡ್ಡಿ ಗ್ರಾಮವನ್ನು ಧಾರಾದತ್ತಾ ಕೃಷ್ಣಾರ್ಪಣವಾಗಿ ಕೊಟ್ಟು ಯಿಧೇನೆ. ಈ ಗ್ರಾಮಕ್ಕೆ ಸಲ್ಲುವ ಸುವರ್ಣಾದಾಯ ದವನಸ ಆದಾಯ ನೀರಾರಂಭ, ಕಾಡಾರಂಭ, ಜಲಪಾಷಾಣ ನಿದಿ ನಿಕ್ಷೇಪ ಆಗಮಿ ಆಕ್ಷಿಣಿ ಸಿದ್ಧ ಸಾಧ್ಯಗಳೆಂಬ ಅಷ್ಟಭೋಗ ತೇಜೋಪಾರ್ಜನೆಯನ್ನು ಅಚಂದ್ರಾರ್ಕಸ್ಥಾಯಿಗಳಾಗಿ ಅನುಭವಿಸುವುದಕ್ಕೆ ನಾನು ನನ್ನ ಪುತ್ರ ಪರಂಪಪಾ ನಡೆಸುತ್ತೇವೆಂದು ಬರಕೊಟ್ಟ ಮಾ || ಜೂಲುದೊಡ್ಡಿ ಗ್ರಾಮದ ಅಗ್ರಹಾರದ ದಾನಪತ್ರ.

ಸ್ವದತ್ತಾದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ| ವರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್|| ದಾನಪಾನ ಯೋರ್ಮಧ್ಯೇ ದಾನಛ್ರೇ ಯೋನುಪಾಲನಂ| ದಾನಾತ್ ಸ್ವರ್ಗಮವಾಪ್ನೋತಿಪಾಲನಾದಚ್ಚು ತಂಪದಂ.

೨೦

ತಾಮ್ರಶಾಸನ ೩

ಶ್ರೀ ಶ್ರೀ ಸಂ.ಪ್ರಾ.ಲೆ.ಸಂ., ಭಾಗ ೧, ಸಂಖ್ಯೆ ೧೩೩

ರಂಗಪ್ಪನಾಯಕ, ಕ್ರಿ.ಶ. ೧೭೬೯

ಶೃಂಗೇರಿ ಮಠಕ್ಕೆ ಸೂಕುಂಟಿ ಗ್ರಾಮದಾನ

ಶುಭಮಸ್ತು ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರಚಾರವೇ|
ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ||೧||

ಸ್ವಸ್ತಿಶ್ರೀಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೬೯೦ನೆಯ ಸರ್ವಧಾರಿ ಸಂವತ್ಸರದ ಮಾಘ ಶು ೫ಯಲ್ಲಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರಪಾರೀಣ ಯುಮನಿಯಾಸನ ಪ್ರಾಣಾಯಾಮ ಪ್ರತ್ಯಾಹಾರಧ್ಯಾನಧಾರಣ ಸಮಾಧ್ಯಷ್ಟಾಂಗಯೋಗನಿರತರಾದ ಶೃಂಗೇರಿ ಶ್ರೀ ವಿದ್ಯಾಶಂಕರ ದೇವರ ದಿವ್ಯ ಶ್ರೀ ಪಾದಪದ್ಮರಾಧಕರಾದ ಶೃಂಗೇರಿ ಶಂಕರ ಭಾರತೀಸ್ವಾಮಿಗಳವರ ಕರಕಮಲ ಸಂಜಾತರಾದ ಶೃಂಗೇರಿ ಶ್ರೀ ನರಸಿಂಹ ಭಾರತೀಸ್ವಾಮಿಗಳವರ ಮಠದ ಧರ್ಮಕ್ಕೆ

ದೇವರವರಶಿಷ್ಯರು ಶ್ರೀಮನ್ ಮಹಾನಾಯಕಾಚಾರ್ಯ ನಾಯಕಶಿರೋಮಣಿ ಕನಕಗಿರಿ ಲಕ್ಷ್ಮನಾಗತಿ ರಾಜರಾಮಜಯಸಿಂಗ ಮುಮ್ಮಡಿ ಕನಕಪ್ಪವುಡಿಸಿನಾಯಕರ ಕುಮಾರ ರಂಗಪ್ಪನಾಯಕರು ಬರೆಸಿಕೊಟ್ಟ ಗ್ರಾಮದ ದಾನಪತ್ರದ ಕ್ರಮವೆಂತೆಂದರೆ ಪೂರ್ವದಲ್ಲಿ ರಾ|| ನಮ್ಮ ಹಿರೇಕರ್ತರು ಶ್ರೀ ಸೇವೆಗೆ ಮ|| ತೊಂಡೇಹಾಳ ಗ್ರಾಮವನ್ನು ಸಮರ್ಪಣೆ ಮಾಡಿದೇವೆಂಬಹಾಗೆ, ದಾನಪತ್ರ ಬರಕೊಟ್ಟಲ್ಲಿ ಅದು

ಅನುಭವಯಿಲ್ಲದೆ ಇದ್ದಕಾರಣ ಸಾಂಪ್ರತ ಈ ||ಸಂ|| ದಲ್ಲಿ ದೇವರವರು ನಮ್ಮ ಸ್ಥಳಕ್ಕೆ ಅನುಗ್ರಹಮಾಡಿ ಬಂದು ನಮ್ಮನ್ನು ಪುನೀತರ ಮಾಡಿದಲ್ಲಿ ತೊಂಡೇಹಾಳು ಗ್ರಾಮವಾದರೂ ನವುಲೆ ಶೀಮೆ ಸರದೇಶಾಯಿಕೆ ಉಮ್ಮಳಿ ಗ್ರಾಮವನ್ನು ಧಾರದತ್ತ ಕೃಷ್ಣಾರ್ಪಣವಾಗಿ ಕೊಟ್ಟಿದ್ದೇವೆ. ಈ ಗ್ರಾಮಕ್ಕೆ ಸಲ್ಲುವ ಸುವರ್ಣಾದಾಯ ದವಸಾದಾಯ ನೀರಾರಂಭ, ಕಾಡಾರಂಭ, ನಿಧಿ ನಿಕ್ಷೇಪ ಜಲಪಾಷಾಣ ಆಗಮಿ, ಅಕ್ಷಿಣಿ, ಸಿದ್ಧಸಾಧ್ಯಂಗಳೆಂಬ ಅಷ್ಟಭೋಗ ತೇಜೋಪಾರ್ಜನೆಯ ನಾಡು ಆ ಚಂದ್ರರ್ಕಸ್ಥಾಯಿಗಳಾಗಿ ಅನುಭವಿಸುವುದಕ್ಕೆ ನಾನು ನಮ್ಮ ಪುತ್ರ ಪೌತ್ರ ಪಾರಂಪರ್ಯ ನಡೆಸುತ್ತಿದ್ದೇವೆಯೆಂದು ಬರೆಸಿಕೊಟ್ಟ ಮ|| ಸೂಕುಂಟೆ ಗ್ರಾಮದ ಅಗ್ರಹಾರದ ದಾನಪತ್ರವು

ಸ್ವದತ್ತಾದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ| ಪರದತ್ತಾಪಹಾರೇಣ| ಸ್ವದತ್ತಂನಿಷ್ಫಲಂ ಭವೇತ ||೧|| ದಾನಪಾಲನಯೋಮ ದ್ಯೆ ದಾನಾತ್ ಛ್ರೇಯೋನುಪಾಲನಂ| ದಾನಾತ್ಸ್ಯರ್ಗ ಮವಾಪ್ನೋತಿ ಪಾಲನಾದಚ್ಚುತಂ ಪದಂ ||೨||

೨೧

ಸನದು

ಶ್ರೀಕೃಷ್ಣ ಪಾರಿಜಾತ ಒಂದು ಅಧ್ಯಯನ ಪುಟ ೪೬

ರಂಗಪ್ಪನಾಯಕ, ಕ್ರಿ.ಶ. ೧೭೫೨

ರಾಜಪುರೋಹಿತರಿಗೆ(?) ಭೂಮಿ ದಾನ ನೀಡಿದ್ದು

ಸನದು

ಶ್ರೀ ಕನಕಗಿರಿರಾಯಾ

ನಮಸ್ತುಂಗ ಸಿರಶ್ಚುಂಬಿ ಚಂದ್ರಚಾಮ

ರ ಚಾರವೆ ತ್ರೈಲೋಕ್ಯ ನಗರಾರಂಭ ಮೂಲ

ಸ್ತಂಭಾಯ ಶಾಂಭವೆ||

ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ

೧೬೭೪ನೆಯ ಅಂಗಿರಸನಾಮ ಸಂ. ೧೧ ರದ

ವೈಶಾಖ ಶು ೧೧ ೭ಯಲು......... ರಾಜಪಿಯೊ

ಪಿತವೆ ೧೧ ಕೃಷ್ಣಭಟ್ಟರ ಮಿತ್ರರಾದ ಅಯ್ಯಂಭ

ಟರಿಗೆ ಶ್ರೀ ಮನ್ಮಹಾನಾಯಕಾಚಾರ್ಯ ನಾಯಕ

ಸಿರೋಮಣಿ ಮುಮ್ಮಡಿ ಕನಕಪ್ಪ ಉಡಸಿನಾಯಕರ

ಕೊಮಾರ ರಂಗಪ್ಪನಾಯಕರವರು ಬರೆಸಿಕೊಟ್ಟ

ಭೂದಾನದ ದಾನಪತ್ರವು......................

....

....

ನೀನವಬ್ಬರ ಗೊಡವಿ ಹೋಗದೆ ಮರ್ಯಾದಿಯ

ಲ್ಲಿ ಮನಿವಳಗೆ ಇದ್ದ ಕಾರಣ ವಳ್ಳೆಯವರುಯೆಂದು

ನಿನ್ನ ಮೇಲೆ ಅನುಗ್ರಹ ಮಾಡಿ ಮೂರ್ತ ಪ್ರಕಾರದಿಂದ

..............................ಸ್ವಸ್ತಿ ಬದುಕಿಗೆ ಅಪ್ಪಣೆ ಕೊಟ್ಟ

ದ್ದೇವೆ ಮೊದಲೆ ಅರಮನಿವಳಗೆ ಹ್ಯಾಗೆ ತಿರಿಗ್ಗಿ

ದ್ದುಕೊಂಡುಯಿದ್ದರಿಂದೆ ಪ್ರಕಾರ ನೀನು ಪಂಚಾಂಗ

ನಿಯ ಶ್ರೇಯೋಭಿಷ್ಠಿಗಿ

ಗಳ ಪೂರೈಸಿಕೊಂಡು ನಿನ್ನಾ ಮಿತ್ರ ಪುತ್ರ ಪಾರಂಪರ್ಯ

ಚಂದ್ರಾರ್ಕಸ್ತಯಿಗಳಾಗಿ ಸುಖವನ್ನನುಭ

ವಿಸಿಕೊಂಡುಯಿಹುದೆಂದು ಬರೆಸಿಕೊಟ್ಟ ದಾನದ

ದಾನ ಪತ್ರ

ಕನಕಗಿರಿಯನ್ನು ಆಳಿದ ನಾಯಕರು

೧. ಪರಸಪ್ಪ ಉಡಿಚನಾಯಕ (ಕ್ರಿ.ಶ. ೧೪೩೬-೧೫೧೦)

೨. ನವಾಬ ಉಡಿಚನಾಯಕ (ಕ್ರಿ.ಶ. ೧೫೧೦-೧೫೩೩)

೩. ಕೆಲವಡಿ ಉಡಿಚನಾಯಕ (ಕ್ರಿ.ಶ. ೧೫೩೩-೧೫೭೮)

೪. ಒಂದನೇ ಕನಕಪ್ಪ ಉಡಿಚನಾಯಕ (ಕ್ರಿ.ಶ. ೧೫೭೮-೧೬೧೮)

೫. ಇಮ್ಮಡಿ ಉಡಿಚನಾಯಕ (ಮುಮ್ಮಡಿ ಉಡಿಚನಾಯಕ) (ಕ್ರಿ.ಶ. ೧೬೧೮-೧೬೪೯)

೬. ಇಮ್ಮಡಿ ಕನಕಪ್ಪನಾಯಕ (ಚಿಕ್ಕಕನಕಪ್ಪನಾಯಕ) (ಕ್ರಿ.ಶ. ೧೬೪೯-೧೭೪೫)

೭. ಮುಮ್ಮಡಿ ಕನಕಪ್ಪ ಉಡಿಚನಾಯಕ (ಕ್ರಿ.ಶ. ೧೭೪೫-೧೭೫೨)

೮. ಹಿರೇ ರಂಗಪ್ಪ ನಾಯಕ (ಕ್ರಿ.ಶ. ೧೭೫೨-೧೭೭೬)

೯. ಹಿರೇನಾಯಕ (ಕ್ರಿ.ಶ. ೧೭೭೬-೧೮೦೦)

ಹುಲಿಹೈದರ ಸಂಸ್ಥಾನದ ನಾಯಕ ಅರಸರು ಮತ್ತು ರಾಣಿಯರು

೧. ರಂಗನಾಥಪ್ಪ ನಾಯಕ

೨. ರಂಗಪ್ಪನಾಯಕ

೩. ಉಡಿಚಪ್ಪ ನಾಯಕ

(ರಾಣಿ ವೆಂಕಟಮ್ಮ)

೪. ರಂಗಪ್ಪನಾಯಕ

(ರಾಣಿ ಗೌರಮ್ಮ)

(ಮೇಲಿನ ನಾಯಕರ ಆಳಿದ ಕಾಲಾನುಕ್ರಮಣಿಕೆಗೆ ಸೂಕ್ತ ದಾಖಲೆಗಳ ಕೊರತೆ ಇದೆ. ಕೆಲವು ಶಾಸನಗಳು, ತಾಮ್ರಪತ್ರಗಳು ಮತ್ತು ಬೇರೆ ಪ್ರದೇಶದ ಬೇಡ ದೊರೆಗಳೊಡನೆ ಕನಕಗಿರಿ ನಾಯಕರು ಮಾಡಿದ ವೈವಾಹಿಕ ಸಂಬಂಧದ ಕಾಲಮಾನವನ್ನು ಪರಿಗಣಿಸಿ ಈ ನಾಯಕ ಕಾಲಾನುಕ್ರಮ ಮತ್ತು ಆಳ್ವಿಕೆಯ ಕಾಲವನ್ನು ನಿರ್ಧರಿಸಲಾಗಿದೆ).

ಅಧ್ಯಾಯ - ೪

ಸಾಮಾಜಿಕ ಜೀವನ

೪.೧. ಜನಪದ ಸಮುದಾಯಗಳು

೪.೨. ಕುಟುಂಬ ಪದ್ಧತಿ

೪.೩. ಮನೆಗಳ ಮಾದರಿ

೪.೪. ಆಹಾರ ಪದ್ಧತಿ

೪.೫. ಉಡುಗೆ - ತೊಡುಗೆ

೪.೬. ಜನಪದ ವೈದ್ಯ

೪.೭. ನ್ಯಾಯ ವ್ಯವಸ್ಥೆ

೪.೮. ಬೇಟೆ

೪.೯. ಅತಿಥಿ ಸತ್ಕಾರ

೪.೧೦. ಜಾತಿ ಬಹಿಷ್ಕಾರ, ಜಾತಿಗೆ ಸೇರಿಸಿಕೊಳ್ಳುವಿಕೆ

೪.೧೧. ಅರ್ಥವ್ಯವಸ್ಥೆ

೪.೧೨. ಜನಪದ ಆಟಗಳು

೪.೧೩. ಜನಪದ ಕಲೆ

೪.೧೪. ಸಾಮಾಜಿಕ ಸಂಘ ಸಂಸ್ಥೆಗಳು

ಸಾಮಾಜಿಕ ಜೀವನ

ಯಾವುದೇ ಒಂದು ಸಮಾಜ, ಸಮುದಾಯ ಮೇಲ್ನೋಟಕ್ಕೆ ಅತಿ ಸರಳವೆನ್ನುವಂತೆ ಕಂಡು ಬಂದರೂ, ಅದು ತನ್ನೊಡಲ ಒಳಗೆ ತನಗೇ ಅರಿವಾಗದಂತೆ, ಸೂಕ್ಷ್ಮವೂ, ಸಂಕೀರ್ಣವೂ ಆದ ಸಾಮಾಜಿಕ ಸ್ವರೂಪಗಳನ್ನು ಹೊಂದಿರುತ್ತದೆ. ವ್ಯವಸ್ಥೆಯೊಳಗೆ ಸುಭದ್ರತೆಯನ್ನು ಕಾಯ್ದುಕೊಳ್ಳುವುದು ಆ ಸಮಾಜಕ್ಕೆ ಮುಖ್ಯವಾಗಿರುತ್ತದೆ. ಸುಭದ್ರತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಸಾಮಾಜಿಕ ಜೀವನದಲ್ಲಿ ತನ್ನದೇ ಆದ ವರ್ಗ, ಕುಟುಂಬ ಪದ್ಧತಿ, ಮನೆನಿರ್ಮಾಣ, ಗೃಹಪ್ರವೇಶ, ನ್ಯಾಯಪದ್ಧತಿ, ಆಹಾರ ಪದ್ಧತಿ, ಉಡುಗೆ -ತೊಡುಗೆ, ವೈದ್ಯ, ಮದ್ದು, ಚಿಕಿತ್ಸೆ, ಬೇಟೆ, ಜಾತಿ ಬಹಿಷ್ಕಾರ, ಜನಪದ ಕಲೆಗಳು, ಅತಿಥಿಸತ್ಕಾರ, ಅರ್ಥವ್ಯವಸ್ಥೆ ಮುಂತಾದವುಗಳನ್ನು ಹೊಂದಿದೆ. ಕನಕಗಿರಿಯ ಪರಿಸರಕ್ಕೆ ಎಷ್ಟೇ ಆಧುನಿಕತೆಯ ಪ್ರಭಾವ ಆದರೂ ತನ್ನ ಸಂಪ್ರದಾಯ, ಆಚಾರ-ವಿಚಾರಗಳನ್ನು ಬಿಡದೆ ಮುಂದುವರೆಸಿಕೊಂಡು ಬರುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದು.

೪.೧. ಜನಪದ ಸಮುದಾಯಗಳು

ಕನಕಗಿರಿಯಲ್ಲಿ ಈ ಕೆಳಗಿನಂತೆ ಜನಪದ ವರ್ಗಗಳು ಕಂಡುಬರುತ್ತವೆ.

೪.೧.೧. ವೀರಶೈವರು (ಲಿಂಗಾಯಿತ)

ಇವರಲ್ಲಿ ಜಂಗಮರು, ಪಂಚಮಸಾಲಿ, ಗಾಣಿಗ, ಸಜ್ಜನ, ರಡ್ಡೇರ್, ಕುರುಹೀನಶೆಟ್ಟಿ, ಬಣಜಿಗ, ಸಿಂಪಿಗ, ಎಂಬ ಪಂಗಡಗಳಿವೆ. ಇವರೆಲ್ಲರಲ್ಲಿ ಜಂಗಮನೇ ಶ್ರೇಷ್ಠ ಎಂಬ ಭಾವನೆ ಇದೆ. ಇವರಲ್ಲಿ ಮಡಪತಿ ಎಂಬ ಪಂಗಡದೊಂದಿಗೆ ವೈವಾಹಿಕ ಸಂಬಂಧಗಳು ನಡೆಯುವುದಿಲ್ಲ. ಇವರಲ್ಲಿ ೫ ಪೀಠಗಳು ಮತ್ತು ೫ 'ಬಗೆ'ಗಳಿರುತ್ತವೆ. ಸ್ವಜಾತಿಯ 'ಬಗೆ'ಗಳಲ್ಲಿ ಮದುವೆ ನಿಷೇಧ. ಈಗೀಗ ಇಂತಹ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ, ವೀರಶೈವರಾದರೆ ಸಾಕು ಮದುವೆ ಮಾಡಿಕೊಳ್ಳಲು ಅಡ್ಡಿ ಇಲ್ಲ ಎನ್ನುವವರಿದ್ದಾರೆ. ಇವರ ಒಟ್ಟು ಮನೆಗಳು ಸು.೪೦೦. ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಹೊರತುಪಡಿಸಿದರೆ, ಇವರೆಲ್ಲರ ಆಚಾರ-ವಿಚಾರ ಸಂಪ್ರದಾಯಗಳು ಒಂದೇ ಆಗಿವೆ. ಈ ಸಮುದಾಯದಲ್ಲಿ ಇಂತಹುದೇ ಪ್ರಮುಖ ವೃತ್ತಿ ಎಂದು ಹೇಳಲು ಕಷ್ಟಸಾಧ್ಯ. ಕೃಷಿ, ವ್ಯಾಪಾರ, ನೌಕರಿ, ಕೂಲಿ ಹೀಗೆ ಅನೇಕ ವೃತಿಗಳಲ್ಲಿ ತೊಡಗಿದ್ದಾರೆ. ಶಿವ, ವೀರಭದ್ರ, ಬಸವಣ್ಣ ಇವರ ಆರಾಧ್ಯ ದೈವಗಳಾಗಿವೆ.

೪.೧.೨. ಬ್ರಾಹ್ಮಣ

ಸ್ಮಾರ್ಥ, ವೈಷ್ಣವ, ಶ್ರೀವೈಷ್ಣ, ಶೈವ ಎಂಬ ಒಳಪಂಗಡಗಳಿದ್ದು, ಪಂಗಡಗಳಲ್ಲಿ ಹೆಚ್ಚು-ಕಡಿಮೆ ಎಂಬ ಭಾವನೆಗಳುಂಟು. ಕೊಡುಕೊಳ್ಳುವಿಕೆ ನಿಷೇಧವಿದ್ದರೂ ಊಟ ಉಪಚಾರ ನಡೆಯುತ್ತದೆ. ಈಗೀಗ ಇಂತಹ ಕಟ್ಟುಪಾಡುಗಳು ಸಡಿಲಗೊಳ್ಳುತ್ತಿವೆ. ಸು.೬೦ ಮನೆಗಳು, ೩೦೦ ಜನಸಂಖ್ಯೆಯನ್ನು ಹೊಂದಿರುವ ಈ ಸಮುದಾಯಕ್ಕೆ ಕನಕಾಚಲ ಲಕ್ಷ್ಮೀನೃಸಿಂಹ, ವೆಂಕಟರಮಣ, ರಾಘವೇಂದ್ರ ಪ್ರಮುಖ ಆರಾಧ್ಯ ದೈವಗಳಾಗಿವೆ.

೪.೧.೩. ಗಂಗಾಮತಸ್ಥರು

ಸು.೨೫೦ ಕುಟುಂಬಗಳಿರುವ ಈ ಸಮುದಾಯದ ಸಂಖ್ಯೆ ೨೫೦೦ರಷ್ಟಿದೆ. ಕಬ್ಬೇರ, ಕಬ್ಬಲಿಗ, ಬಾರಕೇರ, ಮೀನುಗಾರ, ಅಂಬಿಗ, ಜಾಲಗಾರ, ಬೆಸ್ತ ಎಂದೂ ಸಹ ಈ ಸಮುದಾಯವನ್ನು ಕರೆಯುತ್ತಾರೆ. ಕನಕಗಿರಿಯು ಒಣ ಬೇಸಾಯ ಪ್ರದೇಶವಾದ್ದರಿಂದ ಇಲ್ಲಿ ಅಂಬಿಗ, ಬೆಸ್ತ, ಮೀನುಗಾರ ವೃತ್ತಿ ಕಡಿಮೆ. ವೆಂಕರಮಣ, ಹುಲಿಗೆಮ್ಮ ಈ ಸಮುದಾಯದ ಮನೆ ದೇವರುಗಳಾಗಿವೆ. ಬೇರೆ ವೃತ್ತಿಯಲ್ಲಿತೊಡಗಿರುವ ಇವರುಗಳಲ್ಲಿ ಸುಣ್ಣ ಮಾರುವ ವೃತ್ತಿ ಪ್ರಮುಖವಾಗಿ ಕಂಡು ಬರುತ್ತದೆ.

೪.೧.೪. ರೆಡ್ಡಿ

ಸುಮಾರು ೨೦೦ ಮನೆಗಳು, ೨೫೦೦ ಜನಸಂಖ್ಯೆ ಹೊಂದಿರುವ ಈ ಸಮುದಾಯದಲ್ಲಿ ಲಿಂಗಸಹಿತ, ಲಿಂಗರಹಿತ ವರ್ಗಗಳಿವೆ. ಈ ವರ್ಗಗಳಲ್ಲಿ ಇತ್ತೀಚೆಗೆ ಕೊಡುಕೊಳ್ಳುವಿಕೆ ನೆಡೆಯುತ್ತಿದೆ. ಲಿಂಗ ಧರಿಸುವವರು ಶ್ರೇಷ್ಟ ಎಂಬ ಭಾವನೆಯೂ ಉಂಟು. ಚಿತ್ತರಕಿ, ಮಾದಿನಾಳ್ ಎಂಬ ಬೆಡಗುಗಳಿದ್ದು, ಇವರ ವಿವಾಹಾದಿ ಅನೇಕ ಆಚರಣೆಗಳಿಗೆ ಬ್ರಾಹ್ಮಣ ಪುರೋಹಿತರನ್ನು ಅವಲಂಬಿಸಿದ್ದಾರೆ. ವೀರಭದ್ರ ಇವರ ಕುಲದೇವರು. ಕೃಷಿ ಇವರ ಪ್ರಮುಖ ವೃತ್ತಿಯಾಗಿದೆ.

೪.೧.೫. ಬಣಜಿಗ

ಬಣಜಿಗ ಎಂದ ಕೂಡಲೆ
|| ಎಣ್ಣೆ ಗಾಣಿಗ ಬಲ್ಲ
ಸುಳ್ಳು ಸಿಂಪಿಗ ಬಲ್ಲ
ಕಳ್ಳ ತಳವಾರ ಬಲ್ಲ | ಬಣಜಿಗ

ಎಲ್ಲ ಎಲ್ಲವನು ಬಲ್ಲ || ಸರ್ವಜ್ಞ || - ಎಂಬ ತ್ರಿಪದಿಯು ಜ್ಞಾಪಕಕ್ಕೆ ಬರುತ್ತದೆ. ಅಂದರೆ ಈ ತ್ರಿಪದಿಯಲ್ಲಿ ತುಂಬಾ ಜಾಣರು ಎಂಬುದು ವ್ಯಕ್ತವಾಗಿದೆ. 'ಬಣಜಿಗ' ಎಂಬ ಪದವು 'ವಣಜಿಗ' ಎಂಬ ಪದದಿಂದ ಬಂದದ್ದು. ಇವರು ಬಹು ಪ್ರಾಚೀನ ಕಾಲದಿಂದಲೂ ವರ್ತಕರ ಸಂಘವನ್ನು ಕಟ್ಟಿಕೊಂಡು ವ್ಯಾಪಾರ ಮಾಡುತ್ತಿದ್ದರೆಂಬುದಕ್ಕೆ ಶಾಸನಗಳು ಆಧಾರವಾಗಿವೆ (ಶಾಸನಗಳಲ್ಲಿ ಕರ್ನಾಟಕ ವರ್ತಕರು ಡಾ.ಬಿ.ಆರ್.ಹಿರೇಮಠ). ಸು. ೮೦ ಮನೆಗಳಿರುವ ಈ ಸಮುದಾಯದ ವೃತ್ತಿ ಪ್ರಮುಖವಾಗಿ ದಲಾಲಿ ವ್ಯಾಪಾರ ಮತ್ತು ಕೃಷಿಯಾಗಿದೆ.

೪.೧.೬. ಹೂಗಾರರು

'ಜೀರ'ರೆನ್ನುವ ಇನ್ನೊಂದು ಹೆಸರು ಈ ಸಮುದಾಯಕ್ಕಿದೆ. ಇವರ ಆಚಾರ-ವಿಚಾರ, ಸಂಪ್ರದಾಯಗಳು ವೀರಶೈವ ಪದ್ಧತಿಯನ್ನು ಹೋಲುತ್ತವೆ. ಹೂವು ಕಟ್ಟಿ, ಮಾಲೆ ಮಾಡಿ ಮಾರುವುದರಿಂದ ಹೂಗಾರರೆಂದು ಕರೆಯುತ್ತಾರೆ. ಕೆಲವರು ಕುಲಕಸುಬೆಂದು ಹೂಮಾರುವ ಕೆಲಸ ಮಾಡಿದರೆ, ಕೆಲವರು ಬೇರೆ ಕೆಲಸಗಳಲ್ಲಿ ತೊಡಗಿದ್ದಾರೆ. ಇವರಲ್ಲೂ ಒಳಪಂಗಡಗಳಿವೆ. ಸು ೧೫ರಿಂದ ೨೦ ಮನೆಗಳು, ೧೦೦ ಜನಸಂಖ್ಯೆಯನ್ನು ಹೊಂದಿದ್ದಾರೆ.

೪.೧.೭. ಗೌಳೇರು

೫೦ ಮನೆಗಳಿರುವ ಗೌಳೇರು ತುಂಬಾ ಹಿಂದಿನಿಂದಲೆ ಇಲ್ಲಿ ನೆಲೆಸಿರುವಂತವರು. ಅನೇಕರು ಲಿಂಗಾಯತ ಪದ್ಧತಿಯನ್ನು ಅನುಸರಿಸುತ್ತಾರೆ. ಎಮ್ಮೆ ಸಾಕುವುದು, ಹಾಲುಮಾರುವುದು ಇವರ ಪ್ರಮುಖ ವೃತ್ತಿಯಾಗಿದೆ. ಈಗೀಗ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿದ್ದಾರೆ. ಲಿಂಗಧರಿಸುವ ಗೌಳೇರ ಮನೆದೇವರು ವೀರಭದ್ರ ಮತ್ತು ಹುಲಿಗೆಮ್ಮ. ಇವರಲ್ಲಿರುವ ಒಳಪಂಗಡಗಳಲ್ಲಿ ಹೆಣ್ಣುಗಂಡು ನಡೆಯುವುದಿಲ್ಲ.

೪.೧.೮. ವಡ್ಡರು

ಬೋವಿ ಎಂತಲೂ ಕರೆಸಿಕೊಳ್ಳುವ ಈ ಸಮುದಾಯದಲ್ಲಿ ಕಲ್ಲುವಡ್ಡರು, ಬಂಡೆ ವಡ್ಡರು ಎಂಬ ಪಂಗಡಗಳಿವೆ. ಇವರ ಕುಲದೇವರು ಸುಂಕ್ಲಮ್ಮ, ದುರುಗಮ್ಮ, ಕನಕಗಿರಿಯಲ್ಲಿ ಈ ಸಮುದಾಯ ೩೫ ಮನೆಗಳನ್ನು ಹಾಗೂ ಸು. ೨೦೦ ಜನಸಂಖ್ಯೆಯನ್ನು ಹೊಂದಿದೆ.

೪.೧.೯. ದಾಸರು

ಸು.೧೦ ಮನೆಗಳಿರುವ ಈ ಸಮುದಾಯದವರು ವೆಂಕಟರಮಣನ ಭಕ್ತರು. ಸಸ್ಯಾಹಾರಿಗಳಾಗಿರುವ ದಾಸರು ಕೃಷಿ ಚಟುವಟಿಕೆಯನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಮದುವೆ ಮುಂಜಿಯಂತ ಕಾರ್ಯಗಳನ್ನು ನೆರವೇರಿಸಲು ಬ್ರಾಹ್ಮಣ ಪುರೋಹಿತರನ್ನು ಅವಲಂಬಿಸಿದ್ದಾರೆ.

೪.೧.೧೦. ಬಡಿಗೇರ

ಇವರನ್ನು ವಿಶ್ವಕರ್ಮ, ಪಾಂಚಾಳ ಎಂದೂ ಸಹ ಕರೆಯುತ್ತಾರೆ. ಕುಂಬಾರ, ಬಡಿಗೇರ, ಕಮ್ಮಾರ, ಕಂಚಗಾರ, ಅಕ್ಕಸಾಲಿಗರನ್ನು ಪಾಂಚಾಳರೆಂದು ಕರೆಯುತ್ತಾರೆ. ಬಡಿಗೇರ, ಬಡಿಗ್ಯಾರ, ಬಡಗಿಗೌಡ ಎಂಬಿತ್ಯಾದಿ ಕರೆಯುವ ಇವರನ್ನು ಕುರಿತು ಕ್ರಿ.ಶ. ೧೧೮೬ರ ಧಾರವಾಡ ಜಿಲ್ಲೆಯ ಹೊಸೂರು ಶಾಸನದಲ್ಲಿ ಉಲ್ಲೇಖವಾಗಿದೆ. ಈ ಪಾಂಚಾಳರು ಹಳ್ಳಿಗಳಲ್ಲಿ ತುಂಬ ಹಿತಕರವಾದ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ. ಈ ಬಡಿಗೇರರನ್ನು ಕುರಿತಾಗಿ ಸರ್ವಜ್ಞ ಕವಿಯು ಈ ರೀತಿಯಾಗಿ ಹೇಳಿದ್ದಾರೆ.

ಹುಡುಗ ಕಡಲಿಗೆ ಬೇಕು ಗುಡುಗ ಮಿಂಚಿಗೆ ಬೇಕು
ಕಡಗದ ಕೈ ಸೊಸೆ ಬೇಕು | ಊರಿಂಗೆ
ಬಡಿಗಾ ತಾ ಬೇಕು || ಸರ್ವಜ್ಞ || - ಊರಿಗೆ ಸರ್ವಜ್ಞ ಬೇಕೆ ಬೇಕು ಎಂಬುದು ಸರ್ವಜ್ಞರ ಆಶಯ.

೪.೧.೧೧. ತಳವಾರ

ತಳವಾರ ಎಂಬುದು ವೃತ್ತಿ ಸೂಚಕವಾದ ಹೆಸರು. ತಳವಾರ ಎಂಬಲ್ಲಿ ತಳ+ವಾರ ಎಂಬ ಎರಡು ಪದಗಳು ಸೇರಿವೆ. ತಳ ಎಂಬುದಕ್ಕೆ ಸ್ವಂತ, ಊರು, ಜನ್ಮದೂರು ಎಂಬರ್ಥವಿದೆ. 'ವಾರ' ಎಂದರೆ ಸಂರಕ್ಷಣೆ ಎಂದರ್ಥ. ಅಂದರೆ ತಳವಾರ ಮಾಡುವವನು ತಳವಾರ ಎಂದಾದನು. ತಳವಾರ ಶಬ್ದಕ್ಕೆ 'ತಳವಾರ,' 'ತಳರ,' 'ತಳವಾರ,' 'ತಳಾರ,' 'ತರವಳ,' 'ತರವಾಳ,' 'ತಾಳವಾರ' ಎಂಬ-ಮುಂತಾದ ಸಮಾನಾರ್ಥಕ ಪದಗಳಿವೆ. (ಗ್ರಾಮರಕ್ಷಕ, ಕಾವಲುಗಾರ ರೂಪಗಳಿವೆ) ಹಿಂದೆ ಕಳ್ಳರನ್ನು ಹಿಡಿಯುವ ಕೆಲಸ ಮಾಡುತ್ತಿದ್ದರೆಂಬ ಬಗ್ಗೆ ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯಲ್ಲಿ, ಸರ್ವಜ್ಞನ ವಚನಗಳಲ್ಲಿ ಕಂಡುಬರುತ್ತದೆ. ಊರ ಕಾವಲು ಮಾತ್ರವಲ್ಲದೆ, ಊರಿನ ತೆರಿಗೆ ವಸೂಲಿ ಮಾಡುವುದು, ವಾಲಿಕಾರಿಕೆ ಮಾಡುವುದು, ಇವರ ಕೆಲಸ ಕಾರ್ಯಗಳಾಗಿದ್ದವು. ಈಗಲೂ ಗ್ರಾಮ ಲೆಖ್ಖಾಧಿಕಾರಿಗಳ ಹತ್ತಿರ ಗ್ರಾಮ ಸಹಾಯಕರಾಗಿ ಇವರೇ ಹೆಚ್ಚಾಗಿ ಕೆಲಸ ಮಾಡುತ್ತಿದ್ದಾರೆ. ಯಾರಾದರು ಸತ್ತರೆ (ಮೇಲ್ವರ್ಗ) ಜನರಿಗೆ ಸುದ್ದಿ ಮುಟ್ಟಿಸುತ್ತಾರೆ.

೪.೧.೧೨. ಕುಂಬಾರ

ಸು.೧೦೦ ಮನೆಗಳಿರುವ ಈ ಜನಾಂಗದ ಪ್ರಮುಖ ವೃತ್ತಿ ಗಡಿಗೆ ಮಾಡುವದು. ಯಾವುದೇ ಊರು ಕುಂಬಾರನಿಲ್ಲದೆ ಪೂರ್ಣವಿಲ್ಲ ಎನ್ನುವುದು ಸರ್ವಜ್ಞನ ಅಭಿಮತವಾಗಿದೆ.

ಅಂಬು ಬಲ್ಲೆಗೆ ಲೇಸು ಇಂಬುಕೋಣಗೆ ಲೇಸು
ಸಂಬಾರ ಲೇಸು ಸಾರಿಗೆ | ಊರಿಗೆ
ಕುಂಬಾರ ಲೇಸು ಸರ್ವಜ್ಞ ||

ಬಿಲ್ಲಿಗೆ ಅಂಬು (ಬಾಣ), ಕೋಣಗೆ ಇಂಬು, ಸಾರಿಗೆ ಸಾಂಬಾರ ಎಷ್ಟು ಮುಖ್ಯವೋ ಅಷ್ಟೇ ಊರಿಗೊಬ್ಬ ಕುಂಬಾರ ಮುಖ್ಯ ಹಿಂದೆ ಅವರಿರದ ಊರುಗಳೇ ಇರುತ್ತಿರಲಿಲ್ಲ. ಇವರಲ್ಲಿ ಕನ್ನಡ ಕುಂಬಾರರು, ತೆಲುಗು ಕುಂಬಾರರು ಅಥವಾ ಅಡ್ಡ ಮುಸುಕಿನ ಕುಂಬಾರರೆಂದು ಇಬ್ಬರಿದ್ದಾರೆ. ಕನ್ನಡ ಕುಂಬಾರರು ಲಿಂಗಾಯತರು. ಅವರ ಆಚಾರ ವಿಚಾರಗಳೆಲ್ಲ ವೀರಶೈವ ಲಿಂಗಾಯತರನ್ನು ಹೋಲುತ್ತವೆ. ಪ್ಲಾಸ್ಟಿಕ್, ಫೈಬರ್, ಮೆಟಲ್ ಬಳಕೆ ಇತ್ತೀಚೆಗೆ ಹೆಚ್ಚಾಗಿರುವುದರಿಂದ ಕುಂಬಾರ ಉತ್ಪಾದನೆಗಳಿಗೆ ಗ್ರಾಹಕರು ಕಡಿಮೆಯಾಗುತ್ತಿದ್ದಾರೆ. ಇದರಿಂದಾಗಿ ಇವರ ಆರ್ಥಿಕ ಪರಿಸ್ಥಿತಿ ತುಂಬಾ ಹೀನಾಯವಾಗಿದೆ. "ಮೊದಲೆಲ್ಲ ಮದುವೆಯಂತ ಕಾರ್ಯಗಳಿಗೆ ಹೈರಾಣಿ ತೆಗೆದುಕೊಂಡು ಹೋಗುತ್ತಿದ್ದರು. ಇಂದು ಅಂತ ಕಾರ್ಯಗಳಲ್ಲಿ ಸಹ ನಮ್ಮನ್ನು ಮರೆತಿದ್ದಾರೆ" ಎನ್ನುತ್ತಾರೆ ಕನಕಗಿರಿಯ ಚಂದ್ರಪ್ಪ. ಈ ಸಮುದಾಯದ ಗಂಡಸರು ಅನಿವಾರ್ಯವಾಗಿ ಬೇರೆ ಕೆಲಸಗಳತ್ತ ಮುಖಮಾಡಿ ನಿಂತಿದ್ದಾರೆ.

೪.೧.೧೩. ಕಂಬಾರ

ಸು.೮೦-೯೦ ಮನೆಗಳಿರುವ ಕಂಬಾರ ಜನಾಂಗವು ಕುಲಿಮೆ ಕೆಲಸದಲ್ಲಿ ಪ್ರಮುಖವಾಗಿ ತೊಡಗಿದೆ.

ಕೊಡಲಿ, ಕುಡುಗೋಲು, ಮುಂಜುಣ, ಗುದ್ದಿ, ಕುಂಟಿ, ಕುರ್ಚಿಗಿ, ಹಾರಿ ಮುಂತಾದ ಸಾಮಾನುಗಳನ್ನು ಇಲ್ಲಿ ಮಾಡುತ್ತಾರೆ. ಇಕ್ಕಳ, ಸುತ್ತಿಗೆ, ತಿದಿ ಇವರ ಪ್ರಮುಖ ವೃತ್ತಿ ಸಲಕರಣೆಗಳು.

೪.೧.೧೪. ಕುರುಬರು

ಕುರಿಸಾಕಾಣಿಕೆ ಪ್ರಮುಖ ವೃತ್ತಿಯಾಗಿರುವ ಈ ಸಮುದಾಯದಲ್ಲಿ ಕಾಡುಕುರುಬ, ಜೇನುಕುರುಬ, ಉಣ್ಣೆಕುರುಬ ಎಂಬ ಪಂಗಡಗಳಿವೆ. ಮಾಂಸಾಹಾರಿಗಳಾದ ಇವರ ಆರಾಧ್ಯ ದೈವ ಮಲ್ಲಯ್ಯ. ಮದುವೆ ಮುಂತಾದ ಕಾರ್ಯಗಳಿಗೆ ಸ್ವಾಮೇರು (ಜಂಗಮ) ಬೇಕು. ಯಾರೇ ಆಗಲಿ ಅಂದಿನ ವ್ಯಾಪಾರದ ಬೋಣಿ ಅಂದಿನ ಮೊದಲ ಗ್ರಾಹಕ ಕುರುಬರಿಂದ ಆದರೆ ಒಳ್ಳೆಯದು. ಅಂದಿನ ವ್ಯಾಪಾರ ವಹಿವಾಟು ಲಾಭದಾಯಕ ಆಗಿರುತ್ತದೆ ಎಂಬುದು ಈ ಭಾಗದ ವ್ಯಾಪಾರಸ್ಥರ ನಂಬಿಕೆ.

೪.೧.೧೫. ಸುಣ್ಣಗಾರ

ಸುಮಾರು ೧೫೦೦ ಜನಸಂಖ್ಯೆ ಹೊಂದಿರುವ ಈ ಸಮುದಾಯದ ಪ್ರಮುಖ ವೃತ್ತಿ ಸುಣ್ಣಮಾರುವದು. ಗಂಗಮ್ಮ ಇವರ ಆರಾಧ್ಯ ದೈವ. ಮನೆಯಲ್ಲಿ ನಡೆಯುವ ಪ್ರಮುಖ ಕಾರ್ಯಗಳಿಗೆ ಸ್ವಾಮೇರು (ಜಂಗಮ) ನೇತೃತ್ವವಹಿಸುತ್ತಾರೆ.

೪.೧.೧೬. ಜೋಗೇರ

ಸಣ್ಣ ಪುಟ್ಟ ವ್ಯಾಪಾರವನ್ನು ಅದರಲ್ಲೂ ವಿಶೇಷವಾಗಿ ಸ್ಟೇಶನರಿ ಸಾಮಾನುಗಳಂತಹ ವಸ್ತುಗಳನ್ನು, ಕಸಬರಿಗೆ, ಸಿಂಬಿಯಂತಹ ಕರಕುಶಲ ವಸ್ತುಗಳನ್ನು ಮಾರಾಟ ಮಾಡುವುದು ಇವರ ಪ್ರಮುಖ ಕುಲಕಸುಬಾಗಿದೆ. ಸು. ೧೫೦ ಮನೆಗಳಿದ್ದು, ಇವರು ಪೂಜಿಸುವ ಪ್ರಮುಖ ದೇವರು ಮಲ್ಲಯ್ಯ, ಐನೇರು ಈ ಸಮುದಾಯದ ಮದುವೆ ಮುಂತಾದ ಕಾರ್ಯಗಳನ್ನು ಮಾಡಿಸುತ್ತಾರೆ.

೪.೧.೧೭. ಚಲವಾದಿ

೧೩೫ ಮನೆಗಳಿರುವ ಈ ಸಮುದಾಯವನ್ನು ಚಲವಾದಿ ಎಂತಲೂ ಕರೆಯಲಾಗುತ್ತದೆ. ಗಡದರ, ಮಾಟೂರು ಇನ್ನೂ ಮುಂತಾದ ಬೆಡಗುಗಳಿದ್ದು ಸ್ವಜಾತಿಯ ಬೆಡಗಿನವರಿಗೆ ಹೆಣ್ಣು-ಗಂಡು ನಡೆಯುವುದಿಲ್ಲ. ಇವರು ಮಾಂಸಾಹಾರಿಗಳಾಗಿದ್ದು, ಕೂಲಿ ಇವರ ಪ್ರಮುಖ ಕೆಲಸವಾಗಿದೆ. ಈಗೀಗ ಇವರಲ್ಲಿ ಶೈಕ್ಷಣಿಕ ಜಾಗೃತಿ ಮೂಡಿ ವಿದ್ಯೆ, ಉದ್ಯೋಗದತ್ತ ಹೆಜ್ಜೆ ಇಡುತ್ತಿದ್ದಾರೆ. ಹುಲಿಗೆಮ್ಮ ಇವರ ಆರಾಧ್ಯ ದೈವವಾಗಿದೆ. ಕನಕಾಚಲನಿಗೂ ಹರಕೆ ಹೊರುವುದು, ಪೂಜಿಸುವುದು, ಆರಾಧಿಸುವುದು ಇಲ್ಲಿನ ವಿಶೇಷ.

೪.೧.೧೮. ಮುಚ್ಚಿಗರು

ಇವರು ಮೂಲತಃ ಚರ್ಮ ಹದಮಾಡುವ ವೃತ್ತಿಯುಳ್ಳವರು. ಇವರು ಮೊದಲು ಒಂದು ಗ್ರಾಮದ ಆಯಗಾರರ ಸಾಲಿಗೆ ಸೇರುತ್ತಾರೆ. ಒಕ್ಕಲುತನಕ್ಕೆ ಬೇಕಾಗುವ ಚರ್ಮದ ಸಾಮಾನುಗಳನ್ನು ಕಪಿಲಿ ಹೊಡೆಯಲಿಕ್ಕೆ ಚರ್ಮದ ಪಾತ್ರೆಗಳನ್ನು ಮಾಡುತ್ತಿದ್ದರು. ಆದರೆ ಈ ವೃತ್ತಿ ಈಗೀಗ ಕಡಿಮೆಯಾಗತೊಡಗಿದೆ.

ಇವರಲ್ಲಿ ಅನೇಕ ಗೋತ್ರಗಳಿವೆ. ಸ್ವಜಾತಿಯ ಗೋತ್ರದವರಿದ್ದಲ್ಲಿ ಹೆಣ್ಣು-ಗಂಡು ನಿಷೇಧ. ಇವರ ಪದ್ಧತಿಗಳನೇಕ ವೀರಶೈವ ಪದ್ಧತಿಗಳನ್ನು ಹೋಲುತ್ತವೆ. ಕನಕರಾಯನಿಗೆ ನಡೆದುಕೊಳ್ಳುವದು ಹರಕೆ ಹೊರುವುದು ಇಲ್ಲಿನ ವಿಶೇಷ

೪.೧.೧೯. ಹೊಲೆಯರು-ಮಾದಿಗರು

೨೭೦ ಮನೆಗಳಿರುವ, ೨೦೦೦ ಜನಸಂಖ್ಯೆ ಇರುವ ಈ ಸಮುದಾಯದಲ್ಲಿ ಹೊಲೆಯ-ಮಾದಿಗ ಎಂಬ ಪಂಗಡಗಳಿವೆ. ಅನುವಂಶಿಕವಾಗಿ ಸತ್ತ ದನಗಳನ್ನು ಊರ ಹೊರಗೆ ಒಗೆಯುವದು, ಅವುಗಳ ಚರ್ಮವನ್ನು ಸುಲಿಯುವುದು. ಊರ ಓಣಿ ಕಸ ಗುಡಿಸುವುದು ಮತ್ತು ಊರು ಮಾಡುವುದು. ಹಿಂದಿನ ಹರಿಜನರೆ ಇಂದಿನ ಮಾದಿಗರು. ಇವರ ಇನ್ನೊಂದು ಗುಂಪೇ ಹೊಲೆಯರು. ಜಾತಿ ಗುರುತಿಸುವ ಸಲುವಾಗಿ ಏನೋ ಎಡಗೈಯವರು, ಬಲಗೈಯವರೆಂದು ಕರೆಯುತ್ತಾರೆ. ಇವರಲ್ಲಿ ಹೊಲೆಯರೇ ಶ್ರೇಷ್ಠರೆಂದು, ತಮ್ಮಲ್ಲಿ ೧೬ ಪಣಗಳಿವೆ, ತಾವು ಒಕ್ಕಲಿಗರೆಂದು ಹೇಳುತ್ತಾರೆ. ಮಾದಿಗರು ದನದ ಮಾಂಸ ಸೇವಿಸುವುದರಿಂದ ತಮಗಿಂತ ಕಡಿಮೆ ಎಂದು ಹೇಳಿಕೊಳ್ಳುತ್ತಾರೆ. ಹೊಲೆಯರಯಲ್ಲಿಯೂ ಸಹ ೪-೫ ಒಳಪಂಗಡಗಳಿವೆ. ಕನಕರಾಯನಿಗೆ ಪೂಜಿಸುವರು.

೪.೧.೨೦. ಸೋಮವಂಶ ಆರ್ಯ ಕ್ಷತ್ರಿಯ

೮ ಮನೆಗಳಿರುವ ಈ ಸಮುದಾಯವನ್ನು ಚಿತ್ರಗಾರ ಎಂತಲೂ ಕರೆಯುತ್ತಾರೆ. "ಕನಕಾಚಲ ದೇವಸ್ಥಾನದ ಮುಂಭಾಗದ ಮಧ್ಯರಂಗದ ಪೌರಾಣಿಕ, ಐತಿಹಾಸಿಕ ದೃಶ್ಯ ಶಿಲ್ಪಗಳನ್ನು ನಮ್ಮ ತಾತ ಮುತ್ತಾತಂದಿರುಗಳು ಮಾಡಿರುತ್ತಾರೆ. ಈಗಲೂ ದೇವಸ್ಥಾನಕ್ಕೆಬೇಕಾಗುವ ಪಾಲಕಿ, ಗೊಂಬೆ, ಉಯ್ಯಾಲೆ ಇತ್ಯಾದಿಗಳೆನ್ನು ನಾವೇ ಮಾಡಿಕೊಡುತ್ತೇವೆ" -ಎಂಬುದಾಗಿ ಈ ಸಮುದಾಯದ ರಮೇಶ್ ಚಿತ್ರಗಾರ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿರುತ್ತಾರೆ. ಇಲ್ಲಿನ ಇತಿಹಾಸದೊಂದಿಗೆ ಇರುವ ಇವರ ಸಂಬಂಧವನ್ನು ಹೇಳಿಕೊಳ್ಳುವಾಗ ಅವರಲ್ಲಿ ಹೆಮ್ಮೆಯ ಭಾವ ಕಂಡುಬರುತ್ತದೆ.

೪.೧.೨೧. ಮಡಿವಾಳ

ಲಿಂಗಧರಿಸುವ, ಲಿಂಗಧರಿಸದ ಎರಡು ವರ್ಗಗಳಿದ್ದು ಲಿಂಗಧರಿಸುವವರೇ ಶ್ರೇಷ್ಠ ಎನ್ನುವ ಭಾವನೆ ಈ ಸಮುದಾಯದಲ್ಲಿದ್ದು ಈಗೀಗ ಬೇಧ ಭಾವ ಕಡಿಮೆಯಾಗಿ ಹೆಣ್ಣು-ಗಂಡು ಕೊಡುಕೊಳ್ಳುವಿಕೆ ನಡೆಯುತ್ತಿದೆ. ಇವರ ಪ್ರಮುಖ ಉದ್ಯೋಗ ದೋಬಿ ಮತ್ತು ಕೃಷಿಯಾಗಿದೆ. ಸು. ೪೦ ಮನೆಗಳು ೩೦೦ ಜನಸಂಖ್ಯೆ ಹೊಂದಿರುವ ಈ ಸಮುದಾಯದ ಜೀವನಾವರ್ತನ ಆಚರಣೆಗಳನ್ನು ಜಂಗಮ (ಸ್ವಾಮೇರು)ರ ನೇತೃತ್ವದಲ್ಲಿ ಮಾಡಿಕೊಳ್ಳುತ್ತಾರೆ.

೪.೧.೨೨. ಮರಾಠ

ಸು. ೬೦ ಮನೆಗಳಿರುವ ೭೦೦ ಜನಸಂಖ್ಯೆ ಹೊದಿರುವ ಈ ಸಮುದಾಯದಲ್ಲಿ ಮೈಪತಿ, ಆರ್ಯರು ಎಂಬ ಒಳಪಂಗಡಳಿವೆ. ಸಣ್ಣಪುಟ್ಟ ವ್ಯಾಪಾರ, ಕೃಷಿ ಇವರ ವೃತ್ತಿಯಾಗಿದೆ. ಅಂಭಾಭವಾನಿ ಇವರ

ಆರಾಧ್ಯ ದೈವ. ಬ್ರಾಹ್ಮಣ ಪೌರೋಹಿತ್ಯದೊಂದಿಗೆ ಮದುವೆ ಮುಂತಾದ ಕಾರ್ಯಗಳು ಜರುಗುತ್ತವೆ. ಬಹುವರ್ಷಗಳಿಂದ ಇಲ್ಲಿಯೇ ನೆಲೆಸಿರುವುದರಿಂದ ಇವರ ಆಡು ಭಾಷೆ ಕನ್ನಡವೇ ಆಗಿದೆ.

೪.೧.೨೩. ನಾಯಕರು

ಬೇಡ ಮತ್ತು ವಾಲ್ಮೀಕಿ ಎಂಬ ಹೆಸರಿನಿಂದಲೂ ಕರೆಯಲಾಗುವ ಈ ಸಮುದಾಯವು. ಇಲ್ಲಿ ೫೦ ಮನೆಗಳನ್ನು, ಸುಮಾರು ೧೪೦೦ ಜನಸಂಖ್ಯೆಯನ್ನು ಹೊಂದಿದೆ. ಕನಕಗಿಯ ನಾಯಕರು, ಹಿಂದೆ ಬೇಹುಗಾರರಾಗಿ, ಪಾಳೇಗಾರರಾಗಿ, ಮಾಂಡಲೀಕರಾಗಿ, ಕನಕಗಿಯಲ್ಲಿ ದಕ್ಷ ಆಡಳಿತ, ಕಲೆ, ವಾಸ್ತುಶಿಲ್ಪದಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿ ಭವ್ಯ ಇತಿಹಾಸ ನಿರ್ಮಾಣ ಮಾಡಿ ಹೋಗಿರುವ ಸಂಗತಿಯನ್ನು ಅಭಿಮಾನದಿಂದ ಹೆಮ್ಮೆಯಿಂದ ಇಲ್ಲಿನ ಸಮುದಾಯ ಹೇಳಿಕೊಳ್ಳುತ್ತದೆ. ಕನಕಗಿರಿಯಲ್ಲಿ ಏಳು ಜನ ಪಾಳೆಯಗಾರರು ಆಳಿ ಹೋಗಿದ್ದರೂ ಸಹ ಇವರ ವಂಶಜರಾರು ಕನಕಗಿರಿಯಲ್ಲಿಇಲ್ಲದಿರುವುದು ಆಶ್ಚರ್ಯಕರ ಸಂಗತಿಯಾಗಿದೆ.

ಕನಕಗಿರಿಯ ನಾಯಕ ಸಮುದಾಯದಲ್ಲಿ ನಾಮದೋರು, ಮೋಡೇರು ಎಂಬ ಒಳಪಂಗಡಗಳಿದ್ದು ಹಿಂದೆ ಈ ಪಂಗಡದವರಲ್ಲಿ ಹೆಣ್ಣು-ಗಂಡು ನಡೆಯುತ್ತಿರಲಿಲ್ಲ. ಈಗ ನಡೆಯುತ್ತಿವೆ. ಈಸಮುದಾಯದ ಕುಲದೈವಗಳೆಂದರೆ, ಕನಕರಾಯ, ಹುಲಿಗೆಮ್ಮ, ಕೃಷಿ ಪ್ರಮುಖ ಬೇಸಾಯವಾಗಿದ್ದರೂ ಸಹ ಸರಕಾರಿ, ಖಾಸಗಿ ಉದ್ಯೋಗಿಗಳು, ವ್ಯಾಪಾರಸ್ಥರು, ಕೂಲಿ ಕಾರ್ಮಿಕರು ಹೀಗೆ ಅನೇಕ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲೂ ಶೈಕ್ಷಣಿಕ ಜಾಗೃತಿ ಮೂಡತೊಡಗಿರುವುದು ಕಂಡುಬರುತ್ತದೆ.

೪.೧.೨೪. ಭಾವಸಾರಕ್ಷತ್ರಿಯ

ಭಾವಸಾರ ಕ್ಷತ್ರಿಯ ಸಮುದಾಯದ ಮಾತೃಭಾಷೆ ಮರಾಠಿ, ಸು.೨-೩ ಶತಮಾನಗಳಿಂದ ಇವರು ಇಲ್ಲಿಯೇ ನೆಲೆಸಿರುವುದರಿಂದ ಕನ್ನಡ ಭಾಷೆಯನ್ನು ಚೆನ್ನಾಗಿ ಮಾತನಾಡಬಲ್ಲರು. ಒಟ್ಟು ೩೨ ಉಪಪಂಗಡಗಳಿದ್ದು ಅವುಗಳಲ್ಲಿ ಸೂರ್ಯವಂಶ, ಚಂದ್ರವಂಶ, ಸೋಮವಂಶ ಪಂಗಡಗಳು ಹೆಚ್ಚು ಎಂಬ ನಂಬಿಕೆ ಇದೆ. ಉಪಪಂಗಡ, ಸ್ವಗೋತ್ರಗಳಲ್ಲಿ ವೈವಾಹಿಕ ಸಂಬಂಧ ನಿಷಿದ್ಧ. ಇವರ ಬಹುತೇಕ ಆಚರಣೆಗಳು ಬ್ರಾಹ್ಮಣರಂತೆ ಇವೆ. ಮಾಂಸಾಹಾರ ಪದ್ಧತಿ ಜನಿವಾರ ಹಾಕುವ ಪದ್ಧತಿ ಇವರಲ್ಲಿದೆ. ಹುಲಿಗೆಮ್ಮ, ಅಂಬಾಭವಾನಿ, ಮಹಿಷಾಸುರ ಮರ್ಧಿನಿ ಇವರ ಕುಲದೇವರು. ಕೆಲವರು ಪಾಂಡುರಂಗನ ಭಕ್ತರೂ ಸಹ ಆಗಿದ್ದಾರೆ. ಸಿಂಪಿ ಅಥವಾ ದರ್ಜಿ ಇವರ ಪ್ರಮುಖ ಉದ್ಯೋಗವಾಗಿದ್ದರೂ ಇತ್ತೀಚೆಗೆ ಹಲವಾರು ವೃತ್ತಿಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ೬೨ ಮನೆಗಳಲ್ಲಿ ಸುಮಾರು ೨೦೦೦ ಜನಸಂಖ್ಯೆಯನ್ನು ಹೊಂದಿದೆ ಎಂಬುದು ಸಮುದಾಯದ ಪ್ರಮುಖರ ಅಭಿಪ್ರಾಯವಾಗಿದೆ.

೪.೧.೨೫. ವೈಶ್ಯರು

ಇವರನ್ನು ಶ್ರೇಷ್ಠಿ, ಶೆಟ್ಟಿ, ಕೋಮಟಿ ಎಂದೂ ಸಹ ಕರೆಯಲಾಗುತ್ತದೆ. ಎಣ್ಣೆ ಕೋಮಟಿಗ ತುಪ್ಪದ ಕೋಮಟಿಗ ಎಂಬ ಎರಡು ಪಂಗಡಗಳಿದ್ದರೂ ತುಪ್ಪದ ಕೋಮಟಿಗರು ಸಿಗುವುದು ತೀರಾ ವಿರಳ

ಎನ್ನಲಾಗುತ್ತದೆ. ಎಣ್ಣೆ ಕೋಮಟಿಗ ಹೆಚ್ಚು, ತುಪ್ಪದ ಕೋಮಟಿಗ ಕಡಿಮೆ ಎಂಬ ಭಾವನೆ ಇದ್ದು ಇವರಿಬ್ಬರಲ್ಲಿ ವೈವಾಹಿಕ ಸಂಬಂಧ ನಡೆಯುವುದಿಲ್ಲ, ಊಟ ಉಪಚಾರಕ್ಕೆ ಮಾತ್ರ ಅವಕಾಶವಿದೆ. ಇವರ ಕುಲದೈವ ಆಂದ್ರದ ಪೆನುಗೊಂಡೆಯ ಶ್ರೀಕನ್ನಿಕಾ ಪರಮೇಶ್ವರಿ. ಈಕೆಗೆ ವಾಸವಿ ಎಂತಲೂ ಕರೆಯುತ್ತಾರೆ. ನಗರೇಶ್ವರನ ಆರಾಧಕರಾದ ಇವರು ಶೈವ ವೈಷ್ಣವ ಪಂಥದ ದೇವತೆಗಳನ್ನೂ ಸಹ ಪೂಜಿಸುತ್ತಾರೆ. ೧೦೨ ಗೋತ್ರಗಳಿದ್ದು ಒಂದೇ ಗೋತ್ರದವರಿಗೆ ಮದುವೆ ನಿಷೇಧವಾಗಿದೆ. ಸಸ್ಯಹಾರ, ಜನಿವಾರ ಧರಿಸುವ, ಪದ್ಧತಿ ಇವರಲ್ಲಿದೆ. ಪ್ರಮುಖ ಕಾರ್ಯಗಳಿಗೆ ಬ್ರಾಹ್ಮಣರು ಪೌರೋಹಿತ್ಯವಹಿಸುತ್ತಾರೆ. ಇವರ ಮೂಲ ವೃತ್ತಿ ಕಿರಾಣಿ ವ್ಯಾಪಾರವಾಗಿದೆ. ಆಧುನಿಕ ಸ್ಥಿತ್ಯಂತರಗಳಿಗೆ ಒಳಗಾಗಿ ಇವರು ನಾನಾ ವೃತ್ತಿಗಳನ್ನು ಇಂದು ಅವಲಂಬಿಸತೊಡಗಿದ್ದಾರೆ. ೩೦ ಮನೆಗಳಿರುವ ಇವರು ಸುಮಾರು ೨-೩ ಶತಮಾನಗಳಿಂದ ಇಲ್ಲಿಯೇ ನೆಲೆಸಿದ್ದಾರೆ.

೪.೧.೨೬. ಮುಸ್ಲಿಂ

೧೦೦೦ ಮನೆಗಳು, ೫೦೦೦ ಜನಸಂಖ್ಯೆಯನ್ನು ಹೊಂದಿರುವ ಮುಸ್ಲಿಂ ಸಮುದಾಯವು ಇಲ್ಲಿ ಸಾಮರಸ್ಯದ, ಮತ ಪಂಥವನ್ನು ಮೀರಿದ ಬದುಕನ್ನು ಸಾಗಿಸುತ್ತಿದ್ದಾರೆ. ಕನಕರಾಯ ಸೇರಿದಂತೆ ಅನೇಕ ದೇವರುಗಳಿಗೆ, ಜಾತ್ರೆಗಳಿಗೆ ಹೋಗುವದು, ಕಾಯಿ-ಕರ್ಪೂರ ಮಾಡಿಸುವುದು ಇದಕ್ಕೆ ಮುಖ್ಯ ನಿದರ್ಶನ ಎನ್ನಬಹುದು. ಈ ಸಮುದಾಯದ ಒಳಪಂಗಡವಾದ ಪಿಂಜಾರರ ಮದುವೆ, ಜವುಳ, ಸಾವು ಇತ್ಯಾದಿ, ಆಚರಣೆಗಳ ಸಂದರ್ಭಗಳಲ್ಲಿ ಸ್ವಲ್ಪ ಮಟ್ಟಿಗೆ ಹಿಂದೂ ಪದ್ಧತಿ ಸೇರಿರುವುದು ಕಂಡುಬರುತ್ತದೆ. ಈ ಸಮುದಾಯದ ಪ್ರಮುಖ ಒಳಪಂಗಡಗಳೆಂದರೆ, ಶೇಖ್, ಸೈಯದ್, ಪಿಂಜಾರ, ಪಠಾಣ್, ಮುಲ್ಲಾ. ಒಳಪಂಗಡಗಳಲ್ಲಿ ವೈವಾಹಿಕ ಸಂಬಂಧ (ಪಿಂಜಾರ ಮತ್ತು ಇತರೆ ಪಂಗಡಗಳ ನಡುವೆ)ಗಳು ನಡೆಯುವುದಿಲ್ಲ. ಸೈಯದ್ ಪಂಗಡವು ಶ್ರೇಷ್ಠ ಎಂದು ಹೇಳಿಕೊಳ್ಳುತ್ತಾರೆ. ಮನೆಯಲ್ಲಿ ಉರ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮಾಬುಸುಬಾನಿ ಇವರ ಕುಲದೇವರಾಗಿದೆ.

೪.೧.೨೭. ಕೊರವರು

ಕೊರವರು ದ್ರಾವಿಡ ಬುಡಕಟ್ಟಿಗೆ ಸೇರಿದ ಸಮುದಾಯ. ಇವರು ಮೊದಲು ಅಲೆಮಾರಿಗಳಾಗಿದ್ದರು. ಈಗ ಒಂದೊಂದು ಊರಿನಲ್ಲಿ ಸ್ಥಿರವಾಗಿ ನೆಲೆಸಿದ್ದಾರೆ. 'ಕೊರವರು ವಾಂಡ್ಲ ಕೈಫಿಯತ್ತು' ಎಂಬ ಕೃತಿಯಲ್ಲಿ ಕೊರವರ ಪಂಗಡಗಳ ಬಗ್ಗೆ ವಿವರಿಸಿದೆ. ಅದರಲ್ಲಿ ಕಕ್ಕೆ ಕೊರವರು, ವಡ್ಡಕೊರವರು, ಹಕ್ಕಿಕೊರವರು ಮತ್ತು ಕಳಕೊರವರು ಎಂಬ ೪ ಪಂಗಡಗಳಿವೆ. ಇವರ ವೃತ್ತಿ ವಿಶೇಷಣಗಳನ್ನು ತಿಳಿಸುತ್ತ ಕಕ್ಕೆ ಕೊರವರ ಕಸುಬು ಮೋಡಿಕೆಯಾದರೆ, ವಡ್ಡಕೊರವರು ವಾಲಗ ಊದುವದು. ಹಕ್ಕಿ ಕೊರವರು ಹಕ್ಕಿಗಳನ್ನು ಹಿಡಿಯುವುದು, ಕಳ್ಳ ಕೊರವರದು ಕನ್ನಹಾಕಿ ಕಳ್ಳತನ ಮಾಡುವುದು ಎಂದು ಹೇಳುತ್ತಾರೆ. ಕನಕಗಿರಿಯಲ್ಲಿರುವ ಕೊರವರು ಪುಟ್ಟಿ, ಕಸಬರಿಗೆ ಹೆಣೆಯುವ, ಹಂದಿ ಸಾಕಾಣಿಕೆ, ಫುಟ್‌ಪಾತುಗಳ ಮೇಲೆ ಚಿಕ್ಕಪುಟ್ಟ ಹಣ್ಣಿನಂಗಡಿ ಮುಂತಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇಲ್ಲಿ ಕೊರವರ ೮೦ ಕುಟುಂಬಗಳಿವೆ. ಕಾವಡಿ, ಸಾತಪಡಿ ಮುಂತಾದ ಬೆಡಗುಗಳು ಇವರಲ್ಲಿವೆ.

೪.೧.೨೭. ವಿಶ್ವಕರ್ಮ

'ಪಾಂಚಾಳ' ಎಂಬ ಇನ್ನೊಂದು ಹೆಸರು ಈ ಸಮುದಾಯಕ್ಕೆ ಇದೆ. ಅಕ್ಕಸಾಲಿಗ, ಕಂಬಾರ, ಬಡಿಗೇರ, ಪತ್ತಾರ, ಶಿಲ್ಪಿ ಇವು ಈ ಸಮುದಾಯದಲ್ಲಿ ಬರುವ ಉಪಜಾತಿಗಳಾಗಿವೆ. ಸು. ೪-೫ ಬೆಡಗುಗಳಿದ್ದು, ಯಾವುದೇ ಉಪಜಾತಿಯವರಿರಲಿ ವಿಭಿನ್ನ ಬೆಡಗುಗಳಿದ್ದರೆ ವೈವಾಹಿಕ ಸಂಬಂಧ ನಡೆಸಬಹುದಾಗಿದೆ. ಸುಮಾರು ೪೦ ಮನೆಗಳನ್ನು ೩೦೦ ಜನಸಂಖ್ಯೆಯನ್ನು ಈ ಸಮುದಾಯವು ಹೊಂದಿದೆ. ಈಗಲೂ ಅನೇಕರು ತಮ್ಮ ಕುಲಕಸುಬಾದ ಕಂಬಾರಿಕೆ, ಬಡಿಗೇರಕೆಲಸ, ಶಿಲ್ಪಕೆತ್ತುವ, ಬಂಗಾರದ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದಾಗ್ಯೂ ಬೇರೆ ವೃತ್ತಿಗಳಲ್ಲಿಯೂ ಸಹ ತೊಡಗಿರುವುದನ್ನು ಕಾಣಬಹುದಾಗಿದೆ. ಜನಿವಾರ ಧರಿಸುವ ಇವರುಗಳ ಪದ್ಧತಿಯು ಸ್ವಲ್ಪ ಮಟ್ಟಿಗೆ ವೈಶ್ಯರನ್ನು ಹೋಲುವಂತಿದೆ. ಮೌನೇಶ, ವೀರಭದ್ರ ಇವರ ಮನೆದೇವರುಗಳಾಗಿವೆ.

೪.೧.೨೮. ಗೊಲ್ಲರು

ನಾಯಕರು ವಿಜಯನಗರ ಸಾಮ್ರಾಜ್ಯದಲ್ಲಿ ಬಲಪಾರ್ಶ್ವ ಪಡೆದಂತೆ, ಗೊಲ್ಲಸಮುದಾಯವು ಕನಕರಾಯನ ಜಾತ್ರೆ, ಉತ್ಸವಾದಿ ಅನೇಕ ಕಾರ್ಯಕ್ರಮಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಜಾತ್ರೆಯಲ್ಲಿ ಅಂಕುರಾರ್ಪಣ ದಿನದಿಂದ ಜಾತ್ರೆಯ ದಿನದವರೆಗೆ 'ಮಹಿಮ' ರಾಗಿ ಕಟ್ಟು ನಿಟ್ಟಿನ ವೃತಾಚರಣೆ ಮಾಡಿ ಉತ್ಸವದ ಎಡಭಾಗಕ್ಕೆ ಹೆಗಲುಕೊಟ್ಟು ಉತ್ಸವ ಸಾಗಿಸುತ್ತಾರೆ. ಹಿಂದೆ ೭೦೧ ಗೊಲ್ಲಕಿ ಮನೆ, ೭೦೧ ಗುಡಿ, ೭೦೧ ಬಾವಿಗಳು ಇದ್ದವು ಎಂಬ ಮಾತಿನಲ್ಲಿ ಗೊಲ್ಲರ ಸಮುದಾಯದ ಸಾಂದ್ರತೆ ಎಷ್ಟಿತೆಂಬುದು ತಿಳಿಯುತ್ತದೆ. ಆದರೆ ಈಗ ೮೦ ಕುಟುಂಬಗಳು ಮಾತ್ರ ಇಲ್ಲಿ ಕಂಡುಬರುತ್ತವೆ. ಕೃಷ್ಣಗೊಲ್ಲ, ಕರ್ಣಗೊಲ್ಲ, ದಾಸಗೊಲ್ಲ, ಮಾರುತಿಗೊಲ್ಲ, ಮೋಟಾಟ ಗೊಲ್ಲ, ಚಾಮರ ಗೊಲ್ಲ ಹೀಗೆ ೧೦೦ಕ್ಕೂ ಮೇಲ್ಪಟ್ಟು ಒಳಪಂಗಡಗಳಿರುವುದು ಕಂಡುಬರುತ್ತದೆ. ೫ ಸೇರಿನೋರು ೯ ಸೇರಿನೋರು ಎಂಬ ಪಂಗಡಗಳಿದ್ದು ಕನಕಗಿರಿಯಲ್ಲಿ ೯ ಸೇರಿನೇರು ಮಾತ್ರ ಕಂಡುಬರುತ್ತಾರೆ. ೯ ಸೇರಿನೇರು ಶ್ರೇಷ್ಟ ಎಂಬ ಭಾವನೆ ಇದೆ. ಕೊಮಲೆಗಾರ, ನೆಗ್ಗಿ, ಬಿಲಕಂಟಿ, ತಾಳದೋರು, ಕರಿಬೇವಿನೋರು, ಹೂವಿನೋರು ಎಂಬ ೧೦೦ಕ್ಕೂ ಹೆಚ್ಚು ಬೆಡಗುಗಳು ಇವರಲ್ಲಿವೆ. ಒಳಪಂಗಡಗಳಲ್ಲಿ ಮದುವೆ ನಿಷೇಧವಿದ್ದರೂ ಈಗೀಗ ನಡೆಯತೊಡಗಿವೆ. ಕೃಷ್ಣ, ವೆಂಕಟೇಶ್ವರ ಈ ಸಮುದಾಯದ ಕುಲದೈವಗಳಾಗಿವೆ. ಕುರಿಸಾಕಾಣಿಕೆ, ದನಸಾಕುವುದು, ಕೃಷಿ ಇವರ ಪ್ರಮುಖ ವೃತ್ತಿಯಾಗಿದೆ.

೪.೧.೨೮. ಕ್ಷೌರಿಕ

ಲಿಂಗಾಯಿತ ಒಳಪಂಗಡವಾದ ಹಡಪದರು ೩೫ ಮನೆಗಳನ್ನು, ತೆಲುಗು ಮಂಗಲೋಳು ಎಂಬುವವರು ೪ ಮನೆಗಳನ್ನು ಹೊಂದಿದ್ದಾರೆ. ಭಜಂತ್ರಿ ಹಜಾಮರು ಎಂಬ ಇನ್ನೊಂದು ಪಂಗಡ ಇವರಲ್ಲಿದೆ. ನಾಮದೋರು, ಮೋಡಿಯೋರು ಎಂಬ ಒಳಪಂಗಡಗಳು ಇವರಲ್ಲಿವೆ.

೪.೧.೨೯. ದೇವಾಂಗ

ಸು.೩೦ ಕುಟುಂಬಗಳಿರುವ ಈ ಸಮುದಾಯವನ್ನು ನೇಕಾರರು, ಬಿಳಿ ಜಾಡರು, ನೇಯುವವರು,

ಜೇಡರು, ಜಾಡರು ಎಂದೆಲ್ಲ ಕರೆಯುತ್ತಾರೆ. ದೇವಾಂಗ ಎಂಬುದು ಋಷಿಯ ಮೂಲವನ್ನು ಹೇಳುತ್ತದೆ. ಬಟ್ಟೆಯನ್ನು ನೇಯುವುದರಿಂದ ಇವರಿಗೆ ನೇಕಾರರು ಎಂದು ಕರೆಯುತ್ತಾರೆ. ಇಲ್ಲಿ ವ್ಯಾಪಾರಸ್ಥ ಸಮುದಾಯ ಹೆಚ್ಚಾಗಿ ಕಂಡು ಬರುತ್ತದೆ.

೪.೧.೩೦. ಪಾತರದವರು

ಕನಕಗಿರಿಯ ಪರಿಸರದಲ್ಲಿ ಸು.೨೦-೩೦ ಪಾತರದವರ ಮನೆಗಳಿವೆ. ಇವರಲ್ಲಿ ಪಾಸರಿ, ಬನ್ನಿರೆ ಎಂಬ ನೂರಕ್ಕೂ ಮೇಲ್ಪಟ್ಟ ಗೋತ್ರಗಳಿವೆ. ಇವರಲ್ಲಿ ಸ್ವಗೋತ್ರ ಮದುವೆ ನಿಷೇಧ. ಈಗೀಗ ಇವರು ಗೆಜ್ಜೆಕಟ್ಟಿಕೊಳ್ಳುವುದನ್ನು ಬಿಟ್ಟಿದ್ದಾರೆ. ಉದ್ಯೋಗ ಮಾಡುತ್ತಾ ಜೀವನ ಸಾಗಿಸುವವರ ಸಂಖ್ಯೆ ಹೆಚ್ಚಾಗತೊಡಗಿದೆ.

೪.೧.೩೧. ಕುರುಹೀನ ಶೆಟ್ಟಿ

ಸು. ೪೦ ಕುಟುಂಬಗಳಿರುವ, ೩೦೦ ಜನಸಂಖ್ಯೆಯುಳ್ಳ ಈ ಸಮುದಾಯವು ಹಿರೇಕುರುಹೀನಶೆಟ್ಟಿ, ಚಿಕ್ಕಕುರುಹೀನಶೆಟ್ಟಿ ಎಂದು ಎರಡು ಪಂಗಡಗಳನ್ನು ಹೊಂದಿದೆ. ಇವರೀರ್ವರ ನಡುವೆ ಹೆಣ್ಣು-ಗಂಡು ನಡೆಯೊಲ್ಲ. ಆದರೆ ಗುರುವಿನೋರು ಮಾತ್ರ ಒಂದೇ. ಲಿಂಗದ ನೇಕಾರರಿಗೆ ಜಂಗಮರೇ ಶ್ರೇಷ್ಠರು.

೪.೨. ಕುಟುಂಬ ಪದ್ಧತಿ

ಪ್ರಾಣಿಗಳಂತೆ ಬದುಕಿದ ಮಾನವ ಬರುಬರುತ್ತಾ ಕೌಟುಂಬಿಕ ಬದುಕನ್ನು ಆರಂಭಿಸಿ, ಕುಟುಂಬದ ಪ್ರೀತಿಯಲ್ಲಿ ಭಾಗಿಯಾದನು. ಕುಟುಂಬವು ಸಮಾಜದ ಮೂಲಭೂತ ಸ್ಥಿತಿಯಾಗಿದ್ದು, ಅದು ಚಿಕ್ಕ ಹಾಗೂ ವಿಶಾಲ ಸಮಾಜದ ಶಕ್ತಿಶಾಲಿ ಘಟಕವಾಗಿದೆ. ಕುಟುಂಬವನ್ನು ಅಧ್ಯಯನ ಮಾಡಿದಂತಹ ಸಮಾಜ ವಿಜ್ಞಾನಿಗಳು ಇದೊಂದು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನೂ ಕೆಲವರು ಕುಟುಂಬವನ್ನು "ಸಮಾಜ ಕೇಂದ್ರ"ವೆಂದು ವ್ಯಕ್ತಪಡಿಸಿದ್ದಾರೆ. ನಾಗರೀಕತೆಗೆ ಸಮಾಜ ತಳಹದಿಯಾದರೆ ಸಮಾಜಕ್ಕೆ ಕುಟುಂಬವೇ ಮೂಲ. ಕುಟುಂಬ ಸ್ವರೂಪಕ್ಕೂ ಸಮಾಜ ಸ್ವರೂಪಕ್ಕೂ ಸಂಬಂಧವಿರುತ್ತದೆ. "Society is Structure made up of families and Peculiarities of a given society can be discribed by out living is a family relations" (Goods 1965 cited in simensen 1982 : 103) ಆದ್ದರಿಂದ ಕನಕಗಿರಿಯ ಕುಟುಂಬ ವ್ಯವಸ್ಥೆಯ ಅಧ್ಯಯನ ಈ ಸಮಾಜದ ಸಂಸ್ಕೃತಿಯ ಒಳಸೂಕ್ಷ್ಮಗಳ ಗ್ರಹಿಕೆಯಲ್ಲೂ ಮುಖ್ಯವಾಗುತ್ತದೆ. ಅಲ್ಲದೆ ಕುಟುಂಬದ ಅಸ್ಥಿತ್ವವಿಲ್ಲದ ಯಾವುದೇ ಸಮಾಜವನ್ನು ಊಹಿಸುವದೂ ಕಷ್ಟ. ಕುಟುಂಬದಲ್ಲಿ ತಲೆ ಎತ್ತಿದ ಹಲವಾರು ಸಮಸ್ಯಗಳು ನಾಳೆ ಸಮಾಜದಲ್ಲಿಯೂ ತಲೆ ಎತ್ತಬಹುದು. ದೇಶದಲ್ಲಿಯೂ ತಲೆದೋರಬಹುದು. ಆದ್ದರಿಂದ ಕೌಟುಂಬಿಕ ಸಂಸ್ಕೃತಿಯೇ ಸಮಾಜ ಮತ್ತು ದೇಶದ ಸಂಸ್ಕೃತಿಯಾಗುತ್ತದೆ.

ಮೆಕೈವರ್ ಮತ್ತು ಪೇಜ್‌ರವರು "ಕುಟುಂಬವು ಸದಾ ಬದಲಾಗುತ್ತಿರುವ ಚಲನಶೀಲ ಸಂಸ್ಥೆಯಾಗಿದೆ" ಎಂದಿದ್ದಾರೆ. ಅಲ್ಲದೆ ನೇರವಾಗಿ ಕುಟುಂಬವನ್ನು ಒಂದು ಪ್ರಕ್ರಿಯೆಯಾಗಿ ವಿವರಿಸಿದ್ದಾರೆ. ಕುಟುಂಬವು

ಕೂಡ ಹಲವಾರು ಲಕ್ಷಣಗಳನ್ನು ಹೊಂದಿದೆ. ಇನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದು. ಉದಾ ಸಂಘವಾಗಿ, ಸಂಸ್ಥೆಯಾಗಿ, ಕಾರ್ಯನಿರ್ವಹಿಸುವ ಘಟಕವಾಗಿ ಮತ್ತು ವಿಕಸನೀಯ ಪ್ರಕ್ರಿಯೆಯಾಗಿ ಅಧ್ಯಯನ ಮಾಡಲು ಸಾಧ್ಯವಿದೆ. ಅಂದರೆ ಒಂದು ಕುಟುಂಬದಲ್ಲಿನ ವ್ಯಕ್ತಿ ವ್ಯಕ್ತಿಗಳ ಸಂಬಂದ ವಾಸಿಸುವ ಮನೆ, ಮಾಡುವ ಊಟ, ಸಂಪ್ರದಾಯ, ಹಕ್ಕು ಬಾಧ್ಯತೆ, ಆರ್ಥಿಕ ಸ್ಥಿತಿ-ಗತಿ ಮತ್ತು ಧರ್ಮ ನಂಬಿಕೆಗಳನ್ನು ಅರ್ಥ ಮಾಡಿಕೊಳ್ಳಲು ಈ ಅಧ್ಯಯನ ಅಗತ್ಯವಾಗಿದೆ.

ಅವಿಭಕ್ತ ಕುಟುಂಬ

ಕನಕಗಿರಿಯಲ್ಲಿ ಬಹುತೇಕ ಸಮುದಾಯಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಇರುವುದು ಕಂಡುಬರುತ್ತದೆ. ಕುಟುಂಬದ ಮುಖ್ಯವಾದ ಬಗೆಗಳಲ್ಲಿ ಅವಿಭಕ್ತ ಕುಟುಂಬವೂ ಒಂದಾಗಿದೆ. ಇಲ್ಲಿ ತಂದೆಯ ಶ್ರೇಣಿಯ ಮೂಲಕ ಒಟ್ಟಾಗಿ ಸೇರಿರುವ ಎರಡು ಮೂರು ತಲೆಮಾರಿನ ಸರಳ ಕುಟುಂಬಗಳನ್ನು ಒಳಗೊಂಡಿರುತ್ತದೆ. ಇಲ್ಲಿ ತಾತ-ಅಜ್ಜಿಯರು, ತಂದೆ-ತಾಯಿಗಳು, ಮಕ್ಕಳು, ಅಣ್ಣ-ತಮ್ಮಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಗಿರಿಮೊಮ್ಮಕ್ಕಳು ಮುಂತಾದ ರಕ್ತ ಸಂಬಂಧಗಳು ಸೇರಿ ಮೂರು ನಾಲ್ಕು ತಲೆಮಾರಿನ ಜನರಿರುತ್ತಾರೆ. ಕುಟುಂಬದ ಸದಸ್ಯರು ಹೆಚ್ಚಿದಷ್ಟು ಉತ್ಪಾದನೆ ಹೆಚ್ಚು. ನಾನಾ ರೀತಿಯಲ್ಲಿ ಬರುವ ಸಂಬಂಧಗಳ ಮಧ್ಯೆ ಪ್ರೀತಿ-ವಾತ್ಸಲ್ಯ ತುಂಬಿ, ಸಾಂಘಿಕವಾದ, ಭದ್ರತೆಯ ಭಾವನೆಯನ್ನು ಮೂಡಿಸುವ ಒಂದು ಪದ್ಧತಿಯಾಗಿದೆ. ಕನಕಗಿರಿಯಲ್ಲಿ ಅವಿಭಕ್ತ ಕುಟುಂಬ ಸಾಕಷ್ಟು ಇದ್ದು, ಸಾಮರಸ್ಯದ ಬದುಕನ್ನು ಸಾಗಿಸುತ್ತಿದ್ದಾರೆ. ಜನಾದ್ರಿ ವೆಂಕಣ್ಣ, ಜನಾದ್ರಿ ಟಾಕಪ್ಪ. ಇನ್ನೂ ಮುಂತಾದ ಮನೆಗಳು ಅವಿಭಕ್ತ ಕುಟುಂಬಕ್ಕೆ ಉದಾಹರಣೆಗಳಾಗಿವೆ. ಈಗೀಗ ಕನಕಗಿರಿ ಗ್ರಾಮವು ಪಟ್ಟಣವಾಗಿ ಪರಿವರ್ತನೆಗೊಳ್ಳುತ್ತಿದ್ದು. ನಗರೀಕರಣ ಯಾಂತ್ರೀಕರಣ ಇನ್ನೂ ಮುಂತಾದ ಆಧುನಿಕ ಸ್ಥಿತ್ಯಂತರಗಳ ಪ್ರಭಾವದಿಂದಾಗಿ ಅವಿಭಕ್ತಕುಟುಂಬಗಳು ಕಡಿಮೆಯಾಗತೊಡಗಿವೆ ಮನೆಯ ಯಾವುದಾದರು ಕಾರ್ಯಗಳಲ್ಲಿ ಮಾತ್ರ ಸೇರುತ್ತಾರೆ.

ನಮ್ಮ ದೇಶದಲ್ಲಿ ಎಲ್ಲೆಡೆ ಇರುವಂತೆ ಕನಕಗಿರಿಯಲ್ಲಿಯೂ ಪಿತೃಪ್ರಧಾನವಾದ ಕುಟುಂಬ ಪದ್ಧತಿ ಇದೆ. ಆತನ ಹೆಂಡತಿ, ಮಗ, ಸೊಸೆ, ಮೊಮ್ಮಕ್ಕಳು ಆತನ ಅನುಯಾಯಿಗಳಾಗಿರುತ್ತಾರೆ. ಕುಟುಂಬ ಮನೆಯ ಹಿರಿಯನಿಂದಲೆ ಗುರುತಿಸಲ್ಪಡುತ್ತದೆ. ಈತ ದುಡಿದು ಎಲ್ಲರನ್ನು ಸಲುಹಬೇಕಾಗುತ್ತದೆ. ಇನ್ನುಳಿದವರು ಯಾರೇ ಸಂಪಾದಿಸಲಿ ತಂದೆಗೆ ಪ್ರಧಾನ ಸ್ಥಾನ. ತಂದೆಯ ನಂತರ ಮನೆಯ ಹಿರಿ ಮಗನೆ ತಂದೆಯ ಜವಾಬ್ದಾರಿವಹಿಸಿಕೊಳ್ಳುತ್ತಾನೆ.

ಕುಟುಂಬದಲ್ಲಿ ತಂದೆಯ ನಂತರ ಪ್ರಮುಖರಾದವರೆಂದರೆ ತಾಯಿ. ತಾಯಿಯೇ ಮನೆಯ ಯಜಮಾನಿ. ಕುಟುಂಬದ ಪ್ರತಿಯೊಂದು ಹಂತದಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಯಜಮಾನಿಯ ಪಾತ್ರ ತುಂಬ ಮುಖ್ಯದ್ದಾಗಿರುತ್ತದೆ. ಮದುವೆ, ತೊಟ್ಟಿಲು, ಮುಂತಾದ ಕಾರ್ಯಗಳಲ್ಲಿ ಯಜಮಾನಿಯೇ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಈಗೀಗ ಯಜಮಾನಿ ಸುಶಿಕ್ಷಿತಳಾಗಿರುವುದರಿಂದ

ಕುಟುಂಬದ ಅನೇಕ ಮಹತ್ವದ ತೀರ್ಮಾನಗಳ ಸಂದರ್ಭದಲ್ಲಿ ಸಲಹೆಗಾರ್ತಿಯಾಗಿ ಕಂಡುಬರುತ್ತಾಳೆ. ಆದಾಗ್ಯೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಶೋಷಣೆಗೊಳಗಾಗಿರುವುದನ್ನು ಮರೆಯುವ ಹಾಗಿಲ್ಲ.

ಕನಕಗಿರಿಯ ಎಲ್ಲಾ ಕುಟುಂಬಗಳಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಗುರುತಿಸುವಲ್ಲಿ ಎಲ್ಲೆಡೆ ಇರುವಂತೆ ಕೆಲವು ಪಾರಿಭಾಷಿಕ ಪದಗಳನ್ನು ಬಳಸುತ್ತಾರೆ. ವೈಶ್ಯ ಸಮುದಾಯದಲ್ಲಿ ತಾಯಿಗೆ 'ಅಮ್ಮ' ತಂದೆಗೆ 'ಅಯ್ಯ' ಎಂದು ಕರೆದರೆ ಕೆಲವು ಸಮುದಾಯಗಳಲ್ಲಿ ತಂದೆಯ ತಾಯಿಗೆ (ಅಜ್ಜಿಗೆ) ಅಮ್ಮ ಎಂದು, ತಂದೆಗೆ ಅಪ್ಪ ಎಂದು ಕರೆಯುತ್ತಾರೆ. ತಂದೆಗೆ ಅಣ್ಣ ಎಂದು ಕರೆಯುವವರು ಇದ್ದಾರೆ. ತಂದೆಯ ಅಣ್ಣ ತಮ್ಮಂದಿರು, ತಾಯಿಯ ಅಕ್ಕ ತಂಗಿಯರನ್ನು ಸಮುದಾಯಗಳಿಗನುಸಾರವಾಗಿ ಚಿಕ್ಕಪ್ಪ, ಚಿಗಪ್ಪ, ಕಕ್ಕ, ಕಾಕ, ಚಿಕ್ಕವ್ವ, ಚಿಗವ್ವ, ಕಕ್ಕಿ, ಕಾಕಿ, ಮಾಮಿ ಎಂದು ಕರೆಯುತ್ತಾರೆ. ಸೊಸೆಯಂದಿರು ಅತ್ತೆ ಮಾವರಲ್ಲಿ ಅಪ್ಪ ಅಮ್ಮರನ್ನು ಕಾಣಲು ಇಚ್ಛಿಸಿ ಅವರನ್ನು ಅಪ್ಪ ಅಮ್ಮ ಎಂದು ಕರೆಯುತ್ತಾರೆ. ಗಂಡನ ಹೆಸರನ್ನು ಹೆಂಡತಿ ಕರೆಯುವಂತಿಲ್ಲ. ಸುಶಿಕ್ಷಿತ ಸಮುದಾಯದಲ್ಲಿ ಗಂಡನಿಗೆ 'ರೀ' ಎಂದು 'ಅವರು' ಎಂದು ಕರೆಯುತ್ತಾರೆ. ಗಂಡನು ಹೆಂಡತಿ ಹೆಸರನ್ನು ಕರೆಯುವುದಿಲ್ಲ. ಅದಕ್ಕೆ ಬದಲಾಗಿ 'ಏನೇ,' 'ಅಲಾ' ಎಂಬಿತ್ಯಾದಿಯಾಗಿ ಕರೆಯುತ್ತಾನೆ. ಆದರೆ ಇತ್ತೀಚೆಗೆ ಹೆಂಡತಿಯ ಹೆಸರನ್ನು ಕರೆಯುವ ರೂಢಿ ಹೆಚ್ಚಾಗಿದೆ. ಆಧುನಿಕತೆಯ ಸ್ಪರ್ಶದಿಂದಾಗಿ ಇಲ್ಲಿಯೂ ಸುಶಿಕ್ಷಿತ ಮಕ್ಕಳಲ್ಲಿ ಮಮ್ಮಿ, ಡ್ಯಾಡಿ. ಅಂಕಲ್, ಆಂಟಿ, ಸಂಸ್ಕೃತಿ ಬೆಳೆಯ ತೊಡಗಿದೆ. ಗೌರವ ಸೂಚಕವಾಗಿ ಗಂಡಸರನ್ನು ಕರೆಯಲು 'ಏನಪ್ಪ,' ಎಂದು ಕರೆಯುತ್ತಾರೆ. ಅಥವಾ ಹೆಸರಿನ ಮುಂದೆ 'ಅಪ್ಪ' ಸೇರಿಸುತ್ತಾರೆ. ಉದಾ:- ಗೆ ದುರಗ ಎಂದಿದ್ದರೆ ದುರುಗಪ್ಪ ಎಂದು ಕರೆಯುತ್ತಾರೆ. ಹೆಣ್ಣು ಮಕ್ಕಳಿಗೆ 'ಏನಮ್ಮ' ಎಂದು ಕರೆಯುತ್ತಾರೆ. ಶ್ರಮಿಕ ವರ್ಗದ ಹೆಣ್ಣು ಮಕ್ಕಳಿಗೆ ಕೆಲವರು 'ಏನಬೇ,' 'ಹೋಗಬೇ,' 'ಬಾರಬೇ' ಎಂಬಿತ್ಯಾದಿಯಾಗಿ ಸಂಬೋಧಿಸುತ್ತಾರೆ. ಸಂಬಂಧಿಕರಲ್ಲದವರಿಗೂ ಸಹ ಕೆಲವರು 'ಏನುಮಾವ,' 'ಏನಕ್ಕ,' ಅತ್ತೆ-ಅಣ್ಣ ಎಂದು ಕರೆಯುತ್ತಾರೆ.

ಆಸ್ತಿ ಪಾಲುಮಾಡಿಕೊಳ್ಳುವಾಗ ಅಣ್ಣ ತಮ್ಮಂದಿರಲ್ಲಿ ಆಸ್ತಿಯನ್ನು ಆಯ್ಕೆ ಮಾಡಿಕೊಳ್ಳಲು ತಮ್ಮನಿಗೆ ಮೊದಲ ಪ್ರಾಶಸ್ತ್ಯ ಹಿರಿಯಣ್ಣ ಎಲ್ಲರೂ ಬಿಟ್ಟಿದ್ದನ್ನು ತೆಗೆದುಕೊಳ್ಳಬೇಕು. ಇತ್ತೀಚೆಗೆ ಇಂತಹ ನಿಯಮಗಳನ್ನು ಅನುಸರಿಸುವವರ ಸಂಖ್ಯೆ ಕಡಿಮೆಯಾಗಿದೆ. ಈಗೀಗ ಕಾನೂನಿನ ಪ್ರಕಾರ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಹಕ್ಕಿದೆ. ಆದಾಗ್ಯೂ ಹಕ್ಕು ಚಲಾಯಿಸಿ ಆಸ್ತಿ ಕೇಳುವ ಕೆಲಸಕ್ಕೆ ಕೈ ಹಾಕಿದವರು ತೀರಾ ಕಡಿಮೆ. ಅಣ್ಣ ತಮ್ಮಂದಿರು ಆಸ್ತಿ ಭಾಗ ಮಾಡಿಕೊಳ್ಳುವಾಗ ಅಕ್ಕ ತಂಗಿಯರಿಗೆ ಪ್ರೀತಿಯಿಂದ ಬಂಗಾರ, ಬೆಳ್ಳಿ ಅಥವಾ ಹಣ ಇತ್ಯಾದಿ ಕೊಟ್ಟಲ್ಲಿ ಮಾತ್ರ ತೆಗೆದುಕೊಳ್ಳುತ್ತಾರೆ. ಒಟ್ಟಾರೆಯಾಗಿ ಕನಕಗಿರಿಯ ಕುಟುಂಬ ಪದ್ಧತಿಯು ಪುರುಷ ಪ್ರಧಾನವಾಗಿದ್ದು, ಶಾಂತಿ, ಸಹಬಾಳ್ವೆಯ, ಸಾಮರಸ್ಯದ, ಹೊಂದಾಣಿಕೆಯ ಅಚ್ಚನ್ನು ಒತ್ತಿ, ಬಂಧುತ್ವ ವ್ಯವಸ್ಥೆಯ ಪ್ರಭಾವವನ್ನು ಬೀರಿರುವುದನ್ನು ನಾವು ಕಂಡುಕೊಳ್ಳಬಹುದು.

೪.೩. ಮನೆಗಳ ಮಾದರಿ

ಕನಕಗಿರಿಯಲ್ಲಿ ಕಂಡುಬರುವ ಮನೆಗಳ ಮಾದರಿ ಅಧ್ಯಯನ ಈ ಊರಿನ ನಾಗರೀಕತೆ ಯಾವ

ಹಂತದಲ್ಲಿದೆ ಎಂಬುದರ ಸೂಚನೆಯಾಗಿದೆ. ಅಲ್ಲದೆ ಊರಿನ ಪ್ರಾಚೀನತೆಯ ಸುಳುಹನ್ನು ಅಲ್ಲಿನ ಮನೆಗಳ ಮಾದರಿ ನೀಡುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಕನಕಗಿರಿಯ ಮನೆಗಳನ್ನು ವೀಕ್ಷಿಸಿದಾಗ ಮನೆಗಳಿಂದ ಹಿಡಿದು ಇಂದಿನ ಆರ್.ಸಿ.ಸಿ. ಸಮ್ಮಿಶ್ರ ಮಾದರಿ ಮನೆಗಳು ಇರುವುದು ಕಂಡುಬರುತ್ತದೆ. ಅಂದರೆ ಹಳೆಯ ಮಾದರಿಯ ಮನೆಗಳವರೆಗೆ ಕಂಡುಬರುತ್ತದೆ. ಹುಲ್ಲಿನ ಮೇಲ್ಹಾವಣಿ, ಜಿಂಕ್‌ಶೀಟ್, ಮಂಗಳೂರು ಹಂಚಿನ ಮೇಲ್ಹಾವಣಿ ಹೊಂದಿದ ಮನೆಗಳು, ಜನತಾ ಮನೆಗಳು, ಆರ್.ಸಿ.ಸಿ.ಮನೆಗಳಿವೆ.

ಕಾಚಿ ಕಡ್ಡಿ, ಆಪು ಹೆಚ್ಚಾಗಿ ಸಿಗದೇ ಹೋದ ಕಾರಣ ಬಡವರು ತಮ್ಮ ಮನೆಗಳ ಮೇಲ್ಹಾವಣಿಗೆ ಜಿಂಕ್‌ಶೀಟ್‌ಗಳನ್ನು ಹಾಕಿಕೊಂಡಿದ್ದಾರೆ. ಕೆಲವು ಮನೆಗಳಲ್ಲಿ ಮನೆತುಂಬ ಕಂಬಗಳಿದ್ದು ಮೇಲ್ಹಾವಣಿಗೆ ಹುಲ್ಲು ಬೆಳೆಯಬಾರದೆಂಬ ಕಾರಣದಿಂದ ಸವುಳು ಹಾಕಿಕೊಂಡಿದ್ದಾರೆ. ಹಳೆಯ ಮನೆಗಳು ಪೀಚುಗಲ್ಲಿನಿಂದ ಕಟ್ಟಲಾಗಿದೆ. ಇತ್ತೀಚೆಗೆ ನಿರ್ಮಾಣವಾಗಿರುವ ಮನೆಗಳಿಗೆ ಹೆಚ್ಚಾಗಿ ಇಟ್ಟಿಗೆ ಉಪಯೋಗಿಸಲಾಗಿದೆ. ಹಳೆಯ ಮನೆಗಳಲ್ಲಿ ಅರ್ಧ ಅಡಿಯಿಂದ ಒಂದು ಅಡಿ ಎತ್ತರದ ತಲಬಾಗಿಲುಗಳು ಹೆಚ್ಚಾಗಿ ಕಂಡು ಬಂದರೆ ಹೊಸ ಮನೆಗಳಿಗೆ ಮನೆಯ ಒಳಭಾಗದಲ್ಲಿ ಬಾಗಿಲಿನ ತಳವೇ ಇಲ್ಲದುದು ಕಂಡುಬರುತ್ತದೆ. ಸಾಮಾನ್ಯವಾಗಿ ಮನೆಯ ಒಳಗಡೆ ಟೈಲ್ಸ್ ಇರುವಲ್ಲಿ ಈ ರೀತಿಯ ಬಾಗಿಲುಗಳು ಕಂಡುಬರುತ್ತವೆ. ಅಡುಗೆ ಮನೆಯಲ್ಲಿ ಒಲೆಯ ಮೇಲ್ಬಾಗದಲ್ಲಿ ಹೊಗೆ ಚಟ್ಟು ಅಥವಾ ಕಮಾನು ವ್ಯವಸ್ಥೆ ಬಹುತೇಕ ಮನೆಗಳಲ್ಲಿ ಕಾಣಬಹುದಾಗಿದೆ. ಆದರೆ ಇಂದು ಸೀಮೆ ಎಣ್ಣೆ ಸ್ಟೋವ್, ಗ್ಯಾಸ್ ವ್ಯವಸ್ಥೆ ಇರುವದರಿಂದಲೂ, ಉರುವಲು ಸಮಸ್ಯೆ ಇರುವದರಿಂದಲೂ ಒಲೆಗಳ ಬದಲಾಗಿ ಅಡಿಗೆ ಕಟ್ಟೆ (Plotform) ನಿರ್ಮಾಣ ಮಾಡಿದ್ದಾರೆ. ಅಂದಿನ ಮನೆಗಳಲ್ಲಿ ಸ್ನಾನದ ನೀರು ಕಾಯಿಸಲು ಹಂಡೆಗಳಿದ್ದರೆ, ಇಂದಿನವರು ವಿದ್ಯುತ್ ಉಪಕರಣಗಳನ್ನು ಅವಲಂಬಿಸಿದ್ದಾರೆ. ಅಂದಿನವರು ಕುಟ್ಟಲು ಬೀಸಲು ಒಳ್ಳು, ಒನಕೆ, ಬೀಸುವಕಲ್ಲು ಹೊಂದಿದ್ದರೆ, ಇಂದಿನವರು ಮಿಕ್ಸಿ, ಗ್ರೈಂಡರ್‌ಗಳ ಮೇಲೆ ಅವಲಂಬಿತರಾಗಿದ್ದಾರೆ. ಆಯಾ ವರ್ಗಕ್ಕೆ ತಕ್ಕಂತೆ, ಅಡುಗೆ ಮನೆ, ಉಗ್ರಾಣ, ಬಚ್ಚಲು ಮನೆ ಮಲಗುವ ಕೋಣೆ, ದೇವರ ಕೋಣೆ, ಕಾಂಪೌಂಡು ಇವೆಲ್ಲ ವಾಸ್ತು ಪ್ರಕಾರ ನಿರ್ಮಾಣ ಮಾಡಿದವರೇ ಹೆಚ್ಚು. ಹಳೆಯ ಮನೆ ಉಳ್ಳವರಲ್ಲಿ ವಾಸ್ತು ಪ್ರಜ್ಞೆ ಕಡಿಮೆ ಇರುವುದು ಕಂಡುಬರುತ್ತದೆ. ಹರಿಜನರ ಮನೆಗಳು ತೀರಾ ಕಿರಿದಾಗಿರುವದರಿಂದ ಒಂದು ಪಡಸಾಲಿ, ಅಡಿಗೆ ಮನೆ ಮಾತ್ರವಿದ್ದು ಬಚ್ಚಲು ಮನೆಯನ್ನು ಹೊರಗೆ ತಟ್ಟಿಯಿಂದ ಅಥವಾ ತೆಂಗಿನ ಗರಿಗಳಿಂದ ನಿರ್ಮಾಣ ಮಾಡಿರುತ್ತಾರೆ. ಸರ್ಕಾರದ ನೆರವಿನೊಂದಿಗೆ ಅನೇಕ ಮನೆಗಳು ಶೌಚಾಲಯ ಮತ್ತು ವಿದ್ಯುತ್ ಹೊಂದಿವೆ. ಅನೇಕ ಮನೆಗಳು ಸು.೧೦೦ ವರ್ಷ ಮೇಲ್ಪಟ್ಟವುಗಳಾಗಿವೆ. ಒಟ್ಟಾರೆಯಾಗಿ ಕನಕಗಿರಿಯಲ್ಲಿ ಸು. ಅರ್ಧದಷ್ಟು ಮನೆಗಳು ಸಾಧಾರಣ ಸ್ಥಿತಿಯಲ್ಲಿಯೂ ಶೇ. ೨೦-೩೦ರಷ್ಟು ಮನೆಗಳು ಉತ್ತಮ ಸ್ಥಿತಿಯಲ್ಲಿಯೂ, ಶೇ. ೧೦ರಷ್ಟು ಮನೆಗಳು ದುಸ್ಥಿತಿಯಲ್ಲಿಯೂ ಇರುವುದು ಕಂಡುಬರುತ್ತದೆ.

೪.೪. ಆಹಾರ ಪದ್ಧತಿ

ಭೂಮಿಯ ಮೇಲೆ ಮನುಷ್ಯ ವಾಸಿಸಲು ಗಾಳಿ, ನೀರು ಹೇಗೆ ಅವಶ್ಯವೋ ಹಾಗೇ ಆಹಾರವೂ

ಅತಿ ಮುಖ್ಯವಾಗಿ ಬೇಕು. ಅಂತೆಯೇ ಸರ್ವಜ್ಞ ಕವಿಯು "ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ? ಅನ್ನವಿರುವತನಕ ಪ್ರಾಣವು ಜಗದೊಳಗೆ ಅನ್ನವೇ ದೈವ ಸರ್ವಜ್ಞ" ಎಂದಿದ್ದಾನೆ. ಆಯಾ ಸಮುದಾಯಗಳು ತಮ್ಮ ಅಗತ್ಯಗಳಿಗನುಸಾರವಾಗಿ ಆಹಾರ ವ್ಯವಸ್ಥೆಯನ್ನು ತಾವೇ ರೂಢಿಸಿಕೊಂಡಿದ್ದಾರೆ. ಆಯಾ ಪ್ರದೇಶದ ಭೌಗೋಳಿಕ ಪರಿಸರಕ್ಕನುಗುಣವಾಗಿ ಆಹಾರ ಪದ್ಧತಿಯನ್ನು ದೇಶಾದ್ಯಂತ ಕಾಣಬಹುದು. ಆಹಾರ ವ್ಯವಸ್ಥೆಗೂ ಜನರ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೂ ನೇರವಾದ ಸಂಬಂಧವಿದೆ. ಹಾಗೆಯೇ ಕನಕಗಿರಿ ಜನರ ಆಹಾರ ಪದ್ಧತಿಯೂ ಇಲ್ಲಿನ ಪ್ರಾದೇಶಿಕತೆಯಿಂದಲೇ ಕೂಡಿದೆ.

ಈ ಭಾಗದಲ್ಲಿ ಜೋಳ, ನೆಲ್ಲು ಹೆಚ್ಚಾಗಿ ಬೆಳೆಯುವುದರಿಂದ ಅನ್ನ, ಸಾರು, ರೊಟ್ಟಿ, ಪಲ್ಯ ನಿತ್ಯದ ಊಟಕ್ಕೆ ಹೆಚ್ಚಾಗಿ ಬಳಸುತ್ತಾರೆ. ಅಲ್ಲದೆ ರೊಟ್ಟಿ, ಚಪಾತಿಯೊಂದಿಗೆ ಕರಚಿಕಾಯಿ, ಬದನೆಕಾಯಿ, ಬೆಂಡೆಕಾಯಿ, ಹಾಗಲಕಾಯಿ ಪಲ್ಯಗಳನ್ನು, ನಾನಾ ನಮೂನೆಯ ಕಾಳು ಪಲ್ಯಗಳನ್ನು ಮತ್ತು ಚಟ್ನಿಗಳನ್ನು ಬಳಸುತ್ತಾರೆ. ಬೆಳಗಿನ ಫಳಾರಕ್ಕೆ (ನಾಸ್ಟಾ) ಮಂಡಾಳ ಒಗ್ಗರಣೆ, ಅವಲಕ್ಕಿ ಒಗ್ಗರಣೆ, ಉಪ್ಪಿಟ್ಟು, ಮಿರ್ಚಿ, ಇಡ್ಲಿ, ದೋಸೆ, ಗುಂಡುಪಂಗ್ಲ (ಪಡ್ಡು), ಪೊಂಗಲ್, ಪಲಾವ್, ಇತ್ಯಾದಿ ತಿಂಡಿ ಸೇವಿಸುತ್ತಾರೆ. ಸಂಜೆ ಹಸಿವಾದರೆ ಅವಲಕ್ಕಿ, ಮಂಡಾಳ, ಬ್ರೆಡ್, ಬಿಸ್ಕಿಟ್ ಸೇವಿಸುತ್ತಾರೆ.

ಧಾರವಾಡ ಭಾಗದಲ್ಲಿ ತಿಂಡಿ ಎಂದರೆ ಅಲ್ಪ ಸ್ವಲ್ಪ ಉಪಹಾರ ತೆಗೆದುಕೊಳ್ಳುವುದು. ಆದರೆ ಕನಕಗಿರಿಯಲ್ಲಿ ತಿಂಡಿಯಾದರೂ ಸಹ ಹೊಟ್ಟೆ ಬಿರಿಯುವಂತೆ ತಿನ್ನುವಂತ ಪದ್ಧತಿ ಇದೆ. ವ್ಯಂಜಕ ಪದಾರ್ಥವಾದ ಮಾವಿನಕಾಯಿ, ನಿಂಬಿಕಾಯಿ, ನೆಲ್ಲಿಕಾಯಿ, ಟೊಮ್ಯಾಟೋ, ದಡ್ಲೆಕಾಯಿ, ನುಗ್ಗೆಕಾಯಿಯಿಂದ ತಯಾರಿಸಿದ ಉಪ್ಪಿನ ಕಾಯಿಗಳನ್ನು ಊಟದ ಮತ್ತು ನಾಸ್ಟದ ಜೊತೆಗೆ ಸೇವಿಸುತ್ತಾರೆ. ಹುಣಸೆಕಾಯಿ ಚಟ್ನಿಯ ಬಳಕೆ ಈ ಭಾಗದಲ್ಲಿ ಸ್ವಲ್ಪ ಹೆಚ್ಚು. ಇವಲ್ಲದೆ ಗುರೆಳ್ಳು ಪುಡಿ, ಕಡ್ಲೆಪುಡಿ, ಕೊಬ್ಬರಿ ಪುಡಿ ಶೇಂಗಾಪುಡಿ ಇವುಗಳನ್ನು ಊಟಕ್ಕೆ ಬಳಸುತ್ತಾರೆ. ಬಡ ಕುಟುಂಬದವರು ಅನ್ನ ಅಥವಾ ರೊಟ್ಟಿಯ ಜೊತೆಗೆ ಬರೀ ಒಣಕಾರ ಅಥವಾ ಪುಡಿಯಿಂದಲೇ ಊಟವನ್ನು ಮುಗಿಸುತ್ತಾರೆ. ಇವರಲ್ಲಿ ಹೆಚ್ಚಾಗಿ ನಾಸ್ಟಾ ಪದ್ಧತಿ ಇರುವುದಿಲ್ಲ. ಮನೆಯ ಯಜಮಾನ ಹೋಟೆಲಿಗೆ ಹೋಗಿ ತಿಂಡಿ ತಿನ್ನುವ ರೂಢಿ ಬೆಳೆಸಿಕೊಂಡಿರುತ್ತಾನೆ.

ದಿನ ನಿತ್ಯದ ಊಟಕ್ಕೂ ಹಬ್ಬದ ಊಟಕ್ಕೂ ತುಂಬಾ ವ್ಯತ್ಯಾಸವಿರುವುದು ಕಂಡುಬರುತ್ತದೆ. ಹಬ್ಬದೂಟಕ್ಕೆ ಹೋಳಿಗೆ, ಕರಿಗಡಬು, ಕರ್ಜಿಕಾಯಿ, ಹುಗ್ಗಿ, ಸಜ್ಜಕ, ಶ್ಯಾವಿಗೆ, ಹೆಸರುಬೇಳೆ, ಕಡಲೆಬೇಳೆ ಪಾಯಸ, ಮಾದ್ಲಿ, ಹಪ್ಪಳ, ಸಂಡಿಗೆ, ಕಾಳುಪಲ್ಯ, ಚಿತ್ರನ್ನ, ಮುಂತಾದ ತಿನಿಸುಗಳನ್ನು ಮಾಡುತ್ತಾರೆ. ದೀಪಾವಳಿ ಹಬ್ಬಕ್ಕೆ ಹೋಳಿಗೆ, ಗಣೇಶ ಚತುರ್ಥಿಗೆ ಕಡುಬು, ಮೊಹರಂ ಹಬ್ಬಕ್ಕೆ ಮಾದ್ಲಿ, ಯುಗಾದಿಗೆ, ಬೇವು, ಶಿವರಾತ್ರಿ ಉಪವಾಸದ ನಂತರ ಫಳಾರ ಈ ರೀತಿಯಾಗಿ ನಾನಾ ನಮೂನೆಯ ಹಬ್ಬಗಳಿಗೆ ಅದರದ್ದೇ ಆದ ವಿಶೇಷ ಅಡುಗೆ ಮಾಡುವುದು ಕಂಡು ಬರುತ್ತದೆ. ಕನಕರಾಯನ ಜಾತ್ರೆಯ ದಿನ ಇಡೀ ಊರಿಗೆ ಊರೇ ಹೋಳಿಗೆ ಮಾಡಿತಿನ್ನುವದು ವಿಶೇಷ.

ಕುರಿಕಾಯುವ ಜನ ಜೋಳದ ಸಂಗಟಿ, ಮುದ್ದಿ ಕುರಿಹಾಲು ಸೇವಿಸುತ್ತಾರೆ. ಮದುವೆ ಸಂದರ್ಭಗಳಲ್ಲಿ ಹೆಚ್ಚಿನ ಜನ ಸಿಹಿ ಬೂಂದಿ, ಬದನೆಕಾಯಿ, ಅನ್ನ, ಸಾರು ಮಾಡಿಸುವುದು ಇಲ್ಲಿನ ವಿಶೇಷ ಇತ್ತೀಚಿಗೆ ಕೆಲವು ವರ್ಗದವರು ಬಾದುಶಾ, ಜಹಾಂಗೀರ್, ರಸಗುಲ್ಲಾ, ಡ್ರೈ ಜಾಮೂನ್, ಕ್ಯಾಸ್ಕೂ ಬರ್ಫಿಯಂತ ಅನೇಕ ಹೊಸ ಹೊಸ ಸಿಹಿತಿಂಡಿಗಳನ್ನು ಮದುವೆಯಲ್ಲಿ ಮಾಡಿಸುತ್ತಾರೆ.

ಮುಸ್ಲಿಂ ಸಮುದಾಯದವರು ರಂಜಾನ್ ಹಬ್ಬಕ್ಕೆ, ಪೀರ್ಲ ದೇವರ ಹಬ್ಬಕ್ಕೆ ಮಾಂಸದಡುಗೆ ಮಾಡುತ್ತಾರೆ. ಮಕ್ಕಳಿಗೆ ಗಣಜಲಿ, ತಟ್ಟು, ಹೊಟ್ಟು ಎದ್ದರೆ ಸುಂಕ್ಲಮ್ಮಗೆ ಹೋಳಿಗೆ ಎಡೆ ಕೊಡುತ್ತಾರೆ. ಕೆಲವರು ಕೋಳಿ ಕುರಿ ಎಡೆ ಕೊಡುತ್ತಾರೆ.

ಗರ್ಭಿಣಿ ಸ್ತ್ರೀಯರಿಗೆ ವಿಧವಿಧ ಊಟ ಉಪಚಾರ ಮಾಡುವುದು, ಬಾಣಂತಿಯರಿಗೆ, ಮೈನೆರೆದವರಿಗೆ ಕೊಬ್ಬರಿ ಕಾರ ಕೊಡುವುದು ಇಲ್ಲಿನ ವಿಶೇಷ. ಕಾಲಾನುಸಾರವಾಗಿ ನಿಂಬುಶರಬತ್, ಮಜ್ಜಿಗೆಯಂತಹ ಪಾನೀಯ ಸೇವಿಸುವುದುಂಟು. ಇತ್ತೀಚೆಗೆ ಪೆಪ್ಸಿ, ಕೊಕಕೋಲಾಗಳಂತ ಸಾಫ್ಟ್ ಡ್ರಿಂಕ್ಸ್‌ಗಳನ್ನು ಎಲ್ಲಾ ಕಾಲದಲ್ಲೂ ಸೇವಿಸುತ್ತಾರೆ.

ಮುಸಲ್ಮಾನರು ಊಟ ಮಾಡುವಾಗ ಟೋಪಿ ಧರಿಸಬೇಕೆಂಬ ನಿಯಮವಿದೆ. ವೀರಶೈವರು ಕುಳಿತುಕೊಂಡು, ವಿಭೂತಿ ಹಚ್ಚಿಕೊಂಡು ಅಡ್ಡಣಿಗೆಯ ಮೇಲೆ ಊಟ ಮಾಡುವ ಪದ್ಧತಿ ಇದೆ. ಗಂಡನ ಊಟವಾದ ನಂತರ ಹೆಂಡತಿ ಊಟ ಮಾಡುವ ಪದ್ಧತಿ ಇದೆ ಕೆಲವರು ಗಂಡನು ಊಟ ಮಾಡಿದ ತಟ್ಟೆಯಲ್ಲೇ ಊಟ ಮಾಡುತ್ತಾರೆ. ಇದರಿಂದ ಗಂಡನ ಆಯುಷ್ಯ ವೃದ್ಧಿಸುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ನಾಯಕರು, ಗಂಗಾಮತಸ್ಥರು, ಮಾದಿಗರು, ಮುಸಲ್ಮಾನರಾಧಿಯಾಗಿ ಅನೇಕ ಸಮುದಾಯದವರು ಕೋಳಿ, ಕುರಿ, ಮೀನು, ಮೊಲ, ಮಾಂಸ ಸೇವಿಸುತ್ತಾರೆ. ಕೆಲವರು ಕರಿ ದಿನಗಳಲ್ಲಿ ಖಡ್ಡಾಯವಾಗಿ ಮಾಂಸದೂಟ ಮಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ, ಹರಕೆ ತೀರಿಸುವಾಗ ಬೇಟೆ ನೈವೇದ್ಯ ಮಾಡಿ ಅಡುಗೆ ಮಾಡುತ್ತಾರೆ.

ಆಧುನಿಕತೆಯ ಪ್ರಭಾವದಿಂದಾಗಿ ಬ್ರೆಡ್, ಟೋಸ್ಟ್, ಪಿಜಾ ಬರ್ಗರ್. ಪಾನೀಪೂರಿ, ಬೇಲ್‌ಪೂರಿ, ಸಮೋಸಾ, ಕಟ್ಲೇಟ್, ಕೇಕ್‌ಗಳಂತಹ ಅನೇಕ ತಿಂಡಿಗಳತ್ತ ಕನಕಗಿರಿಯ ಜನ ಆಕರ್ಷಿತರಾಗುತ್ತ ಜನಪದ ಆಹಾರ ಪದ್ಧತಿಯನ್ನು ಮರೆಯತೊಡಗಿರುವದು ಸೂಕ್ಷ್ಮಾವಲೋಕನದ ಮೂಲಕ ಕಂಡುಬರುತ್ತದೆ.

೪.೫ ಉಡುಗೆ-ತೊಡುಗೆ

ಆದಿ ಮಾನವ ಗಿಡದ ತೊಗಟೆ, ಎಲೆ, ಪ್ರಾಣಿಗಳ ಚರ್ಮವನ್ನು ಬಟ್ಟೆಯನ್ನಾಗಿ, ಸಸ್ಯ, ಹೂ, ಕಾಯಿಗಳನ್ನು ಆಭರಣಗಳನ್ನಾಗಿ ಬಳಸಿಕೊಂಡು ಕುಣಿದಾಡುತ್ತಿದ್ದರೆಂದು ನಮಗೆಲ್ಲ ತಿಳಿದ ವಿಷಯ. ಕಾಡು ಮಾನವ ವಿಕಾಸಗೊಳ್ಳುತ್ತ ನಾಡು ಮಾನವನಾದನಷ್ಟೇ. ಈ ಕಾಲದಲ್ಲಿ ಅವನ ಸೌಂದರ್ಯ ಪ್ರಜ್ಞೆ ವೃದ್ಧಿಸುತ್ತಾ ಬಂದಂತಿದೆ. ಆದ್ದರಿಂದ ಜನರು ತಮ್ಮ ಮನೆ ಅಂದವಾಗಿರಬೇಕು. ತಾವು ಮಾಡುವ ಊಟ

ರುಚಿಕರವಾಗಿರಬೇಕು. ತನ್ನ ಉಡುಗೆ-ತೊಡುಗೆ ಸುಂದರವಾಗಿರಬೇಕು ಎಂಬ ಇತ್ಯಾದಿ ಸೌಂದರ್ಯಾಕಾಂಕ್ಷೆಗಳು ಆತನದಲ್ಲಿ ಮೂಡಿವೆ. ಊಟ ತನಗಾಗಿ, ಬಟ್ಟೆ ಇತರರಿಗಾಗಿ ಎಂಬ ಭಾವನೆ ಅವರಲ್ಲಿ ಕಂಡುಬರುತ್ತದೆ. ಇಂದು ಈ ಅಲಂಕಾರಿಕ ಕಲೆ ಮಾನವನ ಸಹಜ ಪ್ರಕ್ರಿಯೆಯಲ್ಲಿ ಒಂದಾಗಿದೆ. ಅತೀ ಪ್ರಾಚೀನವಾದ ಕಾವ್ಯಗಳಾದ ರಾಮಾಯಣ-ಮಹಾಭಾರತಗಳಲ್ಲಿ ಉಡುಗೆ-ತೊಡುಗೆಗಳ ಬಗ್ಗೆ ಉಲ್ಲೇಖವಿದೆ.

ಕನಕಾಚಲ ದೇವಸ್ಥಾನದ ಶಿಲಾಸ್ಥಂಭಗಳಲ್ಲಿ, ಮಧ್ಯರಂಗದ ಶಿಲ್ಪಗಳಲ್ಲಿ, ಸುತ್ತಲೂ ಇರುವ ಗಾರೆ ಶಿಲ್ಪಗಳಲ್ಲಿ, ನವಲಿಯ ಬೋಗಾಪುರೇಶ ದೇವಸ್ಥಾನದಲ್ಲಿ ಕಂಡು ಬರುವ ಶಿಲ್ಪಗಳಲ್ಲಿ ಉಡುಗೆ-ತೊಡುಗೆಗಳ ಪ್ರಜ್ಞೆ, ಅಲಂಕಾರದ ಪ್ರಜ್ಞೆ ಹೇಗಿತ್ತೆಂಬುದು ತಿಳಿಯುತ್ತದೆ. ಪಾಳೆಯಗಾರರು ನಿಲುವಂಗಿ, ಧೋತಿ, ಪೇಠಾ, ಶಲ್ಯ ತೊಡುತ್ತಿದ್ದರೆ, ಅಂದಿನ ಜನಸಾಮಾನ್ಯರು ಅಂಗಿ, ಧೋತಿ, ಶಲ್ಯ ಸ್ತ್ರೀಯರು, ಸೀರೆ, ಕುಪ್ಪಸ, ತೊಡುವುದು ಕಂಡುಬರುತ್ತದೆ. ಕೈಕಡಗ, ಉಂಗುರ, ಮುತ್ತಿನ, ಬಂಗಾರದ ಸರಗಳು, ಹುಲಿಉಗುರಿನ ಕೊರಳಸರ, ಕಾಲ್ಗಡಗ, ಕಾಲುಂಗರ, ಕಿವಿ, ಮೂಗು, ತಲೆಗೆ ಧರಿಸುವ ಸ್ತ್ರೀ ಆಭರಣಗಳು, ಲಿಂಗದಕಾಯಿ, ವಂಕಿ, ನಾಗಮುರಿ ಮುಂತಾದ ಆಭರಣಗಳನ್ನು ತೊಡುಗೆಯಾಗಿ ಧರಿಸುವುದು ಕಂಡುಬರುತ್ತದೆ.

ಇಲ್ಲಿನ ಜನಪದ ಬಿಡಿ ತ್ರಿಪದಿಗಳಲ್ಲಿ ಉಡುಗೆ-ತೊಡುಗೆಗಳ ಪ್ರಸ್ತಾಪವಿರುವದನ್ನು ಗಮನಿಸಬಹುದು.

ಮೂಗುತಿ ಮುಂಭಾರ
ತುರುಬಿನ ಹಿಂಭಾರ
ಸೆರಗಿನ ವಂಕಿ ಕೈ ಭಾರ | ನನ ಗೆಳತಿ |
ನಾ ತೊಟ್ಟ ಸೀರೆ ನಿರಿಭಾರ||

ಎಂಬ ವರ್ಣನೆಯ ತ್ರಿಪದಿಗಳು, ಒಗಟು; ಒಡಪುಗಳು ಇಲ್ಲಿನ ನಮ್ಮ ಜನಪದ ಸಾಹಿತ್ಯದಲ್ಲಿ ಸಾಕಷ್ಟು ಸಿಗುತ್ತವೆ. ಭೌಗೋಳಿಕ ಪರಿಸರಕ್ಕನುಗುಣವಾಗಿ ರೂಪುಗೊಂಡಿದ್ದ ಉಡುಗೆ-ತೊಡುಗೆಗಳು ಆಧುನಿಕತೆಯ ಪ್ರಭಾವದಿಂದ ಸಾರ್ವತ್ರಿಕವಾಗತೊಡಗಿವೆ.

ಪ್ರಸ್ತುತ ಕನಕಗಿರಿಯಲ್ಲಿನ ಜನರ ಉಡುಗೆ-ತೊಡುಗೆಗಳು ಅವರವರ ಮತ, ಧರ್ಮ, ಸಮುದಾಯ, ಆರ್ಥಿಕ ಪರಿಸ್ಥಿತಿ, ಸಂದರ್ಭ ಮತ್ತು ಕಾಲಗಳಿಗೆ ಸಂಬಂಧಿಸಿದಂತೆ ಭಿನ್ನವಾಗಿವೆ. ಜೊತೆಗೆ ಸ್ತ್ರೀ-ಪುರುಷರಲ್ಲಿ ಉಡುಗೆ-ತೊಡುಗೆಗಳಲ್ಲಿ ವ್ಯತ್ಯಾಸವಿದೆ. ರೈತಾಪಿ ಜನರು ಹೊಲಗಳಲ್ಲಿ ಕೆಲಸ ಮಾಡುವಾಗ ದೋತಿ, ಬನಿಯನ್, ತಲೆಗೆ ಟವಲ್ ಸುತ್ತಿರುತ್ತಾರೆ. ಮನೆಗೆ ಬರುವಾಗ ಮುಂಗೈವರೆಗಿನ ಅಂಗಿ ತೊಟ್ಟಿರುತ್ತಾರೆ. ಈಗಿನ ಪುರುಷರು ಪ್ಯಾಂಟು, ಅಂಗಿ, ಲುಂಗಿ, ಕಾಚಾ, ಬ್ರಾಸ್‌ಲೇಟ್, ಕೊರಳ ಸರ, ಕಡಗ ಧರಿಸುತ್ತಾರೆ. ಮಹಿಳೆಯರು ಸೀರೆ, ಕುಪ್ಪಸ, ಬಾಡಿ, ಒಳಲಂಗ, ಉಡುಗೆಗಳಾದ ತಾಳಿ ಮೂಗುತಿ, ಕಾಲುಂಗುರ, ಬಳೆ ಮತ್ತು ಕಿವಿಯೋಲೆ ಇವುಗಳನ್ನು ಧರಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಬಡವರು ಅವೇ ಬಟ್ಟೆಗಳನ್ನು ಸ್ವಚ್ಛ ಮಾಡಿ ಇಸ್ತ್ರೀ ಮಾಡಿ ತೊಟ್ಟರೆ, ಶ್ರೀಮಂತರು ಮಕ್‌ಮಲ್ ದೋತಿ, ಟೆರಿಕಾಟ್ ಶರ್ಟ್, ರೇಷ್ಮೆ ಸೀರೆ, ಕುಪ್ಪಸ ತೊಟ್ಟು ಆಭರಣಗಳನ್ನು ಧರಿಸುತ್ತಾರೆ.

ಮೊದಲು ಇಲ್ಲಿ ವೈಶ್ಯರು (ಶೆಟ್ಟರು) ಹಾಗೂ ಶ್ರೀಮಂತರು ಹೆಚ್ಚಿನ ಬಂಗಾರ ಹೊಂದಿರುತ್ತಿದ್ದರು. ಈಗೀಗ ಎಂತವರೂ ಬಂಗಾರ ಪ್ರಿಯರಾಗಿ ಸ್ವಲ್ಪವಾದರೂ ಬಂಗಾರ ಖರೀದಿಸುತ್ತಾರೆ. ವಿಭಕ್ತ ಕುಟುಂಬಗಳೇ ಈ ಬದಲಾವಣೆಗೆ ಕಾರಣ ಎನ್ನಬಹುದು.

ಮೊದಮೊದಲು ಹಳೇ ತಲೆಮಾರಿನ ಮಹಿಳೆಯರು ಇಳಕಲ್ ಸೀರೆ, ಕುಪ್ಪಸ, ಕಾಟನ್ ಜರಿ ಸೀರೆ ಮತ್ತು ಚಂದ್ರಕಾಳಿ ಸೀರೆ ಧರಿಸಿ, ವಂಕಿ, ಸರಗಿ, ಬೊರಮಳ ಸರ ಮೊದಲಾದ ಆಭರಣಗಳನ್ನು ತೊಡುತ್ತಿದ್ದರು. ಬ್ರಾಹ್ಮಣ ಮಹಿಳೆಯರು ಅಂಚಿನ ಸೀರೆಯುಟ್ಟು ಕಚ್ಚೆ ಹಾಕುತ್ತಿದ್ದರು. ಎಲ್ಲಾ ಸಮುದಾಯದಲ್ಲಿ ಮಹಿಳೆಯರು ತಲೆಯ ಮೇಲೆ ಸೆರಗು ಹಾಕುತ್ತಾರೆ. ಅದು ಗೌರವದ ಸಂಕೇತವಾಗಿದೆ. ಇನ್ನೊಂದು ರೀತಿಯಲ್ಲಿ ಬಿಸಿಲಿನ ರಕ್ಷಣೆಯಾಗಿದೆ.

ಶ್ರಮಿಕ ವರ್ಗ ಕಿಸೆ ಇರುವ ಬನಿಯನ್ ತೊಟ್ಟರೆ, ಸ್ವಲ್ಪ ಸುಧಾರಿಸಿದ ಜನ ಅರ್ಧ ಇಲ್ಲವೆ ಪೂರ್ತಿ(full) ಬನಿಯನ್ ಧರಿಸುತ್ತಾರೆ. ಹಿಂದಿನ ಕಾಲದ ಮಹಿಳೆಯರು ಸೀರೆಯನ್ನು ಉಡುವಾಗ ಉಡಿಸೆರಗನ್ನು ಸೊಂಟಕ್ಕೆ ಸುತ್ತಿಕೊಂಡು ಗಂಟು ಹಾಕಿಕೊಂಡು ತಲೆ ಸೆರಗನ್ನು ಹೊದ್ದುಕೊಂಡು ಉಳಿದ ಭಾಗವನ್ನು ನೆರಿಗೆ ಹಾಕಿ ಬಲಗಡೆ ಇಳಿಬಿಟ್ಟ ಮೇಲ್ಭಾಗದ ನೆರಿಗೆ ಕಟ್ಟನ್ನು ಸೊಂಟದಲ್ಲಿ ಬಾಳೆಕಾಯಿ ರೂಪದಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದರು. ಬಾಳೆಕಾಯಿ ಡಾಬಿಗೆ ಬೆಳ್ಳಿ ಡಾಬನ್ನು ಸಿಕ್ಕಿಸಿಕೊಳ್ಳುತ್ತಿದ್ದರು. ಆದರೆ ಇಂದು ಈ ಬಾಳೆಕಾಯಿ, ಡಾಬು ಕಡಿಮೆಯಾಗತೊಡಗಿದೆ.

ವಡ್ಡರ ಮಹಿಳೆಯರು ಮೊದಲು ಕುಪ್ಪಸ ತೊಡುತ್ತಿರಲಿಲ್ಲ. ಈಗ ತೊಡುತ್ತಾರೆ. ಈಗಿನ ಮಹಿಳೆಯರು ಸೀರೆ ಉಟ್ಟು ಸೀರೆಗಳಿಗೆ, ಸೆರಗಿಗೆ ಪಿನ್ ಹಾಕಿಕೊಳ್ಳುತ್ತಾರೆ. ವಿಧ ವಿಧ ಪ್ಯಾಷನ್ನಿನ ಕುಪ್ಪಸ ತೊಡುತ್ತಾರೆ. ಆಧುನಿಕತೆಯ ಪ್ರಭಾವದಿಂದ 'ನೈಟಿ' ತೊಡುವ ರೂಢಿ ಹೆಚ್ಚಾಗಿದೆ. ಚಿಕ್ಕ ಮಕ್ಕಳು ಗೌನು, ಅಂಗಿ, ಚಡ್ಡಿ, ಪ್ಯಾಂಟ್, ಕಾಚಾ, ಬನಿಯನ್, ತೊಟ್ಟರೆ ಕೂಸಿಗೆ ಕುಲಾಯಿ, ಗೌನು ಮತ್ತು ಬನಿಯನ್ ತೊಡಿಸುತ್ತಾರೆ. ಹುಡುಗರು ಬರ್ಮುಡಾ, ನೈಟ್ ಡ್ರೆಸ್ (ಆಧುನಿಕತೆಯ ಪ್ರಭಾವ) ತೊಡುತ್ತಾರೆ. ಯುವತಿಯರು ಚೂಡಿದಾರ ಧರಿಸಿ ತಲೆಗೆ ಬಗೆಬಗೆ ಕ್ಲಿಪ್ಸ್‌ಗಳನ್ನು ಹಾಕಿಕೊಳ್ಳುತ್ತಾರೆ. ಪುಡಿ ಕುಂಕುಮ ಹೋಗಿ ಈಗೀಗ ಸ್ಟಿಕ್ಕರ್ ಅಥವಾ ಬಿಂದಿಗಳು ಬಂದಿವೆ. ಗಾಜಿನ ಬಳೆಗಳು ಹೋಗಿ ಪ್ಲಾಸ್ಟಿಕ್, ಕರ್ಪೂರ, ಮೆಟಲ್ ಬಳೆಗಳು ಬಂದಿವೆ.

ಮುಸ್ಲಿಂ ಸಮುದಾಯದವರು ಹೆಚ್ಚಾಗಿ ಬಿಳಿ ಬಣ್ಣದ ಜುಬ್ಬಾ, ಪೈಜಾಮ ಧರಿಸಿ ತಲೆಗೆ ಟೋಪಿ ಇಡುತ್ತಾರೆ. ಕೆಲವೊಮ್ಮೆ ನಿಲುವಂಗಿ ಜುಬ್ಬಾ ತೊಡುತ್ತಾರೆ. ಟೋಪಿಯಲ್ಲಿ ಮಕಮಲ್ ಟೋಪಿ, ತುರ್ಕಿ ಟೋಪಿ, ಹೆಣಿಕೆ ಟೋಪಿ, ರಾಂಪುರಿ ಟೋಪಿ, ಜಿನ್ನಾ ಟೋಪಿಗಳನ್ನು ವೈವಿಧ್ಯಮಯವಾಗಿ ಬಳಸುತ್ತಾರೆ. ಮೌಲ್ವಿ, ಖಾಜಾಗಳು ಶೇರವಾನಿ (ನಿಲುವಂಗಿ) ಧರಿಸುತ್ತಾರೆ. ಹಜ್ ಯಾತ್ರಿಕರು ಒಂದು ಬಿಳಿ ವಸ್ತ್ರವನ್ನು ಲುಂಗಿಯಂತೆ ಸುತ್ತಿಕೊಂಡರೆ ಇನ್ನೊಂದು ವಸ್ತ್ರವನ್ನು ತೋಳು ಪೂರ್ತಿ ಹೊದ್ದುಕೊಳ್ಳುವರು. ಮುಸ್ಲಿಂರಲ್ಲಿ ಬಂಗಾರ ತೊಡುವ ಸಂಪ್ರದಾಯವಿಲ್ಲ. ಈಗೀಗ ಬಂಗಾರ ತೊಡಲಾರಂಭಿಸಿದ್ದಾರೆ. ಮಹಿಳೆಯರು ಹೆಚ್ಚಾಗಿ

ಸೆಲ್ವಾರ ಕಮೀಜ್ ಧರಿಸಿ ತಲೆಯ ಮೇಲೆ 'ಓಡಣಿ' ಹೊರುವರು. ಬುರ್ಕಾ ಮುಸ್ಲಿಂ ಮಹಿಳೆಯರ ವಿಶಿಷ್ಟ ತೊಡುಗೆ, ಇದು ಕಪ್ಪು ಅಥವಾ ಕಂದು ಬಣ್ಣದ್ದು ಹೆಚ್ಚು.

ಒಟ್ಟಿನಲ್ಲಿ ಕನಕಗಿರಿಯಲ್ಲಿ ಉಡುಗೆ ತೊಡುಗೆಗಳಲ್ಲಿ ಆಧುನಿಕತೆಯ ಪ್ರಭಾವ ಎಷ್ಟೆ ಆದರೂ ಕಿವಿ ಚುಚ್ಚಿಸುವ, ಎಡ ಮೂಗು ಚುಚ್ಚಿಸುವ, ಕಾಲುಂಗರ ಇಡುವ ಪ್ರಾರಂಭದಲ್ಲಿ ಮಗುವಿಗೆ ಕರಿ ಬಳೆ ತೊಡಿಸುವ ಇನ್ನೂ ಮುಂತಾದ ಸಾಂಪ್ರದಾಯಿಕ ತೊಡುಗೆಗಳು ಅಷ್ಟಾಗಿ ಮಾಯವಾಗಿಲ್ಲ. ಕನಕಗಿರಿ ಭಾಗದ ತೊಡುಗೆಗಳನ್ನು ಹೆಂಗಸರು, ಗಂಡಸರು ಮಕ್ಕಳು ಎಂದು ಮೂರು ಭಾಗ ಮಾಡಿ ಪಟ್ಟಿ ಮಾಡಿದ್ದೇನೆ.

ಸ್ತ್ರೀಯರು

ಆಭರಣಗಳು	ತೊಡುವ ಸ್ಥಳ
ನಾಗರ/ರೋಜು	ಬೈತಲೆಗೆ
ಬೋರಮಳ ಸರ /ಕಾಸಿನ ಸರ	ಕೊರಳಿಗೆ
ಓಲೆ, ಜುಮುಕಿ, ಬುಗಡಿ	ಕಿವಿಗೆ
ಚಪಲ ಹಾರ, ಗೆಜ್ಜಿಟೀಕಿ, ತಾಳಿಸರ	ಕೊರಳಿಗೆ
ಮೂಗತಿ, ನತ್ತು	ಮೂಗಿಗೆ
ಬೈತಲೆ ಸರ	ಬೈತಲೆಗೆ
ಪಿಲ್ಲೆ	ಕಾಲ ಬೆರಳಿಗೆ
ಚೈನ (ಬೆಳ್ಳಿ)	ಕಾಲಿಗೆ
ಬಂಗಾರ, ಹರಳು, ಮುತ್ತಿನ ಬಳೆ	ಕೈಗೆ
ಉಂಗರ (ವಂಕಿ ಉಂಗುರ / ಸುತ್ತಿನ ಉಂಗುರ)	ಕೈಬೆರಳಿಗೆ
ವಂಕಿ ನಾಗಮುರಿ	ರೆಟ್ಟೆಗೆ
ಉದ್ದನೆ ಸರ, ನಾನ್ ಚೈನ ಪದಕ	ಕೊರಳಿಗೆ
ಡಾಬು (ಬಂಗಾರ, ಬೆಳ್ಳಿ)	ಸೊಂಟಕ್ಕೆ
ಕೀಗೊಂಚು, ಚೈನು	ಸೊಂಟಕ್ಕೆ

ಮಕ್ಕಳು

ಆಭರಣಗಳು	ತೊಡುವ ಸ್ಥಳ
ಮುರುವು	ಕಿವಿಗೆ
ಕವಡಿಸರ	ಕೊರಳಿಗೆ
ಕರಿಮಣಿಸರ	ಕೈಗೆ
ಉಂಗುರ	ಕೈಬೆರಳಿಗೆ
ಚೈನ	ಕೊರಳಿಗೆ
ಲಿಂಗದ ಕಾಯಿ	ಕೊರಳಿಗೆ
ಬೆಳ್ಳಿ ಉಡುದಾರ	ಸೊಂಟಕ್ಕೆ
ಗೆಜ್ಜೆ	ಕಾಲಿಗೆ

ಪುರುಷರು

ಆಭರಣಗಳು	ತೊಡುವಸ್ಥಳ
ಮುರುವು	ಕಿವಿಗೆ
ಚೈನ್	ಕೊರಳಿಗೆ
ಉಡುದಾರ	ಸೊಂಟಕ್ಕೆ
ಕಡಗ	ಕೈಗೆ
ಬ್ರಾಸ್‌ಲೇಟ್	ಕೈಗೆ
ತಾಯತ ಬೆಳ್ಳಿ	ಕೊರಳಿಗೆ, ರಟ್ಟೆಗೆ, ಸೊಂಟಕ್ಕೆ
ಲಿಂಗದಕಾಯಿ	ಲಿಂಗ ಇಡುವಂತ ಪೆಟ್ಟಿಗೆ ಕೊರಳಿಗೆ

೪.೬ ಜನಪದ ವೈದ್ಯ

ಪ್ರಪಂಚದ ಇಂದಿನ ವೈದ್ಯ ಪದ್ಧತಿಗಳಿಗೆ ತಾಯಿಬೇರು ಜನಪದ ವೈದ್ಯ. ಮಾನವನಿಗೆ ನಿರಂತರವಾಗಿ ಕಾಡುವ ಒಂದಿಲ್ಲೊಂದು ರೋಗರುಜಿನಗಳಿವೆ. ಜನಪದ ವೈದ್ಯವು ಆಯಾ ಪರಿಸರ, ಬುಡಕಟ್ಟು ಸಮುದಾಯಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಬಳಕೆಗೊಳ್ಳುತ್ತದೆ. ಈ ಎಲ್ಲ ಸಮುದಾಯಗಳ ಮೂಲ ಉದ್ದೇಶ ರೋಗರುಜಿನಗಳನ್ನು ಹೊಡೆದೋಡಿಸುವದಾಗಿದೆ. ಜನಪದ ವೈದ್ಯ ಪದ್ಧತಿಯನ್ನು ವೈದ್ಯರು ಕೊಡುವ ಮದ್ದಿನ ಗುಣವಾಗಿ ಹೀಗೆ ವರ್ಗೀಕರಿಸಬಹುದಾಗಿದೆ. ಗಿಡಮೂಲಿಕೆ ಪದ್ಧತಿ, ರಸ ಪದ್ಧತಿ, ಶಸ್ತ್ರ ಚಿಕಿತ್ಸಾ ಪದ್ಧತಿ ಮತ್ತು ಯಂತ್ರ-ಮಂತ್ರ-ಮಾಟ.

ರೋಗ ಗುರುತಿಸಿ ಆರೋಗ್ಯಕ್ಕೆ ಬೇಕಾಗುವ ಗಿಡಬಳ್ಳಿ, ಮೂಲಿಕೆಗಳ ಬೇರು ತಪ್ಪಲು, ಕಾಯಿ, ಹಣ್ಣು, ಬೀಜ, ತೊಗಟೆ ಸಂಗ್ರಹಿಸಿ ಕ್ರಮ ಬದ್ಧವಾಗಿ ಕುಟ್ಟಿ ಮದ್ದಿನಿಂದ ರೋಗ ಕಳೆಯುವ ಪದ್ಧತಿಯೇ ಗಿಡಮೂಲಿಕೆ ಪದ್ಧತಿ. ಗಿಡಮೂಲಿಕೆಗಳಿಂದ ಮದ್ದು ತಯಾರಿಕೆ ರೋಗಗುಣಪಡಿಸುವವರೆ ನಾಟಿವೈದ್ಯರು. ಇಂಥ ನಾಟಿವೈದ್ಯರಲ್ಲಿ ಕನಕಗಿರಿಯ ಮೀಸಿ ರಾಜಪ್ಪ ಒಬ್ಬರು. ಇವರು ಯಾರಿಗಾದರು ಹಾವು ಅಥವಾ ಚೇಳು ಕಡಿದರೆ ಬೇರು (ಯಾವ ಬೇರು ಎಂದು ಅವರು ಹೇಳಲು ಬಯಸುವುದಿಲ್ಲ) ತಂದು ಅರೆದು ಅದರ ರಸ ಕುಡಿಸಿ ವಾಂತಿ-ಮಾಡಿಸಿ ಇತ್ಯಾದಿ ವಿಧಾನಗಳಿಂದ ವಿಷ ಏರದಂತೆ ಮಾಡುತ್ತಾರೆ. ಕಣ್ಣಲ್ಲಿ ಕಸರು ಕುಂತರೆ ತಪ್ಪಲಿನ ರಸ ಹಿಂಡಿ ವಾಸಿ ಮಾಡುವ ಕೆಲಸವನ್ನು ಕನಕಗಿರಿಯ ದಾಸರ ಯಂಕಪ್ಪ ಮಾಡುತ್ತಾರೆ. ಯಾವುದೇ ತರಹದ ಕಾಮಣಿಯನ್ನು ವಾಸಿಮಾಡಲು ಖ್ಯಾಡೇದ ಮೋನಪ್ಪಯ್ಯನವರು ಇದ್ದಾರೆ. ಪಶುವಿನ ಬಹುತೇಕ ಕಾಯಿಲೆಗಳನ್ನು ಗುರುತಿಸಿ ಮದ್ದು ಕೊಟ್ಟು ಕಾಯಿಲೆ ವಾಸಿ ಮಾಡುವ ಗೊಲ್ಲರ ಚಿಂಚಲ ನಾಗಪ್ಪನವರು ಈ ಭಾಗದಲ್ಲಿ ಪ್ರಮುಖ ಜನಪದ ಪಶು ವೈದ್ಯರಾಗಿ ಗಮನಕ್ಕೆ ಬರುತ್ತಾರೆ. ಸರ್ಪ ಹುಣ್ಣು ಆದವರಿಗೆ ಗರುಡನ ಚಿತ್ರ ಬರೆದು ತೊಟ್ಟಿಲ ತೀರ್ಥವನ್ನು ಗಾಯದ ಮೇಲೆ ಸವರುವ ಮೂಲಕ ಪರಿಣಾಮಕಾರಿ ಚಿಕಿತ್ಸೆ ನೀಡುವ ನರಸಿಂಹ ಚಿತ್ರಗಾರ, "ಅಲೋಪತಿ ಔಷಧಿಯಿಂದ ವಾಸಿಯಾಗದೇ ಇರುವ ಈ ಕಾಯಿಲೆಗೆ ಇದೇ ಸರಿಯಾದ ಮದ್ದು" ಎಂದು ಹೇಳುತ್ತಾರೆ. ಎಲ್ಲಪ್ಪ ತಾತ, ಗೌರಪ್ಪ ಹಡಪದ್ ಇವರು ಗಾಯ, ಬೊಕ್ಕೆ, ಕಜ್ಜಿ, ಕಾಮಣಿಗೆ ವಿಶೇಷ ಚಿಕಿತ್ಸೆ ಕೊಡುತ್ತಾರೆ. ಈ ಜನಪದ ವೈದ್ಯರುಗಳೆಲ್ಲ ವೈದ್ಯ ಪದ್ಧತಿಯನ್ನು ಸಾಮಾನ್ಯವಾಗಿ ತಂದೆ ತಾತಂದಿರುಗಳಿಂದ ಕಲಿತಿರುತ್ತಾರೆ. ತಾವು ಕೊಡುವ ಔಷಧಿಯನ್ನು ಗುಟ್ಟಾಗಿ ಇಟ್ಟು ಕೊನೆಗಾಲದಲ್ಲಿ ಹೇಳುತ್ತಾರೆ. ಕಂಡ ಕಂಡವರು ಈ ಬೇರನ್ನು ಬೇಕಾ ಬಿಟ್ಟಿಯಾಗಿ ಕಿತ್ತು ಹಾಳು ಮಾಡುವವರೆಂಬ ಕಾರಣದಿಂದ ಹಾಗೂ ತಮಗೆ ಬೇಕಾದ ಬೇರು ಅಥವಾ ಗಿಡ ವರ್ಷಪೂರ್ತಿ ತಮಗೆ ಸಿಗುವಂತಿರಲಿ ಎಂಬುದೇ ಔಷಧಿಯ ವಿಷಯವನ್ನು ಗುಟ್ಟಾಗಿಡುವಕ್ಕೆ ಕಾರಣ. ಮಹಿಳಾ ವೈದ್ಯರು ರೋಗಿಯೊಬ್ಬನಿಗೆ ಚಿಕಿತ್ಸೆ ಕೊಡುವ ಕ್ರಮ ಹೀಗಿದೆ. ನಿಂಬೆ ಹಣ್ಣು, ಒಣಮೆಣಸಿನಕಾಯಿ, ಉಪ್ಪು, ಹಸಿಮೆಣಸಿನಕಾಯಿ, ಕೇರು, ಎಲೆ, ಅಡಿಕೆ ಇಂತವುಗಳಲ್ಲಿ ಯಾವುದಾದರು ಕೆಲವನ್ನು ಮುಖದ ಮುಂದೆ ಮೂರು ಸಾರಿ ನಿವಾಳಿಸಿ ತೆಗೆದು ಮೂರುದಾರಿ ಸೇರುವ ಮಧ್ಯದಲ್ಲಿ ಅಥವಾ ಊರ ಹೊರಗಡೆ ಬಿಸಾಕಲು ತಿಳಿಸುತ್ತಾರೆ.

ಮಗುವಿಗೆ ಜ್ವರ ಬಂದರೆ, ಸರಿದಿನಗಳು ಇದ್ದರೆ ಬಳೆ ಚೂರಿನಿಂದ ಅಥವಾ ಬೇವಿನಕಡ್ಡಿಯಿಂದ ಹಣೆಯ ಭಾಗ ಹಾಗೂ ಕುತ್ತಿಗೆಯ ಭಾಗದಲ್ಲಿ ಬೆಚ್ಚಗೆ ಮಾಡುತ್ತಾರೆ. ಅನುಭವಿಕರೇ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಕಾಲಿಗೆ ಗಾಯವಾದರೆ ದಾಟು ಬಕ್ಕೆ ಎಂದು ಭಾವಿಸಿ ಮೂರು ದಾರಿ ಕಲೆಯುವಲ್ಲಿ ಓಕಳಿ ನೀರು ದಾರಿಗೆ ಅಡ್ಡ ಹಾಕಿ ಅದರ ಮೇಲೆ ಎಲೆ, ಅಡಿಕೆ, ಎಂಟಾಣೆ ಇಟ್ಟು ಗಾಯವಾದವನಿಗೆ ಆ ಓಕಳಿಯನ್ನು ದಾಟಿಸಿ ಕರೆತರುವ ಪದ್ಧತಿ ಇದೆ. ಓಕಳಿಯನ್ನು ದಾಟಿದವನು ಅದನ್ನು ತಿರುಗಿ ನೋಡದೆ ಬರುತ್ತಾನೆ. ಹೀಗೆ ಒಂದೊಂದು ರೋಗಗಳಿಗೂ ಭಿನ್ನ ಭಿನ್ನ ಪದ್ಧತಿಗಳಿವೆ. ಮಕ್ಕಳು ಹಟ ಮಾಡಿದರೆ, ದೃಷ್ಟಿ ಆಗಿದ್ದರೆ, ಅತ್ತರೆ, ಒಣಮೆಣಸಿನಕಾಯಿ, ಉಪ್ಪು ತೆಗೆದುಕೊಂಡು ಮುಖಕ್ಕೆ ನಿವಾಳಿಸಿ ಬಿಸಾಕುತ್ತಾರೆ,

ಅಥವಾ ಬೆಂಕಿಯಲ್ಲಿ ಹಾಕುತ್ತಾರೆ. ಕೆಲವರು ತಲೆ ಕೂದಲಿನಿಂದ (ಜಡೆ) ಮುಖಕ್ಕೆ ನಿವಾಳಿಸುತ್ತಾರೆ. ಹತ್ತಿ ಗೊಂಬೆ ಮಾಡಿ, ಚಮಚಕ್ಕೆ ದಾರ ಸುತ್ತಿ ಸುಡುವುದೂ ಉಂಟು. ಬೆಂಕಿಯಲ್ಲಿ ಹಾಕಿದ ಒಣಮೆಣಸಿನಕಾಯಿ ಘಾಟು ಬಾರದಿದ್ದರೆ ಮಗುವಿಗೆ ದೃಷ್ಟಿ ಆಗಿದೆ ಎಂದರ್ಥ.

ಅಳ್ಳೆತ್ತಿ ಉರಿದರೆ ಒಳ್ಳೆಣ್ಣೆ, ಔಡಲ ಎಣ್ಣೆಯನ್ನು ನೆತ್ತಿಗೆ, ಪಾದಕ್ಕೆ ತಿಕ್ಕುತ್ತಾರೆ. ಕೂದಲು ಉದುರುವುದನ್ನು ತಡೆಯಲು, ಕೂದಲು ಬೆಳೆಯಲು ಬಿಳಿ ದಾಸವಾಳದ ಹೂವನ್ನು ಒಣಗಿಸಿ ಪುಡಿ ಮಾಡಿ. ಎಣ್ಣೆಯಲ್ಲಿ ಕಲಸಿ ಹಚ್ಚಿಕೊಳ್ಳುತ್ತಾರೆ. ತಲೆಗೆ ತೂತು ಬಿದ್ದರೆ, ಮೈಗೆ ಗಾಯವಾದರೆ ನಶಿ ಪುಡಿ ಅರಿಷಿಣ ಪುಡಿ ಹಚ್ಚಿ ವಾಸಿಮಾಡುತ್ತಾರೆ. ತಲೆ ಶೂಲೆಗೆ ಬೆಳ್ಳುಳ್ಳಿ ಸುಲಿದು ಅರ್ಧಮರ್ಧ ಕುಟ್ಟಿ ಹೊಡೆಯುವ ಭಾಗಕ್ಕೆ ಹಚ್ಚಿ ಕಾವು ಕೊಡುತ್ತಾರೆ. ಕಿವಿ ಸೋರಿದರೆ, ಕಿವಿಗೆ ಪೆಟ್ಟು ಬಿದ್ದರೆ ಬೆಳ್ಳುಳ್ಳಿ-ಲವಂಗವನ್ನು ಕೊಬ್ಬರಿ ಎಣ್ಣೆಯಲ್ಲಿ ಸಮವಾಗಿ ಹಾಕಿ, ಅರೆದು ರಸ ಹಿಂಡಿ ಕಿವಿಯಲ್ಲಿ ಹಾಕುತ್ತಾರೆ. ಕೆಮ್ಮು, ನಾಯಿಕೆಮ್ಮು, ಗೊರಲು ಕೆಮ್ಮು ಬಂದರೆ ಬೆಳ್ಳುಳ್ಳಿ ಬೆಲ್ಲ ತಿಂದು ನೀರು ಕುಡಿಯದೆ ಮಲಗಬೇಕು. ಒಣಶುಂಠಿ ಅಥವಾ ಲವಂಗ ರಾತ್ರಿ ಪೂರ್ತಿ ಬಾಯಲ್ಲಿ ಇಟ್ಟುಕೊಂಡು ಮಲಗಿದರೆ ನಿಲ್ಲುತ್ತದೆ ಎಂಬ ನಂಬಿಕೆ ಇದೆ.

ಮಗು ಹಾಲು ಕಕ್ಕಿದರೆ ಬೆರಳಿಗೆ ಜೇನುತುಪ್ಪ ಹಚ್ಚಿ ಮಗುವಿಗೆ ನೆಕ್ಕಿಸಿದರೆ ಕಕ್ಕುವುದು ನಿಲ್ಲುತ್ತದೆ ಎನ್ನುತ್ತಾರೆ. ಮಕ್ಕಳಿಗೆ ಮುಟ್ಟುದೋಷ (ಮುಡದೋಷ) ಆದರೆ ಮಠದಲ್ಲಿ ಯಂತ್ರ, ತಾಯತ ಕಟ್ಟಿಸುತ್ತಾರೆ. ಕಫ, ಹಲ್ಲುಬೀಳುವುದು, ನೋಯುವುದು, ಹಲ್ಲಿಗೆ ಪೆಟ್ಟಾಗುವುದು, ಬಾಯಿ ಒಡೆಯುವುದು, ಗಂಟಲುನೋವು, ಹದಗಡ್ಲಿ, ಎದೆ ಉರಿ, ದಮ್ಮು, ಕುರುವು, ಜಂತುಹುಳು, ವಾತ, ಪಿತ್ತ, ಮುಳ್ಳು ಮುರಿದರೆ, ಬಟ್ಟು ಒಡೆದರೆ, ಉಗುರುಸುತ್ತು, ಫಿಟ್ಸ್ ಬಂದರೆ, ಬಿಳಿಸೆರಗು, ಹೆರಿಗೆಬೇನೆ, ನಾಯಿಕಡಿದರೆ ಹೀಗೆ ಅನೇಕ ಕಾಯಿಲೆಗಳಿಗೆ ಕನಕಗಿರಿಯ ಜನಪದರು ತಮ್ಮದೇ ಆದ ಪರಿಣಾಮಕಾರಿ ಮನೆ ವೈದ್ಯನನ್ನು ಅವಲಂಭಿಸಿದ್ದಾರೆ.

ಮಾತು ಬಾರದ ಪ್ರಾಣಿಗಳಿಗೆ ಔಷದಿ ಕೊಟ್ಟರೆ ಪುಣ್ಯ ಬರುತ್ತದೆ ಎಂದು ಹೇಳುವ ಜನಪದ ಪಶುವೈದರು ಇಲ್ಲಿದ್ದಾರೆ. ದನದ ನಾಲಿಗೆಗೆ ಮುಳ್ಳುರೋಗ ಬಂದು ದನವು ಹುಲ್ಲು ತಿನ್ನದೇ ಇದ್ದರೆ ಮದ್ದುಗುಣಿಕೆ ಕಾಯಿಯ ಮುಳ್ಳುಗಳಿಂದ ದನದ ನಾಲಿಗೆಯನ್ನು ತಿಕ್ಕುತ್ತಾರೆ. ಕುಂದು ಆದರೆ ದನದ ಕೊರಳಿಗೆ ಅಮೃತ ಬಳ್ಳಿಯ ತಪ್ಪಲನ್ನು ಸುತ್ತುತ್ತಾರೆ. ಚಪ್ಪೆರೋಗಕ್ಕೆ ಕಾಸಿದ ಕಬ್ಬಿಣ ಸಲಾಕೆಯಿಂದ ಬೇನೆ ಇದ್ದ ಜಾಗಕ್ಕೆ ಬರೆ ಎಳೆಯುತ್ತಾರೆ. ಕುರಿ, ಆಡುಗಳು ಸರಿಯಾಗಿ ಮೇಯದಿದ್ದರೆ ಕಬ್ಬಿಣದ ಕಾಸಿದ ನೀರನ್ನು ಕುಡಿಸುತ್ತಾರೆ. ದನ ಕರುಗಳಿಗೂ ಸಹ ಮಂತ್ರಿಸಿದ ನೀರು ಕುಡಿಸುವುದು, ದೃಷ್ಟಿ ತೆಗೆಯುವುದು, ಕೊರಳಿಗೆ ಚಿಪ್ಪು ಅಥವಾ ಮಂಡಗಸಬರಿಗೆ ಕಟ್ಟುವ ಪದ್ಧತಿ ಇದೆ. ಕುರಿ ಕಾಯುವವರು ಕುರಿಗಳಿಗೆ ಕಾಯಿಲೆ ಬಂದಾಗ ಔಷಧ ಅಂಗಡಿಗಳಲ್ಲಿ ದೊರೆಯುವ ಔಷಧಿ ಕೊಂಡು, ತಾವೇ ಕುರಿಗಳಿಗೆ ಇಂಜೆಕ್ಷನ್ ಕೊಡುವುದು, ಔಷಧಿ ಕುಡಿಸುವುದು ಮಾಡುತ್ತಾರೆ. ಈಗೀಗ ಪಶು ಆಸ್ಪತ್ರೆಗಳಿದ್ದರೂ ಅವರ ಚಿಕಿತ್ಸೆ ಅಷ್ಟು ಪರಿಣಾಮಕಾರಿಯಾಗಿರುವುದಿಲ್ಲ ಎಂಬ ನಂಬಿಕೆಯಿಂದ ಅವರಲ್ಲಿಗೆ ಹೋಗುವವರು ಕಡಿಮೆ.

ಇಲ್ಲಿ ಎಲ್ಲೆಡೆ ಸರಕಾರಿ, ಖಾಸಗಿ ವೈದ್ಯರುಗಳು ಇರುವುದರಿಂದ ಮನೆ ಔಷದಿಯ ಬಗ್ಗೆ, ನಾಟಿ ಔಷಧಿಯ ಬಗೆಗೆ ಆಸಕ್ತಿ ಕಳೆದುಕೊಂಡು, ಇಂಗ್ಲೀಷ್ ಔಷಧಿಗಳತ್ತ ಹೆಚ್ಚಿನ ಸಂಖ್ಯೆಯಲ್ಲಿ ಮುಖ ಮಾಡಿ ನಿಲ್ಲತೊಡಗಿದ್ದಾರೆ.

೪.೭ ನ್ಯಾಯ ವ್ಯವಸ್ಥೆ

ನ್ಯಾಯ ಇತ್ಯರ್ಥದ ಒಂದು ವ್ಯವಸ್ಥೆಯೇ ನ್ಯಾಯ ಪದ್ಧತಿ. ಇದು ಪಂಚಾಯತಿ ಪರಂಪರೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಬಂದಿದೆ. ಕನಕರಾಯನ ದೇವಸ್ಥಾನದಲ್ಲಿ, ಕಟ್ಟೆಯ ಮೇಲೆ ಅಥವಾ ವ್ಯಾಜ್ಯ ನಡೆದವರ ಮನೆಯಲ್ಲಿ ಪಂಚಾಯತಿ ಸೇರಿ ನ್ಯಾಯ ಇತ್ಯರ್ಥಗೊಳ್ಳುತ್ತವೆ. ಮಾಬಳೇಶ್ವರಸ್ವಾಮಿ, ಸಮಗಂಡಿಗಂಗಣ್ಣ, ನಾಗಪ್ಪಕಮ್ಮಾರ, ದೊಡ್ಡ ಕನಕಪ್ಪ, ರಾಜದರಖಾನ, ಜಂಬಣ್ಣ, ಕುಂಬಾರಸಣ್ಣಪ್ಪ ಮುಂತಾದವರು ಪಂಚಾಯ್ತಿ ಪ್ರಮುಖರಾಗಿದ್ದಾರೆ.

ಹಲವಾರು ಜಾತಿ, ಬುಡಕಟ್ಟುಗಳಿಂದ ಕೂಡಿದ ಕನಕಗಿರಿಯಲ್ಲಿ ಕುಟುಂಬದ ಯಾವುದೇ ಸಮಸ್ಯೆ ಇರಲಿ ಅಥವಾ ಹಲವಾರು ಕಾರಣಗಳಿಂದ ಉಂಟಾದ ಕಲಹವಿರಲಿ ಊರಿನ ಹಿರಿಯರು, ಸಮುದಾಯ ಮುಖಂಡರು ವ್ಯವಸ್ಥೆಯ ಅಡಿಯಲ್ಲಿ ನ್ಯಾಯ ತೀರ್ಮಾನ ಮಾಡುತ್ತಾರೆ. ಇದನ್ನು ಸಹಭಾಗಿತ್ವದ ನ್ಯಾಯ ಅಥವಾ ಪಂಚಾಯ್ತಿ ನ್ಯಾಯ ಎನ್ನಬಹುದು. ಇಲ್ಲಿಗೆ ಬಂದ ದೂರುಗಳನ್ನು ಈ ಊರಿನವರೆ ಇತ್ಯರ್ಥ ಮಾಡುತ್ತಾರೆ. ಸ್ಥಳೀಯ ಸಮುದಾಯದ ಮಧ್ಯಸ್ಥರು ಕುಲಾಚಾರಗಳನ್ನು ಅಥವಾ ಸಂಪ್ರದಾಯಗಳನ್ನು ಅನುಸರಿಸಿ ನ್ಯಾಯ ನಿರ್ಣಯ ಮಾಡುತ್ತಾರೆ.

ಗ್ರಾಮಕ್ಕೆ ಸಂಬಂಧಿಸಿದ ವ್ಯಾಜ್ಯವಾಗಿದ್ದರೆ ಊರಿನ ತಳವಾರನು ಹಿರಿಯರ ನಿರ್ದೇಶನದಂತೆ ಪಂಚಾಯ್ತಿ ಮಾಡುವ ದೈವವನ್ನು ಕರೆದು ಬರುತ್ತಾನೆ. ವ್ಯಕ್ತಿಗತ ವ್ಯಾಜ್ಯಗಳಾಗಿದ್ದರೆ ವ್ಯಾಜ್ಯಕ್ಕೆ ಸಂಬಂಧಪಟ್ಟವರೇ ತಮಗೆ ಬೇಕಾದವರನ್ನು ಕರೆತರುತ್ತಾರೆ. ವ್ಯಾಜ್ಯ ಹೂಡಿದವರು ಸೌಜನ್ಯಕ್ಕಾಗಿ ತೀರ್ಪುಗಾರರಿಗೆ ಚಾ, ಫಳಾರದ ವ್ಯವಸ್ಥೆಯನ್ನು ಮಾಡುತ್ತಾರೆ.

ಭೂಮಿ, ಹಣಕಾಸು, ಸಣ್ಣಪುಟ್ಟ ಕಳ್ಳತನ, ಸ್ತ್ರೀ ಪುರುಷ ಸಮಸ್ಯೆಗಳು, ಜಮೀನು, ಅಂತರ್‌ಜಾತಿಯ ವಿವಾಹ, ಮನೆ, ಹಬ್ಬ, ಜಾತ್ರೆ, ಇತ್ಯಾದಿಗಳು ಪಂಚಾಯ್ತಿಗೆ ಬರಬಹುದಾದ ವ್ಯಾಜ್ಯಗಳಾಗಿರುತ್ತವೆ. ಪಂಚಾಯ್ತಿಯ ತೀರ್ಮಾನ ತೆಗೆದುಕೊಳ್ಳುವಾಗ ಅಲ್ಲಿ ಸೇರಿದ ಹಿರಿಯರೊಂದಿಗೆ ಕೂಲಂಕುಷವಾಗಿ ಚರ್ಚಿಸಿ, ಅವರ ಮತ್ತು ದೈವದವರ ಅಭಿಪ್ರಾಯದ ಮೇರೆಗೆ ಯಜಮಾನರು ನ್ಯಾಯ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಯಾರೇ ಆಗಲಿ ಪಂಚಾಯ್ತಿ ತೀರ್ಮಾನಕ್ಕೆ ಬದ್ಧರಾಗಿರಬೇಕಾಗುತ್ತದೆ. ಇಲ್ಲದಿದ್ದರೆ ಅವರನ್ನು ಊರಿನಿಂದ ಅಥವಾ ಜಾತಿಯಿಂದ ಬಹಿಷ್ಕಾರ ಹಾಕುವಂತಹ ಶಿಕ್ಷೆ ವಿಧಿಸುತ್ತಾರೆ. ಅಥವಾ ಇಲ್ಲಿ ಬಗೆಹರಿಯದೆ ಹೋದರೆ ಪೋಲೀಸ್ ಅಥವಾ ಕೋರ್ಟ್ ಮೆಟ್ಟಿಲೇರುವ ಸಂದರ್ಭಗಳೂ ಬರುತ್ತವೆ.

೪.೮ ಬೇಟೆ

ಕನಕಗಿರಿಯಲ್ಲಿ ಪಾಳೆಯಗಾರರಿಂದ ಇಂದಿನವರೆಗೂ ಬೇಟೆ ಒಂದು ಪ್ರವೃತ್ತಿಯಾಗಿ ಬೆಳೆದು ಬಂದಿದೆ. ಇದು ಗುಡ್ಡಗಾಡು ಪ್ರದೇಶವಲ್ಲವಾದುದರಿಂದ ಹಾಗೂ ಹೊರಭೂಮಿ ಪ್ರದೇಶವಾಗಿರುವುದರಿಂದ ಬೇಟೆಯಾಡಲು ಅವಕಾಶಗಳು ಕಡಿಮೆ ಎಂಬುದು ಇಲ್ಲಿನ ಬೇಟೆಗಾರರ ಅಭಿಪ್ರಾಯವಾಗಿದೆ. ಕನಕಗಿರಿಯ ದೇವನಾಳ ಯಂಕಪ್ಪ, ಬಿ.ಹನ್ಮಂತಪ್ಪ, ಹುಲುಗಪ್ಪ, ನಾಗಪ್ಪ ಇವರು ಇಲ್ಲಿಯ ಪ್ರಮುಖ ಬೇಟೆಗಾರರಾಗಿದ್ದಾರೆ. ಯುಗಾದಿ ಹಬ್ಬವಾದ ಮರುದಿನ ಕುರಿ, ಕೋಳಿ ಬೇಟೆಯಾಡುವ ಪದ್ಧತಿ ಅನೇಕ ಮಾಂಸಾಹಾರಿಗಳಲ್ಲಿದೆ. ಕೊರವರು ಊರ ಹಂದಿಗಳನ್ನು ಬೇಟೆಯಾಡುತ್ತಾರೆ. ಹಾವಾಡಿಗರು ಹಾವನ್ನು, ತುಂಟಮಕ್ಕಳು ಏಡಿ, ಚೇಳನ್ನು, ಮನೆಯಲ್ಲಿ ಇಲಿ ಬೇಟೆಯನ್ನು ಆಡುತ್ತಾರೆ.

ಏದು, ಮೊಲ, ಉಡ, ಬುರಲಿ, ಬೆಳ್ಳಕ್ಕಿ, ಮುಳ್ಳ ಹಂದಿ, ಕಾಡು ಕೋಳಿ ಮುಂತಾದವುಗಳನ್ನು ಬೇಟೆಯಾಡುವ ಪದ್ಧತಿ ಈಗಲೂ ಇದೆ. ಇಲ್ಲಿ ನದಿ, ಕಾಲುವೆಗಳು ಇಲ್ಲದುದರಿಂದ ಕೆರೆ, ಬಾವಿಗಳಲ್ಲೆ ಮೀನಿನ ಬೇಟೆಯಾಡುತ್ತಾರೆ.

ಬೇಟೆಗೆ ಹೋಗುವಾಗ ನಾಯಿಯನ್ನು ಜೊತೆಗೆ ಕರೆದುಕೊಂಡು ಹೋಗುವುದು ಸಹಜವಾಗಿದೆ. ಹೋಗುವಾಗ ದೇವರಿಗೆ ಮನದಲ್ಲಿ ಪ್ರಾರ್ಥಿಸಿ, ಕೈಯ್ಯಲ್ಲಿ ಟಾರ್ಚ್‌ನ್ನು ಗಂಡುಗೊಡಲಿ, ಬರ್ಜಿಗಳನ್ನು ಹಿಡಿದು ಹೊರಡುತ್ತಾರೆ. ಹೋಗುವಾಗ ಬೆಕ್ಕು ಅಡ್ಡಬಂದರೆ ಬೇಟೆಯಾಡಲು ಹೋಗುವುದಿಲ್ಲ. ಭಾನುವಾರ ರಜೆ ಇರುವುದರಿಂದ ಎಲ್ಲರೂ ಕುಳಿತು ಊಟಮಾಡಲು ಅನುಕೂಲವಾಗುವುದು ಎಂಬ ಕಾರಣದಿಂದ ಶನಿವಾರ ಸಂಜೆಯೇ ಬೇಟೆಗೆ ಹೋಗುವುದು ಹೆಚ್ಚು.

ಹಿರೇಮಾದಿನಾಳದ ಬಂಡೆಗಲ್ಲಿನ ಶಾಸನವೊಂದರಲ್ಲಿ ನರಭಕ್ಷಕ ಪ್ರಾಣಿಯನ್ನು ಕೊಂದ ವಿಠಲಾಪುರದ ವೀರಪ್ಪನ ಮಗ ಸೊಲಬಾಯನಿಗೆ ೧೨ ಎಕರೆ ಭೂಮಿ ಕೊಟ್ಟಿರುವ ಬಗ್ಗೆ ಮಾಹಿತಿ ಇದೆ. ಮಹಂತ ಮಠದ ಗಿಂಡಿ ಬಾವಿಯಲ್ಲಿ ಕಾಡು ಪ್ರಾಣಿಯನ್ನು ಬೇಟೆಯಾಡುವ ಉಬ್ಬು ಶಿಲ್ಪವೊಂದಿದೆ. ಇದೇ ರೀತಿ ಅಲ್ಲಲ್ಲಿ ಬೇಟೆಗೆ ಸಂಬಂಧಿಸಿದ ಶಿಲ್ಪಗಳು ಕಂಡುಬಂದಿದ್ದು ಇವುಗಳೆಲ್ಲವು ಅಂದಿನ ಬೇಟೆ ಪದ್ಧತಿಯನ್ನು ಸಾರುತ್ತವೆ.

೪.೯ ಅತಿಥಿ ಸತ್ಕಾರ

ಮನೆಗೆ ಬಂದ ಅತಿಥಿಗಳನ್ನು ಆದರದಿಂದ ಸ್ವಾಗತಿಸುವ, ಗೌರವಿಸುವ ಸಂತೋಷವಾಗುವ ರೀತಿಯಲ್ಲಿ ಉಪಚರಿಸುವ ಸಂಸ್ಕೃತಿ ನಮ್ಮದು. 'ಅತಿಥಿದೇವೋ ಭವ' ಎಂದು ಭಾವಿಸಿ ಕನಕಗಿರಿಯ ಜನ ಮನೆಗೆ ಬಂದವರನ್ನು ಸತ್ಕರಿಸುವುದರಲ್ಲಿ ಕಡಿಮೆಯೇನಿಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಅತಿಥಿ ಸತ್ಕಾರದ ಪದ್ಧತಿ ಜೀವಂತವಾಗಿದೆ. ಎಂಥವರೇ ಬರಲಿ, ಬಂದವರನ್ನು ಸತ್ಕರಿಸುವುದು ನಮ್ಮ ಧರ್ಮ ಎಂದು ತಿಳಿದವರು ಹಳ್ಳಿಗರು. ಬೃಹತ್ತಾಗಿ ಬೆಳೆದ ಪಟ್ಟಣ ಸಂಸ್ಕೃತಿಯಲ್ಲಿ ಅತಿಥಿ ಸತ್ಕಾರ ಕಡಿಮೆಯಾಗತೊಡಗಿದೆ. ಬಂದ ಅತಿಥಿಗಳ ಜೊತೆಗೆ ಯಾಂತ್ರಿಕವಾಗಿ, ನಾಟಕೀಯವಾಗಿ ಮಾತನಾಡಿಸಿ ಹಾಗೆಯೇ ಕಳುಹಿಸುವವರಿದ್ದಾರೆ.

ಕನಕಗಿರಿಯು ಹಳ್ಳಿಯೂ ಅಲ್ಲದ ಪಟ್ಟಣವೂ ಅಲ್ಲದ ಪರಿಸರವಾಗಿರುವುದರಿಂದ ಇಲ್ಲಿ ಅತಿಥಿ ಸತ್ಕಾರ ಪದ್ಧತಿ ಇನ್ನೂ ಜೀವಂತವಾಗುಳಿದಿದೆ ಎನ್ನಬಹುದು. ಇಲ್ಲಿಯ ಜನ ಮನೆಗೆ ಯಾರೇ ಬರಲಿ ಬಂದ ಕೂಡಲೆ ಒಳಕರೆದು ಕೂಡಿಸಿ, ಕುಡಿಯಲು ನೀರು ಚಹಾ ಕೊಡುತ್ತಾ ಊರಿನ ಕ್ಷೇಮ ಸಮಾಚಾರದ ಬಗ್ಗೆ, ಮಳೆ, ಬೆಳೆ ಬಗ್ಗೆ ವಿಚಾರಿಸಿಕೊಳ್ಳುತ್ತಾರೆ. ಆ ಮೇಲೆ ಕೈಕಾಲು ತೊಳೆಯಲು ಹೇಳಿ ಬಂದವರು ಸಂಬಂಧಿಗಳಾಗಿದ್ದಲ್ಲಿ ಹಪ್ಪಳ, ಸಂಡಿಗೆ ಕರೆದು ಸಿಹಿ ಅಡಿಗೆ ಮಾಡಿ ಊಟಕ್ಕೆ ಬಡಿಸುತ್ತಾರೆ. ಬೇಸಿಗೆಯಲ್ಲಿ ಬಂದ ಅತಿಥಿಗಳಿಗೆ ನಿಂಬೂಶರಬತ್, ಮಜ್ಜಿಗೆ ಕೊಡುತ್ತಾರೆ. ವಿಶೇಷ ಕಾರ್ಯಕ್ರಮವಿದ್ದಾಗ ಸಂಬಂಧಿಕರನ್ನು ಸ್ನೇಹಿತರನ್ನು ನೆರೆಹೊರೆಯವರನ್ನು ಊಟಕ್ಕೆ ಕರೆಯುತ್ತಾರೆ. ಊಟಕ್ಕೆ ಕರೆಯುವಾಗ ಹೆಣ್ಣುಮಕ್ಕಳು ಅತಿಥಿಗಳಿಗೆ ಕುಂಕುಮ ಕೊಟ್ಟು ಕರೆಯುತ್ತಾರೆ. ಈ ಪದ್ಧತಿ ಹಿಂದೂಗಳಲ್ಲಿ ಮಾತ್ರ ಇದೆ. ಮನೆಗೆ ಯಾರಾದರು ಮುತ್ತೈದೆಯರು ಬಂದರೆ ವಾಪಸ್ ಹೋಗುವಾಗ ಕುಂಕುಮ ಕೊಡುತ್ತಾರೆ. ಹಿಂದೆ ಊಟಕ್ಕೆ ಕರೆಯುವಾಗ 'ಎಲ್ಲರೂ ಊಟಕ್ಕೆ ಬನ್ನಿ,' 'ಸ್ಥಳ ಪರಸ್ಥಳ' ಎಲ್ಲರೂ ಊಟಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ಇತ್ತೀಚೆಗೆ ಮನೆಗೊಬ್ಬರಂತೆ ಕರೆಯುವ ಪದ್ಧತಿ ಹೆಚ್ಚಾಗಿದೆ.

೪.೧೦ ಜಾತಿ ಬಹಿಷ್ಕಾರ, ಜಾತಿಗೆ ಸೇರಿಸಿಕೊಳ್ಳುವಿಕೆ

ಬಹಿಷ್ಕಾರವೆಂದರೆ ತಪ್ಪು ಮಾಡಿದವರನ್ನು ಜಾತಿಯಿಂದ ಅಥವಾ ಸಮಾಜದಿಂದ ಹೊರಗಿಡುವುದು. ಬಹು ಹಿಂದಿನಿಂದಲೂ ಬಂದ ಈ ಪದ್ಧತಿ ಅಮಾನವೀಯವಾದುದಾಗಿದೆ. ಆಧುನಿಕತೆಯ ಪ್ರಭಾವದಿಂದಾಗಿ ಈ ಪದ್ಧತಿ ಈಗ ಮಾಯವಾಗಿದೆ ಎಂದು ಹೇಳಬಹುದು. ಕನಕಗಿರಿಯ ಪರಿಸರದಲ್ಲಿ ಜಾತಿ ಬಹಿಷ್ಕಾರ ಪದ್ಧತಿ ಅಷ್ಟಾಗಿ ಪ್ರಚಲಿತದಲ್ಲಿಲ್ಲ. ಹುಡುಗ ಅಥವಾ ಹುಡುಗಿಯ ತಂದೆ, ತಾಯಿ, ಕುಟುಂಬದ ಅಥವಾ ಸಮಾಜದ ಮಾತನ್ನು ಧಿಕ್ಕರಿಸಿ, ಸಮಾಜದ ಕಟ್ಟುಪಾಡುಗಳನ್ನು ಧಿಕ್ಕರಿಸಿ ಅನ್ಯಕೋಮಿನ, ಅಥವಾ ಧರ್ಮದವರನ್ನು ಮದುವೆಯಾದರೆ ಜಾತಿ ಬಹಿಷ್ಕಾರ ಹಾಕುವುದು ಹಿಂದಿನ ಪದ್ಧತಿಯಾಗಿದೆ. ಇಂದಿನವರು ಇಂತಹ ತಪ್ಪುಗಳನ್ನು ಮಾಡಿದರೆ, ಮನೆಯಿಂದ ಹೊರಹಾಕಿ ಒಂದು ವರ್ಷದ ಮಟ್ಟಿಗೆ ಮದುವೆಯಾಗಿ ಹೊರಹೋದ ಮಗ ಅಥವಾ ಮಗಳನ್ನು ಯಾರು ಮಾತನಾಡಿಸುವುದಿಲ್ಲ. ಸಮಾಜದವರು ಇವರನ್ನು ಕಂಡು ವ್ಯಂಗ್ಯದಿಂದ ಮಾತನಾಡಿಕೊಂಡು ಅವಮಾನ ಮಾಡುತ್ತಿರುತ್ತಾರೆ. ಕಾಲ ಕ್ರಮೇಣ ಅವರು ಮಾಡಿದ ತಪ್ಪನ್ನು ಮರೆತು ಕರುಳ ಬಳ್ಳಿಯ ವಾತ್ಸಲ್ಯದ ಕರೆಗೆ ಸೋತು ತಂದೆ-ತಾಯಿಯರು ಮನೆಗೆ ಸೇರಿಸಿಕೊಳ್ಳುತ್ತಾರೆ.

ಅಂತರ್ಜಾತಿಯ ಮದುವೆಯಾದರೆ ಹುಡುಗಿ ಯಾವುದೇ ಜಾತಿಯವಳಾಗಿದ್ದರೂ ಸಹ ಮದುವೆಯಾದ ಹುಡುಗನ ಜಾತಿಗೆ ಅಥವಾ ಧರ್ಮಕ್ಕೆ ಸೇರುವ ರೂಢಿ ಹೆಚ್ಚಾಗಿ ಇದೆ. ಕೆಲವರು ಹುಡುಗಿಯ ಮತ ಧರ್ಮವನ್ನು ಒಪ್ಪಿ ಸೇರಿರುವುದೂ ಈ ಊರಿನ ಒಂದು ವಿಶೇಷವೇ ಸರಿ.

ಗಂಡಾಗಲಿ, ಹೆಣ್ಣಾಗಲಿ ಅನೈತಿಕ ಸಂಬಂಧವನ್ನು ಸಮಾಜ ಅಥವಾ ಗಂಡ, ಹೆಂಡತಿ ಒಪ್ಪುವುದಿಲ್ಲ. ಅದರಲ್ಲೂ ಹೆಣ್ಣಿನ ಅನೈತಿಕ ಸಂಬಂಧವನ್ನು ಗಂಡನಾದವನು ಅಥವಾ ಕುಟುಂಬ ವರ್ಗ ತುಂಬಾ

ಗಂಭೀರವಾಗಿ ಪರಿಗಣಿಸುತ್ತದೆ. ಅಂತಹ ಹೆಣ್ಣನ್ನು ಮನೆಯಿಂದ ಹೊರ ಹಾಕುವ, ಹಿಂಸಿಸುವ ಮಟಕ್ಕೆ ಹೋಗುತ್ತದೆ. ಸಮಾಜದಲ್ಲೂ ಸಹ ಇವಳಿಗೆ ಗೌರವ ಇರುವುದಿಲ್ಲ. ಅವಳ ಜೊತೆಗೆ ಬೇರೆ ಹೆಣ್ಣುಮಕ್ಕಳನ್ನು ತಿರುಗಾಡಲು ಬಿಡುವುದಿಲ್ಲ. ಒಟ್ಟಾರೆಯಾಗಿ ಜಾತಿ ಬಹಿಷ್ಕಾರ ಪದ್ಧತಿ ಹಿಂದಿನಷ್ಟು ಕಠಿಣವಾಗಿಲ್ಲವೆಂದೇ ಹೇಳಬಹುದು.

೪.೧೧ ಅರ್ಥವ್ಯವಸ್ಥೆ

ಒಂದು ಸಮಾಜದ ನಾಗರಿಕತೆ ಯಾವ ಹಂತದಲ್ಲಿದೆ ಎಂದು ಗುರುತಿಸಿಕೊಳ್ಳಲು ಅಲ್ಲಿನ ಅರ್ಥವ್ಯವಸ್ಥೆಯನ್ನು ಅರಿತುಕೊಳ್ಳುವುದೂ ಸಹ ಮುಖ್ಯವಾಗುತ್ತದೆ. ಕಾಲಕ್ರಮೇಣ ಮನುಷ್ಯನ ವೃತ್ತಿ, ಉಪವೃತ್ತಿಗಳು ಆತನ ಬದುಕಿಗೆ ಅಗತ್ಯವಾದ ಅರ್ಥಸಂಪಾದನೆಯ ಗುರಿಯನ್ನೇ ಕೇಂದ್ರವಾಗಿ ಉಳ್ಳವಾಗಿದ್ದು, ಜಾನಪದದ ಹಲವು ಮುಖಗಳು ಗರಿಗೆದರಲು ಕಾರಣವಾಗಿವೆ. ಕನಕಗಿರಿಯ ಜಾನಪದೀಯ ಅಧ್ಯಯನಕ್ಕೆ ಇಲ್ಲಿನ ಜನರ ವೃತ್ತಿ, ಆರ್ಥಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಿದೆ.

ಇಲ್ಲಿನ ಜನರ ಪ್ರಮುಖ ವೃತ್ತಿ ಕೃಷಿಯಾಗಿದೆ. ಕನಕಗಿರಿ ಪ್ರದೇಶವು ಒಣಬೇಸಾಯದ ಪ್ರದೇಶವಾಗಿದೆ. ಸರಕಾರದ ನೆರವಿನೊಂದಿಗೆ ಬೋರ್‌ವೆಲ್‌ಗಳು, ಕೆರೆ, ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡ ರೈತರು ವರ್ಷವಿಡೀ ಕೃಷಿ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಒಣ ಬೇಸಾಯವುಳ್ಳ ರೈತರು ೪-೬ ತಿಂಗಳು ಮಾತ್ರ ಕೃಷಿ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ, ನೆಲ್ಲು, ಹೆಸರು, ಅಲಸಂದಿ ಇಲ್ಲಿನ ಪ್ರಮುಖ ಬೆಳೆಗಳಾಗಿವೆ. ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆ ಗಗನಕ್ಕೇರಿದ್ದರೂ ಎಲ್ಲಾ ರೈತರ ಉತ್ಪನ್ನಗಳು ಏಕಕಾಲಕ್ಕೆ ಮಾರುಕಟ್ಟೆಗೆ ಬಂದಾಗ ರೈತರ ಉತ್ಪನ್ನಗಳಿಗೆ ಬೆಲೆ ಕಡಿಮೆಯಾಗಿಬಿಡುತ್ತದೆ. ಹೀಗಾಗಿ ರೈತ ಯಾವಾಗಲೂ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಕಷ್ಟಪಡಬೇಕಾಗುತ್ತದೆ.

ಕುರಿ ಸಾಕಾಣಿಕೆ ಇಲ್ಲಿನ ಮತ್ತೊಂದು ಪ್ರಮುಖ ಉದ್ಯೋಗವಾಗಿದೆ. ಅನೇಕ ಸಂಕಷ್ಟಗಳನ್ನು ಎದುರಿಸಿದರೂ ಇದ್ದುದರಲ್ಲಿ ಇವರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಬಹುದು. ತಮ್ಮ ತಮ್ಮ ಮನೆಗಳಲ್ಲಿ ಕೋಳಿ ಸಾಕಿಕೊಂಡವರು ಅನೇಕರಿದ್ದಾರೆ. ಹಾಲುಮಾರುವವರು, ಕುಳ್ಳು ಮಾರುವವರು ತಕ್ಕ ಮಟ್ಟಿನ ಲಾಭವನ್ನು ಪಡೆಯುತ್ತಾರೆ. ಕುಂಬಾರಿಕೆ, ಕಂಬಾರಿಕೆ, ಚಮ್ಮಾರಿಕೆಯಂತಹ ಕುಲಕಸುಬು ಹೊಂದಿದವರು ಅನೇಕರಿದ್ದಾರೆ. ಸುತ್ತಮುತ್ತಲಿನ ಹಳ್ಳಿಗರು ವ್ಯಾಪಾರ ವಹಿವಾಟುಗಳಿಗಾಗಿ, ಖರೀದಿಗಾಗಿ ಕನಕಗಿರಿಯನ್ನು ಅವಲಂಬಿಸಿದ್ದಾರೆ. ಹೀಗಾಗಿ ಈ ಭಾಗದಲ್ಲಿ ಕನಕಗಿರಿ ಪ್ರಮುಖ ವ್ಯಾಪಾರಿ ಕೇಂದ್ರವಾಗಿ, ಪಟ್ಟಣವಾಗಿ ಬೆಳೆದಿದೆ. ಇದರಿಂದ ಹೆಚ್ಚಿನ ಜನರಿಗೆ ನಾನಾ ತರಹದ ಚಿಕ್ಕಪುಟ್ಟ, ದೊಡ್ಡ ದೊಡ್ಡ ವ್ಯಾಪಾರಕ್ಕೆ ಅವಕಾಶವಾಗಿದೆ. ಕಿರಾಣಿ ಅಂಗಡಿ, ಬಟ್ಟೆ ಅಂಗಡಿ, ಸ್ಟೇಷನರಿ, ದಲ್ಲಾಲಿ ಅಂಗಡಿ, ಔಷದಿ ಅಂಗಡಿಗಳು ಸಿನೆಮಾ, ಹೋಟೆಲ್‌ಗಳು ಸೇರಿದಂತೆ ಹತ್ತಾರು ವ್ಯವಹಾರಗಳಿಂದ ಆರ್ಥಿಕ ಲಾಭ ಪಡೆಯುತ್ತಿದ್ದಾರೆ.

ಇವುಗಳಲ್ಲದೆ ಪ್ಯೂವನ್, ಗುಮಾಸ್ತ, ಶಿಕ್ಷಕ, ಉಪನ್ಯಾಸಕ, ವಿವಿಧ ಇಲಾಖೆಗಳಲ್ಲಿನ ಅಧಿಕಾರಿಗಳು, ಡಾಕ್ಟರ್, ಇಂಜಿನಿಯರ್, ಪೋಲಿಸ್ ಮುಂತಾದ ಉದ್ಯೋಗಗಳಲ್ಲಿ, ಖಾಸಗಿ ಉದ್ಯೋಗಗಳಲ್ಲಿ ತೊಡಗಿದವರು ಇದ್ದಾರೆ. ಮಹಿಳೆಯರು ಟೇಲರಿಂಗ್, ಕಸೂತಿ, ಹಪ್ಪಳ, ಊದುಬತ್ತಿ ಮಾಡುವಂತಹ ಅನೇಕ ಗುಡಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಈಗೀಗ 'ಸ್ತ್ರೀಶಕ್ತಿ' ಸಂಘಗಳನ್ನು ರಚಿಸಿಕೊಂಡು ಕಡಿಮೆ ಬಡ್ಡಿಯಲ್ಲಿ ಸರ್ಕಾರದಿಂದ ಸಾಲವನ್ನು ಪಡೆದುಕೊಂಡು ವ್ಯವಹಾರಕ್ಕೆ ಬಳಸಿಕೊಂಡು ವ್ಯವಹಾರಿಕ ಜ್ಞಾನದೊಂದಿಗೆ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುತ್ತಿದ್ದಾರೆ.

ಸರ್ಕಾರದಿಂದ ದೊರೆಯುವ ಅನೇಕ ಸಬ್ಸಿಡಿಗಳು, ಉಚಿತ ವಿದ್ಯುತ್, ವಾರ್ಷಿಕ ಶೇ. ೩ರ ಬಡ್ಡಿಯಲ್ಲಿ ಸಾಲ, ಉಚಿತ ಶಿಕ್ಷಣ, ರೇಶನ್ ಮುಂತಾದ ಸರ್ಕಾರದ ಯೋಜನೆಗಳೂ ಸಹ ಇಲ್ಲಿನ ಜನರ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸಲು ಕಾರಣವಾಗಿದೆ.

೪.೧೨ ಜನಪದ ಆಟಗಳು

ಒಂದು ಸಮುದಾಯದ ಅಥವಾ ಒಂದು ಗ್ರಾಮದ ಬೆಳವಣಿಗೆಯನ್ನು, ಬದುಕನ್ನು ಮನರಂಜನೆಯನ್ನು ತಿಳಿಯಬೇಕಾದರೆ ಜನಪದರ ಆಟಗಳ ಕುರಿತು ಅರಿಯಬೇಕಾಗುತ್ತದೆ. ಪ್ರಪಂಚದಲ್ಲಿ ವಾಸಿಸುವ ಜೀವಿಗಳಿಗೆ ಜನಪದ ಕ್ರೀಡೆಗಳು ನೈಸರ್ಗಿಕವಾಗಿ ಬಂದ ಆಸಕ್ತಿಗಳಾಗಿವೆ. ಆಟವಾಡುವುದು ಜೀವಿಗಳ ನೈಸರ್ಗಿಕ ಕ್ರಿಯೆ. ಆಟ ಹುಟ್ಟಿನಿಂದ ಬಂದ ಪ್ರವೃತ್ತಿ ಅದು ಜೀವಂತಿಕೆಯ ಪ್ರತೀಕ ಮನುಷ್ಯನಿಗೆ ಆಟಗಳು ಮನರಂಜನೆ, ಮಾನಸಿಕ ಮತ್ತು ಬೌದ್ಧಿಕ ಉಲ್ಲಾಸ ನೀಡುವ ಸಹಜ ಪ್ರವೃತಿಯಾಗಿವೆ. ಆಟಗಳು ಮನಸ್ಸಿಗೆ ಅನುಗುಣವಾಗಿ ಬೇರೆ ಬೇರೆ ಹಂತವನ್ನು ಪಡೆದಿವೆ. ಸಹನೆ, ಕಷ್ಟ ಸಹಿಷ್ಣುತೆ, ಯುಕ್ತಿ, ಐಕ್ಯ ಮನೋಭಾವನೆ, ಭ್ರಾತೃತ್ವ, ಸಹಕಾರ ಮನೋಧರ್ಮ ಮೊದಲಾದ ಗುಣಗಳು ಕ್ರೀಡೆಗಳ ಫಲವಾಗಿ ವರ್ಧಿಸುತ್ತವೆ.

ಜನಪದ ಆಟವನ್ನು ಚಾರಿತ್ರಿಕವಾಗಿ, ಭೌಗೋಳಿಕವಾಗಿ ಅವಲೋಕಿಸಿದಾಗ ಎಲ್ಲ ಜನಪದ ಆಟಗಳು ಎಲ್ಲಾ ಕಾಲದಲ್ಲೂ, ಎಲ್ಲಾ ಜನರಲ್ಲೂ ಜನಪ್ರಿಯವಾಗಿರಲಿಲ್ಲ. ಅಂದರೆ ಪರಂಪರಾಗತ ಸಲಕರಣೆಗಳನ್ನು ಬಳಸಿಕೊಂಡು ಮನೆಯ ಹೊರಗೆ ಮತ್ತು ಒಳಗೆ ಆಡಲಾಗುವ ಯಾವುದೇ ಗುಂಪಿನ ಜನತೆಯ ಆಟಗಳೇ ಜನಪದ ಆಟಗಳು, ಈಜಿಪ್ಟ್, ಮೆಹೆಂಜೋದಾರಗಳ ವೇದೋಪನಿಷತ್‌ಗಳಲ್ಲಿ, ರಾಮಾಯಣ ಮಹಾಭಾರತಗಳಲ್ಲಿ, ರಾಜಮಹಾರಾಜರುಗಳ ಕಾಲದಲ್ಲಿ ಅದರಲ್ಲೂ ವಿಶೇಷವಾಗಿ ವಿಜಯನಗರ, ಮೈಸೂರು ಒಡೆಯರ ಕಾಲದಲ್ಲೂ ಆಟಗಳ ಬಗೆಗಿನ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ "ನೆತ್ತಮನಾಡಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ...." (ಪಂಪ ಭಾರತ ೬-೬೯) ಎಂಬ ಸಾಲುಗಳಿಂದ ಹಿಡಿದು ರನ್ನ, ಜಗನ್ನಾಥ ವಿಜಯ, ನಂಜುಂಡ ಕುಮಾರವ್ಯಾಸರಾದಿಯಾಗಿ ಅನೇಕ ಕವಿಗಳ ಕಾವ್ಯಗಳಲ್ಲಿ ಪಗಡೆ ಆಟ, ಕುದುರೆ ಓಡಿಸುವ ಆಟ, ಚಿನ್ನಿಕೋಲು, ಗುರಿಯಾಳು ಚರಡಿನ ಹೊಣಕೆ, ಗದ್ದುಗಂಬಿ, ಕಣ್ಣುಮುಚ್ಚು, ಜೂಜು, ಅಣೆಕಲ್ಲಾಟ,

ಕನಕಗಿರಿಯ ದೇವಸ್ಥಾನಗಳ ಉಬ್ಬುಶಿಲ್ಪಗಳಲ್ಲಿ, ಗಾರೆಶಿಲ್ಪಗಳಲ್ಲೂ ಕೆಲವು ಆಟಗಳ ಮಾಹಿತಿ ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಕನಕಗಿರಿಯ ಪರಿಸದಲ್ಲಿರುವ ಕೆಲವು ಆಟಗಳನ್ನು ಕ್ಷೇತ್ರಕಾರ್ಯದ ಮೂಲಕ ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ. ಕ್ಷೇತ್ರಕಾರ್ಯದ ಮೂಲಕ ಕೆಲವು ಆಟಗಳನ್ನು ವರ್ಗೀಕರಿಸುವುದು ಕಷ್ಟಸಾಧ್ಯದ ಕೆಲಸ, ಇಲ್ಲಿ ಕಂಡುಬರುವ ಆಟಗಳನ್ನು ಹೊರಾಂಗಣ ಆಟ ಮತ್ತು ಒಳಾಂಗಣ ಆಟಗಳೆಂದು ವರ್ಗೀಕರಿಸಿದ್ದೇನೆ. ಇಲ್ಲಿ ಕೆಲವೊಂದು ಪ್ರಮುಖ ಆಟಗಳನ್ನು ಮಾತ್ರ ವಿವರಿಸಿ ಉಳಿದ ಆಟಗಳನ್ನು ಹೆಸರಿಸಿದ್ದೇನೆ.

ಒಳಾಂಗಣ ಆಟಗಳು

ಮನೆಯ ಒಳಗೆ ಆಡುವಂತಹ ಆಟಗಳಿಗೆ ಒಳಾಂಗಣ ಆಟಗಳು ಎಂದು ಕರೆಯುತ್ತಾರೆ.

ಪಗಡೆಯಾಟ (ಚೌಕಾಬಾರ)

ಮಹಿಳೆಯರ ಆಟಗಳಲ್ಲಿ ಇದೊಂದು ಜನಪ್ರಿಯ ಆಟ. ಇಬ್ಬರು ಅಥವಾ ನಾಲ್ಕು ಜನರು ಆಟದಲ್ಲಿ ಭಾಗವಹಿಸುತ್ತಾರೆ. ಐದೈದು (೨೫ ಮನೆ) ಅಥವಾ ಏಳೇಳು (೪೯ ಮನೆ) ಬರೆದು, ಮಧ್ಯದ ಮನೆಯಲ್ಲಿ ೫ ಅಥವಾ ೭ ಕಾಯಿ ಅಥವಾ ಬಳಪ, ಬಳೆಚೂರು ಇಟ್ಟು ಆಟ ಆರಂಭಿಸುತ್ತಾರೆ. ಮಧ್ಯದ ಮತ್ತು ಮೂಲಿಯಲ್ಲಿರುವ ಕಟ್ಟೆ ಮನೆಗಳು ರಕ್ಷಣೆಯ ಮನೆಗಳು ಇಲ್ಲಿ ಕಡಿಯಲು ಬರುವುದಿಲ್ಲ. ತಿಕ್ಕಿದ ಹುಣುಸೆಹಣ್ಣಿನ ಬೀಜದಿಂದ ಅಥವಾ ಕವಡೆಯಿಂದ ಆಟ ಆರಂಭಿಸುತ್ತಾರೆ. ಕವಡೆಯನ್ನು ಕೈಯಲ್ಲಿ ಕುಲುಕಿ ನೆಲದ ಮೇಲೆ ಹಾಕುವರು. ಅಂಗಾತ ಬಿದ್ದ ಕವಡೆಗಳ ಸಂಖ್ಯೆಗಳ ಆಧಾರದಲ್ಲಿ ಕಾಯಿ ಬಿಡುತ್ತಾರೆ. ಕಟ್ಟಿಮನಿ ಇಲ್ಲದ ಸ್ಥಳದಲ್ಲಿ ಎದುರಾಳಿ ಕಾಯಿ ಸಿಕ್ಕರೆ ಕಡಿದು ಮತ್ತೆ ಆಡುತ್ತಾರೆ. ಎಲ್ಲಾ ಕಾಯಿಗಳನ್ನು ನಡುಮಧ್ಯದ ಮನೆಗೆ ಯಾರು ತಂದು ಹಣ್ಣು ಮಾಡಿಕೊಳ್ಳುತ್ತಾರೋ ಅವರು ಗೆದ್ದಂತೆ. ಹೆಣ್ಣುಮಕ್ಕಳು ವಿರಾಮದ ವೇಳೆಯಲ್ಲಿ ಈ ಆಟವನ್ನು ಆಡುತ್ತಾರೆ. ಈಗೀಗ ಟಿ.ವಿ. ಹಾವಳಿ ಹೆಚ್ಚಾದ ಮೇಲೆ ಇಂತಹ ಆಟಗಳು ಕಡಿಮೆಯಾಗತೊಡಗಿವೆ.

ಗೊಟಗುಣಿ (ಬಟಗುಣಿ) ಆಟ

ಕಟ್ಟಿಗೆಯ ಹಲಗೆಯ ಮೇಲೆ ಎರಡು ಸಾಲುಗಳಲ್ಲಿ ಏಳೇಳು ಮನೆಗಳನ್ನು ತಗ್ಗುಮಾಡಿರುತ್ತಾರೆ. ಈ ಎಲ್ಲ ತಗ್ಗಿನ ಮನೆಗಳಲ್ಲಿ ಏಳೇಳು ಕಾಯಿಗಳನ್ನು ಹುಣಸೆಬೀಜ, ಸಣಕಲ್ಲು ಇತ್ಯಾದಿ ಹಾಕಿ ಆಟ ಆರಂಭಿಸುತ್ತಾರೆ. ಮೊದಲು ಯಾವುದಾದರು ಒಂದು ಮನೆಯ ಏಳೂ ಕಾಯಿಗಳನ್ನು ತೆಗೆದುಕೊಂಡು ಮುಂದಿನ ಮನೆಯಿಂದ ಕಾಯಿ ಮುಗಿಯುವವರೆಗೂ ಹಂಚುತ್ತಾ ಹೋಗುತ್ತಾರೆ. ಹಂಚಿದ್ದರಿಂದ ನಾಲ್ಕು ಕಾಯಿಗಳು ಬಂದರೆ ಕರ. ಹಂಚುವದು ಮುಗಿದ ಮೇಲೆ ಮುಂದಿನ ಮನೆ ಖಾಲಿ ಇದ್ದು ಅದರ ನಂತರದ ಮನೆಯಲ್ಲಿ ಕಾಯಿಗಳಿದ್ದರೆ ಅಷ್ಟೂ ಕಾಯಿಗಳನ್ನು 'ಪತ್ತ' ಎಂದು ತೆಗೆದುಕೊಳ್ಳುತ್ತಾರೆ. ಕೊನೆಗೆ ಹೆಚ್ಚು ಕಾಯಿ ಬಂದವರು ಗೆದ್ದಂತೆ. ಈ ಆಟವನ್ನು ವಿರಾಮದ ವೇಳೆಯಲ್ಲಿ ಮಹಿಳೆಯರು, ಮಕ್ಕಳು, ಗಂಡಸರು ಆಡುತ್ತಾರೆ.

ಅತ್ತಿಕಟಗಿ ಬಿತ್ತಿಕಟ್ಟಿಗೆ ಆಟ

ಈ ಆಟಕ್ಕೆ ಎಷ್ಟು ಮಕ್ಕಳಾದರೂ ನಡೆಯುತ್ತದೆ. ಎಲ್ಲ ಮಕ್ಕಳು ಕುಳಿತುಕೊಂಡು ತಮ್ಮ ತಮ್ಮ ಎರಡೂ ಕೈಗಳನ್ನು ನೆಲಕ್ಕೆ ಬೋರಲಿಡಬೇಕು. ಅವರಲ್ಲಿ ಒಬ್ಬರು ಉಳಿದೆಲ್ಲರ ಕೈಗಳ ಮೇಲೆ ತೋರ್ಬೆರಳು ಇಟ್ಟು

ಅತ್ತಿ ಕಟಿಗಿ ಬಿತ್ತಿ ಕಟಿಗಿ

ಭಾವನೋಡು ಬಸನೋರು

ಕೈ ಕೈ ದೂಳಗೈ

ಪಂಚಂ ಪಗಡಂ

ನೆಲಮುಟ್ಟ ದಡಳ್ ಬುಡಲ್ ಸೊಂಟ್ಯಾ ಸಕ್ರ್ಯಾ ಎಂದು ಹಾಡುತ್ತಾ ಕೊನೆಯವರ ಕೈಯನ್ನು ಚೂಟಬೇಕು. ಸೊಂಟಿ ಎಂದರೆ ಹಾಗೇ ಬೋರಲಿರಬೇಕು. ಸಕ್ರಿ ಎಂದರೆ ಅಂಗೈ ನೆಲಕ್ಕೆ ತಾಗಿಸಿಯೇ ಮೇಲ್ಮುಖ ಮಾಡಬೇಕು. ಕೊನೆಗೆ ಎಲ್ಲರ ಕೈಗಳನ್ನು ಅವರವರ ಬೆನ್ನ ಹಿಂದೆ ಇಟ್ಟುಕೊಳ್ಳಲು ಹೇಳಬೇಕು. ಆಮೇಲೆ ಪ್ರತಿಯೊಬ್ಬರಿಗೂ ಪ್ರಶ್ನೋತ್ತರಗಳ ಮೂಲಕ ಆಟ ಮುಂದುವರೆಸುತ್ತಾರೆ.

ಪ್ರಶ್ನೆ-ಕೈ ಕೈ ಎತ್ತಗೋದವು?

ಉತ್ತ-ಬಾಗಿಲಿಂದೋದವು

ಪ್ರ-ಬಾಗಿಲೇನು ಕೊಡ್ತು?

ಉ-ಚಕ್ಕೆ ಕೊಡ್ತು

ಪ್ರ-ಚಕ್ಕೆ ಏನ್ ಮಾಡ್ದಿ?

ಉ-ಒಲ್ಯಾಗ ಇಟ್ಟೆ

ಪ್ರ-ಒಲಿ ಏನ್ ಕೊಟ್ಟಿತು?

ಉ-ಬೂದಿ ಕೊಟ್ಟಿತು

ಪ್ರ-ಬೂದಿ ಏನು ಮಾಡ್ದೆ?

ಉ-ತಿಪ್ಪೀಗೆ ಹಾಕ್ದೆ

ಪ್ರ-ತಿಪ್ಪಿ ಏನುಕೊಟ್ಟಿತು?

ಉ-ಗೊಬ್ಬರ ಕೊಟ್ಟಿತು

ಪ್ರ-ಗೊಬ್ಬರ ಏನ್ ಮಾಡ್ದಿ?

ಉ-ಹೊಲಕ್ಕಾಕಿದೆ

ಪ್ರ-ಹೊಲ ಏನ್ ಕೊಟ್ಟಿತು?

ಉ-ಹೂವ ಕೊಟ್ಟಿತು

ಪ್ರ-ಹೂವ ಏನ್ ಮಾಡ್ದಿ?

ಉ-ಕನಕರಾಯಗ್ ಏರಿಸ್ದೆ

ಪ್ರ-ಕನಕರಾಯ ಏನ್ ಕೊಟ್ಟ

ಉ-ವರಕೊಟ್ಟ

ಎಂದು ಪ್ರತಿಯೊಬ್ಬರು ಸಂವಾದದ ಮೂಲಕ ಆಟ ಮುಗಿಸುವರು

ಆಣೆಕಲ್ಲಾಟ

ಎದಿರು ಬದಿರು ಇಬ್ಬರು ಕುಳಿಕೊಂಡು ಆಡುವ ಆಟ ಇದಾಗಿದೆ. ಐದಾರು ಕಲ್ಲುಗಳು ಬೇಕು. ಎಲ್ಲ ಕಲ್ಲುಗಳನ್ನು ನೆಲಕ್ಕೆ ಹಾಕಿ ಅದರೊಳಗೆ ಒಂದು ಕಲ್ಲನ್ನು ತೆಗೆದುಕೊಂಡು ಆ ಕಲ್ಲನ್ನು ಎರಡು ಮೂರು ಅಡಿ ಎತ್ತರಕ್ಕೆ ತೂರಿ ಆ ಕಲ್ಲು ಕೆಳಗೆ ಬರುವುದರೊಳಗೆ ಕೆಳಗೆ ಚೆಲ್ಲಿದ ಕಲ್ಲುಗಳನ್ನು ಒಂದೊಂದಾಗಿ ತೆಗೆದುಕೊಂಡು ಬದಿಗಿಡಬೇಕು. ಒಂದೊಂದು ಕಲ್ಲುಗಳನ್ನು ತೆಗೆದುಕೊಳ್ಳುವಾಗ ಪಕ್ಕದ ಕಲ್ಲುಗಳು ಕೈಗೆ ತಗುಲಬಾರದು. ತಗುಲಿದರೆ ಆಟದಲ್ಲಿ ಸೋತಂತೆ, ಆ ಮೇಲೆ ತೂರಿದ ಕಲ್ಲು ಕೆಳಗೆ ಬರುವುದರೊಳಗೆ ಎರಡೆರಡು, ಮೂರು ಮೂರು ಕೊನೆಗೆ ಎಲ್ಲಾ ಕಲ್ಲುಗಳನ್ನು ಒಮ್ಮೆಗೆ ತೆಗೆದುಕೊಳ್ಳಬೇಕು.

ಹೊರಾಂಗಣ ಆಟಗಳು

ಮನೆಯ ಹೊರಗೆ ಅಥವಾ ಪ್ರಕೃತಿಯ ಮಧ್ಯದಲ್ಲಿ ಆಡುವ ಆಟಗಳಿಗೆ ಹೊರಾಂಗಣ ಆಟಗಳು ಎನ್ನುತ್ತಾರೆ. ಇಲ್ಲಿ ಇಂತಹ ಆಟಗಳು ಸಾಕಷ್ಟು ಸಿಗುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ವಿವರಿಸಿ ಉಳಿದವುಗಳ ಹೆಸರುಗಳನ್ನು ಮಾತ್ರ ತಿಳಿಸಿದ್ದೇನೆ.

ಚಿಣಿಪಿಣಿ (ಚಿನ್ನಿದಾಂಡು)

ಐದಾರು ಮಕ್ಕಳು ಕೂಡಿಕೊಂಡು, ಒಬ್ಬರಾದ ಮೇಲೊಬ್ಬರಂತೆ ಚಿಣಿಪಿಣಿ ಆಡುತ್ತಾರೆ. ಈ ಆಟಕ್ಕೆ ಪಿಣಿ (ಅರ್ಧ ಅಡಿ ಉದ್ದದ ಎರಡೂ ಬದಿಗೆ ಚೂಪಾಗಿ ಕೆತ್ತಿರುವ ಕಟ್ಟಿಗೆ) ಮತ್ತು ಚಿಣಿ (ಎರಡು ಅಥವಾ ಎರಡವರೆ ಅಡಿ ಉದ್ದದ ಕಟ್ಟಿಗೆಗೆ ಒಂದು ಭಾಗದಲ್ಲಿ ಚೂಪಾಗಿ ಕೆತ್ತಿರುವಂತದ್ದು) ಬೇಕು. ನೆಲದಲ್ಲಿ ಉದ್ದನೆಯ ತಗ್ಗು ಕೊರೆದುಕೊಂಡು ಅದರಲ್ಲಿ ಚಿಣಿ ಅಡ್ಡಲಾಗಿ ಇಟ್ಟು ಚಿಣಿಯಿಂದ ಒಬ್ಬ ಚಿಮ್ಮುತ್ತಾನೆ. ಉಳಿದ ನಾಲ್ಕೈದು ಹುಡುಗರು ಚಿಮ್ಮಿದ ಪಿಣಿಯನ್ನು ಹಿಡಿಯಲು ಯತ್ನಿಸುತ್ತಾರೆ. ಒಂದು ವೇಳೆ ಪಿಣಿಯನ್ನು ನೆಲಕ್ಕೆ ಬೀಳುವ ಮೊದಲೇ ಹಿಡಿದರೆ ಚಿಮ್ಮಿದವನು ಔಟ್ ಆದಂತೆ. ಹಿಡಿಯದಿದ್ದರೆ ಅದೇ ಪಿಣಿಯನ್ನು ಪಿಚ್ಚಿನ ಹತ್ತಿರ ನಿಂತಿರುವವನ (ಚಿಮ್ಮಿದವನ) ಕಡೆಗೆ ಎಸೆಯುತ್ತಾನೆ. ಎಸೆದ ಪಿಣಿ ಪಿಚ್ಚಿಗೆ ತುಂಬಾ ಹತ್ತಿರವಿದ್ದರೆ ಚಿಮ್ಮಿದವನು ಔಟ್ ಆಗುತ್ತಾನೆ. ದೂರ ಇದ್ದರೆ ಚಿಮ್ಮಿದವನು ಪಿಣಿಯ ಒಂದು

ತುದಿಯನ್ನು ಚಿಣಿಯಿಂದ ನೆಲಕ್ಕೆ ಬಾರಿಸಿ ಮೇಲೆದ್ದ ಪಿಣಿಯನ್ನು ಚಿಣಿಯಿಂದ ವೇಗವಾಗಿ ಬಾರಿಸುತ್ತಾನೆ. ಹೀಗೆ ಮೂರು ಬಾರಿ ಬಾರಿಸುತ್ತಾನೆ. ಪಿಣಿಯು ಪಿಚ್ಚಿನಿಂದ ಇರಬಹುದಾದ ದೂರದ ಆಧಾರದ ಮೇಲೆ ಲೆಖ್ಖ ಇಡುತ್ತಾರೆ. ಈ ಲೆಖ್ಖದಲ್ಲಿ ಯಾರು ಹೆಚ್ಚು ಮೊತ್ತ ಗಳಿಸುತ್ತಾರೊ ಅವರು ಗೆದ್ದಂತೆ ಕೆಲವು ಕಡೆ ಈ ಆಟವನ್ನು ಸ್ವಲ್ಪ ವ್ಯತ್ಯಾಸವಾಗಿ ಆಡುವುದೂ ಉಂಟು. ಸಾಮಾನ್ಯವಾಗಿ ಈ ಆಟವನ್ನು ಹುಡುಗರು ಆಡುತ್ತಾರೆ. ಈ ಆಟದಿಂದ ಕೆಲವು ಸಲ ಅಪಾಯ ಸಂಭವಿಸಿದ್ದೂ ಉಂಟೆಂದು ಗ್ರಾಮಸ್ಥರು ಹೇಳುತ್ತಾರೆ.

ಲಗೋರಿ

ಹುಡುಗರು ಆಡುವ ಗುಂಪು ಆಟ ಇದಾಗಿದೆ. ಒಂದಕ್ಕಿಂತ ಒಂದು ಅಗಲವಿರುವ ವೃತ್ತಾಕಾರದ ಪಾಟಿಕಲ್ಲುಗಳನ್ನು ಒಂದರ ಮೇಲೊಂದರಂತೆ ಏಳೆಂಟು ಕಲ್ಲುಗಳನ್ನು ಜೋಡಿಸಿ ಇಡುತ್ತಾರೆ. ಆ ಕಲ್ಲಿನ ಎಡ ಬಲಕ್ಕೆ ೮-೧೦ ಅಡಿಗಳಷ್ಟು ದೂರ ನಿಂತ ಹುಡುಗರು ಚಂಡಿನಿಂದ ಕಲ್ಲಿಗೆ ಹೊಡೆದು ಜೋಡಿಸಿಟ್ಟ ಕಲ್ಲುಗಳನ್ನು ಕೆಡುವಬೇಕು ಕೆಡವಿದವರು ಪುಟಿದು ಹೋದ ಚಂಡನ್ನು ತರುವುದರೊಳಗೆ ಎದುರಾಳಿಗಳು ಬಿದ್ದ ಕಲ್ಲನ್ನು ಜೋಡಿಸಬೇಕು. ಇಲ್ಲದಿದ್ದರೆ ಚಂಡಿನಿಂದ ಎದುರಾಳಿಗಳ ಬೆನ್ನಿಗೆ ಚಂಡನ್ನು ಎಸೆಯುತ್ತಾರೆ ಮತ್ತೆ ಚಂಡಿನಿಂದ ತಪ್ಪಿಸಿಕೊಂಡು ಕಲ್ಲುಗಳನ್ನು ಜೋಡಿಸಿ ಲಗೋರಿ ಎಂದು ಹೇಳುತ್ತಾರೆ. ಒಂದು ಗುಂಪಿನ ನಂತರ ಮತ್ತೊಂದು ಗುಂಪು ಇದೇ ರೀತಿ ಆಡಬೇಕಾಗುತ್ತದೆ.

ಕುಂಟಾಬಿಲ್ಲೆ (ಸೀತೆ ಮನಿ) ಆಟ

ಇದು ಹೆಣ್ಣು ಮಕ್ಕಳ ಆಟಗಳಲ್ಲೊಂದು. ಚೌಕಾಕಾರದ ಅಥವಾ ವೃತ್ತಾಕಾರದ ೮-೧೦ ಮನೆಗಳನ್ನು ನೆಲದಲ್ಲಿ ಬರೆದು ಒಬ್ಬರ ನಂತರ ಒಬ್ಬರಂತೆ ಇಬ್ಬರು ಆಡುತ್ತಾರೆ. ಕೈಯಲ್ಲಿ ಬೋಕಿ (ಒಡೆದ ಗಡಿಗೆ ಚೂರು) ಅಥವಾ ಅಗಲವಾದ ಕಲ್ಲನ್ನು ಮನೆಯೊಳಗೆ ಹಾಕುತ್ತಾ, ಆ ಮನೆಯನ್ನು ದಾಟಿ ಒಂಟಿಗಾಲಿನಿಂದ ಮುಂದಿನ ಎಲ್ಲ ಮನೆಗಳಿಗೆ ಗೆರೆ ಕೊರೆದು 'ಪಟ್ಟ' ಎಂದು ಹೇಳುತ್ತಾರೆ. ಬೋಕಿ ಮನೆಯ ಹೊರಗೆ ಬಿದ್ದರೆ ನಂತರದವರು ಆಡಬೇಕಾಗುತ್ತದೆ. ಕೆಲವರು ಎಲ್ಲ ಮನೆಗಳಿಗೆ ಸರಿಯಾಗಿ ಕಾಯಿ ಹಾಕಿ ಒಂಟಿಗಾಲಿನಲ್ಲಿ ಹೋಗಿ ಬಂದರೆ ಮನೆಯ ತುದಿಯಲ್ಲಿ ಬೆನ್ನು ಮಾಡಿ ನಿಂತು ಹಿಂದಿನಿಂದ ಬೋಕಿ ಎಸೆಯುತ್ತಾರೆ. ಆ ಬೋಕಿ ಯಾವ ಮನೆಯಲ್ಲಿ ಬೀಳುತ್ತದೆಯೇ ಆ ಮನೆ ಪಟ್ಟ ಆದಂತೆ. ಎದುರಾಳಿ ಈ ಮನೆಯನ್ನು ತುಳಿಯುವ ಹಾಗಿಲ್ಲ, ಒಟ್ಟಿನಲ್ಲಿ ಹೆಚ್ಚು ಮನೆಗಳನ್ನು ಪಟ್ಟ ಮಾಡಿಕೊಂಡವರೆ ಗೆದ್ದಂತೆ.

ಕಬಡ್ಡಿ

ಏಳೇಳು ಜನರಿಂದ ಕೂಡಿದ ಗಂಡು ಮಕ್ಕಳ ಗುಂಪು ಆಟ ಇದಾಗಿದೆ. ಇತ್ತೀಚೆಗೆ ಹೆಣ್ಣು ಮಕ್ಕಳೂ (ಶಾಲಾ ಕಾಲೇಜುಗಳಲ್ಲಿ) ಈ ಆಟವನ್ನು ಆಡುತ್ತಾರೆ. ಮೈದಾನದಲ್ಲಿ ಎರಡೂ ತಂಡಗಳಿಗೆ ಸರಿಸಮನಾಗಿ ಗೆರೆ ಕೊರೆಯುತ್ತಾ. ಅದರಲ್ಲಿ ಮಧ್ಯಗೆರೆ, ಲಾಬಾ ಲೈನ್, ಔಟ್‌ಲೈನ್ ಎಂದು ಗೆರೆಗಳಿರುತ್ತವೆ. ಎರಡೂ ತಂಡಗಳಲ್ಲಿ ಕ್ಯಾಪ್ಟನ್, ಕ್ಯಾಚರ್, ರೈಡರ್ ಎಂದು ವಿಶೇಷವಾಗಿ ಇರುತ್ತಾರೆ. ಮೊದಲಿಗೆ ರೈಡ್

ಮಾಡುವವನು ಮಧ್ಯದ ಗೆರೆ ಮುಟ್ಟಿ ನಮಸ್ಕರಿಸಿ ಕಬಡ್ಡಿ ಕಬಡ್ಡಿ ಎಂದು ಉಸಿರು ಬಿಡದಂತೆ ಹೇಳುತ್ತಾ ಎದುರಾಳಿಗಳನ್ನು ಮುಟ್ಟಲು ಪ್ರಯತ್ನಿಸುತ್ತಾನೆ. ಮುಟ್ಟಿದರೆ ಎಷ್ಟು ಜನರನ್ನು ಮುಟ್ಟಿರುತ್ತಾನೋ ಅಷ್ಟೂ ಎದುರಾಳಿಗಳು ಔಟಾಗಿ ಹೊರಗೆ ನಿಲ್ಲಬೇಕು. ರೈಡರ ವಾಪಸ್ ಹೋಗುವದರೊಳಗೆ ಮಧ್ಯದ ಗೆರೆ ಮುಟ್ಟಲು ಆಸ್ಪದ ಕೊಡದಂತೆ ಹಿಡಿದರೆ ರೈಡರ್ (ಓಸುವವನು) ಔಟಾಗುತ್ತಾನೆ. ಯಾವ ಗುಂಪು ಹೆಚ್ಚಾಗಿ ಔಟಾಗುತ್ತಾರೋ ಅವರು ಸೋತಂತೆ.

ಗುಂಡು ಎತ್ತುವ ಆಟ

ಶ್ರಮಿಕ ವರ್ಗದವರು ಕೃಷಿ ಚಟುವಟಿಕೆ ಇಲ್ಲದೇ ಇದ್ದ ಸಂದರ್ಭದಲ್ಲಿ ಅಥವಾ ಹಬ್ಬ ಹರಿದಿನಗಳಲ್ಲಿ ಈ ಆಟವನ್ನು ಸಂಜೆವೇಳೆ ಆಡುತ್ತಾರೆ. ೧೦೦-೧೨೫ ಕೆ.ಜಿ ತೂಕದ ಚಂಡಿನಾಕಾರದ ಗುಂಡುಗಳು ಮತ್ತು ಕೈ ಹಿಡಿಕೆಯಿರುವ ವೃತ್ತಾಕಾರದ ಗುಂಡುಗಳನ್ನು ಇಲ್ಲಿ ಎತ್ತುತ್ತಾರೆ. ಇತ್ತೀಚೆಗೆ ಈ ಆಟಗಳು ಕಡಿಮೆಯಾಗತೊಡಗಿವೆ.

ಹುಲಿಮನಿ ಆಟ

ಸಾಮಾನ್ಯವಾಗಿ ವಿರಾಮದ ವೇಳೆ ಗಂಡಸರು ಆಡುವ ಆಟ ಇದಾಗಿದೆ. ಈ ಆಟಕ್ಕೆ ಇಬ್ಬರು ಬೇಕು. ತ್ರಿಕೋನಾಕಾರದ, ಅದರೊಳಗೆ ಮೂರು ಗೆರೆಗಳುಳ್ಳ ಚೌಕಾಕಾರ ಮನೆಗಳನ್ನು ಬರೆದು, ಮೂರು ಕಾಯಿಗಳನ್ನು ಹೊಂದಿದವರು ಹುಲಿಯಾದರೆ ೧೪ ಕಾಯಿಗಳಿರುವವರು ಹಸುವಾಗುತ್ತಾರೆ. ಹುಲಿಯು ತಪ್ಪಿಸಿಕೊಳ್ಳದಂತೆ ಹಸುಗಳು ಬಲೆ ಬೀಸುವುದೇ ಈ ಆಟದ ಪದ್ಧತಿ. ಈ ಆಟಕ್ಕೆ ತುಂಬಾ ಜಾಣತನ, ಮುಂಜಾಗ್ರತೆ ಅವಶ್ಯ. ಸ್ವಲ್ಪ ಅಜಾಗರೂಕತೆಯಿಂದ ಇದ್ದರೆ ಸಾಕು ಹುಲಿ ಬೇಟೆಯಾಡಿಬಿಡುತ್ತದೆ.

ಕಣ್ಣಾಮುಚ್ಚಾಲೆ ಆಟ

ಒಬ್ಬ ಕುಳಿತುಕೊಂಡು ಇನ್ನೊಬ್ಬನ ಕಣ್ಣನ್ನು ಎಡಗೈಯಿಂದ ಮುಚ್ಚಿ ಆ ಹುಡುಗನ ಬಲಗೈಯನ್ನು ಹಿಡಿದು ಮುಂದೆ ನಿಂತ ಆಟಗಾರರನ್ನು ತೋರಿಸುತ್ತಾ "ಅವರ್ ಬಿಟ್ಟು ಇವರ್ ಬಿಟ್ ಇವರ್ಯಾರು" ಎಂದು ಕೇಳುತ್ತಾನೆ. ಕಣ್ಣು ಮುಚ್ಚಿಕೊಂಡ ಹುಡುಗನಿಗೆ ಮುಂದೆ ನಿಂತಿರುವ ಆಟಗಾರರನ್ನು ಸರಿಯಾಗಿ ಗುರುತಿಸಲು ಆಗುವುದಿಲ್ಲ. ಕೊನೆಗೆ ಎಲ್ಲ ಆಟಗಾರರು ಅಡಗಿಕೊಳ್ಳುತ್ತಾರೆ. ಆಗ ಕಣ್ಣು ಮುಚ್ಚಿದವರು.

"ಕಣ್ಣಾ ಮುಚ್ಚೆ ಕಾಡೇಗೂಡೇ
ಮುದ್ದಿನ ಗುಬ್ಬಿ ಹಾರಿ ಹೋಯ್ತು
ನಮ್ಮಯ ಹಕ್ಕಿ ನಿಮ್ಮಯ ಹಕ್ಕಿ
ಬಿಟ್ಟೆ ಬಿಟ್ಟೆ ಕಟ್ಟೆಮನೆ ಹಾಳಾಯ್ತು" -ಎಂದು

ಹಾಡುತ್ತಾ ಕಟ್ಟಿದ ಕಣ್ಣನ್ನು ಬಿಚ್ಚುವನು. ಆಗ ಅವನು ಅಡಗಿಕೊಂಡವರನ್ನು ಹಿಡಿಯಲು ಪ್ರಯತ್ನಿಸುವನು. ಮೊದಲು ಮುಟ್ಟಿಸಿಕೊಂಡವರು ಮುಂದಿನ ಆಟದಲ್ಲಿ ಕಣ್ಣು ಕಟ್ಟಿಸಿಕೊಳ್ಳಬೇಕು.

ಗಣಪತಿ ಬಪ್ಪಾ ಮೋರಯಾ ಆಟ

ಈ ಆಟಕ್ಕೆ ಮೂವರು ಬೇಕು. ಇವರಲ್ಲಿ ಇಬ್ಬರು 'ಅವ್ವ ಅಪ್ಪಚ್ಚಿ' ಎಂದು ಬಾಯಿಗೆ ಬಡಕೊಂಡು ಹೇಳುತ್ತಾ ಅವರ ಕೈ ಇವರು, ಇವರ ಕೈಯನ್ನು ಅವರು ಚೌಕಾಕಾರದಲ್ಲಿ ಹಿಡಿಕೊಳ್ಳಬೇಕು. ಉಳಿದ ಇನ್ನೊಬ್ಬ ಚೌಕಾಕಾರದ ಖಾನೆಯೊಳಗೆ ಎರಡು ಕಾಲುಗಳನ್ನಿಟ್ಟು ಕುಳಿತುಕೊಳ್ಳುತ್ತಾನೆ. ಆಗ ಅವನನ್ನು ಎತ್ತಿಕೊಂಡು 'ಗಣಪತಿ ಬಪ್ಪ ಮೋರಯ' ಎಂದು ಆಚೆ ಈಚೆ ಓಡಾಡುತ್ತಾರೆ. ಈ ಆಟಕ್ಕೆ ಚಿಕ್ಕ ಹುಡುಗನನ್ನೇ (ಗಣಪತಿ) ಆಯ್ಕೆ ಮಾಡಿಕೊಳ್ಳುತ್ತಾರೆ. ಮೇಲೆ ಎತ್ತಲು ಅನುಕೂಲವಾಗಬೇಕೆಂಬುದು ಇದರ ಉದ್ದೇಶವಾಗಿರುತ್ತದೆ.

ಇಲ್ಲಿಯವರೆಗೆ ವಿವರಿಸಲಾದ ಆಟಗಳ ಜೊತೆಗೆ, ಕಳ್ಳಪೋಲಿಸ್ ಆಟ, ಸ್ಟ್ಯಾಚೂ ಆಟ, ಮರಕೋತಿ ಆಟ, ಹಗ್ಗದಾಟ, ಬುಗುರಿ, ಗೋಲಿ, ಕಟ್ಟೆ ಪೆಟ್ಟಿಗೆಯಾಟ, ಗಜಗದ ಆಟ, ಹುಸುಕಿನ ಚೀಲ, ಹುಳ್ಳಿ ಚೀಲ ಹೊರುವುದು, ಮುಂಗೈ ಆಟ, ಬಂಡಿಗಾಲಿ ಎತ್ತುವುದು, ನಿಂಬೆ ಹಣ್ಣು ಎಸೆಯುವುದು, ಬರಿಗೈಲಿ ತೆಂಗಿನ ಕಾಯಿ ಒಡೆಯುವುದು, ಬಣ್ಣ ಎರಚುವ ಆಟ, ಮುಂತಾದವುಗಳು ಕನಕಗಿರಿಯ ಪರಿಸರದಲ್ಲಿರುವ ಜನಪದ ಆಟಗಳಾಗಿವೆ.

ಇವುಗಳಲ್ಲದೆ, ಶಾಲಾ ಕಾಲೇಜುಗಳಲ್ಲಿ ಅನೇಕ ಆಟಗಳು ಪ್ರಚಲಿತದಲ್ಲಿವೆ. ಅವುಗಳೆಂದರೆ ವೈಯಕ್ತಿಕ ಓಟ, ಗುಂಪು ಓಟ, ರಿಲೇ, ಜಿಗಿದು ಓಟ, ಎತ್ತರ ಜಿಗಿತ, ಉದ್ದ ಜಿಗಿತ, ಗುಂಡು ಎಸೆತ, ಭರ್ಚಿ ಎಸೆತ, ಕೊಕೊ, ವಾಲಿಬಾಲ್, ಥ್ರೋ ಬಾಲ್, ಟೆನ್ನಿಕಾಯ್ಟ್, ಟೆನ್ನಿಸ್ ಬಾಲ್, ಚೆಸ್, ಕೇರಂ, ಕ್ರಿಕೆಟ್ ಮುಂತಾದವುಗಳು.

ಜನಪದ ಆಟಗಳಲ್ಲಿ ಹೆಚ್ಚಾಗಿ ಹುಟ್ಟು ಸಾವಿನ ಪರಿಕಲ್ಪನೆಯನ್ನು ಕಾಣುತ್ತೇವೆ. ಅಂದರೆ ಹುಟ್ಟು ಸಂತೋಷದ ಸಂಕೇತವಾದರೆ, ಸಾವು ಭಯಾನಕವಾಗಿರುತ್ತದೆ. ಅಂದರೆ ಯಾವುದೇ ಒಂದು ಆಟವಾಡುವಾಗ ಎದುರಾಳಿ ಈಗ ನಾನು ನಿನ್ನ ಕಾಯಿ ಕಡಿತೀನಿ, ಸಾಯಿಸ್ತೀನಿ ಎಂದರೆ ಆ ಸಾವಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದನ್ನು ಕಾಣಬಹುದು. ಕೊನೆಗೆ ಎದುರಾಳಿಯಿಂದ ಸೋತು ತನ್ನ ಮನೆಯನ್ನು ಸೇರಿ ಮತ್ತೆ ಗೆಲ್ಲಲು ಪ್ರಯತ್ನಿಸುತ್ತಾನೆ. ಕೊನೆಗೂ ಕಾಯಿ ಎದುರಾಳಿಯಿಂದ ತಪ್ಪಿಸಿಕೊಂಡು ಹಣ್ಣಿನ ಮನೆ ಸೇರಿದರೆ ಆ ಕಾಯಿಗಳಿಗೆ ಮುಕ್ತಿ ಸಿಕ್ಕಂತೆ, ಅಂದರೆ ಈ ಆಟಗಳಲ್ಲಿರುವ ಮರ್ಮ ಎಂದರೆ ಜನಪದರು ತಮ್ಮ ಬದುಕಿನ ಹೋರಾಟದ ಹುಟ್ಟು, ಸಾವು, ಮುಕ್ತಿ ಇವುಗಳನ್ನು ಈ ಆಟದಲ್ಲಿ ಚಿತ್ರಿಸಿದ್ದಾರೆ.

ಇಲ್ಲಿ ಕಂಡು ಬರುವ ಎಲ್ಲ ಆಟಗಳಿಗೂ ಒಂದು ಸೈದ್ಧಾಂತಿಕ ಚೌಕಟ್ಟು ಇದೆ ಎನ್ನಬಹುದು. ಏಕೆಂದರೆ ತಾತ್ವಿಕ ವಿಚಾರಧಾರೆಗಳಿಂದ ತುಂಬಿದಂತಹ ನಮ್ಮ ಜನಪದರ ಬದುಕು ಒಂದು ನಾಟಕರಂಗ, ನಾವಿಲ್ಲಿ ಪಾತ್ರಧಾರಿಗಳು, ಮೇಲೆ ಆಟ ಆಡಿಸಿದಂತೆ ಆಡುತ್ತೇವೆ. ಎಂದು ಹೇಳುತ್ತಾರೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಸಹಿತ ಜನಪದ ಆಟಗಳನ್ನು ಕಾಣಬಹುದು. ಅವುಗಳಲ್ಲಿ ಅಡಗಿರುವ ಹುಟ್ಟು-ಸಾವು ಎಲ್ಲ ಕರ್ಮಸಿದ್ಧಾಂತದ ಹಿನ್ನೆಲೆಯಲ್ಲಿ ಹುದುಗಿರುವಂತವು. ಅಂದರೆ ಕೆಲವೊಂದು ಆಟಗಳಲ್ಲಿ ಆಟಗಾರ

ತಾನೇ ಪಾತ್ರಧಾರಿಯಾಗಿ ಆಡುವುದು ಒಂದು ಬಗೆಯಾದರೆ, ಇನ್ನು ಕೆಲವು ಆಟಗಳಲ್ಲಿ ತಾನು ಕಾಯಿಗಳನ್ನು ಪಾತ್ರಧಾರಿಯನ್ನಾಗಿ ಮಾಡಿಕೊಂಡು ಆಟ ಆಡಿಸುತ್ತಾ ತಾನು ದೇವರಾಗುತ್ತಾನೆ ಎನ್ನುವ ವಿಚಾರ ತಲೆದೋರುತ್ತದೆ.

ಜೀವನಾವರ್ತನ ಕ್ರಿಯೆಗಳಲ್ಲೊಂದಾದ ಮದುವೆಯಲ್ಲಿಯೂ ಸಹ ಜನಪದ ಆಟಗಳು ಪ್ರಮುಖ ಪಾತ್ರವಹಿಸುತ್ತವೆ. ಬಚ್ಚಿಟ್ಟ ವಧುವನ್ನು ಹುಡುಕಿ ತರುವುದು, ವಧು-ವರರ ಮಧ್ಯದಲ್ಲಿ ನಡೆಯುವ ಅಡಿಕೆಯಾಟ, ಓಕುಳಿಯಾಟ, ಹೂವಿನ ಚಂಡಿನಾಟ, ತಾಂಬೂಲದಾಟ, ಹಾಲಿನಲ್ಲಿ ಹಾಕಿದ ಬಂಗಾರ, ಮೂಗುತಿಯನ್ನು ಹುಡುಕುವ ಆಟ, ಇತ್ತೀಚಿನ ದಿನಗಳಲ್ಲಿ ವಧುವರರು ಪರಸ್ಪರ ತಲೆಯ ಮೇಲೆ ಅಕ್ಷತೆ, ಮಿಂಚು, ಬಣ್ಣಬಣ್ಣದ ಥರ್ಮಾಕೋಲ್ ಗುಂಡುಗಳ ರಾಶಿಯನ್ನು ಸುರಿಯುವ ಆಟ ಹೀಗೆ ಅನೇಕ ಆಟಗಳು ಕೇವಲ ಆಟಗಳಾಗದೆ ವಿನೋದದ ಮೂಲಕ ವಧು-ವರರನ್ನು ಪರಸ್ಪರ ಸಮೀಪಕ್ಕೆ ತರುವ ಉದ್ದೇಶವಾಗಿದೆ. ಹಿಂದೆ ವಧು-ವರರು ಮದುವೆಯ ದಿನದಂದೆ ಪರಸ್ಪರ ಒಬ್ಬರನ್ನೊಬ್ಬರು ನೋಡಬೇಕಾದಂತಹ ಪರಿಸ್ಥಿತಿ ಇತ್ತು ಇದರಿಂದ ಪರಸ್ಪರರಲ್ಲಿ ಭಯ, ಅಂಜಿಕೆ, ಆತಂಕದಂತಹ ವಾತಾವರಣವಿರುತ್ತಿತ್ತು. ಇಂತಹ ವಾತಾವರಣದಿಂದ ಮುಕ್ತಿಗೊಳಿಸುವ ಉದ್ದೇಶದಿಂದ ಮದುವೆಗಳಲ್ಲಿ ಆಟಗಳು ಅನಿವಾರ್ಯವಾದವು.

ದೈಹಿಕ ಮತ್ತು ಮಾನಸಿಕವಾಗಿ ಸದೃಢಗೊಳಿಸುವ ಜನಪದ ಆಟಗಳು ಮಕ್ಕಳಲ್ಲಿರುವ ಆಲಸಿತನವನ್ನು ದೂರಮಾಡಿ ಕ್ರಿಯಾಶೀಲರಾಗುವಂತೆ ಉತ್ತೇಜನ ನೀಡುತ್ತವೆ. ಆಟಗಳಿಂದ ದೊರಕುವ ವ್ಯಾಯಾಮಗಳಿಂದ, ಮಕ್ಕಳ ಸ್ನಾಯುಬಲ ವೃದ್ಧಿಸುತ್ತದೆ. ಇದರಿಂದ ಮನೋಲ್ಲಾಸ ದೊರೆತು ಬೌದ್ಧಿಕ ವಿಕಾಸವೂ ಸಿದ್ಧಿಸುತ್ತದೆ. ಆಧುನಿಕತೆಯ ಪ್ರಭಾವದಿಂದಾಗಿ ವಿಡಿಯೋ ಗೇಮ್, ಕೇರಂ, ದೂರದರ್ಶನ, ಕಂಪ್ಯೂಟರ್, ಪ್ಲಾಸ್ಟಿಕ್, ಆಟಿಕೆಗಳಂತ ಮುಂತಾದ ಲಾಭವಿಲ್ಲದ ಆಟಗಳತ್ತ ಮಕ್ಕಳು ಆಕರ್ಷಿತರಾಗುವುದನ್ನು ತಡೆಗಟ್ಟಬೇಕಿದೆ. ಮಕ್ಕಳನ್ನು ನಾಳಿನ ನಾಗರೀಕರನ್ನಾಗಿ ಅಣಿಗೊಳಿಸಲು ಶಾಸ್ತ್ರೀಯ ಆಟ, ತರಬೇತಿಗಳತ್ತ ಗಮನಹರಿಸುವಂತಹ ಪರಿಣಾಮಕಾರಿ ಪ್ರಯತ್ನ ಮಾಡಬೇಕಿದೆ.

೪.೧೩ ಜನಪದ ಕಲೆ

ಪ್ರತಿಯೊಬ್ಬರಲ್ಲೂ ಕಲೆ ಎನ್ನುವುದು ಮನೆ ಮಾಡಿಕೊಂಡಿರುತ್ತದೆ. ಕಲೆಯನ್ನು ಸರಿಯಾಗಿ ಬಳಸಿಕೊಂಡು ಹೊರಗಿನ ಪ್ರಪಂಚದ ಮುಂದೆ ಇಟ್ಟಾಗ ಕಲಾಭಿವ್ಯಕ್ತಿ ಎಂತದು ಎಂದು ಗುರುತಿಸಲು ಸಾಧ್ಯವಾಗುತ್ತದೆ. ಕಲಾಭಿರುಚಿ ಮಾನವನ ಹುಟ್ಟುಗುಣ ಹೀಗಾಗಿ ಅವನು ಸಾಹಿತ್ಯದಂತೆ ಕಲೆಗಳನ್ನು ಬಳಸಿಕೊಂಡಿದ್ದಾನೆ. ಹಲವಾರು ಜನ ವಿದ್ವಾಂಸರು ಕಲೆಯ ಕುರಿತಾಗಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ಮಾನವನ ಕಲ್ಯಾಣಕ್ಕೆ ಹೇತುವಾದುದೆ ಕಲೆ" ಎಂದು ಟಾಲ್‌ಸ್ಟಾಯ್, "ಮಾನವನ ಚಿತ್ರರಂಗ ದರ್ಶನವೇ ಕಲೆ" ಎಂದು ಹೆಬ್ಬೆಲ್, "ಆತ್ಮದರ್ಶನ ಮಾಡಿಸುವುದೇ ಕಲೆ" ಎಂದು ಅರವಿಂದರು, "ಜೀವನ ದರ್ಶನ ಮಾಡಿಸುವುದೇ ಕಲೆ" ಎಂದು ಸಿ.ಇ.ಜೋಡ್ ಇನ್ನೂ ಕೆಲವರು "ಕಲೆ ಎಂದರೆ

ಸೌಂದರ್ಯ ದರ್ಶನ" ಎಂದರು. ಹೀಗೆ ಹೇಳುವ ವ್ಯಾಖ್ಯಾನಗಳು ಜನಪದ ಕಲೆಗೆ ಅನ್ವಯಿಸಿದವುಗಳಾಗಿವೆ. ಜನಪದ ಕಲೆಗಳು ಇಂದು ನಿನ್ನೆಯದಲ್ಲ. ತಲತಲಾಂತರಗಳಿಂದ ಒಕ್ಕಲು ಮಕ್ಕಳ, ಕೂಲಿಯಾಳುಗಳ ಅಂಗಳದಲ್ಲಿ ಹುಟ್ಟಿಕೊಂಡು ಬಂದವುಗಳಾಗಿವೆ.

ಹಾಗೆಯೇ ಕನಕಗಿರಿಯಲ್ಲಿಯೂ ಹಲವಾರು ಕಲೆಗಳನ್ನು ಗುರುತಿಸಬಹುದು. ಈ ಕಲೆಯ ಮುಖ್ಯದ್ಯೇಯ ಆನಂದ ನೀಡುವುದಾಗಿದೆ. ಈ ಆನಂದದ ಜೊತೆಗೆ ಹೃದಯ ಸಂಸ್ಕಾರವೂ ನಡೆಯುತ್ತದೆ. ಕಲೆ, ಕಲೆಗಾಗಿ ಎಂಬುದನ್ನು ಜನಪದ ಕಲಾವಿದರು ನಿದರ್ಶಿಸಿದರು. ಹಲವಾರು ಕಲೆಗಳು ಬರುಬರುತ್ತಾ ವೃತ್ತಿ ಕಲೆಗಳಾಗಿ ಪರಿವರ್ತಿತವಾಗಿರುವುದನ್ನು ಕನಕಗಿರಿಯಲ್ಲಿ ಕಾಣಬಹುದು. ಇಲ್ಲಿ ಕೆಲವು ಕಲೆಗಳು ಉಪಜೀವನದ ಮಾರ್ಗವನ್ನು ಅನುಸರಿಸಿದರೆ ಇನ್ನೂ ಕೆಲವು ಶುದ್ಧ ಮನರಂಜನಾತ್ಮಕವಾದವುಗಳಾಗಿವೆ. ಇಲ್ಲಿ ಕಂಡುಬರುವ ಅನೇಕ ಕಲೆಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಅಭ್ಯಾಸಿಸಲಾಗಿದೆ.

ಚಿತ್ರಗಾರರು

ಕನಕಗಿರಿಯಲ್ಲಿ ಅನೇಕ ಚಿತ್ರಗಾರರ ಕುಟುಂಬಗಳು ಕಂಡು ಬರುತ್ತವೆ. ಇವರ ಚಿತ್ರಗಾರಿಕೆ ವೃತ್ತಿ ಪಾಳೇಗಾರರ ಕಾಲದಿಂದಲೂ ವಂಶಪಾರಂಪರ್ಯವಾಗಿ ಬಂದುದಾಗಿದೆ. ಅಷ್ಟೆ ಅಲ್ಲ ಈ ವೃತ್ತಿ ಇವರ ಕುಲಕಸುಬೂ ಸಹ ಆಗಿದೆ. ಜೀವನೋಪಾಯಕ್ಕೆ ಇದನ್ನೇ ಅವಲಂಬಿಸಿದ್ದಾರೆ. ಕನಕಾಚಲಪತಿ ದೇವಸ್ಥಾನದ ಮಧ್ಯರಂಗದ ಗಾರೆ ಶಿಲ್ಪಗಳಿಗೆ ಸೊಗಸಾಗಿ ಚಿತ್ರಬಿಡಿಸಿದವರಲ್ಲಿ ಚಿತ್ರಗಾರರು ಪ್ರಮುಖರಾಗಿದ್ದಾರೆ. ನರಸಿಂಹ ಚಿತ್ರಗಾರ ಎಂಬುವರು ಕನಕಗಿರಿಯ ಚಿತ್ರಗಾರ ಕುಟುಂಬಗಳಲ್ಲೇ ಗಮನಾರ್ಹ ಕಲಾವಿದರಾಗಿ ಕಂಡುಬರುತ್ತಾರೆ. ಜಾತ್ರೆ, ಉತ್ಸವಗಳಿಗೆ ಅಲಂಕರಿಸಲು ಬೇಕಾಗುವ ಗೊಂಬೆಗಳನ್ನು ಅನೇಕ ವರ್ಷಗಳಿಂದ ಇವರು ತಯಾರಿಸುತ್ತಾ ಬಂದಿದ್ದಾರೆ. ಗ್ರಾಮೀಣ ದೇವತೆಗಳನ್ನು ವಿಗ್ರಹ, ಛತ್ರ, ಛಾಮರ, ಕುದುರೆ, ಗರುಡ, ಹನುಮ, ಹಂಸ, ರಾಕ್ಷಸೀ ಮುಖ, ತೊಟ್ಟಿಲು, ಪಲ್ಲಕ್ಕಿ, ಹುಲಿಮುಖ, ಚೌರಿಗೊಂಬೆ ಕಟ್ಟಿಗೆಯ ಮಂಟಪ, ಇನ್ನೂ ಮುಂತಾದ ಗೊಂಬೆಗಳನ್ನು ತುಂಬಾ ಸುಂದರವಾಗಿ ತಯಾರಿಸುತ್ತಾರೆ. ಗೌರಿ ಹಬ್ಬಕ್ಕೆ ಬೇಕಾಗುವ ಸಕ್ಕರೆಯ ಅಚ್ಚುಗಳನ್ನು ನೈಜವಾಗಿ ಆಕರ್ಷಕವಾಗಿ ತಯಾರಿಸುತ್ತಾರೆ. ಸಣ್ಣ ಮಕ್ಕಳು ಆಡುವ ಮೂರು ಗಾಲಿಯ ಬಂಡಿ, ಬೀಸುವಕಲ್ಲು (ಆಟಿಕೆ), ಸಣ್ಣ ಗೊಂಬೆಗಳನ್ನು ಮಾಡಿ ಜಾತ್ರೆಗಳಲ್ಲಿ ಮಾರಾಟ ಮಾಡುತ್ತಾರೆ. ಇವರ ಕಲೆಗೆ ರಾಜ್ಯದ ನಾನಾ ಕಡೆಗೆ ಒಳ್ಳೆಯ ಬೇಡಿಕೆ ಇದೆ. ಇವರ ಕಲಾ ಚಟುವಟಿಕೆಗಳಿಗೆ ಇವರ ಪತ್ನಿ ಸಂಪತ್ ಲಕ್ಷ್ಮೀ, ಮಕ್ಕಳಾದ ಅಂಜಲಿ, ಕವಿತಾ ಕನಕರಾಯ ಇವರುಗಳೂ ಸಹ ಕೈ ಜೋಡಿಸುತ್ತಾರೆ. ಇವರ ಕಲೆಗೆ ಪ್ರತಿಫಲವಾಗಿ ಹಿಂದಿನ ನಾಯಕರು ಭೂಮಿಯನ್ನು ಉಂಬಳಿಯಾಗಿ ನೀಡಿರುವುದನ್ನು ಇವರು ಇಂದಿಗೂ ನೆನೆಯುತ್ತಾರೆ.

ಗೊಂಬೆ ತಯಾರಿಸುವ ವಿಧಾನ ತುಂಬಾ ವಿಶಿಷ್ಟವಾದುದಾಗಿದೆ. ರೂಪಾಯಿಗೆ ಒಂದು ಸೇರು ಸಿಗುವ ಹುಣಸೇ ಬೀಜಗಳನ್ನು ಕಲೆ ಹಾಕಿ, ಒಡೆದು ನೀರಿನಲ್ಲಿ ನೆನೆಹಾಕಿ ರುಬ್ಬುವುದು ಮತ್ತು ಕುದಿಸಿ ಹದ ಮಾಡುವುದು. ಕಟ್ಟಿಗೆ ಪುಡಿ ಮತ್ತು ಗೋಣಿತಟ್ಟನ್ನು ಪುಡಿಮಾಡಿ ಎಲ್ಲವನ್ನೂ ಕಲಸಿ ಗೊಂಬೆ ಮಾಡುತ್ತಾರೆ. ತಯಾರಾದ ಗೊಂಬೆಗೆ ಕಾಟನ್ ಬಟ್ಟೆ ಅಂಟಿಸಿ ನಂತರ ವಿಧ ವಿಧ ಬಣ್ಣಗಳನ್ನು ಹಚ್ಚುತ್ತಾರೆ.

ರಮೇಶ್ ಚಿತ್ರಗಾರ ಎಂಬ ಮತ್ತೊಬ್ಬ ಕಲಾವಿದರೂ ಸಹ ಅದ್ಭುತ ಕೆತ್ತನೆಗಳನ್ನು ಮಾಡಿ ಕಲಾ ಪ್ರತಿಭೆ ಮೆರೆದಿದ್ದಾನೆ. ಇವರ ತಾತನವರಾದ ಬಸವಂತಪ್ಪ ಚಿತ್ರಗಾರರವರು ಕನಕರಾಯನ ದೇವಸ್ಥಾನದ ಮಧ್ಯರಂಗದ ಶಿಲ್ಪಗಳನ್ನು ಮಾಡಿ ಬಣ್ಣ ಕೊಟ್ಟಿರುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬಾಗಿಲುಗಳಲ್ಲಿ ಹೂ, ಬಳ್ಳಿ, ದೇವರು, ಶಿಲಾಬಾಲಿಕೆಯರು ಮುಂತಾದ ಉಬ್ಬುಶಿಲ್ಪವನ್ನು ಕೆತ್ತುವುದರಲ್ಲಿ ರಮೇಶ್‌ರವರು ಸಿದ್ಧಹಸ್ತರು. ಇದೇ ರೀತಿಯಾಗಿ ಕನಕಗಿರಿಯ ಪಾಮಣ್ಣ, ಹುಲಿಗೆಮ್ಮ ಇವರು ನಾನಾ ಪ್ರಕಾರದ ಗೌರಮ್ಮ ಮೂರ್ತಿಯನ್ನು ಮಾಡುವುದರಲ್ಲಿ ಪ್ರವೀಣರು, ಚಿತ್ರಗಾರ ಮನೆತನದಲ್ಲೊಬ್ಬರಾದ ಶ್ರೀಮತಿ ಯಮನಮ್ಮನವರು ಈ ಭಾಗದ ಪ್ರಸಿದ್ಧಕಲಾಕಾರರು, ಲಕ್ಷ್ಮಿ, ಸರಸ್ವತಿ, ತೊಟ್ಟಿಲಗೌರಿ, ಸೀಗೆಗೌರಿ, ಗಜಗೌರಿ ದೊಡ್ಡಗೌರಿ (ಶಿವಪಾರ್ವತಿ) ಮುಂತಾದ ಗೊಂಬೆಗಳನ್ನು, ಹಣ್ಣಿನ ತಟ್ಟೆ, ಹೂವಿನ ತಟ್ಟೆ, ತರಕಾರಿ ತಟ್ಟೆ, ಎಲೆ-ಅಡಿಕೆ ತಟ್ಟೆ ಮುಂತಾದ ಆಕರ್ಷಕ ಕಲಾಕೃತಿಗಳು ಇವರಿಂದ ತಯಾರಾಗುತ್ತವೆ. ಕನ್ನಡ ವಿಶ್ವವಿದ್ಯಾಲಯಗಳಲ್ಲಿ, ಕರ್ನಾಟಕ, ಆಂದ್ರ ಪ್ರದೇಶಗಳಲ್ಲಿ ಈ ಮನೆತನದವರ ಕಲಾಕೃತಿಗಳು ಕಂಡುಬರುತ್ತದೆ.

ಭಜನೆ

ಕನಕಗಿರಿಯ ಜನಪದರಲ್ಲಿ ಭಜನೆಯ ಕಲೆ ಮೊದಲಿನಿಂದಲೂ ಇದೆ. ಅಮವಾಸಿ, ಹಬ್ಬ-ಹರಿದಿನಗಳಲ್ಲಿ, ಜಾತ್ರೆ, ಶ್ರಾವಣ, ಕಾರ್ತಿಕ ಮಾಸದಲ್ಲಿ, ಮಳೆ ಬಾರದ ಸಂದರ್ಭದಲ್ಲಿ, ಮಂಗಳವಾರ, ಗುರುವಾರ, ಶುಕ್ರವಾರ ದಿನಗಳಲ್ಲಿ, ಯಾರಿಗಾದರು ಹಾವು ಕಚ್ಚಿದಾಗ, ಸತ್ತಾಗ ಹೀಗೆ ನಾನಾ ಸಂದರ್ಭಗಳಲ್ಲಿ ಭಜನೆ ಮಾಡುವದು ಕಂಡುಬರುತ್ತದೆ. ಭಜನೆಯು ತಂಡದ ಹಿಮ್ಮೇಳದೊಂದಿಗೆ ಕೂಡಿರುತ್ತದೆ. ನಿಧಾನಗತಿಯಲ್ಲಿ ಆರಂಭವಾಗಿ ತ್ವರಿತಗತಿಯಲ್ಲಿ ಮುಕ್ತಾಯವಾಗುವುದು, ಭಜನೆಯ ಸಾಮಾನ್ಯ ಲಕ್ಷಣವಾಗಿದೆ. ತಾಳ, ದಂಬಡಿ, ತಬಲ, ಹಾರ್ಮೋನಿಯಂ, ಗಿಲಿಗಿಂಚಿ ಇವು ಭಜನೆಗೆ ಸಂಗೀತ ಸಾಮಗ್ರಿಗಳಾಗಿವೆ.

ಕನಕಾಚಲ ದೇವಸ್ಥಾನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಕನಕಾಚಲ ಯುವ ಭಜನಾ ಸಂಘವು ಅಸ್ತಿತ್ವದಲ್ಲಿದ್ದು ಈ ಸಂಘಕ್ಕೆ ಅಧ್ಯಕ್ಷ, ಕಾರ್ಯದರ್ಶಿ, ಸದಸ್ಯರುಗಳನ್ನು ನೇಮಿಸಲಾಗಿದೆ. ಆಯಾ ಓಣಿಗಳಲ್ಲಿ ಭಜನೆಯ ಗುಂಪುಗಳು ಕಂಡುಬರುತ್ತವೆ ಕನಕಗಿರಿಯ ಭಜನಾ ತಂಡಗಳ ಪ್ರಮುಖರೆಂದರೆ, ಗೋಪಾಲರೆಡ್ಡಿ ಮಹಲಿಮನೆ, ಗುಂಡಪ್ಪ ಚಿತ್ರಗಾರ, ಕಾಶಿಪತಿ ವಿಶ್ವಕರ್ಮ, ಶೇಖರಪ್ಪ, ಹುಲಿಯಪ್ಪ, ಕೃಷ್ಣಪ್ಪ ಮುಂತಾದವರು.

ಕೋಲಾಟ

ಕೋಲಾಟ ಇದು ಒಂದು ಪಾರಂಪರಿಕ ಕಲೆಯಾಗಿದೆ. ಪಾಳೆಯಗಾರರ ಕಾಲದಲ್ಲೂ ಕೋಲಾಟ ಜನಪ್ರಿಯ ಕಲೆಯಾಗಿತ್ತು. ಕನಕಗಿರಿಯ ವಾಸ್ತುಶಿಲ್ಪಗಳಲ್ಲಿ ಕಂಡುಬರುವ ಕೋಲಾಟದ ಕೆತ್ತನೆಯ ದೃಶ್ಯಗಳೇ ಇದಕ್ಕೆ ಸಾಕ್ಷಿ, ಈಗಲೂ ಕನಕರಾಯನ ಜಾತ್ರೆ, ಉತ್ಸವಗಳಲ್ಲಿ ಕೋಲಾಟದ ಸಮೂಹ ಕುಣಿತ ಇಡೀ

ಜಾತ್ರೆಗೆ ಮೆರುಗು ತರುವಂತಿರುತ್ತದೆ. ಮೊಹರಂ ಹಬ್ಬದಲ್ಲಿಯೂ ಸಹ ಕೋಲಾಟದ ದೃಶ್ಯ ಎಲ್ಲೆಡೆ ಕಂಡುಬರುತ್ತಿರುತ್ತದೆ. ಮನೆ ಮನೆಗೆ ತಿರುಗಿ ಕೋಲಾಟ ಪ್ರದರ್ಶಿಸಿ ಸಂಭಾವನೆ ಪಡೆಯುವುದು ಒಂದು ಪದ್ಧತಿ. ಕೋಲುಗಳಿಗೆ ಬಣ್ಣ ಹಚ್ಚಿ ಒಂದು ತುದಿಗೆ ರಿಬ್ಬನ್ ಅಥವಾ ಗೆಜ್ಜೆಕಟ್ಟಿ ಕೋಲುಗಳನ್ನು ಅಲಂಕಾರಗೊಳಿಸುತ್ತಾರೆ. ಕೋಲಾಡುವವರು ದೋತ್ರ, ಬನಿಯನ್, ನಡುವಿಗೆ ಶಲ್ಯ ಸುತ್ತಿಕೊಂಡು ತಲೆಗೆ ರಿಬ್ಬನ್ ಕಟ್ಟಿಕೊಂಡು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೋಲಾಟ ಆರಂಭಿಸುತ್ತಾರೆ. ಕಲಾವಿದರು ಕೋಲುಗಳಿಗೆ ನಮಸ್ಕಾರ ಮಾಡುವುದರೊಂದಿಗೆ ಕೋಲಾಟ ಆರಂಭವಾಗುತ್ತದೆ.

'ಶರಣು ಶರಣುಮಯ್ಯ ಗಣನಾಯಕ' ನಮ್ಮ ಕರುಣಾದಿಂದಲಿ ಕಾಯೋ ಗಣನಾಯಕ ಎಂಬ ಪ್ರಾರ್ಥನೆ ಪದ್ಯದೊಂದಿಗೆ ಆರಂಭವಾಗುತ್ತದೆ. ಹಲಗೆಯ ಗತ್ತಿಗೆ ತಕ್ಕಂತೆ ಏಕಪ್ರಕಾರವಾಗಿ ವಿವಿಧ ಭಂಗಿಗಳಲ್ಲಿ ನೋಡುಗರ ಮನಸೂರೆಗೊಳ್ಳುವಂತೆ ಹೆಜ್ಜೆ ಹಾಕುತ್ತಾರೆ. ಇದು ಒಂದು ತಂಡದ ಪ್ರದರ್ಶನ ಕಲೆಯಾಗಿರುವುದರಿಂದ ೮-೧೦-೧೨ ಜನರ ಗುಂಪು ಇರುತ್ತದೆ.

ಬೇರೆ ಬೇರೆ ಧಾರ್ಮಿಕ ಸಮಾರಂಭಗಳಲ್ಲಿ, ಶಾಲೆಗಳ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಈಗಲೂ ಕೋಲಾಟವನ್ನು ಆಡುತ್ತಾರೆ. ಶಿಕ್ಷಕರು ಇವರಿಗೆ ತರಬೇತುದಾರರಾಗಿ ಜನಪದ ಕಲೆಯ ಉಳಿವಿಗೆ ಕಾರಣೀಭೂತರಾಗಿದ್ದಾರೆ.

ಪಂಪಾಪತಿ ಚಲವಾದಿ, ಪರಸಪ್ಪ ಚಲವಾದಿ, ದುರುಗುಪ್ಪ ಹರಿಜನ, ನಾಗೇಶ ಮುಂತಾದವರು ಕನಕಗಿರಿಯಲ್ಲಿ ಕೋಲಾಟದ ಕಲೆಯನ್ನು ಜೀವಂತವಾಗಿರಿಸಿದ ಪ್ರಮುಖರು

ಬಯಲಾಟ

ಬಯಲಾಟ ಹೆಸರೇ ಸೂಚಿಸುವಂತೆ ಬಯಲಿನಲ್ಲಿ ಆಡುವಂಥದ್ದು. ಅದು ಮತಧರ್ಮಗಳಿಂದ ಪ್ರೇರಣೆಗೊಂಡ ಸಮುದಾಯಿಕ ಕಲೆ. ಧಾರ್ಮಿಕ ಶುಭಾಕಾಂಕ್ಷೆ ಮತ್ತು ಮನರಂಜನೆ ಇವೆರಡೂ ಬಯಲಾಟದ ಗುರಿಯಾಗಿವೆ. ಬಯಲಾಟವೊಂದು ಸಮ್ಮಿಶ್ರಕಲೆ, ನೃತ್ಯ, ನಾಟಕ, ಗೀತ, ಚಿತ್ರ ಈ ನಾಲ್ಕು ಪ್ರಬಲ ಶಕ್ತಿಗಳಿಂದ ಬೆಳೆದು ಬಂದ ಸಾಧನ. ಸಾಮಾನ್ಯರ, ಕಲಾಭಿಮಾನ್ಯರ ರಸಿಕತೆಗೆ ಇದು ಚಿರಂತನ ಸಾಕ್ಷಿ. ಬಯಲಾಟದಲ್ಲಿ ಪ್ರಸಂಗವೊಂದು ನೆಪ. ನೃತ್ಯ, ಗಾನ, ವಾದ್ಯ, ವೇಷಭೂಷಣಗಳೇ ಪ್ರಧಾನ. ಈ ಪರಿಕರಗಳ ಮೂಲಕವೇ ಅರ್ಥವಾಗಬೇಕು.

ಕನಕಗಿರಿಯಲ್ಲಿ ಬಯಲಾಟದ ಕಲಾವಿದರು ಓಣಿ ಓಣಿಯಲ್ಲಿ ಸಿಗುತ್ತಾರೆ. ಇಲ್ಲಿ ಬಯಲಾಟಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಕನಕಗಿರಿಯವರು ಕೊಪ್ಪಳ ಜಿಲ್ಲಾ ಮಟ್ಟದ ಬಯಲಾಟದ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಸ್ಪರ್ಧೆಗಳಲ್ಲಿ ಕನಕಗಿರಿಯ ಬಯಲಾಟದ ಕಲಾವಿದರು ವಿಶೇಷ ಗಮನಸೆಳೆದು ಬಹು ಜನರಿಂದ ಪ್ರಶಂಶಿಸಲ್ಪಟ್ಟಿದ್ದಾರೆ. ಕನಕಗಿರಿಯಲ್ಲಿಬಯಲಾಟದ ಕಲಾವಿದರು ತಂಡಗಳನ್ನು ಕಟ್ಟಿಕೊಂಡಿದ್ದಾರೆ. ಅವು ಜುಲಕೇರಿ ಓಣಿ ತಂಡ, ಆರೇರ ಓಣಿ ತಂಡ, ಪಿಂಜಾರ ಓಣಿತಂಡ. ಬಯಲಾಟವನ್ನು ಆಡಲು ತಂಡ ತಂಡಗಳ ನಡುವೆ ಪೈಪೋಟಿ ನಡೆಯುತ್ತಿರುವುದು ತೀರಾ ಸಾಮಾನ್ಯವೆನಿಸಿದೆ.

ಸುಮಾರು ನೂರು ವರ್ಷಗಳ ಇತಿಹಾಸ ಇಲ್ಲಿನ ಬಯಲಾಟ ಪ್ರದರ್ಶನಗಳಿಗಿರುವುದು ತಿಳಿದು ಬರುತ್ತದೆ. ಸ್ಥಳೀಯರೇ ಆದ ಸಮಗಂಡಿ ಮನೆತನದ ಮಲ್ಲಯ್ಯನವರು ಬಯಲಾಟದ ಕಥಾ ವಸ್ತುವನ್ನು ಕೈ ಬರಹದ ಮೂಲಕ ಸಿದ್ಧಪಡಿಸಿ, ರಂಗ ಪ್ರದರ್ಶನ ಮಾಡಿಸುತ್ತಿದ್ದರಂತೆ. ಇವರ ಕಾಲದಲ್ಲಿ ಚಿತ್ರ ಸೇನೆ ಗಂಧರ್ವ, ಸುಭದ್ರಾ ಕಲ್ಯಾಣ, ಕೀಚಕವಧೆ ಎಂಬ ಕಥಾವಸ್ತು ಇಟ್ಟುಕೊಂಡು ಮೂರು ತಂಡಗಳಾಗಿ ಕಲಾವಿದರನ್ನು ವಿಂಗಡಿಸಿ ೧೫೦ಕ್ಕೂ ಹೆಚ್ಚು ರಂಗಪ್ರದರ್ಶನ ಮಾಡಿದರೆಂದು ತಿಳಿದು ಬರುತ್ತದೆ. ಕನಕಗಿರಿಯ ರಂಗಭೂಮಿ ಕಲೆಗೆ ಮೆರುಗು ನೀಡಿದವರಲ್ಲಿ ಬಸಪ್ಪ ಮಾಸ್ತರರೂ ಒಬ್ಬರು. ಇವರ ಕಾಲದಲ್ಲಿ ಬಯಲಾಟಗಳು ಸಾಕಷ್ಟು ಪ್ರದರ್ಶನ ಕಂಡಿವೆ. ಹಿರೇ ರಂಗಪ್ಪನಾಯಕನ ಇಚ್ಛೆಯಂತೆ ಅಪರಾಳ ತಮ್ಮಣ್ಣನವರು ಶ್ರೀಕೃಷ್ಣ ಪಾರಿಜಾತ ನಾಟಕವನ್ನು ಬರೆದರು. ಇದು ಜನಪದ ಪ್ರದರ್ಶನ ಕಲೆಯಲ್ಲಿ ಒಂದು ಇತಿಹಾಸವನ್ನೇ ನಿರ್ಮಾಣ ಮಾಡಿತು. ಸ್ವತಃ ಕನಕಗಿರಿಯಲ್ಲೇ ಸಾಕಷ್ಟು ಪ್ರದರ್ಶನಗಳನ್ನು ಕಂಡಿದೆ. ಬೇಸಿಗೆ ಕಾಲ ಬಂತೆಂದರೆ ರೈತರಿಗೆ ಇಲ್ಲಿ ಕೃಷಿ ಚಟುವಟಿಕೆಗಳು ಕಡಿಮೆಯಾಗತೊಡಗುತ್ತವೆ. ಹೀಗಾಗಿ ಖಾಲಿ ಸಮಯದಲ್ಲಿ ಬಯಲಾಟ ಆಡುವದಕ್ಕೆ ತೊಡಗುತ್ತಾರೆ. ಓಣಿ ಓಣಿಯಲ್ಲಿ ಬಯಲಾಟದ ತಾಲೀಮು ಕುಣಿತ ಕಂಡು ಬರುತ್ತದೆ. ಪ್ರತಿನಿತ್ಯ ತಾಲೀಮು ವೀಕ್ಷಿಸುವ ದನಕಾಯುವ ಹುಡುಗರ ಬಾಯಲ್ಲೂ ಸಹ ಎಲೈ ಸಾರಥಿ೦ ನೀನುದಾರು ನಿನಗಿಟ್ಟಿರುವ ನಾಮಾಂಕಿತವೇನು ಥಟ್ಟನೆ ಉಸಿರುವಂಥವನಾಗಲೈ ಸಾರಥಿ ಅತಿ ಜಾಗೃತಿ ಎಂಬ ಬಯಲಾಟದ ಸಂಭಾಷಣೆಗಳು ಕೇಳಿಬರುತ್ತವೆ. ಬಯಲಾಟದಲ್ಲಿ ಬರುವ ಹೆಣ್ಣು ಪಾತ್ರವನ್ನು ಗಂಡಸರೇ ಮಾಡುತ್ತಾರೆ. ಹೆಣ್ಣು ಪಾತ್ರ ಮಾಡುವವರು ಬೇರೆ ಪಾತ್ರದವರಂತೆ ನಾಟಕದ ಪಟ್ಟಿ (ಹಣ) ಕೊಡಬೇಕಿಲ್ಲ. ಹೆಣ್ಣು ಪಾತ್ರ ಮಾಡಲು ಯಾರೂ ತಯಾರಿಲ್ಲದ ಸಂದರ್ಭದಲ್ಲಿ ಇಂತಹ ಪದ್ಧತಿ ಆರಂಭವಾಗಿರಬೇಕು.

ಗಿರಿಜಾ ಕಲ್ಯಾಣ, ಮನ್ಮಥ ವಿಜಯ, ತ್ರಿಪುರದಹನ, ಕೀಚಕವಧೆ, ಅಹಿರಾವಣ-ಮಹಿರಾವಣ, ಮುಂತಾದವುಗಳು ಇಲ್ಲಿ ಪ್ರದರ್ಶಿತವಾದ ಬಯಲಾಟಗಳು. ಪೌರಾಣಿಕ ಕಥಾವಸ್ತುಗಳೇ ಬಯಲಾಟದ ಜೀವಾಳ ಎನ್ನುವಂತಿದೆ. ಬಯಲಾಟದ ಪ್ರಮುಖ ಕಲಾವಿದರೆಂದರೆ, ಹನುಮಪ್ಪ ಕಿಸಗಂಡಿ (ದಿವಂಗತರು), ಯಾಮನಪ್ಪ ಹಡ್ಡಿ (ದಿವಂಗತರು), ಚಂದುಸಾಬ್ ರಿಬ್ಬನ್, ಹೋಟೆಲ್ ರಾಜಾಸಾಬ್, ಚಿತ್ತಾರಿ ಬಾಷಾ (ದಿವಂಗತರು), ಲಾಲಸಾಬ್ ಗೂಡಸಾಬ್, ಕನಕಪ್ಪನಾಯಕ, ಅಗಸರ ಶಾಮಣ್ಣ, ಪಂಪಣ್ಣ ಕೊರಡ್ಡಿ, ನಬಿಸಾಬ್ ಹವಾಲ್ದಾರ್, ಸಮಗಂಡಿ ಮಲ್ಲಯ್ಯ, ಸಮಗಂಡಿ ಬಸಣ್ಣ, ಆರೇರ ಯಮನಪ್ಪ, ಮಹಿಪತಿ, ಪಂಪಣ್ಣ ಮಾಸ್ತರ ಹೀಗೆ ಒಂದು ದೊಡ್ಡ ಪಟ್ಟಿಯೇ ಬೆಳೆಯುತ್ತ ಹೋಗುತ್ತದೆ.

ಬಯಲಾಟದ ಕುಣಿತಕ್ಕೆ ಹುರುಪು ಉತ್ಸಾಹ ತುಂಬುವುದು ಸಂಗೀತ ಮತ್ತು ಹಿಮ್ಮೇಳ. ಮದ್ದಿ (ಮೃದಂಗ), ಪಿಟೀಲು, ತಾಳ, ಹಾರ್ಮೋನಿಯಂ ಸಂಗೀತದ ಪ್ರಮುಖ ಪರಿಕರಗಳು ಸಂಗಪ್ಪ ಬಡಿಗೇರ, ಭಗವಂತಪ್ಪ ಪಾತರದವರು ಮದ್ದಿ ಬಡಿದರೆಂದರೆ, ಬಯಲಾಟ ಆಡುವವರಷ್ಟೆ ಅಲ್ಲದೆ ಮಲಗಿದವರೂ ಎದ್ದು ಕುಣಿಯುವಂತಿರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

ಕಲಾವಿದರು ಹೇಳುವ ಬಯಲಾಟದ ಸಂಭಾಷಣೆಗಳು ಉದ್ದುದ್ದವಾಗಿದ್ದು ಸಂಸ್ಕೃತ ಮಿಶ್ರಿತವಾಗಿರುತ್ತವೆ. ಅನಕ್ಷರಸ್ಥರಾಗಿದ್ದರೂ ಸಹ ಸಂಭಾಷಣೆಯಲ್ಲಿ ಸ್ಪಷ್ಟೋಕ್ತಿ ಕಂಡುಬರುತ್ತದೆ. ಕಿರೀಟಗಳು, ಬುಜಕಟ್ಟುಗಳು, ಎದೆಯ ಕವಚ, ಕೈಯ್ಯಲ್ಲಿ ಗದೆ ಅಥವಾ ಬಿಲ್ಲು ಬಾಣ ಹಿಡಿದು ರಂಗಭೂಮಿಯ ಮೇಲೆ ನರ್ತಿಸತೊಡಗಿದರೆ ಆ ಪಾತ್ರಗಳನ್ನು ನೋಡುವದೇ ಒಂದು ವಿಶೇಷ ಎನ್ನಲಾಗುತ್ತದೆ. ಪೌರಾಣಿಕ ಪಾತ್ರಗಳು ಗಂಭೀರವಾದವುಗಳಾಗಿರುವುದರಿಂದ ಸಾರಥಿ ಹಾಸ್ಯದ ಮೂಲಕ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುತ್ತಾನೆ. ಸಂಜೀವಪ್ಪ ಪಾಲಿ, ಗಿಡ್ನರಾಜಪ್ಪ ರಡ್ಡೇರ್, ಕಾಳಿಯಂಕಪ್ಪ, ಸಮಗಂಡಿಗಂಗಣ್ಣ ಇವರು ಸಾರಥಿ ಪಾತ್ರದ ಪ್ರಮುಖರು. ಇವರ ಹಾಸ್ಯಾಭಿನಯಕ್ಕೆ ಜನ ಗೊಳ್ಳೆಂದು ನಗುತ್ತಿದ್ದರು. ದೂರದರ್ಶನ, ಸಿನಿಮಾದಂತ ಮನರಂಜನ ಮಾಧ್ಯಮಗಳು ಹೆಚ್ಚು ಹೆಚ್ಚು ಪ್ರಭಾವ ಬೀರಿರುವ ಇಂತಹ ಸಂದರ್ಭದಲ್ಲೂ ಬಯಲಾಟ ಇಲ್ಲಿ ಇಷ್ಟೊಂದು ಪ್ರಮುಖ ಸ್ಥಾನ ಪಡೆದಿರುವುದು ಒಂದು ವಿಶೇಷವೇ ಸರಿ.

ನಾಟಕ

ನಾಟಕಂ ಸಪ್ರಕರಣಂ ಬಾಣ ಪ್ರಹಸನಂ ಡಿಮಃ

ವ್ಯಾಯೋಗ ಸಮಹ ಕಾರೌ ವೀಥ್ಯಾಂಕೆ ಹಾಮೃಗಾ

ಇತಿ ದಶದೈವ ರಸಾಶ್ರಯಂ||

ನಾಟಕದ ಹತ್ತು ಪ್ರಕಾರಗಳು ರಸಾಶ್ರಯವಾಗಿವೆ. ಅಲ್ಲದೆ ತ್ರೈಗಣೋದ್ಭವ ಮರ್ತ್ಯ ಲೋಕ ಚರಿತಂ ನಾನಾರಸಂ ದೃಶ್ಯತೇ ಎಂಬಂತೆ ಸತ್ವ, ರಜ, ತಮೋ ಗುಣಗಳಿಂದ ಕೂಡಿದ ನಾಟಕವು ನಾನಾ ರಸಗಳನ್ನು ನೀಡುತ್ತದೆ. ನಾಟಕವು ಸಾಹಿತ್ಯ ಅಭಿನಯಗಳ ಮುಖಾಂತರ ರಸಚೇತನ ಕಾರ್ಯಗಳನ್ನು ಮಾಡುತ್ತದೆ. ಇಂತಹ ರಸಚೇತನ ಕಾಯಕ ಮಾಡುವ ನಾಟಕ ಮನುಷ್ಯ ಜೀವನದಲ್ಲಿ ಹಾಸುಹೊಕ್ಕಾಗಿದೆ. ಒಂದು ಆರ್ಯೋಕ್ತಿಯಂತೆ "ಜಗತ್ತಿನಲ್ಲಿರುವುದೆಲ್ಲಾ ನಾಟಕದಲ್ಲಿದೆ" ಎಂದು ಇವೆಲ್ಲವುಗಳನ್ನು ಯೋಚಿಸಿದಾಗ ಎಲ್ಲ ಕಲೆಗಳನ್ನು ಒಳಗೊಂಡಿದೆ.

ಕನಕಗಿರಿಯ ಜನಪದರು ತಮ್ಮ ಕಷ್ಟ ಸುಖಗಳ ನಡುವೆ ನಾಟಕದ ಕಲೆಯನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಹಿಂದಿನಿಂದ ಇಂದಿನವರೆಗೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಇತ್ಯಾದಿ ನಾಟಕಗಳನ್ನಾಡಿ ಹೆಸರು ಮಾಡಿದ ನಾಟಕ ಕಲಾವಿದರು ಕನಕಗಿರಿಯಲ್ಲಿ ಅನೇಕರಿದ್ದಾರೆ. ಹಬ್ಬ-ಹರಿ-ದಿನಗಳಲ್ಲಿ, ಸುಗ್ಗಿಯ ದಿನಗಳಲ್ಲಿ, ಬಿಡುವಿನ ದಿನಗಳಲ್ಲಿ ವಿಶೇಷವಾಗಿ ಕನಕರಾಯ ಜಾತ್ರೆ ಉತ್ಸವಗಳ ದಿನಗಳಲ್ಲಿ ನಾಟಕ ಪ್ರದರ್ಶನಗಳು ಹೆಚ್ಚು. ಪುರುಷ ಪಾತ್ರಗಳಿಗೆ ಸ್ಥಳೀಯರೇ ಅಭಿನಯಿಸಿದರೆ, ಸ್ತ್ರೀ ಪಾತ್ರಗಳಿಗೆ ನಟನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಇಳಕಲ್ ಮುಂತಾದ ಕಡೆಯಿಂದ ಕರೆಸುತ್ತಾರೆ. ಕನಕಗಿರಿಯ ಪ್ರಮುಖ ಕಲಾವಿದರೆಂದರೆ ಬಸೆಟೆಪ್ಪ ಬತ್ತದ್, ವಿರೂಪಾಕ್ಷಪ್ಪ ಬತ್ತದ, ದುರ್ಗಾದಾಸ್ ಯಾದವ್, ಮಲ್ಲಿಕಾರ್ಜುನಗೌಡ ಪಾಟೀಲ್, ಬೀಡಿ ದೌಲತ್, ಸುಭಾಸ್ ಗೋಪಾಲ, ಕುಂಟಪಾಷಾ, ಚನ್ನಪ್ಪ ಮಾಸ್ತರ ಮುಂತಾದವರು. ರಕ್ತ ರಾತ್ರಿ, ಬಾಣಸಿಗ ಭೀಮ, ಚಿತ್ರಾಂಗದಾ,

ದಾನಶೂರ ಕರ್ಣ, ತಲಾಟೆ ಮಾಡಿದ ಗಲಾಟೆ, ಈಗ ಹ್ಯಾಂಗಾತು ಎಚ್ಚರ ತಂಗಿ ಎಚ್ಚರ, ಗೌಡ್ರ ಗದ್ಲ, ಅಣ್ಣತಂಗಿ ಮುಂತಾದ ನಾಟಕಗಳು ಇಲ್ಲಿ ಪ್ರದರ್ಶನ ಕಂಡಿವೆ. ನಾಟಕದಲ್ಲಿ ಅಭಿನಯಿಸುವವರು ನಾಟಕ ನೋಡಲು ತಮ್ಮ ಬಂದು ಬಳಗವನ್ನು ಕರೆಸಿಕೊಳ್ಳುವ ಪದ್ಧತಿ ಇದೆ. ನಾಟಕ ನೋಡಲು ಬಂದ ಬಂಧು ಬಳಗವು ತಮಗೆ ಸಂಬಂಧಿಸದ ಕಲಾವಿದರಿಗೆ ೧೦೧,೫೦೧ ಹೀಗೆ ಅವರವರ ಯೋಗ್ಯತಾನು ಸಾರವಾಗಿ ಮುಯ್ಯಿ ಹಾಕುವದುಂಟು. ನಾಟಕವು ಬೆಳಗಾಗುವವರೆಗೂ ಪ್ರದರ್ಶನಗೊಳ್ಳುತ್ತದೆ.

ಪುರವಂತರ ಕುಣಿತ

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಶೈವ ಪರಂಪರೆಯ ವಿಶಿಷ್ಟವಾದ ಧಾರ್ಮಿಕ ಕಲೆ 'ಪುರವಂತಿಕೆ'ಯಾಗಿದೆ. ಈ ಕಲೆಯನ್ನು ಪ್ರದರ್ಶಿಸುವವರು ಪುರವಂತರೆಂದು ಕರೆಯುತ್ತಾರೆ. ಪುರವಂತರು ವೀರಭದ್ರನ ಅವತಾರವೆಂತಲೂ ನಂಬಿಕೆ ಇದೆ. ಅವರ ರೌದ್ರಾವತಾರದ ಕುಣಿತ ಆ ನಂಬಿಕೆಯನ್ನು ದೃಢಪಡಿಸುತ್ತದೆ. ಕಲಾವಿದರ ವೇಷ ಭೂಷಣ ತುಂಬಾ ವರ್ಣಮಯ ಹಾಗೂ ಆಕರ್ಷಕ. ವೀರಗಾಸೆ ಹಾಕಿದ ಕಾವೀ ರೇಷ್ಮೆ ದೋತ್ರ ಹಾಗೂ ಕೆಲವು ಕಡೆ ಬಿಗಿ ಪೈಜಾಮು ಹಾಕಿ ತುದಿಯಲ್ಲಿ ಕಾಲಿಗೆ ಹತ್ತಿಕೊಳ್ಳುವಂತೆ ಕಟ್ಟಿರುತ್ತಾರೆ. ಕಾವಿ ಅಂಗಿ ಧರಿಸಿ ಸೊಂಟಕ್ಕೆ ನಡುಕಟ್ಟು ಕಟ್ಟಿರುತ್ತಾರೆ. ಮೈಮೇಲೆ 'ಗಲೀಫ' ದಂತಹ ವಸ್ತ್ರಹಾಕಿರುತ್ತಾರೆ. ತಲೆಗೆ ಕಾವಿಯ ರೇಶ್ಮೆ ರುಮಾಲು, ತೋಳಿಗೆ ಬೆಳ್ಳಿ ನಾಗರಗಳು, ಎದೆಗೆ ತೀರ್ಥಮುಖಗಳು, ದರ್ಪಣ, ನಡುವಿಗೆ ನರಸಿಂಹ ಮುಖ ಹಾಗೂ ರುಂಡ ಮಾಲೆಗಳು, ಕೈ ಮಣಿಕಟ್ಟಿಗೆ ರುದ್ರಾಕ್ಷಿ, ಕೊರಳಿಗೆ ರುದ್ರಾಕ್ಷಿ ಮಾಲೆ ಬಲಗೈಯ್ಯಲ್ಲಿ ಖಡ್ಗ ಅಥವಾ ತ್ರಿಶೂಲ, ಎಡಕೈಗೆ ನಿಂಬೆಹಣ್ಣು ಸಿಕ್ಕಿಸಿದ ಶೂಲ ಹಿಡಿದಿರುತ್ತಾರೆ.

ಕನಕಗಿರಿಯಲ್ಲಿ ಮಹಂತರ ಮಠ (ಮೌನೇಶ್ವರ ಮಠ)ದಲ್ಲಿ ಪ್ರತಿವರ್ಷ ಶ್ರಾವಣ ಮಾಸದಲ್ಲಿ ನಡೆಯುವ ವಿಶ್ವಕರ್ಮ ಸಮುದಾಯದ ವಿಶೇಷ ವಿವಿಧ ಧಾರ್ಮಿಕ ಕಾರ್ಯಗಳಲ್ಲಿ ಪುರವಂತರ ಕುಣಿತ ವಿಶೇಷವಾಗಿರುತ್ತದೆ. ಕಡೇ ಶ್ರಾವಣ ಮಾಸದ ಗುರುವಾರ ಪಲ್ಲಕ್ಕಿ ಸೇವೆಯ ಜೊತೆ ಜೊತೆಗೆ ಗ್ರಾಮದ ವಿವಿಧ ದೈವಗಳಿಗೆ ಭೇಟಿ ಕೊಡುತ್ತ ಪುರವಂತರ ಕುಣಿತ ಸಾಗುತ್ತದೆ. ವಾಸಪ್ಪ ಹಾಗೂ ಯೋಗೇಂದ್ರಪ್ಪ ಇವರು ಪ್ರಮುಖ ಪುರವಂತರು.

ದಾಸಯ್ಯನವರು

ನವರಾತ್ರಿ ಸಮಯದಲ್ಲಿ, ಕನಕರಾಯನ ಜಾತ್ರೆಯ ಸಂದರ್ಭಗಳಲ್ಲಿ ದಾಸಯ್ಯನವರು ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ವೆಂಕಟೇಶ್ವರನ ಭಕ್ತರು, ಕನಕರಾಯನ ಭಕ್ತರು ದಾಸಯ್ಯನವರನ್ನು ಮನೆಗೆ ಆಹ್ವಾನಿಸುತ್ತಾರೆ. ಗರುಡಗಂಬ, ಗೋಪಾಳಪುಟ್ಟಿ, ಜಾಗಟೆ, ಶಂಖವಿನೊಂದಿಗೆ ಆಗಮಿಸುವ ದಾಸಯ್ಯನವರ ಕಾಲಿಗೆ ನೀರು ಹಾಕಿ ಒಳಗೆ ಬರಮಾಡಿಕೊಳ್ಳುತ್ತಾರೆ. ಗರುಡಗಂಭ ಗೋಪಾಳ ಪುಟ್ಟಿಯನ್ನು ಪೂಜಿಸುತ್ತಾರೆ. ದಾಸಯ್ಯನು ಜಾಗಟೆ ಬಾರಿಸಿ, ಶಂಖ ಊದಿ ದೇವರ ನಾಮ ಉಚ್ಚರಿಸುತ್ತಾ ಮನೆ ಮಂದಿಗೆ ಹರಸುತ್ತಾನೆ. ಆ ದಿನ ಮೊದಲು ದಾಸಯ್ಯನ ಊಟವಾದ ಬಳಿಕ ಮನೆಮಂದಿಯೆಲ್ಲ ಊಟ

ಮಾಡುತ್ತಾರೆ. ದಾಸಯ್ಯನವರನ್ನು ಮನೆಗೆ ಕರೆದು ದೇವರ ನಾಮಸ್ಮರಣೆ ಮಾಡಿಸಿದರೆ ಒಳ್ಳೆಯದೆಂಬುದು ಇಲ್ಲಿಯ ಭಕ್ತರ ನಂಬಿಕೆ. ಹಬ್ಬ ಹರಿದಿನಗಳಲ್ಲಿ, ಮದುವೆ ಮಂಗಳಕಾರ್ಯಗಳಲ್ಲಿ ಅವನಿಗೆ ಆಹ್ವಾನ ಬರುವುದು. ದಾಸಯ್ಯನ ಸಂಪ್ರದಾಯ ಪರಂಪರಾಗತವಾದ ವೃತ್ತಿಯಾಗಿದೆ. ಗೊಲ್ಲರು, ಕುರುಬರು, ಬಣಜಿಗರು, ಚಲುವಾದಿಗಳಲ್ಲಿ ಹೆಚ್ಚು ಪ್ರಚಲಿತವಿದೆ. ಹಿರಿಯರಿಂದ ಮುದ್ರೆ ಒತ್ತಿಸಿಕೊಂಡೇ ದಾಸರಾಗಬೇಕು. ಗರುಡಗಂಬ ಹಿಡಿದಿರುವುದರಿಂದ 'ಗರುಡ ವಂಶದವರೂ' ಎಂದು ಇವರನ್ನು ಕರೆಯುತ್ತಾರೆ. ಇವರಲ್ಲಿ ತಿರುಪತಿ ತಿಮ್ಮಪ್ಪನ ಒಕ್ಕಲುಗಳು ಮನೆಮನೆಗೆ ಭವನಾಶಿಯನ್ನು ಹಿಡಿದು 'ಶ್ರೀಮದ್ ರಮಾರಮಣ ಗೋವಿಂದಾ ಗೋವಿಂದ' ಎಂದು ಹೇಳುತ್ತಾ ಬಿಕ್ಷೆ ಪಡೆಯುತ್ತಾರೆ. ಮನೆಗೆ ಬಂದ ದಾಸಯ್ಯನಿಗೆ ಹಣ, ಧಾನ್ಯ, ನೀಡಿ ಕಾಲಿಗೆ ಬೀಳುವುದುಂಟು.

ವೇಷಗಾರರು

ಕನಕಗಿರಿಯ ಪರಿಸದಲ್ಲಿ ಕಾಣಸಿಗುವ ವೇಷಗಾರರು ಮನೆಮನೆಗೆ ಹೋಗಿ ಪ್ರದರ್ಶನ ನಡೆಸುತ್ತಾರೆ. ವೃತ್ತಿ ಕಲಾವಿದರಾದ ಇವರನ್ನು ಬಹುರೂಪಿಗಳೆಂದೂ ಕರೆಯುವರು. ತೆಲುಗು ಮಾತನಾಡುವ ಆಂದ್ರ ಮೂಲದವರೆಂದು ಹೇಳಿಕೊಳ್ಳುವ ಇವರು ಶ್ರೀಶೈಲವನ್ನು ತಮ್ಮ ಧರ್ಮ ಕ್ಷೇತ್ರವೆಂದು ಹೇಳುತ್ತಾರೆ. ಎರಡು ಮೂರು ಕುಟುಂಬಗಳು ಸೇರಿ ಬೀದಿ ನಾಟಕಕ್ಕಾಗಿ ಊರೂರು ಅಲೆಯುತ್ತಾರೆ. ರಾಮಾಯಣ, ಮಹಾಭಾರತದಂತಹ ಪ್ರಸಿದ್ಧ ಘಟನೆಗಳ ತುಣುಕುಗಳನ್ನು ಮನೆ ಮನೆಗೆ ಹೋಗಿ ಪ್ರದರ್ಶಿಸುತ್ತಾರೆ. ಗಾಂಭೀರ್ಯದ ಜೊತೆಗೆ ಹಾಸ್ಯವನ್ನೂ ಸಹ ಬೆರಸಿ ನೋಡುಗರಿಗೆ ಮುದನೀಡುತ್ತಾರೆ. ಸ್ತ್ರೀ ಪಾತ್ರವನ್ನು ಪುರುಷರೇ ಮಾಡುತ್ತಾರೆ. ನೃತ್ಯ, ಅಭಿನಯ, ಸಂಭಾಷಣೆ, ಸಂಗೀತ ಈ ಎಲ್ಲ ಕಲೆ ಇಡೀ ತಂಡಕ್ಕೆ ಕರಗತವಾಗಿರುತ್ತದೆ. ದಿನಕ್ಕೊಂದು ಪ್ರದರ್ಶನ ನೀಡಿ ಕೊನೆಯ ದಿನ ಪ್ರತಿಯೊಂದು ಮನೆಯಿಂದ ಹಣ, ದವಸ-ಧಾನ್ಯ, ಬಟ್ಟೆ, ಇತ್ಯಾದಿ ಪಡೆಯುತ್ತಾರೆ.

ಪರ್ವತ ಮಲ್ಲಯ್ಯ

ಪರ್ವತಮಲ್ಲಯ್ಯನನ್ನು ಆರಾಧ್ಯ ದೈವವನ್ನಾಗಿ ಮಾಡಿಕೊಂಡ ಇವರಿಗೆ ಸಮ್ಮೇಳ ಬಾರಿಸುವವರು ಎಂತಲೂ ಕರೆಯುತ್ತಾರೆ. ೪-೫ ಅಡಿ ಎತ್ತರದ ೪ ಬಿದಿರಿನ ಕೋಲುಗಳ ಮೇಲೆ ನಿರ್ಮಿಸಿದ ಚಿಕ್ಕ ಗೂಡಿನಲ್ಲಿ (ಖಾನೆ) ಪರ್ವತಮಲ್ಲಯ್ಯನನ್ನು ಸ್ಥಾಪಿಸುತ್ತಾರೆ. ಜೊತೆಗೆ ಬೇರೆ ಬೇರೆ ದೇವರ ಮೂರ್ತಿಗಳಿರುತ್ತವೆ. ಕುಂಕುಮ, ವಿಭೂತಿ ಹೂವಿನಿಂದ ದೇವರನ್ನು ಅಲಂಕರಿಸಿ ತಲೆಯ ಮೇಲೆ ಹೊತ್ತು ಮನೆ ಮನೆಗೆ ತಿರುಗಿ ತಾಳ ಬಾರಿಸುತ್ತ ಮನೆಯವರ ಗಮನಸೆಳೆದು ಬಿಕ್ಷೆ ಪಡೆಯುತ್ತಾರೆ. ಬಿಕ್ಷೆ ಪಡೆದ ನಂತರ ನಾನಾ ರೀತಿಯಲ್ಲಿ ಹರಸಿ ಹೊರಡುತ್ತಾರೆ.

ಗೊಂದಲಿಗರು

ಹೊಲಿದಾಸರು, ಮಟ್ಟದಾಸರು, ಗರುಡದಾಸ ಮೊದಲಾದವರು ಭಜನೆ ಹರಿ ಕೀರ್ತನೆಯನ್ನು ಮಾಡುತ್ತಾ, ಕತೆಯನ್ನು ಹೇಳುತ್ತ, ಹಾಡನ್ನು ಹಾಡುತ್ತ ಈ ಪ್ರದೇಶದಲ್ಲಿ ಸಂಚರಿಸುತ್ತಾರೆ. ಇವರು

ಶಿವನನ್ನು, ಶಕ್ತಿಯನ್ನು ತಮ್ಮ ದೇವತೆಯೆಂದು ಪೂಜಿಸಿ, ಹಾಡಿ ಕಥೆಯನ್ನು ಹೇಳುತ್ತಾರೆ. ಇವರ ಕಥನಕವನಗಳು ಸಾಮಾನ್ಯವಾಗಿ ಈಶ್ವರ, ಮಹದೇವ, ಹರಿಹರ, ಶಿವ, ಕುಮಾರರಾಮ, ಶಿವಲಿಂಗ ಎಂಬ ದೇವರನ್ನೊಳಗೊಂಡ ಕಥೆಗಳೇ ಹೆಚ್ಚು. ಬಿಡಿ ಬಿಡಿ ಹಾಡುಗಳು ಶಕ್ತಿ, ಭೈರವಿ, ಕಾಳಿ, ದುರ್ಗಿ, ಭವಾನಿ ಮೊದಲಾದ ದೇವತಾ ಸ್ತುತಿಗಳಾಗಿರುತ್ತವೆ. ಗೊಂದಲಿಗರು ಉಪಯೋಗಿಸುವ ವಾದ್ಯಗಳು ತಂತಿ, ಸಂಬಾಳ, ತಾಳ ಮೊದಲಾದವುಗಳು. 'ದಿಮ್ ತೋಮ್ ದಿತ್ತೈ, ಕಣಿತಕಡತ್ತೈ' ಎಂದು ತಾಳ ಬಾರಿಸುತ್ತ ಹಾಡುತ್ತಾರೆ. ಸಾಮಾನ್ಯವಾಗಿ ಶ್ರಾವಣ ಮಾಸದಲ್ಲಿ ಕನಕಗಿರಿಯಲ್ಲಿ ಕಥನಕವನವನ್ನು ಹೇಳುತ್ತಾರೆ. ಯಾವ ಹಾಡುಗಬ್ಬವೇ ಇರಲಿ ಹರಕೆಯೊಂದಿಗೆ ಮುಕ್ತಾಯ ಮಾಡುತ್ತಾರೆ, ಟಿ.ವಿ.ಹಾವಳಿ ಹೆಚ್ಚಾದ ಮೇಲೆ ಇವರ ಪ್ರದರ್ಶನವನ್ನು ನೋಡುವುದು ಕಡಿಮೆಯಾಗಿದೆಯೆಂಬುದು ಸ್ಥಳೀಯರ ಅಭಿಪ್ರಾಯ.

ಹಲಗೆ ಬಡಿಯುವ ಕಲೆ

ಹಲಗೆ ಬಡಿಯುವ ಕಲೆಯಲ್ಲಿ ಕನಕಗಿರಿಯ ಚಿದಾನಂದಪ್ಪ ಹರಿಜನ, ದಾಸಪ್ಪ ಹರಿಜನ, ತಿರುಕಪ್ಪ ಇನ್ನೂ ಮುಂತಾದವರು ಪ್ರಸಿದ್ಧರು. ಒಂದು ಒಂದುವರೆ ಅಡಿಯ ವೃತ್ತಾಕಾರದ, ತಟ್ಟೆಯಾಕಾರದ ಚರ್ಮವಾದ್ಯ ಇದಾಗಿದೆ. ಮೊಹರಂ ಕುಣಿತಕ್ಕೆ ಡಂಗುರ ಸಾರಲು, ಧಾರ್ಮಿಕ ಕಾರ್ಯಕ್ರಮಗಳಿಗೆ, ಮಸೀದಿಗಳಿಗೆ ಹರಕೆ ಸಲ್ಲಿಸಲು ಹೋಗುವಾಗ, ಕಾರ ಹುಣ್ಣಿಮೆಯಲ್ಲಿ ಕರಿಹರಿದ ಎತ್ತನ್ನು ಮೆರೆಸಲು, ಮುಂಗೈ ಆಟದಲ್ಲಿ ಗೆದ್ದವರ ಮೆರವಣಿಗೆಗೆ ಹಲಗೆ ವಾದ್ಯ ಬೇಕೇಬೇಕು. ಈ ವಾದ್ಯದ ಗತ್ತಿಗೆ ಎಂತವರೂ ಹೆಜ್ಜೆ ಹಾಕಬೇಕೆನಿಸುತ್ತದೆ. ಸರಾಯಿ ಕುಡಿದು ಬಾರಿಸಿದರೆ ವಾದ್ಯಕ್ಕೆ ವಿಶೇಷ ರಂಗು ಬರುತ್ತದೆ ಎನ್ನುತ್ತಾರೆ.

ಜೋಗತಿ ಕುಣಿತ

ಚೌಡಿಕೆ ಬಾರಿಸುತ್ತ, ಕುಣಿಯುತ್ತ ಊರೂರು, ಮನೆಮನೆಗೆ ಸುತ್ತಿ ಬಿಕ್ಷೆ ಬೇಡುವ ಜೋಗಯ್ಯ ಹಾಗೂ ಜೋಗತಿಯರು ಇಲ್ಲಿದ್ದಾರೆ. ಹುಲಿಗೆಮ್ಮ, ಗಾಳೆಮ್ಮ, ಎಲ್ಲಮ್ಮರ ಮುಖವಾಡವನ್ನು ಕೊಡಕ್ಕೆ ಕಟ್ಟಿಕೊಂಡು ಇಲ್ಲವೆ ಬರೀ ಬಿದಿರು ಪುಟ್ಟಿಯಲ್ಲಿ ದೇವರನ್ನು ಕುಳ್ಳಿರಿಸಿಕೊಂಡು ಎಲ್ಲಮ್ಮನ, ಹುಲಿಗೆಮ್ಮನ ಕಥೆಯನ್ನು ಹಾಡಿನಲ್ಲಿ ಹೇಳುತ್ತಾ ಬಿಕ್ಷೆ ಬೇಡುತ್ತಾರೆ. ಈಗೀಗ ಜೋಗ ಜೋಗತಿಯರೆಲ್ಲ ಬರೀ ಕುಡಿದು ಕಷ್ಟಪಡದೆ ಕೆಟ್ಟ ಕೆಲಸಕ್ಕಿಳಿದು ಸಮಾಜದ ದೃಷ್ಟಿಯಲ್ಲಿ ತಿರಸ್ಕೃತರೆನಿಸಿಕೊಂಡಿದ್ದಾರೆ. ಜಾತ್ರೆ ಉತ್ಸವಗಳಲ್ಲಿ ಕಾಡಿಸಿ, ಪೀಡಿಸಿ ಇವರು ಕೇಳುವ ಬಿಕ್ಷೆ ಎಂತವರಿಗೂ ಕಿರಿಕಿರಿಯನ್ನುಂಟು ಮಾಡುವಂತಿರುತ್ತದೆ. ಇವರ ಗುಂಪು ಈ ಭಾಗದ ವಡ್ಡರ ಸಮುದಾಯದಲ್ಲಿ ಯಾರಾದರು ಸತ್ತರೆ, ೯ನೇ ದಿನದ ಕಾರ್ಯ ಮಾಡಿದ ರಾತ್ರಿ ಪೂರ್ತಿ ಹುಲಿಗೆಮ್ಮ ಎಲ್ಲಮ್ಮನ ಕತೆ ಹೇಳಿ ಅವರು ಕೊಟ್ಟಂತಹ ಸಂಭಾವನೆ ಪಡೆದುಕೊಂಡು ಹೋಗುತ್ತಾರೆ. ಮೇಳ ಕಟ್ಟಿಕೊಂಡು ಹಾಡುವ ಇವರು ರಾಗಕ್ಕೆ ಅನುಗುಣವಾಗಿ ಬಾರಿಸುವರು. ನಾದದ ಪೆಟ್ಟಿಗೆ ಸರಿಯಾಗಿ ಹೆಜ್ಜೆ ಹಾಕುವರು. ತಾನ, ತಾಳ, ಲಯಗಳನ್ನೊಳಗೊಂಡ ಈ ಹಾಡುಗಳ ದಾಟಿ ಮಹತ್ವ ಪೂರ್ಣವಾದುದು. ಚೌಡಿಕೆ ಕುರುಹುಗಳ ಸಮಿಶ್ರನಾದದಲ್ಲಿ ಹಾಡುವವರ ಸ್ವರವಿತಾನ ಗಂಭೀರವಾಗಿ ಮಿಡಿಯುತ್ತದೆ. ಈ ಹಾಡುಗಳಲ್ಲಿ ಭಕ್ತಿಯ ಝರಿ ಅಲೆ ಅಲೆಯಾಗಿ ತೇಲಿ ಬರುತ್ತದೆ.

ಹಾಡಿಗೆ ತಕ್ಕಂತೆ ಕುಣಿತವಿರುವುದರಿಂದ ನೋಡುವುದಕ್ಕೂ ಕೇಳುವುದಕ್ಕೂ, ಮೇಳ ಉಂಟಾಗುತ್ತದೆ. ರಸ ಸೃಷ್ಟಿಗೆ ಇಂಬುಕೊಡುವುದು. ಇದೊಂದು ಕಲೆಯ ರಸದೂಟವಾಗಿದೆ. ಸರಳವಾದ ನೇರ ನಿರೂಪಣೆಯೇ ಈ ಕಲೆಯ ಜೀವಾಳ.

ಮೊಹರಂ (ಅಲಾಯಿ) ಕುಣಿತ

ಹಿಂದೂ ಮುಸ್ಲಿಮರೆನ್ನದೆ ಎಲ್ಲರೂ ಸೇರಿ ಆಚರಿಸುವ ಭಾವೈಕ್ಯತೆಯನ್ನು ಬಿಂಬಿಸುವ ಹಬ್ಬ ಇದಾಗಿದೆ. ರಾತ್ರಿ ಅಲಾಯಿ ದೇವರು ಮೆರವಣಿಗೆ ಹೊರಟ ಸಂದರ್ಭದಲ್ಲಿ, ಕತ್ತಲ್ ರಾತ್ರಿಯ ಮೆರವಣಿಗೆ ಸಂದರ್ಭದಲ್ಲಿ ಅಲಾಯಿ ಕುಣಿತ ಹಬ್ಬಕ್ಕೆ ವಿಶೇಷ ಮೆರುಗು ನೀಡುತ್ತದೆ. ಹಲಗೆ ಬಡಿಯುವವನ ತಾಳದ ಗತ್ತಿಗೆ ತಕ್ಕಂತೆ ಒಬ್ಬರಿಗೊಬ್ಬರು ಕೈ ಕೈ ಹಿಡಿದುಕೊಂಡು ಒಂದು ದೊಡ್ಡ ವೃತ್ತಾಕಾರವನ್ನು ನಿರ್ಮಿಸಿ ಆಕರ್ಷಕವಾಗಿ ಕುಣಿಯುತ್ತ ತಿರುಗುವ ಒಂದು ಜನಪದ ಕಲೆ ಇದಾಗಿದೆ. ನಿಜಾಮನ ಆಡಳಿತಕ್ಕೊಳಪಟ್ಟ ಪ್ರದೇಶ ಇದಾಗಿರುವುದರಿಂದ ಈ ಹಬ್ಬವು ರಾಜಾಶ್ರಯದಲ್ಲಿ ನಡೆಯುತ್ತಿತ್ತೆಂದು ಹೇಳಲಾಗುತ್ತದೆ. ಹೀಗಾಗಿ ಈಗಲೂ ಇದು ಒಂದು ಜನಪ್ರಿಯ ಕಲೆಯಾಗಿ ಉಳಿಯಲು ಸಾಧ್ಯವಾಯಿತು.

ಕೊಂಡಮಾಮಾಗಳು

ಕನ್ನಡ, ತೆಲುಗು ಮಾತನಾಡುವ ಇವರು ಊರೂರು ತಿರುಗಿ ಭವಿಷ್ಯ ಹೇಳಿ, ಹಣ, ದವಸ-ಧಾನ್ಯ ಬಿಕ್ಷೆ ಪಡೆಯುತ್ತಾರೆ. ಕನಕಗಿರಿ ಪರಿಸರದಲ್ಲಿ ಕಾಣಸಿಗುವ ಇವರು ಮುಡಿಗೆ ನವಿಲುಗರಿ, ಕೊರಳಿಗೆ ಮಣಿಸರ, ತೋಳುಗಳಿಗೆ ಲೋಹದ ಬಳೆ, ಕಿವಿಗೆ ದೊಡ್ಡದಾದ ಕುಂಡಲ, ಸೊಂಟ ಪಟ್ಟಿಗೆ ಮುಳ್ಳು ಹಂದಿಯ ಮುಳ್ಳುಗಳನ್ನು ಸಿಕ್ಕಿಸಿಕೊಂಡಿರುವ ಇವರು "ನಾವು ಕೃಷ್ಣದೇವರಾಯನ ಕಾಲದಿಂದಲೂ ಹಂಪಿ ಜಾತ್ರೆಗೆ ಬರುತ್ತಿದ್ದೆವು" ಎಂದು ಹೇಳಿಕೊಳ್ಳುತ್ತಾರೆ. ಇವರು ಭವಿಷ್ಯ ಹೇಳುವಾಗಿನ ಮಾತಿನ ವೇಗ, ಸ್ಪಷ್ಟತೆ, ಎಂತವರಿಗೂ ಅಚ್ಚರಿ ಮೂಡಿಸುತ್ತದೆ. ಭವಿಷ್ಯ ಕೇಳಲು ನಿರಾಸಕ್ತಿ ತೋರಿಸಿದರೂ ಒತ್ತಾಯದಿಂದ ಭವಿಷ್ಯ ಹೇಳಲು ಪ್ರಯತ್ನಿಸುತ್ತಾರೆ. ಒತ್ತಾಯಕ್ಕೆ ಮಣಿದು ಭವಿಷ್ಯ ಕೇಳುವ ಅನಿವಾರ್ಯತೆ ಕೆಲವರಿಗೆ ಬರುವುದುಂಟು.

ಡೊಳ್ಳಿನ ಕುಣಿತ

ಜಾತ್ರೆ, ಉತ್ಸವಗಳಲ್ಲಿ, ಗ್ರಾಮೀಣ ಜನಪದರ ಧಾರ್ಮಿಕ ಸಮಾರಂಭಗಳಲ್ಲಿ ಡೊಳ್ಳು ಕುಣಿತ ವಿಶೇಷವಾಗಿ ಕಂಡುಬರುತ್ತದೆ. ಕುರುಬರಲ್ಲಿ ಹೆಚ್ಚಾಗಿ ಡೊಳ್ಳಿನ ಕುಣಿತ ಕಂಡು ಬರುತ್ತದೆ. ಲಯಬದ್ಧ ತಾಳಗತಿಯಿಂದ ಶುರುವಾಗಿ ಈ ಡೊಳ್ಳಿನ ಕುಣಿತ ನಿಧಾನಗತಿಯಿಂದ ಕ್ರಮೇಣ ಉತ್ಕರ್ಷ ಸ್ಥಿತಿಗೇರುತ್ತದೆ. ಕೈಕಾಲಿಗೆ ಕಂಬಳಿಯ ಎಳೆ, ಪಂಚೆಯಾಗಿಯೂ ಕಂಬಳಿಯ ಹರಕು ಧರಿಸಿ ಎಲ್ಲರೂ ಕಪ್ಪು ಬಣ್ಣದ ಕಂಬಳಿಯಿಂದ ಅಲಂಕೃತರಾಗಿರುವುದು ಈ ತಂಡದ ವಿಶೇಷ. ಕನಕಗಿರಿಯ ಗೋರಾಳಕೇರಿ ದುರ್ಗಮ್ಮನ ಜಾತ್ರೆಯಲ್ಲಿ, ಇಲ್ಲಿರುವ ವಿವಿಧ ಹೆಣ್ಣು ದೇವತೆಗಳ ಸಮಾರಂಭಗಳಲ್ಲಿ, ಕನಕರಾಯನ ಜಾತ್ರೆ, ಉತ್ಸವಗಳಲ್ಲಿ ಡೊಳ್ಳು ಕುಣಿತ ಕಂಡುಬರುತ್ತದೆ. ಸುತ್ತಮುತ್ತಲ ಹಳ್ಳಿಯವರು ವೀಳ್ಯವನ್ನು ಕೊಟ್ಟು

ತಮ್ಮ ಗ್ರಾಮಕ್ಕೆ ಬಂದು ಸಮಾರಂಭದಲ್ಲಿ ಬಾರಿಸಲು ಆಹ್ವಾನಿಸುತ್ತಾರೆ. ಡೊಳ್ಳುಕುಣಿತವನ್ನು ವೃತ್ತಿಯನ್ನಾಗಿ ತೆಗೆದುಕೊಳ್ಳದೆ ಆಹ್ವಾನಿಸಿದವರು ಕೊಟ್ಟಷ್ಟು ಕಾಣಿಕೆ ಪಡೆದುಕೊಂಡು ಬರುತ್ತಾರೆ. ಡೊಳ್ಳಿನ ಹನುಮಂತ, ಬಂಕಾಪುರ ಬೀರಪ್ಪ ಮುಂತಾದವರು ಈ ಭಾಗದ ಪ್ರಮುಖ ಡೊಳ್ಳು ಕುಣಿತದ ಕಲಾವಿದರಾಗಿದ್ದಾರೆ.

ಮೋಡಿಯಾಟ

ಕನಕಗಿರಿಯಲ್ಲಿ ಅಪರೂಪಕ್ಕೆ ಕಾಣಸಿಗುವ ಮತ್ತೊಂದು ಪ್ರದರ್ಶನ ಕಲೆ ಇದಾಗಿದೆ. ಹಿಂದೆ ಸಮಗಂಡಿ ಮಲ್ಲಯ್ಯ ತಾತನವರು ಮೋಡಿಗೆ ಎದುರುಮೋಡಿ ಹಾಕುತ್ತಿದ್ದರು. ಆಗ ಈ ಆಟವನ್ನು ಜನರು ಕುತೂಹಲದಿಂದ, ಭಯ ಭೀತ ಭಾವನೆಯಿಂದ ನೋಡುತ್ತಿದ್ದರು ಎಂದು ಹೇಳಲಾಗುತ್ತದೆ. ವಿಜಯನಗರದ ಅರಸರು ಈ ಆಟವನ್ನು ತಮ್ಮ ಮನರಂಜನೆಗಾಗಿ ಇರಿಸಿಕೊಂಡಿದ್ದರೆಂದು ಹೇಳಲಾಗುತ್ತದೆ. ಗೊಲ್ಲರು, ಬೇಡರು ಹೆಚ್ಚಾಗಿ ಮೋಡಿಯಾಟವಾಡುತ್ತಾರೆ. ಮೋಡಿಯಾಟದವರು ಆಂದ್ರದ ಮೂಲದವರೆಂದೂ ಇತ್ಯಾದಿ ಕತೆಗಳು ಇವರ ಬಗೆಗಿವೆ. ಮೋಡಿಯಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ ರಾಜಮೋಡಿ ಮತ್ತು ರಣ ಮೋಡಿ. ರಾಜ ಮೋಡಿ ಕೇವಲ ಮನರಂಜನೆಗೆ ಮಾತ್ರ ಮೀಸಲಾದರೆ, ರಣಮೋಡಿಯು ಮನರಂಜನೆಯ ಜೊತೆಗೆ ಎದುರಾಳಿಯನ್ನು ಗೆಲ್ಲುವ ಸ್ಪರ್ಧೆಯಾಗಿರುತ್ತದೆ. ಸುಗ್ಗಿ ಕಾಲದಲ್ಲಿ ಇಂತಹ ಪ್ರದರ್ಶನಗಳು ನಡೆಯುವದುಂಟು. ಮೋಡಿಕಾರರು ಸಾಮಾನ್ಯವಾಗಿ ತಲೆಗೆ ಕೆಂಪುವಸ್ತ್ರದ ಪೇಟ ಸುತ್ತಿರುತ್ತಾರೆ. ಅರ್ಧ ತೋಳಿನ ಅಂಗಿ, ಮೇಲೊಂದು ವಾಸ್‌ಕೋಟು, ಕೆಂಪು ವಸ್ತ್ರದ ನಡುಕಟ್ಟು ಕಟ್ಟಿರುತ್ತಾರೆ. ಕಾಲಿಗೆ ಪ್ಯಾಂಡೆಯನ್ನು ಹಾಕಿರುತ್ತಾರೆ.

ಮೋಡಿ ಪ್ರತಿ ಮೋಡಿ ಹಾಕುವವರು ಊರಿನ ಪ್ರಮುಖರ ಒಪ್ಪಿಗೆ ಪಡೆದು ಆಟವಾಡುತ್ತಾರೆ. ಅದ್ಭುತ, ಭಯಾನಕವಾದ ಈ ಆಟವು ದಿನಗಟ್ಟಲೆ ನಡೆಯುತ್ತಿರುತ್ತವೆ. ಮೋಡಿಯ ಸತ್ಯಾಸತ್ಯತೆ ಏನೇ ಇರಲಿ ಜನರಲ್ಲಿ ಅದು ರೋಮಾಂಚನವನ್ನುಂಟು ಮಾಡುತ್ತದೆ. ಜನರಿಗೆ ಪ್ರಿಯವಾದ ಕಲೆಯಾಗಿದೆ.

ದುರುಗ ಮುರುಗಿಯರು

ದುರುಗ ಮುರುಗಿಯರು ತಿರುಗದ ಹಳ್ಳಿಯೇ ಇಲ್ಲ. ಇವರು ಮಾರಮ್ಮನ ಭಕ್ತರು, ದುರುಗಮ್ಮನ ಪೂಜಾರಿಯೆಂದು ಹೇಳಿಕೊಳ್ಳುತ್ತಾರೆ. ದುರುಮುರ್ ದುರುಮುರ್ ಎಂದು ಬಾರಿಸುತ್ತಾ "ತಮ್ಮ ಓಣ್ಯಾಗ ಬಂದಾಳು, ಭಕ್ತರು ದೀಪ ಕೊಟ್ಟಾರು, ಮುಡುಪು ಕೊಟ್ಟಾರು" ಎಂದು ಹಾಡಿ ನಡು ಓಣಿಗೆ ಬಂದು ದುರುಗಮ್ಮನನ್ನು ಕೂಡಿಸಿದ ಪುಟ್ಟಿ ಕೆಳಗೆ ಇಡುತ್ತಾರೆ. ಸಂಗಾತಿ ಚರ್ಮವಾದ್ಯ ನುಡಿಸುತ್ತಾರೆ. ದೇವತೆ ಸ್ತುತಿ ಮಾಡಿ ಹರಕೆ ಬಿಕ್ಷೆ ಕೊಡಲು ಕೋರುತ್ತಾರೆ. ದೇವಿಯು ರೌದ್ರಾವತಾರ ಮಾಡಿ ತೋರಿಸಿ ಬಿಕ್ಷೆ ಹರಕೆ ಪಡೆಯುತ್ತಾರೆ. ಸಾಮಾನ್ಯವಾಗಿ ದುರಗ ಮುರುಗಿಯರ ದೇಹ ಗಟ್ಟಿಯಾಗಿರುತ್ತದೆ. ಉದ್ದವಾದ ಕೂದಲು ಬಿಟ್ಟುಕೊಂಡು ಚಾಟಿಯಿಂದ ತಮ್ಮ ಮೈಗೆ ತಾವೇ ಬಾರಿಸಿಕೊಳ್ಳುವುದು, ಕೈಗೆ ಬ್ಲೇಡಿನಿಂದ ಕತ್ತರಿಸಿಕೊಂಡು ರಕ್ತದ ಭಯಾನಕ ಸ್ಥಿತಿ ತೋರಿಸುವುದು, ನಾಲಿಗೆಗೆ ಚಾಕುಚುಚ್ಚಿಕೊಂಡು ಬಿಕ್ಷೆ ಬೇಡುವುದು ಇವರ ಪ್ರತಿಯೊಂದು ವರ್ತನೆ ಚಿಕ್ಕಮಕ್ಕಳಲ್ಲಿ ಭಯ ಹುಟ್ಟಿಸುವಂತಿರುತ್ತವೆ. ಚಿಕ್ಕಮಕ್ಕಳು ಮನೆಯ

ಹಿರಿಯರು ಹೇಳಿದ ಮಾತು ಕೇಳದೆ ಇದ್ದಾಗ ಅಥವಾ ಕಿರಿ ಕಿರಿ ಉಂಟು ಮಾಡಿದಾಗ ಹಿರಿಯರು ಮಕ್ಕಳಿಗೆ "ದುರುಗಮ್ಮನ ಆಡಸೋರ ಕೈಯಾಗ ನಿನ್ನ ಕೊಟ್ಟು ಬಿಡ್ತೀನಿ ನೋಡು" ಎಂದು ಹೆದರಿಸುತ್ತಿರುತ್ತಾರೆ. ಮಕ್ಕಳು ಹೆದರಿಕೊಂಡು ತಂದೆ ತಾಯಿಗಳು ಹೇಳಿದ ಮಾತನ್ನು ಕೇಳುತ್ತಾರೆ.

೪.೧೩. ಸಾಮಾಜಿಕ ಸಂಘ-ಸಂಸ್ಥೆಗಳು

ಎಲ್ಲ ಗ್ರಾಮಗಳಲ್ಲಿರುವಂತೆ ಕನಕಗಿರಿಯಲ್ಲಿಯೂ ಸಮಾಜ ಸೇವೆಗಾಗಿ ಸೃಷ್ಟಿಯಾದ ಹಲವಾರು ಸಂಘ-ಸಂಸ್ಥೆಗಳು ಹುಟ್ಟಿಕೊಂಡಿವೆ. ಪ್ರತಿಯೊಂದು ಸಂಘವು ತನ್ನದೇ ಆದ ಹಲವಾರು ಧ್ಯೇಯೋದ್ದೇಶಗಳನ್ನು ಹೊಂದಿದೆ. ಇಲ್ಲಿನ ಸಂಘ-ಸಂಸ್ಥೆಗಳನ್ನು ಅವಲೋಕಿಸಿದಾಗ ಪ್ರತಿಯೊಂದು ಸಂಘವು ಸಮಾಜ, ಧರ್ಮಕ್ಕನುಗುಣವಾಗಿ ಕೆಲಸ ನಿರ್ವಹಿಸುವಂತವುಗಳಾಗಿವೆ. ವೀರಶೈವ ಧರ್ಮ ಮತ್ತು ಸಮಾಜದ ಪ್ರಗತಿಗಾಗಿ ವೀರಶೈವ ಸಮಾಜವು ವೈಶ್ಯ ಜಾತಿಯ ಮತ್ತು ಧರ್ಮದ ಉದ್ಧಾರಕ್ಕಾಗಿ ವೈಶ್ಯ ಸಮಾಜವು ಶ್ರಮಿಸುತ್ತವೆ. ಹೀಗೆ ಪ್ರತಿಯೊಂದು ಜಾತಿ, ಸಮುದಾಯವು ತಮ್ಮ ತಮ್ಮ ಸಮಾಜಗಳ ಉದ್ಧಾರದ ಧ್ಯೋಯೋದ್ದೇಶಗಳನ್ನು ಇಟ್ಟುಕೊಂಡು ಹುಟ್ಟಿದವುಗಳಾಗಿವೆ. ಅವು ಹೀಗಿವೆ. ವಾಸವಿ ಸಂಘ, ಭಾವಸಾರ ಕ್ಷತ್ರಿಯ ಸಂಘ, ವೀರಶೈವ ಸಂಘ, ಬ್ರಾಹ್ಮಣ ಸಂಘ, ನಾಯಕರ ಸಂಘ, ಕುರುಬ ಸಂಘ, ಗೊಲ್ಲರ ಸಂಘ, ಮುಸ್ಲಿಂರ ಸಂಘ ಹೀಗೆ ಇನ್ನೂ ಅನೇಕ ಸಮುದಾಯಗಳು ಸಮುದಾಯವಾರು ಸಂಘಗಳನ್ನು ನಿರ್ಮಿಸಿಕೊಂಡಿವೆ. ಇನ್ನುಳಿದ ಇತರ ಸಂಘಗಳಾದ ಕನ್ನಡ ರಕ್ಷಣಾ ವೇದಿಕೆ, ಅಂಬೇಡ್ಕರ್ ಸಂಘ, ಮಹಿಳಾ ಸಮಾಜ, ಸ್ವಸಹಾಯ ಸಂಘಗಳು, ಸರ್ವೋದಯ ಸಾಹಿತ್ಯ ಬಳಗ, ನವಚೇತನ ಯುವಕ ಸಂಘ, ವಿಶ್ವಜ್ಯೋತಿ ಯುವಕ ಸಂಘ, ರಾಜೀವ್‌ಗಾಂಧಿ ಯುವಕ ಸಂಘ, ನವಶಕ್ತಿ ಯುವಕ ಸಂಘ, ನವೋದಯ ಸೇವಾ ಸಂಸ್ಥೆ, ಮಾತೃಭೂಮಿ ಯುವಕ ಸಂಘ, ಆದರ್ಶ ಸೇವಾ ಸಂಸ್ಥೆ, ದಲಿತ ಸಂಘರ್ಷ ಸಮಿತಿ, ನಾಟಕ, ಬಯಲಾಟ ಆಡುವ ಕಲಾವಿದರ ಸಂಘ, ಭಜನಾ ಮಂಡಳಿಗಳು ಇತ್ಯಾದಿ ಸಂಘಗಳು ಸಾರ್ವಜನಿಕ ಹಿತಾಸಕ್ತಿಗೆ ಅನುಗುಣವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕ್ರೀಡೆಗಳನ್ನು ಏರ್ಪಡಿಸಿ ಜನಾಕರ್ಷಣೀಯವಾಗಿವೆ. ಇಲ್ಲಿನ ಅನೇಕ ಯುವಕ ಸಂಘಗಳು ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆಯಲ್ಲಿ ನೊಂದಾಯಿಸಿಕೊಂಡು ಶಾಲಾ ಮಕ್ಕಳಿಗಾಗಿ, ಸಾರ್ವಜನಿಕರಿಗಾಗಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡುತ್ತಾ ಕಾರ್ಯಪ್ರವೃತ್ತವಾಗಿವೆ.

ವ್ಯವಸಾಯ ಸೇವಾ ಸಹಕಾರ ಸಂಘ

ಈಗ ಈ ಸಂಘವನ್ನು ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಎಂದು ಕರೆಯಲಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ವ್ಯವಹಾರ ವಹಿವಾಟುಗಳು ಇದ್ದ ಸಂಘವು ಬ್ಯಾಂಕ್ ಆಗಿ ಪರಿವರ್ತನೆ ಹೊಂದುತ್ತದೆ. ರೈತರಿಗೆ ಶೇಕಡ ಐದರಷ್ಟು ಬಡ್ಡಿ ದರದಲ್ಲಿ ಬೆಳೆಸಾಲ, ವ್ಯಾಪಾರಕ್ಕಾಗಿ ಸಾಲ ಕೊಡುವುದು, ಯಶಸ್ವಿನಿ ಕಾರ್ಡನ್ನು ಕೊಡುವ ಮೂಲಕ ಗ್ರಾಮೀಣ ರೈತರಿಗೆ, ಆರೋಗ್ಯ ವೆಚ್ಚವನ್ನು ಸರ್ಕಾರ ಭರಿಸಲು ವ್ಯವಸ್ಥೆ

ಮಾಡುವುದು ಮುಂತಾದ ಉಪಯೋಗಕಾರಿ ಕೆಲಸಗಳನ್ನು ನಿರ್ವಹಿಸುತ್ತದೆ. ಇದಕ್ಕೆ ಕಾರ್ಯದರ್ಶಿ, ಚುನಾಯಿತ ಪ್ರತಿನಿಧಿಗಳು ಇದ್ದು ಒಂದು ಸಮೂಹದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಆದರ್ಶ ಸೇವಾ ಸಂಸ್ಥೆ

೨೦೦೨ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯ ಪ್ರಸ್ತುತ ಅಧ್ಯಕ್ಷರು ನಾಗೇಶ್ ಬಡಿಗೇರ್, ಕಾರ್ಯದರ್ಶಿಯಾಗಿ ಹನುಮೇಶ್ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಘವು ೨೦೦೨ರಲ್ಲಿ ಉಚಿತ ನೇತ್ರ ಚಿಕಿತ್ಸೆಯನ್ನು, ಉಚಿತ ಕನ್ನಡಕವನ್ನು ವಿತರಿಸುವ ಪ್ರಯೋಜನಕಾರಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಇದರಲ್ಲಿ ೪೦ ಜನ ಫಲಾನುಭವಿಗಳು ಇದರ ಸದುಪಯೋಗವನ್ನು ಪಡೆದುಕೊಂಡರು ಎಂಬುದಾಗಿ ಸಂಘದ ಸದಸ್ಯರಾದ ಮಹ್ಮದ್ ಪಾಷಾ ತಿಳಿಸಿದರು. ಇತ್ತೀಚಿಗೆ ಉಚಿತ ಗ್ರಂಥಾಲಯ ವ್ಯವಸ್ಥೆಯನ್ನು ಮಾಡಿರುವುದು ಇವರ ಸಮಾಜ ಸೇವಾಪರ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ರಾಜೀವ್‌ಗಾಂಧಿ ಯುವಕ ಸಂಘ

ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್‌ನಲ್ಲಿ ಯುವನಾಯಕರಾಗಿದ್ದ ರಾಜೀವ್‌ಗಾಂಧಿಯವರ ಹೆಸರಿನಲ್ಲಿ ಮತ್ತು ಅವರಿಂದ ದೊರೆಯುವ ಆರ್ಥಿಕ ನೆರವಿನೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಕನಕಗಿರಿಯಲ್ಲಿ ಇತ್ತೀಚಿಗೆ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಸಂಘವು ಕಲೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಚಟುವಟಿಕೆಗಳು, ಪ್ರತಿಭಾ ಪುರಸ್ಕಾರ, ಆರೋಗ್ಯ ಶಿಬಿರ, ನೇತ್ರ ಚಿಕಿತ್ಸೆ ಶಿಬಿರ, ಸನ್ಮಾನ, ಸಸಿ ನೆಡುವುದು, ಬಿಸಿಯೂಟಕ್ಕೆ ತಟ್ಟೆ ವಿತರಣೆ ಇಂತಹ ಅನೇಕ ಸೇವಾ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಈ ಸಂಘದ ಪ್ರಸ್ತುತ ಅಧ್ಯಕ್ಷರಾದ ಅಂಬಾಜಿರಾವ್, ಕಾರ್ಯದರ್ಶಿಗಳಾದ ಲಕ್ಷ್ಮೀಕಾಂತರು ಸಾಂಘಿಕ ಪ್ರಯತ್ನದೊಂದಿಗೆ ಅರ್ಥಪೂರ್ಣ ಸೇವೆಯಲ್ಲಿ ತೊಡಗಿದ್ದಾರೆ.

ಸರ್ವೋದಯ ಸಾಹಿತ್ಯ ಬಳಗ (ರಿ.)

ಇದು ೧೯೯೫ರಲ್ಲಿ ಸ್ಥಾಪಿತವಾದ ಸಂಘವಾಗಿದೆ. ಸಾಹಿತ್ಯಕ ಅಭಿವೃದ್ಧಿ ಪ್ರತಿಭಾನ್ವೇಷಣೆಯಂತಹ ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿಸಲಾಗಿದೆ. ವಿಚಾರಗೋಷ್ಠಿ, ನೇತ್ರ ಪರೀಕ್ಷಾ ಶಿಬಿರ, ಸ್ವಚ್ಛತಾ ಕಾರ್ಯಕ್ರಮ, ಚುಟುಕು ಕವಿಗೋಷ್ಠಿಗಳು ಇತ್ಯಾದಿ ಪ್ರಯೋಜನಾತ್ಮಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ತಾಲೂಕಿನಲ್ಲಿಯೇ ವಿಶಿಷ್ಟವಾಗಿ ಶಿಕ್ಷಕರ ದಿನಾಚರಣೆಯಂದು ಆಯ್ದು ಶ್ರೇಷ್ಠ ಶಿಕ್ಷಕರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ನವಚೇತನ ಯುವಕ ಸಂಘ

ಕಲೆ, ಸಾಹಿತ್ಯ, ಭಾಷೆ, ಪ್ರತಿಭಾ ಪುರಸ್ಕಾರಗಳು, ಕ್ರೀಡೆ ಇತ್ಯಾದಿ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಇತ್ತೀಚಿನ ದಿನಗಳಲ್ಲಿ ಕ್ರಿಯಾಶೀಲ ಸಂಘವೆನಿಸಿಕೊಂಡು ಬಂದಿದೆ. ತಾಲೂಕಾ ಮಟ್ಟದ ಕ್ರೀಡಾಕೂಟಗಳ ಸಂಘಟನೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದೆ.

ಮಾತೃಭೂಮಿ ಯುವಶಕ್ತಿ ಸಂಘ

ಇದರ ಅಧ್ಯಕ್ಷರಾದ ಮಹ್ಮದ್‌ರಫಿ, ಕಾರ್ಯದರ್ಶಿಗಳಾದ ಮಧುಸೂದನರೆಡ್ಡಿಯವರು ಸಂಘದ ಇತರೆ ಪದಾಧಿಕಾರಿಗಳೊಂದಿಗೆ ಸೇರಿ ಬಡ ಮಕ್ಕಳಿಗೆ ನೋಟ್‌ಬುಕ್ ವಿತರಣೆ, ರಕ್ತದ ಗುಂಪಿನ ಉಚಿತ ಪರೀಕ್ಷೆ ಇನ್ನು ಮುಂತಾದ ಅರ್ಥಪೂರ್ಣ ಸಮಾಜ ಸೇವಾ ಚಟುವಟಿಕೆಯಲ್ಲಿ ತೊಡಗಿದ್ದಾರೆ.

ಹೋರಾಟಗಳು

ತಾಲೂಕಾ ರಚನೆಗಾಗಿ ಹೋರಾಟ

ನಾನಾ ಸಂಘ-ಸಂಸ್ಥೆಗಳು, ನಾನಾ ಪಕ್ಷಗಳು ಪಕ್ಷಾತೀತವಾಗಿ ಹೋರಾಡಿ, ಕನಕಗಿರಿಯನ್ನು ತಾಲೂಕಾ ಕೇಂದ್ರವಾಗಿ ಮಾಡಲು ಸರ್ಕಾರವನ್ನು ಒತ್ತಾಯಿಸಿವೆ. ೧೯೭೮ರಲ್ಲಿ ಕನಕಗಿರಿಯು ಶಾಸಕರ ಮತಕ್ಷೇತ್ರವಾಗಿ ಗುರುತಿಸಲ್ಪಟ್ಟಿದೆ. ೧೯೮೩ರಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕನಕಗಿರಿ ತಾಲೂಕಾ ರಚನೆಗಾಗಿ ಹೋರಾಟ ಆರಂಭವಾಗಿತ್ತು. ಮಠಾದೀಶರೂ ಸಹ ಪಾಲ್ಗೊಂಡಿದ್ದರು. ಬರಬರುತ್ತ ಈ ಹೋರಾಟ ರಾಜಕೀಯ ಸ್ವರೂಪ ಪಡೆಯಿತು. ಕೆಲವೊಮ್ಮೆ ಹೋರಾಟವು ಉಗ್ರ ಸ್ವರೂಪ ಪಡೆದು ಕೆಲವರ ಮೇಲೆ ಕೇಸ್ ದಾಖಲಾಯಿತು. ಒಟ್ಟಾರೆ ಅವಿರತವಾದ ಈ ಹೋರಾಟದ ಫಲವೋ ಏನೋ, ಇತ್ತೀಚೆಗೆ ಕನಕಗಿರಿಯನ್ನು ತಾಲೂಕಾ ಕೇಂದ್ರವಾಗಿ ಮಾಡಲು ಸರ್ಕಾರ ಸಹಮತ ವ್ಯಕ್ತಪಡಿಸಿದೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಕನಕಗಿರಿಯ ಜನತೆ ಪಟಾಕಿ ಸಿಡಿಸುತ್ತ ಭಾರಿ ಸಂಭ್ರಮಾಚರಣೆ ಮಾಡಿಕೊಂಡರು.

ಕೃಷ್ಣಾನದಿಯ ಬಿ ಸ್ಕೀಂ ನೀರಿಗಾಗಿ ಹೋರಾಟ

ಈ ಹೋರಾಟವೂ ಸಹ ಪಕ್ಷಾತೀತವಾಗಿ, ಮಠಾಧೀಶರ ಬೆಂಬಲದೊಂದಿಗೆ, ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ನಡೆಯಿತು. ಸು.೧೦ ವರ್ಷಗಳಿಂದ ಮಹಾರಾಷ್ಟ್ರದ ಹಿನ್ನೀರು ಕೃಷ್ಣಾನದಿಯ ಮೂಲಕ ಆಂಧ್ರ ಪ್ರದೇಶಕ್ಕೆ ವ್ಯರ್ಥವಾಗಿ ಸೇರತೊಡಗಿತ್ತು. ಇದನ್ನು ಪ್ರಶ್ನಿಸಿದ ಫಲವಾಗಿ ಸರಕಾರವು ಯಲಬುರ್ಗಾ ತಾಲೂಕಿನ ವಂಕಲಕುಂಟಿಯವರೆಗೆ ಲಿಫ್ಟ್ ಇರಿಗೇಶನ್ ನೀರನ್ನು ಬಿಡತೊಡಗಿತು. ಆಗ ಕನಕಗಿರಿ ಸೇರಿದಂತೆ ಈ ಭಾಗದ ಒಣ ಬೇಸಾಯದ ಪ್ರದೇಶಗಳಾದ ಕುಷ್ಟಗಿ, ಕೊಪ್ಪಳ, ವೆಂಕಟಗಿರಿ ಮುಂತಾದ ಗ್ರಾಮಗಳಿಗೆ ಈ ಸ್ಕೀಂ ನೀರಿನ ಮೇಲೆ ಗಮನ ಹೋಯಿತು. ವಂಕಲಕುಂಟಿಯವರೆಗೆ ಬಂದ ನೀರನ್ನು ಕುಷ್ಟಗಿ, ಕನಕಗಿರಿ ಮುಖಾಂತರ ನೀರನ್ನು ಸೇರಿಸಬೇಕೆಂಬ ಬೇಡಿಕೆಯನ್ನಿಟ್ಟು ಸುಮಾರು ೫-೬ ವರ್ಷಗಳಿಂದಲೂ ಹೋರಾಟ, ಬಂದ್, ಉಪವಾಸ, ಸತ್ಯಾಗ್ರಹಗಳಂತಹ ಅನೇಕ ಪ್ರತಿಭಟನೆಗಳು ಇಲ್ಲಿ ನಡೆದವು. ಹೋರಾಟದ ಈ ಧ್ವನಿ ಈಗಲೂ ಕೇಳಿಬರುತ್ತದೆ. ಸರ್ಕಾರ ಇವರ ಬೇಡಿಕೆಯನ್ನು ಆಲಿಸಿ ಆಗಸ್ಟ್ ೨೦೦೯ರಲ್ಲಿ ಗುಲ್ಬರ್ಗಾದಲ್ಲಿ ನಡೆದ ಸಚಿವ ಸಂಪುಟದಲ್ಲಿ ಮಹತ್ತರವಾದ ಈ ಯೋಜನೆಗೆ ಹಸಿರು ನಿಶಾನೆ ತೋರಿಸಿದೆ. ಸರ್ಕಾರದ ಈ ತೀರ್ಮಾನವು ತಮ್ಮ ಹೋರಾಟಕ್ಕೆ ಸಂದ ಫಲ ಎಂಬುದಾಗಿ ಕನಕಗಿರಿಯ ಜನತೆ ತುಂಬಾ ಸಂತೋಷದಿಂದ ಪ್ರತಿಕ್ರಿಯಿಸುತ್ತಾರೆ.

ಕನಕಗಿರಿಯ ಉತ್ಸವದ ಹೋರಾಟ

ಕನಕಗಿರಿಯ ಉತ್ಸವವನ್ನು ಸರ್ಕಾರವು ನಡೆಸಬೇಕೆಂಬುದೂ ಸಹ ಈ ಭಾಗದ ಜನರ ಬಹುದಿನದ ಬೇಡಿಕೆಯಾಗಿತ್ತು. ಅಂತೆಯೇ ಈ ಕ್ಷೇತ್ರದ ನೂತನ ಶಾಸಕರೂ, ಸಚಿವರೂ ಆದಂತಹ ಶಿವರಾಜ್ ತಂಗಡಿಯವರು ಈ ಬೇಡಿಕೆಗೆ ಸ್ಪಂದಿಸಿ ಪ್ರತಿವರ್ಷ ಉತ್ಸವ ನಡೆಸುವಂತೆ ಸರ್ಕಾರದ ಮೇಲೆ ಒತ್ತಡ ತಂದು ಯಶಸ್ವಿಯಾದರು.

ಅಧ್ಯಾಯ - ೫

ಆಚರಣೆಗಳು

ಜೀವನಾವರ್ತನವು ಮನುಷ್ಯನ ಹುಟ್ಟಿನಿಂದ ತೊಡಗಿ ಸಾವಿನಲ್ಲಿ ಕೊನೆಗೊಳ್ಳುತ್ತದೆ. ಇವುಗಳ ನಡುವೆ ಅನೇಕ ಸ್ಥಿತ್ಯಂತರಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ನಡೆಸುವ ಆಚರಣೆಗಳನ್ನು ಸ್ಥಿತ್ಯಂತರದ ವಿಧಿಗಳು ಅಥವಾ ಪರಿವರ್ತನೆಯ ವಿಧಿಗಳೆಂದು ಕರೆಯುವರು. ಎಷ್ಟೇ ಆಧುನಿಕತೆಗೆ ಒಳಗಾದರೂ ಸಮುದಾಯವು ಆಚರಣೆ, ಸಂಪ್ರದಾಯಗಳಿಂದ ಹೊರತಾಗಿಲ್ಲ. ಇದು ಅನಿವಾರ್ಯವೇನೋ ಅನಿಸಿದೆ. ಡಾ. ದೇ.ಜ.ಗೌ. ಹೇಳುವಂತೆ "ಮಾನವ ಜೀವನವನ್ನು ರೂಪಿಸುವಲ್ಲಿ ಸಂಪ್ರದಾಯ ಆಚರಣೆಗಳಿಗೆ ವಿಶೇಷ ಮಹತ್ವವಿದೆ. ಅವು ಬಾಳಿನ ಅವಿಭಾಜ್ಯ ಅಂಗಗಳಾಗಿವೆ". ಸಮಾಜವನ್ನು ಒಂದುಗೂಡಿಸುವ ಮತ್ತು ಮುಂದಕ್ಕೊಯ್ಯುವ ಶಕ್ತಿಪುಂಜಗಳಾಗಿವೆ. ಅವನ ನಡಾವಳಿ ಹಾಗೂ ವ್ಯವಹಾರಗಳು ಸಂಪ್ರದಾಯಬದ್ಧವಾಗಿಯೇ ಜರುಗುತ್ತವೆ. ಭೌಗೋಳಿಕ ಮತೀಯ ಹಾಗೂ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮವನ್ನವಲಂಬಿಸಿ ಸಂಪ್ರದಾಯಗಳು ಅಥವಾ ಆಚರಣೆಗಳು ಉಗಮಗೊಳ್ಳುತ್ತವೆ. ಇವುಗಳನ್ನು ಜೀವನಾವರ್ತನ ಆಚರಣೆಗಳು ಹಾಗೂ ವಾರ್ಷಿಕಾವರ್ತನದ ಆಚರಣೆಗಳೆಂದು ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ.

೫.೧. ಜೀವನಾವರ್ತನ ಆಚರಣೆಗಳು

೫.೧.೧. ಸೀಮಂತ : ಗರ್ಭಿಣಿಯರಿಗೆ ವಿವಿಧ ಹಂತಗಳಲ್ಲಿ ಮಾಡುವ ಆಚರಣೆಗಳು ಕನಕಗಿರಿಯಲ್ಲಿ ವೈವಿಧ್ಯತೆಯಿಂದ ಕೂಡಿವೆ. ಸಮುದಾಯ, ಜಾತಿ, ಧರ್ಮಕ್ಕನುಗುಣವಾಗಿ ಈ ಆಚರಣೆಗಳು ವ್ಯತ್ಯಾಸಗೊಳ್ಳುವುದನ್ನು ಕಾಣಬಹುದಾಗಿದೆ. ಗರ್ಭಿಣಿಯರಿಗಾಗಿ ಆಚರಿಸುವ ಸಂಸ್ಕಾರ, ಸಂಪ್ರದಾಯವೆಂದರೆ ಸೀಮಂತ ಕಾರ್ಯ. ಇದರಲ್ಲಿ ಎರಡು ವಿಧಗಳಿವೆ. ಒಂದು 'ಕಳ್ಳಕುಬುಸ' ಇನ್ನೊಂದು 'ದೊಡ್ಡ ಕುಬುಸ' ಇದನ್ನು ಜನಪದರು ಕುಬುಸ ಮಾಡುವುದು, ಸೀಮಂತ ಮಾಡುವ ಕಾರ್ಯ ಎಂದು ಕರೆಯುತ್ತಾರೆ.

ಕಳ್ಳ ಕುಬುಸ : ಚೊಚ್ಚಿಲು ಗರ್ಭಿಣಿಯರಾದ ನಾಲ್ಕನೇ ಅಥವಾ ಐದನೇ ತಿಂಗಳಲ್ಲಿ 'ಕಳ್ಳ ಕುಬುಸ' ಎಂದು ತರುತ್ತಾರೆ. ಇದನ್ನು 'ಬಯಕೆ ಬುತ್ತಿ' ಎಂತಲೂ ಕರೆಯುತ್ತಾರೆ. ಕಳ್ಳ ಕುಬುಸ ಎಂದರೆ ಹೆಚ್ಚು ಸುದ್ದಿ ಮಾಡದೆ ತರುವದು. ಇದಕ್ಕೆ ಮೂಲ ಕಾರಣ ಕೇಳಿದಾಗ 'ತಿಂಗಳ ಬಸುರಲ್ಲ ತಂಗಳ ಊಟಲ್ಲ'

ಎಂಬ ಗಾದೆಯಂತೆ ಈ ಸಂದರ್ಭದಲ್ಲಿ ಗರ್ಭ ಹೋಗುವ ಸಾಧ್ಯತೆಯೂ ಉಂಟು. ಹೀಗಾಗಿ ಈ ಕಾರ್ಯವನ್ನು ಸದ್ದಿಲ್ಲದೆ ಮಾಡಿ ಮುಗಿಸುತ್ತಾರೆ. ಗರ್ಭಿಣಿಯು ಬಯಸಿದ ತಿಂಡಿಯನ್ನು ತಪ್ಪದೆ ಕೊಡಬೇಕು. ಇಲ್ಲದಿದ್ದರೆ ಹುಟ್ಟುವ ಮಕ್ಕಳಿಗೆ ಕಿವಿ ಸೋರುತ್ತದೆ ಎಂಬ ನಂಬಿಕೆಯೊಂದು ಇಲ್ಲಿ ಪ್ರಚಲಿತ. ಗರ್ಭಿಣಿಗೆ ಸಮಯಕ್ಕೆ ಸರಿಯಾಗಿ, ಪೌಷ್ಟಿಕ ಆಹಾರವನ್ನು ಒದಗಿಸುವ ಹಿನ್ನೆಲೆಯಲ್ಲಿ ಇಂತಹ ನಂಬಿಕೆಗಳು ರೂಢಿಯಲ್ಲಿರಬಹುದು. ಆದಕಾರಣ ತವರಿನವರು ಈ ಸಂದರ್ಭದಲ್ಲಿ ಬಯಕೆ ಬುತ್ತಿ ತರುತ್ತಾರೆ. ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಚಪಾತಿ, ನಾನಾ ತರಹದ ಕಾಳಿನ ಪಲ್ಯ, ಬದ್ನೆಕಾಯಿ ಪಲ್ಯ, ಚಟ್ನಿ, ಚಟ್ನಿ ಪುಡಿ, ಚಿತ್ರಾನ್ನ, ಫಲಾವ್, ಪುಳಿಯೊಗರೆ, ಹೋಳಿಗೆ, ಮೈಸೂರು ಪಾಕ್, ಜಿಲೇಬಿ, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಶ್ಯಾವಿಗೆ ಪಾಯಸ, ಉಂಡಿ ಹೀಗೆ ವಿಶಿಷ್ಟ ಭಕ್ಷ್ಯಗಳನ್ನು ಬಯಕೆ ಬುತ್ತಿಯಾಗಿ ತರುತ್ತಾರೆ. ತವರಿನವರು ತಂದ ಬಗೆ ಬಗೆಯ ಅಡಿಗೆಗಳನ್ನು ಗರ್ಭಿಣಿ ಕೈಯಿಂದ ಪೂಜೆ ಮಾಡಿಸಿ, ಮುಟ್ಟಿಸಿ ಎರಡು ಕಣಗಳನ್ನು ಆಕೆಗೆ ಉಡಿ ತುಂಬಿ ಆರತಿ ಮಾಡಿ ತಂದ ಬುತ್ತಿಯನ್ನು ಮನೆ ಮಂದಿಯಲ್ಲ ಊಟ ಮಾಡುತ್ತಾರೆ.

ದೊಡ್ಡ ಕುಬುಸ : ಸಾಮಾನ್ಯವಾಗಿ ಗರ್ಭಿಣಿಯಾದ ಐದರಿಂದ ಒಂಬತ್ತು ತಿಂಗಳವರೆಗಿನ ಸಮಯದಲ್ಲಿ ತವರು ಮನೆಯವರು ಗಂಡನ ಮನೆಯಲ್ಲಿರುವ ಮಗಳಿಗೆ ಮಾಡುವ ಕಾರ್ಯ ಇದಾಗಿದೆ. ಊಟ ಉಪಚಾರದ ವ್ಯವಸ್ಥೆಯನ್ನು ಅಥವಾ ಖರ್ಚುವೆಚ್ಚವನ್ನು ತವರಿನವರು ವಹಿಸಿಕೊಳ್ಳುತ್ತಾರೆ. ಗೊತ್ತಾದ ಒಂದು ಶುಭ ಮುಹೂರ್ತದಲ್ಲಿ ತವರಿನವರು ಸೀರೆ ಮಾಡುತ್ತಾರೆ. ನಂತರ ಗಂಡನ ಮನೆಯವರು, ಹತ್ತಿರದ ನೆಂಟರಿಷ್ಟರು, ಆಪ್ತರು, ನೆರೆಹೊರೆಯವರು ಸೀರೆ, ಕಣ, ಉಡಿ ತುಂಬುತ್ತಾರೆ. ಅನುಕೂಲವಿದ್ದವರು ಮಗಳಿಗೆ ಬಂಗಾರವನ್ನು ಸಹ ಕೊಡುತ್ತಾರೆ. ಈ ಸಂದರ್ಭದಲ್ಲಿ ಗರ್ಭಿಣಿಯನ್ನು ಮತ್ತು ಅವಳ ಪತಿಯನ್ನು ಕೂಡಿಸಿ ಹೂಮಾಲೆ ಹಾಕಿ, ದಂಡೆ ಹಾಕಿ ಉಡಿತುಂಬಿ ಆರತಿ ಬೆಳಗುತ್ತಾರೆ. ನಂತರ ಬಂದ ನೆಂಟರೆಲ್ಲ ಆರತಿ ಮಾಡಿ ಉಡಿ ತುಂಬುತ್ತಾರೆ. ಈ ಸಂದರ್ಭದಲ್ಲಿ ಬಸುರಿ ಹಾಡನ್ನು ಹಾಡುತ್ತಾರೆ. ಗರ್ಭಿಣಿಗೆ ಇಷ್ಟವಾದ ಎಲ್ಲಾ ತರಹದ ತಿಂಡಿಗಳಾದ ಬೆಸನ್ ಉಂಡೆ, ಹೆಸರುಂಡೆ, ಕರ್ಜಿಕಾಯಿ, ನಿಪ್ಪಟ್ಟು, ಕೋಡುಬಳೆ, ಅವಲಕ್ಕಿ, ಮೈಸೂರು ಪಾಕ್, ಜಿಲೇಬಿ ಮುಂತಾದ ತಿಂಡಿಗಳನ್ನು ಕಾರ್ಯಕ್ರಮದಲ್ಲಿ ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಗರ್ಭಿಣಿಯು ಅವುಗಳನ್ನು ಮುಟ್ಟುತ್ತಾಳೆ. ಅದು ಅವಳು ಸ್ವೀಕರಿಸಿದುದರ ಸಂಕೇತವಾಗಿರುತ್ತದೆ. ಗರ್ಭಿಣಿಯು ಮಾನಸಿಕವಾಗಿ ದೈಹಿಕವಾಗಿ ತುಂಬಾ ಸ್ವಸ್ಥ್ಯವಾಗಿರಬೇಕಾಗುತ್ತದೆ. ಸದಾ ಉಲ್ಲಾಸಿತಳಾಗಿರುವುದರಿಂದ ಹುಟ್ಟುವ ಮಗು ಎಲ್ಲಾ ರೀತಿಯಿಂದಲೂ ಚೆನ್ನಾಗಿರುತ್ತದೆ ಎಂಬ ದೃಷ್ಟಿಯಿಂದ ಗರ್ಭಿಣಿಯರಿಗೆ ಈ ರೀತಿಯ ಆಚರಣೆಗಳನ್ನು ಮಾಡಿ ಸಂತೋಷ ಪಡಿಸುವ ಉದ್ದೇಶ ಇದಾಗಿದೆ.

ಸೀಮಂತ ಕಾರ್ಯಕ್ಕೆ ಬಂದವರಿಗೆಲ್ಲ ಊಟದ ವ್ಯವಸ್ಥೆ ಮಾಡಲಾಗುತ್ತದೆ. ಬಯಕೆ ಬುತ್ತಿ ತಂದ ರೀತಿಯಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಅಡಿಗೆ ಮಾಡಿಕೊಂಡು ತಂದಿರುತ್ತಾರೆ. ಮಾರನೆ ದಿನ ತವರಿನವರು

ಮಗಳನ್ನು ಹೆರಿಗೆಗೆಂದು ಕರೆದುಕೊಂಡು ಹೋಗುತ್ತಾರೆ. ಹೋಗುವಾಗ ಅವಳಿಗೆ ಉಡಿ ತುಂಬಿದ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅವಳ ಹೆರಿಗೆ ಆದ ನಂತರವೇ ಆ ಕಾಯಿಗಳನ್ನು ತೊಟ್ಟಿಲ ದಿನ ಒಡೆಯುತ್ತಾರೆ. ಕುಬುಸ ಮಾಡುವ ಪದ್ಧತಿ ಕೆಲವರಲ್ಲಿ ನಡೆ ಇದ್ದರೆ, ಕೆಲವರಲ್ಲಿ ನಡೆ ಇರುವುದಿಲ್ಲ. ಅಂತವರು ಬರೀ ಬಯಕೆ ಬುತ್ತಿ ತರುತ್ತಾರೆ. ತಂದ ನಂತರ ಉಳಿದ ಬಂದು ಬಳಗ ಬಟ್ಟೆ ಮಾಡುತ್ತಾರೆ. ಚೊಚ್ಚಲ ಗರ್ಭಿಣಿಯಾದವಳು ಹೆರಿಗೆಯಾಗುವತನಕ ಹೊಸ ಬಟ್ಟೆಗಳನ್ನು ಉಡುವಂತಿಲ್ಲ. ಬಹುತೇಕ ಸಮುದಾಯಗಳಲ್ಲಿ ಈ ರೀತಿಯಾದ ಆಚರಣೆಗಳು ಕಂಡುಬರುತ್ತವೆ.

೫.೧.೨. ಜನನ, ನಾಮಕರಣ ಸಂಪ್ರದಾಯ

ಪ್ರಸವದ ದಿನದಿಂದ ೯ ಅಥವಾ ೧೧ ದಿನಗಳವರೆಗೆ ಸೂತಕದ ದಿನವೆಂದು ಭಾವಿಸುತ್ತಾರೆ. ಈ ದಿನಗಳಲ್ಲಿ ಮನೆಯಲ್ಲಿ ಯಾವುದೇ ಶುಭಕಾರ್ಯ, ಪೂಜೆ, ಪುನಸ್ಕಾರಗಳು ನಡೆಯುವುದಿಲ್ಲ. ೯ನೇ ದಿನ ಮನೆ ತೊಳೆದುಕೊಂಡು ಬಾಣಂತಿ ಸಮೇತ ಗಂಗೆಗೆ ಹೋಗಿ ಬಂದ ಮೇಲೆ ಸೂತಕ ಮುಗಿಯುತ್ತದೆ. ಪ್ರಸವ ವೇದನೆ ಸೂಚನೆ ಕಂಡು ಬಂದಾಗ ಆಕೆಗೆ ಬಿಸಿ ನೀರಿನಲ್ಲಿ ಚೆನ್ನಾಗಿ ಸ್ನಾನ ಮಾಡಿಸಿ, ಶ್ಯಾವಿಗೆ ಪಾಯಸ, ಜೀರಿಗೆ ಕಷಾಯ ಕುಡಿಸುವ ಪದ್ಧತಿ ಕೆಲವರಲ್ಲಿದೆ. ಮೊದಲೆಲ್ಲ ಹೆರಿಗೆಗಳು ಮನೆಯಲ್ಲೇ ಆಗುತ್ತಿದ್ದವು. ಈಗೀಗ ಆಸ್ಪತ್ರೆಯಲ್ಲಿ ಹೆರಿಗೆಯಾಗುವುದು ಸಹಜವಾಗಿದೆ. ಮನೆಯಲ್ಲಿ ಹೆರಿಗೆಯಾದರೆ ಸೂಲಿಗಿತ್ತಿಯ ಅಥವಾ ಅನುಭವಿಕ ಮಹಿಳೆಯರ ನೆರವು ಪಡೆಯುತ್ತಾರೆ. ಹೆರಿಗೆಯಾದ ಕೂಡಲೆ ಸೂಲಗಿತ್ತಿಯಾಗಲಿ ಡಾಕ್ಟರಾಗಲಿ ಮಗುವಿನ ಹೊಕ್ಕಳು ಬಳ್ಳಿ ಕತ್ತರಿಸುವರು. ಎರಡು ಕಾಲುಗಳನ್ನು ಮೇಲಕ್ಕೆತ್ತಿ ತಲೆ ಕೆಳಗೆ ಮಾಡಿ ಜೋತಾಡಿಸುವರು. ಮೊದಲೆಲ್ಲ ಕೂಸು ಹುಟ್ಟಿದ ಕೂಡಲೆ ಕಂಚಿನ ಗಂಗಾಳ (ತಟ್ಟೆ) ಬಾರಿಸುತ್ತ ಲಿಂಗವನ್ನು ಸಾರುತ್ತಿದ್ದರು. ಈ ಪದ್ಧತಿ ಕಡಿಮೆಯಾಗತೊಡಗಿದೆ. ಮಗು ಹುಟ್ಟಿದ ಸಮಯ, ವಾರ, ಗಳಿಗೆ ಆಧಾರದಲ್ಲಿ ಮಗುವಿನ ರಾಶಿ, ನಕ್ಷತ್ರ ಜಾತಕ ಬರೆಸುತ್ತಾರೆ. ಮಗು ಹುಟ್ಟಿದ ಮುಹೂರ್ತ ಸರಿ ಇಲ್ಲದಿದ್ದರೆ ಶಾಂತಿ ಮಾಡಿಸುವುದು, ತಂದೆಯಾದವರು ಮೊದಲು ಮಗುವಿನ ಮುಖವನ್ನು ಎಣ್ಣೆಯ ಪ್ರತಿಬಿಂಬದಲ್ಲಿ ನೋಡುವುದು ಇನ್ನು ಮುಂತಾದ ಪದ್ಧತಿಗಳಿವೆ. ಕುರುಬ ಸಮುದಾಯದಲ್ಲಿ ಮಗು ಹುಟ್ಟಿದ ಮೇಲೆ ಮೊರದಲ್ಲಿ ಹಾಕಿ ಬೆಚ್ಚು ಬಿಡಿಸುವರು. ಶೆಟ್ಟಿ ಬಣಜಿಗರಲ್ಲಿ ಮಗು ಹುಟ್ಟಿದ ಕೂಡಲೆ ಸೋದರತ್ತೆ ಅಥವಾ ಅಜ್ಜಿ (ಚುರುಕಾಗಿರುವಂತವರು) ಮಗುವಿನ ತುಟಿಗೆ ಜೇನುತುಪ್ಪ ಸವರುತ್ತಾರೆ. ಚುರುಕಾಗಿರುವವರು ಈ ಕೆಲಸ ಮಾಡಿದರೆ ಮಗು ಮುಂದೆ ಚುರುಕಾಗಿರುತ್ತದೆಂಬ ನಂಬಿಕೆ. ಮುಸ್ಲಿಂ ಸಮುದಾಯದವರು ಮಗು ಹುಟ್ಟಿದ ಕೂಡಲೆ ಹೊಸ ಬಟ್ಟೆ ಹಾಕಿ ಮುಲ್ಲಾಗಳ ಕೈಯಲ್ಲಿ ಹೆಸರು ಕರೆಸುವದರೊಂದಿಗೆ ಮಗುವಿನ ಎಡಕಿವಿಯಲ್ಲಿ ನಮಾಜ್ ಮತ್ತು ಬಲಕಿವಿಯಲ್ಲಿ ಅಜಾಂ ಮಂತ್ರವನ್ನು ಉಚ್ಚರಿಸುವರು. ಹಿಂದಲೇ ಉತ್ತತ್ತಿಗೆ ಜೇನುತುಪ್ಪ ಸವರಿ ಮಗುವಿಗೆ ಬಾಯಿಗೆ ಸವರುತ್ತಾರೆ. ಮಾದಿಗ ಸಮುದಾಯದ ಮಗುವನ್ನು ಐದು ದಿನ ಮೊರದಲ್ಲಿಡುತ್ತಾರೆ. ಕೆಲವರು ಶಟಿಗೆಪ್ಪ ಅಥವಾ ಇದಿಮಾಯಿ ಪೂಜೆಯನ್ನು ಹೆರಿಗೆಯಾದ ೩ನೇ ದಿನದಲ್ಲಿ ಮಾಡುತ್ತಾರೆ. ವೀರಶೈವರಿಂದ ಹಿಡಿದು ಎಲ್ಲಾ ವರ್ಗದ ಜನರಲ್ಲಿ ಬಾಣಂತಿಗೆ ಅರಿಸಿಣ, ಬೇವಿನ ಸೊಪ್ಪು ಸ್ವಲ್ಪ ಉಪ್ಪನ್ನು ಹಬೆಯಾಡುವ

ಬಿಸಿ ನೀರಿನಲ್ಲಿ ಹಾಕಿ ಸ್ನಾನ ಮಾಡಿಸಿ, ಹೊರಸಿನ ಮೇಲೆ ಮಲಗಿಸಿ ಕೆಳಗಡೆ ಬೆಂಕಿ (ಇಲಿಕಿ) ಇಟ್ಟು ಮೈಕಾಯಿಸುತ್ತಾರೆ. ಹೀಗೆ ಮಾಡುವದರಿಂದ ಹೆರಿಗೆ ಸಮಯದಲ್ಲಿ ಸಡಿಲಗೊಂಡ ಮೈ ಗಟ್ಟಿಯಾಗುತ್ತದೆ. ಶಕ್ತಿಗಾಗಿ ಕೊಬ್ರಿಕಾರ ಅಥವಾ ಕಾರ್ದಬ್ಬು ತಿನ್ನಿಸುತ್ತಾರೆ. ಕೆಲವರು ಬ್ರಾಂಡಿ ಕುಡಿಸುತ್ತಾರೆ. ಕಾರದಚ್ಚನ್ನು ತವರಿನವರು ಮಾಡುವುದಲ್ಲದೆ ಗಂಡನ ಮನೆಯವರೂ ತರುತ್ತಾರೆ.

ನಾಮಕರಣ ಆಚರಣೆ

ನಾಮಕರಣವನ್ನು ಮಗು ಹುಟ್ಟಿದ ೧೬ನೇ ದಿನದಂದು ಅಥವಾ ಮೂರು ತಿಂಗಳಲ್ಲಿ ಅಥವಾ ತಮಗೆ ಅನುಕೂಲವಾದ ದಿನಗಳಂದು ಮಾಡುತ್ತಾರೆ. ಈ ಆಚರಣೆ ಎಲ್ಲ ಜನಪದ ವರ್ಗಗಳಲ್ಲಿ ಕಂಡುಬರುತ್ತದೆ. ಬಂಧು ಬಳಗ ನೆಂಟರಿಷ್ಟರು ಅಕ್ಕಪಕ್ಕದ ಮನೆಯವರನ್ನು ನಾಮಕರಣಕ್ಕೆ ಕರೆದು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಮಗುವಿಗೆ ಸೋದರತ್ತೆ ಅಥವಾ ಮಾವಂದಿರು ಹೆಸರಿಡುವುದುಂಟು. ಮಗುವಿನ ಹೆಸರು ಕರೆಯುವ ಮೊದಲು ಮಗುವಿಗೆ ಯಾವುದಾದರು ಐದು ದೇವರ ಹೆಸರುಗಳನ್ನು ಕರೆದು ಮಗುವಿಗೆ ಇಡಬೇಕಾದ ಹೆಸರನ್ನು ಕರೆಯುತ್ತಾರೆ. ಮಗುವಿಗೆ ನಾಮಕರಣ ಮಾಡುವಾಗ ಮಗುವಿನ ಹೆಸರು ಹೇಳಿ ಕೊನೆಗೆ 'ಕುಟಟ್ಟಕುರ್‍' ಎಂದು ಹೇಳುತ್ತಾರೆ. ಇದೇ ಸಮಯದಲ್ಲಿ ಹೆಸರಿಡುವವರ ಬೆನ್ನಿಗೆ ಅಲ್ಲಿ ಸುತ್ತಲೂ ಸೇರಿದ ಜನರು ತಮಾಷೆಗೆ ಗುದ್ದುತ್ತಾರೆ. ವೈಶ್ಯ ಸಮುದಾಯದಲ್ಲಿ ಮಗುವಿಗೆ ಹೆಸರಿಡುವ ಮೊದಲು ಹೆಸರಿಡುವವರು ಇಬ್ಬರು ತೊಟ್ಟಿಲಿನ ಎದುರುಬದುರು ನಿಂತು ರುಬ್ಬುವ ಗುಂಡಕಲ್ಲನ್ನು ಕೈಯಲ್ಲಿ ಹಿಡಿದುಕೊಂಡು ತೊಟ್ಟಿಲಿನಿಂದ ಮೇಲೆ ಕೆಳಕ್ಕೆ ಸುತ್ತು ಹಾಕುವ ಪದ್ಧತಿ ಇದೆ. ವೀರಶೈವರಲ್ಲಿ ನಾಮಕರಣದ ದಿನ ಮನೆಯನ್ನು ಶುಚಿಗೊಳಿಸಿ, ಮಗುವಿಗೆ ಲಿಂಗಧಾರಣೆಯಾದ ಮೇಲೆ ಬಾಣಂತಿಯನ್ನು ಕರೆದುಕೊಂಡು ಬಾವಿಗೆ ಹೋಗಿ ಗಂಗೆಪೂಜೆ ಮಾಡಿ, ನಾಲ್ಕು ಜನ ಮುತ್ತೈದೆಯರಿಗೆ ಎಳ್ಳಚಿಗಳಿ ಕೊಡುತ್ತಾರೆ. ಬಾವಿ ಇಲ್ಲದ ಕಡೆ ಬೋರ್‌ವೆಲ್, ನಲ್ಲಿಗಳನ್ನು ಗಂಗೆ ಎಂದು ಭಾವಿಸಿ ಪೂಜೆ ಮಾಡುತ್ತಾರೆ. ಬಾಣಂತಿ ಕೈಯಿಂದ ತುಂಬಿದ ಕೊಡ ಹೊರಿಸಿಕೊಂಡು ಬರುತ್ತಾರೆ. ಮಗುವಿಗೆ ಹೆಸರಿಟ್ಟವರಿಗೆ ಮಗುವಿನ ತಂದೆಯಾದವರು ಬೆಳ್ಳಿ, ಬಂಗಾರ ಅಥವಾ ಸೀರೆ ಕೊಡುವ ಪದ್ಧತಿ ಇದೆ. ತಂದೆಯಾದವರು ಮಗುವಿಗೆ ಬಟ್ಟೆ, ಬಂಗಾರದ ಸರ, ಬೆಳ್ಳಿ ಕಡಗ, ಬ್ರಾಸ್‌ಲೈಟ್ ಹಾಕುವುದುಂಟು. ಈ ಪದ್ಧತಿ ಅನುಕೂಲಸ್ಥರಲ್ಲಿ ಕಂಡುಬರುತ್ತದೆ. ಹಿಂದೆ ಮಗುವಿಗೆ ತೀರಿಹೋದ ತಾತನ ಅಥವಾ ಅಜ್ಜಿಯ ಹೆಸರಿಡುತ್ತಿದ್ದರು. ಮನೆದೇವರ, ಗ್ರಾಮದೇವರ ಅಥವಾ ಯಾವುದಾದರು ದೇವರಿಗೆ ಹರಕೆ ಹೊತ್ತಿದ್ದರೆ ಆ ದೇವರ ಹೆಸರನ್ನು ಇಡುತ್ತಿದ್ದರು. ಈಗ ಈ ಪದ್ಧತಿ ತುಂಬಾ ಕಡಿಮೆಯಾಗಿದೆ. ಹೊಸ ಹೊಸ ಹೆಸರುಗಳನ್ನು ಕರೆಯುವ ಗೀಳು ಹೆಚ್ಚಾಗಿದೆ. ಮಗು ಗಂಡಾಗಿದ್ದರೆ ಐದಾರು ತಿಂಗಳಲ್ಲಿ ಕಿವಿ ಚುಚ್ಚಿಸುವುದು, ಹೆಣ್ಣಾಗಿದ್ದರೆ ಎರಡು-ಮೂರು ವರ್ಷದಲ್ಲಿ ಕಿವಿ ಚುಚ್ಚಿಸುವ ಪದ್ಧತಿ ಇದೆ. ಮಗುವಿಗೆ ಮೂರ್‍ನಾಲ್ಕು ತಿಂಗಳಲ್ಲಿ ಸೋದರಮಾವನ ಕಡೆಯಿಂದ ಅನ್ನದ ಮುಹೂರ್ತ ಮಾಡಿಸುತ್ತಾರೆ. ಬೆಳ್ಳಿ ಬಟ್ಟಲು, ಬೆಳ್ಳಿ ಚಮಚೆಯಿಂದ ಮಗುವಿಗೆ ಶಾಸ್ತ್ರಕ್ಕೆ ಅನ್ನ, ಪಾಯಸ ತಿನ್ನಿಸಿ ಬೆಳ್ಳಿ ಬಟ್ಟಲು ಕಾಣಿಕೆಯಾಗಿ ಕೊಡುವ ಪದ್ಧತಿ ವೈಶ್ಯ, ಬ್ರಾಹ್ಮಣ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

೫.೧.೩. ಮದುವೆ ಸಂಪ್ರದಾಯ

ಗಂಡು ಹೆಣ್ಣಿನ ಸಂಬಂಧವನ್ನು ಕಾನೂನುಬದ್ಧಗೊಳಿಸಿ ಸಂತಾನವನ್ನು ಬೆಳೆಸುವುದಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆ ಇದು. ಕುಟುಂಬ ರಚನೆಯ ಚಾಲನಾ ಶಕ್ತಿ ಮದುವೆ. ಹೊಸ ಸಂಬಂಧವಾದಲ್ಲಿ ವಿಭಿನ್ನ ಗೋತ್ರದಲ್ಲಿ ಮದುವೆ ನಡೆಯುತ್ತದೆ. ಅಲ್ಲದೆ ಅಕ್ಕನ ಮಗಳ, ಸೋದರ ಮಾವನ, ಸೋದರತ್ತೆಯ ಮಗಳ ಮದುವೆಗೆ ಹಿಂದೂ ಸಮಾಜದಲ್ಲಿ ಒಪ್ಪಿಗೆ ಇದೆ. ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯದಲ್ಲಿ ಈ ಪದ್ಧತಿ ಇಲ್ಲ. ಅಣ್ಣ-ತಂಗಿಯರ ಮಧ್ಯೆ ಮದುವೆ ನಿಷಿದ್ಧ. ಕೈ ಬೆರಳುಗಳಿಗೆ ದಾರ ಹಾಕಿ ಮದುವೆ ಹೊಂದಾಣಿಕೆ ನೋಡುವುದೂ ಉಂಟು. ವೈಶ್ಯ, ಬ್ರಾಹ್ಮಣರಲ್ಲಿ ಗಂಡು ಹೆಣ್ಣಿನ ಜಾತಕ ಕೂಡಿ ಬಂದರೆ ವಿವಾಹ ನಿಷ್ಕರ್ಷೆಯಾಗುತ್ತದೆ. ಕೆಲವರು ಎದುರು-ಬದುರು ಕೊಡುವ ಪದ್ಧತಿಯೂ ಇದೆ. ಹಿಂದೆ ಭಾವುಕರಾಗಿ ರಕ್ತ ಸಂಬಂಧದಲ್ಲಿ ಹೆಚ್ಚಾಗಿ ಮದುವೆ ಮಾಡಿಕೊಳ್ಳುತ್ತಿದ್ದರು. ಇದರಿಂದ ಸಂಬಂಧ ಇನ್ನೂ ಗಟ್ಟಿಯಾಗುತ್ತದೆಯೆಂಬ ನಂಬಿಕೆ ಜನಪದರದ್ದು. ರಕ್ತ ಸಂಬಂಧದ ಮದುವೆಯಾದರೆ ಮಕ್ಕಳಲ್ಲಿ ಅಂಗವೈಕಲ್ಯದ ಸಾಧ್ಯತೆ ಹೆಚ್ಚು ಎಂಬ ವೈಜ್ಞಾನಿಕ ತಿಳುವಳಿಕೆ ಇತ್ತೀಚಿನ ಪೀಳಿಗೆಯವರಿಗೆ ಇರುವುದರಿಂದ ಈಗೀಗ ಇಂತಹ ಮದುವೆಗಳು ಕಡಿಮೆಯಾಗತೊಡಗಿವೆ. ಹಿಂದೆ ಇದ್ದ ಬಾಲ್ಯ ವಿವಾಹ ಪದ್ಧತಿ ಈಗ ಇಲ್ಲ. ಇದ್ದರೂ ಕಡಿಮೆ. ವಿಧುರರಿಗೆ ಮರು ಮದುವೆ ಎಲ್ಲಾ ಸಮುದಾಯದಲ್ಲಿ ಕಂಡುಬರುತ್ತದೆ. ಹಿಂದೆ ತೀರಾ ಅಪರೂಪವೆನಿಸಿದ್ದ ವಿಧವಾ ವಿವಾಹ ಈಗೀಗ ಸಹಜವಾಗತೊಡಗಿರುವುದು ಇಲ್ಲಿ ಕಂಡುಬರುತ್ತದೆ. ಸಮಾಜದಲ್ಲಿ ಅಷ್ಟಾಗಿ ಸಮ್ಮತಿ ಇಲ್ಲದಿದ್ದರೂ ಅಂತರ್ಜಾತಿಯ ವಿವಾಹಗಳು ನಡೆದಿರುವ ಉದಾಹರಣೆಗಳು ಕನಕಗಿರಿಯಲ್ಲಿ ಕಂಡುಬರುತ್ತವೆ.

ಕನ್ಯಾ ನೋಡುವ ಶಾಸ್ತ್ರ

ವೈಶ್ಯ, ವೀರಶೈವರಾದಿಯಾಗಿ ಅನೇಕ ಸಮುದಾಯಗಳಲ್ಲಿ ವಧುವಿದ್ದ ಕಡೆಗೆ ವರನು ಕನ್ಯಾನೋಡಲು ಹೋದರೆ, ಬ್ರಾಹ್ಮಣರಲ್ಲಿ ವರನಿರುವ ಕಡೆಗೆ ವಧುವು ಹೋಗಬೇಕು. ಹೀಗೆ ಹೋದಾಗ ಹಣ್ಣು, ಹೂವು ತೆಗೆದುಕೊಂಡು ಹೋಗುವ ಪದ್ಧತಿ ಇದೆ. ವಿವಾಹ ಸಂಬಂಧದಲ್ಲಿ ಬೆಡಗು, ಗೋತ್ರ, ತಾನಕ, ವಾರ ಮಹತ್ವದ ಸ್ಥಾನ ಪಡೆಯುತ್ತವೆ. ವೈಶ್ಯರಲ್ಲಿ ೧೮ ಗುಣಗಳು, ಭಿನ್ನನಾಡಿ, ಭಿನ್ನ ಗೋತ್ರಜರಾದರೆ ಮದುವೆಗೆ ಅರ್ಹರಾಗುತ್ತಾರೆ. ಕೆಲವು ನಕ್ಷತ್ರಗಳ (ಹೆಣ್ಣುಮಕ್ಕಳಿಗೆ)ವರಿಗೆ ಭಾವ, ಮಾವ, ಅತ್ತೆ, ಮೈದುನ ಇಲ್ಲದ ಮನೆಗಳು ಬೇಕಾಗುತ್ತವೆ. ವೀರಶೈವರಲ್ಲಿ ಕೈಬೆರಳುಗಳಿಗೆ ದಾರ ಹಿಡಿದು ಅಳತೆ ನೋಡುವುದು, ಭಿನ್ನಗೋತ್ರ ಈ ಆಧಾರದಲ್ಲಿ ಮದುವೆ ಗೊತ್ತಾಗುತ್ತವೆ. ಕನ್ಯಾ ಅಥವಾ ವರ ಮನಸ್ಸಿಗೆ ಬಂದ ಮೇಲೆ ಗಂಡಿನವರ ಮನೆಗೆ ಮನೆತನ ನೋಡಲು ಹೋಗುತ್ತಾರೆ. ಮನೆತನ ಒಪ್ಪಿಗೆಯಾದಲ್ಲಿ ಅವರವರ ಅನುಕೂಲದ ಮೇಲೆ ಮಾತುಕತೆ, ಕೊಡುಕೊಳ್ಳುವ ವಿಚಾರ ನಡೆಯುತ್ತದೆ. ವೈಶ್ಯರಲ್ಲಿ ಮದುವೆ ಒಪ್ಪಿಗೆ, ಕೊಡುಕೊಳ್ಳುವ ವಿಚಾರವನ್ನು ಯಾದಿ ಪತ್ರದಲ್ಲಿ ಪುರೋಹಿತರಿಂದ ಬರೆಸುತ್ತಾರೆ. ಅನುಕೂಲದ ಮೇರೆಗೆ ಮದುವೆ ದಿನ ಗೊತ್ತುಪಡಿಸಲು ಹಿರಿಯರು ತಿಳಿಸುತ್ತಾರೆ.

ನಿಶ್ಚಿತಾರ್ಥ

ವಧುವಿನ ಹಾಗೂ ವರನ ಕಡೆಯವರಿಗೆ ವರ/ಕನ್ಯಾ ಒಪ್ಪಿಗೆ ಕೊಡುಕೊಳ್ಳುವಿಕೆ ಒಪ್ಪಿಗೆಯಾಗಿ ಮದುವೆಗೆ ಒಪ್ಪಿದ ಮೇಲೆ ಹೆಣ್ಣಿನವರ ಮನೆಯಲ್ಲಿ ಒಂದು ಗೊತ್ತಾದ ದಿನದಂದು ನಡೆಯುವ ಕಾರ್ಯ ಇದಾಗಿದೆ. ಇದು ಬಹುತೇಕ ಎಲ್ಲ ಸಮುದಾಯದಲ್ಲೂ ಕಂಡುಬರುತ್ತದೆ. ಆಯಾ ಸಮುದಾಯ ಹೆಣ್ಣಿನ ಗಂಡಿನ ಕಡೆಯ ಹಿರಿಯರು ಸೇರಿ ಸಂಬಂಧ ಒಪ್ಪಿಗೆಯಾದ ಸಂಕೇತವಾಗಿ ತಾಂಬೂಲ ಬದಲಾಯಿಸಿಕೊಳ್ಳುತ್ತಾರೆ. ಪರಸ್ಪರ ಸಿಹಿ ಸ್ವೀಕರಿಸುತ್ತಾರೆ. ವಧು-ವರರನ್ನು ಜೊತೆಗೆ ಕೂಡಿಸಿ ಹಾರ ಹಾಕಿ ಆರತಿ ಮಾಡುತ್ತಾರೆ. ಗಂಡಿನ ಕಡೆಯವರು ಹುಡುಗಿಗೆ ಸೀರೆ, ಕುಪ್ಪಸ, ಬಂಗಾರ ಹಾಕುತ್ತಾರೆ. ನಿಶ್ಚಿತಾರ್ಥವಾದರೆ ಅರ್ಧ ಮದುವೆ ಆದಂತೆ ಆಗ ಕ್ಷುಲ್ಲಕ ಕಾರಣಕ್ಕೆ ಮದುವೆ ಮುರಿದುಕೊಳ್ಳುವ ಸಾಧ್ಯತೆ ಕಡಿಮೆ ಎಂಬುದು ಜನಪದರ ನಂಬಿಕೆ.

ವೈಶ್ಯ ವಡ್ಡರು, ಬ್ರಾಹ್ಮಣರು, ಕ್ಷತ್ರಿಯರು, ಕಮ್ಮಾಸ್, ಮುಸ್ಲಿಂರಲ್ಲಿ ಹೆಣ್ಣಿನ ಕಡೆಯವರು ಮದುವೆ ಮಾಡಿಕೊಡುವ ಪದ್ಧತಿ ಇದೆ. ಕೆಲವು ಸಮುದಾಯದಲ್ಲಿ ಗಂಡಿನ ಮನೆಯವರು ಮದುವೆ ಮಾಡಿಕೊಳ್ಳಬೇಕು. ಇತ್ತೀಚೆಗೆ ಈ ನಿಯಮಗಳು ಸಡಿಲಗೊಂಡು ಉಭಯತರ ಒಪ್ಪಿಗೆಯಂತೆ ಅನುಕೂಲವಾದ ಕಡೆ ಮದುವೆ ನಡೆಯುತ್ತವೆ.

ಈರ್ಲು ಮಾಡುವದು.

ಈ ಶಾಸ್ತ್ರವನ್ನು ಅಗಸ, ಕ್ಷೌರಿಕ, ಉಪ್ಪಾರರು, ಕೊರಚ, ವಡ್ಡರು, ಹೊಲೆ-ಮಾದಿಗರಲ್ಲಿ ಕಾಣಬಹುದು. ವಡ್ಡರಲ್ಲಿ ಗಿಡದ್ಯಾವರು, ಹರಿಜನರಲ್ಲಿ ಒಂಟಿಗನ ಮಾಡೋದು, ಕುರುಬ ಮತ್ತು ಈಡಿಗರಲ್ಲಿ ಹೊರಗಳವರನ್ನು ಮಾಡುವುದು, ಕ್ಷತ್ರಿಯರಲ್ಲಿ ದೇವಾಂಗದವರಲ್ಲಿ ಈರಣ್ಣ ಮಾಡುವುದು ಎಂದು ಕರೆಯುತ್ತಾರೆ. ಈ ಆಚರಣೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಹೊರತುಪಡಿಸಿದರೆ ಉಳಿದಂತೆ ಒಂದೇ ರೀತಿಯ ಆಚರಣೆ ಕಂಡುಬರುತ್ತದೆ. ಕ್ಷೌರಿಕರಲ್ಲಿ ಈ ಕಾರ್ಯಕ್ಕೆ ಕುರಿ ಬಲಿ ಕೊಡುತ್ತಾರೆ. ಆರ್ಥಿಕ ಪರಿಸ್ಥಿತಿ ಸರಿ ಇಲ್ಲದವರು ಸಿಹಿ ಊಟದೊಂದಿಗೆ ಮುಗಿಸುತ್ತಾರೆ. ಈರ್ಲು ಮಾಡುವ ರಾತ್ರಿ ಕುರುಬರು ಲಕ್ಷ್ಮಮ್ಮನ ಪೂಜೆ, ಹರಿಜನರು ಹುಲಿಗೆಮ್ಮನ ಪೂಜೆ, ವಡ್ಡರು (ಹಿರಿಯ ಅಥವಾ ಕಿರಿಯ ಮಗನ ಮದುವೆಗೆ ಮಾತ್ರ) ಲಕ್ಷ್ಮೀ ಪೂಜೆ ಮಾಡುತ್ತಾರೆ. ಲಕ್ಷ್ಮೀ ಪೂಜೆಯನ್ನು ರಾತ್ರಿ ಹತ್ತು ಘಂಟೆಯ ಸುಮಾರಿಗೆ ಹೋಳಿಗೆ ಎಡಿ ಮಾಡಿ ಪೂಜೆ ಮಾಡುತ್ತಾರೆ. ಈ ಕಾರ್ಯದಲ್ಲಿ ಮನೆಮಗಳು ಸಹಿತ ಅಲ್ಲಿ ಇರುವಂತಿಲ್ಲ. ಊಟವಾದ ಬಳಿಕ ಮಿಕ್ಕಿದ್ದನ್ನು ದೇವರ ಮನೆ ಗೂಡಿನ ಕೆಳಗೆ ಅಥವಾ ಜಗಲಿಯ ಕೆಳಗೆ ಕುಣಿತೋಡಿ ಅಲ್ಲಿ ಹಾಕಿ ಮುಚ್ಚುತ್ತಾರೆ. ಇನ್ನೂ ಕೆಲವರು ತಲ ಬಾಗಿಲ ಹತ್ತಿರ ಕುಣಿ ತೋಡಿ ಮುಚ್ಚಿಡುತ್ತಾರೆ. ಈ ಕಾರ್ಯವನ್ನು ವೀರಶೈವರು, ಕಬ್ಬೇರು, ಗೌಳೇರು ಲಗ್ನ ಪತ್ರಿಕೆ ಕಟ್ಟಿಸಿದ ನಂತರ ಮಾಡುತ್ತಾರೆ. ಈ ಊರಿನ ಮುಚ್ಚಿಗರು ಸಮುದಾಯದಲ್ಲಿ ಸ್ವಗೋತ್ರದವರೆಲ್ಲ ಒಬ್ಬರ ಮನೆಯಲ್ಲಿ ಕಂಬದಲ್ಲಿ ಲಕ್ಷ್ಮೀ ಮೂಡಿದ್ದಾಳೆಂದು ತಿಳಿದು ಅಲ್ಲಿ ಮದುವೆಯಂತಹ ಕಾರ್ಯಕ್ರಮ ಹಾಗೂ ವರ್ಷಕೊಮ್ಮೆ ಸ್ವಗೋತ್ರದವರೆಲ್ಲ ಸೇರಿ ಲಕ್ಷ್ಮೀನ ಮಾಡುತ್ತಾರೆ. ಇಲ್ಲಿ ಕರಿಲಕ್ಷ್ಮೀ, ಕೆಂಪು ಲಕ್ಷ್ಮೀ ಎಂದು ಮಾಡುತ್ತಾರೆ.

ಲಗ್ನ ಪತ್ರಿಕೆ ಕಟ್ಟಿಸುವುದು

ಮದುವೆಗೆ ಐದು ದಿನ ಇರುವಾಗ ಸಮುದಾಯದ ಹಿರಿಯರ ಬಂಧು ಬಳಗದ ಸಮಕ್ಷಮದಲ್ಲಿ ಲಗ್ನ ಪತ್ರಿಕೆಗಳನ್ನು ಪೂಜೆ ಮಾಡುತ್ತಾರೆ. ಆಯಾ ಸಮುದಾಯಕ್ಕೆ ತಕ್ಕಂತೆ ಈ ಕಾರ್ಯವನ್ನು ಪುರೋಹಿತರು, ಐನೇರು ಮಾಡಿಸುತ್ತಾರೆ. ವೈಶ್ಯರಲ್ಲಿ ವೀರಶೈವರಲ್ಲಿ ಗಂಡಸರು ಈ ಕಾರ್ಯ ಮಾಡುತ್ತಾರೆ. ಕೆಲವರು ಮದುವೆ ಹಿಂದಿನ ದಿನ ಮಾಡಿಸುತ್ತಾರೆ. ಅಂದು ಈ ಕಾರ್ಯಕ್ಕೆ ಬಂದ ದೈವಕ್ಕೆ ಪತ್ರಿಕೆ ಕೊಡುತ್ತಾರೆ. ಕೆಲವರು ಮನೆ ದೇವರಿಗೆ ಮೊದಲು ಲಗ್ನ ಪತ್ರಿಕೆ ತಲುಪಿಸುತ್ತಾರೆ. ಕೆಲವರು ಲಗ್ನದ ಅಕ್ಕಿ ಎಂದು ಐದು ಸೇರು ಅಕ್ಕಿ, ಬೆಲ್ಲ, ಲಗ್ನ ಪತ್ರಿಕೆ, ಕಣ, ಎಲೆ ಅಡಿಕೆ, ದಕ್ಷಿಣೆ ತೆಗೆದುಕೊಂಡು ಗಂಡಿನ ಮನೆಗೆ ಹೋಗುತ್ತಾರೆ. ಬೀಗರಾದವರು ಲಗ್ನದಕ್ಕಿ ತಂದವನಿಗೆ ಸಿಹಿ ಊಟ ಮಾಡಿಸಿ ಬಟ್ಟೆ ಕೊಟ್ಟು ಕಳಿಸುತ್ತಾರೆ. ದೇವರೂಟದ ಹಿಂದಿನ ದಿನ ಹತ್ತಿರದ ಸಂಬಂಧಿಕರಿಗೆ, ದೇವರೂಟದ ದಿನ ಊರಿನವರಿಗೆ ಅನುಕೂಲದ ಮೇರೆ ದೂರದ ಊರಿನ ಬಳಗಕ್ಕೆ ಲಗ್ನ ಪತ್ರಿಕೆ ಹಂಚುತ್ತಾರೆ. ಹತ್ತಿರದ ಬಳಗಕ್ಕೆ ಲಗ್ನ ಪತ್ರಿಕೆಯ ಜೊತೆಗೆ ೨ ಕೊಬ್ಬರಿ ಬಟ್ಟಲು ೨ ಅಡಿಕೆ ಇಟ್ಟು ಕರೆಯುತ್ತಾರೆ. ವೈಶ್ಯರಲ್ಲಿ ಲಗ್ನ ಪತ್ರಿಕೆ ಕೊಡುವುದರ ಜೊತೆಗೆ ಎಣ್ಣೆ ಬೀರುತ್ತಾರೆ. ವೀರಶೈವರು, ವೈಶ್ಯರು ಕುಂಕುಮ ಹಚ್ಚುವುದರೊಂದಿಗೆ ಹೆಣ್ಣುಮಕ್ಕಳನ್ನು ಮದುವೆಗೆ ಆಹ್ವಾನಿಸುತ್ತಾರೆ.

ಮದುವೆಗೆ ಎರಡು ದಿನ ಮುಂಚೆ ಲಕ್ಷ್ಮೀ ಪೂಜೆ, ಎರಡು ದಿನ ಮುಂಚೆ ಹಿರಿಯರಿಗೆ ಹೊಸಬಟ್ಟೆ ಏರಿಸುವುದು ಮಾಡುತ್ತಾರೆ. ವೀರಶೈವರಲ್ಲೂ ಸ್ವಲ್ಪ ವ್ಯತ್ಯಾಸದೊಂದಿಗೆ ಈ ಆಚರಣೆ ಮಾಡುತ್ತಾರೆ.

ದೇವರೂಟ

ಮದುವೆಯ ಹಿಂದಿನ ದಿನ ಹಂದರ ಹಾಕಿ ಮದುಮಕ್ಕಳನ್ನು ಮಾಡಿ ದೈವದೂಟ ನೀಡುತ್ತಾರೆ. ಆದಕಾರಣ ಈ ಕಾರ್ಯವನ್ನು ದೇವರೂಟ ಅಥವಾ ದೇವತಾಕಾರ್ಯ ಎಂದು ಕರೆಯುತ್ತಾರೆ. ಹಿಂದೆ ಹಿರೇಹಂದ್ರ, ಮರಿಹಂದ್ರ ಎಂದು ಎರಡು ಹಂದ್ರ ಹಾಕುತ್ತಿದ್ದರು. ಈಗ ಹಿರೇ ಹಂದ್ರದ ಬದಲಾಗಿ ಶಾಮಿಯಾನ ಹಾಕಿ ಮರಿ ಹಂದ್ರ ಮಾತ್ರ ಹಾಕುತ್ತಾರೆ. ಹಾಲುಗಂಬ ಹಾಕುವ ಶಾಸ್ತ್ರ ಮೊದಲು ಮಾಡಿ ನಂತರ ಹಂದ್ರ ಹಾಕುತ್ತಾರೆ. ಹನ್ನೊಂದು ಬಿದಿರುಗಳಿಂದ ಹಂದ್ರ ಹಾಕಿ ಹಂದ್ರದ ಮೇಲೆ ತೆಂಗಿನ ಗರಿ ಅಥವಾ ಹೊಂಗೆ (ಖಾನಗಿತಪ್ಲ) ತಪ್ಲ ಹಾಕುತ್ತಾರೆ. ಹಂದ್ರಗಂಬಕ್ಕೆ ಜಾಜು, ಸುಣ್ಣದ ಪಟ್ಟಿ ಬಳಿದು, ಹಂದ್ರದ ಮಧ್ಯದಲ್ಲಿ ಕೊಬ್ಬರಿ ಬಟ್ಲ ಅಥವಾ ಅಂತರಗಾಯಿ ಕಟ್ಟುತ್ತಾರೆ. ಕಂಬದಲ್ಲಿ ದೀಪ ಹಚ್ಚಿಡುತ್ತಾರೆ. ಅಂದೇ ಮನೆಯ ಗೋಡೆಯ ಹೊರ ಭಾಗದಲ್ಲಿ ಚಟ್ಟು ಬಡಿಯುವುದು, ಜೋರು (ಸುಣ್ಣ, ಜಾಜಿನ ನೀರು ಬಿಡುವುದು) ಮಾಡುತ್ತಾರೆ. ಈ ಕೆಲಸವನ್ನು ಗಂಡಿನ ಮನೆಯಲ್ಲಾದರೆ ಅಕ್ಕ, ತಂಗಿಯರು ಮಾಡುತ್ತಾರೆ. ಕೆಲವರಲ್ಲಿ ಸೋದರ ಮಾವ ಮಾಡುತ್ತಾನೆ. ಚಟ್ಟು ಬಡಿದವರಿಗೆ ಆರತಿ ಮಾಡಿ ದೋತ್ರ, ಸೀರೆ, ಕುಪ್ಪಸ ಕೊಡುವುದನ್ನು ಮಾಡುತ್ತಾರೆ. ಈ ಎಲ್ಲ ಪದ್ಧತಿ ಸಾಮಾನ್ಯವಾಗಿ ಎಲ್ಲ ವರ್ಗಗಳಲ್ಲಿ ಕಂಡುಬರುತ್ತದೆ.

ಸುರಗಿ ನೀರು

ಬ್ರಾಹ್ಮಣ, ವೈಶ್ಯ, ವೀರಶೈವ, ಕಬ್ಬಲಿಗ, ನಾಯಕ, ಗೊಲ್ಲ ಮುಂತಾದ ಸಮುದಾಯಗಳಲ್ಲಿ ಸುರಿಗೆ ನೀರಿನ ಪದ್ಧತಿ ಕಂಡುಬರುತ್ತದೆ. ದೇವರೂಟ ಮತ್ತು ಮದುವೆ ದಿನ ಸುರಿಗೆ ನೀರು ಹಾಕುತ್ತಾರೆ. ಮದುವೆ ಕಲ್ಯಾಣ ಮಂಟಪದಲ್ಲಿ ನಡೆದರೆ ದೇವರೂಟದ ದಿನದಂದು ಮಾತ್ರ ಹಾಕುತ್ತಾರೆ. ಸಾಮಾನ್ಯವಾಗಿ ವಧು ಅಥವಾ ವರನ ಜೊತೆಯಲ್ಲಿ ತಂದೆ, ತಾಯಿ ಹಾಗೂ ಒಂದು ಮಗ ಸುರಿಗೆ ನೀರಿಗೆ ಕುಳಿತುಕೊಳ್ಳುತ್ತಾರೆ. ಮೂವರು ಆಗಬಾರದು ಎಂಬ ಕಾರಣದಿಂದ ಒಂದು ಮಗುವನ್ನು ಜೊತೆಯಲ್ಲಿ ಕೂಡಿಸುತ್ತಾರೆ. ಸುರಿಗೆ ನೀರಿಗೆ ಕುಳಿತವರಿಗೆ ತಲೆಗೆ ಎಣ್ಣೆ ಹಚ್ಚಿ, ಮುಖಕ್ಕೆ ಮೈಗೆ ಅರಿಷಣ ಹಚ್ಚಿ, ಬಣ್ಣದ ನೀರಿನಿಂದ, ಮುತ್ತಿನ ನೀರಿನಿಂದ ಸ್ನಾನ ಮಾಡಿಸಿ ಕೊನೆಗೆ ಆರತಿ ಮಾಡಿ ಹೊಸ ಬಟ್ಟೆ ಕೊಡುತ್ತಾರೆ. ಹತ್ತಿರದ ಬಳಗದವರೂ ಸಹ ಸುರಿಗೆಗೆ ಕುಳಿತವರಿಗೆ ಬಟ್ಟೆ ಮಾಡುತ್ತಾರೆ. ಸುರಿಗೆಗೆ ಮೊದಲು ಸುರಿಗೆ ಹಾಕುವ ಸ್ಥಳ (ಹಂದ್ರ)ದಲ್ಲಿ ಸುತ್ತಲೂ ಐದು ತಂಬಿಗೆಗಳನ್ನಿಟ್ಟು ನೀರು ಅರಿಷಿಣ ಹಾಕಿ ಐದು ಸುತ್ತು ದಾರ ಸುತ್ತುತ್ತಾರೆ. ಇದರ ಒಳಗಡೆ ನಿಂತು ಸುರಿಗೆ ನೀರು ಹಾಕಬೇಕು. ಸುರಿಗೆ ನೀರು ಮೈಮೇಲೆ ವಧು-ವರರ ಮೇಲೆ ಬಿದ್ದರೆ ಮೈ ಒಡೆಯುತ್ತಾರೆ (ದಷ್ಟಪುಷ್ಟರಾಗುತ್ತಾರೆ) ಎಂಬ ನಂಬಿಕೆ ಇದೆ.

ಐರಾಣಿ ತರುವುದು

ಮುಸ್ಲಿಂ, ಕ್ರೈಸ್ತ, ವೈಶ್ಯರನ್ನು ಹೊರತು ಪಡಿಸಿ ಬಹುತೇಕ ಸಮುದಾಯಗಳಲ್ಲಿ ಈ ಆಚರಣೆ ಇದೆ. ಉಳಿದವರಲ್ಲೂ ಸಹ ಪದ್ಧತಿ ಇದ್ದವರು ಈ ಆಚರಣೆ ಮಾಡುತ್ತಾರೆ. ಐರಾಣಿ ತರುವಾಗ ದೈವದ ಗುಡಿಗಳಲ್ಲಿ ಕಂಬಾರರ ಮನೆಯಿಂದ ಅಕ್ಕಿ, ಬೇಳೆ, ಬೆಲ್ಲ ಕೊಟ್ಟು ಚಿತ್ರಗಳನ್ನು ಸುಣ್ಣವನ್ನು ಬಳಿದ ಚಿಕ್ಕಗಡಿಗೆಗಳಿಂದ ಹಿಡಿದು ದೊಡ್ಡ ಗಡಿಗೆಗಳವರೆಗೆ ಎರಡೆರಡರಂತೆ ತಂದು ಅವುಗಳನ್ನು ಗುಡಿಯಲ್ಲಿ ಇಡುತ್ತಾರೆ. ಮೆರವಣಿಗೆಯ ಮೂಲಕ ಅವುಗಳನ್ನು ದೇವರ ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ಇದು ಅಭಿವೃದ್ಧಿಯ ಸಂಕೇತವೆಂದು ಅವರ ನಂಬಿಕೆ. ವಡ್ಡರ ಸಮುದಾಯದಲ್ಲಿ ತಮ್ಮ ವೃತ್ತಿಯ ಸಂಕೇತವಾದ ಹಾರೆಯನ್ನು ಹಂದರದ ಬಳಿ ಇಟ್ಟು ಪೂಜಿಸುತ್ತಾರೆ. ಗೊಲ್ಲ ಸಮುದಾಯದಲ್ಲಿ ಬಿಳಿ ಐರಾಣೇರು ಮತ್ತು ಬಣ್ಣದ ಐರಾಣೇರು ಎಂದು ಬಗೆಗಳಿವೆ.

ಮಧು ಮಕ್ಕಳನ್ನು ಮಾಡುವುದು

ಮದು ಮಗ ಅಥವಾ ಮಧುಮಗಳನ್ನು ಒಂದು ಮಣೆಯ ಮೇಲೆ ಕೂಡಿಸಿ ಹೊಸ ಬಟ್ಟೆ ತೊಡಿಸಿ, ಕೈಯಲ್ಲಿ ಒಂದು ತೆಂಗಿನಕಾಯಿ ಕೊಟ್ಟು ಕೊರಳಲ್ಲಿ ಹೂವಿನ ಹಾರ ಹಾಕಿ ನಾನಾ ರೀತಿಯಲ್ಲಿ ಶೃಂಗರಿಸಿ ಮನೆಯಲ್ಲಿ ಆರತಿ ಮಾಡುತ್ತಾರೆ. ಮದುಮಗಳಾಗಿದ್ದರೆ ಹಸಿರು ಬಳೆ ತೊಡಿಸಿ ಕಾಲಿಗೆ, ಕೆನ್ನೆಗೆ ಅರಿಷಿಣ ಹಚ್ಚುತ್ತಾರೆ. ಹಂದರದಲ್ಲಿ ಬಳೆ ಹಾಕಲು ಬಂದ ಬಳೆಗಾರನಿಗೆ ಅಕ್ಕಿ, ಬೇಳೆ, ಬೆಲ್ಲ, ದಕ್ಷಿಣೆ ಕೊಟ್ಟು ಕಳುಹಿಸುತ್ತಾರೆ. ಮದುಮಗ ಅಥವಾ ಮದುಮಗಳನ್ನು ಕುಳ್ಳಿರಿಸಿ ಆರತಿ ಮಾಡಿದ ಮೇಲೆ ಸೇರಿದ

ದೈವದೊಂದಿಗೆ ಬ್ಯಾಂಡ್ ಸಮೇತ ದೇವಸ್ಥಾನಕ್ಕೆ ಹೋಗಿಬರುತ್ತಾರೆ. ಮದುಮಕ್ಕಳನ್ನು ಮಾಡಿದ ಮೇಲೆ ಮದುಮಕ್ಕಳು ದೂರ ಪ್ರಯಾಣ ಮಾಡುವಂತಿಲ್ಲ. ಕಂಡಕಂಡಲ್ಲಿ ತಿರುಗಾಡುವಂತಿಲ್ಲ. ಮದುಮಕ್ಕಳಿಗೆ ದೃಷ್ಟಿಯಾಗಬಾರದೆಂದು ಕೆನ್ನೆಗೆ ಅಥವಾ ಅಂಗಾಲಿಗೆ ಕಾಡಿಗೆ ಬೊಟ್ಟು ಇಡುತ್ತಾರೆ.

ಒಳ್ಳುಕಲ್ಲು ಪೂಜೆ

ಒಳ್ಳುಕಲ್ಲು ಮತ್ತು ಬೀಸುವ ಕಲ್ಲುಗಳನ್ನು ತೊಳೆದು, ಸುಣ್ಣ, ಬಣ್ಣಗಳಿಂದ ಶೃಂಗರಿಸುತ್ತಾರೆ. ಐದೈದು ಜನ ಮುತ್ತೈದೆಯರು ಸೇರಿ ಕುಟ್ಟುವ ಬೀಸುವ ಕೆಲಸ ಮಾಡುತ್ತ ಹಾಡು ಹಾಡುತ್ತಾರೆ. ಒಳ್ಳು ಕಲ್ಲಿನಲ್ಲಿ ಅಕ್ಕಿ ಜೊತೆಗೆ ಹಾಕಿರುವ ಹವಳ-ಮುತ್ತು ಕುಟ್ಟಿದ ನಂತರ ಯಾರಿಗೆ ಸಿಗುತ್ತದೆಯೋ ಅವರು ಅದೃಷ್ಟವಂತರೆಂಬುದು ಸಂಕೇತ. ಈ ಪದ್ಧತಿ ವೈಶ್ಯ, ವೀರಶೈವ ಬ್ರಾಹ್ಮಣರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವೈಶ್ಯರಲ್ಲಿ ಬ್ರಾಹ್ಮಣರಲ್ಲಿ ಒಳ್ಳುಕಲ್ಲು ಪೂಜೆಯ ನಂತರ ಹಂದ್ರದಲ್ಲಿ ಮುತ್ತೈದೆಯರು ಸಂಡಿಗೆ, ಶ್ಯಾವಿಗೆ ಇಡುವ ಕೆಲಸದಲ್ಲಿ ತೊಡುಗುತ್ತಾರೆ. ಸಂಡಿಗೆ, ಶ್ಯಾವಿಗೆ ಇರುವ ಮೊರವನ್ನು ಪೂಜೆ ಮಾಡಿ ಹಂದ್ರದ ಮೇಲೆ ಇಡುತ್ತಾರೆ. ಈ ಕಾರ್ಯಗಳಿಗೆ ಬಂದ ಬಂಧುಗಳಿಗೆ ಉಪಹಾರ, ಊಟದ ವ್ಯವಸ್ಥೆ ಮಾಡಲಾಗಿರುತ್ತದೆ.

ಎದುರುಗೊಂಬುವುದು

ಮದುವೆ ಗಂಡಿನ ಮನೆಯಲ್ಲಿ ನಡೆದರೆ ಮದುಮಗಳನ್ನು ಹೆಣ್ಣಿನ ಮನೆಯಲ್ಲಿ ನಡೆದರೆ ಮದುಮಗನನ್ನು ಆಹ್ವಾನಿಸುವ ಕಾರ್ಯಕ್ಕೆ ಎದುರುಗೊಂಬುವುದು ಎನ್ನುತ್ತಾರೆ. ಮಧುಮಗನನ್ನು ಆಹ್ವಾನಿಸಿದಲ್ಲಿ ಹಿರಿಯರೆಲ್ಲರು ಬ್ಯಾಂಡಿನೊಂದಿಗೆ ಗಂಡಿನವರು ಇದ್ದಲ್ಲಿಗೆ ಕಳಸದೊಂದಿಗೆ ಹೋಗುತ್ತಾರೆ. ಹಿರಿಯರು ಕುಂಕುಮ ಕೊಟ್ಟು ಆಹ್ವಾನಿಸುತ್ತಾರೆ. ಮಧುಮಗಳ ತಮ್ಮ ಅಥವಾ ಅಣ್ಣ ಆಗುವವರು ಮದುಮಗನಿಗೆ ತಂಬಿಗೆಯಲ್ಲಿರುವ ನೀರಿನಿಂದ ಕಣ್ಣೊರಸಿ, ಕರವಸ್ತ್ರದಿಂದ ವರೆಸಿ, ಕುಂಕುಮ ಹಚ್ಚಿ, ಹೂವಿನ ಹಾರ ಹಾಕಿ ನಗುನಗುತ್ತಾ ಹಾರ್ಧಿಕವಾಗಿ ಮದುಮಗನನ್ನು ಮತ್ತು ಬೀಗರ ತಂಡವನ್ನು ಸ್ವಾಗತಿಸಿ ಅವರಿಗೆ ವಿಶ್ರಾಂತಿ ಸ್ಥಳದ ವ್ಯವಸ್ಥೆ ಮಾಡುತ್ತಾರೆ. ನಂತರ ಚಾ, ಫಳಾರ ಮುಂತಾದ ಉಪಚಾರ ನಡೆಯುತ್ತದೆ. ಕೆಲವರು ರಾತ್ರಿ 'ತುಪ್ಪದ ಊಟ' ಅಥವಾ 'ಮಸಿಟ್ಟು' ಏರ್ಪಡಿಸುತ್ತಾರೆ. ಮಸಿಟ್ಟನ್ನು ವಧುವು ಊಟ ಮಾಡಬೇಕು. ಗಂಡಿನವರ ಖರ್ಚಿನೊಂದಿಗೆ ದೊಡ್ಡ ವೀಳ್ಯ ನಡೆಯುತ್ತದೆ. ವಿಭೂತಿಯಿಂದ, ಕೆಲವರು ಅಕ್ಕಿಯಿಂದ ಗದ್ದುಗೆ ಬರೆಯುವರು. ಮುಚ್ಚಿಗರು, ಹರಿಜನರು, ವಡ್ಡರು, ಬೇಡರು 'ಓಂ' ಎಂದು ಬರೆದು ತುಂಬಿದ ಕಳಸವನ್ನಿಟ್ಟು ಕಾಯಿ ಒಡೆಯುವರು. ಇನ್ನೊಂದು ಕಡೆ ಹುಡುಗಿಯನ್ನು ಆಕೆಯ ಸೋದರಿ ಅಥವಾ ಸೋದರನ ಮಕ್ಕಳನ್ನು ಕೂಡಿಸಿ ಆರತಿ ಮಾಡುವರು. ಆಗ ಗಂಡಿನವರು ಹುಡುಗಿಗೆ ಸೀರೆ, ಕುಬುಸ, ಹೂವಿನ ಹಾರ, ದಂಡಿ (ಸೂಸಗ) ಪಕ್ಕದವಳಿಗೂ ಸೇರಿ ಹಾಕಿ ಆರತಿ ಮಾಡುತ್ತಾರೆ. ವಧುವು ಗಂಡಿನವರು ತಂದ ಸೀರೆಯನ್ನು ಉಟ್ಟುಕೊಂಡು ಗದ್ದುಗೆಯ ಮೇಲೆ ಕೂಡಬೇಕು. ಗಂಡಿನವರು ಅಡಿಕೆ ಪೆಪ್ಪರಮೆಂಟು ಮದುಮಗಳಿಗೆ ಕೈಗೆ ತುಂಬುತ್ತಾರೆ. ನಂತರ ಎಲ್ಲರೂ ಆರತಿ

ಮಾಡುತ್ತಾರೆ. ಆರತಿಯಾದ ನಂತರ ಬೆಡಗು, ಗೋತ್ರ ತಾನಕದವರಿಗೆ ವೀಳ್ಯವನ್ನು ಹಂಚುತ್ತಾರೆ. ಕೆಲವರಿಗೆ ವೀಳ್ಯ ಸಿಗದಿದ್ದಾಗ ಜಗಳ ಸಂಬವಿಸಿದ್ದು ಉಂಟು. ವೈಶ್ಯ ಸಮುದಾಯದ ನಿಶ್ಚಿತಾರ್ಥದಲ್ಲಿ ವಧು-ವರರನ್ನು ಹೊಸ ಬಟ್ಟೆ, ಒಡವೆಗಳೊಂದಿಗೆ ಅಲಂಕರಿಸಿ ಒಬ್ಬರನ್ನೊಬ್ಬರು ಪ್ರತ್ಯೇಕವಾಗಿ ಮಂಟಪಕ್ಕೆ ಕರೆತಂದು ಗಣೇಶ ಪೂಜೆ ಮಾಡಿಸುತ್ತಾರೆ. ನಂತರ ಪರಸ್ಪರ ಗಂಡು ಹೆಣ್ಣಿನವರ ಕಡೆಯವರನ್ನು ಕರೆಸಿ ತೆಂಗಿನ ಕಾಯಿ ಬದಲಾಯಿಸಿ ಗುಲಾಲು ಹಚ್ಚಿ, ಸಕ್ಕರೆ ಹಂಚಿ, ಪರಸ್ಪರ ಆಲಂಗಿಸಿ ಮದುವೆಗೆ ಬಂದವರನ್ನು ಹಾರ್ಧಿಕವಾಗಿ ಸ್ವಾಗತಿಸಿ ಸೌಜನ್ಯ ಮೆರೆಯುತ್ತಾರೆ. ಮುಸ್ಲಿಂ ಸಮುದಾಯದಲ್ಲಿ ಮದುವೆ ಹಿಂದಿನ ದಿನವೇ ದಿಬ್ಬಣ ಬರುತ್ತದೆ.

ಬಾಸಿಂಗ ಕಟ್ಟುವುದು

ಬಾಸಿಂಗವನ್ನು ವಧುವರರಿಗೆ ಕಟ್ಟುವ ಪದ್ಧತಿ ಸಾಮಾನ್ಯವಾಗಿ ಎಲ್ಲ ವರ್ಗಗಳಲ್ಲಿ ಕಂಡುಬರುತ್ತದೆ. ಮುಸ್ಲಿಂರಲ್ಲಿ ವರನಿಗೆ ಕುದರೆಯ ಮೇಲೆ ಮೆರವಣಿಗೆ ಮಾಡಿಸುವಾಗ 'ಸೆರಾ' ಅಂದರೆ ಮುಖ ಮುಚ್ಚುವ ಹೂವಿನ ಜಾಲಂದರ ಹಾಕುತ್ತಾರೆ. ಬಾವಸಾರ ಕ್ಷತ್ರಿಯರಲ್ಲಿ ತಾಯಿಗೆ ಆಕೆಯ ತವರಿನವರು ಉಡಿ ತುಂಬಿದ ಮೇಲೆ ಮಗನ ಬಾಸಿಂಗ ನೋಡವುದು. ಮಗನನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ತಾನು ನೋಡದಂತೆ ಬಾಸಿಂಗ ಮುಟ್ಟಿ ಹಾಲು ಕುಡಿಸಿ ತನ್ನ ಕೈಲಾದಷ್ಟು ಉಡುಗೊರೆ ಕೊಡುತ್ತಾಳೆ. ವೈಶ್ಯ ಸಮುದಾಯದಲ್ಲಿ ವಧುವರರಿಗೆ ಅಸೆ ಮಂಟಪಕ್ಕೆ ಏರುವ ಮುನ್ನ ಬಾಸಿಂಗ ಕಟ್ಟುತ್ತಾರೆ. ಇವರಲ್ಲಿ ಜೋಡಿ ಮದುವೆ ನಡೆದಲ್ಲಿ ಒಬ್ಬರ ಬಾಸಿಂಗ ಇನ್ನೊಬ್ಬರು ನೋಡುವಂತಿಲ್ಲ. ನೋಡಿದಲ್ಲಿ ಯಾವುದಾದರು ಒಂದು ಜೋಡಿಯು ಮುಂದೆ ಕಷ್ಟ ಅನುಭವಿಸಬೇಕಾಗುತ್ತದೆ ಎಂಬ ನಂಬಿಕೆ ಇದೆ. ಹೂವಿನ ಬಾಸಿಂಗ, ಮುತ್ತಿನ ಬಾಸಿಂಗ ಎಂದು ಎರಡು ರೀತಿಯ ಬಾಸಿಂಗಗಳಿದ್ದೆ ಕೆಲವರಲ್ಲಿ ವರನಿಗೆ ಬಾಸಿಂಗವನ್ನು ಸೋದರಮಾವ ಕಟ್ಟಿದರೆ, ಕೆಲವರಲ್ಲಿ ತಾಯಿ ಕಟ್ಟುವ ಪದ್ಧತಿ ಇದೆ.

ಕನ್ಯಾ ಶುಲ್ಕ

ಮುಸ್ಲಿಂರಲ್ಲಿ ಈ ಪದ್ಧತಿ ಕಂಡುಬರುತ್ತದೆ. ಮಹರ್, ತೆರ, ಒಲಿಸಗಮು ಎಂಬ ಹೆಸರುಗಳಿಂದಲೂ ಈ ಪದ್ಧತಿ ಆಚರಣೆಗೊಳ್ಳುತ್ತದೆ. ಕುರುಬರು ಹರಿಜನರಲ್ಲಿ ೨೧ ರೂ. ಕೊಡುವ ಪದ್ಧತಿ ಇದೆ. ಮುಂದೆ ಅವಳು ಹೆಣ್ಣು ಹಡೆಯದಿದ್ದರೆ ಆ ಹಣವನ್ನು ವಾಪಸ್ಸು ಕೊಡಬೇಕು. ಕುಂಬಾರರಲ್ಲಿ ೧೬ ರೂ. ತೆರವು ಇದ್ದು ಹಾಗೆಯೇ ಇವರಲ್ಲಿ ದೈವದ ಶುಲ್ಕವೆಂದು ಗಂಡಿನ ಕಡೆಯವರಿಂದ ೬೪ ರೂಪಾಯಿಗಳನ್ನು ಪಡೆಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ೧೦೧ ರೂಪಾಯಿಗಳಿಗೆ ಬಂದು ನಿಂತಿದೆ.

ಮಾಂಗಲ್ಯ (ಧಾರೆ ಮುಹೂರ್ತ)

ವರನಿಗೆ ಮಡಿದೋತ್ರ ತೊಡಿಸಿ, ಮೈಮೇಲೆ ಶಲ್ಯೆ ಹೊದಿಸಿ, ಬಾಸಿಂಗ ಕಟ್ಟಿ ಕೈಯಲ್ಲಿ ತೆಂಗಿನ ಕಾಯಿ ಕೊಟ್ಟು ಧಾರೆ ಮಂಟಪಕ್ಕೆ ಕರೆತರುತ್ತಾರೆ. ವಧುವಿಗೆ ರೇಶ್ಮೆ ಸೀರೆಯಲ್ಲಿ ಅಲಂಕಾರ ಮಾಡಿ, ಬಾಸಿಂಗ ತೊಡಿಸಿ, ಕೈಯಲ್ಲಿ ತೆಂಗಿನ ಕಾಯಿ ಇಟ್ಟು ಧಾರೆ ಮಂಟಪಕ್ಕೆ ದಾರಿಯುದ್ದಕ್ಕೂ ಹಾಕಲಾದ ತಟ್ಟೆಯ

ಮೇಲೆ ಕಾಲಿಡುತ್ತಾ ಬರುತ್ತಾಳೆ. ಸೋದರಮಾವ ಆಗುವವರು ಎಡ ಬಲದಲ್ಲಿ ನಿಂತು ಕೈ ಕೈ ಹಿಡಿದು ಧಾರೆ ಮಂಟಪಕ್ಕೆ ಕರೆತರುತ್ತಾರೆ. ಈ ಪದ್ಧತಿ ವೈಶ್ಯರಲ್ಲಿ ಕಂಡುಬರುತ್ತದೆ. ಧರ್ಮಶಾಸ್ತ್ರಗಳ ಪ್ರಕಾರ ಸಪ್ತಪದಿ ತುಳಿಯುವುದು, ಮಾಂಗಲ್ಯ ಕಟ್ಟುವುದು ವಿವಾಹದ ಪ್ರಮುಖ ಘಟ್ಟವಾಗಿರುತ್ತದೆ. ಈ ಶಾಸ್ತ್ರಕ್ಕೆ ಮುಸ್ಲಿಂರು 'ನಿಖಾಹ' ಎಂದು ಕರೆಯುವರು. ಎಲ್ಲ ವರ್ಗಗಳಲ್ಲಿ ಈ ಆಚರಣೆ ಪ್ರಮುಖವಾಗಿ ಕಂಡುಬರುತ್ತದೆ. ಈ ಆಚರಣೆಯನ್ನು ವೈಶ್ಯ, ಬ್ರಾಹ್ಮಣ, ಮಾದಿಗ ಮುಂತಾದವರಿಗೆ ಬ್ರಾಹ್ಮಣ ಪುರೋಹಿತರು ಮಾಡಿಸುತ್ತಾರೆ. ವೀರಶೈವ, ಹರಿಜನ, ಕಂಬಾರ, ಕುಂಬಾರ ಮುಂತಾದ ಜಾತಿಗಳ ಮದುವೆಯಲ್ಲಿ ಐನೇರು ಕಾರ್ಯ ಮಾಡಿಸುತ್ತಾರೆ. ವೈಶ್ಯ ಸಮುದಾಯದಲ್ಲಿ ಗಂಡಿನವರ ಕಡೆಯಿಂದ ಒಂದು ತವರಿನ ಕಡೆಯಿಂದ ಒಂದು ತಾಳಿ ಮಾಡಿಸಿರುತ್ತಾರೆ. ತಾಳಿಯನ್ನು ಒಂದು ಹುಡುಗಿಯ ತಾಯಿ ಹಾಗೂ ಇನ್ನೊಂದನ್ನು ಗಂಡ ಕಟ್ಟುವ ರೂಢಿ ಇದೆ. ಇತ್ತೀಚೆಗೆ ಈ ಪದ್ಧತಿ ಸ್ವಲ್ಪ ಬದಲಾವಣೆ ಹೊಂದಿದೆ. ವೀರಶೈವ ಸಮುದಾಯದಲ್ಲಿ ಮದುವೆ ಕಲ್ಯಾಣ ಮಂಟಪದಲ್ಲಿ ನಡೆದರೆ ಮಾಂಗಲ್ಯವನ್ನು ಮನೆಯಲ್ಲೇ ಮುಗಿಸಿಕೊಂಡು ಬರುತ್ತಾರೆ. ದೇವಸ್ಥಾನದಲ್ಲಿ ಮದುವೆಯಾದರೆ ಈ ಪದ್ಧತಿ ಇರುವುದಿಲ್ಲ. ವಡ್ಡ ಸಮುದಾಯದಲ್ಲಿ ತಾಳಿ ಕಟ್ಟುವ ಮುನ್ನ ಹಂದರದಲ್ಲಿ ನೆಟ್ಟ ಹಾರೆಗೆ ತಾಳಿ ಮುಟ್ಟಿಸುವರು. ಮುಸ್ಲಿಮರಲ್ಲಿ ಅತ್ತೆ ಅಥವಾ ತಾಯಿ ತಾಳಿ ಕಟ್ಟುತ್ತಾಳೆ. ಮೌಲ್ವಿಯು ವಧುವರರ ಒಪ್ಪಿಗೆ ಪಡೆಯುತ್ತಾನೆ. ಅಂದರೆ ಮೂರು ಬಾರಿ 'ಕಬೂಲ್ ಕಿಯಾಕ್ಯಾ' ಎಂದು ಉಚ್ಚರಿಸುವಂತೆ ಹೇಳುತ್ತಾನೆ. ಹಾಗೆಯೆ ಹೆಣ್ಣು ಗಂಡಿನ ಕಡೆಯವರಿಂದ ಸಾಕ್ಷಿ ಹಾಕಿಸುತ್ತಾನೆ. ಪಿಂಜಾರ ಮದುವೆಗಳಲ್ಲಿ ಕೆಲವು ಹಿಂದೂ ಪದ್ಧತಿಗಳನ್ನು ಹೋಲುವುದು ಈ ಭಾಗದಲ್ಲಿ ಕಂಡು ಬರುವ ವಿಶೇಷವಾಗಿದೆ.

ಮುಸ್ಲಿಂರನ್ನು ಬಿಟ್ಟು ಉಳಿದ ಬಹುತೇಕ ವರ್ಗಗಳಲ್ಲಿ ಸ್ಯಾಸೆ ಕಟ್ಟೆಯ, ಮೇಲೆ ತಾಳಿ ಕಟ್ಟಿಸುತ್ತಾರೆ. ವೈಶ್ಯ ಬ್ರಾಹ್ಮಣರು ಮಾಂಗಲ್ಯ ಮಂಟಪದಲ್ಲಿ (ಹಸೆ ಮಂಟಪ) ಮಾಂಗಲ್ಯ ಕಟ್ಟುತ್ತಾರೆ. ವೈಶ್ಯರಲ್ಲಿ ಮಾಂಗಲ್ಯಕ್ಕಿಂತ ಮುಂಚೆ ಕಂಡುಬರುವ ವಧುವಿನ ಗೌರಿಪೂಜೆ, ವರನ ಕಾಶಿಯಾತ್ರೆ ವಿಶಿಷ್ಟ ಆಚರಣೆಗಳಾಗಿವೆ. ಹುಡುಗಿಯ ತಂದೆ ತಾಯಿಯರು ಕಾಶಿಗೆ ವಿರಕ್ತನಾಗಿ ಹೊರಟ ಅಳಿಯನನ್ನು ವಾಪಸ್ಸು ಕಾಲ್ತೊಳೆದು ಕರೆತಂದು ಕನ್ಯಾ ದಾನ ಮಾಡುವ ಸಂಕೇತ ಇದಾಗಿದೆ. ಮಾಂಗಲ್ಯದ ನಂತರ ಹೋಮ, ಅರುಂದತಿ ನಕ್ಷತ್ರ ದರ್ಶನ, ಹೂವಿನ ಚಂಡಾಟ ವೀಳ್ಯದೆಲೆಯಾಟ, ಅಕ್ಕಿ ಥರ್ಮಾಕೋಲ್ ಗುಂಡುಗಳನ್ನು ತಲೆಯ ಮೇಲೆ ಹಾಕುವ ಆಟ ಬಹುತೇಕ ವರ್ಗಗಳಲ್ಲಿ ಕಂಡುಬರುತ್ತದೆ. ಗೊಲ್ಲ ಸಮುದಾಯದಲ್ಲಿ ಹಾಲಿನಲ್ಲಿ ಮುತ್ತು ಹಾಕಿ ವಧುವರರನ್ನು ಹುಡುಕಲು ಹಚ್ಚುತ್ತಾರೆ. ಕೆಲವರು ನೀರಿನಲ್ಲಿ ಮೂಗುತಿ ಹಾಕಿ ಹುಡುಕಲು ಹೇಳುವರು. ಯಾರು ಹುಡುಕುತ್ತಾರೊ ಅವರೇ ಜೀವನದಲ್ಲಿ ಮುಂದೆ ಅಧಿಕಾರ ಚಲಾಯಿಸುತ್ತಾರೆ ಎಂಬ ನಂಬಿಕೆ ಇದೆ. ಮಾಂಗಲ್ಯ ಕಟ್ಟಿಸುವಾಗ ಹುಡುಗಿಗೆ ಕೆಂಪು ಅಥವಾ ಹಳದಿ ಸೀರೆ, ಹುಡುಗನಿಗೆ ರೇಶ್ಮೆ ಮಡಿ ಪಂಚೆ, ಅಥವಾ ದೋತ್ರ, ಪೈಜಾಮ ತೊಡಿಸುತ್ತಾರೆ. ಮೈಸೂರು ಪೇಠಾ ತೊಡಿಸುವ ಪದ್ಧತಿಯೂ ಕೆಲವರಲ್ಲಿದೆ.

ಮದುವೆಯಾದ ೧೬ನೇ ದಿನ ವೀರಶೈವರು ಉಡಿತುಂಬಿಸಿ ಕೊಟ್ಟರೆ ವೈಶ್ಯರಲ್ಲಿ ಮದುವೆಯಾದ ದಿನವೇ ಇರುತ್ತದೆ. ಉಡಿತುಂಬಿ ಕೊಡುವುದಕ್ಕೆ 'ಸೋಬನ', 'ಪ್ರಸ್ಥ', ಎಂಬಿತ್ಯಾದಿ ಹೆಸರುಗಳಿಂದ

ಕರೆಯುತ್ತಾರೆ. ಮಧುಮಕ್ಕಳನ್ನು ಮಂಚದ ಮೇಲೆ ಕೂಡಿಸಿ ವಿಧ ವಿಧ ತಿಂಡಿ ಪದಾರ್ಥಗಳನ್ನಿಟ್ಟು ಆರತಿ ಮಾಡುತ್ತಾರೆ. ಈ ಸಮಯದಲ್ಲಿ ಸೋಬಾನೆ ಹಾಡು ಹಾಡುತ್ತಾರೆ. ಮಧುಮಕ್ಕಳಿಬ್ಬರು ಐದು ಜನ ಹಿರಿಯರಿಂದ ಆಶೀರ್ವಾದ ಪಡೆದು ಫಲಧಾನ ಕಾಯಿ ಕೊಡುತ್ತಾರೆ. ವೀರಶೈವರಲ್ಲಿ ಮದುವೆಯಾದ ಮೂರನೆ ದಿನ ವಾರದ ನೀರು ಹಾಕುತ್ತಾರೆ. ಮುಸ್ಲಿಂ ಸಮುದಾಯದಲ್ಲಿ ಮದುವೆಯಾದ ಐದು ದಿನಗಳವರೆಗೂ ಹೂಮುಡಿಸಿ ಆರತಿ ಮಾಡುತ್ತಾರೆ. ಮದುವೆಯಾದ ೯ನೇ ದಿನ ನಾಗೋಲಿ ಶಾಸ್ತ್ರ ಮಾಡಿ ಹಂದ್ರ ತಿರುವಿ ಹಾಕುತ್ತಾರೆ. ನಂತರ ಬಾಸಿಂಗ, ಹಾರ ಎಲ್ಲವನ್ನು ತೆಗೆದುಕೊಂಡು ಹೋಗಿ ಗಂಗೆಪೂಜೆ ಮಾಡಿಕೊಂಡು ಬರುತ್ತಾರೆ. ಕನಕಗಿರಿಯ ಗೊಲ್ಲರ ಮದುವೆ ಸಂಪ್ರದಾಯಗಳು ವಿಶಿಷ್ಟವಾಗಿ ಕಂಡುಬರುತ್ತವೆ.

೩.೧೪. ಶವ ಸಂಸ್ಕಾರ ಪದ್ಧತಿ

ಜನನ ಪೂರ್ವದಿಂದಲೂ ಆಚರಣೆ, ಸಂಸ್ಕಾರಕ್ಕೊಳಪಟ್ಟ ಈ ದೇಹ ಮರಣಾನಂತರವೂ ಅನೇಕ ಸಂಸ್ಕಾರಗಳನ್ನು ಪಡೆಯುತ್ತದೆ. ಹಲವಾರು ಸಂಸ್ಕೃತಿಗಳ ಹಿರಿಮೆಯಲ್ಲಿ ಮೆರೆದಾಡುವ ಭಾರತದಲ್ಲಿ ಮರಣ ಸಂಪ್ರದಾಯದಲ್ಲಿ ಎಲ್ಲಾ ಜನವರ್ಗದಲ್ಲೂ ತನ್ನದೇ ಆದ ವಿಶಿಷ್ಟತೆ ಕಂಡುಬರುತ್ತದೆ. ಜೀವಂತ ವ್ಯಕ್ತಿಗೆ ಮಾಡುವ ವಿವಿಧ ಕ್ರಿಯಾಚರಣೆಗಳು ಎಷ್ಟು ಮುಖ್ಯವೋ ನಂತರ ಮಾಡುವ ಕ್ರಿಯಾಚರಣೆಗಳು ಅಷ್ಟೇ ಮುಖ್ಯವಾಗಿವೆ. ಏಕೆಂದರೆ ಪಂಚಭೂತಗಳಿಂದಾದ ಕಾಯವನ್ನು ಪಂಚಭೂತಗಳಿಗೆ ಒಪ್ಪಿಸುವುದಲ್ಲದೆ ದೇಹದಿಂದ ಪರಿತ್ಯಕ್ತವಾದ ಆತ್ಮಕ್ಕೆ ಒಂದು ಉತ್ತಮವಾದ ನೆಲೆಯನ್ನು ಅನುಸಂಧಾನ ಮಾಡುವ ಉದ್ದೇಶವೂ ಆಗಿರುತ್ತದೆ. ಆದ್ದರಿಂದ ಅವು ಅಂತ್ಯಕ್ರಿಯೆಗಳಷ್ಟೆ ಅಲ್ಲ, ಅವು ಉತ್ತರ ಕ್ರಿಯೆಗಳು ಅವು ಅನೇಕ ಶಾಸ್ತ್ರವಿಧಿಗಳಿಂದ ಕೂಡಿರುವುದರಿಂದ, ನಾವು ಇದನ್ನು 'ಸಂಸ್ಕಾರ' ಎಂದು ಪರಿಗಣಿಸಬಹುದು.

ಸಾಮಾನ್ಯವಾಗಿ ಎಲ್ಲ ಸಮುದಾಯದಲ್ಲಿ ವ್ಯಕ್ತಿಯ ಜೀವ ಹೋಗುತ್ತಿದೆ ಎಂದು ತಿಳಿದಾಗ ಬಾಯಲ್ಲಿ ನೀರು, ಗಂಗೆ ನೀರು, ತುಳಸಿ ನೀರು ಹಾಕುತ್ತಾರೆ. ವೀರಶೈವರು ಮುಚ್ಚಿಗರು ಶವವನ್ನು ಕೂಡಿಸಿ ಗುಟಿಗೆ ಬಡಿಯುತ್ತಾರೆ. ಶವಕ್ಕೆ ಸ್ನಾನ ಮಾಡಿಸಿ, ವಿಭೂತಿ ಧಾರಣೆ ಮಾಡಿ, ಕೈಯಲ್ಲಿ ವಿಭೂತಿ ಉಂಡೆಯನ್ನು ಬಿಲ್ವ ಪತ್ರೆಯನ್ನು ಕೊಡುವರು. ಬಾಯಲ್ಲಿ ಎಲೆ ಅಡಿಕೆ ಕುಟ್ಟಿ ಇಡುವರು. ಶವದ ಪಕ್ಕದಲ್ಲಿ ದೀಪ ಅಥವಾ ಕಳಸ ಹಚ್ಚಿಡುವರು. ವೈಶ್ಯ, ಬ್ರಾಹ್ಮಣ, ಮುಸ್ಲಿಂರಲ್ಲಿ ಶವವನ್ನು ಮಲಗಿಸುತ್ತಾರೆ. ವೈಶ್ಯರು ಶವದ ಕಾಲನ್ನು ಮಡಿಚಿ ಮಲಗಿಸುತ್ತಾರೆ. ಇವರಲ್ಲಿ ಶವವನ್ನು ಸುಡುವ ಪದ್ಧತಿ ಇದೆ. ಕಬ್ಬೇರು, ನಾಯಕರು, ವೀರಶೈವರು, ವಡ್ಡರು ಇನ್ನೂ ಮುಂತಾದವರು ಶವವನ್ನು ಹೂಳುತ್ತಾರೆ. ಎಲ್ಲಾ ಸಮುದಾಯದಲ್ಲಿ ಬಂಧುಗಳು ಬರುವವರೆಗೆ ರಾತ್ರಿಯೆಲ್ಲಾ ಶವದ ಮುಂದೆ ಕುಳಿತು ಭಜನೆ ಮಾಡುತ್ತಾರೆ. ಇದರ ಉದ್ದೇಶ ಶವವನ್ನು ಕಾಯುವುದು. ಬ್ರಾಹ್ಮಣರು ಬಹಳ ಹೊತ್ತು ಶವವನ್ನು ಇಟ್ಟು ಕಾಯುವುದಿಲ್ಲ.

ಸತ್ತ ಮನೆಯಲ್ಲಿ ಬ್ಯಾಂಡ್ ಬಾರಿಸುತ್ತಾರೆ. ಪಟಾಕಿ ಹಾರಿಸುತ್ತಾರೆ. ಶವ ಎತ್ತುವುದರೊಳಗೆ ಮೂರು ಬಾರಿ ಬ್ಯಾಂಡ್ ಬಾರಿಸುತ್ತಾರೆ. ಅದರ ನಾದವು ದುಃಖಮಯವಾಗಿರುತ್ತದೆ. ಎಲ್ಲ ಜನವರ್ಗದಲ್ಲಿ

ಶವವನ್ನು ಸ್ಮಶಾನಕ್ಕೆ ಒಯ್ಯುವುದಕ್ಕಾಗಿ ಬೇರೆ ಬೇರೆ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ. ಮುಸ್ಲಿಮರು ಜನಜಾ, ವೀರಶೈವರು ವಿಮಾನ (ಕಬ್ಬಿಣದಿಂದ ತಯಾರಿಸಿದ್ದು) ಮುಚ್ಚಿಗೇರು, ಕಬ್ಬೇರು, ವಡ್ಡರು, ಗುರುದೀಕ್ಷೆ ಪಡೆದವರನ್ನು ಮಂಟಪದಲ್ಲಿ ಕೂಡಿಸಿಕೊಂಡು ಹೋಗುತ್ತಾರೆ. ಶವ ನೋಡಲು ಬಂದ ಸಂಬಂಧಿಕರು ಹೂವಿನ ಹಾರ, ವಿಭೂತಿ, ಊದಿನಕಡ್ಡಿ, ತೆಂಗಿನಕಾಯಿ, ಮುತ್ತೈದೆ ಸತ್ತರೆ ಸೂಸಗ ತರುವರು. ಶವಯಾತ್ರೆ ಹೊರಟಾಗ ಹಿಂದೆ ಎಲೆ, ಮಂಡಾಳು, ನವಣೆ ಚಲ್ಲುತ್ತಾರೆ. ವೀರಶೈವರಲ್ಲಿ ಮುಂದೆ ಜನರು ತಂದಂತಹ ಕಾಯಿಗಳನ್ನು ಒಡೆಯುತ್ತಾ ಸಾಗುವರು.

ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ದೇವಾಂಗದವರು ಹೆಣವನ್ನು ಹೊರಗಡೆ ತಂದು ಸಿದಿಗಿ(ಚಟ್ಟ)ಯ ಮೇಲೆ ಮಲಗಿಸಿ, ಹೊಸ ಬಿಳಿ ಬಟ್ಟೆಯನ್ನು ನೀರಿನಲ್ಲಿ ಹಿಂಡಿ ಹೆಣದ ಮೇಲೆ ಹಾಕುತ್ತಾರೆ. ಮನೆಯವರು ಎಳ್ಳನ್ನು ನೀರನ್ನು ಹೆಣದ ಬಾಯಿಗೆ ಹಾಕಿ ಬಾಯಿ ಬಡಿದುಕೊಳ್ಳುತ್ತಾರೆ. ಶವಯಾತ್ರೆ ಹೊರಟಾಗ ರಾಮಧ್ಯಾನ ಮಾಡುತ್ತಾ ಸಾಗುತ್ತಾರೆ. ಋಣ ತೀರಿಸುವವರು ಬೆಂಕಿ ತುಂಬಿದ ಚಿಕ್ಕ ಗಡಿಗೆ ಮತ್ತು ನೀರಿನ ಕೊಡವನ್ನು ಹೊತ್ತು ಹೆಣದ ಮುಂದೆ ಸಾಗುತ್ತಾರೆ. ಹೆಣ ಸುಡುವ ಅಥವಾ ಹೂಳುವ ಜಾಗದಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಗಡಿಗೆಯನ್ನು ಒಡೆಯುವರು. ನಂತರ ಚಿತೆಗೆ ಬೆಂಕಿ ಇಡುವರು. ಹೂಳುವವರು ಹೂಳುತ್ತಾರೆ. ಒಂಬತ್ತು ಭಾಗದಲ್ಲಿ ಅಂತ್ರ ಬರೆದು ಪೂಜಿಸುವರು. ಮುಸ್ಲಿಮರು ಕೊನೆಯ ಕ್ಷಣದಲ್ಲಿ ನಮಾಜ್ ಮಾಡುತ್ತಾರೆ. ವೀರಶೈವರಲ್ಲಿ ಮಂಗಳಾರತಿ ಮಾಡಿ 'ಜಯ ನಮ ಪಾರ್ವತಿ ಪತಿ-ಹರ ಹರ ಮಹದೇವ' ಎನ್ನುತ್ತಾರೆ. ನಂತರ ಎಲ್ಲರು ಹಿಡಿ ಹಿಡಿ ಮಣ್ಣನ್ನು ಹಾಕುತ್ತಾರೆ. ವೀರಶೈವ, ಕುರುಬರು, ಮುಚ್ಚಿಗರು, ಕಬ್ಬೇರು, ಮಹಿಳೆಯರು ಹೆಣದ ಹಿಂದೆ ಸ್ಮಶಾನಕ್ಕೆ ಹೋಗಿ ಹೆಣ್ಣಿನ ಮುತ್ತೈದೆತನವನ್ನು ಇನ್ನುಳಿದ ವಿಧವೆಯರು ತೆಗೆದು ಮುಂದೆ ಮುಖ ಯಾರಿಗೂ ಕಾಣದಂತೆ ಅಚ್ಚಡ ಮುಚ್ಚಿಕೊಂಡು ಮನೆಗೆ ಬರುತ್ತಾರೆ.

ವೈಶ್ಯ, ಬ್ರಾಹ್ಮಣ, ದೇವಾಂಗದವರಲ್ಲಿ ಹಿರಿಯ ಮಗ ಚಿತೆಗೆ ಅಗ್ನಿ ಸ್ಪರ್ಶ ಮಾಡುತ್ತಾನೆ. ಒಂದು ವೇಳೆ ಹೆಂಡತಿ ಬಸುರಿ ಇದ್ದರೆ ಋಣ ಕೊಡುವುದಿಲ್ಲ. ತಂದೆ ತಾಯಿ ಇದ್ದವರು ಸ್ಮಶಾನಕ್ಕೆ ಹೋಗುವುದಿಲ್ಲ. ಇವರಲ್ಲಿ ಮಹಿಳೆಯರು ಸ್ಮಶಾನಕ್ಕೆ ಹೋಗುವುದಿಲ್ಲ. ಬಸ್ಮವಾದ ಶವದ ಬೂದಿಯನ್ನು ನದಿಗೆ ಬಿಡುತ್ತಾರೆ. ಶವ ಹೂಳಲು ಕುಣಿ ತೊಡುವ ಬಗ್ಗೆ ನೋಡಿದಾಗ ಈ ಕೆಲಸವನ್ನು ಹರಿಜನ, ಮಾದಿಗರು ಮಾಡುತ್ತಾರೆ. ಅಗಸರು ಶವದ ಬಟ್ಟೆ, ಹಾಸಿಗೆಗಳನ್ನು ಒಯ್ಯುತ್ತಾರೆ. ಸಂಸ್ಕಾರದ ಬಳಿಕ ಸತ್ತವರ ಮನೆಯ ದೀಪನೋಡಿ ಮನೆಯ ಮುಂದೆ ಇಟ್ಟಿರುವ ಸಗಣಿ ಹಾಗೂ ಗರಿಕೆಯನ್ನು ಕಾಲಿನ ಹೆಬ್ಬೆರಳಿನಿಂದ ಮುಟ್ಟಿ ಹೋಗುತ್ತಾರೆ. ತರುವಾಯ ಮನೆಯ ಹೆಣ್ಣುಮಕ್ಕಳು ಮನೆಯನ್ನು ಶುಚಿಗೊಳಿಸಿ ಸ್ನಾನ ಮಾಡುತ್ತಾರೆ. ಹತ್ತಿರದ ಊರಿನ ಬಳಗದವರು ಇವರಿಗೆ ಊಟ ತಂದುಕೊಡುತ್ತಾರೆ.

ಸಾಮಾನ್ಯವಾಗಿ ಎಲ್ಲ ಜನ ವರ್ಗದಲ್ಲಿ ೫, ೯, ೧೦, ೧೧, ೧೬, ನೇ ದಿನದಂದು ತಿಥಿಮಾಡಿ ಸೂತಕ ಕಳೆದುಕೊಳ್ಳುತ್ತಾರೆ. ಕೆಲವರು ಸತ್ತ ಜಾಗದಲ್ಲಿ ಎಡೆ ಮಾಡಿಕೊಡುವುದು, ಪೂಜೆ ಪುನಸ್ಕಾರ

ಸಲ್ಲಿಸುವುದು, ಲೋಬಾನ ಹಾಕುವುದು ದೈವದ ಊಟ ಮಾಡಿಸುವುದು ಮಾಡುತ್ತಾರೆ. ಸತ್ತ ೩ನೇ ಅಥವಾ ೫ನೇ ದಿನದಲ್ಲಿ ಸತ್ತ ಜಾಗದಲ್ಲಿ ಕುರಿ ಅಥವಾ ಕೋಳಿ ಬ್ಯಾಟಿಮಾಡಿ ಅದರ ರಕ್ತ ಹೂಳುತ್ತಾರೆ. ಸಮಾದಿಯ ಮೇಲೆ ಅಥವಾ ಸುಟ್ಟ ಜಾಗದಲ್ಲಿ ತಲೆ, ಎದೆ, ಕಾಲಿನ ಭಾಗದಲ್ಲಿ ೩ನೇ ದಿನದಲ್ಲಿ ಅನ್ನದ ಪಿಂಡ ಇಡುತ್ತಾರೆ. ಇದನ್ನು ಕಾಗೆ ತಿಂದರೆ ಶ್ರೇಷ್ಠ ಅಥವಾ ಮೋಕ್ಷ ಎಂಬ ಭಾವನೆ ಇದೆ. ತಂದೆ ತೀರಿಕೊಂಡರೆ ವೈಶ್ಯರು, ಬ್ರಾಹ್ಮಣರಲ್ಲಿ ತಲೆ ಬೋಳಿಸುವ ಪದ್ಧತಿ ಇದೆ. ಇದು ಋಣ ತೀರಿಸುವ ಸಂಕೇತವಾಗಿದೆ. ಬೆಂಕಿ ಹಿಡಿದವರು ೧೧ ಅಥವಾ ೧೩ ದಿವಸಗಳವರೆಗೆ ಯಾರನ್ನೂ ನೋಡುವಂತಿಲ್ಲ. ೧೩ನೇ ದಿನ ಕರ್ಮ ಮಾಡಿದವರು ಯಾವುದಾದರೊಂದು ಕ್ಷೇತ್ರದಲ್ಲಿ ರಾತ್ರಿ ವಸತಿ ಮಾಡಿ ಬೀಗರಾಗುವವರ ಮನೆಗೆ ಹೋಗಿ ಹೊಸ ಬಟ್ಟೆ ತೊಟ್ಟು, ಹೋಳಿಗೆ ಊಟ ಮಾಡಿ ಬರಬೇಕು. ಇಲ್ಲಿಗೆ ಇವರು ಸತ್ತಾಗ ಮಾಡುವ ಆಚರಣೆ ಕೊನೆಗೊಳ್ಳುತ್ತದೆ. ನಂತರ ವರ್ಷಕ್ಕೊಮ್ಮೆ, ಯುಗಾದಿ, ದಸರಾ ದಿನದಂದು ವರ್ಷದ ವೈದಿಕ ಹಾಗೂ ಹೀರೇರನ್ನು ಕರೆದುಕೊಳ್ಳುವ ಮೂಲಕ ಸ್ವರ್ಗಸ್ಥರಾದ ಹಿರಿಯರ ಆಹ್ವಾನ ಆಚರಣೆ ಮಾಡುತ್ತಾರೆ. ಸತ್ತಾಗ ಕ್ಷತ್ರಿಯರಿಗೆ ದಾಸಯ್ಯ ಸ್ವಾಮಿ ಆಚರಣೆ ಮಾಡಿಸುತ್ತಾನೆ. ವೈಶ್ಯ, ಬ್ರಾಹ್ಮಣರಿಗೆ ಬ್ರಾಹ್ಮಣರು ಕೆಲವರಿಗೆ ಐನೇರು ಮಾಡಿಸುತ್ತಾರೆ. ಮಕ್ಕಳು ಸತ್ತಾಗ ಯಾರಲ್ಲೂ ಅಂತಹ ಹೆಚ್ಚಿನ ಆಚರಣೆಗಳೇನು ಕಂಡುಬರುವುದಿಲ್ಲ. ಒಟ್ಟಾರೆ ಈ ಎಲ್ಲ ಆಚರಣೆಗಳನ್ನು ಗಮನಿಸಿದಾಗ ಸತ್ತ ವ್ಯಕ್ತಿ ಭೂತವಾಗಿ ಕಾಡಬಾರದೆಂಬ ಕಾರಣದಿಂದ ಹುಟ್ಟಿದವುಗಳಾಗಿರಬೇಕೆನಿಸುತ್ತದೆ.

೫.೧.೫. ಇತರ ಶಾಸ್ತ್ರ ಸಂಪ್ರದಾಯಗಳು

ಜವುಳ: ಹಿಂದೂ ಸಮುದಾಯದ ಗಂಡುಮಕ್ಕಳಿಗೆ ಸಮ ವರ್ಷದಲ್ಲಿ ತಲೆಕೂದಲು ತೆಗೆಯುವ ಶಾಸ್ತ್ರ ಮಾಡುತ್ತಾರೆ. ಇದನ್ನೆ ಜವುಳ ಅಥವಾ ಮುಡಿ ತೆಗೆಯುವುದು ಎನ್ನುತ್ತಾರೆ. ಹೆಣ್ಣು ಮಕ್ಕಳಿಗೆ ಜವುಳ ತೆಗೆಯುವುದು ಕೆಲವರಲ್ಲಿ ನಿಷೇಧವಿದ್ದರೆ ಕೆಲವರಲ್ಲಿ ನಿಷೇಧವಿಲ್ಲ. ಮನೆಯಲ್ಲಿ, ದೇವಸ್ಥಾನದಲ್ಲಿ, ಕುಲದೇವರಲ್ಲಿ ಅಥವಾ ಹರಕೆ ಹೊತ್ತ ದೇವರ ಸನ್ನಿಧಿಯಲ್ಲಿ ಜವುಳ ತೆಗೆಯುವ ಪದ್ಧತಿ ಇದೆ. ಹಿಂದೂಗಳಲ್ಲಿ ಜವುಳ ಕಾರ್ಯವನ್ನು ಸೋದರ ಮಾವನಿಂದ ಮಾಡಿಸುತ್ತಾರೆ. ಮಗುವನ್ನು ಮೊದಲು ತೊಡೆಯ ಮೇಲೆ ಕೂಡಿಸಿ ಸೀಳಿದ ವೀಳ್ಯದೆಲೆಯಿಂದ ಐದು ಕಡೆಗೆ ಎಲೆಗತ್ತರಿ ಮಾಡಿ ನಂತರ ಕತ್ತರಿಯಿಂದ ೫ ಕಡೆ ಶಾಸ್ತ್ರಕ್ಕೆ ಕತ್ತರಿಸುತ್ತಾರೆ. ನಂತರ ಕ್ಷೌರಿಕರು ತಲೆಯನ್ನು ಬೋಳಿಸುತ್ತಾರೆ. ಮಗುವಿಗೆ ಸ್ನಾನ ಮಾಡಿಸಿ ದೇವರಿಗೆ ಪೂಜೆ ಪುನಸ್ಕಾರಗಳಾದ ನಂತರ ಬಂಧುಗಳು ಜವುಳ ತೆಗೆಸಿಕೊಂಡ ಮಗುವಿಗೆ ಬಟ್ಟೆ ಕೊಡುತ್ತಾರೆ. ಜವುಳ ತೆಗೆದ ಕೂದಲನ್ನು ಬಟ್ಟೆಯಲ್ಲಿ ಕಟ್ಟಿ ದೇವರ ಸನ್ನಿಧಿಯಲ್ಲಿ ಅಥವಾ ನದಿಯಲ್ಲಿ ಬಿಟ್ಟು ಬರುತ್ತಾರೆ.

ಮುಂಜಿ

ವೀರಶೈವರಲ್ಲಿ ಅಯ್ಯಾಚಾರವೆಂತಲೂ, ವೈಶ್ಯ, ಬ್ರಾಹ್ಮಣ, ದೇವಾಂಗದವರಲ್ಲಿ ಮುಂಜಿ ಎಂತಲೂ ಕರೆಯುವ ಈ ಆಚರಣೆಯು ಗಂಡು ಮಕ್ಕಳಿಗೆ ಬಾಲ್ಯದಲ್ಲಿ ನಡೆಸುವ ಆಚರಣೆಯಾಗಿದೆ. ಬ್ರಾಹ್ಮಣರಿಗೆ ಇದು ಉಪನಯನ ವಿಧಿಯಾಗಿದೆ. ವೈಶ್ಯರಲ್ಲಿ ಈ ವಿಧಿಯನ್ನು ಮದುವೆಯಲ್ಲಿ ಮಾಡಿಸುತ್ತಾರೆ.

ಮುಂಜಿವಿ ಒಂದು ರೀತಿಯಲ್ಲಿ ಮದುವೆ ಆದಂತೆಯೆ ಬ್ರಾಹ್ಮಣರಿಗೆ ಮುಂಜಿವಿ ಖಡ್ಡಾಯ, ಏಕೆಂದರೆ ಮನೆಯಲ್ಲಿ ಮಗುವಿನ ತಂದೆ ತಾಯಿಗಳು ತೀರಿದರೆ ಅಥವಾ ಯಾರಾದರು ತೀರಿದರೆ ಕಾಷ್ಟಕೊಡಲು ಮುಂಜಿವಿ ಆದ ಮಗನೇ ಬೇಕು. ಹೀಗಾಗಿ ಮುಂಜಿವಿ ಮಾಡಿಸಿ ಜನಿವಾರ ಹಾಕುತ್ತಾರೆ.

ವೀರಶೈವ ಜಂಗಮರಲ್ಲಿ 'ಅಯ್ಯಾಚಾರ' (ಅಯ್ಯಗಳ ಆಚಾರ)ವೆಂಬುದು ಮುಖ್ಯ ವಿಧಿಯಾಗಿದೆ. ಈ ಕಾರ್ಯವನ್ನು ಹೆಚ್ಚಾಗಿ ಎಂಟು ವರ್ಷದ ನಂತರವೇ ಮಾಡುತ್ತಾರೆ. ಖರ್ಚುದಾಯಕವಾಗಿರುವ ಈ ಶಾಸ್ತ್ರಗಳು ಸಾಮಾನ್ಯವಾಗಿ ಸಾಮೂಹಿಕವಾಗಿ ಮಾಡುತ್ತಾರೆ. ಕೂದಲು ಕತ್ತರಿಸಿಕೊಂಡು, ಸ್ನಾನಮಾಡಿ ಕಾವಿ ಬಟ್ಟೆ ಧರಿಸಿಕೊಂಡು ಸ್ವಾಮಿಗಳಿಂದ ಲಿಂಗಧಾರಣೆ ಮಾಡಿಸಿಕೊಂಡು ಕಿವಿಯಲ್ಲಿ ಪಂಚಾಕ್ಷರಿ ಮಂತ್ರದ ಉಪದೇಶವಾಗುತ್ತದೆ. ಅಯ್ಯಾಚಾರವಾದ ನಂತರ ಐದು ಮನೆಗಳಿಗೆ ಹೋಗಿ ಬಿಕ್ಷೆ ಬೇಡಿ ಬರಬೇಕು. ಈ ಸಮುದಾಯದಲ್ಲಿ ಅಯ್ಯಾಚಾರವಾದರೆ ಮಾತ್ರ ಮದುವೆಗೆ ಮತ್ತು ಪಾದಪೂಜೆಗೆ ಅರ್ಹರಾಗುತ್ತಾರೆ. ಮುಸ್ಲಿಂ ಸಮುದಾಯದಲ್ಲಿ 'ಸುಂತಿ' ಒಂದು ಬಾಲ್ಯದ ಪ್ರಮುಖ ವಿಧಿ. ಶಿಶ್ನದ ಮುಂದಿನ ಚರ್ಮವನ್ನು ಕತ್ತರಿಸುವುದರಿಂದ ಇಸ್ಲಾಂ ಧರ್ಮದ ದೀಕ್ಷೆ ಪಡೆದಂತಾಗುತ್ತದೆ. ಈ ವಿಧಿಯು ಏಳುವರ್ಷದಿಂದ ಹನ್ನೆರಡು ವರ್ಷದವರೆಗೆ ನಡೆಯುತ್ತದೆ.

ಋತುಮತಿ

ಋತುಮತಿಯಾದ ಹುಡುಗಿಯ ಜೀವನದ ಒಂದು ಮಹತ್ವದ ಘಟ್ಟ ತಲುಪಿದಂತೆ ದೊಡ್ಡವಳಾದಳು, ಮೈನೆರೆದಳು, ಕೈಗೆ ಬಂದವಳು ಎಂಬ ಇನ್ನಿತರ ಹೆಸರುಗಳಿಂದ ಋತುಮತಿಯಾದವರನ್ನು ಕರೆಯುತ್ತಾರೆ. ಆಗ ಇವರನ್ನು ಯಾರೂ ಮುಟ್ಟುವಂತಿಲ್ಲ ಮೈನೆರೆದಂದಿನಿಂದ ಐದು ದಿನ ಆಕೆಗೆ ಸಂಕ್ರಮಣ ಕಾಲಾವಧಿ ಈ ಕಾಲಾವಧಿಯಲ್ಲಿ ವಿಶಿಷ್ಟ ಆಹಾರ, ಕೆಲವೊಂದು ವಿಧಿನಿಷೇಧಗಳಿರುತ್ತವೆ. ಐದು, ಹನ್ನೊಂದು ದಿನಗಳವರೆಗೆ ಮುತ್ತೈದೆಯರಿಂದ ಸ್ನಾನ ಗಂಗಾಪೂಜೆ, ಆರತಿ, ದೇವಸ್ಥಾನಕ್ಕೆ ಹೋಗಿಬರುವುದು ಈ ಎಲ್ಲ ಆಚರಣೆಗಳ ಮೂಲಕ ಸೂತಕ ಕಳೆದುಕೊಂಡು ಆಕೆಯನ್ನು ಮತ್ತೆ ಮನೆಯೊಳಗೆ ಕರೆದುಕೊಳ್ಳಲಾಗುತ್ತದೆ. ಹೊಲೆ ಶುದ್ಧಗಳ ಆಚರಣೆ ಇಲ್ಲಿ ನಡೆಯುತ್ತದೆ. ಹಿಂದೆ ಮೈನೆರೆದವರಿಗೆ ವೇಷ ಭೂಷಣ ತೊಡಸಿ ವಿಜೃಂಭಣೆಯಿಂದ ಆರತಿ ಮಾಡುತ್ತಿದ್ದರು. ಈ ಪದ್ಧತಿ ಈಗ ಕಡಿಮೆಯಾಗಿದೆ. ನೆಂಟರು, ನೆರೆಹೊರೆಯವರು ಹುಡಿಗೆಗೆ ಒಸಗೆ ಮಾಡುತ್ತಾರೆ. ಹತ್ತಿರದ ಬಂಧುಗಳು ಬಟ್ಟೆ, ಸಿಹಿ ತಿಂಡಿ ಒಸಗೆ ಮಾಡುತ್ತಾರೆ. ಉಳ್ಳವರು ಬಂಗಾರ ಬೆಳ್ಳಿ ಕಾಣಿಕೆಯಾಗಿ ಕೊಡುತ್ತಾರೆ.

ಮೈನೆರೆದ ಹುಡುಗಿಗೆ ಐದು ದಿನಗಳವರೆಗೆ ಶ್ಯಾವಿಗೆ, ಕೊಬ್ಬರಿ, ಬೆಲ್ಲ, ಎಳ್ಳುಚಿಗಳಿ ತಿನ್ನಲು ಕೊಡುತ್ತಾರೆ. ಹಾಗೆ ಸಿಹಿ ತಿನ್ನುವುದರಿಂದ ಒಳಗಿನ ಕೆಟ್ಟ ರಕ್ತ ಪೂರ್ತಿಯಾಗಿ ಹೊರ ಹೋಗುತ್ತದೆ ಎಂಬ ನಂಬಿಕೆ ಇದೆ. ಮೈನೆರೆದ ಸಮಯ ಚೆನ್ನಾಗಿಲ್ಲದಿದ್ದರೆ ದಾನ ಕೊಡುತ್ತಾರೆ. ಕಾರ್ಯಕ್ರಮದ ಕೊನೆಯ ದಿನ ಊಟದ ವ್ಯವಸ್ಥೆ ಇದ್ದು ಇದರ ಖರ್ಚು ವೆಚ್ಚವನ್ನು ಸೋದರಮಾವನು ನೋಡಿಕೊಳ್ಳುವ ರೂಢಿಯೂ ಇದೆ.

ಮೈನೆರದ ಸಂಪ್ರದಾಯವನ್ನು ಮುಚ್ಚಿಗರು, ಹರಿಜನರು, ವಡ್ಡರು, ಚಲುವಾದಿಯರು, ಅಗಸರು, ಉಪ್ಪಾರರು, ವಿಜೃಂಭಣೆಯಿಂದ ಆಚರಿಸುತ್ತಾರೆ. ಆ ಹುಡುಗಿಗೆ ಮೊದಲೇ ಗಂಡು ಗೊತ್ತಾಗಿದ್ದರೆ ಅವರಿಗೂ ಹೇಳಿ ಕಳುಹಿಸುತ್ತಾರೆ. ಅವರೂ ಒಸಗೆ ತರುತ್ತಾರೆ. ಮೇಲ್ವರ್ಗದ ಜನರು ಇತ್ತೀಚೆಗೆ ಈ ಆಚರಣೆಯನ್ನು ಶಾಸ್ತ್ರಕ್ಕೆ ಮಾಡಿ ಮುಗಿಸಿಬಿಡುತ್ತಾರೆ.

ಉಡಿಯಕ್ಕಿ

ಸಾಮಾನ್ಯವಾಗಿ ಎಲ್ಲ ವರ್ಗದ ಹೆಣ್ಣುಮಕ್ಕಳಲ್ಲಿ ಕಂಡುಬರುವ ವಿಶಿಷ್ಟ ಆಚರಣೆ ಇದಾಗಿದೆ. ಮದುವೆಯಾದವರು ತವರು ಮನೆಯಲ್ಲಿ, ಗಂಡನ ಮನೆಯಲ್ಲಿ ಆಗಾಗ ಉಡಿಯಕ್ಕಿ ಹಾಕುವುದುಂಟು, ಮದುವೆಯ ದಿನ, ಬಾಣಂತಿಗೆ ನಾಮಕರಣದ ದಿನ, ಮುತ್ತೈದೆಯಾಗಿ ಸತ್ತವರಿಗೆ ಕೊನೆಯ ಉಡಿಯಕ್ಕಿಯಾಗಿ ಹಾಕುತ್ತಾರೆ. ಬ್ರಾಹ್ಮಣರು, ದೇವಾಂಗ, ವೈಶ್ಯರಲ್ಲಿ ಎಲೆ, ಅಡಿಕೆ, ಗೋದಿ, ಬೆಲ್ಲ, ಕನ್ನಡಿ, ಗೊಂಬೆ, ಕೊಬ್ಬರಿ, ಬಾಚಣಿಕೆ, ಬಟ್ಟಲು ಇತ್ಯಾದಿಗಳನ್ನು ಉಡಿತುಂಬುತ್ತಾರೆ. ವರ್ಷಕ್ಕೊಮ್ಮೆ ಹಾಕುವ ಉಡಿಯಕ್ಕಿಯನ್ನು ದೇವರ ಮುಂದೆ ಸಡಿಲಿಸುತ್ತಾರೆ. ಹಿಂದೆ ಐದು ಹನ್ನೊಂದು ಮನೆಗಳಿಗೆ ಉಡಿಯಕ್ಕಿ ಹಾಕಿಸಿಕೊಂಡವರು ಉಡಿ ತುಂಬಿಸಿಕೊಳ್ಳಲು ಹೋಗುತ್ತಿದ್ದರು. ಈ ಪದ್ಧತಿ ಕಡಿಮೆಯಾಗಿ ಕೇವಲ ದೇವಸ್ಥಾನಕ್ಕೆ ಹೋಗಿ ಬಂದು ಬಿಡುತ್ತಾರೆ.

ತಲೆ ಮಂಡೆ ಕೊಡುವುದು

ಮಂಡೆ ಕೊಡುವುದು ಎಂದರೆ ಹರಕೆ ಹೊತ್ತ ದೇವರಿಗೆ ತಲೆಕೂದಲು ಕೊಡುವುದು. ತಮಗೆ ಕಷ್ಟ ಬಂದಾಗ, ಅನಾರೋಗ್ಯವಿದ್ದಾಗ ಇತ್ಯಾದಿ ಕಾರಣಗಳಿಗೆ ಮಂಡೆಕೊಡುವ ಪದ್ಧತಿ ಇದೆ. ಮನುಷ್ಯನನ್ನು ಕಾಡುವ ದುಷ್ಟ ದೈವಗಳು ಅವನ ತಲೆಕೂದಲಲ್ಲಿ ನೆಲೆಗೊಳ್ಳದಂತೆ ಅದರ ನಿವಾರಣೆಯ ಉಪಾಯವಾಗಿಯೇ ಮಂಡೆ ಕೊಡುವ ಪದ್ಧತಿ ಬೆಳೆದು ಬಂದಿದೆ (ಡಾ. ಟಿ. ಗೋವಿಂದರಾಜು, ೧೯೯೩, ೧೮೯). ಹಿಂದೂ ಧರ್ಮದಲ್ಲಿ ತಂದೆ-ತಾಯಿ ತೀರಿಕೊಂಡರೆ ಮಂಡೆಕೊಡುವ ಪದ್ಧತಿ ಇದೆ. ಬ್ರಾಹ್ಮಣರಲ್ಲಿ ಗಂಡ ಸತ್ತವಳು ವಿಧವೆಯಾಗುವ ಸಮಯದಲ್ಲಿ ಮಂಡೆ ಕೊಡುತ್ತಾರೆ. ಕೆಲವರು ಹೆಂಡತಿ ಬಸುರಿಯಾದಾಗ ಗಡ್ಡ ತಲೆಕೂದಲು ಬೋಳಿಸದೆ ಹೆರಿಗೆಯಾದ ನಂತರ ಕೂದಲು ಕೊಡುತ್ತಾರೆ. ಹೆರಿಗೆಯ ಸಮಯದಲ್ಲಿ ಸಹಭಾಗಿತ್ವದ ಸಂಕೇತ ಇದಾಗಿದೆ. ಆಕೆಗೆ ಕಂಟಕ ಬಾರದಂತೆ ದೇವರಿಗೆ ಸಲ್ಲಿಸುವ ಹರಕೆಯಾಗಿದೆ. ಹೀಗೆ ಕೂದಲು ತೆಗೆಸುವುದು ವಿವಿದೋದ್ದೇಶ ಸಂದರ್ಭಗಳಿದ್ದಾಗ್ಯೂ ಒಟ್ಟು ಆಶಯ ಮಾತ್ರ ಒಂದೇ ಎನಿಸುತ್ತದೆ.

೫.೨. ವಾರ್ಷಿಕಾವರ್ತನ ಆಚರಣೆಗಳು

೫.೨.೧. ಹಬ್ಬ-ಹರಿದಿನಗಳು

ದಸರಾ: ಕನಕಗಿರಿಯಲ್ಲಿ ಸಾಮಾನ್ಯವಾಗಿ ಎಲ್ಲ ವರ್ಗದ ಜನರು ಆಚರಿಸುವ ಹಬ್ಬ ಇದಾಗಿದೆ. ಈ ಹಬ್ಬವನ್ನು ಮಾನೌಮಿ, ಮಹಾನವಮಿ, ವಿಜಯದಶಮಿ, ಬನ್ನಿಹಬ್ಬ ಎಂತಲೂ ಕರೆಯುತ್ತಾರೆ. ಬನ್ನಿ ಹಬ್ಬದ ಮುನ್ನಾ ದಿನದಂದು 'ಖಂಡೆ ಪೂಜೆ' ಅಥವಾ 'ಖಡ್ಗ ಪೂಜೆ' 'ಆಯುಧ ಪೂಜೆ' ಆಚರಿಸುತ್ತಾರೆ.

ರೈತರು ಅಂದು ರೈತಾಪಿ ಆಯುಧಗಳಾದ ಕೊಡ್ಲಿ, ಕುಡುಗೋಲು, ಬಾಚಿ, ಚಾಕು ಮುಂತಾದವುಗಳನ್ನು ದೇವರ ಮುಂದೆ ಇಟ್ಟು ಪೂಜೆ ಮಾಡುತ್ತಾರೆ. ವ್ಯಾಪಾರಸ್ಥರು ತಕ್ಕಡಿ, ತೂಕದ ಕಲ್ಲು ಇತ್ಯಾದಿ ಇಟ್ಟು ಪೂಜಿಸುತ್ತಾರೆ.

ದಸರಾ ಹಬ್ಬದ ದಿನ ಮನೆ ದೇವರಿಗೆ ಅಭಿಷೇಕ, ಪೂಜೆ, ಪುನಸ್ಕಾರ ಮಾಡಿ ಹೋಳಿಗೆ ಊಟದ ನೈವೇದ್ಯ ಮಾಡುತ್ತಾರೆ. ಗ್ರಾಮದ ದೇವತೆಗಳಿಗೆ ಎಡಿ ಕೊಡುತ್ತಾರೆ. ಅಂದು ಸಂಜೆ ಕನಕರಾಯನ ದೇವಸ್ಥಾನದಿಂದ ಕನಕರಾಯನ ಉತ್ಸವ ಮೂರ್ತಿಯನ್ನು ಕುದುರೆ ವಾಹನದಲ್ಲಿ ಕೂಡಿಸಿ ಪಲ್ಲಕ್ಕಿ ಸಮೇತ ಅಪಾರ ಭಕ್ತ ಸಮೂಹದೊಂದಿಗೆ ಊರ ಹೊರಗಿನ ಜೀನಗಾರ ಹೊಲಕ್ಕೆ ಬನ್ನಿ ಮುಡಿಯಲು ಹೋಗುತ್ತಾರೆ. ಈ ಪದ್ಧತಿ ಬಹುಹಿಂದಿನಿಂದ ಬಂದುದಾಗಿದೆ ಎಂಬುದು ಗ್ರಾಮಸ್ಥರ ಅಭಿಪ್ರಾಯ ಗೋರಾಳಕೇರಿ ದುರ್ಗಮ್ಮನ ಪಲ್ಲಕ್ಕಿ ಸಹ ಬನ್ನಿಮುಡಿಯಲು ಬರುತ್ತದೆ. ಪೂಜೆ ಪುನಸ್ಕಾರಾದಿಗಳ ನಂತರ ಬನ್ನಿ ಪಡೆದು ಪಲ್ಲಕ್ಕಿಯು ಗ್ರಾಮದಲ್ಲಿರುವ ಎದುರು ಹನುಮಪ್ಪನ ಗುಡಿಗೆ ಬರುತ್ತದೆ. ಅಲ್ಲಿ ಬನ್ನಿ ಕೊಟ್ಟ ನಂತರ ಗ್ರಾಮದ ಜನರು ಎಲ್ಲದೈವಗಳಿಗೆ, ಪುರೋಹಿತರಿಗೆ, ಐನೇರಿಗೆ, ತಂದೆ-ತಾಯಿಗಳಿಗೆ ಮೊದಲು ಬನ್ನಿ ಕೊಟ್ಟು ನಂತರ ಬಂಧು-ಬಳಗ, ಆಪ್ತೇಷ್ಟರಿಗೆ ಬನ್ನಿಕೊಡುತ್ತಾರೆ. ಬನ್ನಿ ಸ್ವೀಕರಿಸುವವರು ದೊಡ್ಡವರಾಗಿದ್ದರೆ ಅವರಿಗೆ ಬನ್ನಿ ಕೊಟ್ಟು 'ಬನ್ನಿ ತಗೊಂಡು ಬಂಗಾರದಂಗ ಇರೋಣ ಅಥವಾ ಮಾತಾಡೋಣ' ಎಂದು ಹೇಳುತ್ತ ಅವರ ಕಾಲಿಗೆ ನಮಸ್ಕಾರ ಮಾಡಿ ಆಶಿರ್ವಾದ ಪಡೆಯುತ್ತಾರೆ. ನಂತರ ಬನ್ನಿ ಸ್ವೀಕರಿಸಿದವರೂ ಸಹ ತಮ್ಮ ಬನ್ನಿಯನ್ನು ಕೊಡುತ್ತಾರೆ. ಸಮವಸ್ಕರಾಗಿದ್ದರೆ ಬನ್ನಿಯನ್ನು ಕೊಟ್ಟು 'ಬನ್ನಿ ತಗೊಂಡು ಬಂಗಾರದಂಗ ಇರೋಣ' ಎಂದು ಪರಸ್ಪರರು ಹೇಳಿಕೊಳ್ಳುತ್ತಾರೆ. ಇಲ್ಲಿ ಯಾವುದೇ ಜಾತಿ, ವರ್ಗ, ಲಿಂಗ, ಧರ್ಮ ಬೇಧವಿಲ್ಲದೆ ಎಲ್ಲರೂ ಪರಸ್ಪರ ಬನ್ನಿ ಕೊಡುತ್ತಾ ಸಾಮರಸ್ಯದ ಬದುಕಿಗೆ ಸಾಕ್ಷಿಯಾಗುತ್ತಾರೆ. ಪೌರಾಣಿಕ ಹಿನ್ನೆಲೆಯನ್ನು ಪಡೆದುಕೊಂಡ ಈ ಹಬ್ಬದ ಬಗೆಗೆ ಕೆಲವರು ತಿಳಿದು ಆಚರಿಸಿದರೆ ಮತ್ತೆ ಕೆಲವರು ತಿಳಿಯದೆಯೇ ಅನುಕರುಣೆಯಿಂದ ಆಚರಿಸುತ್ತಾರೆ. ವಿಜಯ ದಶಮಿಯ ಸಂದರ್ಭದಲ್ಲಿ ಕನಕರಾಯನ ದೇವಸ್ಥಾನದಲ್ಲಿ ೯ ದಿನಗಳವರೆಗೆ ದೀಪ ಅವಿರತವಾಗಿ ಹಚ್ಚಲಾಗಿರುತ್ತದೆ. ಇಲ್ಲಿನ ಅನೇಕ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳನ್ನು ಹಮ್ಮಿಕೊಂಡಿರುತ್ತಾರೆ. ಊರಿಗೆ ಊರೆ ಹಬ್ಬದ ಸಂಭ್ರಮದಲ್ಲಿ ಸಂತಸ ಪಡುತ್ತಿರುತ್ತದೆ.

ದೀಪಾವಳಿ

ಹೆಸರೇ ಸೂಚಿಸುವಂತೆ ದೀಪಗಳ ಹಬ್ಬವೇ ದೀಪಾವಳಿ. ಮೂರು ದಿನಗಳವರೆಗೆ ಆಚರಿಸುವ ಈ ಹಬ್ಬವನ್ನು ಮಧ್ಯಮ ವರ್ಗದವರು, ಶ್ರೀಮಂತರು, ವ್ಯಾಪಾರಸ್ಥರು ಖಡ್ಡಾಯವಾಗಿ ಆಚರಿಸುತ್ತಾರೆ. ಸಾಮಾನ್ಯ ವರ್ಗದ ಜನರಿಗೆ ಈ ಹಬ್ಬ ಅಂತಹ ವಿಶೇಷವಲ್ಲದಿದ್ದರೂ ಈ ಸಂದರ್ಭದಲ್ಲಿ ವಾರಗಟ್ಟಲೆ ಇಸ್ಪೇಟ್ ಆಟ ಆಡುವವರಿಗೆ ವಿಶೇಷ ಹಬ್ಬವೇ ಆಗಿದೆ.

ಸುಣ್ಣ, ಬಣ್ಣಗಳಿಂದ ತಳಿರು ತೋರಣ, ಮಾವಿನ ಗೊಂಚಲು, ಅಡಿಕೆ ಗಿಡ, ಬಾಳೆಗಿಡ, ಕಬ್ಬಿನ ಗಿಡಗಳಿಂದ ಅಂಗಡಿಗಳು ವಿಶೇಷವಾಗಿ ಸಿಂಗರಿಸಲ್ಪಟ್ಟಿರುತ್ತವೆ. ನರಕ ಚತುರ್ದಶಿಯಂದು ಶ್ರೀಕೃಷ್ಣನು ನರಕಾಸುರನನ್ನು ಸಂಹಾರ ಮಾಡಿದ ಜ್ಞಾಪಕಾರ್ಥವಾಗಿ ಗಂಡುಮಕ್ಕಳಿಗೆ ಆರತಿ ಮಾಡಲಾಗುತ್ತದೆ. ಆರತಿ ಮಾಡಿಸಿಕೊಂಡವರು ಆರತಿ ತಟ್ಟೆಯಲ್ಲಿ ಹಣ ಹಾಕುವ ಪದ್ಧತಿ ಇದೆ. ಅಂದು ಸ್ನಾನ ಮಾಡಿ ಸಿಹಿ ಊಟ ಮಾಡುತ್ತಾರೆ. ಮರುದಿನದ ಅಮವಾಸ್ಯೆಯ ದಿನ ಲಕ್ಷ್ಮಿ ಪೂಜೆಯನ್ನು ಎಲ್ಲರು ಸಂಭ್ರಮದಿಂದ ಆಚರಿಸುತ್ತಾರೆ. ಎಲ್ಲೆಡೆ ಅಲಂಕೃತ ಮಂಟಪದಲ್ಲಿ ಜಗಮಗಿಸುವ ವಿದ್ಯುದೀಪಗಳ ಮಧ್ಯೆ ಲಕ್ಷ್ಮಿ ಎದ್ದು ಬರುವಂತೆ ತೋರುತ್ತಾಳೆ. ಲಕ್ಷ್ಮಿಗೆ ಕಾಯಿಯನ್ನು ಮಾತ್ರವಲ್ಲದೆ ಬಲಿ ಕೊಟ್ಟ ಸಂಕೇತವಾಗಿ ಕುಂಬಳಕಾಯಿಯನ್ನು ಒಡೆದು ತಕ್ಷಣವೆ ಅದರಲ್ಲಿ ಹಿಡಿ ಹಿಡಿ ಕುಂಕುಮ ಹಾಕುತ್ತಾರೆ. ಪೂಜೆಗೆ ಬಂದ ಭಕ್ತಾದಿಗಳಿಗೆ ಪುಟಾಣಿ ಸಕ್ಕರೆ, ಬಾಳೆಹಣ್ಣು ತಾಂಬೂಲ ಇತ್ಯಾದಿಯಾದ ಪ್ರಸಾದವನ್ನು ಕೊಡುತ್ತಾರೆ. ಬಹುತೇಕ ಮನೆಗಳ ಮೇಲೆ ಆಕಾಶಬುಟ್ಟಿ ಜಗಮಗಿಸುತ್ತಿರುತ್ತದೆ. ಮನೆಯ ಮುಂದೆ ೫, ೧೧, ೨೧, ಈ ರೀತಿ ಇಷ್ಟಾನುಸಾರವಾಗಿ ಪ್ರಣತಿಗಳನ್ನು ಬೆಳಗಿಸುತ್ತಾರೆ. ಭಾರಿ ಭಾರಿ ಪಟಾಕಿ ಸಿಡಿಸುವುದು ಈ ಹಬ್ಬದ ವಿಶೇಷ. ಲಕ್ಷ್ಮೀ ಹಬ್ಬದ ಮರುದಿನ ಪಾಡ್ಯದ ದಿನದಂದು ಸರಸ್ವತಿ ಪೂಜೆ ಮಾಡುತ್ತಾರೆ. ವ್ಯಾಪಾರಸ್ಥರು ಪೂಜೆಗೆ ಖಾತೆ, ಕಿರ್ದಿ ಇಟ್ಟರೆ, ಓದುವ ಮಕ್ಕಳಿರುವವರು ಮಕ್ಕಳು ಓದುವ ಪುಸ್ತಕಗಳನ್ನು ಪೂಜೆಗೆ ಇಡುತ್ತಾರೆ. ಮಧ್ಯಾಹ್ನದ ಸಮಯದಲ್ಲಿ ಸರಸ್ವತಿಯ ಪೂಜೆ ನೆರವೇರುತ್ತದೆ. ಈ ಹಬ್ಬದ ವಿಶೇಷವೇನೆಂದರೆ ಎಲ್ಲೆಡೆ ಗುಂಪು ಗುಂಪಾಗಿ ಕಂಡುಬರುವ ಇಸ್ಪೇಟ್ ಆಟ, ಹಬ್ಬ ಮುಗಿದರೂ ಇಸ್ಪೇಟ್ ಆಟ ನಿಂತಿರುವುದಿಲ್ಲ. ಕೊನೆಗೆ ಪೋಲೀಸರ ಭಯಕ್ಕೆ ಈ ಆಟ ನಿಲ್ಲುತ್ತದೆ.

ಗಣೇಶ ಚತುರ್ಥಿ

ಭಾದ್ರಪದ ಮಾಸದ ಚೌತಿಯ ದಿನದಂದು ಗಣೇಶನ ಹಬ್ಬ ಆಚರಿಸಲಾಗುತ್ತದೆ. ಹಿಂದಿನ ದಿನ ಸ್ವರ್ಣಗೌರಿಯನ್ನು ಕೂಡಿಸಿ ವಿಧ ವಿಧ ಅಡುಗೆಯನ್ನು ಮಾಡಿ ದೇವರಿಗೆ ನೈವೇದ್ಯ ಮಾಡಲಾಗುತ್ತದೆ. ಮರುದಿನ ಗಣೇಶನನ್ನು ಕೂಡಿಸಿ ೨೧ ಕಡುಬುಗಳನ್ನು ಉಂಡೆಗಳನ್ನು ನೈವೇದ್ಯ ಮಾಡುಲಾಗುತ್ತದೆ. ಹಿಂದೆ ಕೆಲವು ಸಮುದಾಯದವರು ಮಾತ್ರ ಈ ಹಬ್ಬವನ್ನು ಆಚರಿಸುತ್ತಿದ್ದರು. ಈಗ ಶಾಲಾ-ಕಾಲೇಜುಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗಣೇಶನನ್ನು ಕೂಡಿಸಿ ಅದ್ದೂರಿಯ ಆಚರಣೆಯನ್ನು ಮಾಡಲಾಗುತ್ತದೆ. ಪೈಪೋಟಿಯ ಮೇಲೆ ದೊಡ್ಡ ದೊಡ್ಡ ಗಣಪನನ್ನು ತರುತ್ತಾರೆ. ಇತ್ತೀಚೆಗೆ ಪ್ಲಾಸ್ಟರ್ ಆಫ್ ಪ್ಯಾರೀಸಿನಲ್ಲಿ ಮಾಡಿದ ಆಕರ್ಷಕ ಗಣಪ ಜನರನ್ನು ಹೆಚ್ಚು ಆಕರ್ಷಿಸಿದೆ. ಸಾರ್ವಜನಿಕರ ದರ್ಶನಕ್ಕೆ ಇಟ್ಟ ಗಣಪನ ಮಂಟಪಕ್ಕೆ ಎಲ್ಲ ವರ್ಗದ ಜನರು ಹೋಗುತ್ತಾರೆ. ಗಣಪನ ಮುಂದೆ ೨೧, ೫೧, ೧೦೧, ಉಟ್‌ಬೈಟ್ ಮಾಡಿ ಹೋಗುವ ರೂಢಿ ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ನನ್ನ ತಪ್ಪುಗಳನ್ನು ಮನ್ನಿಸು ಎಂದು ಕೇಳಿಕೊಳ್ಳುವ ಸಲುವಾಗಿ ಉಟ್‌ಬೈಟ್ ಮಾಡುತ್ತಾರೆಂಬುದು ಹಿರಿಯರ ಅಭಿಪ್ರಾಯ. ೧, ೫, ೭, ೯, ೧೧, ದಿನದವರೆಗೆ ಗಣಪನನ್ನು ಕೂಡಿಸುತ್ತಾರೆ. ವಿಸರ್ಜನೆಯಾಗುವ

ದಿನ ಮೊಸರನ್ನು ಬುತ್ತಿ ಮಾಡಿಕೊಂಡು ಅದ್ದೂರಿ ಮೆರವಣಿಗೆಯ ಮೂಲಕ, ಗಣಪನನ್ನು ಕಳಿಸಿಕೊಡುತ್ತಾರೆ. ಬಾವಿ, ಕೆರೆಯಲ್ಲಿ ಗಣೇಶನ ವಿಸರ್ಜನೆ ಮಾಡಲಾಗುತ್ತದೆ.

ಗೌರಿ ಹುಣ್ಣಿಮೆ

ಹೆಸರೇ ಸೂಚಿಸುವಂತೆ ಇದು ಹೆಂಗಸರ ಹಬ್ಬ. ಇಲ್ಲಿನ ಪ್ರಮುಖ ದೇವಸ್ಥಾನಗಳಲ್ಲಿ, ಜಂಗಮರು, ಬ್ರಾಹ್ಮಣರ ಮನೆಯಲ್ಲಿ ಗೌರಮ್ಮನನ್ನು ೫ ದಿನಗಳವರೆಗೆ ಕೂಡಿಸುತ್ತಾರೆ. ದಿನಕ್ಕೊಂದು ಆರತಿ ತರುತ್ತಾರೆ. ಐದನೇ ದಿನ ಸಕ್ಕರೆ ಆರತಿ ತಂದು ಬೆಳಗುತ್ತಾರೆ. ಗೌರಿ ಪೂಜೆಯಲ್ಲಿ ಹಾಡುವ ಹಾಡುಗಳು ಇಲ್ಲಿ ಸಮೃದ್ಧವಾಗಿ ಸಿಗುತ್ತವೆ. ಎಲ್ಲ ವರ್ಗದ ಮಹಿಳೆಯರು ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಕೊನೆಯ ದಿನ ಬರುವಾಗ ಒಂದು ಸಕ್ಕರೆ ಆರತಿಯನ್ನು ಅಲ್ಲಿಟ್ಟು ಮಣ್ಣಿನಿಂದ ಮಾಡಿದ ಕೊಂತೆಮ್ಮನನ್ನು ತೆಗೆದುಕೊಂಡು ಬರುತ್ತಾರೆ. ನೋಂಪಿ ಗೌರಮ್ಮನನ್ನು ಕೂಡಿಸಿ ಪೂಜಿಸುವ ಪದ್ಧತಿಯೂ ಇಲ್ಲಿದೆ. ಮದುವೆ ಗೊತ್ತಾದವರು ಹುಡುಗಿಯ ಮನೆಗೆ ಬಂದು ಸಕ್ಕರೆ ಆರತಿ ಕೊಟ್ಟು ಆರತಿ ಮಾಡಿ ಹೋಗುವ ಸಂಪ್ರದಾಯವಿದೆ.

ಕಾರ ಹುಣ್ಣಿಮೆ

ರೈತಾಪಿ ಜನರ ವಿಶೇಷ ಹಬ್ಬ ಇದಾಗಿದೆ. ಅಂದು ಕೃಷಿ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ ಎತ್ತುಗಳ ಮೈತೊಳೆದು ಕೋಡುಗಳಿಗೆ, ಮೈಗೆ, ಗೋದಲಿಗೆ ಬಣ್ಣ ಹಚ್ಚಿ ಸಿಂಗರಿಸುತ್ತಾರೆ. ಎತ್ತುಗಳನ್ನು ಪೂಜಿಸುವುದು ಈ ಹಬ್ಬವನ್ನು ಆಚರಿಸುವುದೆಂದರೆ ರೈತರಿಗೆ ಎಲ್ಲಿಲ್ಲದ ಖುಷಿ. ಅಂದು ಸಂಜೆ ಕರಿ ಹರಿಯುವ ಸ್ಥಳಕ್ಕೆ ಊರಿನ ಜನ ಶೃಂಗಾರಗೊಂಡು ಕುತೂಹಲಭರಿತರಾಗಿ ಯಾವ ಎತ್ತು ಕರಿ ಹರಿಯುತ್ತದೆ ಎಂದು ಕಾಯುತ್ತಾ ಇರುತ್ತಾರೆ. ಗುಡ್ಡೆಕಲ್ಲು ಇರುವ ಸ್ಥಳದಲ್ಲಿ ಎತ್ತುಗಳನ್ನು ಕರಿಬಿಡಲು ಎತ್ತುಗಳನ್ನು ಸಾಲಾಗಿ ನಿಲ್ಲಿಸುತ್ತಾರೆ. ಕಾಯಿ ಒಡೆದು ಸೂಚನೆ ಕೊಟ್ಟಾಗ ಓಟ ಸುರುವಾಗಿ ಯಾವ ಎತ್ತು ಎಲ್ಲ ಎತ್ತುಗಳಿಗಿಂತ ಮುಂದೆ ಬರುತ್ತದೆಯೋ ಅದೆ ಎತ್ತು ಕರಿ ಹರಿದಂತೆ ಎಂದು ಭಾವಿಸುತ್ತಾರೆ. ಕರಿ ಹರಿದ ಎತ್ತನ್ನು ಶೃಂಗರಿಸಿ ಅಂದು ಸಂಜೆ ಸಡಗರ ಸಂಭ್ರಮದಿಂದ ಊರಲ್ಲಿ ಮೆರೆಸುತ್ತಾರೆ. ಈ ಸಂದರ್ಭದಲ್ಲಿ ಸಾಮಾನ್ಯ ಜನ ಕುಡಿದು ಕುಣಿದು ಕುಪ್ಪಳಿಸುವುದು ಸಾಮಾನ್ಯವಾಗಿರುತ್ತದೆ. ಕರಿ ಹರಿಯುವುದನ್ನು ನವ ದಂಪತಿಗಳು ನೋಡುವಂತಿಲ್ಲ.

ಮೊಹರಂ (ಪೀರ್ಲ) ಹಬ್ಬ

ಮೊಹರಂ ಹಬ್ಬವು ಕನಕಗಿರಿಯಲ್ಲಿ ನಡೆಯುವ ಸಾಮರಸ್ಯದ ಹಬ್ಬಗಳಲ್ಲೊಂದಾಗಿದೆ. ಮುಸಲ್ಮಾನರ ಕಾಲದ ಕಲ್ಪನೆಯಲ್ಲಿ ಮೊಹರಂ ಮೊದಲ ತಿಂಗಳಿನ ಹೆಸರು. ಈ ತಿಂಗಳಿನಲ್ಲಿ ನಡೆಯುವ ಹಬ್ಬವಾದದ್ದರಿಂದ ಇದಕ್ಕೆ ಮೊಹರಂ ಹಬ್ಬ ಎಂದು ಹೆಸರು ಬಂತೆಂದು ಹೇಳಲಾಗುತ್ತದೆ. ಇದರ ಜೊತೆಗೆ ಈ ಹಬ್ಬಕ್ಕೆ ಅಲಾಯಿ ಹಬ್ಬ ಎಂತಲೂ ಕರೆಯುತ್ತಾರೆ.

ಹತ್ತು ದಿನಗಳ ಕಾಲ ನಡೆಯುವ ಈ ಹಬ್ಬಕ್ಕೆ ಹಿನ್ನೆಲೆಯಾಗಿ ಒಂದು ಕತೆಯಿದೆ. ಇಸ್ಲಾಂ ಧರ್ಮದ ಸಂಸ್ಥಾಪಕನಾದ ಮಹಮ್ಮದ್ ಪೈಗಂಬರ್ ತೀರಿಕೊಂಡ ಕೆಲವು ವರ್ಷಗಳ ಅನಂತರ ನಡೆದ ಘಟನೆಯೇ ಈ ಹಬ್ಬಕ್ಕೆ ಪ್ರೇರಣೆ, ನ್ಯಾಯ ಅನ್ಯಾಯಗಳ ನಡುವೆ ನಡೆದ ಹೋರಾಟದಲ್ಲಿ ಅನ್ಯಾಯವೇ ಗೆಲುವು ಸಾಧಿಸಿದ ಪರಿ, ನ್ಯಾಯಕ್ಕಾಗಿ ಕಣ್ಣೀರು ಸುರಿಸಿದವರ ಸಂಕೇತವಾಗಿ ಈ ಹಬ್ಬ ಆಚರಿಸಲ್ಪಡುತ್ತದೆ. ಮೊಹರಂ ತಿಂಗಳು ಆರಂಭವಾದೊಡನೆ ಮುಸಲ್ಮಾನರು ತಮ್ಮ ಮನೆಗಳಿಗೆ ಸುಣ್ಣ, ಬಣ್ಣ ಬಳಿಯುತ್ತಾರೆ. ಮನೆ ಮಂದಿ ಹೊಸ ಬಟ್ಟೆಧರಿಸುತ್ತಾರೆ. ಸಣ್ಣಪುಟ್ಟ ಕೈ ದೇವರುಗಳನ್ನು ಶುದ್ಧಿಗೊಳಿಸಿ ಮಸೀದಿಯಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಈ ದೇವರುಗಳಿಗೆ ಪೀರ್ಲ ದೇವರು ಎಂದು ಕರೆಯುತ್ತಾರೆ. ಮಸೀದಿಯ ಮುಂದೆ ಅಗ್ನಿ ಕುಂಡವಿದ್ದು ದೇವರು ಕುಂಡದೊಳಗಿನಿಂದ ದಾಟಿ ಬರುತ್ತದೆ. ಈ ದೇವರಿಂದ ಹೇಳಿಕೆ ನಡೆಯುತ್ತದೆ. ಈ ದೇವರಿಗೆ ಹಿಂದೂ ಮುಸ್ಲಿಂ ಎಂಬ ಭೇದ ಭಾವವಿಲ್ಲದೆ ಎಲ್ಲರೂ ಕೆಂಪುಸಕ್ರಿ, ಕೆಂಪು ಲಡಿದಾರ, ಲೋಬಾನ, ಊದುಬತ್ತಿ ತಂದು ದೇವರಿಗೆ ಅರ್ಪಿಸುತ್ತಾರೆ. ಈ ದೇವರಿಗೆ ಅನೇಕರು ಹರಕೆ ಹೊರುತ್ತಾರೆ. ನಸುಕಿನ ಜಾವದಲ್ಲಿ ದೇವರುಗಳು ಮೆರವಣಿಗೆಯ ಮೂಲಕ ಗ್ರಾಮವನ್ನು ಸುತ್ತುತ್ತವೆ. ಈ ಮೆರವಣಿಗೆಯ ಮುಂದೆ ಹಿಂದೂಗಳು ದೊಡ್ಡ ವೃತ್ತಾಕಾರದಲ್ಲಿ ಒಬ್ಬರ ಕೈ ಮತ್ತೊಬ್ಬರು ಹಿಡಿದುಕೊಂಡು ಹಲಗೆಯ ತಾಳ, ಗತ್ತಿಗೆ ತಕ್ಕಂತೆ ಅಲಾಯಿ ಹೆಜ್ಜೆ ಹಾಕುತ್ತಾರೆ. ಕತ್ತಲ್ ರಾತ್ರಿಯ ದಿನ ವಿಶೇಷ ಆಚರಣೆಗಳು ಕಂಡುಬರುತ್ತವೆ. ಕೊನೆಯ ದಿನ ದೇವರು ಹೊಳೆಗೆ ಹೋಗುತ್ತವೆ. ಈ ಎಲ್ಲ ದಿನಗಳಂದು ಕೋಲಾಟ, ಹುಲಿವೇಷದ ಕುಣಿತ, ವಿಶೇಷವಾಗಿರುತ್ತದೆ. ಅಕ್ಷರ ಇತಿಹಾಸ ಹೇಳುವ ಹಿಂದೂ ಮುಸ್ಲಿಂ ಘರ್ಷಣೆ ಇಲ್ಲಿರದೆ ಭಾವೈಕ್ಯತೆಯನ್ನು ಸಾರುವ ಹಬ್ಬವಾಗಿ ಪರಿಣಮಿಸುತ್ತದೆ.

ನಾಗರ ಪಂಚಮಿ

ಶ್ರಾವಣ ಮಾಸದಲ್ಲಿ ಆಚರಿಸಲ್ಪಡುವ ಈ ಹಬ್ಬವು ಸಾಮಾನ್ಯವಾಗಿ ಎಲ್ಲಾ ವರ್ಗಗಳ ಜನರ ವಿಶಿಷ್ಟ ಆಚರಣೆಯಾಗಿ ಕಂಡುಬರುತ್ತದೆ. ನಾಗರ ಪಂಚಮಿಯನ್ನು ಹೆಣ್ಣುಮಕ್ಕಳ ಹಬ್ಬವೆಂದೇ ಕರೆಯಲಾಗುತ್ತದೆ. ಹೊಸದಾಗಿ ಮದುವೆಯಾಗಿ ಹೋದ ಹೆಣ್ಣುಮಕ್ಕಳು ಮೊದಲ ಪಂಚಮಿಯನ್ನು ತವರಿನಲ್ಲೇ ಆಚರಿಸುತ್ತಾರೆ. ಎರಡು ದಿನಗಳವರೆಗೆ ಈ ಹಬ್ಬವನ್ನು ಆಚರಿಸಲಾಗುತ್ತದೆ. ಮೊದಲನೇ ದಿನ ಬೆಲ್ಲದ ನೀರು ಕಲಸಿ ಬೆಲ್ಲದಹಾಲು ಎಂದು ಭಾವಿಸುತ್ತ ಹುತ್ತಕ್ಕೆ ಅಥವಾ ಬಾವಿಕಟ್ಟೆಯ ಬಳಿ ಇರುವ ನಾಗಪ್ಪನಿಗೆ ಎರೆಯುತ್ತಾರೆ. ಎರಡನೆಯ ದಿನವಾದ ಪಂಚಮಿಯಂದು ಆಕಳ ಹಾಲಿನಿಂದ ನಾಗಪ್ಪನಿಗೆ ಎರೆಯುತ್ತಾರೆ. ಮನೆ ಮಂದಿಯಲ್ಲ ಪ್ರತ್ಯೇಕವಾಗಿ ಕೊಬ್ಬರಿ ಬಟ್ಟಲಿನಿಂದ ಹಾಲೆರೆಯುತ್ತಾರೆ. ನಾಗಪ್ಪನಿಗೆ ಭಕ್ಷ್ಯ ಭೋಜ್ಯಗಳನ್ನು, ವಿಧವಿಧವಾದ ಉಂಡಿ, ಅರಳು, ಕೌಳಿಕಾಯಿ ಇತ್ಯಾದಿಗಳನ್ನಿಟ್ಟು ನೈವೇದ್ಯ ಮಾಡುತ್ತಾರೆ. ಪೂಜೆಯ ನಂತರ ಉಂಡೆಗಳನ್ನು ಅಕ್ಕಪಕ್ಕದ ಜನರಿಗೆ ಕೊಡುವುದು ಅವರಿಂದ ತೆಗೆದುಕೊಳ್ಳುವುದು, ಬೇರೆಯ ಊರುಗಳ ನೆಂಟರಿಗೆ ಕಳುಹಿಸುವುದು ವಿಶೇಷ. ಹಬ್ಬದ ದಿನ ಕೊಬ್ಬರಿ ಆಡಿಸುವುದು, ಜೋಕಾಲಿ ಆಡುವ ಪದ್ಧತಿ ಇದೆ. ಮದುವೆ ಗೊತ್ತಾದವರು ಶ್ರಾವಣಮಾಸದಲ್ಲಿ ಹುಡುಗಿಗೆ ಸೀರೆ, ಕಣ, ವಿಧವಿಧ

ಉಂಡೆಗಳನ್ನು ಕೊಡುತ್ತಾರೆ. ಶ್ರಾವಣ ಮಾಸ ಪೂರ್ತಿ ಗಂಡುಮಕ್ಕಳು ನಿಂಬೆ ಹಣ್ಣನ್ನು ಎಸೆಯುವ ಜೂಜಿನ, ಮೋಜಿನ ಆಟ ಆಡುತ್ತಾರೆ. ಇಲ್ಲಿನ ಅನೇಕ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಈ ಮಾಸದಲ್ಲಿ ಬೇರೆ ಬೇರೆ ಕ್ಷೇತ್ರಗಳಿಗೆ ದರ್ಶನಕ್ಕೆ ಹೋಗಿಬರುವುದು ವಿಶೇಷ.

ಇತರೆ ಹಬ್ಬ-ಹರಿದಿನಗಳು

ಶ್ರಾವಣ ಮಾಸದಲ್ಲಿ ಕನಕಾಚಲ ದೇವಸ್ಥಾನದಲ್ಲಿ 'ಗೋಕುಲಾಷ್ಟಮಿ' ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಮರುದಿನ ಹಾಲು ಓಕಳಿ ಆಚರಣೆ ನಡೆಯುತ್ತದೆ. ಸು. ೩೫ ಅಡಿ ಎತ್ತರ ಕಂಬವನ್ನು ನಿರ್ಮಾಣ ಮಾಡಿ ಹಾಲುಮೊಸರನ್ನ ಸುರಿಯುತ್ತಾರೆ. ಜಿಡ್ಡು ಜಿಡ್ಡಾದ ಕಂಬವನ್ನು ಗೊಲ್ಲ ಸಮುದಾಯದವರು ಹತ್ತಲು ಪ್ರಯತ್ನಿಸುವುದು ಭಕ್ತಾದಿಗಳಿಗೆ ಒಂದು ಮೋಜಿನ ಪ್ರಸಂಗವಾಗಿ, ವಿಶಿಷ್ಟ ಆಚರಣೆಯಾಗಿ ಕಂಡುಬರುತ್ತದೆ. ಕಷ್ಟ-ಸುಖಗಳ ಸಮನ್ವಯದ ಸಂಕೇತವಾದ ಯುಗಾದಿ ಹಬ್ಬ, ಅಣ್ಣ-ತಂಗಿ, ಅಕ್ಕ ತಮ್ಮರ ಪ್ರೀತಿ-ವಾತ್ಸಲ್ಯ ವ್ಯಕ್ತಪಡಿಸುವ ರಾಖಿ ಹಬ್ಬವು ವಿಶಿಷ್ಟವಾಗಿ ಆಚರಣೆಗೊಳ್ಳುತ್ತವೆ. ಎಲ್ಲಾ ಸಮುದಾಯದ ಭಕ್ತಾದಿಗಳು ಆಗಮಿಸುವ, ಭಾವೈಕ್ಯತೆಯನ್ನು ಪ್ರದರ್ಶಿಸುವ ಮತ್ತೊಂದು ವಿಶಿಷ್ಟ ಆಚರಣೆಯೆಂದರೆ 'ಯಮನೂರು ಸಾಬ'ನ ಉರುಸು. ಮೊದಲೆಲ್ಲ ಹರಕೆ ಹೊರುವ, ಬ್ಯಾಟಿ ಮಾಡುವ ಪದ್ಧತಿ ಇತ್ತು. ಈಗ ಇದು ಕಡಿಮೆಯಾಗಿದೆ. ಭಕ್ತಾದಿಗಳು ಮಾದ್ಲಿ ತಂದು ನೈವೇದ್ಯ ಮಾಡುತ್ತಾರೆ. ಲೋಬಾನ ಹಾಕಿ ಆಶೀರ್ವಾದ ಪಡೆಯುತ್ತಾರೆ.

೫.೨.೨. ಧರ್ಮ, ದೇವಾಲಯಗಳು

ಜನಪದರು ಜೀವನದಲ್ಲಿ ಅನಾದಿಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ದೇವರ ಆರಾಧನೆ ಸಂಸ್ಕೃತಿಯ ಜೀವಾಳವಾಗಿದೆ. ಇಂದು ಸಮಾಜವು ತೀವ್ರವಾಗಿ ಬದಲಾವಣೆಗೆ ಒಳಗಾಗುತ್ತಿದೆ. ವೈಜ್ಞಾನಿಕ ಸಂಶೋಧನೆ, ಕೈಗಾರಿಕೀಕರಣ, ನಗರೀಕರಣ ಇವುಗಳ ಫಲವಾಗಿ ಮಾನವನ ಆಲೋಚನೆಯ ರೀತಿ ಬದಲಾಗುತ್ತಿದೆ. ಹೊಸ ಬಗೆಯ ವಿಚಾರಗಳಿಗೆ, ಬದುಕಿಗೆ ಮನುಷ್ಯ ತನ್ನನ್ನು ಒಡ್ಡಿಕೊಂಡು ಜಗತ್ತಿನ ನಾನಾ ವಿಷಯಗಳ ಕಡೆಗೆ ಕಣ್ಣಾಡಿಸುತ್ತಿದ್ದಾನೆ. ಮಾನವ ಮಂಗಳನ ಅಂಗಳಕ್ಕೂ ಹಾಗೂ ಚಂದ್ರ ಗ್ರಹಕ್ಕೂ ಹೋಗಿ ಬಂದಿದ್ದಾನೆ. ಇಂತಹ ಸ್ಥಿತಿಯಲ್ಲಿ ನಮ್ಮ ಜನಪದ ಸಂತತಿಯ ರೂಪವು ಬದಲಾವಣೆಯಾಗುತ್ತದೆ ಎನ್ನುತ್ತಾರೆ. ನಗರೀಕರಣಕ್ಕೊಳಗಾಗುತ್ತಿರುವ ಕನಕಗಿರಿಯ ಜನಪದರು ದೇವರ ಆರಾಧನೆ ಇಲ್ಲದೆ ಯಾವ ಕಾರ್ಯವನ್ನು ಆರಂಭಿಸುವುದಿಲ್ಲ. ಇವರಿಗೆಲ್ಲ ದೇವರಬಗ್ಗೆ ಇರುವ ಭಯ, ಭಕ್ತಿ ಮತ್ತು ಶ್ರದ್ಧೆಯನ್ನು ಗಮನಿಸಿ ಕೇಳಿದಾಗ "ದೇವರ ನೆನೆದರೆ ಹುಟ್ಟು ಸಾವು ನಮಗಿಲ್ಲ" ಎನ್ನುವ ನಿಶ್ಚಲ ಮನಸ್ಸು ಇಲ್ಲಿನ ಜನರದು, ಎಷ್ಟೇ ಮುಂದುವರೆದ ಸಮುದಾಯದವರೂ ದೇವರ ಪೂಜೆ ಪುನಸ್ಕಾರವಿಲ್ಲದೆ ನಮ್ಮದೈನಂದಿನ ಚಟುವಟಿಕೆಗಳಿಲ್ಲ ಎನ್ನುತ್ತಾರೆ. ಇದಕ್ಕೆ ಸಾಕ್ಷಿ ಎನ್ನುವಂತೆ ಇಲ್ಲಿನ ದೇವಾಲಯಗಳು. ಐತಿಹಾಸಿಕ ಕಾಲದಿಂದಲೂ ಇಂತಹ ಮನೋಭಾವನೆ ಬೆಳೆದು ಬಂದಿದೆಯೆಂಬುದಕ್ಕೆ ಹೆಜ್ಜೆ ಹೆಜ್ಜೆಗೂ ಇಲ್ಲಿ ಸಿಗುವ ಪಾಳೆಯಗಾರರ ಕಾಲದ ದೇವಾಲಯಗಳು ಸಾಕ್ಷಿಯಾಗಿವೆ.

ಕನಕಗಿರಿಯಲ್ಲಿ ಇತಿಹಾಸಕಾಲದಲ್ಲಿ ೭೦೦ ದೇವಾಲಯಗಳಿದ್ದವೆಂದು ಪ್ರತೀತಿ. ಈಗ ಅಷ್ಟು ದೇವಸ್ಥಾನಗಳು ಕಾಣಿಸುವುದಿಲ್ಲ. ಅದೇನೇ ಇರಲಿ ಪಾಳೆಯಗಾರ ಕಾಲದಿಂದ ಹಿಡಿದು ಇಂದಿನ ಇಲ್ಲಿನ ಜನಪದರ ವರೆಗೂ ದೈವೀ ಭಕ್ತಿಯ ಪರಾಕಾಷ್ಟತೆಯನ್ನು ನೋಡಿದರೆ ನಮ್ಮ ಸಂಸ್ಕೃತಿಯ ಮೂಲ ಸೆಲೆ ಹೇಗಿತ್ತು ಎಂಬುದನ್ನು ಗುರುತಿಸಬಹುದಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಊರಿನ ಎಲ್ಲಾ ಜಾತಿಗಳ ಸಮುದಾಯಕ್ಕೂ ಒಂದೊಂದು ಜವಾಬ್ದಾರಿ ವಿತರಣೆಯಾಗುತ್ತದೆ. ಈ ಜವಾಬ್ದಾರಿಗಳಿಂದಲೇ ಗ್ರಾಮದ ಐಕ್ಯತೆ, ಸಾಮರಸ್ಯ ಸಾಧ್ಯವಾಗಿದೆ. ಆದ್ದರಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ವ್ಯಕ್ತಿಯ ಮತ್ತು ಊರಿನ ಸಮೂಹದ ಮಾನಸಿಕ ನಿಯಂತ್ರಣಕ್ಕೆ ನಮ್ಮ ಈ ದೇವಾಲಯಗಳೇ ಕಾರಣ ಎಂದರೆ ತಪ್ಪಾಗಲಾರದು. ನನ್ನ ಕ್ಷೇತ್ರಕಾರ್ಯದಲ್ಲಿ ಇಲ್ಲಿನ ದೇವಾಲಯಗಳ ಬಗ್ಗೆ ಅನೇಕ ರೀತಿಯ ಕಥೆಗಳು, ಐತಿಹ್ಯಗಳು, ಪುರಾಣಗಳನ್ನು, ಆಚರಣೆಗಳನ್ನು, ಹಾಡುಗಳನ್ನು ಸಂಗ್ರಹಿಸಿದ್ದೇನೆ.

ಇಲ್ಲಿನ ಬಹುತೇಕ ದೇವಾಲಯಗಳು ಇತಿಹಾಸ ಕಾಲದವುಗಳಾದರೂ ಕನಕಾಚಲ ದೇವಾಲಯ ಮತ್ತು ನವಲಿಯ ಬೋಗಾಪುರೇಶ ದೇವಸ್ಥಾನಗಳನ್ನು ಹೊರತು ಪಡಿಸಿ ಉಳಿದೆಲ್ಲ ದೇವಸ್ಥಾನಗಳು ಕನಕಗಿರಿಯ ಒಂದೊಂದು ಸಮುದಾಯದ ಉಸ್ತುವಾರಿಯಲ್ಲಿ ಪೂಜೆಗೊಳ್ಳುತ್ತಿವೆ. ಈ ದೇವಾಲಯಗಳಿಗೆ ಸರ್ಕಾರದ ಅಥವಾ ಪ್ರಾಚ್ಯವಸ್ತು ಇಲಾಖೆಯಿಂದ ಯಾವುದೇ ತರಹದ ನೆರವು ಇಲ್ಲದಿದ್ದರೂ ಸಹ ಸುಣ್ಣ, ಬಣ್ಣ, ಪೂಜೆ ಪುನಸ್ಕಾರ ಉತ್ಸವಾದಿಯಾಗಿ ಅನೇಕ ಧಾರ್ಮಿಕ ಚಟುವಟಿಕೆಗಳು ಮಾತ್ರ ವೈಭವದಿಂದ, ವಿಜೃಂಭಣೆಯಿಂದ ನಡೆಯುತ್ತವೆ. ಇತ್ತೀಚಿಗೆ ಹುಟ್ಟಿಕೊಂಡ ದೇವಾಲಯಗಳಲ್ಲೂ ಸಹ ಧರ್ಮ, ಸಂಸ್ಕೃತಿ ಕ್ರಿಯಾಶೀಲವಾಗಿದೆ.

ಕನಕಗಿರಿ ಹಾಗೂ ಕನಕಗಿರಿ ಇತಿಹಾಸಕ್ಕೆ ಸಂಬಂಧಿಸಿದ ಪರಿಸರ ಸೇರಿದಂತೆ ಸುಮಾರು ೫೦ಕ್ಕೂ ಹೆಚ್ಚು ದೇವಾಲಯಗಳು ಇಲ್ಲಿವೆ. ಅವುಗಳಲ್ಲಿ ಭಗ್ನಗೊಂಡವುಗಳು, ದೇವರಿಲ್ಲದ ಪಾಳು ಗುಡಿಗಳೂ ಇವೆ. ಅಧ್ಯಯನದ ದೃಷ್ಟಿಯಿಂದ ಅಗತ್ಯವೆನಿಸಿದ ದೇವಾಲಯಗಳ ಕುರಿತಾಗಿ ಇಲ್ಲಿ ವಿವರಿಸಲಾಗಿದೆ.

ಲಕ್ಷ್ಮೀನರಸಿಂಹ ದೇವಾಲಯ (ಕನಕಾಚಲ ದೇವಾಲಯ)

ಈ ದೇವಾಲಯವು ಕನಕಗಿರಿಯ ದೇವಾಲಯಗಳಲ್ಲಿಯೇ ಅತ್ಯಂತ ಪ್ರಮುಖ ದೇವಾಲಯ. ಇದು ವಿಜಯನಗರ ವಾಸ್ತು ಶೈಲಿಯಲ್ಲಿ ರಚನೆಯಾಗಿದ್ದು, ಏಕಕಾಲಕ್ಕೆ ನಿರ್ಮಾಣಗೊಂಡಿಲ್ಲ. ಈ ದೇವಾಲಯದ ಗರ್ಭಗೃಹ, ಸುಖನಾಸಿಯನ್ನು ಪರಸಪ್ಪ ಉಡಿಚ ನಾಯಕನು ಈ ದೇವಾಲಯದ ಮಧ್ಯರಂಗ ಮಂಟಪವನ್ನು ಕಟ್ಟಿಸಿದನು. ನಂತರ ಕೆಲವಡಿ ಉಡಿಚನಾಯಕನು ಈ ದೇವಾಲಯದಲ್ಲಿರುವ ಗಾರೆ ಶಿಲ್ಪಗಳನ್ನು ಮೂರು ಮುಖ್ಯ ಬೃಹತ್ ಗೋಪುರಗಳನ್ನು, ಪ್ರಾಕಾರವನ್ನು ನಿರ್ಮಿಸಿದನು. ಈ ದೇವಾಲಯವು ಯಾವುದೇ ಅಧಿಷ್ಠಾನದ ಮೇಲೆ ನಿಂತಿಲ್ಲ. ಪ್ರದಕ್ಷಿಣಪಥ ದೇವಾಲಯದ ಹೊರಭಾಗದಲ್ಲಿದೆ. ದೇವಾಲಯದ ಹೊರಪ್ರಾಕಾರದ ವಿಸ್ತೀರ್ಣ ೨೦೮ ಅಡಿ ಉದ್ದ, ೯೦ ಅಡಿ ಅಗಲವಿದೆ. ಇಲ್ಲಿ ಯಾವುದಾದರೂ ಕಾರ್ಯಕ್ರಮಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಆರಾಮವಾಗಿ ಕುಳಿತುಕೊಳ್ಳಬಹುದು.

ಅಷ್ಟೊಂದು ವಿಶಾಲವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿ ಕಪ್ಪುಶಿಲೆಯ ಲಿಂಗಾಕೃತಿಯ ಶಿಲ್ಪವು ನೆಲದೊಳಗಿನಿಂದ ಉದ್ಭವವಾಗಿರುವಂತೆ ಕಾಣಿಸುತ್ತದೆ. ಈ ಸಾಲಿಗ್ರಾಮದ ಮೇಲೆ ಪಂಚಲೋಹದ ನರಸಿಂಹನ ಮುಖ ಮತ್ತು ಅದರ ಹಿಂದೆ ಪ್ರಭಾವಳಿಯನ್ನೂ ಕೆಲವು ವಿಶೇಷ ಪೂಜಾ, ಉತ್ಸವ ಸಂದರ್ಭಗಳಲ್ಲಿ ತೊಡಿಸಲಾಗುತ್ತದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಈ ದೇವಾಲಯಕ್ಕೆ ಮೂರು ಪ್ರವೇಶ ದ್ವಾರಗಳಿವೆ. ಮುಖ್ಯ ಪ್ರವೇಶದ್ವಾರ ಸರ್ವ ಜನರಿಗೂ ಅವಕಾಶವಿರುವ ಮಾರ್ಗ. ಇನ್ನೊಂದು ಅರಸುದ್ವಾರ (ದಕ್ಷಿಣದ್ವಾರ). ಕೇವಲ ಅರಸು ಕುಟುಂಬಕ್ಕೆ ಮಾತ್ರ ತೆರೆಯಲಾಗುತ್ತಿತ್ತು. ಮತ್ತೊಂದು ಪುರೋಹಿತರಿಗಾಗಿ ಇರುವ ಪ್ರವೇಶ (ಉತ್ತರದ ನದಿಯ ಕಡೆ). ಪೂಜೆಗಾಗಿ ನೀರು ತರುವ, ಅಗ್ರಹಾರಕ್ಕೆ ಹೊರಹೋಗುವ ಮಾರ್ಗ ಇದಾಗಿತ್ತು. ಈ ಮೂರು ಪ್ರವೇಶದ ಮೇಲೆ ಬೃಹತ್ತಾದ ಒಂದೇ ಎತ್ತರದಲ್ಲಿರುವ ಮೂರು ಮುಖ್ಯ ಶಿಖರಗಳಿವೆ. ಇವು ತಕ್ಷಣವೇ ಹಂಪಿಯ ವಿರೂಪಾಕ್ಷ ದೇವಾಲಯದ ಗೋಪುರಗಳನ್ನು ನೆನಪಿಗೆ ತರುತ್ತವೆ. ಗರ್ಭಗೃಹ ಕಿರಿದಾದ ಬಾಗಿಲುಗಳನ್ನು ಹೊಂದಿದೆ. ಸುಖನಾಸಿ ಚಿಕ್ಕದಾಗಿದೆ. ಉತ್ತರ ಮತ್ತು ದಕ್ಷಿಣಕ್ಕೆ ಎರಡು ಚಿಕ್ಕಬಾಗಿಲುಗಳು ಇವೆ. ಪೂರ್ವಕ್ಕೆ ಮುಖ್ಯ ಬಾಗಿಲು ಇದೆ. ಇಲ್ಲಿ ತೊಟ್ಟಿಲು ಕಟ್ಟಲಾಗಿದೆ. ಇಲ್ಲಿಯ ಕಂಬಗಳು ಸಾಧಾರಣ ಕೆತ್ತನೆಯಿಂದ ಕೂಡಿವೆ.

ಈ ಕನಕಾಚಲ ದೇವಾಲಯದ ಪ್ರಮುಖ ಆಕರ್ಷಣೆ ಎಂದರೆ ನಾಟ್ಯಮಂಟಪ (ಮಧ್ಯರಂಗ ಮಂಟಪ)ವಾಗಿದೆ. ಇದು ೫೪ ಅಡಿ ಉದ್ದ, ೩೬ ಅಡಿ ಅಗಲವನ್ನು ಹೊಂದಿದೆ. ವಿಜಯನಗರ ಶಿಲೆ (ಬಿರುಸು ಬಿಳಿಯ ಕಲ್ಲು) ಮತ್ತು ಶೈಲಿಯಲ್ಲಿ ಕೆತ್ತಲಾದ ಹದಿನಾರು ಮುಖ್ಯಕಂಬಗಳು ಮತ್ತು ಹದಿನೆಂಟು ಸಾಧಾರಣ ಕೆತ್ತನೆಯ ಶಿಲಾಕಂಬಗಳು ಈ ರಂಗಮಂಟಪದ ವೈಶಿಷ್ಟ್ಯವಾಗಿವೆ. ಯಾವುದೇ ಗೋಡೆಯ ಆಸರೆ ಇಲ್ಲದೆ ಇರುವುದು ಇದರ ಇನ್ನೊಂದು ವಿಶೇಷ. ಇಲ್ಲಿನ ಕಂಬಗಳಲ್ಲಿ ಕೆತ್ತಲಾದ ತಮ್ಮ ಸೊಂಡಿಲನ್ನು ಮೇಲೆತ್ತಿದ ಗಜಗಳ ಮೇಲೆ ತನ್ನೆರಡು ಕಾಲುಗಳನ್ನಿಟ್ಟು ಮಾಳಿಗೆಗೆ ತನ್ನ ತಲೆಕೊಟ್ಟು ನಿಂತ ಸಿಂಹಗಳು ಮತ್ತು ಸಿಂಹಗಳ ಮೇಲೆ ರಾವುತ ನೋಡುಗರನ್ನು ಕ್ಷಣ ಹೊತ್ತು ತಡೆದು ನಿಲ್ಲಿಸುತ್ತವೆ. ಕನಕಗಿರಿ ನಾಯಕರ ಬಲ ಮತ್ತು ಧೈರ್ಯದ ಸಂಕೇತವೆಂಬಂತೆ ಈ ಕಂಬಗಳು ತಲೆ ಎತ್ತಿ ನಿಂತಂತಿವೆ. ಈ ರಂಗಮಂಟಪದ ಉತ್ತರ ದಕ್ಷಿಣ ಮತ್ತು ಪೂರ್ವದ ಭಾಗದಲ್ಲಿ ೨-೩ ಅಡಿ ಎತ್ತರದ ಅಧಿಷ್ಠಾನದ ಮೇಲೆ ಇರುವ ಹದಿನೆಂಟು ಕಂಬಗಳು ಉಳಿದ ಕಂಬಗಳಷ್ಟು ದಪ್ಪವಾಗಿ, ಕೆತ್ತನೆಯಿಂದ ಕೂಡಿರದಿದ್ದರೂ ಈ ಕಂಬಗಳಲ್ಲಿರುವ ಗಣೇಶ, ಬೇಡರಕಣ್ಣಪ್ಪ, ಲಕ್ಷ್ಮೀನರಸಿಂಹ, ಹನುಮಂತ, ಶಿವನನ್ನು ಪೂಜಿಸುವ ಕಾಮಧೇನು, ಮಿಥುನ ಶಿಲ್ಪಗಳು, ಸರ್ಪಬಂಧ, ಮತ್ಸ್ಯಕನ್ಯೆ, ನಂದಿ, ಹಂಸ, ಬೆಣ್ಣೆಕೃಷ್ಣ, ಗರುಡ, ಯಾಳಿ, ಮಜ್ಜಿಗೆ ಕಡೆಯುವ ಹೆಣ್ಣು, ಬೆಣ್ಣೆ ಕೇಳುವ ಮಗ, ಹೂಬಳ್ಳಿ ಚಿತ್ತಾರ, ಕುಸ್ತಿ, ದೇವತೆಗಳು, ಕಾಳಿಂಗಮರ್ದನ ಮುಂತಾದ ಉಬ್ಬು ಶಿಲ್ಪಗಳು ನೋಡುಗರ ಗಮನವನ್ನು ಸೆಳೆಯುತ್ತವೆ. ಬೇಡರ ಕಣ್ಣಪ್ಪ ಶಿವನ ಮೇಲೆ ತನ್ನ ಕಾಲೊಂದನ್ನು ಇಟ್ಟು ಬಾಣದಿಂದ ತನ್ನ ಕಣ್ಣೊಂದನ್ನು ಕೀಳುವ, ರಕ್ತವು ಕಣ್ಣಿನಿಂದ ಕೆಳಗೆ ಸುರಿಯುವ ಕೆತ್ತನೆ ಮನಮುಟ್ಟುತ್ತವೆ. ಇಲ್ಲಿನ ದೇವಾಲಯ ಪ್ರವೇಶದ ಎಡಕ್ಕೆ ಮತ್ತು

ಬಲಕ್ಕೆ ಇರುವ ಹನ್ನೆರಡು ಅಡಿ ಎತ್ತರದ ಜಯ ವಿಜಯ ದ್ವಾರಪಾಲಕರ ಏಕಶಿಲಾವಿಗ್ರಹಗಳು ಭಾವಪೂರ್ಣವಾಗಿವೆ ಹಾಗೂ ನಯವಾಗಿ ಕೆತ್ತಲ್ಪಟ್ಟಿವೆ. ಈ ಮಧ್ಯ ರಂಗಮಂಟಪದ ಒಳಭಾಗದ ಮೇಲೆ ಸುತ್ತಲೂ ಅನೇಕ ಗಾರೆಶಿಲ್ಪಗಳನ್ನು ಪ್ರತಿಷ್ಠಾನ ಮಾಡಲಾಗಿದೆ. ರಾಮಪಟ್ಟಾಭಿಷೇಕ, ಬಾಲಕನ ಎರಡು ಕೈಗಳನ್ನು ಹಿಡಿದು ನಡಿಗೆ ಕಲಿಸುವ ಇಬ್ಬರು ಸ್ತ್ರೀಯರು, ಆಂಜನೇಯ, ಲಕ್ಷ್ಮಣ, ಸೀತೆ, ರುಕ್ಮಿಣಿ ಕಲ್ಯಾಣ ಶೇಷಶಯನ, ಶ್ರೀಮನ್ ನಾರಾಯಣ, ಹಿರಣ್ಯಕಶ್ಯಪುವಿನ ಸಂಹಾರ ಮಾಡುತ್ತಿರುವ ನರಸಿಂಹ, ಕೊಳಲು ಹಿಡಿದು ನಿಂತ ಕೃಷ್ಣ ಮತ್ತು ರಾಧೆ, ಶ್ರೀಕೃಷ್ಣ ಅಷ್ಟೆಬಾರ್ಯ ಗೋಪಿಕಾ ಸ್ತ್ರೀಯರಿಂದ ಅಭ್ಯಂಗಸ್ನಾನ, ವಾದ್ಯತಂಡ ಶಿವಪಾರ್ವತಿ ನಂದಿಮೇಲೆ ಪ್ರಯಾಣ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಗುರುಗಳೊಡನೆ (ಶರಣಮೋನಪ್ಪ) ಮಾತುಕತೆಯಲ್ಲಿ ತೊಡಗಿರುವ ನಾಯಕ ದೊರೆ (ಕೆಲವಡಿ ಉಡಿಚನಾಯಕ) ಸ್ತ್ರೀಯರ ಇಣುಕು ನೋಟ ಮುಂತಾದ ಗಾರೆಶಿಲ್ಪಗಳು ಇಲ್ಲಿಗೆ ಬಂದ ಜನರ ಗಮನವನ್ನು ಸೆಳೆದು ನಿಲ್ಲಿಸುತ್ತವೆ. ಈ ಗಾರೆಶಿಲ್ಪಗಳಿಗೆ ಇತ್ತೀಚಿನ ದಿನಗಳಲ್ಲಿ ಬಳಿಯಲಾದ ಬಣ್ಣಗಳಿಂದ ನೈಜರೂಪ ಮತ್ತು ಆಕರ್ಷಣೆಗೆ ಧಕ್ಕೆಯಾಗಿದೆ. ಮೇಲ್ಛಾವಣಿಯಲ್ಲಿದ್ದ ಚಿತ್ರಕಲೆಯು ಹಾಳಾಗಿದೆ. ಕೆಲವೇ ಭಾಗದಲ್ಲಿ ಅಲ್ಪಸ್ವಲ್ಪ ಮಾತ್ರ ಇಂದು ಕಾಣುತ್ತದೆ. ಈ ದೇವಾಲಯದ ಮುಂಭಾಗದಲ್ಲಿ ಒಂದು ಪುಟ್ಟ ಗರುಡ ಗುಡಿ ಇದೆ. ವಿಷ್ಣುವಿನ ವಾಹನ ಗರುಡ ತನ್ನೆರಡು ಕೈಮುಗಿದು ನರಸಿಂಹದೇವನ ಎದುರಾಗಿ ಕುಳಿತ ಚಿಕ್ಕ ವಿಗ್ರಹ ಈ ಗುಡಿಯಲ್ಲಿದೆ. ಈ ಗುಡಿಗೆ ತಾಗಿಕೊಂಡು ಪೂರ್ವಕ್ಕೆ ಧ್ವಜಸ್ತಂಭ ಕಟ್ಟಡವಿದೆ.

ಲಕ್ಷ್ಮೀ ದೇವಾಲಯ: ಕನಕಾಚಲ ದೇವಾಲಯಕ್ಕೆ ತಾಗಿಕೊಂಡು ಎಡಭಾಗದಲ್ಲಿ ಈ ಲಕ್ಷ್ಮೀ ದೇವಾಲಯವಿದೆ. ಪರಸಪ್ಪ ಉಡಿಚನಾಯಕನು ಈ ದೇವಾಲಯವನ್ನು ಕಟ್ಟಿಸಿದನು. ಗರ್ಭಗೃಹ ಮತ್ತು ಸುಖನಾಸಿ ಹೊಂದಿದ ಈ ದೇವಾಲಯದ ಗರ್ಭಗೃಹದ ಮೇಲೆ ದ್ರಾವಿಡಶೈಲಿಯ ಶಿಖರವಿದೆ. ಗರ್ಭಗೃಹದಲ್ಲಿ ಕಪ್ಪು ಗ್ರಾನೈಟ್ ಶಿಲೆಯ ಲಕ್ಷ್ಮೀ ವಿಗ್ರಹವಿದೆ. ಸುಖನಾಸಿ ಕಂಬಗಳು ಸಾಧಾರಣ ಕೆತ್ತನೆಯನ್ನು ಹೊಂದಿವೆ.

ಶ್ರೀಮದ್ ಆಳ್ವಾರ್: ಉತ್ತರದ ಗೋಪುರದ ಎಡಭಾಗದ ಪ್ರಾಕಾರವನ್ನೇ ದೇವಾಲಯ ರೂಪಕ್ಕೆ ತಂದು ಶ್ರೀಮದ್ ಆಳ್ವಾರ್ ೧೨ ವಿಗ್ರಹಗಳನ್ನು ಅಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹಗಳು ಒಂದೇ ರೀತಿಯಲ್ಲಿ ಕುಳಿತ ಭಂಗಿಯಲ್ಲಿ ಕಂಡರೂ ಕೆಲವು ಅಲ್ಪಸ್ವಲ್ಪ ಪ್ರಮಾಣದಲ್ಲಿ ಭಿನ್ನವಾಗಿ ಕಾಣುತ್ತವೆ. ವಿಷ್ಣುವೇ ಸರ್ವೋತ್ತಮ, ಜಗದ ಒಡೆಯ ಎಂದು ಸಾರಿದ ಇಮ್ಮಡಿ ಉಡಿಚ ನಾಯಕನು ಈ ವೈಷ್ಣವ ಪ್ರಿಯ ಆಳ್ವಾರರ ಮೂರ್ತಿಗಳನ್ನು ಪ್ರತಿಷ್ಠಾಪಿಸಿರಬೇಕು. ಈ ಆಳ್ವಾರ್ ವಿಗ್ರಹಗಳು ಸಾಲಿನಲ್ಲಿ ಲಕ್ಷ್ಮೀನರಸಿಂಹ (ಮಧ್ಯದಲ್ಲಿ) ವಿಗ್ರಹವಿದೆ. ಈ ದೇವಾಲಯ ಎಡಭಾಗದ ಪುಟ್ಟ ಗುಡಿಯಲ್ಲಿ ಭಾರತಿ ಮುಖ್ಯ ಪ್ರಾಣದೇವರ ಗುಡಿ ಹಾಗೂ ಕೈಲಾಸವಾಸಿ ಶ್ರೀಮಹೇಶ್ವರ ದೇವಾಲಯಗಳಿವೆ ಮತ್ತು ಚಿಕ್ಕದಾದ ಕಲ್ಯಾಣ ಮಂಟಪವಿದೆ. ಪ್ರತಿವರ್ಷ ಜರುಗುವ ಕನಕರಾಯ ದೇವರ ಅನೇಕ ಉತ್ಸವಗಳು ಈ ಕಲ್ಯಾಣ ಮಂಟಪದಲ್ಲಿಯೇ ನಡೆಯುತ್ತವೆ. ಈ ಕಲ್ಯಾಣ ಮಂಟಪ ಎದುರಿಗೆ ಪಾಕಶಾಲೆ ಹಾಗೂ ಸಿಹಿ ನೀರಿನ ಬಾವಿ ಇದೆ. ಇದರ ಎಡಭಾಗದಲ್ಲಿ ಅಂದರೆ ಕನಕರಾಯ ದೇವಾಲಯದ ಬಲಕ್ಕೆ ಬ್ರಹ್ಮದೇವರ ಗುಡಿ

ಇದೆ. ಗರ್ಭಗೃಹದಲ್ಲಿ ಭಗ್ನಗೊಂಡ ಮೂರು ಮುಖದ ಬ್ರಹ್ಮವಿಗ್ರಹವಿದೆ. ವಿಷ್ಣುವಿಗೆ (ಕನಕರಾಯ, ಲಕ್ಷ್ಮೀನರಸಿಂಹ) ಬೃಹತ್ ದೇವಾಲಯವನ್ನು ಮತ್ತು ವಿಷ್ಣುವಿಗೆ ಹಾಗೂ ಮಹೇಶ್ವರನಿಗೆ ಪುಟ್ಟ ಗುಡಿಗಳನ್ನು ಕಟ್ಟಿಸಿ ಈ ದೇವರ ಆರಾಧನೆ ಮಾಡಿರುವುದು ಕನಕಗಿರಿ ನಾಯಕರ ವೈಶಿಷ್ಟ್ಯವಾಗಿದೆ. ಲಕ್ಷ್ಮೀದೇವಿಯ ಗುಡಿಯ ಮುಂಭಾಗದಲ್ಲಿ ನಿಂತು ಪೂರ್ವಾಭಿಮುಖವಾಗಿ ತಲೆ ಎತ್ತಿ ನೋಡಿದರೆ ಬ್ರಹ್ಮ, ವಿಷ್ಣು, ಮಹೇಶ್ವರರು ತಮ್ಮ ವಾಹನಧಾರಿಗಳಾಗಿ ಕುಳಿತಿರುವ ಗಾರೆ ಶಿಲ್ಪಗಳು ಕಾಣಿಸುತ್ತವೆ. ಕನಕಾಚಲದೇವರ ಗರ್ಭಗೃಹದ ಹಿಂಭಾಗದಲ್ಲಿ ನಿಂತು ಪೂರ್ವಾಭಿಮುಖವಾಗಿ ನೋಡಿದಾಗ ಪಂಚಕಳಸ (ಕನಕಾಚಲ, ಲಕ್ಷ್ಮೀ ದೇವಾಲಯಗಳ ಗರ್ಭಗೃಹದ ಮೇಲಿನ ಕಳಸ ಮತ್ತು ಪೂರ್ವ, ಉತ್ತರ ಮತ್ತು ದಕ್ಷಿಣ ಬೃಹತ್ ಗೋಪುರಗಳ ಕಳಸ)ಗಳು ದರ್ಶನವಾಗುತ್ತವೆ. ಇವುಗಳ ದರ್ಶನದಿಂದ ಮಹಾಪಾಪ ವಿನಾಶವಾಗುತ್ತದೆ ಎಂಬುದು ಭಕ್ತರ ನಂಬಿಕೆ. ದೇವಾಲಯದ ಆವರಣದೊಳಗೆ ಪ್ರತಿ ವರ್ಷಕ್ಕೊಮ್ಮೆ ಚಂದ್ರಮಾನ ಚೈತ್ರಶುಕ್ಲ ಅಂದರೆ ನಿಜ ಚೈತ್ರ ಶುಕ್ಲ ಪ್ರತಿಪದೆಯ ದಿನ ಕನಕರಾಯ ಸಾಲಿಗ್ರಾಮದ ಮೇಲೆ ಸೂರ್ಯನ ಕಿರಣಗಳು ಬೀಳುತ್ತವೆ. ದಕ್ಷಿಣ ಗೋಪುರವು ಸುಖನಾಸಿಯಲ್ಲಿ ತಲೆಕೆಳಗಾಗಿ ಕಾಣುವುದೆಂದು ಕೆಲವರು ಹೇಳುತ್ತಾರೆ. ಈ ದೃಷ್ಟಿಯಲ್ಲಿ ಪರಸಪ್ಪನಾಯಕನ ಕಲೆ ಮತ್ತು ವಾಸ್ತು ಜ್ಞಾನ ತಿಳಿದುಬರುತ್ತದೆ. ಕನಕಾಚಲ ದೇವಾಲಯದ ಹೊರಭಾಗದಲ್ಲಿಯೂ ಅನೇಕ ದೇವಾಲಯಗಳಿವೆ. ಈ ದೇವಾಲಯದ ಎಡಭಾಗದಲ್ಲಿ ಮಹಾಗಣಪತಿ ದೇವಾಲಯವಿದೆ. ಇದರ ಪಕ್ಕದಲ್ಲಿ ರಾಜ ರಾಣಿಯರ ವಿಗ್ರಹಗಳಿರುವ ದೇವಾಲಯವಿದೆ. ಈ ವಿಗ್ರಹಗಳನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಕೆಲವರು ನಾಯಕನು ಮತ್ತು ಅವನ ನವಾಬ ಉಡಿಚ ನಾಯಕನು ಮತ್ತು ಅವನ ಪರಿವಾರದವರು ಎಂದು, ಸರಿ ಸುಮಾರು ಕ್ರಿ.ಶ. ೧೫೧೦-೧೧ರಲ್ಲಿ ಇವುಗಳನ್ನು ಸ್ಥಾಪಿಸಿದ್ದಾರೆ ಎಂದು ಕಂಡುಬರುತ್ತದೆ. ಆದರೆ ಈ ವಿಗ್ರಹಗಳನ್ನು ನೋಡಿದಾಗ ಮಧ್ಯದಲ್ಲಿರುವ ವಿಗ್ರಹ ಇಮ್ಮಡಿ ಉಡಿಚನಾಯಕನದು. ಇದರ ಎಡಕ್ಕೆ ಅವರ ರಾಣಿ ಅಚ್ಚಮ್ಮ ಇದರ ಪಕ್ಕದ್ದು ಅವನ ತಾಯಿ ರಾಣಿ ಲಕ್ಷ್ಮೀನಾಗತಿಯದು. ಬಲಕ್ಕೆ ಇರುವ ವಿಗ್ರಹಗಳು ಕ್ರಮವಾಗಿ ಚಿಕ್ಕಕನಕಪ್ಪನಾಯಕ ಮತ್ತು ಮುಮ್ಮಡಿ ಕನಕಪ್ಪ ಉಡಿಚ ನಾಯಕನದಾಗಿವೆ. ಅಂದರೆ ಈ ವಿಗ್ರಹದಲ್ಲಿರುವವರು ಇಮ್ಮಡಿ ಉಡಿಚ ನಾಯಕನ ಪರಿವಾರಕ್ಕೆ ಸೇರಿವೆ ಎಂದು ಕಾಣಿಸುತ್ತದೆ. ಇದರ ಮುಂಭಾಗದಲ್ಲಿ ಯುದ್ಧಕ್ಕೆ ಹೊರಟ ರಾಜನೊಬ್ಬನು ತಾಯಿಯ ಆಶೀರ್ವಾದ ಪಡೆಯುವ ದೃಶ್ಯವಿರುವ ಶಿಲ್ಪವಿದೆ. ದೇವಾಲಯದ ಮುಂಭಾಗದಲ್ಲಿ ಬೃಹತ್ ದ್ವೀಪಸ್ತಂಭ ಮತ್ತು ೧೬ ಪಟ್ಟಿಸ್ತಂಭಗಳಿವೆ. ಕನಕಾಚಲ ದೇವಾಲಯದ ಮುಖ್ಯ ಪ್ರವೇಶದ್ವಾರವು ವಿಜಯನಗರ ದೇವಾಲಯಗಳ ಪ್ರವೇಶದಂತಿದೆ. ಅನೇಕ ಗಾರೆ ಶಿಲ್ಪಗಳನ್ನು ಗೋಪುರದಲ್ಲಿ ನಿರ್ಮಿಸಲಾಗಿದೆ. ಪ್ರವೇಶದ್ವಾರದ ಮೇಲಿನ ಆದಿಶೇಷನ ಗಾರೆಶಿಲ್ಪವು ಗಮನ ಸೆಳೆಯುತ್ತದೆ. ಸರಸ್ವತಿ ದೇವಾಲಯದ ಪಕ್ಕದಲ್ಲಿ ಸಂಜೀವ ಪ್ರಾಣದೇವರ ದೇವಾಲಯವಿದೆ. ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಚೌಕಾಕಾರದ ಎರಡು ಮೂರು ಅಡಿ ಎತ್ತರದ ಅಧಿಷ್ಠಾನದ (ಕಟ್ಟಡದ) ಮೇಲೆ ತನ್ನೆರಡು ಕೈಮುಗಿದು ನಿಂತ ೧೦ ಅಡಿ ಎತ್ತರದ ಸಂಜೀವ ಪ್ರಾಣದೇವರ ಕಪ್ಪು ಗ್ರಾನೈಟ್ ಶಿಲೆ ವಿಗ್ರಹವಿದೆ. ಈ ದೇವಾಲಯದ

ಒಳಭಾಗದಲ್ಲಿ ಚಿಕ್ಕ ಕಲ್ಲು ಹಲಗೆಯ ಮೇಲೆ 'ಕನಕಾಚಲಪತಿ ನಮಃ ಅಗಸಿ... ಶಾಲಿವಾಹನ ಶಾ. ಶುದ್ಧಿ ೧೮೩೬' ಎಂದು ಬರೆದ ಶಾಸನವಿದೆ. ಈ ಶಾಸನವಿದ್ದ ಸ್ಥಳ ಇದೋ, ಅಥವಾ ಇಲ್ಲಿಗೆ ಬೇರೆ ಕಡೆಯಿಂದ ತಂದಿಡಲಾಗಿದೆಯೋ ಎಂಬುದು ಗೊತ್ತಾಗುವುದಿಲ್ಲ. ಆಮೇಲೆ ಈ ಕಾಲಮಾನವು ಈ ದೇವಾಲಯದ ಕಾಲಮಾನಕ್ಕೆ ಸರಿ ಹೊಂದಲಾರದು. ಈ ದೇವಾಲಯದ ಬಾಗಿಲು ತೋರಣಗಳು ತುಂಬಾ ಕಲಾತ್ಮಕವಾಗಿ ಕಾಣುತ್ತವೆ. ದೇವಾಲಯದ ಮೇಲೆ ದ್ರಾವಿಡ ಶೈಲಿಯ ಚಿಕ್ಕ ಶಿಖರವಿದ್ದು, ಅದರ ಮುಂಭಾಗದಲ್ಲಿ ಚಿಕ್ಕದಾದ ವಿಜಯನಗರ ಶೈಲಿಯ ಶಿಖರವಿದೆ.

ಸಂಜೀವರಾಯನ ಗುಡಿಯ ಮುಂಭಾಗದಲ್ಲಿ ಹಿಂದೂ ಮುಸ್ಲಿಂ ಶೈಲಿಯ 'ಮಹಲಿನ ಮನೆ' ಎಂದು ಕರೆಯುವ ಕಟ್ಟಡವಿದೆ. ಇಲ್ಲಿ ನಿಜಾಮನ ಕಾಲದಲ್ಲಿ ತೆರಿಗೆ ಸಂಗ್ರಹ ಮಾಡಲಾಗುತ್ತಿತ್ತು ಎಂದು ಹೇಳುತ್ತಾರೆ. ಪಕ್ಕದಲ್ಲಿ ಪಾದ ಮಂಟಪ ಎಂದು ಕರೆಯುವ ಪುಟ್ಟ ಮಂಟಪವಿದೆ. ಎರಡು ಪಾದಗಳನ್ನು ಕಲ್ಲಿನಲ್ಲಿ ಕೆತ್ತಿ ಇಲ್ಲಿ ಇಡಲಾಗಿದೆ. ಇವು ಕನಕರಾಯನ ಪಾದಗಳೆಂದು ಹೇಳುವರು. ಕೆಳವರ್ಗದವರಿಗೆ ಮೊದಮೊದಲು ದೇವಾಲಯದೊಳಗೆ ಪ್ರವೇಶ ಇರಲಿಲ್ಲ. ಅವರೆಲ್ಲ ಈ ಪಾದುಕೆಗಳನ್ನೇ ಕನಕರಾಯ ಎಂದು ಪೂಜೆ ಮಾಡಿಕೊಂಡು ಹೋಗುತ್ತಿದ್ದರೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಈ ಮಂಟಪವನ್ನು 'ಮುದ್ರೆ ಮಂಪಟ'ವೆಂದು ಕರೆಯುತ್ತಾರೆ. ಈ ಮಂಟಪದಲ್ಲಿ ದಾಸಪ್ಪ, ದಾಸಿಯರಿಗೆ, ಬಸವಿಯರಿಗೆ ಮುದ್ರೆಗಳನ್ನು ಹಾಕಲಾಗುತ್ತಿತ್ತು ಎನ್ನುವರು. ಇದೇ ರೀತಿಯ ಮುದ್ರೆ ಮಂಟಪ ಮುಂಡರಗಿ ಕನಕರಾಯನ ಗುಡಿಯ ಮುಂಭಾಗದಲ್ಲಿದೆ. ಅಲ್ಲಿಯೂ ಈ ರೀತಿಯ ಮುದ್ರೆ ಕಾರ್ಯ ನಡೆಸಲಾಗುತ್ತಿತ್ತು ಎನ್ನುವರು. ಈ ಮಂಟಪದ ಹಿಂಭಾಗದಲ್ಲಿ ಪ್ರತಾಪರಾಯನ ದೇವಾಲಯವಿದೆ. ಇದರ ಎಡಭಾಗದಲ್ಲಿ ಚಿದಾನಂದ ಮಠ ಮತ್ತು ಬಾವಿ ಇದೆ. ಪ್ರತಾಪರಾಯನ ದೇವಾಲಯದ ಮುಂಭಾಗದಲ್ಲಿ ತೇರಿನ ಮನೆ ಇದೆ. ಇದರ ಮುಂಭಾಗದ ಎಡಭಾಗದಲ್ಲಿ ಒಂದು ನೆಲಮಾಳಿಗೆ ಇದೆ. ಇದು ಆನೆಗುಂದಿಗೆ ಹೋಗುವ ನೆಲಮಾರ್ಗ ಎಂದು ಹೇಳುತ್ತಾರೆ. ರಾಜರು ಆಪತ್ಕಾಲದಲ್ಲಿ ಅವಿತುಕೊಂಡು ತಪ್ಪಿಸಿಕೊಂಡು ಹೋಗುವ ಗುಪ್ತಮಾರ್ಗ ಇದಾಗಿತ್ತು. ಇದರ ಪಕ್ಕದಲ್ಲೇ ಅರಮನೆ ಇತ್ತೆಂದು ಹೇಳುತ್ತಾರೆ. ಆದರೆ ಇಂದು ಈ ಸ್ಥಳದಲ್ಲಿ ಕಟ್ಟಡಗಳೇ ತುಂಬಿವೆ. ಈ ಅರಮನೆಯಿಂದ ಕನಕಾಚಲದೇವಾಲಯದ ದಕ್ಷಿಣಕ್ಕೆ ೧೫೦ ಅಡಿ ದೂರದಲ್ಲಿ ಅರಮನೆಯು ಇತ್ತು. ಅರಮನೆ ಸುತ್ತಲೂ ಸುಮಾರು ೧೨ ಅಡಿ ಎತ್ತರದ ಕಲ್ಲಿನ ಆವರಣ ಗೋಡೆ ಇತ್ತು. ಈಶಾನ್ಯ ಮೂಲೆಯಿಂದ ಆಗ್ನೇಯದವರೆಗೆ ಕಮಾನು ಇದ್ದವು. ಅರಮನೆಯ ದ್ವಾರಬಾಗಿಲು ಉತ್ತರದ ಕಡೆ ಇತ್ತು. ಆವರಣದ ಮಧ್ಯಭಾಗದಲ್ಲಿ ರಾಣಿಯರ ವಾಸದ ಮನೆ ಮತ್ತು ಚಿಕ್ಕ ಚಿಕ್ಕ ಕೊಠಡಿಗಳಿದ್ದವು. ಈ ಕೊಠಡಿಗಳಲ್ಲಿ ಒಂದನ್ನು ಮಾತ್ರ ಈ ಹಿಂದೆ ನೋಡಬಹುದಿತ್ತೆಂದು ಹಿರಿಯರು ಹೇಳುತ್ತಿದ್ದರು. ಇತ್ತೀಚೆಗೆ ಈ ಪ್ರದೇಶ ಬಸ್ ನಿಲ್ದಾಣ (ಹಳೇಬಸ್ ನಿಲ್ದಾಣ)ವಾಗಿತ್ತು. ಆವರಣದ ಗೋಡೆ ಮತ್ತು ಇಲ್ಲಿನ ಕೊಠಡಿಗಳನ್ನು ನಿರ್ಮಿಸುವಾಗ ಕಟ್ಟಿಗೆ ಕಲ್ಲು ಮತ್ತು ಗಾರೆಯನ್ನು ಬಳಸಿದ್ದರು. ಈ ಕೊಠಡಿಯ ಮುಖಾಂತರ ಕನಕಗಿರಿ ನಾಯಕರು ಪ್ರಜೆಗಳಿಗೆ ದರ್ಶನ ನೀಡುತ್ತಿದ್ದರೆಂದು ಹಿರಿಯರೊಬ್ಬರು ಹೇಳುತ್ತಾರೆ. ಈ ಪ್ರದೇಶದಲ್ಲಿ ಇತ್ತೀಚೆಗೆ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ ಭೂಮಿಯನ್ನು

ಅಗೆಯುವಾಗ ಬಚ್ಚಲಿನಂತಹ, ಗಾರೆಯಿಂದ ಮಾಡಿದ ಕಾಲುವೆಯಂತ ಕುರುಹುಗಳು ಕಣ್ಣಿಗೆ ಬಿದ್ದವು ಎಂದೂ ಅವರು ಹೇಳುತ್ತಾರೆ. ಈ ಅರಮನೆಯಂತಹ ಒಂದು ಕಟ್ಟಡವು ಹೇಮಗುಡ್ಡದಲ್ಲೂ ಕಾಣಬಹುದು. ಅದನ್ನು ಮದ್ದಿನ ಸಂಗ್ರಹ ಕಟ್ಟಡವೆಂದೂ ಕೆಲವರು ಹೇಳುತ್ತಾರೆ. ಆದರೆ ಅದು ಇಂದು ಒಂದು ಭಾಗ ಮಾತ್ರ ಉಳಿದಿದ್ದು; ಉಳಿದ ಭಾಗವು ಹಾಳಾಗಿ ಹೋಗಿದೆ.

ಕನಕಗಿರಿ ಎರಡನೇ ತಿರುಪತಿ

ಕನಕಗಿರಿಯು ಎರಡನೇ ತಿರುಪತಿ ಎಂದು ಹೆಸರಾಗಿದೆ. ಕನಕಗಿರಿಯ ಲಕ್ಷ್ಮೀನರಸಿಂಹನು ತಿರುಪತಿಯ ವೆಂಕಟರಮಣ ಪ್ರತ್ಯಕ್ಷ ರೂಪವೇ ಆಗಿದ್ದಾನೆ. ವೆಂಕಟರಮಣನೇ ಇಲ್ಲಿ 'ಕನಕರಾಯನೆಂದು', 'ಲಕ್ಷ್ಮೀನರಸಿಂಹನೆಂದು', 'ಕನಕಲಕ್ಷ್ಮೀನರಸಿಂಹ'ನೆಂದು ಹೆಸರು ಪಡೆದಿದ್ದಾನೆ. ಕನಕಗಿರಿಯ ಮನೆತನದ ಸ್ಥಾಪಕ ಪರಸಪ್ಪ ಉಡಿಚನಾಯಕನಿಗೆ ತಿರುಪತಿಯ ವೆಂಕಟರಮಣನೇ ಪತ್ಯಕ್ಷವಾಗಿ ದರ್ಶನ ನೀಡಿದ್ದನೆಂದು ಹೇಳುಲಾಗುತ್ತದೆ. ತಿರುಪತಿಯಲ್ಲಿ ವೆಂಕಟರಮಣನು ಸಾಲಿಗ್ರಾಮ ರೂಪದಲ್ಲಿ ಕಂಡಂತೆ ಕನಕಗಿರಿಯಲ್ಲೂ ಸಾಲಿಗ್ರಾಮ ರೂಪದಲ್ಲಿ ಕಾಣಿಸಿಕೊಂಡಿದ್ದಾನೆ. ತಿರುಪತಿಯಲ್ಲಿ ತಿರುಮಲಗಿರಿ ತೀರ್ಥರಾಜ ಸ್ವಾಮಿ ಪುಷ್ಕರಣಿಯಂತೆ ಕನಕಗಿರಿಯಲ್ಲೂ ನರಸಿಂಹತೀರ್ಥವಿದೆ. ಕನಕಗಿರಿಯಲ್ಲಿ ಹುತ್ತದ ಮೇಲೆ ಹಸು ಹಾಲು ಕರೆದ ಕಥೆಯೊಂದು ಪ್ರಚಲಿತದಲ್ಲಿದೆ. ಇದೇ ರೀತಿಯ ಕಥೆಯು ತಿರುಪತಿಯಲ್ಲಿಯೂ ಇದೆ. ತಿರುಪತಿಯಲ್ಲಿ ನಡೆಯುವ ಉತ್ಸವಗಳೆಲ್ಲವೂ ಕನಕಗಿರಿಯಲ್ಲೂ ನಡೆಯುತ್ತವೆ. ವಿಜಯನಗರ ದೊರೆಗಳು ತಿರುಪತಿಗೆ ನೀಡಿದ ಪ್ರೋತ್ಸಾಹದಷ್ಟೇ ಕನಕಗಿರಿಗೂ ನೀಡಿದ್ದರು. ಹಾಗಾಗಿ ಪೌರಾಣಿಕವಾಗಿ ಐತಿಹಾಸಿಕವಾಗಿ ತಿರುಪತಿಯಷ್ಟೆ ಪ್ರಸಿದ್ಧಿಯನ್ನು ಪಡೆದಿರುವ ಕನಕಗಿರಿಯನ್ನು ಎರಡನೇ ತಿರುಪತಿ ಎಂದು ಕರೆಯಲಾಗುತ್ತದೆ.

ಕನಕಾಚಲ ದೇವಸ್ಥಾನದಲ್ಲಿ ವರ್ಷಪೂರ್ತಿ ವಾರ್ಷಿಕ ಆಚರಣೆಗಳು ವೈಭವದಿಂದ ನಡೆಯುತ್ತಿರುತ್ತವೆ. ಚೈತ್ರಮಾಸದಲ್ಲಿ ರಾಮನವಮಿ, ವೈಶಾಖ ಮಾಸದಲ್ಲಿ ನರಸಿಂಹ ಜಯಂತಿ ಆಚರಣೆ ಮಾಡುತ್ತಾರೆ. ಶ್ರಾವಣದಲ್ಲಿ ವರಮಹಾಲಕ್ಷ್ಮೀ ಪೂಜೆ, ಗೋಕುಲಾಕಷ್ಟಮಿ, ವಿಜೃಂಭಣೆಯಿಂದ ನೆರವೇರುತ್ತವೆ. ಶ್ರೀಕೃಷ್ಣನಿಗೆ ಕ್ಷೀರಾಭಿಷೇಕ, ಹಾಲು ಓಕಳಿ ಉತ್ಸವದ ಜೊತೆಗೆ ನಡೆಯುತ್ತದೆ. ದಸರಾ ಉತ್ಸವವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಕನಕಾಚಲನ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಊರ ಹೊರಗಿನ ಜೀನಗಾರ ಹೊಲಕ್ಕೆ ಹೋಗಿ ಬನ್ನಿ ಮುಡಿಯುವ ಪರಂಪರೆ ಬಹು ಹಿಂದಿನಿಂದ ಬಂದುದಾಗಿದೆ. ಗ್ರಾಮದ ಅಪಾರ ಭಕ್ತ ಸಮೂಹ ಇಲ್ಲಿ ಸೇರಿರುತ್ತದೆ. ಬನ್ನಿ ಮುಡಿದು ಎದುರು ಹನುಮಪ್ಪನಿಗೆ ಹೋಗಿ ಬರುವ ಪದ್ಧತಿ ಇದೆ. ಕಾರ್ತೀಕ ಮಾಸದಲ್ಲಿ ಭಕ್ತರಿಂದ ಮಹಾಕಾರ್ತೀಕ ನಡೆಯುತ್ತದೆ. ಅಮವಾಸ್ಯೆಯ ದಿನ ೧೦ ಸಾವಿರ ಪ್ರಣತಿಯಲ್ಲಿ ದೀಪ ಬೆಳಗಿಸುವ ಮೂಲಕ ಕಾರ್ತೀಕವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಪುಷ್ಯ ಮಾಸದಲ್ಲಿ (ದನರ್ಮಾಸ) ಸೂರ್ಯೋದಯದೊಳಗೆ ದೇವರಿಗೆ ನಿತ್ಯ ಕಡುಬಿನ ನೈವೇದ್ಯ ಮಾಡಲಾಗುತ್ತದೆ. ಮಾಘ ಮಾಸದಲ್ಲಿ (ರಥಸಪ್ತಮಿ) ತೇರಿನ ಪೂಜೆ ಮಾಡಲಾಗುತ್ತದೆ. ಹರಕೆ ಹೊರುವದು, ಹರಕೆ ತೀರಿಸುವದು,

ತಲೆಮಂಡಿಯನ್ನು ಹರಕೆ ರೂಪದಲ್ಲಿ ಕೊಡುವುದು, ಮದುವೆ, ಮುಂಜವಿ, ಜವಳ, ನಾಮಕರಣ, ಮುಂತಾದ ಧಾರ್ಮಿಕಾಚರಣೆಗಳು ವರ್ಷವಿಡೀ ಇಲ್ಲಿ ನಡೆಯುತ್ತಿರುತ್ತವೆ. ಈ ಎಲ್ಲ ಪೂಜೆ ಪುನಸ್ಕಾರಗಳು ಭಜನೆ, ಜಾತ್ರೆ ಉತ್ಸವಗಳ ಉಸ್ತುವಾರಿಯನ್ನು ಸರ್ಕಾರ ಮತ್ತು ಗ್ರಾಮದ ಸಮಿತಿಯು ವಹಿಸಿಕೊಳ್ಳುತ್ತದೆ. ಒಟ್ಟಾರೆಯಾಗಿ ಕನಕಾಚಲ ದೇವಸ್ಥಾನವು ಈ ಭಾಗದಲ್ಲಿ ಜಾತಿ, ಮತ, ಧರ್ಮವನ್ನು ಮೀರಿದ ಸಾಮರಸ್ಯ ಸಾರುವ, ಭಕ್ತರೊಂದಿಗೆ ಅವಿನಾಭಾವ ಸಂಬಂಧವನ್ನು ಇರಿಸಿಕೊಂಡ ದೇವರಾಗಿದೆ.

ಮಲ್ಲಿಕಾರ್ಜುನ (ಮಲ್ಲಯ್ಯ) ದೇವಾಲಯ

ಕನಕಾಚಲ ದೇವಸ್ಥಾನದ ಬಲಭಾಗದ ಮುಖ್ಯರಸ್ತೆಗೆ ಹೊಂದಿಕೊಂಡಿರುವ, ದಕ್ಷಿಣಾಭಿಮುಖವಾಗಿರುವ ಈ ದೇವಾಲಯವನ್ನು ೧೫ನೇ ಶತಮಾನದಲ್ಲಿ ನವಾಬ ಉಡಚ ನಾಯಕನು ನಿರ್ಮಿಸಿದ ದೇವಾಲಯಗಳಲ್ಲಿ ಒಂದಾಗಿದೆ. ಕಲ್ಲಿನಿಂದ, ಕಂಬಗಳಿಂದ ಇಟ್ಟಿಗೆ ಗಾರೆಗಳಿಂದ ಈ ದೇವಾಲಯ ನಿರ್ಮಾಣವಾಗಿದೆ. ಕೆಲವರು ಈ ದೇವರನ್ನು ಮಲ್ಲಯ್ಯ, ಸೋಮನಾಥ ಎಂತಲೂ ಕರೆಯುತ್ತಾರೆ. ಕಾರ್ತೀಕ ಮಾಸದಲ್ಲಿ ಅಭಿಷೇಕ, ಪೂಜೆ-ಪುನಸ್ಕಾರಾದಿಗಳು ನಡೆಯುತ್ತವೆ. ಕಾರ್ತೀಕ ಅಮವಾಸ್ಯೆಯಂದು ದೊಡ್ಡ ಕಾರ್ತೀಕವೆಂದೂ, ಮರುದಿನ ಮರಿ ಕಾರ್ತೀಕವೆಂದು ಇಲ್ಲಿ ಆಚರಿಸಲಾಗುತ್ತದೆ. ಪ್ರತಿ ರವಿವಾರದಂದು ಭಕ್ತರು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಐತಿಹಾಸಿಕ ದೇವಾಲಯಗಳಾದರೂ ಸಹ ಕನಕಾಚಲಪತಿ ದೇವಸ್ಥಾನವನ್ನು ಹೊರತುಪಡಿಸಿ ಇಲ್ಲಿನ ಬಹುತೇಕ ದೇವಾಲಯಗಳಿಗೆ ಸರ್ಕಾರದ ಅಥವಾ ಪ್ರಾಚ್ಯವಸ್ತು ಇಲಾಖೆಯ ಯಾವುದೇ ಉಸ್ತುವಾರಿ ಅಥವಾ ನೆರವು ಇರುವುದಿಲ್ಲ. ಹೀಗಾಗಿ ಅನೇಕ ದೇವಾಲಯಗಳು ಇಲ್ಲಿನ ಸಮುದಾಯಗಳ, ಅಕ್ಕಪಕ್ಕದವರ ನೆರವಿನೊಂದಿಗೆ ವರ್ಷವಿಡೀ ಪೂಜಿಸಲ್ಪಡುತ್ತಿರುವುದು ಒಂದು ವಿಶೇಷ ಸಂಗತಿ. ಈ ದೇವಸ್ಥಾನದ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ಜನಾದ್ರಿ ಟಾಕಪ್ಪ ಅವರ ಮಕ್ಕಳು ಹಾಗೂ ಸೌದ್ರಿ ವೀರಭದ್ರಪ್ಪ ಇವರುಗಳ ನೆರವಿನೊಂದಿಗೆ ದೇವಸ್ಥಾನಕ್ಕೆ ಸುಣ್ಣ, ಬಣ್ಣ, ವಿದ್ಯುತ್, ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಗಜಲಕ್ಷ್ಮೀ ದೇವಾಲಯ

ಕ್ರಿ.ಶ. ೧೫೧೦-೧೫೩೩ರಲ್ಲಿ ನವಾಬ ಉಡಿಚ ನಾಯಕನಿಂದ ನಿರ್ಮಿಸಲ್ಪಟ್ಟ ಈ ದೇವಾಲಯವು ಕನಕಗಿರಿಯ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಉತ್ತರಾಭಿಮುಖವಾಗಿದೆ. ಈ ದೇವಸ್ಥಾನದ ಉಸ್ತುವಾರಿಯನ್ನು ಭಾವಸಾರ ಕ್ಷತ್ರಿಯ ಸಮಾಜದವರು ವಹಿಸಿಕೊಂಡು ವರ್ಷವಿಡೀ ಪೂಜಿಸುತ್ತಾರೆ. ಸೀತಾರಾಮ್ ಬೊಂದಾಡೆ ಈ ದೇವಸ್ಥಾನದ ಅರ್ಚಕರಾಗಿದ್ದಾರೆ. ನಾಲ್ಕು ಕೈಯುಳ್ಳ ಗಜಲಕ್ಷ್ಮೀಯ ಅಕ್ಕಪಕ್ಕದಲ್ಲಿ ಎರಡು ಆನೆಗಳು ಪುಷ್ಪವನ್ನಿಡಿದು ಸೊಂಡಿಲನ್ನು ಮೇಲಕ್ಕೆತ್ತಿ ನಿಂತಿವೆ. ಪ್ರತಿ ಶುಕ್ರವಾರ, ಮಂಗಳಾರಗಳಂದು ಕಾರ್ತೀಕ, ಶ್ರಾವಣ ಮಾಸಗಳಲ್ಲಿ ಸಮಾಜಬಾಂಧವರಿಂದ, ಸಾರ್ವಜನಿಕರಿಂದ ಇಲ್ಲಿ ವಿಶೇಷ ಪೂಜೆ ನೆರವೇರುತ್ತದೆ. "ಬಹುದಿನಗಳ ಹಿಂದೆ ಈ ದೇವಸ್ಥಾನದ ಮುಂಭಾಗ ಕೊಂಡದಲ್ಲಿ ಓಕಳಿ ಕಲಸಿ ಕಾರಹುಣ್ಣಿಮೆ ಮತ್ತು ಯುಗಾದಿಗಳಲ್ಲಿ ಬಣ್ಣ ಆಡುತ್ತಿದ್ದರು. ಆದರೆ ಈಗ ಕೊಂಡವೂ ಇಲ್ಲ, ಓಕುಳಿ ಆಟವೂ ಇಲ್ಲ" ಎನ್ನುತ್ತಾರೆ ಇಲ್ಲಿನ ಅರ್ಚಕರು.

ಪಂಪಾಪತಿ ಗುಡಿ / ಬಸವೇಶ್ವರ ಗುಡಿ

ರಾಜಬೀದಿಯ ಬಲಭಾಗದಲ್ಲಿ ನವಾಬ ಉಡಿಚನಾಯಕನು ಕ್ರಿ.ಶ. ೧೫೧೦-೧೫೩೩ ರ ಅವಧಿಯಲ್ಲಿ ನಿರ್ಮಿಸಿದ್ದಾನೆ. ಈ ದೇವಾಲಯದ ಎದುರಿಗೆ ರಾಜಬೀದಿಯ ಬಲಭಾಗದಲ್ಲಿ ಬಸವಣ್ಣ (ನಂದಿ) ಮೂರ್ತಿಯನ್ನು ಆಕರ್ಷಕವಾಗಿ ನಿರ್ಮಿಸಿದ್ದಾನೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪಗಳಾಗಿವೆ. ಎದುರಿನ ನಂದಿ ಮಂಟಪದ ಪಕ್ಕದಲ್ಲಿ ತ್ರುಟಿತ ಶಾಸನವಿದೆ. ಕಮಲಾಕೃತಿ ಕೆತ್ತನೆಯ ಭುವನೇಶ್ವರಿ ಇದೆ. ಬ್ರಹ್ಮಸೂತ್ರವುಳ್ಳ ಶಿವಲಿಂಗವು ಗರ್ಭಗೃಹದ ಮಧ್ಯದಲ್ಲಿದೆ. ಬಾಗಿಲ ಪಾರ್ಶ್ವದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಎದುರಿನ ನಂದಿ ಮಂಟಪದಲ್ಲಿ ಪಾರ್ವತಿಯ ಶಿಲ್ಪವನ್ನೂ ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪವು ತ್ರಿಭಂಗದಲ್ಲಿದ್ದು, ಕಿರೀಟ, ಮುಕುಟ, ಪತ್ರಕುಂಡಲ, ಭುಜಕೀರ್ತಿ, ಕಂಠಿಹಾರ, ಭುಜಹಾರ, ತೋಳ್ಬಂದಿ, ಕಂಕಣ, ಸೊಂಟಪಟ್ಟಿ, ವೈಜಯಂತಿಹಾರಗಳನ್ನು ಧರಿಸಲಾಗಿದ್ದು ಸುತ್ತಲೂ ಪುಷ್ಪಾಲಂಕೃತಿ ಪ್ರಭಾವಳಿ ಇದೆ. ಹೊರಭಾಗದ ದೇವಕೋಷ್ಟಕಗಳಲ್ಲಿ ನಟರಾಜ, ವೀರಭದ್ರ, ಗಣೇಶ, ನಂದಿವಾಹನ, ಉಮಾ ಮಹೇಶ್ವರ, ಷಣ್ಮುಖರ ಗಾರೆ ಶಿಲ್ಪಗಳಿವೆ. ಎದುರಿನ ನಂದಿ ಮಂಟಪಕ್ಕೆ ಸುತ್ತಲೂ ಗೋಡೆ, ಮೇಲ್ಭಾಗದಲ್ಲಿ ಶಿಖರ ಇದೆ. ಸಜ್ಜನ ಸಮಾಜ ಬಾಂಧವರು ಈ ದೇವಾಲಯಗಳಿಗೆ ನಿತ್ಯಪೂಜೆಯ ವ್ಯವಸ್ಥೆ ಮಾಡಿದ್ದಾರೆ. ಕಾರ್ತೀಕ ಮಾಸ, ಶ್ರಾವಣ ಮಾಸ, ಶಿವರಾತ್ರಿ ಮುಂತಾದ ವಿಶೇಷ ದಿನಗಳಲ್ಲಿ ಅನೇಕ ಧಾರ್ಮಿಕ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ. ಪ್ರತಿ ಸೋಮವಾರ ಭಕ್ತರು ದೇವರ ದರ್ಶನಕ್ಕೆ ಹೆಚ್ಚಾಗಿ ಬರುತ್ತಾರೆ.

ನಗರೇಶ್ವರ ಗುಡಿ

ರಾಜ ಬೀದಿಯ ಬಲಭಾಗದಲ್ಲಿ ನವಾಬ ಉಡಿಚನಾಯನು ಕ್ರಿ.ಶ. ೧೫೧೦-೧೫೩೩ರ ಅವಧಿಯಲ್ಲಿ ನಿರ್ಮಿಸಿದನು. ವಿಜಯನಗರ ಶೈಲಿ ಹೊಂದಿರುವ ಈ ದೇವಸ್ಥಾನವು ಗರ್ಭಗೃಹ ಮತ್ತು ಸಭಾ ಮಂಟಪಗಳಿಂದ ಕೂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯ ಉಬ್ಬು ಕೆತ್ತನೆ ಇದೆ. ಮಧ್ಯದ ಎತ್ತರದ ಪೀಠದಲ್ಲಿ ಬ್ರಹ್ಮಸೂತ್ರವುಳ್ಳ ಶಿವಲಿಂಗವಿದೆ. ಗರ್ಭಗೃಹಕ್ಕೆ ಎದುರಾಗಿ ನಂದಿ ಶಿಲ್ಪವಿದೆ. ಕಂಬ, ಕಣಶಿಲೆ, ಗಾರೆ, ಇಟ್ಟಿಗೆಯಿಂದ ರಚನೆಯಾಗಿದೆ. ಇಲ್ಲಿ ನಿತ್ಯ ಅಭಿಷೇಕ, ಪೂಜೆ ನಡೆಯುತ್ತದೆ. ವೈಶ್ಯ ಸಮಾಜವು ಈ ದೇವಾಲಯದಲ್ಲಿ ಅನೇಕ ಧಾರ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. ಶ್ರಾವಣ, ಕಾರ್ತೀಕ, ಶಿವರಾತ್ರಿ, ವಾಸವಿ ಜಯಂತಿ ಇತ್ಯಾದಿ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ನೆರವೇರಿಸುತ್ತದೆ.

ವೈಶ್ಯ ಸಮಾಜದವರು ತಮ್ಮ ಕುಲದೇವಿಯಾದ ಶ್ರೀ ಕನ್ನಿಕಾಪರಮೇಶ್ವರಿ ಅಥವಾ ವಾಸವಿ ಜಯಂತಿಯನ್ನು ಪ್ರತಿವರ್ಷ ಏಪ್ರಿಲ್, ಮೇ ತಿಂಗಳಲ್ಲಿ ಆಚರಿಸುತ್ತಾರೆ. ಐದು ಕುಂಭಗಳನ್ನು ಪ್ರತಿಷ್ಠಾಪಿಸಿ ಕುಂಕುಮಾರ್ಚನೆ, ಅಭಿಷೇಕ, ಮಹಾಮಂಗಳಾರತಿ ಮುಂತಾದ ಧಾರ್ಮಿಕ ವಿಧಿಗಳನ್ನು ನೆರವೇರಿಸುತ್ತಾರೆ. ಕುಂಭದ ಮೆರವಣಿಗೆಯಲ್ಲಿ ವಿಶೇಷ ವೇಷಧಾರಿಗಳಾದ ಕಂಚಾವೀರರು ಭಾಗವಹಿಸಿ ವಾಸವಿ ಸ್ತೋತ್ರವನ್ನು,

ಒಡುಪುಗಳನ್ನು ಹೇಳುತ್ತಾರೆ. ಮೆರವಣಿಗೆಯಲ್ಲಿ ದಾರಿಯುದ್ದಕ್ಕೂ ಕಾಯಿ ಒಡೆಯತ್ತ, ನಿಂಬೆಹಣ್ಣನ್ನು ಕತ್ತರಿಸಿ ಆಚೆ ಈಚೆ ಎಸೆಯುತ್ತ ಮುಂದೆ ಸಾಗುತ್ತಾರೆ. ಸಂಜೆ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಹೀಗೆ ಅನೇಕ ಆಚರಣೆಗಳು ಇಲ್ಲಿ ನಡೆಯುವುದು ವಿಶೇಷ.

ತೊಂಡೆ ತೆವರಪ್ಪ ದೇವಾಲಯ

ಕನಕಾಚಲಪತಿ ದೇವಸ್ಥಾನದ ಉತ್ತರ ದಿಕ್ಕಿನಲ್ಲಿದ್ದ ಮಣ್ಣಿನ ದಿಬ್ಬದ ಕಂಠಿ ಪ್ರದೇಶದಲ್ಲಿ ಈ ಗುಡಿ ಇರುವುದರಿಂದ ಈತನನ್ನು ಕಂಠಿರಂಗ ಎಂತಲೂ ಕರೆಯುತ್ತಾರೆ. ಕ್ರಿ.ಶ. ೧೫೭೮-೧೬೧೮ರ ಅವಧಿಯಲ್ಲಿ ಒಂದನೇ ಕನಕಪ್ಪ ಉಡಿಚನಾಯಕನು ಈ ದೇವಸ್ಥಾನವನ್ನು ಕಟ್ಟಿಸಿದ್ದಾನೆ. ವಿಜಯನಗರ ಶೈಲಿ ಹೊಂದಿರುವ ಈ ಗುಡಿಯು ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಸಭಾಮಂಟಪ, ಮುಖಮಂಟಪದ ಭಾಗಗಳನ್ನು ಈ ಗುಡಿಯು ಹೊಂದಿದೆ. ಗರ್ಭಗೃಹದ ಪ್ರವೇಶದ್ವಾರದ ಎರಡು ಬದಿಗೆ ಶೈವ ದ್ವಾರಪಾಲಕರು ಇವರ ಪಕ್ಕದಲ್ಲಿ ಚಾಮರಧಾರಿಯರು ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ ಇದರ ಮೇಲಿನ ಪಟ್ಟಿಕೆಯಲ್ಲಿ ಶಂಖ, ತ್ರಿನಾಮ, ಚಕ್ರಗಳ ಚಿಹ್ನೆಗಳಿವೆ. ಮಧ್ಯದಲ್ಲಿ ಆಂಜನೇಯನ ಉಬ್ಬುಶಿಲ್ಪವಿದ್ದು ಹಿಂಬದಿ ಗೋಡೆಗೆ ಎರಡು ಮೂಲೆ ಕಂಬಗಳು ಇವೆ.

ಕುದುರೆ, ಸಿಂಹ, ಆನೆಗಳನ್ನು ಒಳಗೊಂಡ ಶಾಖೆ, ಸ್ತಂಭ ಲತಾ ಹಾಗೂ ರತ್ನ ಶಾಖೆಗಳಿಂದ ಕೂಡಿದ ಅಧಿಷ್ಠಾನವನ್ನು ನಾವಿಲ್ಲಿ ಕಾಣಬಹುದು. ಶೈವ ಕೋಷ್ಠಗಳ ಒಳಗೆ ಅನಂತಶಯನ ಇತ್ಯಾದಿ ಶಿಲ್ಪಗಳಿವೆ. ದೇಗುಲದ ಮುಂದೆ ಇರುವ ಕಟ್ಟೆಯ ಮೇಲೆ ದೀಪ ಸ್ತಂಭವಿದೆ. ಇದರ ಕೆಳಗಿನ ಗೂಡಿನಲ್ಲಿ ನಾಯಕ ಮತ್ತು ಅವನ ಹೆಂಡತಿಯ ಪ್ರತಿಮೆಗಳಿವೆ. ಇಲ್ಲಿ ನಿತ್ಯಪೂಜೆ ನಡೆಯುತ್ತದೆ. ಪ್ರತಿ ಶನಿವಾರ ಭಕ್ತಾದಿಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಈತನಿಗೆ ಭಕ್ತರು ನಡೆದುಕೊಳ್ಳುವುದು, ಹರಕೆ ಹೊರುವುದು ಹೆಚ್ಚು. ಆಂಜನೇಯನ ಮೇಲೆ ಲೆಕ್ಕಿ ತಪ್ಪಲು ಇಟ್ಟು ಭವಿಷ್ಯ ಕೇಳುವ ಪದ್ಧತಿ ಇಲ್ಲಿದೆ. ಆಂಜನೇಯನ ಬಲಭಾಗದಿಂದ ಲೆಕ್ಕಿ ತಪ್ಪಲು ಬಿದ್ದರೆ ಮನಸಿನಲ್ಲಿ ಅಂದುಕೊಂಡ ಕೆಲಸ ಆಗುತ್ತದೆ ಎಂದರ್ಥ. ಎಡಭಾಗದಿಂದ ಕೊಟ್ಟರೆ ಕೆಲಸ ಆಗುವುದಿಲ್ಲವೆಂದರ್ಥ. ಶ್ರಾವಣ ಮಾಸದಲ್ಲಿ ಅಪಾರ ಭಕ್ತ ಸಮೂಹದ ಮಧ್ಯೆ ವಿಜೃಂಭಣೆಯ ಜಾತ್ರೆ ಇಲ್ಲಿ ನಡೆಯುತ್ತದೆ. ಜಾತ್ರೆಯ ಅಂಗವಾಗಿ ನಡೆಯುವ ಮುಂಗೈ ಆಟ ಇಲ್ಲಿನ ವಿಶೇಷ. ಬೇರೆ ಬೇರೆ ಹಳ್ಳಿಗಳಿಂದ ಬಂದ ಜನರು ಮುಂಗೈ ಆಟದಲ್ಲಿ ಸ್ಪರ್ಧಿಸುತ್ತಾರೆ. ಗೆದ್ದವರಿಗೆ ಬೆಳ್ಳಿ ಕಡಗ ಬಹುಮಾನವಾಗಿ ಕೊಡಲಾಗುತ್ತದೆ. ಹಲಗೆ ವಾದ್ಯದೊಂದಿಗೆ ಅಂದು ಸಂಜೆ ಗೆದ್ದವರನ್ನು ಬೆಳ್ಳಿ ಕಡಗದೊಂದಿಗೆ ಮೆರೆಸಲಾಗುತ್ತದೆ. ಇನ್ನೂ ಒಂದು ವಿಶೇಷವೆಂದರೆ, ಜಾತ್ರೆಗೆ ಬಂದ ಭಕ್ತರು ತಮ್ಮ ಬೇಡಿಕೆಗೆ ಅನುಗುಣವಾಗಿ ಕಟ್ಟಿಗೆ ತುಂಡುಗಳಿಂದ ಅಲ್ಲಿಯ ಬಯಲಿನಲ್ಲಿ ಪುಟ್ಟ ಮನೆಗಳನ್ನು ನಿರ್ಮಿಸುತ್ತಾರೆ. ಗಿಡಗಂಟೆಗಳಿಗೆ ಬಟ್ಟೆಯ ತುಂಡಿನಿಂದ ತೊಟ್ಟಿಲು ಕಟ್ಟುತ್ತಾರೆ. ಮಣ್ಣಿನ ರಾಶಿ ಮಾಡುತ್ತಾರೆ. ಇದು ಧಾನ್ಯದ ರಾಶಿಯ ಸಂಕೇತ. ತಮ್ಮ ಬೇಡಿಕೆ ಈಡೇರಿದ ಮೇಲೆ ಇಲ್ಲಿಗೆ ಬಂದು ವೀಳ್ಯದೆಲೆ ಅಥವಾ ಕುಂಕುಮ ಪೂಜೆ, ಅಭಿಷೇಕ, ಕಾಯಿ ಕರ್ಪೂರ ಮುಂತಾದ ಸೇವೆಗಳನ್ನು ಮಾಡಿಸಿಕೊಂಡು ಹೋಗುತ್ತಾರೆ.

ನೀಲಕಂಠೇಶ್ವರ ದೇವಸ್ಥಾನ

ರಾಜಬೀದಿಯ ಬಲಭಾಗಕ್ಕೆ ದಕ್ಷಿಣಾಭಿಮುಖವಾಗಿರುವ ಈ ದೇವಾಲಯವನ್ನು ಕ್ರಿ.ಶ. ೧೫೧೦-೧೫೩೩ರ ಸಮಯದಲ್ಲಿ ನವಾಬ ಉಡಿಚನಾಯಕ ಕಟ್ಟಿಸಿರಬಹುದು ಎಂದು ಹೇಳಲಾಗುತ್ತದೆ. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯವು ಗರ್ಭಗೃಹ ಮತ್ತು ಸಭಾಮಂಟಪಗಳಿಂದ ಕೂಡಿದ್ದು, ಕಂಬಗಳ ಆಸರೆಯಿಲ್ಲದೆ ನಿಂತಿದೆ. ಗರ್ಭಗೃಹ ಮಾತ್ರ ಮೂಲ ಸ್ವರೂಪದ್ದು. ಇದರ ಸುತ್ತಲೂ ಗೋಡೆ ಇದೆ. ಮಧ್ಯದಲ್ಲಿ ಶಿವಲಿಂಗ, ಮೇಲ್ಛಾವಣಿ ಸಾದಾ ಕೆತ್ತನೆಯಿಂದ ಕೂಡಿದೆ. ನಿತ್ಯಪೂಜೆ ಪುನಸ್ಕಾರಗಳು ನಡೆಯುತ್ತವೆ. ಸೋಮವಾರ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಶಿವರಾತ್ರಿಯಂದು ಅಭಿಷೇಕ, ವಿಶೇಷ ಅಲಂಕಾರ, ಪೂಜೆ ಇರುತ್ತದೆ. ರಾತ್ರಿಯಿಡೀ ಭಜನೆಯೊಂದಿಗೆ ಜಾಗರಣೆಯಾಗುತ್ತದೆ. ಕಾರ್ತೀಕ ಮಾಸದಲ್ಲಿ ಮರಿ ಕಾರ್ತೀಕ, ಹಿರಿಕಾರ್ತೀಕಗಳ ಆಚರಣೆ ನಡೆಯುತ್ತದೆ. ಸಮಗಂಡಿ ಮನೆತನದವರು ಈ ದೇವಸ್ಥಾನದ ಉಸ್ತುವಾರಿ ವಹಿಸಿಕೊಂಡಿದ್ದಾರೆ.

ಪೇಟೆ ಬಸವೇಶ್ವರ ದೇವಸ್ಥಾನ

ರಾಜ ಬೀದಿಯ ಬಲಭಾಗದಲ್ಲಿರುವ ಈ ದೇವಾಲಯವನ್ನು ಕ್ರಿ.ಶ. ೧೬೧೮-೧೭೦೮ರ ಅವಧಿಯಲ್ಲಿ ಇಮ್ಮಡಿ ಉಡಿಚನಾಯಕನ ಆಳ್ವಿಕೆಯಲ್ಲಿ ರಾಣಿ ಚಿನ್ನಮ್ಮ ಅವರು ಕಟ್ಟಿಸಿದರು. ಗರ್ಭಗೃಹ ಸಭಾ ಮಂಟಪ, ಲಲಾಟಬಿಂಬದ ಪುಷ್ಪಾಕೃತಿ, ನಾಲ್ಕು ಕಂಬಗಳು ಇವು ದೇವಾಲಯದ ರಚನಾ ವಿನ್ಯಾಸಗಳು. ಮಧ್ಯದಲ್ಲಿ ಪೀಠದ ಮೇಲೆ ಸುಮಾರು ೩ ಅಡಿ ಎತ್ತರದ ನಂದಿಯ ವಿಗ್ರಹವಿದೆ. ಇದರ ಭುವನೇಶ್ವರಿಯಲ್ಲಿ ಪದ್ಮವಿದೆ. ಸಭಾಮಂಟಪು ಮೂರು ಅಂಕಣವನ್ನು ಹೊಂದಿದೆ. ಶಿಖರವಿಲ್ಲದ ಈ ದೇವಾಲಯವು ಕಣಶಿಲೆಯಿಂದ ನಿರ್ಮಿಸಲಾಗಿದೆ. ಗರ್ಭಗೃಹ ಎಡ ಪಟ್ಟಿಕೆಯ ಮೇಲಿರುವ ಶಾಸನದಲ್ಲಿ ಕನಕಗಿರಿ ಉಡಿಚನಾಯಕನ ರಾಣಿ ಚಿನ್ನಮ್ಮ (ಕ.ವಿ.ಶಾ.ಸಂ.೩ರಲ್ಲಿ, ಕೊಪ್ಪಳ ಜಿಲ್ಲೆ) ಬಸವಣ್ಣ ದೇವರ ಗುಡಿಯನ್ನು ಕಟ್ಟಿಸಿದ ಉಲ್ಲೇಖವಿದೆ. ಈ ದೇವಾಲಯದ ಎಡಕ್ಕೆ ಬಿದ್ದಿರುವ ಕ್ರಿ.ಶ. ೧೫೫೧ರ ಶಾಸನದಲ್ಲಿ ಸದಾಶಿವರಾಯನು ಆಳುತ್ತಿದ್ದಾಗ ಮಹಾಮಂಡಳೇಶ್ವರ ಅಳಿಯ ತಿರುಮಲರಾಜನು ಗೋವಿಂದರಾಜ, ತಿಮ್ಮೋಜ, ಕೊಂಡೋಜರಿಗೆ ಕನಕಗಿರಿಯಲ್ಲಿ ಬಿಟ್ಟಿ ಬಿರಾಡ, ಅನ್ನು-ಪನ್ನು ಮುಂತಾದ ತೆರಿಗೆಗಳ ವಿವರವಿದೆ.

ಯಲ್ಲಮ್ಮದೇವಿ ದೇವಸ್ಥಾನ

ನವಾಬ ಉಡಿಚ ನಾಯಕನು ಕ್ರಿ.ಶ. ೧೫೧೦-೧೫೩೩ರಲ್ಲಿ ರಾಜಬೀದಿಯ ಬಲಭಾಗದಲ್ಲಿ ಈ ದೇವಸ್ಥಾನವನ್ನು ಕಟ್ಟಿಸಿದನು. ದೇವಾಲಯದಲ್ಲಿ ಗರ್ಭಗೃಹ ಸಭಾ ಮಂಟಪಗಳಿವೆ. ಮಧ್ಯದ ಪೀಠದಲ್ಲಿ ದೇವಿಯ ರುಂಡ ಭಾಗ ಹಾಗೂ ಪ್ರವೇಶ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಒಂಬತ್ತು ಅಂಕಣಗಳಿಂದ ಕೂಡಿದೆ. ಸಭಾಮಂಟಪದ ಮಾಡಿನ ಅಂಚಿನಲ್ಲಿ ದೇವಕೋಷ್ಠಗಳಿವೆ. ಇವುಗಳಲ್ಲಿ ಗಾರೆ ಶಿಲ್ಪದ ಗುರುತುಗಳಿದ್ದು, ಮೇಲೆ ಶಾಲಾ-ಕೂಟಗಳಿವೆ. ಈ ದೇವಸ್ಥಾನದ ಪಕ್ಕದಲ್ಲಿರುವ

ಮಹಾಬಳೇಶ್ವರ ಸ್ವಾಮಿಯವರು ದೇವಸ್ಥಾನ ಪೂಜೆ, ದೀಪ ಬೆಳಗಿಸುವ ಕೆಲಸ ವಹಿಸಿಕೊಂಡಿದ್ದಾರೆ. ಮುಚ್ಚಿಗೇರ ಸಮುದಾಯವು ಈ ದೇವಿಗೆ ಹೆಚ್ಚಾಗಿ ನಡೆದುಕೊಳ್ಳುತ್ತಾರೆ. ಮಂಗಳವಾರ, ಶುಕ್ರವಾರ ವಿಶೇಷ ಪೂಜೆ, ಪುನಸ್ಕಾರ ನಡೆಯುತ್ತವೆ. ಕಾರ್ತೀಕ ಮಾಸದಲ್ಲಿ ಕಾರ್ತೀಕ ಮುಡಿಸುವುದು ಶ್ರಾವಣ ಮಾಸ, ಮುಂತಾದ ದಿನಗಳಲ್ಲಿ ವಿಶೇಷ ಪೂಜಾವಿಧಿಗಳನ್ನು ನಡೆಸುತ್ತಾರೆ.

ಹಿರೇಹಳ್ಳದ ಬಸವೇಶ್ವರ ದೇವಾಲಯ

ಕನಕಗಿರಿಯಿಂದ ಪಶ್ಚಿಮ ದಿಕ್ಕಿನ ೨. ಕಿ.ಮೀ. ದೂರದಲ್ಲಿ ಲಕ್ಷ್ಮೀದೇವಿ ಕೆರೆ ಅಂಗಳದಲ್ಲಿ ಈ ದೇವಾಲಯವಿದೆ. ಸಭಾಮಂಟಪ, ಮುಖಮಂಟಪದ ಭಾಗಗಳಿವೆ. ಗರ್ಭಗೃಹದಲ್ಲಿ ಬೃಹತ್ ಗಾತ್ರದ ಬಂಡೆ ಇದೆ. ಇದನ್ನೆ ಬಸವಣ್ಣ ಎಂದು ಕರೆಯುತ್ತಾರೆ. ಪ್ರವೇಶ ದ್ವಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇಕ್ಕೆಲಗಳಲ್ಲಿ ತ್ರಿಶೂಲ, ಡಮರು, ಗದಾಧಾರಿಗಳಾದ ದ್ವಾರಪಾಲಕರ ಶಿಲ್ಪಗಳಿವೆ. ಮೂರು ಅಂಕಣಗಳಿಂದ ಕೂಡಿದ ಮುಖಮಂಟಪವಿದೆ. ಎದುರಿಗೆ ಭಗ್ನವಾದ ದೀಪಸ್ತಂಭವಿದೆ. ಶ್ರಾವಣ ಕೊನೆ ಸೋಮವಾರ ವಿಜೃಂಭಣೆಯ ಜಾತ್ರೆ ನಡೆಯುತ್ತದೆ. ಸುತ್ತಲಿನ ಹಳ್ಳಿಯ ಭಕ್ತಾದಿಗಳು ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇಲ್ಲಿನ ನಂದಿಕೋಲು ಕುಣಿತ, ರಾತ್ರಿ ೧೧ರವರೆಗಿನ ವಚನ ವಿಶೇಷ ಗಮನ ಸೆಳೆಯುತ್ತದೆ. ಮದುವೆ, ಮುಂಜಿವಿ, ಜವುಳದಂತಹ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿರುತ್ತವೆ. ಲಿಂಗಾಯತ ಸಮಾಜವು ಈ ದೇವಸ್ಥಾನದ ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತದೆ.

ಗೋರಾಳ ಕೇರಿ ದುರ್ಗಮ್ಮ ದೇವಿ

ನವಾಬ ಉಡಿಚನಾಯಕನ ಆಳ್ವಿಕೆಯಲ್ಲಿ ಕ್ರಿ.ಶ. ೧೫೧೦-೧೫೩೩ರ ಅವಧಿಯಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಗೋರಳಕೇರಿಯಲ್ಲಿ ಇರುವುದರಿಂದ ಗೋರಳಕೇರಿ ದುರ್ಗಮ್ಮ ಎಂದು ಹೆಸರು ಬಂದಿದೆ. ಮಂಗಳವಾರ, ಶುಕ್ರವಾರ ಭಕ್ತರು ಇಲ್ಲಿಗೆ ಹೆಚ್ಚಾಗಿ ಬರುತ್ತಾರೆ. ಕೇರಿಯ ಜನರು ದೇವಿಗೆ ನಿತ್ಯಪೂಜೆ ಮಾಡುತ್ತಾರೆ. ಪ್ರತಿ ೩ ವರ್ಷಕ್ಕೊಮ್ಮೆ ವೈಶಾಖ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ರುದ್ರಾಭಿಷೇಕ, ಪುಷ್ಪಾರ್ಚನೆ, ಕುಂಕುಮಾರ್ಚನೆ, ದೇವರಿಗೆ ಉಡಿ ತುಂಬುವುದು ಹೋಮ-ಹವನ-ಹೀಗೆ ಅನೇಕ ವಿಧದಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಜಾತ್ರೆಯ ೫ ದಿನ ಗ್ರಾಮಸ್ಥರು ಕೃಷಿ ಚಟುವಟಿಕೆಯಲ್ಲಿ ತೊಡಗಬಾರದೆಂಬ ನಿಷೇಧವನ್ನು ಇಲ್ಲಿನ ಜನ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಎಲ್ಲ ವರ್ಗದ ಭಕ್ತಾದಿಗಳು ಇಲ್ಲಿ ಆಗಮಿಸುತ್ತಾರೆ. ಮಹಿಳೆಯರೇ ಇಲ್ಲಿ ಉತ್ಸವವನ್ನು ಎಳೆಯುತ್ತಾರೆ. ಬರಿಗೈಯಿಂದ ಪಾಯಸವನ್ನು ತಿರುಗಿಸಿ ಭಕ್ತರಿಗೆ ತೋರಿಸುವುದು ವಿಶಿಷ್ಟ ಧಾರ್ಮಿಕಾಚರಣೆಯಾಗಿ ಜನರ ಗಮನ ಸೆಳೆಯುತ್ತದೆ. ಪ್ರತಿನಿತ್ಯ ಹರಿಜನರು ಈ ದೇವಿಯನ್ನು ಪೂಜಿಸಿದರೆ ವಿಶೇಷ ದಿನಗಳಲ್ಲಿ ಗೊಲ್ಲರು ಪೂಜಿಸುತ್ತಾರೆ. ಜಾತ್ರೆಯಂದು ಹಿಂದೂ-ಮುಸ್ಲಿಂರು ದೇವಿಗೆ ಹೋಳಿಗೆ ಎಡಿ ಕೊಡುತ್ತಾರೆ. ಇತಿಹಾಸ ಕಾಲದಿಂದಲೂ ಇಲ್ಲಿ ಜಾತ್ರೆ ನಡೆಯುತ್ತಿತ್ತೆಂದು ಇಲ್ಲಿನ ಹಿರಿಯರು ಹೇಳುತ್ತಾರೆ.

ಎದುರು ಹನಮಪ್ಪ ದೇವಸ್ಥಾನ

ರಾಜ ಬೀದಿಯ ಮುಕ್ತಾಯಕ್ಕೆ (ಪಶ್ಚಿಮ ದಿಕ್ಕು) ಎದುರು ಹನುಮಪ್ಪ ದೇವಾಲಯವಿದ್ದು ಇದನ್ನು ಕ್ರಿ.ಶ. ೧೫೭೮-೧೬೧೮ರ ಅವಧಿಯಲ್ಲಿ ಒಂದನೇ ಕನಕಪ್ಪ ಉಡಿಚನಾಯಕ ಕಟ್ಟಿಸಿದ್ದಾನೆ. ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪ ಭಾಗಗಳಿಂದ ಕೂಡಿದ ಈ ದೇವಾಲಯ ಸಾದಾ ಕೆತ್ತನೆಯಿಂದ ಕೂಡಿದೆ. ೯ ಅಂಕಣದ ಸಭಾಮಂಟಪ, ಕಂಬ, ಬೋದುಗೆ, ದೇವಕೋಷ್ಟಕ, ನಾಲ್ಕು ಮೂಲೆಗಳಲ್ಲಿ ಸಿಂಹದ ಕೆತ್ತನೆ, ಏಕತಲ ವಿಮಾನ ಮಾದರಿಯ ಶಿಖರವು ಗರ್ಭಗೃಹದ ಉದ್ದಗಲಕ್ಕೂ ವ್ಯಾಪಿಸಿದ ರೀತಿ - ಇವು ಈ ದೇವಸ್ಥಾನ ರಚನಾ ವೈಶಿಷ್ಟ್ಯಗಳಾಗಿವೆ.

ದೇಗುಲದ ಮುಂಭಾಗದಲ್ಲಿ ಚಿಕ್ಕ ಕಟ್ಟೆಯ ಮೇಲೆ ಚಚೌಕ ಭಾಗಗಳಿಂದ ಕೂಡಿದ ಮೇಲೆ ಚೌಕಾಕಾರದ ಫಲಕ ಇರುವ ಏಕಶಿಲೆಯ ಸ್ತಂಭ ಇದೆ. ಇದರ ಕೆಳಗಿರುವ ಗೂಡಿನಲ್ಲಿ ನಾಯಕ ಮತ್ತು ಆತನ ಹೆಂಡತಿಯ ವಿಗ್ರಹಗಳಿವೆ. ನಿತ್ಯಪೂಜೆ ನಡೆಯುವ ಈ ದೇವಾಲಯಕ್ಕೆ ಶನಿವಾರ ಭಕ್ತಾದಿಗಳು ಹೆಚ್ಚು. ಹನುಮ ಜಯಂತಿಯಂದು ವಿಶೇಷ ಪೂಜೆ-ಪುನಸ್ಕಾರಗಳು ನಡೆಯುವವು. ಕನಕಾಚಲ ಜಾತ್ರೆ, ಉತ್ಸವಗಳು ಇಲ್ಲಿಯವರೆಗೆ ಬಂದು ವಾಪಸ್ಸು ಹೋಗುತ್ತವೆ. ಕಲ್ಯಾಣೋತ್ಸವ (ಗರುಡೋತ್ಸವ)ದ ದಿನದಿಂದ ಶ್ರೀದೇವಿ ಭೂದೇವಿಯರಿಗೆ ಈ ದೇವಸ್ಥಾನವೇ ತವರು ಮನೆಯಾಗಿರುತ್ತದೆ. ದಸರಾ ಹಬ್ಬದಲ್ಲಿ ಬನ್ನಿ ಮುಡಿದ ಕನಕರಾಯನು ಪಲ್ಲಕ್ಕಿಯಲ್ಲಿ ಬಂದು ಎದುರು ಹನುಮಪ್ಪನಿಗೆ ದರ್ಶನ ಕೊಟ್ಟು ಹೋಗುತ್ತಾನೆ. ಈ ಎಲ್ಲ ಕಾರಣಗಳಿಂದ ಎದುರು ಹನುಮಪ್ಪ ದೇವಸ್ಥಾನಕ್ಕೆ ವಿಶೇಷ ಮಹತ್ವ ಬಂದಿದೆ.

ವೀರಭದ್ರೇಶ್ವರ ಗುಡಿ

ಗ್ರಾಮ ಪಂಚಾಯತಿಯ ಪಕ್ಕದಲ್ಲಿ, ರಾಜಬೀದಿಯ ಎಡ ಭಾಗದಲ್ಲಿ ಇರುವ ಈ ಗುಡಿಯು ಕ್ರಿ.ಶ. ೧೫೧೦-೧೫೩೩ರ ಅವಧಿಯಲ್ಲಿ ನವಾಬ ಉಡಿಚನಾಯಕನಿಂದ ನಿರ್ಮಾಣಗೊಂಡಿದೆ. ವಿಜಯನಗರ ಶೈಲಿಯ ಈ ಗುಡಿಯು ಸಭಾಮಂಟಪ, ಗರ್ಭಗೃಹಗಳಿಂದ ಕೂಡಿದೆ. ಸಾದಾ ಕೆತ್ತನೆ ಇರುವ ಈ ಗುಡಿಯ ಗರ್ಭಗೃಹದಲ್ಲಿ ಐದು ಅಡಿ ಎತ್ತರದ ವೀರಭದ್ರನ ಉಬ್ಬು ಶಿಲ್ಪವಿದೆ. ಇದು ತ್ರಿಭಂಗದಲ್ಲಿದ್ದು ನಾಲ್ಕು ಕೈಗಳಿದ್ದು ಕೈಗಳಲ್ಲಿ ಬಾಣ, ಬಿಲ್ಲು, ಖಡ್ಗ ಮತ್ತು ಬೇಟಕಗಳಿವೆ. ಕಿರೀಟ ಮುಕುಟ, ಪುಷ್ಪಕುಂಡಲಗಳು, ಯಜ್ಞೋಪವೀತ, ಭುಜಹಾರ, ಉದರಬಂಧ, ತೋಳ್ಬಂದಿ, ಕೈ ಮತ್ತು ಕಾಲ್ಗಡಗಳು ಇಳಿಬಿದ್ದ ಕುಂಡಲ ಮಾಲೆ ಧರಿಸಲಾಗಿದೆ. ಪಕ್ಕದಲ್ಲಿ ದಕ್ಷನ ಶಿಲ್ಪವಿದೆ. ಸಭಾಮಂಟಪಕ್ಕೆ ಎದುರಾಗಿ ನಂದಿ ಶಿಲ್ಪವಿದೆ. ದ್ರಾವಿಡ ಮಾದರಿಯ ಶಿಖರವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಿದೆ. ಆರು ಅಂಕಣಗಳಿಂದ ರಚಿಸಲ್ಪಟ್ಟಿದೆ. ಈ ದೇವಸ್ಥಾನವು ನಿತ್ಯ ಪೂಜಿಸಲ್ಪಡುತ್ತದೆ. ಲಿಂಗಾಯತ ಸಮಾಜದವರು ಇಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾರೆ. ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವೀರಭದ್ರೇಶ್ವರ ಗುಗ್ಗುಳ ಮುಂತಾದ ಸಂದರ್ಭಗಳಲ್ಲಿ ವಿಜೃಂಭಣೆಯ ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಮಹಿಷಾಸುರ ಮರ್ದಿನಿ ದೇವಾಲಯ

ನವಾಬ ಉಡಿಚನಾಯಕನು ೧೫೧೦-೧೫೩೩ರ ಅವಧಿಯಲ್ಲಿ ನಿರ್ಮಾಣ ಮಾಡಿರುವ ಈ ದೇವಾಲಯ ರಥ ಬೀದಿಯ (ರಾಜ ಬೀದಿ) ಎಡಭಾಗದಲ್ಲಿದೆ. ವಿಜಯನಗರ ಶೈಲಿಯ ಈ ದೇವಾಲಯ ಉತ್ತರಾಭಿಮುಖವಾಗಿದೆ. ಗರ್ಭಗೃಹ, ಸಭಾಮಂಟಪ, ಕಂಬಗಳು, ಕಣಶಿಲೆಯ ಗೋಡೆ ಇಟ್ಟಿಗೆ ಗಾರೆಗಳಿಂದ ನಿರ್ಮಿಸಿದ ದೇವಕೋಷ್ಟಕಗಳು (ಶಿಲ್ಪಗಳಿಲ್ಲ) ರಚನಾ ಕ್ರಮವಾಗಿವೆ. ಎಲ್ಲ ವರ್ಗದ ಜನ ಇಲ್ಲಿ ಪೂಜಿಸಲು ಬರುತ್ತಾರೆ. ಯಾವುದೇ ಸಮುದಾಯದ ಉಸ್ತುವಾರಿ ಈ ದೇವಾಲಯಕ್ಕಿಲ್ಲ. ನಿತ್ಯ ಅಭಿಷೇಕ, ಪೂಜೆ ಪುನಸ್ಕಾರಗಳು ನಡೆಯುತ್ತವೆ. ಮಂಗಳವಾರ ಶುಕ್ರವಾರ ಈ ದೇವಿಗೆ ನಡೆದುಕೊಳ್ಳುವ ಭಕ್ತಾದಿಗಳು ಹೆಚ್ಚು. ಸಾವಜಿ, ಮರಾಠಿ, ಭಾವಸಾರ ಕ್ಷತ್ರಿಯರು ಈ ದೇವಿಯ ವಿಶೇಷ ಭಕ್ತರು.

ಅಷ್ಟಮಹಿಷಿ ಕೃಷ್ಣದೇವಾಲಯ

ಗ್ರಾಮ ಮಧ್ಯದಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ಸಭಾಮಂಟಪದ ಭಾಗಗಳಿವೆ. ಗರ್ಭಗೃಹದ ದ್ವಾರಬಂಧದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಗೆತ್ತನೆ ಇದೆ. ಹಿಂದಿನ ಗೋಡೆಯಲ್ಲಿ ಎರಡು ಮೂಲೆ ಕಂಬಗಳಿವೆ. ಮೇಲ್ಛಾವಣಿಯು ಅರಳಿದ ಕಮಲಾಕೃತಿಯಿಂದ ಕೂಡಿದೆ. ಮಧ್ಯದಲ್ಲಿ ಅಷ್ಟಮಹಿಷಿಯರೊಡನೆ ನಿಂತ ಕೃಷ್ಣ, ಪಕ್ಕದಲ್ಲಿ ರುಕ್ಮಿಣಿ, ಸತ್ಯಭಾಮಾ, ನೀಲೆ, ಭದ್ರೆ, ವಿತ್ತವಿಂದೆ, ಕಾಳಿಂದಿ, ಲಕ್ಷ್ಮಣೆ ಮತ್ತು ಜಾಂಬವತಿ ಶಿಲ್ಪಗಳಿವೆ. ಇದರ ಹಿಂದೆ ಗೋವು ಇದೆ. ಚತುರ್ಭುಜಧಾರಿಯಾದ ಕೃಷ್ಣನ ಹಿಂದಿನ ಕೈಗಳಲ್ಲಿ ಚಕ್ರ, ಶಂಖ, ಮುಂದಿನ ಕೈಗಳಲ್ಲಿ ಕೊಳಲು ಇದ್ದು, ಪಾದಸರ, ದೋತಿ, ವೈಜಯಂತೀ ಹಾರ, ಕೈಕಡಗ ಸೊಂಟ ಪಟ್ಟಿ, ಭುಜಹಾರ, ಭುಜಕೀರ್ತಿ, ಕಿರೀಟ ಮುಕುಟ ಧರಿಸಿದ್ದಾನೆ. ಆರು ಅಂಕಣಗಳಿಂದ ಕೂಡಿದೆ. ಕಾಂಡ ಭಾಗದ ಕೆಳಗೆ ಸಿಂಹ, ಬಾಲಕೃಷ್ಣ, ರಾಮ ಮುಂತಾದ ಉಬ್ಬುಶಿಲ್ಪಗಳಿವೆ. ಇವುಗಳಿಗೆ ಸಾದಾ ಕೆತ್ತನೆಯ ಬೋದಿಗೆಗಳನ್ನು ಹೊಂದಿಸಲಾಗಿದೆ. ಏಕತಲ ವಿಮಾನ ಮಾದರಿಯ ಶಿಖರವು ಗರ್ಭಗೃಹದ ಮೇಲಿದೆ. ವೈಷ್ಣವ ಮತದ ಭಕ್ತರು ಈ ದೇವಸ್ಥಾನಕ್ಕೆ ಬರುವುದು ವಿಶೇಷ. ಗೋಕುಲ ಅಷ್ಟಮಿ ಎಂದು ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಲಕ್ಷ್ಮೀ ದೇವಾಲಯ

ಕನಕಗಿರಿಯಿಂದ ವಾಯುವ್ಯಕ್ಕೆ ೫. ಕಿ.ಮೀ. ಹಾಗೂ ಬಸ್ತಿಹಾಳ್ ಗ್ರಾಮದಿಂದ ದಕ್ಷಿಣಕ್ಕೆ ೧ ಕಿ.ಮೀ. ದೂರದಲ್ಲಿ ಇರುವ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಅಧಿಷ್ಠಾನ, ಕಂಬಗಳು, ಛತ್ತು, ಬಾಗಿಲು, ಗ್ರಾನೈಟ್ ಶಿಲೆ, ಗೋಡೆ, ದೇವಕೋಷ್ಠಗಳು, ಇಟ್ಟಿಗೆ, ಗಾರೆ - ಇವು ನಿರ್ಮಿತಿಯಲ್ಲಿ ಉಪಯೋಗಿಸಿದ ವಸ್ತುಗಳು. ಗರ್ಭಗೃಹ ಹಾಗೂ ಮುಖಮಂಟಪ ಇದೆ. ಗರ್ಭಗೃಹದಲ್ಲಿ ಲಕ್ಷ್ಮೀದೇವಿಯ ಭಗ್ನ ಶಿಲ್ಪವಿದೆ. ಗರ್ಭಗೃಹದ ಮೇಲೆ ಶಿಖರವಿಲ್ಲ.

ಉಡಚಲಮ್ಮ ದೇವಸ್ಥಾನ

ಗ್ರಾಮದ ಪಶ್ಚಿಮದಲ್ಲಿರುವ ಹನುಮನಾಳದ ಹತ್ತಿರ ಈ ದೇವಸ್ಥಾನ ಇದೆ. ಇದರಲ್ಲಿ ಎರಡು ಗರ್ಭಗೃಹಗಳು ತೆರೆದ ಸಭಾ ಮಂಟಪಗಳಿವೆ. ಗರ್ಭಗೃಹದಲ್ಲಿ ಉಡಸ (ಕಲ್ಲುಗುಂಡು)ಲಮ್ಮ ದೇವಿಯಿದ್ದು ಇದರ ಎಡಭಾಗದ ಗರ್ಭಗೃಹ ಖಾಲಿ ಇದೆ. ಪಾಳೇಗಾರರ ಕಾಲದ ನಿರ್ಮಿತಿ ಇದಾಗಿದೆ. ಲಕ್ಷ್ಮೀದೇವಿಯ ಉಡಿಯಲ್ಲಿ ಬೆಳೆದಕಾರಣಕ್ಕೆ ಪರಸಪ್ಪ ಉಡಿಚನಾಯಕನ ಮಗನಿಗೆ ಉಡಿಚನಾಯಕ ಎಂದು ಹೆಸರು ಬಂದಿತೆಂದು ಅಂದಿನಿಂದ ಲಕ್ಷ್ಮಿದೇವಿಯನ್ನು ಉಡಿಚಲುವಮ್ಮ ಎಂದು ಕರೆಯಲಾಯಿತು. ಕ್ರಮೇಣವಾಗಿ ಉಡಚಮ್ಮ ಆಗಿದೆ. ಬೇಡರ ಸಮುದಾಯವು ಈಗಲೂ ತಮ್ಮ ಮಕ್ಕಳಿಗೆ ಉಡುಚಮ್ಮ, ಉಡುಚಪ್ಪ ಎಂಬ ಹೆಸರುಗಳನ್ನು ಹೆಚ್ಚಾಗಿ ಇಡುತ್ತಾರೆ. ಈಗಲೂ ಬೇಡರಲ್ಲಿ ಉಡಚಲಮ್ಮದೇವಿಯ ಆರಾಧನೆ ಕಂಡುಬರುತ್ತದೆ.

ಗೊಲ್ಲಗೇರಿ ಆಂಜನೇಯ ದೇವಾಲಯ

ಗೊಲ್ಲರ ಕೇರಿಯಲ್ಲಿ ದೇವಾಲಯ ಇರುವುದರಿಂದ ಇದನ್ನು ಗೊಲ್ಲಗೇರಿ ಆಂಜನೇಯ ಎಂದು ಕರೆಯಲಾಯಿತು. ಪಾಳೇಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯ ಇದಾಗಿದೆ. ಈಗ ಗೊಲ್ಲಗೇರಿ ಜನಾಂಗದವರು ಈ ದೇವರಿಗೆ ನಿತ್ಯ ಪೂಜೆ ಮಾಡುತ್ತಾರೆ. ಪ್ರತಿ ಶನಿವಾರ ಇಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಪ್ರತಿ ಶನಿವಾರ ಗೊಲ್ಲಗೇರಿ ಸಮುದಾಯದಿಂದ ಭಜನೆ ನೆಡೆಯುತ್ತದೆ. ಕಾರ್ತೀಕ ಮಾಸದಲ್ಲೂ ಸಹ ವಿಶೇಷ ಪೂಜೆ, ಅಲಂಕಾರ, ಭಜನೆ ಸಡಗರ ಸಂಭ್ರಮದಿಂದ ನಡೆಯುತ್ತದೆ. ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳುತ್ತಾರೆ. ಕಡೇ ಸೋಮವಾರದಂದು, ಕಾರ್ತೀಕ ಮಾಸದಲ್ಲಿ ಅನ್ನಸಂತರ್ಪಣೆ ನಡೆಯುತ್ತದೆ.

ಶಂಕರಲಿಂಗ ದೇವಾಲಯ

ಕನಕಾಚಲಪತಿ ದೇವಾಲಯದ ಹಿಂಭಾಗದಲ್ಲಿ ಪೂರ್ವಾಭಿಮುಖವಾಗಿರುವ ಈ ಜೋಡಿ ದೇವಾಲಯಗಳನ್ನು ನವಾಬ ಉಡಿಚನಾಯಕ ನಿರ್ಮಿಸಿದನು. ಸು. ೧೬ನೇ ಶತಮಾನದಲ್ಲಿ ನಿರ್ಮಾಣಗೊಂಡ ಈ ದೇವಾಲಯವು ವಿಜಯನಗರ ಶೈಲಿಯಲ್ಲಿದೆ. ಗರ್ಭಗೃಹದಲ್ಲಿ ಬ್ರಹ್ಮಸೂತ್ರವುಳ್ಳ ಶಿವಲಿಂಗವಿದೆ. ಗರ್ಭಗೃಹದ ಪ್ರವೇಶದ್ವಾರವು ರತ್ನ, ಲತಾ ಮತ್ತು ಸ್ತಂಭಶಾಖೆಗಳನ್ನು ಒಳಗೊಂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ.

ಆಂಜನೇಯ ದೇವಾಲಯ, ಕರಡಿಗುಡ್ಡ

ಕನಕಗಿರಿಯಿಂದ ನೈರುತ್ಯಕ್ಕೆ ೪-೫ ಕಿ.ಮೀ. ಅಂತರದಲ್ಲಿರುವ ಈ ದೇವಾಲಯ ಕ್ರಿ.ಶ. ಸುಮಾರು ೧೭ನೇ ಶತಮಾನದ್ದೆಂದು ಹೇಳಲಾಗುತ್ತದೆ. ನಿರ್ಜನ ಪ್ರದೇಶದ ಸುಂದರ ಪ್ರಕೃತಿಯ ವಾತಾವರಣದಲ್ಲಿ ಆಂಜನೇಯ ನೆಲೆಗೊಂಡಿದ್ದಾನೆ. ಗೋಪಾಲಸ್ವಾಮಿ ಎಂಬುವವರು ಇತ್ತೀಚೆಗೆ ದೇವಸ್ಥಾನದ ಉಸ್ತುವಾರಿ ತೆಗೆದುಕೊಂಡು ಅಭಿವೃದ್ಧಿ ಮಾಡಲು ಶ್ರಮಿಸುತ್ತಿದ್ದಾರೆ. ಈ ದೇವರಲ್ಲಿ ವಿಶೇಷ ಶಕ್ತಿ ಇದೆ ಎಂದು

ಭಾವಿಸುವ ಭಕ್ತಾದಿಗಳು ಅನೇಕ ರೀತಿಯ ಹರಕೆಗಳನ್ನು ಹೊರುತ್ತಾರೆ. ಪ್ರತಿ ಶನಿವಾರ ಇಲ್ಲಿ ಎಲ್ಲವರ್ಗದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಹೊರರಾಜ್ಯಗಳಿಂದ ಭಕ್ತಾದಿಗಳು ಇಲ್ಲಿ ಆಗಮಿಸುತ್ತಾರೆ. ಗೋಪಾಲ ಸ್ವಾಮಿಯವರು ದಾನಿಗಳ ನೆರವು ಪಡೆದು ಇಲ್ಲಿ ಕಲ್ಯಾಣ ಮಂಟಪ ಕಟ್ಟಿಸಿದ್ದಾರೆ. ಪ್ರತಿ ವರ್ಷ ಲಕ್ಷ ಪುಷ್ಪಾರ್ಚನೆಯನ್ನು ಅತ್ಯಂತ ವೈಭವದಿಂದ ನೆರವೇರಿಸುತ್ತಾರೆ. ಇತ್ತೀಚೆಗೆ ನಡೆದ ಕಲ್ಯಾಣೋತ್ಸವ ತಿರುಪತಿಯನ್ನು ನೆನಪಿಸುವಂತಿತ್ತು ಎಂದು ನೋಡಿದ ಭಕ್ತಾದಿಗಳು ಹೇಳುತ್ತಾರೆ. ಇದಲ್ಲದೆ ಕಾರ್ತಿಕ, ಶ್ರಾವಣದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಮದುವೆ, ಮುಂಜಿವಿ, ಜವುಳ ಮುಂತಾದ ಆಚರಣೆಗಳು ಇಲ್ಲಿ ನಡೆಯುತ್ತಿರುತ್ತವೆ.

ನವಲಿ ಭೋಗಾಪುರೇಶ ದೇವಸ್ಥಾನ

ಕನಕಗಿರಿಯಿಂದ ಉತ್ತರಕ್ಕೆ ಸುಮಾರು ೩೦ ಕಿ.ಮೀ. ಅಂತರದಲ್ಲಿರುವ ನವಲಿ ಎಂಬ ಗ್ರಾಮದಲ್ಲಿ ಪಾಳೆಯಗಾರರು ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಭೋಗಾಪುರೇಶ ದೇವಸ್ಥಾನ ಇಲ್ಲಿ ನೋಡಲಾಗಿದೆ. ಪುರಾಣ ಪ್ರಸಿದ್ಧ ಭೋಗಾಪುರೇಶ(ಆಂಜನೇಯ)ನ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖ ಮಂಟಪ ಹಾಗೂ ದ್ವಾರ ಗೋಪುರವನ್ನು ಹೊಂದಿದೆ. ಗರ್ಭಗೃಹದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಇದರ ಮಧ್ಯದಲ್ಲಿ ಭಿನ್ನವಾದ ಆಂಜನೇಯನ ವಿಗ್ರಹವಿದ್ದು, ಅದು ಇಂದಿಗೂ ಪೂಜಿಸಲ್ಪಡುತ್ತಿರುವುದು ಇಲ್ಲಿಯ ವೈಶಿಷ್ಟ್ಯ. ಇದರ ಐತಿಹ್ಯ ಹೀಗಿದೆ. ಒಮ್ಮೆ ಕಳ್ಳರು ದ್ರವ್ಯದ ಆಸೆಗಾಗಿ ವಿಗ್ರಹವನ್ನು ಕಿತ್ತು, ತುಂಡು ತುಂಡಾಗಿ ಒಡೆದು ಹಾಕಿದರಂತೆ. ಚಿಂತಿತರಾದ ಅರ್ಚಕರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡ ಭೋಗಾಪುರೇಶ ವಿಗ್ರಹದ ತುಂಡುಗಳನ್ನು ಪುನಃ ಜೋಡಿಸಲ್ಪಟ್ಟು ಏಳುದಿನಗಳ ಕಾಲ ಮುಚ್ಚಿ ಹೊರಗೆ ಪೂಜಿಸಲು ಆದೇಶಿಸಿದರಂತೆ ಅದರಂತೆ ಅರ್ಚಕರು ಮಾಡುತ್ತಿರಲು ಕುತೂಹಲ ತಾಳದೆ ಆರನೆ ದಿನವೇ ಬಾಗಿಲು ತೆಗೆದು ನೋಡಲು ವಿಗ್ರಹ ಪೂರ್ಣ ಹೊಂದಿಕೊಳ್ಳದೆ ಹಾಗೇ ಉಳಿಯಿತಂತೆ. ದೇವರ ಆದೇಶದಂತೆ ಭಗ್ನ ಮೂರ್ತಿಯೇ ಇಂದಿಗೂ ಪೂಜೆಗೊಳ್ಳುತ್ತದೆ.

ಅಂತರಾಳ ಪ್ರವೇಶ ದ್ವಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಸಭಾ ಮಂಟಪವು ೯ ಅಂಕಣಗಳಿಂದ ಕೂಡಿದೆ. ಇಲ್ಲಿ ಎಂಟು ಅರ್ಧ ಕಂಬಗಳು, ಎರಡು ಮೂಲೆ ಕಂಬಗಳು ಮತ್ತು ೬ ಕಂಬಗಳಿವೆ. ಮಧ್ಯದ ೪ ಕಂಬಗಳ ಪೀಠ, ಕಾಂಡ, ಕಳಸ, ತಾಡಿ, ಫಲಕ ಭಾಗಗಳನ್ನು ಹೊಂದಿದ್ದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಕಂಬಗಳಲ್ಲಿ ವಿಷ್ಣು, ರಾಮ, ವರಾಹ ರಾವಣ, ಮಜ್ಜಿಗೆ ಕಡೆಯುವ ಸ್ತ್ರೀ, ಗೋಪಾಲಕೃಷ್ಣ, ಬೇಡರ ಕಣ್ಣಪ್ಪ, ಕಾಳಿಂಗಮರ್ದನ, ಕೃಷ್ಣ, ಗಜಾನನ, ಗಂಡಭೇರುಂಡ ಇನ್ನೂ ಮುಂತಾದ ಉಬ್ಬು ಕೆತ್ತನೆಗಳಿವೆ. ದೇವಾಲಯದ ಹಿಂಬದಿ ಮುಂಬದಿಗಳಲ್ಲಿ ಪ್ರಕಾರವಿದೆ. ಪೂರ್ವ ಭಾಗಕ್ಕೆ ಪ್ರವೇಶ ಮಂಟಪವಿದ್ದು ಅದರ ಮೇಲೆ ಗೋಪುರವಿದ್ದು ಐದು ತಲಗಳಿಂದ ಕೂಡಿದೆ. ಈ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಿದ್ದು, ಶಿಖರಕ್ಕೆ ಮಾತ್ರ ಇಟ್ಟಿಗೆ ಗಾರೆ ಬಳಸಲಾಗಿದೆ. ಮುಂಭಾಗದ ಜಗತಿಯ ಮೇಲೆ ದೀಪಸ್ತಂಭವಿದೆ.

ಪ್ರಸಿದ್ಧಿ ಪುಣ್ಯಕ್ಷೇತ್ರ ಎನಿಸಿರುವ ಇಲ್ಲಿ ಚೈತ್ರಮಾಸದಲ್ಲಿ ಜಾತ್ರೆ ನಡೆಯುತ್ತದೆ. ಧ್ವಜಾರೋಹಣದಿಂದ ಕೊಂಡ ಅಥವಾ ಅವಭೃತ ಸ್ನಾನದವರೆಗೆ ಸತತವಾಗಿ ೯ ದಿನಗಳವರೆಗೆ ದಿನಕ್ಕೊಂದು ವಿಶೇಷ ಪೂಜೆ, ಉತ್ಸವಗಳು, ಭಜನೆ ನಡೆಯುತ್ತಿರುತ್ತದೆ. ಈ ದಿನಗಳಲ್ಲಿ ನಿತ್ಯ ಪಂಚಾಮೃತ ಅಭಿಷೇಕ, ಪೂಜೆ, ನೈವೇದ್ಯ, ಭಜನೆ ಮುಂತಾದವುಗಳು ಜರುಗುವವು. ಪ್ರಸಿದ್ಧವಾದ ಈ ಜಾತ್ರೆಗೆ ಸುತ್ತಮುತ್ತಲಿನ ಎಲ್ಲ ವರ್ಗದ ಭಕ್ತಾದಿಗಳು ಆಗಮಿಸುತ್ತಾರೆ. ಅಲ್ಲದೆ ಶ್ರಾವಣ ಮಾಸದಲ್ಲಿ ಅಭಿಷೇಕ, ಸರ್ವಸೇವಾ ಪೂಜೆ, ಕುಂಕುಮಾರ್ಚನೆ, ಅಲಂಕಾರ ವೈಭವದಿಂದ ನೆರವೇರುತ್ತವೆ. ದಸರಾ ಹಬ್ಬದಲ್ಲಿ ೯ ದಿನಗಳವರೆಗೆ ಪೂಜೆ, ದೀಪಾರಾಧನೆ ನಡೆಯುತ್ತದೆ. ಈತನ ಮಹಿಮೆ ಎಲ್ಲೆಡೆ ಹರಡಿದ್ದು ಬೊಂಬಾಯಿ, ಮದ್ರಾಸ್‌ವರೆಗಿನಿಂದ ಭಕ್ತಾದಿಗಳು ಬರುತ್ತಾರೆಂದು ಅಲ್ಲಿನ ಅರ್ಚಕರಾದ ಜಯತೀರ್ಥ ಆಚಾರ್ಯರು ಕ್ಷೇತ್ರ ಕಾರ್ಯಕ್ಕೆ ಹೋದಾಗ ಹೇಳಿದರು. ಮದುವೆ, ಮುಂಜಿವಿ, ಜವುಳ, ಹರಕೆ, ಹೊರುವದು, ಕಷ್ಟ-ಕಾರ್ಪಣ್ಯಗಳನ್ನು ದೇವರಲ್ಲಿ ನಿವೇದಿಸಿಕೊಳ್ಳುವುದು ಇನ್ನು ಮುಂತಾದ ವಿಶಿಷ್ಟ ಆಚರಣೆಗಳು ಇಲ್ಲಿ ನಡೆಯುತ್ತವೆ. ಒಟ್ಟು ನಾಲ್ಕು ಜನ ಪುರೋಹಿತರು ಇಲ್ಲಿದ್ದು ೨ ವರ್ಷಕ್ಕೆ ಒಬ್ಬರಂತೆ ಸರದಿಯ ನಿಯಮದಂತೆ ಪೂಜೆ ಮಾಡುತ್ತಾರೆ. ಭೋಗಪುರೇಶನ ಪಕ್ಕದಲ್ಲಿ ಪಾಂಡುರಂಗ, ರುಕ್ಮಿಣಿ, ವೆಂಕಟರಮಣನ ವಿಗ್ರಹಗಳನ್ನು ಸಹ ಪ್ರತಿಷ್ಠಾಪಿಸಲಾಗಿದೆ. ಈ ದೇವಸ್ಥಾನದ ಉಸ್ತುವಾರಿಯನ್ನು ಗಂಗಾವತಿ ತಾಲ್ಲೂಕು ಆಡಳಿತಾಧಿಕಾರಿಗಳು, ದೇವಸ್ಥಾನ ಕಮಿಟಿ ಸದಸ್ಯರು ಹಾಗೂ ಜಾತ್ರಾ ಉತ್ಸವದ ಸದಸ್ಯರು ವಹಿಸಿಕೊಂಡಿರುತ್ತಾರೆ. ಜಾತ್ರಾ ಉತ್ಸವಗಳ ಅಂಗವಾಗಿ ವ್ಯಾಪಾರ ಮಾಡಲು ಬರುವ ಅಂಗಡಿಯವರಿಗೆ ಸಮಿತಿಯವತಿಯಿಂದ ವಿಧ ವಿಧ ರೀತಿಯಲ್ಲಿ ಶುಲ್ಕ ಪಡೆಯುತ್ತಾರೆ.

ವೆಂಕಟಗಿರಿ ವೆಂಕಟಶ್ವರ ದೇವಾಲಯ

ಕನಕಗಿರಿಯಿಂದ ೧೦-೧೫ ಕಿ.ಮೀ. ದೂರದಲ್ಲಿರುವ ಗಂಗಾವತಿ ಹತ್ತಿರದಲ್ಲಿರುವ ಈ ದೇವಸ್ಥಾನವು ಪಾಳೇಗಾರರ ಕಾಲದ ನಿರ್ಮಾಣವಾಗಿದೆ. ವಿಜಯನಗರ ವಾಸ್ತುಶೈಲಿಯಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಪಾಳೇಗಾರರು ನಿರ್ಮಿಸಿದ ದೇವಾಲಯಗಳಲ್ಲಿ ಇದು ಒಂದು ವಿಶಿಷ್ಟ ದೇವಾಲಯವಾಗಿದೆ. ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ಸಭಾಮಂಟಪದ ಭಾಗಗಳ ಜೊತೆಗೆ ವಿಶಾಲವಾದ ಆವರಣ ಹಾಗೂ ಪ್ರವೇಶ ಗೋಪುರಗಳಿವೆ. ಗರ್ಭಗೃಹದಲ್ಲಿ ಸುಮಾರು ೪ ಅಡಿ ಎತ್ತರದ ವೆಂಕಟೇಶ್ವರ ಶಿಲ್ಪವಿದೆ. ಈತನ ಕೈಗಳಲ್ಲಿ ಶಂಖ, ಚಕ್ರ, ಮರದ ಕಟ್ಯಾವಲಂಬಿತ ಮುದ್ರೆಗಳಿದ್ದು, ಪ್ರವೇಶ ದ್ವಾರಕ್ಕೆ ನಯವಾದ ಶಿಲೆಗಳನ್ನು ಜೋಡಿಸಲಾಗಿದೆ. ಅಂತರಾಳದ ಪ್ರವೇಶದ್ವಾರಕ್ಕೆ ದ್ವಾರಪಾಲಕರ ವಿಗ್ರಹಗಳಿವೆ. ಸಭಾಮಂಟಪಕ್ಕೆ ಪೂರ್ವ ದಕ್ಷಿಣ, ಉತ್ತರದಲ್ಲಿ ಪ್ರವೇಶ ದ್ವಾರಗಳಿವೆ. ಮಧ್ಯದ ಕಂಬಗಳಲ್ಲಿ ಗೋಪಾಲಕೃಷ್ಣ, ನರಸಿಂಹ, ಬಾಲಕೃಷ್ಣ, ಆಂಜನೇಯ, ಕೃಷ್ಣ, ಗಣೇಶ, ಹಂಸ, ಚಕ್ರ ಮುಂತಾದ ಉಬ್ಬು ಶಿಲ್ಪಗಳನ್ನು ಕಡೆಯಲಾಗಿದೆ. ದೇವಾಸ್ಥಾನಕ್ಕೆ ದ್ರಾವಿಡಶೈಲಿಯ ಶಿಖರವಿದೆ. ಮೇಲ್ಭಾಗದಲ್ಲಿ ನಾಲ್ಕೂ ದಿಕ್ಕುಗಳಿಗೂ ವಿಷ್ಣುವಿನ ಶಿಲ್ಪಗಳಿವೆ. ಈ ದೇವಾಲಯಕ್ಕೆ ಕಣಶಿಲೆ, ಇಟ್ಟಿಗೆ, ಗಾರೆಗಳನ್ನು ಬಳಸಲಾಗಿದೆ.

ಈ ದೇವಸ್ಥಾನವು ಇಂದಿಗೂ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿಗೆ ದೂರದ ಪ್ರದೇಶದಿಂದ ಭಕ್ತಾದಿಗಳು ಆಗಮಿಸುತ್ತಾರೆ. ಇಲ್ಲಿನ ದೇವರು ಮಹಾಮಹಿಮ ಶಕ್ತಿವಂತ ಭಕ್ತರ ಕಷ್ಟ-ಕಾರ್ಪಣ್ಯಗಳನ್ನು ಬೇಗ ಈಡೇರಿಸುವವ ಎಂಬ ಭಾವನೆಯೇ ದೇವಸ್ಥಾನದ ಜನಪ್ರಿಯತೆಗೆ ಕಾರಣವಾಗಿದೆ. ಯುಗಾದಿ ಪಾಡ್ಯದಂದು ಐದು ದಿನಗಳವರೆಗೆ ರಥಾಂಗ ಹೋಮ, ವೆಂಕಟೇಶ್ವರ ಪುರಾಣ ನಡೆಯುತ್ತದೆ. ಪಂಚಮಿಯಂದು ಅಪಾರ ಭಕ್ತ ಸ್ತೋಮದ ಮಧ್ಯರಥೋತ್ಸವ ನಡೆಯುತ್ತದೆ. ಗಂಗಾವತಿಯ ಸಿರಿಗೇರಿ ವೆಂಕೋಬಣ್ಣ ಶ್ರೇಷ್ಠಿಯವರು ಪ್ರತಿವರ್ಷ ವಿಜೃಂಭಣೆಯ, ವೈಕುಂಠ ಏಕಾದಶಿಯನ್ನು ಆಚರಿಸುತ್ತಾರೆ. ಅಂದು ಪಂಚಾಮೃತ ಅಭಿಷೇಕ, ಒಂದು ಲಕ್ಷ ತುಳಸಿ ಅರ್ಚನೆ, ಭಜನೆ ಕೀರ್ತನೆ, ಅನ್ನಸಂತರ್ಪಣೆ ಇತ್ಯಾದಿ ವೈಭವಯುತವಾಗಿ ನಡೆಯುತ್ತವೆ. ಬ್ರಾಹ್ಮಣ, ವೈಶ್ಯ ಜನರಾದಿಯಾಗಿ ಎಲ್ಲವರ್ಗದ ಜನ ಇಲ್ಲಿ ಭಾಗವಹಿಸಿರುತ್ತಾರೆ. ವೈಶಾಖ ಬಹುಳದಲ್ಲಿ ನಡೆಯುವ ಕಲ್ಯಾಣೋತ್ಸವ ನವರಾತ್ರಿಯಲ್ಲಿ ಒಂಬತ್ತುದಿನಗಳ ದೀಪಾರಾಧನೆ, ಕಾರ್ತಿಕ ಮಾಸದಲ್ಲಿ ಆಚರಿಸುವ ದೀಪೋತ್ಸವ ಇತ್ಯಾದಿ ವೈಭವಪೂರ್ಣ ಪೂಜಾ ಕಾರ್ಯಗಳು ನೆರವೇರುತ್ತವೆ. ಮದುವೆ, ಮುಂಜಿವಿ, ಜವುಳ ಮುಂತಾದ ಕಾರ್ಯಗಳು ಇಲ್ಲಿ ನಡೆಯುತ್ತವೆ. ಹರಕೆ ಹೊತ್ತ ಭಕ್ತಾದಿಗಳು ದೇವರಿಗೆ ನಾನಾ ರೀತಿಯ ಕಾಣಿಕೆಗಳನ್ನು ಕೊಡುತ್ತಾರೆ. ಕ್ಷೇತ್ರಕಾರ್ಯಕ್ಕೆ ಹೋದಾಗ ಸ್ಥಳೀಯ ದಾನಿಗಳೊಬ್ಬರು ಇತ್ತೀಚೆಗೆ ಸುಮಾರು ೫-೬ ಕೇಜಿ ತೂಕದ ಬೆಳ್ಳಿ ವೆಂಕಟರಮಣನ ಕವಚವನ್ನು ಮಾಡಿಸಿರುವುದು ಗಮನಕ್ಕೆ ಬಂದಿತು. ನರಸಿಂಹಾಚಾರ್ ವೆಂಕೋಬಾಚಾರ್ ಎಂಬುವವರು ಈ ದೇವಸ್ಥಾನದ ಅರ್ಚಕರಾಗಿದ್ದಾರೆ. ಇವರಿಗೆ ದೇವಸ್ಥಾನದ ಸಮಿತಿ ಮತ್ತು ಗಂಗಾವತಿ ದಾನಿಗಳ ವತಿಯಿಂದ ಸಂಭಾವನೆ ಕೊಡಲಾಗುತ್ತದೆ.

ಎಮ್ಮಿಗುಡ್ಡದ ದುರುಗಮ್ಮ

ಕನಕಗಿರಿಯ ಪಾಳೆಯಗಾರ ನವಾಬ ಎರಡನೇ ಉಡಿಚನಾಯಕ (೧೫೧೦-೧೫೪೩) ಕಟ್ಟಿಸಿದ್ದೆನ್ನಲಾದ ಈ ದೇವಾಲಯವು ಕೋಟೆಯ ಒಳಗಿರುವ ಅನೇಕ ದೇವಾಲಯಗಳಲ್ಲಿ ಒಂದಾಗಿದೆ. ಕನಕಗಿರಿಗೆ ಸುಮಾರು ೨೦ ಕಿ.ಮೀ. ಅಂತರದಲ್ಲಿದ್ದು ಗಂಗಾವತಿ ಕೊಪ್ಪಳ ಮುಖ್ಯ ರಸ್ತೆಗೆ ಹತ್ತಿರದಲ್ಲಿದೆ. ಕನಕಗಿರಿ ದೇವಾಲಯಗಳ ವಾಸ್ತುಶೈಲಿಯನ್ನು ಇಲ್ಲಿನ ಕೆಲ ದೇವಾಲಯಗಳು ಹೊಂದಿವೆ. ಶತೃಗಳಿಂದ ರಕ್ಷಿಸಿಕೊಳ್ಳಲು ಆಯಕಟ್ಟಿನ ಪ್ರದೇಶವೆಂದು ಭಾವಿಸಿದ ಪಾಳೇಗಾರರು ಇಲ್ಲಿ ಭದ್ರವಾದ ಕೋಟೆಯನ್ನು ಕಟ್ಟಿ ಒಳಗಡೆ ದೇವಾಲಯಗಳನ್ನು ನಿರ್ಮಿಸಿದರು.

ದುರ್ಗಾ ದೇವಸ್ಥಾನದ ಗರ್ಭಗೃಹ ಮೂಲತಃ ಜಾನಪದ ಶೈಲಿಯ ಸ್ವರೂಪದ್ದು. ಯಾವುದೇ ಕಲಾತ್ಮಕ ಕೆತ್ತನೆಗಳಿರಲಿಲ್ಲ. ಈಗ ಇದು ಸಂಪೂರ್ಣವಾಗಿ ಆಧುನೀಕರಣಗೊಂಡು ಮೂಲ ಸ್ವರೂಪವೇ ಇಲ್ಲವಾಗಿದೆ. ಗರ್ಭಗೃಹದ ಸುತ್ತಲೂ ಇರುವ ಮಂಟಪ, ಬೃಹತ್ ಹೆಬ್ಬಾಗಿಲು, ದೇವಾಲಯದ ಹೊರಗಡೆ ಇರುವ ದೇವಕೋಷ್ಟಗಳು ಆಧುನಿಕ ರಚನೆಗೆ ಸಾಕ್ಷಿಯಾಗಿವೆ. ದಸರಾ ಹಬ್ಬದ ಸಂದರ್ಭದಲ್ಲಿ ನಡೆಯುವ ನವರಾತ್ರಿ ಉತ್ಸವ, ಜಾತ್ರೆಯಲ್ಲಿ ಸಹಸ್ರಾರು ಭಕ್ತರು ಇಲ್ಲಿ ಪಾಲ್ಗೊಳ್ಳುತ್ತಾರೆ. ದುರುಗಮ್ಮ ದೇವಿಯ ಸಾನಿಧ್ಯದಿಂದಾಗಿ ಈ ಕ್ಷೇತ್ರವು ಈಗ ಸುಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ಈ ಕ್ಷೇತ್ರವನ್ನು

ಹೇಮಗುಡ್ಡ ಎಂದು ಕರೆಯಲಾಗುತ್ತಿದೆ ಜನರ ಬಾಯಲ್ಲಿ ಮಾತ್ರ ಎಮ್ಮಿಗುಡ್ಡ ದುರುಗಮ್ಮ ಎಂದೇ ಪ್ರಚಲಿತ. ಮಹಿಷಾಸುರ ಮರ್ದಿನಿ (ದುರುಗಮ್ಮ) ಎಮ್ಮೆಯ ರೂಪದಲ್ಲಿ ಬಂದು ರಾಕ್ಷಸ ಸಂಹಾರ ಮಾಡಿರುವುದರಿಂದ ಇದಕ್ಕೆ 'ಎಮ್ಮಿಗುಡ್ಡ' ಎಂದು ಹೆಸರು ಬಂತು ಎಂದು ಹೇಳಲಾಗುತ್ತದೆ. ಈ ಪ್ರದೇಶದಲ್ಲಿ ಸಾಕಷ್ಟು ನಿಧಿ (ಬಂಗಾರ) ಇದೆ. ಆದಕಾರಣ ಇದನ್ನು ಹೇಮ (ಬಂಗಾರ) ಗುಡ್ಡ ಎಂದು ಕರೆಯುತ್ತಾರೆ. ಜನರು ಈಗಲೂ ನಿಧಿಗಾಗಿ ಶೋಧ ನಡೆಸುತ್ತಾರೆ ಎಂದು ಹೇಳಲಾಗುತ್ತಿದೆ.

ದುರುಗಮ್ಮ ದೇವಸ್ಥಾನವನ್ನು ಆಧುನಿಕ ಶೈಲಿಯಲ್ಲಿ ನಿರ್ಮಾಣಗೊಳಿಸಿ, ಸಹಸ್ರಾರು, ಭಕ್ತರನ್ನು ಸೆಳೆಯುವಂತೆ ಮಾಡಿ, ಇದನ್ನು ಸುಕ್ಷೇತ್ರವನ್ನಾಗಿ ಮಾಡಿದ ಗಂಗಾವತಿಯ ಮಾಜಿ ಸಂಸದರಾದ ಎಚ್.ಜಿ. ರಾಮುಲು ಮತ್ತು ಇವರ ಮಗ ಎಚ್.ಆರ್. ಶ್ರೀನಾಥರವರು ಮಂಡಳಿಯ ಅಧ್ಯಕ್ಷರಾಗಿದ್ದಾರೆ. ಸುತ್ತಲಿನ ಗ್ರಾಮಗಳಾದ ಗಂಗಾವತಿ, ಮುಕ್ಕಂಪೆ ಚಿಕ್ಕ ಬೆಣಕಲ್, ಹಿರೇಬೆಣಕಲ್ ಮುಂತಾದ ಗ್ರಾಮಗಳ ಭಕ್ತರು ಮಂಡಳಿಯ ಸದಸ್ಯರಾಗಿರುತ್ತಾರೆ.

ದಸರಾ ಹಬ್ಬದಲ್ಲಿ ೯ ದಿನಗಳವರೆಗೆ ನವರಾತ್ರಿ ಉತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ಪ್ರತಿದಿನ ದೇವಿಗೆ ವಿಶೇಷ ಅಲಂಕಾರ ನಡೆಯುತ್ತದೆ. ವೈದಿಕ ಸಂಪ್ರದಾಯದಲ್ಲಿ ಹೋಮ-ಹವನಗಳು ನಡೆಯುತ್ತವೆ. ದೇವಾಲಯದ ಪಕ್ಕದಲ್ಲಿರುವ ಬೃಹತ್ ಪುರಾಣ ಮಂಟಪದಲ್ಲಿ ಪುರಾಣ ಪ್ರವಚನ ನಡೆಯುತ್ತದೆ. ಪ್ರತಿವರ್ಷ ಸುಮಾರು ೨೦೦-೨೫೦ ಸಾಮೂಹಿಕ ವಿವಾಹಗಳು ಜರುಗುತ್ತವೆ. ಮಂಟಪದಲ್ಲಿ ೯ ದಿನಗಳವರೆಗೆ ಅನ್ನ ದಾಸೋಹ ಏರ್ಪಟ್ಟಿರುತ್ತದೆ. ಆನೆಯ ಮೇಲೆ ದೇವಿಯನ್ನು ಕೂರಿಸಿದ ಅಂಬಾರಿ ಮೆರವಣಿಗೆ ಭಕ್ತರ ಕಣ್ಮನಗಳನ್ನು ಸೆಳೆಯುತ್ತದೆ. ಜಾತ್ರೆಯಲ್ಲಿ ಮಿಠಾಯಿ ಅಂಗಡಿಗಳನ್ನು ಚಹಾ-ಫಳಾರದ ಅಂಗಡಿಗಳನ್ನು, ಆಟಿಕೆ ಸಾಮಾನುಗಳ ಅಂಗಡಿಗಳನ್ನು ಇನ್ನೂ ಮುಂತಾದ ಅಂಗಡಿಗಳನ್ನು ಹಾಕಲಾಗುತ್ತದೆ. ಜಾತ್ರೆಗೆ ಬಂದ ಭಕ್ತಾದಿಗಳು ಜಾತ್ರೆಯ ನಂತರ ಕುಂಕುಮ, ಮಂಡಾಳು-ಖಾರ ಖರೀದಿಸುತ್ತಾರೆ. ಇದು ಪ್ರಸಾದವೆಂಬ ವಾಡಿಕೆ ಅವರದು.

ಶ್ರಾವಣ ಮಾಸ, ಪ್ರತಿ ಮಂಗಳವಾರ ಹಾಗೂ ಶುಕ್ರವಾರ ವಿಶೇಷ ಅಲಂಕಾರ, ಪೂಜೆ ನೆರವೇರುತ್ತದೆ. ಹಿಂದಿನ ಕಾಲದಲ್ಲಿ ದೇವಿಗೆ ಪ್ರಾಣಿಬಲಿ ಕೊಡುವ ಮೂಲಕ ಪೂಜೆ ಸಲ್ಲುತ್ತಿತ್ತೆಂದು ಹೇಳಲಾಗುತ್ತದೆ. ಈ ಪದ್ಧತಿ ಈಗ ಇಲ್ಲ. ಮದುವೆಯಾಗದವರು, ಮಕ್ಕಳಾಗದವರು ಅನೇಕ ತರಹದ ತೊಂದರೆಗಳನ್ನು ಎದುರಿಸುವವರು ಇಲ್ಲಿಗೆ ಬಂದು ದೇವಿಗೆ ಹೂಕಟ್ಟಿ ತಮ್ಮ ಸಮಸ್ಯೆ ನಿವಾರಣೆ ಆಗುತ್ತದೆಯೋ ಇಲ್ಲವೋ ಎಂದು ಮನಸ್ಸಿನಲ್ಲಿ ಪ್ರಶ್ನಿಸುತ್ತಾರೆ. ಸಮಸ್ಯೆ ಪರಿಹಾರವಾಗುವುದಾದರೆ ದೇವಿ ಬಲಭಾಗದಿಂದ ಹೂ ಕೊಡುತ್ತಾಳೆ ಪರಿಹಾರವಾದರೆ ಎಡಭಾಗದಿಂದ ಹೂಕೊಡುತ್ತಾಳೆ. ಬಲಭಾಗದಿಂದ ಹೂಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ ಎಂದು ಜನಪದರು ಹೇಳುತ್ತಾರೆ. ಈ ಪದ್ಧತಿ, ಎದುರಿಗೆ ಇರುವ ಆಂಜನೇಯ ಗುಡಿಯಲ್ಲೂ ಇದೆ. ದೇವಿಗೆ ಹರಕೆ ಹೊರುವ ಪದ್ಧತಿಯು ಈ ಭಾಗದಲ್ಲಿ ಪ್ರಚಲಿತ. ಕೃಷಿಕರು ದೇವಿಗೆ ಕಾಯಿ-ಕರ್ಪೂರ ಮಾಡಿಸಿದ ಮೇಲೆಯೆ ಪ್ರಮುಖ ಕೃಷಿ ಚಟುವಟಿಕೆಗಳನ್ನು ನಡೆಸುತ್ತಾರೆ. ಈ ಕ್ಷೇತ್ರವು ಇತ್ತೀಚೆಗೆ ಪ್ರವಾಸಿ ತಾಣವಾಗಿ ಪರಿವರ್ತನೆಯಾಗುತ್ತಿದೆ. ಸರ್ಕಾರ, ಮಾಧ್ಯಮಗಳು ಈ ಪ್ರದೇಶದ ಕಡೆಗೆ ವಿಶೇಷ ಗಮನ ನೀಡಬೇಕಾಗಿದೆ.

ಆಂಜನೇಯ ದೇವಾಲಯ

ನಿತ್ಯವೂ ಪೂಜೆಗೊಳ್ಳುವ ಮತ್ತೊಂದು ಪ್ರಮುಖ ದೇವಾಲಯ ಇದಾಗಿದೆ. ದುರುಗಮ್ಮ ದೇವಾಲಯದ ಎದುರಿಗೆ ಇರುವ ಈ ದೇವಾಲಯಕ್ಕೂ ಸಹ ಭಕ್ತರು ತಪ್ಪದೆ ಆಗಮಿಸಿ ದರ್ಶನ ಪಡೆಯುತ್ತಾರೆ. ೫-೬ ಅಡಿ ಎತ್ತರದ ಈ ವಿಗ್ರಹವು ತುಂಬಾ ಆಕರ್ಷಕವಾಗಿದೆ. ಭಕ್ತರು ತಮ್ಮ ಕಷ್ಟಗಳ ನಿವಾರಣೆಗಾಗಿ ದುರುಗಮ್ಮನ ಹತ್ತಿರ ಕೇಳುವ ರೀತಿಯಲ್ಲೇ 'ಹೂಕಟ್ಟ' ಕೇಳುತ್ತಾರೆ.

ಶಿವಪಾರ್ವತಿ ದೇವಾಲಯ

ಇದು ವಾಸ್ತು ದೃಷ್ಟಿಯಿಂದ ಪ್ರಮುಖವಾದ ಮತ್ತು ಅಳತೆಯಲ್ಲಿ ದೊಡ್ಡ ದೇವಾಲಯವಾಗಿದೆ. ಇದಕ್ಕೆ ಪ್ರತ್ಯೇಕ ಮಹದ್ವಾರ, ಮುಖಮಂಟಪ, ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿವೆ. ಅಂತರಾಳ ಬಾಗಿಲ ಇಕ್ಕೆಲಗಳಲ್ಲಿ ದೇವಕೋಷ್ಠಗಳಿವೆ. ಸಭಾಮಂಟಪದ ಮಾಡಿನ ಅಂಚಿನಲ್ಲಿ ಇಟ್ಟಿಗೆ ಗಾರೆಗಳಿಂದ ನಿರ್ಮಿಸಿದ ದೇವಕೋಷ್ಟಗಳಿದ್ದು, ಗರ್ಭಗೃಹದ ಮೇಲೆ ಕದಂಬ ನಾಗರಶೈಲಿಯ ಶಿಖರವಿದೆ. ಗರ್ಭಗೃಹದಲ್ಲಿ ಒಡೆದ ಶಿವ ಪಾರ್ವತಿ ವಿಗ್ರಹವಿದೆ. ಕನಕಾಚಲ ಲಕ್ಷ್ಮೀ ನರಸಿಂಹ, ದೇವಾಲಯವು ಇಲ್ಲಿದ್ದು ಅಂಥ ವಿಶೇಷ ವಾಸ್ತು ರಚನೆಯನ್ನು ಹೊಂದಿಲ್ಲ. ನಿಧಿ ಆಸೆಗಾಗಿ ದೇವರನ್ನು ನಾಶಪಡಿಸಿದ್ದರಿಂದ ಈಗ ಈ ದೇವಾಲಯ ಪಾಳು ಗುಡಿಯಾಗಿದೆ. ಈವರೆಗೆ ನೋಡಲಾದ ದೇವಾಲಯಗಳಲ್ಲದೆ ಕನಕಗಿರಿಯ ರಂಗನಾಥ ಗುಡಿ, ಕಾಳಿಕಾದೇವಿ ಗುಡಿ, ಸೂರ್ಯ ದೇವಾಲಯ, ಹಿರೇಹಳ್ಳದ ಶಿವ ದೇವಾಲಯ, ಸಭಾಮಂದಿರ (ವೆಂಕಟರಮಣ ದೇವಾಲಯ ರಾಮದೇವರ ದೇವಾಲಯ?), ಅನಂತಶಯನ ದೇವಾಲಯ, ವಿಷ್ಣು ದೇವಾಲಯ, ವೆಂಕಟರಮಣ ದೇವಾಲಯ, ನವಲಿಯ ವೀರಭದ್ರ, ಈಶ್ವರ, ಎಲಿಬಸವಣ್ಣ ದೇವಾಲಯ ಹೀಗೆ ಮುಂತಾದ ದೇವಾಲಯಗಳು ಇಲ್ಲಿ ಕಂಡುಬರುತ್ತವೆ.

೫.೨.೩. ಜಾತ್ರೆಗಳು

ಕನಕಗಿರಿಯ ಪಾಳೇಗಾರರು ಜಗತ್ಪ್ರಸಿದ್ಧ ವಿಜಯನಗರದ ಮಾಂಡಲೀಕರಾಗಿ ಭವ್ಯ ಇತಿಹಾಸ ನಿರ್ಮಾಣ ಮಾಡಿದಂತೆ, ಅದ್ಭುತವಾದ ಕೆತ್ತನೆಗಳಿಂದ ಕೂಡಿದ ನೂರಾರು ದೇವಾಲಯಗಳನ್ನು ಸ್ಥಾಪಿಸಿ, ದೈವೀ ಭಕ್ತಿಯನ್ನು ಮೆರೆದಿದ್ದಾರೆ. ಅಷ್ಟು ಮಾತ್ರವಲ್ಲದೆ ಇಲ್ಲಿನ ದೇವಾಲಯಗಳಿಗೆ ನಿತ್ಯಪೂಜೆ, ಉತ್ಸವ ಜಾತ್ರೆಗಳನ್ನು ವೈಭವಯುತವಾಗಿ ಮಾಡುತ್ತಾ ಇಲ್ಲಿನ ದೈವಗಳು ದೈವೀ ಪುರುಷರ ಮಹಿಮೆಯನ್ನು ದೇಶದೆಲ್ಲೆಡೆ ಪಸರಿಸಲು ಕಾರಣೀಕರ್ತರಾಗಿದ್ದಾರೆ. ಅಂತೆಯೇ ಇಂದಿಗೂ ಸಹ ಕನಕಗಿರಿಯು ಜಾತ್ರೆ, ಉತ್ಸವಾದಿ, ಅನೇಕ ಧಾರ್ಮಿಕ ಕಾರ್ಯಕ್ರಮಗಳಿಂದಾಗಿ ಪ್ರಸಿದ್ಧಿಯನ್ನು ಪಡೆದ ಪುಣ್ಯಕ್ಷೇತ್ರವಾಗಿದೆ. ಇಲ್ಲಿನ ಕನಕಾಚಲಪತಿ ಜಾತ್ರೆ, ಗೋರಾಳಕೇರಿ ದುರ್ಗಾಪರಮೇಶ್ವರಿ ಜಾತ್ರೆ, ತೊಂಡೆತೆವರಪ್ಪ ಜಾತ್ರೆ, ನವಲಿ ಭೋಗಾಪುರೇಶ್ವರ, ಎಮ್ಮಿಗುಡ್ಡ ಜಾತ್ರೆ, ವೆಂಕಟಗಿರಿ ಹಾಗೂ ಹೀರಾಳ ಬಸಪ್ಪನ ಜಾತ್ರೆ ವೈಭವದಿಂದ, ಭಕ್ತಿ, ಸಡಗರ ಸಂಭ್ರಮದಿಂದ ನಡೆಯುತ್ತದೆ.

ಕನಕಾಚಲ ಜಾತ್ರೆ

ಲಕ್ಷಾಂತರ ಭಕ್ತ ಸಮೂಹದೊಂದಿಗೆ ಅತ್ಯಂತ ವೈಭವಯುತವಾಗಿ ನಡೆಯುವ ಭಾವೈಕ್ಯತೆ ಸಾರುವ ಈ ಜಾತ್ರೆ, ತುಂಬಾ ವಿಶಿಷ್ಟವಾದುದ್ದಾಗಿದೆ. ಆರುಗಾಲಿಗಳುಳ್ಳ, ಸುಮಾರು ೬೨ ಅಡಿಗಳಷ್ಟು ಎತ್ತರ ವಿರುವಂಥಹ ಇಲ್ಲಿನ ತೇರು ದಕ್ಷಿಣ ಭಾರತದಲ್ಲಿ ಕಾಣಸಿಗಲಾರದೆಂಬ ಪ್ರಚಲಿತ ಮಾತು ಈ ಭಾಗದಲ್ಲಿದೆ. ಅಂತೆಯೇ ಈ ತೇರಿನ ಎತ್ತರ ಕಂಡು ಅಚ್ಚರಿಗೊಳಗಾದ ಜನಪದರು ತ್ರಿಪದಿಯಲ್ಲಿ ಈ ರೀತಿ ಹಾಡಿದ್ದಾರೆ.

ಕನಗೇರಿ ಕಿಲ್ಲೇವು ಮಳಮಳ ತುರೇವು

ಮಾಲ ಕಟ್ಟೈತಿ ಮಲಕೀಲೆ| ಕನಕರಾಯನ

ತೇರು ಕಟ್ಟೈತೆ ಗಗನಕ

ಕನಕಾಚಲಪತಿ ಜಾತ್ರೆಯು ಪ್ರತಿವರ್ಷ, ಮಾಘಮಾಸದ ಪಾಲ್ಗುಣ ಬಹುಳ ಸಪ್ತಮಿಯಂದು ನಡೆಯುತ್ತದೆ. ಅದಕ್ಕೂ ಪೂರ್ವದಲ್ಲಿ ಪಾಲ್ಗುಣ ಶುದ್ಧ ತ್ರಯೋದಶಿಯಿಂದ ಪಾಲ್ಗುಣ ಬಹುಳ ಏಕಾದಶಿಯವರೆಗೆ ಕಂಕಣ ಕಟ್ಟುವುದರಿಂದ ಹಿಡಿದು ದಿನಕ್ಕೊಂದು ಉತ್ಸವಗಳು ನಡೆಯುತ್ತವೆ. ಅವುಗಳು ಇಂತಿವೆ.

೧. ಅಂಕುರಾರ್ಪಣ: ಜಾತ್ರೋತ್ಸವದ ಮೊದಲನೇ ದಿನದ ಕಾರ್ಯಕ್ರಮ ಇದಾಗಿದೆ. ಪಾಲ್ಗುಣ ಶುದ್ಧ ತ್ರಯೋದಶಿಯಿಂದ ಅಂಕುರಾರ್ಪಣ ಆರಂಭವಾಗುತ್ತದೆ. ಅಂದು ಕನಕಾಚಲ ಮತ್ತು ಲಕ್ಷ್ಮೀದೇವಿ ಸೇರಿದಂತೆ ದೇವಾಲಯದ ಎಲ್ಲ ದೇವ ದೇವತೆಗಳಿಗೆ ಅಭಿಷೇಕ ನಡೆಯುತ್ತದೆ. ಋತ್ವಿಜರಿಂದ ಹೋಮ ನಡೆಯುತ್ತದೆ. ನಂತರ ಇಲ್ಲಿ ನೆರೆದ ಸಮಿತಿ ಹಾಗೂ ಭಕ್ತ ಸಮೂಹದ ಸಮಕ್ಷಮದಲ್ಲಿ ಕನಕರಾಯ, ಶ್ರೀದೇವಿ ಭೂದೇವಿಯರ ವಿವಾಹದ ನಿಮಿತ್ಯವಾಗಿ ಲಗ್ನಪತ್ರಿಕೆ ಮತ್ತು ಕಂಕಣ ಕಟ್ಟುತ್ತಾರೆ. ಮಂಗಳಾರತಿ ತೀರ್ಥ ಪ್ರಸಾದದೊಂದಿಗೆ ಅಂದಿನ ಕಾರ್ಯಕ್ರಮ ಮುಗಿಯುತ್ತದೆ. ಅಂದು ಬ್ರಾಹ್ಮಣರಿಗೆ ಬೋಜನದ ವ್ಯವಸ್ಥೆ ಮಾಡಲಾಗಿರುತ್ತದೆ.

ಕನಕರಾಯ ಶ್ರೀದೇವಿ ಭೂದೇವಿಯರ ಮದುವೆ ಸಂದರ್ಭವೇ ಈ ಎಲ್ಲ ಉತ್ಸವ ಮತ್ತು ಜಾತ್ರೆಗೆ ಪ್ರಮುಖ ಕಾರಣವಾಗಿದೆ. ದೇವರಿಗೆ ಪ್ರತಿವರ್ಷವೂ ಮದುವೆ ಮಾಡುವುದು ಯಾಕೆ ಎಂಬ ಪ್ರಶ್ನೆ ಅನೇಕರ ಮನಸ್ಸಿನಲ್ಲಿ ಮೂಡಿರಬಹುದು. ಅದಕ್ಕೆ ಅದರದೇ ಆದ ಧಾರ್ಮಿಕ ಹಿನ್ನೆಲೆ ಇರುವುದನ್ನು ಗಮನಿಸಬೇಕು. ನಾಡಿಗೆ ಬರಗಾಲ ಬಿದ್ದಾಗ ಮಳೆಗಾಗಿ ಪ್ರಜೆಗಳು, ರಾಜರು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಆದರೂ ಮಳೆ ಬರುವುದಿಲ್ಲ. ಮುನಿಗಳು, ನಾರದ ಮಹರ್ಷಿಗಳಾದಿಯಾಗಿ ದೇವಗಣಚರರೆಲ್ಲ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಲೋಕದ ಜನರ ಪರವಾಗಿ ಭಿನ್ನವಿಸಿಕೊಂಡು ಮಳೆ ಸುರಿಸುವಂತೆ ಕೋರುತ್ತಾರೆ. ಆಗ ಇವರ ಭಿನ್ನವಿಕೆಯನ್ನು ಮನ್ನಿಸಿದ ದೇವರು ಭೂಲೋಕದಲ್ಲಿ ಪ್ರತಿವರ್ಷ ತನ್ನ ಕಲ್ಯಾಣೋತ್ಸವ ಮಾಡಿದಲ್ಲಿ ಮಳೆ ಬರಿಸುತ್ತೇನೆ ಎಂದು ಹೇಳುತ್ತಾನಂತೆ. ಆದ್ದರಿಂದ ಅಂದಿನಿಂದ ಕಲ್ಯಾಣೋತ್ಸವದ ಕಾರಣಕ್ಕಾಗಿ ಜಾತ್ರೆಯ ಆಚರಣೆ ರೂಢಿಗೆ ಬಂತು ಎಂಬುದು ಪ್ರತೀತಿ.

೨. **ಧ್ವಜಾರೋಹಣ:** ಅಂದು ದೇವರಿಗೆ ಅಭಿಷೇಕ ಪೂಜೆ ಪುನಸ್ಕಾರಾದಿಗಳು ನೆರವೇರಿದ ನಂತರ ಪಲ್ಲಕ್ಕಿಯಲ್ಲಿ ಕನಕರಾಯ ಉತ್ಸವ ಮೂರ್ತಿಯ ಕೂಡಿಸಿಕೊಂಡು ಗ್ರಾಮದೇವತೆ ದ್ಯಾಮವ್ವನ ಗುಡಿಗೆ ಹೋಗಿ, ನಂತರ ಕುಂಬಾರರ ಮನೆಗೆ ಹೋಗಿ ಸುವರ್ಣ ಪಾತ್ರೆ(ಗಡಿಗೆ)ಗಳನ್ನು ತರುತ್ತಾರೆ. ಆ ಪಾತ್ರೆಯಲ್ಲಿ ಮಣ್ಣು ಹಾಕಿ ನೀರು ಹಾಕಿ ನವದಾನ್ಯಗಳನ್ನು ಸುರಿಯುತ್ತಾರೆ. ಕೆಲ ದಿನಗಳ ನಂತರ ಸುರಿದ ನವದಾನ್ಯಗಳಲ್ಲಿ ಯಾವುದು ಮೊಳಕೆ ಚನ್ನಾಗಿ ಬಂದಿರುತ್ತದೆಯೋ ಆ ವರ್ಷ ಆ ಬೆಳೆ ಚನ್ನಾಗಿ ಬರುತ್ತದೆಂಬುದು ಪ್ರತೀತಿ. ನಂತರ ನಿತ್ಯದಂತೆ ಹೋಮ ನಡೆಯುತ್ತದೆ. ದೇವಸ್ಥಾನದ ಮುಂಭಾಗದ ಗರುಡಗಂಭಕ್ಕೆ ಗರುಡ ಚಿತ್ರವಿರುವ ಧ್ವಜಪಟವನ್ನು ಕಟ್ಟಿ ಧ್ವಜಾರೋಹಣ ಮಾಡಲಾಗುತ್ತದೆ. ಧ್ವಜ ಪಟದಲ್ಲಿರುವ ಗರುಡನು ವೈಕುಂಠಕ್ಕೆ ಹೋಗಿ ಕನಕಾಚಲ ಶ್ರೀದೇವಿ ಭೂದೇವಿಯರ ವಿವಾಹದ ಆಮಂತ್ರಣ ಪತ್ರಿಕೆಯನ್ನು ಕೊಡಲು ಹೋಗುತ್ತಾನೆ ಎಂಬ ಕಾರಣದಿಂದ ಧ್ವಜಪಟದ ಮೂಲಕ ಗರುಡನನ್ನು ಆಕಾಶಕ್ಕೆ ಹಾರಿ ಬಿಡಲಾಗುತ್ತದಂತೆ ಇದಾದ ನಂತರ ಮಹಾ ಮಂಗಳಾರತಿ, ತೀರ್ಥ. ಕಡ್ಲೆ, ಸಕ್ಕರೆ ಪ್ರಸಾದ ವಿತರಣೆಯೊಂದಿಗೆ ಎರಡನೇ ದಿನದ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

೩. **ಪುಷ್ಪಮಂಟಪಾರೋಹಣ:** ನಿತ್ಯದಂತೆ ಅಭಿಷೇಕ, ಹೋಮ ನಡೆಯುತ್ತದೆ. ಮುಂಜಾನೆ ಮತ್ತು ರಾತ್ರಿ ಭಕ್ತ ಸಮೂಹದೊಂದಿಗೆ ಹೂವಿನಿಂದ ಅಲಂಕೃತವಾದ ಮಂಟಪವನ್ನೇರಿ ಕನಕರಾಯನು ಎದುರು ಹನುಮಪ್ಪನ ಗುಡಿಯವರೆಗೆ ಹೋಗಿ ಬರುತ್ತಾನೆ. ಇಲ್ಲಿ ನಡೆಯುವ ಪ್ರತಿಯೊಂದು ಉತ್ಸವಗಳ ಬಲಭಾಗವನ್ನು ಗೊಲ್ಲ ಸಮುದಾಯದ 'ಮಹಿಮ'ರು ಹೊರುತ್ತಾ ಬಂದಿದ್ದು ಇವರು ಈ ಸಂದರ್ಭದಲ್ಲಿ ಕಟ್ಟುನಿಟ್ಟಾದ ವ್ರತಾಚರಣೆ ಮಾಡುತ್ತಾರೆ. ಬ್ರಹ್ಮಚರ್ಯ, ಮಾಂಸಾಹಾರ ನಿಷೇಧ, ಅಂಗಿ ಧರಿಸದೆ ಹೊಸ ಹಳದಿ ಬಟ್ಟೆಗಳನ್ನು ಧರಿಸಿ ಕಂಕಣ ಕಟ್ಟುವ ಕಾರ್ಯದಿಂದಿಡಿದು ಅವಭೃತ ಸ್ನಾನದವರೆಗೆ ಜಾತ್ರೆಯಲ್ಲಿ ಭಕ್ತಿಯಿಂದ ಸೇವೆ ಸಲ್ಲಿಸುತ್ತಾರೆ. ಉತ್ಸವದ ನಂತರ ಮಹಾಮಂಗಳಾರತಿ ತೀರ್ಥ ಪ್ರಸಾದ ದೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

೪. **ಹಂಸಾರೋಹಣ:** ನಾಲ್ಕನೇ ದಿನ ನಿತ್ಯಾಭಿಷೇಕ, ಹೋಮ, ಪೂಜೆ ಪುನಸ್ಕಾರಗಳ ನಂತರ ಮುಂಜಾನೆ ಮತ್ತು ರಾತ್ರಿ ಅಲಂಕೃತ ಹಂಸವಾಹನದಲ್ಲಿ ಕನಕರಾಯನನ್ನು ಕೂಡಿಸಿಕೊಂಡು ಎಂದಿನಂತೆ ಎದುರು ತೀರ್ಥ ಪ್ರಸಾದದೊಂದಿಗೆ ಕಾರ್ಯಕ್ರಮ ಮುಗಿಯುತ್ತದೆ.

೫. **ಸಿಂಹಾರೋಹಣ:** ೫ನೇ ದಿನ ಸಿಂಹಾರೂಢನಾಗಿ ಕನಕಾಚಲನು ಉತ್ಸವದಲ್ಲಿ ಪಾಲ್ಗೊಳ್ಳುತ್ತಾನೆ. ಭಕ್ತ ಸಮೂಹದೊಂದಿಗೆ ವಿವಿಧ ವಾದ್ಯ ವೃಂದಗಳೊಂದಿಗೆ ಹೋಗಿ ಬರುವ ಮುಖಾಂತರ ಅಂದಿನ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

೬. **ಹನುಮಂತೋತ್ಸವ:** ಅಭಿಷೇಕ, ಹೋಮ ಹವನಾದಿಗಳ ನಂತರ ರಾಮಲಕ್ಷ್ಮಣ ಸೀತಾರೊಂದಿಗೆ ಇರುವ ಹನುಮಂತನೊಂದಿಗೆ ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ನಿತ್ಯದಂತೆಯೇ ಮಹಾಮಂಗಳಾರತಿಯೊಂದಿಗೆ ೬ನೇ ದಿನದ ಉತ್ಸವ ಮುಗಿಯುತ್ತದೆ.

೭. ಶೇಷೋತ್ಸವ: ಶೇಷವಾಹನನ ಮೇಲೆ ಕನಕಾಚಲ, ಶ್ರೀದೇವಿ ಭೂದೇವಿಯರನ್ನು ಕುಳ್ಳಿರಿಸಿಕೊಂಡು ಉತ್ಸವ ನೆರವೇರಿಸುತ್ತಾರೆ. ನಿತ್ಯದಂತೆ ಹೋಮ, ಹವನ, ಮಹಾಮಂಗಳಾರತಿ ನಡೆಯುತ್ತದೆ.

೮. ಕಲ್ಯಾಣೋತ್ಸವ: ಗರುಡೋತ್ಸವ ಕನಕಾಚಲ ಶ್ರೀದೇವಿ ಭೂದೇವಿಯ ಮದುವೆಯ ದಿನವಾದುದರಿಂದ, ಎಲ್ಲ ಉತ್ಸವಗಳಿಗಿಂತ ಈ ಉತ್ಸವ ಅತಿ ವಿಜೃಂಭಣೆಯಿಂದ ಅಪಾರ ಭಕ್ತಸಾಗರದ ಮಧ್ಯದಲ್ಲಿ ಬೆಳಿಗ್ಗೆ ೪ ಘಂಟೆಗೆ ಗರುಡ ವಾಹನದ ಮೇಲೆ ನಡೆಯುತ್ತದೆ. ಅದಕ್ಕಿಂತ ಪೂರ್ವದಲ್ಲಿ ಮದುವೆಯ ಸಹಜ ಕಾರ್ಯಗಳೆಲ್ಲಾ ರಾತ್ರಿ ೧೨ ಗಂಟೆಯಿಂದಲೇ ಆರಂಭಗೊಳ್ಳುತ್ತವೆ. ಕನಕರಾಯ ಶ್ರೀದೇವಿ ಭೂದೇವಿಯರ ಮದುವೆ ಅರ್ಚಕರು ಗಂಡಿನವರಾಗಿ, ಸಮಿತಿಯವರು ಹೆಣ್ಣಿನವರಾಗಿ ಪಾಲ್ಗೊಳ್ಳುತ್ತಾರೆ. ದೇವರ ತಲೆಯ ಮೇಲೆ ಅಕ್ಷತೆ ಹಾಕುವುದು ಬೆಳಿಗ್ಗೆ ಮಾಂಗಲ್ಯಧಾರಣೆ, ವಿಜೃಂಭಣೆಯಿಂದ ನಡೆಯುತ್ತದೆ. ಹೆಣ್ಣಿನವರು ಶ್ರೀದೇವಿ ಭೂದೇವಿಯರನ್ನು ಕನಕರಾಯನಿಗೆ ಕೊಟ್ಟು ಕನ್ಯಾದಾನ ಮಾಡುತ್ತಾರೆ. ಇದಾದ ನಂತರ ಮದುಮಕ್ಕಳ ಮೆರವಣಿಗೆ ಗರುಡ ವಾಹನದ ಮೇಲೆ ಬೆಳಿಗ್ಗೆ ೪ಕ್ಕೆ ಸಾಗುತ್ತದೆ. ಕರ್ಪೂರದಿಂದ ಉರಿಸುವ ಪಂಜುಗಳ ಬೆಳಕಿನಲ್ಲಿ ಸಾಕ್ಷಾತ್ ದೇವತೆಗಳೇ ಆಗಮಿಸಿದರೇನೋ ಎಂಬಂತಿರುತ್ತದೆ. ಇಡೀ ರಾಜಬೀದಿ (ರಥಬೀದಿ) ಗತವೈಭವವನ್ನು ಮತ್ತೆ ನೆನಪಿಸಿದಂತಾಗುತ್ತದೆ. ಪ್ರತಿಯೊಬ್ಬರ ಬಾಯಲ್ಲು ಗೋವಿಂದಾ ಗೋವಿಂದಾ ಎಂಬ ಗೋವಿಂದನ ನಾಮಸ್ಮರಣೆ ಕಂಡುಬರುತ್ತದೆ. ಈ ಉತ್ಸವದಲ್ಲಿ ಕರ್ಪೂರದ ಪಂಜನ್ನು ಬೆಳಗಲೆಂದೇ ಅನೇಕರು ಬರುತ್ತಾರೆ. ಉತ್ಸವದ ನಂತರ ಮಹಾಮಂಗಳಾರತಿಯಾಗುತ್ತದೆ. ಕೊನೆಯಲ್ಲಿ ವಿತರಿಸುವ ಗರುಡ ಪ್ರಸಾದ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. ಆದಕಾರಣ ಪ್ರಸಾದಕ್ಕಾಗಿ ಎಲ್ಲರೂ ಮುಗಿಬಿದ್ದು ತಳ್ಳಾಡುವುದೂ ಉಂಟು. ಅಂದು ಸಂಜೆ ಮತ್ತೆ ಉತ್ಸವದ ಜೊತೆಗೆ ಪಲ್ಲಕ್ಕಿಯಲ್ಲಿ ಶ್ರೀದೇವಿ, ಭೂದೇವಿಯರನ್ನು ಕೂಡಿಸಿಕೊಂಡು ತೌರುಮನೆಗೆ (ಎದುರು ಹನುಮಪ್ಪನ ಗುಡಿಯೇ ತೌರುಮನೆ) ಬಿಟ್ಟು ಬರುವ ಪದ್ಧತಿ ಇದೆ.

೯. ಗಜೋತ್ಸವ: ಹೋಮ ಅಭಿಷೇಕಗಳ ನಂತರ ಗಜವಾಹನ ಮೇಲೆ ಕನಕರಾಯನ ಉತ್ಸವ ನೆರವೇರುತ್ತದೆ.

೧೦. ರಥೋತ್ಸವ ತೇರು: ಅಂದು ಮುಂಜಾನೆ ಬೃಹತ್ತಾದ ತೇರಿನ ಮುಂದೆ ರಥಾಂಗ ಹೋಮವನ್ನು ಮಾಡುತ್ತಾರೆ. ಬಣ್ಣ ಬಣ್ಣದ ಅನ್ನವನ್ನು ತೆಗೆದುಕೊಂಡು ಸುದರ್ಶನ ಚಕ್ರವಿರುವ ದೇವರ ಪಲ್ಲಕ್ಕಿ ಜೊತೆಗೆ ಸಕಲ ವಾದ್ಯಗಳೊಂದಿಗೆ, ಎದುರು ಹನುಮಪ್ಪನ ಗುಡಿಯವರೆಗೆ ಚರಗ ಚಲ್ಲುತ್ತಾರೆ.

ಇಲ್ಲಿನ ರಥಕ್ಕೆ ಆರುಗಾಲಿಗಳಿರುವುದು ವಿಶೇಷ. ರಥದ ಗಡ್ಡಿಯ ಮೇಲೆ ೫ ಪ್ರಕಾರದ ಚಟ್ಟಗಳನ್ನು ಕಟ್ಟಿ ತಳಿರು, ತೋರಣ, ಹೂವುಗಳಿಂದ ರಥವನ್ನು ಶೃಂಗಾರ ಮಾಡಲಾಗುತ್ತದೆ. ದ್ವಾರಪಾಲಕರು, ಗರುಡ, ಹನುಮಂತ, ಮತ್ತಿತರ ಸುಂದರವಾದ ಗೊಂಬೆಗಳು, ಮಿಥುನ ಗೊಂಬೆಗಳನ್ನು ಕಟ್ಟಿ ತೇರನ್ನು ಸಿದ್ಧಗೊಳಿಸಲಾಗಿರುತ್ತದೆ. ಅಂದು ಸಂಜೆ ೪.೩೦ಕ್ಕೆ ತೇರು ಆರಂಭಗೊಂಡು ಪಶ್ಚಿಮ ದಿಕ್ಕಿನ ಕಿಕ್ಕಿರಿದು

ತುಂಬಿದ ಅಪಾರ ಭಕ್ತರ ಸಮೂಹದ ಮಧ್ಯ ಸಾಗುತ್ತದೆ. ನಾನಾ ಭಾಗಗಳಿಂದ ಬಂದು ನೆರೆದ ಲಕ್ಷಾಂತರ ಭಕ್ತ ಸಮೂಹವು ತೇರು ಬರುವುದನ್ನು ನಿರೀಕ್ಷಿಸುತ್ತಾ, ಸಾಕ್ಷಾತ್ ಕನಕರಾಯನೇ ಇತ್ತ ಬರುತ್ತಿರುವನೋ ಏನೋ ಎಂಬ ಭಾವುಕತೆಯಿಂದ ತೇರಿಗೆ ಬಾಳೆಹಣ್ಣು, ಉತ್ತತ್ತಿ ಎಸೆಯುತ್ತಾರೆ. ಬೃಹತ್ತಾದ ತೇರನ್ನು ಎಳೆಯಲು ಬಳಸುವ ತೇರಿನ ಹಗ್ಗ ಕೈಯ್ಯ ಹಿಡಿಗೆ ಸಿಗಲಾರದಷ್ಟು ದಪ್ಪ ಉದ್ದವಿರುತ್ತದೆ. ಹಗ್ಗ ಹಿಡಿದು ಮಹಿಮರು, ಅಪಾರ ಸಂಖ್ಯೆಯ ಭಕ್ತರು ಉತ್ಸಾಹದಿಂದ ಕುಣಿಕುಣಿಯುತ್ತಾ ತೇರು ಎಳೆಯುವ ದೃಶ್ಯ ರೋಮಾಂಚನಕಾರಿಯಾದುದು. ಅಂತೆಯೇ ಜನಪದ ತ್ರಿಪದಿಯೊಂದರಲ್ಲಿ ಹೀಗಿದೆ.

ಕನಕರಾಯನ ತೇರು ಕುಣಿಕುಣಿದು ಎಳಿವಾಗ

ಇಣುಕಿನೋಡ್ಯಾಳ ಲಚುಮವ್ವ| ಗಂಡಗ

ಕಣಕದಾರುತಿ ಬೆಳಗ್ಯಾಳ

ಜಾತ್ರೆಯ ಕಾಲಕ್ಕೆ ನಡೆಯುವ ಮಯೂರ ಕುಣಿತ ಇಂದಿಗೂ ನಡೆದುಕೊಂಡು ಬಂದಿದೆ. ಭಜನ, ನಂದಿಕೋಲು, ಡೊಳ್ಳು, ನಾನಾ ತರಹದ ವಾದ್ಯ ವೃಂದಗಳಿಂದ ಸಾಗುವ ತೇರು ಎದುರು ಹನುಮಪ್ಪನನ್ನು ತಲುಪಿ ಬರುತ್ತದೆ. ಬೃಹತ್ತಾದ ತೇರನ್ನು ಸರಿದಾರಿಯಲ್ಲಿ ಸಾಗುವುದೆಂದರೆ ಸಾಮಾನ್ಯವಾದ ಕೆಲಸವಲ್ಲ. ಕೆಲವೊಮ್ಮೆ ತೇರು ರಸ್ತೆ ಪಕಕ್ಕೆ ಬಂದು ನಿಂತು ಬಿಟ್ಟರೆ ಮುಂದೆ ಸಾಗುವುದೇ ಕಷ್ಟ. ಹೀಗಾಗಿ ಎಷ್ಟೋ ಸಾರಿ ತೇರನ್ನು ಎರಡನೇ ದಿನ ಎಳೆದು ಮುಕ್ತಾಯ ಮಾಡಿರುವ ಉದಾಹರಣೆಗಳಿವೆ.

ಹಿಂದೆ ಜಾತ್ರೆ ಸಮಯದಲ್ಲಿ ತನ್ನ ಭಕ್ತಿ ಪರೀಕ್ಷೆ ಮಾಡುವ ಜನರಿಗೆ ಉಡಿಚ ನಾಯಕ ತನ್ನ ದೈವ ಭಕ್ತಿಯನ್ನು ಪ್ರದರ್ಶಿಸಿದ್ದನಂತೆ ಆ ಕುರಿತಾದ ಜನಪದರ ತ್ರಿಪದಿಯೊಂದು ಹೀಗಿದೆ.

ಅಪ್ಪನ ತೇರಿಗೆ ಇಪ್ಪತ್ತು ಮಿಣಿ ಬಂದು

ಚಿಕ್ಕಿ ನಾಮದ ದೊರಿ ಬಂದು| ಉಡಿಚಪ್ಪ ನಾಯಕ

ಚಪ್ಪಾಳೆ ಇಟ್ಟು ತೇರ ಎಳಿಸ್ಯಾನ||

ತೇರು ಎದುರು ಹನುಮಪ್ಪನನ್ನು ಮುಟ್ಟಿ ಬಂದ ನಂತರ ಭಕ್ತರು ಕನಕರಾಯನಿಗೆ ಪ್ರಿಯವಾಗಿರುವ ದವನವನ್ನು ಖಡ್ಡಾಯವಾಗಿ ತೆಗೆದುಕೊಳ್ಳುತ್ತಾರೆ. 'ತೇರು ಎಳೆದು ದವನ ಮಾರಿತು' ಎಂಬ ಪ್ರಚಲಿತ ಮಾತೊಂದು ಇದಕ್ಕೆ ನಿದರ್ಶನವೆನ್ನಬಹುದು. ದವನ ಕೊಂಡುಕೊಂಡರೆ ಬಂದ ದೊಡ್ಡ ಸಂಕಟಗಳು ಪರಿಹಾರವಾಗುವವು ಎಂಬ ನಂಬಿಕೆ ಇವರದು. ಜಾತ್ರೆಯ ನಂತರ ಬಂದ ಭಕ್ತಾದಿಗಳೆಲ್ಲ ಅರಿಷಿಣ, ಕುಂಕುಮ, ಬಳೆ, ಸಿಹಿ, ಖಾರ, ಬೆಂಡುಬತ್ತಾಸ, ನಾನಾತರಹದ ಆಟಿಕೆಗಳನ್ನು ಕೊಳ್ಳುವುದರಲ್ಲಿ ಕೊಡಿಸುವುದರಲ್ಲಿ ನಿರತರಾಗುತ್ತಾರೆ. ಮೂರು ಆಗಸೆ ಊರು, ಮೂರು ನಾಮದ ದೇವರು, ಮೂಲಾ ನಕ್ಷತ್ರದ ತೇರು ಇಲ್ಲಿಗೆ ಬಂದೋದವರು ಪಾವನವೆಂಬ ವಾಡಿಕೆ ಇದೆ.

ಜಾತ್ರೆಯ ಸಂದರ್ಭದಲ್ಲಿ ಭಕ್ತರಿಂದ ಆಚರಿಸಲ್ಪಡುವ ಆಚರಣೆಗಳು ಇಲ್ಲಿ ವಿಶೇಷವಾಗಿವೆ. ಕೆಲವರು ಅಂದು 'ದಾಸಂಗ' ಮಾಡುತ್ತಾರೆ. ಅಂದರೆ ಮನೆಗೆ ದಾಸರನ್ನು ಆಹ್ವಾನಿಸಿ ಭಕ್ತಿಯಿಂದ ಸಿಹಿ ಅಡಿಗೆ ಮಾಡಿ ಊಟಬಡಿಸಿ, ಅವರ ಊಟದ ನಂತರ ಮನೆ ಮಂದಿಯೆಲ್ಲ ಊಟ ಮಾಡುತ್ತಾರೆ. ಗೊಲ್ಲರು ಗಂಡಾರತಿ ಹೊರುತ್ತಾರೆ. ಗಂಡಾಂತರದಿಂದ ಪಾರಾಗುವ ಸಲುವಾಗಿ ಈ ಆರತಿ ಮಾಡಲಾಗುತ್ತದೆ ಎಂಬುದು ಅವರ ನಂಬಿಕೆ. ಹರಕೆ ಹೊತ್ತವರು ತಲೆಮಂಡಿ ಕೊಟ್ಟು ಪುಷ್ಕರಣಿಯಲ್ಲಿ ಸ್ನಾನ ಮಾಡುವ ಪದ್ಧತಿ ಇದೆ. ಹೊಸ ವಾಹನ ತಂದವರು ಪೂಜೆ ಮಾಡಿಸುವುದು ಇತ್ಯಾದಿ ಪದ್ಧತಿಗಳು ಇವೆ. ಮುಸ್ಲಿಂ ಬಾಂದವರೂ ಸಹ ಈ ಜಾತ್ರೆಗೆ ಆಗಮಿಸಿ ಕಾಯಿಕರ್ಪೂರ ಮಾಡಿಸುತ್ತಾರೆ. ಜಾತ್ರೆಯ ದಿನ ಮನೆಯಲ್ಲಿ ರೊಟ್ಟಿ ಮಾಂಸದಡಿಗೆ ಮಾಡುವುದಿಲ್ಲ. ಉಳಿದಂತೆ ಊರಿನ ಎಲ್ಲ ಸಮುದಾಯದ ಭಕ್ತಾದಿಗಳು ಮನೆಗೆ ಸುಣ್ಣಬಣ್ಣ ಮಾಡಿಕೊಂಡು ಮಡಿ ಅಡಿಗೆ ಮಾಡಿ ಮನೆಯ ದೇವರಿಗೆ ಎಡಿ ಕೊಡುವ ಪದ್ಧತಿಯನ್ನು ಹೊಂದಿದ್ದಾರೆ. ಜಾತ್ರೆಗೆ ಬಂದು ಬಾಂಧವರನ್ನು ಸ್ನೇಹಿತರನ್ನು ಕರೆಸಿಕೊಳ್ಳುವುದು, ಬಂದವರಿಗೆ ಹೆಣ್ಣು ಮಕ್ಕಳಾದರೆ ಕುಂಕುಮ ಬಳೆ ಕೊಡಿಸುವುದು, ಸಿಹಿ-ಖಾರ ಕೊಡಿಸುವ ಪದ್ಧತಿ ಇದೆ.

ಕೊನೆಗೆ ತೇರು ವಾಪಸ್ ಬಂದ ನಂತರ 'ಪರಿಸಿ ಒಡಿತು' ಎಂದು ಹೇಳುತ್ತಾರೆ. ಅಂದರೆ ಜನ ತಮ್ಮ ತಮ್ಮ ಮನೆಗಳಿಗೆ ಹೊರಡಲಾರಂಭಿಸಿದರು ಎಂದರ್ಥ. ಅಂದು ದಾಸೋಹ ಸಮಿತಿಯ ವತಿಯಿಂದ ಚಿದಾನಂದ ಮಠದ ಆವರಣದಲ್ಲಿ ಊಟದ ವ್ಯವಸ್ಥೆಯನ್ನು ಏರ್ಪಡಿಸಲಾಗಿರುತ್ತದೆ.

೧೧. ಅಶ್ವಾರೋಹಣ: ಕನಕಾಚಲನು ಹೆಂಡತಿಯರನ್ನು ಕರೆತರಲು ಕುದುರೆಯ ಮೇಲೆ ಹೋಗುವುದೇ ಅಶ್ವಾರೋಹಣ ಶ್ರೀದೇವಿ ಭೂದೇವಿಯರನ್ನು ತವರು ಮನೆಯಲ್ಲಿ ಬಚ್ಚಿಟ್ಟಿರುತ್ತಾರೆ. ಕನಕರಾಯ ಅತಿತ್ತ ತಿರುಗಾಡಿ ಹುಡುಕಿ ಹೆಂಡತಿಯರನ್ನು ಕರೆದುಕೊಂಡುಬರುತ್ತಾನೆ.

೧೨. ಅವಭೃತ ಸ್ನಾನ: ಅಂದು ಓಕುಳಿಯಾಟವಾಡಿ ಪುಷ್ಕರಣಿಯಲ್ಲಿ ಶುದ್ಧಿ ಸ್ನಾನ ಮಾಡಿಸಿ ನಂತರ ಹೊಸ ಬಟ್ಟೆ ದೇವರಿಗೆ ತೊಡಿಸುವುದು. ನಂತರ ಧ್ವಜ ಅವರೋಹಣವಾಗುತ್ತದೆ.

೧೩. ಪುಷ್ಪಯಾಗ: ಮದುವೆಗೆ ಆಗಮಿಸಿದ ದೇವಾನುದೇವತೆಗಳನ್ನು 'ಪುಷ್ಪದಿಂಡು' ಎಂಬ ವಾಹನದ ಮುಖಾಂತರ ದೇವಲೋಕಕ್ಕೆ ಕಳುಹಿಸುವುದು ಕೊನೆಗೆ ಭಕ್ತರಿಗೆ ಬಾಳೆಹಣ್ಣಿನ ಸೀಕರಣೆ ಪ್ರಸಾದ ವಿತರಿಸಲಾಗುವುದು.

೧೪. ವಿಶ್ರಾಂತಿ: ಸಾಕಷ್ಟು ದಣಿದ ನವದಂಪತಿ ದೈವಗಳಿಗೆ ವಿಶ್ರಾಂತಿಯೊಂದಿಗೆ ಜಾತ್ರೋತ್ಸವ ಮುಕ್ತಾಯವಾಗುತ್ತದೆ.

ಗೋರಾಳಕೇರಿ ದುರ್ಗಾ ದೇವಿ ಜಾತ್ರೆ: ಗೋರಾಳಕೇರಿ ದುರ್ಗಾದೇವಿಯ ಜಾತ್ರೋತ್ಸವವು ವೈಶಾಖ ಶುದ್ಧ ಚತುರ್ದಶಿಯಂದು ಬಹು ವಿಜೃಂಭಣೆಯಿಂದ ಜರುಗುತ್ತದೆ. ಬೆಳಗ್ಗೆಯಿಂದಲೇ ರುದ್ರಾಭಿಷೇಕ, ಪುಷ್ಪಾರ್ಚನೆ, ಕುಂಕುಮಾರ್ಚನೆ, ಸಂಜೆ ಅಂಕುರಾರ್ಪಣೆ, ದೇವರಿಗೆ ಉಡಿ ತುಂಬುವುದು, ಹೋಮ

ಹವನಗಳು ಹೀಗೆ ಸತತ ನಾಲ್ಕು ದಿನಗಳವರೆಗೆ ನಡೆಯುವವು. ಕೊನೆಯ ದಿನ ಅಕ್ಕಿಯಿಂದ ಪಾಯಸ ಮಾಡುತ್ತಾರೆ. ಕುದಿಯುವ ಪಾಯಸದಲ್ಲಿ ಕೈ ಹಾಕಿ ತಿರುಗಿಸುವುದು, ಪಾಯಸವನ್ನು ಕೈಯಲ್ಲಿ ತೆಗೆದುಕೊಂಡು ಭಕ್ತರಿಗೆ ತೋರಿಸುವುದು ವಿಶಿಷ್ಟ ಘಟನೆ ಜನರನ್ನು ಭಕ್ತಿ ಭಾವಾವೇಶಕ್ಕೆ ಕೊಂಡೊಯ್ಯುವಂತಿರುತ್ತದೆ. ದೇವಸ್ಥಾನ ಸುತ್ತ ಚರಗ ಚಲ್ಲುವ ಪದ್ಧತಿ ಇದೆ. ಜಾತ್ರೆಯ ೫ ದಿನಗಳವರೆಗೆ ಗ್ರಾಮಸ್ಥರು ಕೃಷಿ ಚಟುವಟಿಕೆಗಳಲ್ಲಿ ತೊಡಗುವಂತಿಲ್ಲ. ಕುಟ್ಟುವ, ರೊಟ್ಟಿ ಮಾಡುವ ಪದ್ಧತಿ ಇಲ್ಲ. ಸರ್ವ ಜಾತಿ, ಧರ್ಮದವರು ಈ ದೇವತೆಗೆ ಹೋಳಿಗೆ ಎಡಿ ಕೊಡುತ್ತಾರೆ. ನಾಯಕರ ಕಾಲದಿಂದಲೂ ಈ ಜಾತ್ರೋತ್ಸವ ನಡೆಯುತ್ತಿತ್ತು ಎನ್ನಲಾಗುತ್ತಿದೆ. ಮಹಿಳೆಯರೇ ಇಲ್ಲಿ ಉತ್ಸವ ಸಾಗಿಸುತ್ತಾರೆ. ಇದು ಈ ಜಾತ್ರೆಯ ಮತ್ತೊಂದು ವಿಶೇಷವಾಗಿದೆ. ಸುತ್ತಮುತ್ತಲಿನ ಹಳ್ಳಿಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ತೊಂಡಿತೇರಪ್ಪನ ಜಾತ್ರೆ: ತೊಂಡಿ ತೇರಪ್ಪ (ಹನುಮಪ್ಪ) ದೇವರು ಗ್ರಾಮದಿಂದ ಸ್ವಲ್ಪ ದೂರದಲ್ಲಿದ್ದಾನೆ. ಶ್ರಾವಣ ಮಾಸದಲ್ಲಿ ಈತನ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಸುತ್ತಮುತ್ತಲಿನ ಹಳ್ಳಿಗಳಿಂದಲೂ ಭಕ್ತಾದಿಗಳು ಆಗಮಿಸಿರುತ್ತಾರೆ. ಉತ್ಸವ ಎಳೆಯುವ ಮೂಲಕ ಜಾತ್ರೆ ಆಚರಿಸಲಾಗುತ್ತದೆ. ಜಾತ್ರೆಯಲ್ಲಿ ಕಡೆ ಶ್ರಾವಣ ಶನಿವಾರ ಸಮಿತಿ ವತಿಯಿಂದ 'ಮುಂಗೈ' ಆಟದ ಸ್ಪರ್ಧೆ ನೆಡೆಸಿ ಗೆದ್ದವರಿಗೆ ಬೆಳ್ಳಿಕಡಗ ತೊಡಿಸುವ ಪದ್ಧತಿ ಇದೆ.

ಹೀರಾಳ ಬಸಪ್ಪನ ಜಾತ್ರೆ: ಗ್ರಾಮದಲ್ಲಿರುವ ಹೀರಾಳ ಬಸಪ್ಪನ ಜಾತ್ರೆಯೂ ಬಹು ವಿಜೃಂಭಣೆಯಿಂದ ಶ್ರಾವಣ ಕಡೇ ಸೋಮವಾರದಂದು ನಡೆಯುತ್ತದೆ. ಜಾತ್ರೆಯಲ್ಲಿ ರಾತ್ರಿ ೧೧ ಗಂಟೆಯವರೆಗೂ ನಂದಿಕೋಲು ಕುಣಿತ, ವಚನ, ಭಜನೆ ನಡೆಯುತ್ತಿರುತ್ತವೆ.

ಭೋಗಾ ಪ್ರದೇಶ ಜಾತ್ರೆ: ನಾಯಕರ ಕಾಲದಲ್ಲಿ ಕಟ್ಟಿಸಿರುವ ನವಲಿ ಭೋಗಾಪುರೇಶ ದೇವಸ್ಥಾನದಲ್ಲಿ ಪ್ರತಿವರ್ಷ ಏಪ್ರಿಲ್ ಮೇ ತಿಂಗಳಲ್ಲಿ ವಿಜೃಂಭಣೆಯಿಂದ ಜಾತ್ರೆ ಜರುಗುತ್ತದೆ. ಧ್ವಜಾರೋಹಣ, ಜಾತ್ರೆ, ಕೊಂಡ (ಅವಭೃತಸ್ನಾನ) ನಡೆಯುವವು. ಸರ್ಕಾರದ ಉಸ್ತುವರಿಯಲ್ಲಿ ಜಾತ್ರೆ ನಡೆಯುತ್ತದೆ.

ಎಮ್ಮಿಗುಡ್ಡ ದುರ್ಗಮ್ಮ ಜಾತ್ರೆ: ಹೇಮ (ಎಮ್ಮಿ) ಗುಡ್ಡ ದುರ್ಗಾ ಜಾತ್ರೆಯ ದಸರಾ ಹಬ್ಬದ ದಿನದಂದು ಅಪಾರ ಭಕ್ತಸಾಗರದ ಮಧ್ಯ ನಡೆಯುತ್ತದೆ. ಗಂಗಾವತಿಯ ಮಾಜಿ ಸಂಸದ ಎಚ್.ಜಿ. ರಾಮುಲು ಮತ್ತು ಟ್ರಸ್ಟ್‌ನ ಸಹಯೋಗದೊಂದಿಗೆ ೯ ದಿನಗಳವರೆಗೆ, ಸಾಮೂಹಿಕ ವಿವಾಹಗಳೊಂದಿಗೆ ಕಾರ್ಯಕ್ರಮಗಳು ಜರುಗುವವು. ನಿತ್ಯ ಅನ್ನ ದಾಸೋಹವಿರುತ್ತದೆ. ಕೊನೆಯ (ದಸರಾ) ಹೂವಿನ ತೇರಿನೊಂದಿಗೆ ದೇವಸ್ಥಾನದಲ್ಲಿ ಜಾತ್ರೆ ನೆರವೇರುತ್ತದೆ.

ವೆಂಕಟಗಿರಿ ವೆಂಕಟೇಶ್ವರ ಜಾತ್ರೆ: ವೆಂಕಟಗಿರಿಯ ವೆಂಕಟೇಶ್ವರ ಜಾತ್ರೆಯು ಯುಗಾದಿ, ಪಂಚಮಿ ದಿನದಂದು ಸಡಗರ ಸಂಭ್ರಮದಿಂದ ನೆರವೇರುತ್ತದೆ. ಕಂಕಣ ಕಟ್ಟುವುದು, ಧ್ವಜಾರೋಹಣ, ಕಲ್ಯಾಣೋತ್ಸವ, ಕಾರ್ಯಕ್ರಮಗಳು ಮುಗಿದ ನಂತರ ಜಾತ್ರೆ ನಡೆಯುತ್ತದೆ. ಇದು ಸಹ ನಾಯಕರ ಕಾಲದ ಪ್ರಸಿದ್ಧ ದೇವಸ್ಥಾನವಾಗಿದೆ.

೫.೨.೪. ಮಠಗಳು

ಸುವರ್ಣಗಿರಿ ಸಂಸ್ಥಾನ ವಿರಕ್ತಮಠ (ಕಲ್ಮಠ)

ವೀರಶೈವರ ಧಾರ್ಮಿಕ ಕೇಂದ್ರವಾದ ಕಲ್ಮಠವು ಗೊಲ್ಲೇರಪ್ಪ ಕಾಲೋನಿ ಸಮೀಪದಲ್ಲಿದ್ದು ಈಗ ಸ್ಥಳಾಂತರಗೊಂಡಿದೆ. ಮೂಲ ಸ್ಥಳದಲ್ಲಿ ಎರಡು ಕಲ್ಲು ಬಾಗಿಲುಗಳ ತೋರಣಗಳನ್ನು ಬಿಟ್ಟರೆ ಕಲ್ಮಠ ಎನ್ನುವ ಮತ್ಯಾವ ಕುರುಹುಗಳು ಉಳಿದಿಲ್ಲ. ಈ ಮಠವು ೨೭ ತಲೆಮಾರುಗಳ ಗುರು ಪರಂಪರೆಯನ್ನು ಹೊಂದಿದೆ. ಶಿವತತ್ವ ರತ್ನಾಕರದಲ್ಲಿ ಕನಕಗಿರಿಯ ಕಲ್ಲುಮಠದ ರುದ್ರದೇವರ ಉಲ್ಲೇಖ ಬರುತ್ತದೆ. ಇವರನ್ನು ನೂರೊಂದು ವಿರಕ್ತರಲ್ಲಿ ಒಬ್ಬರು ಎಂದು ಹೇಳಲಾಗುವುದು. ಹೈದ್ರಾಬಾದಿನ ನಿಜಾಮನು ರುದ್ರಸ್ವಾಮಿಗಳವರಿಗೆ ಏಳು ಹಳ್ಳಿಗಳನ್ನು ಜಹಗೀರು ಕೊಟ್ಟಿದ್ದನು ಎಂದು ಹೇಳುತ್ತಾರೆ. ಈ ಮಠಕ್ಕೆ ಅರ್ಧನಾರೀಶ್ವರ, ಗುರುಪಾದಸ್ವಾಮಿ, ಶಾಂತಮಲ್ಲಸ್ವಾಮಿ, ರುದ್ರಸ್ವಾಮಿ, ಚರವರಸ್ವಾಮಿ ಮುಂತಾದವರು ಗುರುಗಳಾದ ಬಗ್ಗೆ ತಿಳಿದುಬರುತ್ತದೆ. ಪ್ರಸ್ತುತ ಶ್ರೀ ಚನ್ನಮಲ್ಲಸ್ವಾಮಿಗಳು ಈ ಮಠದಲ್ಲಿ ಪೀಠದಲ್ಲಿದ್ದಾರೆ. ಅಕ್ಷರ, ಜ್ಞಾನದಾಸೋಹಕ್ಕೆ ಈ ಮಠವು ಪ್ರಸಿದ್ಧಿಯನ್ನು ಪಡೆದಿದೆ. ಈ ಮಠವು ಉಚಿತ ಸಾಮೂಹಿಕ ವಿವಾಹಗಳನ್ನು ಮಾಡುತ್ತ ಸಮಾಜ ಸೇವೆಯ ಬಗೆಗಿನ ಆಸಕ್ತಿ, ಕಾಳಜಿಗೆ ಸಾಕ್ಷಿಯಾಗಿದೆ. ಇಂತಹ ಅನೇಕ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಸೇವೆಗಳನ್ನು ಮಾಡುತ್ತಾ ಕನಕಗಿರಿಯ ಜನಸ್ತೋಮದ ಮನ್ನಣೆಗೆ ಪಾತ್ರವಾಗಿದೆ.

ಮಹಂತರಮಠ (ಮೌನೇಶ್ವರ ಮಠ)

ಈಗಿನ ಮೌನೇಶ್ವರ ಮಠವನ್ನು ಹಿಂದೆ ಮಹಂತರ ಮಠ ಎಂದು ಕರೆಯಲಾಗುತ್ತಿತ್ತು. ಕನಕಗಿರಿಗೆ ಬಂದಂತಹ ಶರಣರ, ಸನ್ಯಾಸಿಗಳ, ಸಾಧುಗಳ ಆಶ್ರಯಕ್ಕೆ ಈ ಸ್ಥಳವನ್ನು ಕೊಡಲಾಗುತ್ತಿತ್ತು. ಹಾಗಾಗಿ ಇದನ್ನು ಮಹಾಂತರ ಮಠ ಎಂದು ಕರೆಯಲಾಯಿತು. ಈ ಮಠವು ಒಂದು ಕಾಲಕ್ಕೆ ವೈಷ್ಣವ ದೇವಾಲಯವಾಗಿತ್ತು. ಮಠದ ಪ್ರವೇಶ ಮತ್ತು ಬಾವಿಯ ಪ್ರವೇಶದಲ್ಲಿ ಶಂಖ, ನಾಮ, ಚಕ್ರದ ಶಿಲ್ಪಗಳನ್ನು ಈಗಲೂ ನೋಡಬಹುದು. ಈ ಮಠದಲ್ಲಿ ಗಿಂಡಿಬಾವಿ ಎಂದು ಕರೆಯಲ್ಪಡುವ ಒಂದು ಕಲಾತ್ಮಕವಾದ ಬಾವಿ ನೋಡುಗರನ್ನು ಬೆರಗುಗೊಳಿಸುವಂತಿದೆ. ಈ ಮಠಕ್ಕೆ ತಿಂಥಿಣಿ ಮೌನೇಶ್ವರರು ಬಂದು ಬಹಳ ದಿನ ನೆಲೆಸಿದ್ದರೆಂದೂ, ಹಾಗಾಗಿ ಅಂದಿನಿಂದ ಈ ಸ್ಥಳವು ಮೌನೇಶ್ವರ ಮಠವಾಯಿತೆಂದು ಹೇಳಲಾಗುತ್ತದೆ. ಈಗ ಮಠವು ವಿಶ್ವಕರ್ಮ ಸಮಾಜದ ಧಾರ್ಮಿಕ ಕೇಂದ್ರವಾಗಿದೆ. ಯೋಗೇಂದ್ರ ಸ್ವಾಮಿ ಎಂಬುವವರು ಈಗ ಮಠದ ಅರ್ಚಕರಾಗಿದ್ದಾರೆ. ಸಾಮೂಹಿಕ ವಿವಾಹಗಳು ಹಾಗೂ ಉಪನಯನದಂತಹ ಸಮಾಜ ಸೇವಾ ಚಟುವಟಿಕೆಗಳು ಗಾಯತ್ರಿ ಹೋಮ, ಭಜನೆ, ವಿಶೇಷ ಪೂಜೆ ಪುನಸ್ಕಾರಗಳಾದಿಯಾಗಿ ಅನೇಕ ಧಾರ್ಮಿಕ ಚಟುವಟಿಕೆಗಳು ಇಲ್ಲಿ ನಡೆಯುತ್ತಿರುತ್ತವೆ.

ಚಿದಾನಂದಾವಧೂತ ಮಠ

ಚಿದಾನಂದಾವಧೂತರ ಸಮಾಧಿ ಸ್ಥಳವನ್ನು ಚಿದಾನಂದಾಧೂತ ಮಠ ಎಂದು ಕರೆಯಲಾಗುತ್ತದೆ.

ಇವರು ಕ್ರಿ.ಶ. ೧೭೮೮ರ ವಿಪ್ಲವ ಸಂವತ್ಸರದ ಮಾಘ ಬಹುಳ ತ್ರಯೋದಶಿಯೆಂದು ಕನಕಗಿರಿಯಲ್ಲಿ ಜೀವ ಸಮಾದಿ ಹೊಂದಿದರು. ಅಂದಿನಿಂದ ಇಂದಿನವರೆಗೂ ಈ ಸಮಾಧಿಯು ಭಕ್ತ ಜನರಿಂದ ಪೂಜೆಗೊಳ್ಳುತ್ತದೆ. ಮೂಲತಃ ಆಂಧ್ರದ ದೊಡ್ಡ ಹರಿವಾಣ ಗ್ರಾಮದವರಾದ ಇವರು ಮಹಾನ್ ಮೇಧಾವಿಗಳಾಗಿ ನಾನಾ ಕಡೆ ಸಂಚರಿಸುತ್ತಾ ದೊರೆ ಚಿಕ್ಕಕನಕಪ್ಪ ನಾಯಕನ ಕಾಲದಲ್ಲಿ ಕನಕಗಿರಿಗೆ ಬಂದುದಾಗಿ ತಿಳಿದು ಬರುತ್ತದೆ. ಕನಕಾಚಲ ದೇವಸ್ಥಾನ ರಂಗಮಂಟಪದ ಗಾರೆ ಶಿಲ್ಪಗಳಲ್ಲಿ ಅವಧೂತರು ಕಾಣಿಸಿಕೊಳ್ಳುತ್ತಿರುವುದನ್ನು ನೋಡಿದರೆ ಪಾಳೆಯಗಾರರು ಅವಧೂತರಿಗೆ ಯಾವ ರೀತಿಯ ಸ್ಥಾನ-ಮಾನಗಳನ್ನು ಕೊಟ್ಟಿದ್ದರು ಎಂಬುದನ್ನು ಊಹಿಸಿಕೊಳ್ಳಬಹುದಾಗಿದೆ. ಕನಕಗಿರಿಯ ಮೇಲೆ ಅಭಿಮಾನವನ್ನು ಹೊಂದಿದ್ದ ಚಿದಾನಂದವದೂತರು ಒಮ್ಮೆ ದೊರೆ ಹಿರೇರಂಗಪ್ಪ ನಾಯಕನಿಗೆ “ನಿನ್ನ ರಾಜ್ಯವು ಸ್ಥಿರವಾಗಿ ಉಳಿಯಬೇಕಾದರೆ ನನ್ನ ಶರೀರವನ್ನು ಕಡಿದು ಊರಸುತ್ತಲೂ ಚಲ್ಲು ಇಲ್ಲವಾದರೆ ನಿನ್ನ ಮುಂದಿನ ಮೂರು ತಲೆಗೆ ರಾಜ್ಯ ನಾಶವಾಗುವುದು” ಎಂದರಂತೆ ಯತಿ ಹತ್ಯೆ ಮಹಾಪಾಪವೆಂದು ರಾಜ ಈ ಕೃತ್ಯವೆಸಗಲಿಲ್ಲ ಎಂಬುದಾಗಿ ಕಥೆಯೊಂದು ಇದೆ.

ಚಿದಾನಂದವಧೂತರು ನಾಡಿನ ಅವಧೂತ ಪರಂಪರೆಯ ಶ್ರೇಷ್ಠ ಸಾಧಕರಾಗಿ, ಯೋಗಿಗಳಾಗಿ ಗಮನ ಸೆಳೆಯುತ್ತಾರೆ. ಇವರ ‘ದೇವಿ ಪುರಾಣ’ ಈಗಲೂ ಜನಪ್ರಿಯತೆಯನ್ನು ಪಡೆದಿದೆ. ಪುರಾಣ ಪ್ರವಚನಗಳಲ್ಲಿ ಈಗಲೂ ಈ ಭಾಗದಲ್ಲಿ ದೇವಿ ಪುರಾಣವನ್ನು ಬಳಸಿಕೊಳ್ಳುತ್ತಾರೆ. ವಚನ, ಚಿದಾನಂದ ಕೀರ್ತನೆ, ಕಾಮವಿಡಂಬನೆ ಮುಂತಾದ ಕೃತಿಗಳನ್ನು ಸಹ ಇವರು ರಚಿಸಿದ್ದಾರೆ. ಇಂತಹ ಮಹನೀಯರು ಜೀವ ಸಮಾಧಿ ಹೊಂದುವ ಮೂಲಕ ಅಂತಿಮ ಜೀವನದ ದಿನಗಳನ್ನು ವಿಶಿಷ್ಠವಾಗಿ ವ್ಯಕ್ತಗೊಳಿಸಿದ್ದಾರೆ. ಹೀಗಾಗಿ ಇಂದಿಗೂ ಈ ಮಠವೂ ಪೂಜ್ಯನೀಯ ಸ್ಥಳವಾಗಿ ಉಳಿದಿದೆ. ದಸರಾ ಹಬ್ಬದಲ್ಲಿ ಇಲ್ಲಿ ದೇವಿ ಪುರಾಣ ಹೇಳಲಾಗುತ್ತದೆ.

ಶಂಕರದಪ್ಪಯ್ಯನ ಮಠ, ಹಂಪಯ್ಯಮಠಗಳೂ ಸಹ ಕನಕಗಿರಿಯಲ್ಲಿ ವಿಶಿಷ್ಟ ಸ್ಥಾನ-ಮಾನಗಳನ್ನು ಪಡೆದಿವೆ. ಶರಣ ಪರಂಪರೆಯಲ್ಲಿ ಹುಟ್ಟಿಕೊಂಡು ಜನರನ್ನು ಲಿಂಗ ಸಂಸ್ಕೃತಿಯೆಡೆಗೆ ಮತ್ತು ವೈಚಾರಿಕ ಚಿಂತನೆಯತ್ತ ಕೊಂಡೊಯ್ಯುವಲ್ಲಿ ಇವು ಮಹತ್ತರ ಪಾತ್ರವಹಿಸಿವೆ.

ಒಟ್ಟಾರೆಯಾಗಿ ಕನಕಗಿರಿಯಲ್ಲಿ ಕಂಡುಬರುವ ಮಠಗಳು ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ಮಹತ್ತರ ಸಾಧನೆ ಮಾಡಿರುವುದಲ್ಲದೆ ಪ್ರಮುಖವಾಗಿ ಐತಿಹಾಸಿಕ ಪರಂಪರೆಯ ಕೊಂಡಿಯಾಗಿ ಉಳಿಯುವಲ್ಲಿ ಗಮನಾರ್ಹವಾದವುಗಳಾಗಿವೆ.

೫.೩. ನಂಬಿಕೆ, ವಿಧಿ-ನಿಷೇಧಗಳು

೫.೩.೧. ನಂಬಿಕೆಗಳು: ಜನಪದ ನಂಬಿಕೆಯ ಪರಂಪರಾನುಗತವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಹೀಗೆ ನಂಬಿಕೆಯೊಂದು ಅಂಗೀಕೃತವಾದಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷೆಗಳು

ಮುಖ್ಯವಾಗುತ್ತವೆ. ನಂಬಿಕೆಯು ಜನಪದರ ಜೀವನಾನುಭವದ ಉತ್ಪನ್ನ, ಹೀಗಾಗಿ ಮಾನವನ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧವಿದೆ. ಅದು ಸೂಚನೆ, ನಿಯಮ, ವಿಧಿ ನಿಷೇಧ, ನಿರ್ದೇಶನ, ಆಗ್ರಹ, ಆದೇಶ ಹಾಗೂ ಆಜ್ಞೆಗಳ ರೂಪದಲ್ಲಿ ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿದೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಾಮ, ಸಂಪ್ರದಾಯ ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಕೂಡಿದ್ದು, ಆ ಮೂಲಕ ಕ್ರಿಯಾ ರೂಪವನ್ನು ತಾಳುತ್ತದೆ. ಈ ಮೂಲಕ ಹುಟ್ಟಬಹುದಾದಂತಹ ನಂಬಿಕೆಗಳು ಕನಕಗಿರಿಯ ಜನಪದರಲ್ಲಿ ಹೇರಳವಾಗಿ ಸಿಗುತ್ತವೆ. ಸಾಮಾಜಿಕ ನೆಲೆಗಟ್ಟಿನ ಮೇಲೆ ರೂಪುಗೊಂಡ ನಂಬಿಕೆಗಳಿಗೆ ತಾತ್ವಿಕ, ಸಾಮಾಜಿಕ ಹಿನ್ನೆಲೆಯು ಧಾರ್ಮಿಕ ತಳಹದಿಯೂ ಇರುತ್ತದೆ. ನಾವು ಜನಪದ ಸಂಸ್ಕೃತಿಯ ಅಂತರಾಳದ ಜೀವಂತ ಮಿಡಿತವನ್ನು ಈ ನಂಬಿಕೆಗಳಲ್ಲಿ ಗುರುತಿಸಬಹುದು.

ಈ ನಂಬಿಕೆಗಳನ್ನು ಐತಿಹಾಸಿಕವಾಗಿ ಗಮನಿಸಿದರೆ ಬಹುತೇಕ ನಂಬಿಕೆಗಳು ಪ್ರಕೃತಿ ಮೂಲವಾಗಿ ಹುಟ್ಟಿಕೊಂಡವುಗಳು. ಇಂತಹ ನಂಬಿಕೆಗಳನ್ನು ಹಲವು ಭಾಗಗಳಾಗಿ ವರ್ಗೀಕರಿಸಬಹುದು. ಒಂದು ಮಾನವ ಶರೀರ ಮತ್ತು ಜನಪದ ವೈದ್ಯಕ್ಕೆ ಸಂಬಂಧಿಸಿದ್ದು ನಂತರ ಜೀವನ ಚಕ್ರ. ಉದಾಹರಣೆಗೆ ಹುಟ್ಟು, ವಿವಾಹ ಮತ್ತು ಸಾವು ಹಾಗೆಯೇ ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು. ಇದರಲ್ಲಿ ಧಾರ್ಮಿಕ, ಪ್ರವಾಸ, ವ್ಯವಹಾರ ಈ ಮೊದಲಾದವು ಒಳಗೊಂಡಿರುತ್ತವೆ. ಅನಂತರ ವ್ಯವಸಾಯ ಜೀವನಕ್ಕೆ ಸಂಬಂಧಿಸಿದ ನಂಬಿಕೆಗಳು ಜೊತೆಗೆ ಹವಾಮಾನ, ಸಸ್ಯ ಬೆಳೆಸುವುದು ಮತ್ತು ಪ್ರಾಣಿಸಾಗಾಣಿಕೆ ಬೇಟೆ ಮತ್ತು ಮೀನು ಹಿಡಿಯುವುದು ಬೇರೆ ಬೇರೆ ವರ್ಗಗಳಾಗಿ ನಿಲ್ಲುತ್ತವೆ.

ಇಂತಹ ಹಲವಾರು ನಂಬಿಕೆಗಳು ಕನಕಗಿರಿ ಪರಿಸರದಲ್ಲಿ ಹೇರಳವಾಗಿ ಸಿಗುತ್ತದೆ. ಅಂತಹವುಗಳಲ್ಲಿ ಕೆಲವುಗಳನ್ನು ಕ್ಷೇತ್ರಕಾರ್ಯದ ಮೂಲಕ ಪಟ್ಟಿ ಮಾಡಲಾಗಿದೆ.

೧. ಮಗಳನ್ನು ಮಂಗಳವಾರ ಗಂಡನ ಮನೆಗೆ, ಸೊಸೆಯನ್ನು ಶುಕ್ರವಾರ ತವರು ಮನೆಗೆ ಕಳಿಸಬಾರದು.

೨. ಶುಕ್ರವಾರ, ಮಂಗಳವಾರ ಹೊರಗಿನವರಿಗೆ ಹಣ ಕೊಡಬಾರದು ಲಕ್ಷ್ಮಿ ಹೊರಗೆ ಹೋಗುತ್ತಾಳೆ ಎಂಬ ನಂಬಿಕೆ.

೩. ಬರೀ ತೊಟ್ಟಿಲನ್ನು ತೂಗಬಾರದು. ಮಕ್ಕಳಿಗೆ ಹೊಟ್ಟೆ ನೋವಾಗುತ್ತದೆ.

೪. ಯಾರಾದರು ಮಲಗಿದಾಗ ದಾಟಬಾರದು. ದಾಟಿದರೆ ದಾಟಿದ ರೀತಿಯಲ್ಲಿ ವಾಪಸ್ ಬರಬೇಕು.

೫. ಮಗು ಮಲಗಿದಾಗ ಸುತ್ತಲೂ ಕುಳಿತುಕೊಳ್ಳಬಾರದು. ಶವದ ಮುಂದೆ ಕುಳಿತಂತಾಗುತ್ತದೆ.

೬. ದೀಪ ಆರಿಸು ಎನ್ನಬಾರದು. ನಂದಿಸು, ಶಾಂತಮಾಡು ಎನ್ನಬೇಕು.

೭. ಹೋಗುತ್ತೇನೆ. ಎನ್ನಬಾರದು. ಹೋಗಿ ಬರುತ್ತೇನೆ ಎನ್ನಬೇಕು.

೮. ಹುಟ್ಟಿದ ದಿನ, ಮಂಗಳವಾರ, ಅಮವಾಸ್ಯೆ, ಹಬ್ಬದಂದು ಮುಖ ಕ್ಷೌರ, ಕಟಿಂಗ್ ಮಾಡಿಸಿಕೊಳ್ಳಬಾರದು.

೯. ಹೊಸ್ತಿಲ ಮೇಲೆ ಸೀನುವುದು, ಕಾಲಿನಿಂದ ತುಳಿಯುವುದು ಮಾಡಬಾರದು.

೧೦. ಅಮವಾಸ್ಯೆಯಂದು ತಲೆಸ್ನಾನ ಮಾಡಬಾರದು.

೧೧. ಅಕ್ಕಿ ಆರಿಸುವಾಗ ಅಕ್ಕಿ ತಿನ್ನಬಾರದು. ತಿಂದರೆ ಅವರ ಮದುವೆಯಲ್ಲಿ ಮಳೆ ಬರುವುದು.

೧೨. ಗರ್ಭಿಣಿಯರು ಶವಯಾತ್ರೆಯನ್ನು ನೋಡಬಾರದು.

೧೩. ಗರ್ಭಿಣಿಯರು ಗ್ರಹಣ ಕಾಲದಲ್ಲಿ ತರಕಾರಿ, ಹಣ್ಣು ಕೊಯ್ಯಬಾರದು. ಹಾಗೆ ಮಾಡಿದರೆ ಅಂಗವಿಕಲ ಮಕ್ಕಳು ಹುಟ್ಟುತ್ತವೆ.

೧೪. ಬೆಕ್ಕು ಕೆಟ್ಟ ಧ್ವನಿಯಲ್ಲಿ ಕೂಗಬಾರದು. ಹಾಗೆ ಮಾಡಿದರೆ ಅವುಗಳನ್ನು ಓಡಿಸಬೇಕು.

೧೫. ಬೆಕ್ಕು ಎಡಕ್ಕೆ ಹೋಗಬಾರದು.

೧೬. ಬೆಕ್ಕು ಮುಖ ತಿಕ್ಕಿಕೊಂಡರೆ, ಕಾಗೆ ಮನೆಯ ಮುಂದೆ ಕುಳಿತು ಕಾಕಾ ಎಂದು ಕೂಗಿದರೆ ಮನೆಗೆ ನೆಂಟರು ಬರುತ್ತಾರೆ.

೧೭. ರಾತ್ರಿ ಹಾಲಿಲ್ಲದೆ ಹೆಪ್ಪಿಗೆ ಹೋಗಬಾರದು.

೧೮. ಯಾರಾದರು ಗಿಣ್ಣದ ಹಾಲು ಕೊಟ್ಟರೆ ಖಾಲಿ ಪಾತ್ರೆ ವಾಪಸ್ ಕೊಡದೆ ಅಕ್ಕಿ ಜೋಳ ಅಥವಾ ಬೆಲ್ಲ ಹಾಕಿಕೊಡಬೇಕು.

೧೯. ಹೊಸ್ತಿಲ ಮೇಲೆ ಕುಳಿತುಕೊಳ್ಳಬಾರದು. ಸಾಲ ಹೆಚ್ಚಾಗುತ್ತದೆ.

೨೦. ಬಿಸಿಲಿನಲ್ಲಿ ಮಳೆ ಬಂದರೆ ನರಿ ಮದುವೆ ಆಗುತ್ತದೆ.

೨೧. ಶುಭ ಕಾರ್ಯಕ್ಕೆ ಮೂವರು ಹೋಗಬಾರದು. ಹೋಗುವುದು ಅನಿವಾರ್ಯವಾದಲ್ಲಿ ಜೇಬಿನಲ್ಲಿ ಅಡಿಕೆ ಬೆಟ್ಟೆ ಇಟ್ಟುಕೊಳ್ಳಬೇಕು. ಜೊತೆಗೆ ಗಣಪತಿ ಬಂದಹಾಗೆ.

೨೨. ಸಂಜೆ ದೀಪ ಹಚ್ಚಿದ ಮೇಲೆ ಕಸ ಬಳಿಯುವುದು, ತಲೆ ಬಾಚಿಕೊಳ್ಳುವುದು. ಊಟ ಮಾಡುವುದು ನಿಷೇಧ.

೨೩. ಶುಭ ಕಾರ್ಯಕ್ಕೆ ಹೋಗುವಾಗ ಬೆಕ್ಕು, ವಿಧವೆ, ಹಾರಿ, ಗುದ್ಲಿ, ಖಾಲಿಕೊಡ, ಕ್ಷೌರಿಕ, ಹಾವು ಒಂಟಿಬ್ರಾಹ್ಮಣ ಎದಿರು ಅಥವಾ ಅಡ್ಡಬರಬಾರದು.

೨೪. ಎಲ್ಲಿಗಾದರು ಹೋಗುವಾಗ ತುಂಬಿದ ಕೊಡ ಎದುರು ಬಂದರೆ ಒಳ್ಳೆಯ ಶಕುನ.

೨೫. ಎಲ್ಲಿಗಾದರು ಹೋಗುವಾಗ ಮುಂಗುಸಿ ಅಡ್ಡ ಬಂದರೆ, ರತ್ನಪಕ್ಷಿ ಕಂಡರೆ, ಆಕಳು ಎದುರು ಬಂದರೆ ಶುಭ ಶಕುನ.

೨೬. ಶವಯಾತ್ರೆ ಎದುರು ಬಂದರೆ ಒಳ್ಳೆಯದು.

೨೭. ಶವ ಸಂಸ್ಕಾರ ಮುಗಿಸಿ ಬರುವವರು ಎದುರು ಬರಬಾರದು. ಹಾಗೆ ಬರುವುದನ್ನು ಕಂಡಲ್ಲಿ ಪಕ್ಕ ಸರಿದುಕೊಂಡು ನಿಂತುಕೊಳ್ಳಬೇಕು.

೨೮. ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಬಾರದು.

೨೯. ಬೆಳಿಗ್ಗೆ ಎದ್ದ ತಕ್ಷಣ ಎರಡು ಅಂಗೈಗಳನ್ನು ಉಜ್ಜಿಕೊಂಡು ನೋಡಬೇಕು. ದೇವರ ಫೋಟೋ, ತಂದೆ ತಾಯಿಯರನ್ನು ಮೊದಲು ನೋಡಬೇಕು.

೩೦. ಮದುವೆಯಾದ ವರ್ಷ ಆಷಾಡ ಮಾಸದಲ್ಲಿ ಅತ್ತೆ ಸೊಸೆ ಒಂದೇ ಮನೆಯಲ್ಲಿ ಇರಬಾರದು.

೩೧. ಶ್ರಾವಣ ಮಾಸದಲ್ಲಿ ತಲೆ ಕೂದಲು ಕ್ಷೌರ ಮಾಡಿಸಬಾರದು.

೩೨. ಚಿಕ್ಕ ಮಕ್ಕಳು ಮಲಗಿರುವಾಗ ಮುತ್ತು ಕೊಡಬಾರದು.

೩೩. ತಂದೆ ತಾಯಿ ಇರುವವರು, ಬಸುರಿ ಹೆಂಗಸಿನ ಗಂಡ ಶವ ಸಂಸ್ಕಾರಕ್ಕೆ ಹೋಗಬಾರದು.

೩೪. ಊಟ ಮಾಡುವಾಗ ಮೈ ಮುರಿಯಬಾರದು. ಊಟದ ತಾಟನ್ನು ದಾಟಬಾರದು. ಊಟದ ಮೇಲೆ ಸಿಟ್ಟು ಮಾಡಿ ಎದ್ದು ಹೋಗಬಾರದು.

೩೫. ಗರ್ಭಿಣಿಯರು ನದಿ ದಾಟಬಾರದು. ಅನಿವಾರ್ಯವಾದಲ್ಲಿ ನದಿಗೆ ಬಾಗಿಣ ಕೊಟ್ಟು ದಾಟಬೇಕು.

೩೬. ಬಂಗಾರ ಸಿಕ್ಕರೆ ಬಂಗು ಬಿಡಿಸುತ್ತದೆ. ಒಳ್ಳೆಯದಲ್ಲ. ಆದ ಕಾರಣ ಅದನ್ನು ಬ್ರಾಹ್ಮಣರಿಗೆ, ಐನೇರಿಗೆ ದಾನ ಕೊಡಬೇಕು.

೩೭. ಉಪ್ಪು ಕದಿಯಬಾರದು. ಕೈಯಿಂದ ಬೀಸಾಕಬಾರದು.

೩೮. ಯಾರಿಗಾದರು ನೀರು ಚಿಮುಕಿಸಬಾರದು. ಹಾಗೆ ಮಾಡಿದಲ್ಲಿ ಒಳಿತು ಎನ್ನಬೇಕು. ಇಲ್ಲದಿದ್ದರೆ ಉಗುರುಸುತ್ತು ಆಗುತ್ತದೆ.

೩೯. ಬಿಕ್ಕಳಿಕೆ ಬಂದರೆ ಯಾರಾದರು ನೆನಪಿಸಿಕೊಳ್ಳುತ್ತಿದ್ದಾರೆ ಎಂದರ್ಥ.

೪೦. ಗರ್ಭಿಣಿ ನೆರಳು ನಾಗರ ಹಾವಿಗೆ ಬೀಳಬಾರದು. ನೆರಳು ಬಿದ್ದರೆ ಅವಳ ಹೆರಿಗೆಯಾಗುವತನಕ ಹಾವಿಗೆ ಕಣ್ಣು ಕಾಣಿಸುವುದಿಲ್ಲ.

೪೧. ದೊಡ್ಡ ಕಿವಿ ಇದ್ದರೆ, ಅಂಗಾಲು ಟೊಳ್ಳು ಇದ್ದರೆ, ಕೈಬೆರಳುಗಳನ್ನು ಜೋಡಿಸಿದಾಗ ಸಂದು ಕಾಣಿಸದಿದ್ದರೆ ಶ್ರೇಷ್ಠ ಅವರು ಧನಿಕರಾಗುತ್ತಾರೆ.

೪೨. ದೇವಸ್ಥಾನದಲ್ಲಿ ದರ್ಶನದ ನಂತರ ಸ್ವಲ್ಪ ಹೊತ್ತು ಕುಳಿತು ಬರಬೇಕು.

೪೩. ದೇವರಿಗೆ ಬೆನ್ನು ತೋರಿಸುತ್ತ ಹೊರ ಬರಬಾರದು. ಹಿಂಬದಿಯಲ್ಲಿ ನಾಲ್ಕು ಹೆಜ್ಜೆ ಹಿಂದೆ ಹೋಗಬೇಕು.

೪೪. ಶವ ಸಂಸ್ಕಾರ ಮುಗಿಸಿ ಬರುವಾಗ ಹಿಂದೆ ತಿರುಗಿ ನೋಡಬಾರದು.

೪೫. ಬಾಣಂತಿ, ಮದುಮಕ್ಕಳು ಬರಿಗಾಲಿನಿಂದ ಓಡಾಡಬಾರದು.

೪೬. ಹೊರಗೆ ಹೋಗುವಾಗ 'ಎಲ್ಲಿಗೆ' ಎಂದು ಕೇಳಬಾರದು.

೪೭. ಕಟ್ಟಿಗೆ ಒಲೆ ಒದರಿದರೆ ಯಾರಾದರೂ ಬರುತ್ತಾರೆಂಬ ಸೂಚನೆ.

೪೮. ತುಂಬಿದ ಕೊಡ ಕೈ ಜಾರಿ ಬಿದ್ದರೆ ಮಳೆ ಬರುವ ಸೂಚನೆ.

೪೯. ನಾಯಿ ಮುಗಿಲಿಗೆ ಮುಖ ಮಾಡಿ ಕೂಗಿದರೆ ಮಳೆ ಬರುವ ಸೂಚನೆ.

೫೦. ಚಂದ್ರನ ಸುತ್ತ ಕೆರೆ ಒಡ್ಡು ಕಟ್ಟಿದ್ದರೆ ಮಳೆ ಬರುವ ಸೂಚನೆ.

೫೧. ಮೈಮೇಲಿನ ಬಟ್ಟೆಯನ್ನು ಹೊಲಿಯಬಾರದು.

೫೨. ಉಪ್ಪು ಕೈಯಿಂದ ಕೈಗೆ ಕೊಟ್ಟರೆ ಜಗಳವಾಗುತ್ತದೆ.

೫೩. ಬಾಳೆ ಎಲೆಯಲ್ಲಿ ಊಟ ಮಾಡುವವರು ಎಲೆ ತುದಿ (ಕುಡಿ) ಭಾಗ ಎಡಕ್ಕೆ ಮಾಡಬೇಕು.

೫೪. ಮುಸ್ಸಂಜೆ ಹೊತ್ತಲ್ಲಿ ಮಲಗಬಾರದು.

೫೫. ಗಂಡನ ತಟ್ಟೆಯಲ್ಲಿ ಹೆಂಡತಿ ಊಟ ಮಾಡಿದರೆ ಗಂಡನ ಪ್ರೀತಿ, ಆಯಸ್ಸು ಹೆಚ್ಚಾಗುತ್ತದೆ.

೫೬. ಗಂಡನ ಊಟವಾದ ನಂತರ ಹೆಂಡತಿ ಊಟ ಮಾಡಬೇಕು.

೫೭. ಹೊಸ ಮನೆಗೆ ಹೋಗುವಾಗ ಹಾಲು ಉಕ್ಕಿಸಿ, ಶಾಂತಿ ಮಾಡಿಸಿ ಹೋಗಬೇಕು.

೫೮. ಮೊದಲ ಬಾರಿಗೆ ಮಗುವನ್ನು ಮಾತಾಡಿಸಿದರೆ, ಮಗುವಿಗೆ ಏನಾದರು (ಹಣ, ಬಿಸ್ಕೆಟ್, ಬಟ್ಟೆ ಇತ್ಯಾದಿ) ಕೊಡಬೇಕು.

೫೯. ಮುಟ್ಟಾದವರು ಎಳೆಯ ಮಕ್ಕಳನ್ನು, ದೇವರನ್ನು ಮುಟ್ಟಬಾರದು. ಉಪ್ಪಿನಕಾಯಿ ಜಾಡಿ ಮುಟ್ಟಬಾರದು. ದೇವರಿಗೆ ನೆರಳು ಬೀಳಬಾರದು.

೬೦. ಒಂಟಿ ಕಾಲಲ್ಲಿ ನಿಲ್ಲುವುದು, ಕಾಲು ಅಲುಗಾಡಿಸುವುದು, ಕಾಲನ್ನು ಬೇರೆಯವರಿಗೆ ತಾಗಿಸುವುದು ಮಾಡಬಾರದು.

೬೧. ಮನುಷ್ಯರನ್ನು, ಆಕಳನ್ನು ಕಸಬರಿಗೆಯಿಂದ ಹೊಡೆಯಬಾರದು.

೬೨. ಮೊರದಿಂದ ಕೇರುವಾಗ ಅದರ ಗಾಳಿ ಗಂಡಸರಿಗೆ ತಾಗಬಾರದು.

೬೩. ಊಟ ಮಾಡುವಾಗ ಮಾತಾಡುವುದು, ಅಳುವುದನ್ನು ಮಾಡಬಾರದು.

೬೪. ಮದುವೆಯಾದ ವರ್ಷ ದಂಪತಿಗಳು ಸಮೇತ ಜಾತ್ರೆ (ಕಳಸ) ನೋಡಬೇಕು.

೬೫. ವೀಳ್ಯೆದೆಲೆಯನ್ನು ಬೋರಲಾಗಿ ಬಿದ್ದರೆ ತಿನ್ನಬಾರದು.

೬೬. ಅಡಿಕೆ ಕೈಯಿಂದ ಜಾರಿ ಬಿದ್ದರೆ ಅದು ಸಿಗುವತನಕ ಹುಡುಕಬೇಕು. ಇಲ್ಲದಿದ್ದರೆ ಹುಡುಕುವದನ್ನೇ ಬಿಡಬೇಕು.

೬೭. ಬೆಳಗಿನ ಜಾವದ ಕನಸು ನನಸಾಗುತ್ತದೆ.

೬೮. ಕಾಗೆ ಗುಟ್ಟು (ಗುಟುಕು) ನೋಡದರೆ ಸಾಯುತ್ತಾರೆ. ಒಂದು ವೇಳೆ ನೋಡಿದರೆ ಸುಳ್ಳು ಸುಳ್ಳಾಗಿ ಸತ್ತ ಸುದ್ದಿಯನ್ನು ನೆಂಟರಿಗೆ ತಿಳಿಸಬೇಕು. ಆಗ ಸಾವು ಮುಂದೆ ಹೋಗುತ್ತದೆ.

೬೯. ಆರು ಬೆರಳು ಇದ್ದವರು ಅದೃಷ್ಟವಂತರು.

೭೦. ಮುತ್ತೈದೆಯಾದವರು ಗಾಜಿನ ಬಳೆ, ಮಾಂಗಲ್ಯ ಇಲ್ಲದೆ ಬಹಳ ಹೊತ್ತು ಇರಬಾರದು.

೭೧. ರಾತ್ರಿ ಹೊತ್ತು ಸುಣ್ಣ ಉಪ್ಪು ಹೊರಗಡೆ ಕೊಡಬಾರದು.

೭೨. ಬೆಕ್ಕನ್ನು ಹೊಡೆಯುವುದು, ಸಾಯಿಸುವುದು ಮಾಡಬಾರದು.

೭೩. ಹಲ್ಲಿ ಸಾಯಿಸಬಾರದು.

೭೪. ಹಲ್ಲಿ ಮೈಮೇಲೆ ಬಿದ್ದರೆ ಕೈಕಾಲು ಮುಖ ತೊಳೆದುಕೊಂಡು ದೇವರಿಗೆ ಊದುಕಡ್ಡಿ ಬೆಳಗಿದರೆ ಅಥವಾ ಬಂಗಾರದ ಹಲ್ಲಿ ಮುಟ್ಟಿ ಬಂದವರನ್ನು ಮುಟ್ಟಿದರೆ ದೋಷವಿಲ್ಲ.

೭೫. ಹಾವುರಾಣಿಯನ್ನು ಮುಟ್ಟಿದರೆ ಹಣ ಸಿಗುತ್ತದೆ.

೭೬. ಮತ್ತೊಬ್ಬರೊಂದಿಗೆ ಮಾತಾಡುವಾಗ ಹಲ್ಲಿ ಲೊಚಗುಟ್ಟಿದರೆ ಆಗ ಆಡಿದ ಮಾತು ನಿಜ ಎಂದರ್ಥ. ಕೆಲವರು ಬೆರಳಿನಿಂದ ನೆಲಬಾರಿಸುತ್ತಾ 'ಶಿವಶಿವಾ' ಎಂದು ಹೇಳುತ್ತಾರೆ.

೭೭. ಗೂಬೆ ಮನೆಯ ಮುಂದೆ ಕುಳಿತು ಕೂಗಿದರೆ ಸಾವಿನ ಸೂಚನೆ.

೭೮. ನಕ್ಷತ್ರ ಬಿದ್ದರೆ ಗಣ್ಯರು ಸಾಯುವ ಸೂಚನೆ. ಇದನ್ನು ನೋಡಿದವರು ನೆಲಕ್ಕೆ ಉಗುಳಬೇಕು.

೭೯. ಶಿವಗಣಾರಾಧನೆ, ನಿಧನವಾರ್ತೆ ಇರುವ ಪತ್ರವನ್ನು ಓದಿದ ಮೇಲೆ ಹರಿದು ಹಾಕಬೇಕು.

೮೦. ನಿಧನದ ವಿಷಯ ತಿಳಿಸುವ ಪತ್ರ ಬರೆದರೆ ಪತ್ರದ ನಾಲ್ಕು ಮೂಲೆಗೆ ಮಸಿ ಹಚ್ಚಬೇಕು.

೮೧. ಗಂಡಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಅವನಿಗೆ ಎರಡು ಮದುವೆಯ ಯೋಗ ಇದೆ ಎನ್ನುವ ನಂಬಿಕೆ.

೮೨. ನಾಲಿಗೆಯ ಮೇಲೆ ಮಚ್ಚೆ ಇದ್ದರೆ ಅವರು ಆಡಿದ ಮಾತು ನಿಜವಾಗುತ್ತದೆ.

೮೩. ಮೇಲಿಂದ ಮೇಲೆ ಹೆಣ್ಣು ಮಕ್ಕಳು ಹುಟ್ಟುತ್ತಿದ್ದರೆ ಸಾಕು ಸಾವಿತ್ರಿ ಬೇಕು ಬೆನಕಪ್ಪ ಎಂದು ಹೆಸರಿಟ್ಟರೆ ಮುಂದಿನ ಮಗು ಗಂಡಾಗುತ್ತದೆ.

೮೪. ಮನೆಯ ಮುಂದೆ ತುಳಸಿ ಗಿಡ ಇದ್ದರೆ ಕಾಯಿಲೆ ಬರುವುದಿಲ್ಲ.

೮೫. ಅಂಗಾಲು ತುರಿಕೆ ಇಟ್ಟರೆ ಅವರು ಯಾರ ಜೊತೆಗಾದರು ಜಗಳವಾಡುತ್ತಾರೆ.

೮೬. ಹೆಣ್ಣಿಗೆ ಎಡಗಣ್ಣು ಗಂಡಿಗೆ ಬಲಗಣ್ಣು ಹಾರಿದರೆ ಒಳ್ಳೆಯದು.

೮೭. ಹೆಂಗಸರು ಅವಳಿ ಬಾಳೆ ಹಣ್ಣು ತಿನ್ನಬಾರದು.

೮೮. ಕಾಲನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ನೆನೆಯಬೇಕು. ಇಲ್ಲದಿದ್ದರೆ ಶನಿ ಹಿಡಿಯುತ್ತದೆ.

೮೯. ರಾತ್ರಿ ಹೊತ್ತಲ್ಲಿ ಗುಡಿಸಿದ ಕಸ ಹೊರ ಚೆಲ್ಲಬಾರದು. ಲಕ್ಷ್ಮಿ ಹೊರಹೋಗುತ್ತಾಳೆ.

೯೦. ಯಾವುದೇ ಶುಭ-ಅಶುಭ ಕಾರ್ಯಗಳಿಗೆ ಪುರೋಹಿತರಿಂದ, ಸ್ವಾಮಿಗಳಿಂದ ಪಂಚಾಂಗ ಕೇಳಿಸಿ ಆ ಪ್ರಕಾರ ಮಾಡಬೇಕೆಂಬ ನಂಬಿಕೆ ಇದೆ.

೯೧. ಬೆಳಿಗ್ಗೆ ಏಳುವಾಗ ಬಲ ಮಗ್ಗುಲಲ್ಲಿ ಏಳಬೇಕು.

೯೨. ದೇವರು ಬಲಭಾಗದಿಂದ ಹೂ ಕೊಟ್ಟರೆ ಕೆಲಸ ಆಗುತ್ತದೆ. ಎಡ ಭಾಗದಿಂದ ಕೊಟ್ಟರೆ ಕೆಲಸ ಆಗುವುದಿಲ್ಲ ಎಂಬ ನಂಬಿಕೆ.

೯೩. ಮನೆಯಲ್ಲಿ ಯಾರಾದರು ಸತ್ತರೆ ಸತ್ತ ವರ್ಷವೇ ಮದುವೆ ನಡೆಯಬೇಕು ಇಲ್ಲದಿದ್ದರೆ ೩ ವರ್ಷದವರೆಗೆ ಮದುವೆ ಮಾಡಲು ಬರುವುದಿಲ್ಲ.

೯೪. ಮಗುವಿಗೆ ಕನ್ನಡಿ ತೋರಿಸಬಾರದು. ಮಾತು ಬರುವುದಿಲ್ಲ.

೯೫. ಕೈಯಲ್ಲಿ ಗರುಡ ರೇಖೆ ಇರುವವರನ್ನು ಕಂಡರೆ ಹಾವು ಹೆದರುತ್ತದೆ.

೯೬. ಮಗುವಿಗೆ ಮೇಲಿನ ಹಲ್ಲು ಮೊದಲು ಬಂದರೆ ಸೋದರಮಾವನಿಗೆ ಕೇಡು. ಪರಿಹಾರವಾಗಿ ಬೆಳ್ಳಿ ಬಟ್ಟಲಲ್ಲಿ ಎಣ್ಣೆ ಹಾಕಿ ಆ ಮಗುವಿನ ಮುಖ ನೋಡಬೇಕು.

೯೭. ಮಕ್ಕಳಿಗೆ ಬೇಗ ಹಲ್ಲು ಬರದಿದ್ದರೆ ವಸಡನ್ನು ಭತ್ತದ ಮೊನೆಯಿಂದ ಗೀರಬೇಕು.

೯೮. ಮಕ್ಕಳಿಗೆ ಜೊಲ್ಲು ಸೋರುತ್ತಿದ್ದರೆ ಸೋದರಮಾವನು ಉಟ್ಟ ಲುಂಗಿಯಿಂದ ಜೊಲ್ಲು ವರಸಬೇಕು. ಆಗ ಜೊಲ್ಲು ಸೋರುವುದು ನಿಲ್ಲುತ್ತದೆ.

೯೯. ನಾಗರ ಹಾವನ್ನು ಸಾಯಿಸಿದರೆ ಹಾಗೇ ಬಿಸಾಕಬಾರದು. ಬಾಯಲ್ಲಿ ನಾಣ್ಯ ಇಟ್ಟು, ಹಾಲು ಹಾಕಿ ಸುಡಬೇಕು.

೧೦೦. ಮನೆಯೊಳಗೆ ಕಾಗೆ ಬರಬಾರದು.

೧೦೧. ಬಸುರಿಯ ಬಯಕೆ ತೀರಿಸದಿದ್ದರೆ ಹುಟ್ಟುವ ಮಕ್ಕಳ ಕಿವಿ ಸೋರುತ್ತದೆ.

೧೦೨. ಯಾವುದೇ ಕೃಷಿ ಚಟುವಟಿಕೆಗಳು ಆರಂಭವಾಗುವ ಮೊದಲು ಕಾಯಿ ಒಡೆದು ಪೂಜೆ ಮಾಡಬೇಕು.

೧೦೩. ಪ್ರತಿ ಅಮವಾಸ್ಯೆಗೆ ಎತ್ತು, ಗೋದಲಿಗೆ ಕಾಯಿ ಒಡೆದು ಪೂಜೆ ಮಾಡಬೇಕು.

೧೦೪. ನಾವು ಯಾರನ್ನಾದರು ಕುರಿತು ಮಾತನಾಡುವಾಗ ಅಲ್ಲಿಗೆ ಆ ವ್ಯಕ್ತಿ ಬಂದರೆ ಅವರಿಗೆ ನೂರು ವರ್ಷ ಆಯಸ್ಸು ಎಂದು ಹೇಳುತ್ತಾರೆ.

೧೦೫. ಮುಖಕ್ಕೆ (ಮೂಗಿಗೆ) ಮಸಿ ಹತ್ತಿದರೆ ಜಗಳವಾಡುತ್ತಾರೆ.

೧೦೬. ಉಪ್ಪಿನಕಾಯಿಯನ್ನು ಅಮವಾಸ್ಯೆ ದಿನ, ರಾತ್ರಿಹೊತ್ತು, ಮಂಗಳವಾರ, ಶುಕ್ರವಾರ ತೆಗೆಯಬಾರದು.

೧೦೭. ತಂದೆಯಂತೆ ಮಗಳು, ತಾಯಿಯಂತೆ ಮಗ ಇದ್ದರೆ ಅದೃಷ್ಟಶಾಲಿಗಳು.

"ರಾತ್ರಿ ಹೊತ್ತಿನಲ್ಲಿ ಕಸ ಹೊರ ಹಾಕಬಾರದು ಲಕ್ಷ್ಮಿ ಹೊರ ಹೋಗುತ್ತಾಳೆ" ಎಂಬ ನಂಬಿಕೆ ಬಹು ಹಿಂದಿನಿಂದ ಬಂದ ನಂಬಿಕೆಯಾಗಿದೆ. ವಿದ್ಯುತ್ ಬೆಳಕಿನ ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ರಾತ್ರಿ ಕಸಗೂಡಿಸಿದಾಗ ಏನಾದರು ಬೆಲೆಬಾಳುವ ವಸ್ತುಗಳು ಕಸದಲ್ಲಿ ಸೇರಿದರೂ ಸೇರಿರಬಹುದು. ಅದು ರಾತ್ರಿ ಕಣ್ಣಿಗೆ ಕಾಣುವುದಿಲ್ಲ. ಹಗಲಾದರೆ ಸೂಕ್ಷ್ಮವಸ್ತು ಕಣ್ಣಿಗೆ ಕಾಣುತ್ತದೆ ಎಂಬ ಭಾವನೆಯಿಂದ ಈ ನಂಬಿಕೆ ಹುಟ್ಟಿ ಅದು ಧಾರ್ಮಿಕ ಸ್ವರೂಪ ಪಡೆದಿರಬೇಕು. ನಂಬಿಕೆಗಳು ಧಾರ್ಮಿಕ ಸ್ವರೂಪ ಪಡೆದಲ್ಲಿ ಶ್ರದ್ಧಾಪೂರ್ವಕವಾಗಿ ಪಾಲಿಸಲ್ಪಡುತ್ತವೆ ಎಂಬುದು ಇದರ ಉದ್ದೇಶ ಇರಬಹುದು. ಹೀಗೆ ಯಾವುದಾದರೊಂದು ಪ್ರಯೋಜನದ ದೃಷ್ಟಿಯಿಂದ, ವೈಜ್ಞಾನಿಕ ಹಿನ್ನೆಲೆಯಿಂದ ಹುಟ್ಟಿಕೊಂಡ ನಂಬಿಕೆಗಳು ಕನಕಗಿರಿಯಲ್ಲಿ ನೂರಾರು ಇವೆ. ಇದಲ್ಲದೆ ಮಂತ್ರ, ಯಂತ್ರ, ತಂತ್ರ, ಪವಾಡ, ದೆವ್ವ, ಜೋತಿಷ್ಯ, ನಾಡಿ ಗ್ರಂಥ, ಗಿಣಿಶಾಸ್ತ್ರ, ಪ್ರೇತಾತ್ಮ, ಗ್ರಹಗಳ ಪ್ರಭಾವ, ಪರಕಾಯ ಪ್ರವೇಶ, ಮೈಮೇಲೆ ದೇವರು ಬರುವುದು, ಹೀಗೆ ಅನೇಕ ವಿಚಾರಗಳಲ್ಲಿ ಇವರದೇ ಆದ ನಂಬಿಕೆಗಳು ಇವೆ. "ನಂಬಿಕೆ ಮಾನಸಿಕ ಸ್ಥಿತಿಯ ಒಂದು ಪದರವಾದರೆ ಸಂಪ್ರದಾಯ ಜನಾಂಗದ ಜೀವನ ಕ್ರಮ. ನಂಬಿಕೆ ಕಾಲಕ್ರಮೇಣ ಸಾಂಸ್ಕೃತಿಕ ಆವರಣಕ್ಕೆ ಬಿದ್ದು ಸಾಮಾಜಿಕ ಚೌಕಟ್ಟು ಪಡೆದು ಕ್ರಿಯಾಶೀಲ ಆಚರಣೆಗಳಿಗೆ ಹಿಗ್ಗುತ್ತವೆ" ಎನ್ನುತ್ತಾರೆ ಶ್ರೀರಾಮ್ ಇಟ್ಟಣ್ಣವರ್.

೫.೩.೨. ವಿಧಿ-ನಿಷೇಧಗಳು

ಭಯ ಮತ್ತು ಭಾವನಾ ಮೂಲವಾದ ಒಂದು ನಂಬಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೆಗೊಳಿಸುವ

ಅಥವಾ ಬಲಗೊಳಿಸುವಂಥಹುದು ನಿಷೇಧ. ಇದನ್ನು ಮಾಡಬಾರದು. ಇದು ಕೆಡುಕು ಎನ್ನುವ ಸಾಮಾಜಿಕ, ಧಾರ್ಮಿಕ ಪ್ರತಿಬಂಧಕವೇ ನಿಷಿದ್ಧ ಎನ್ನಲಾಗುತ್ತದೆ. ಹೀಗಾಗಿ ಲಿಖಿತ ಕಾನೂನನ್ನು ಮೀರಿಸುವಂತಹ ಸಶಕ್ತಿ ನಿಬಂಧನೆಯಾಗಿ ನಿಷೇಧ ಕಾರ್ಯನಿರ್ವಹಿಸುತ್ತದೆ. ಕನಕಗಿರಿ ಪರಿಸರದಲ್ಲಿಯ ವಿಧಿ ನಿಷೇಧಗಳು ವಿಭಿನ್ನವಾಗಿ ವಿಶಿಷ್ಟವಾಗಿ ಕಂಡುಬರುತ್ತವೆ. ನಿಷೇಧದ ಮೂಲ ಮಾತಿನಲ್ಲಿದೆ. ಸಕಾರತ್ಮಕ ಆಚರಣೆಗಳಿರುವಂತೆ ನಕಾರಾತ್ಮಕವಾದವೂ ಉಂಟು. ಸಕಾರಾತ್ಮಕವಾದವನ್ನು ಮಾತ್ರ ವಿಧಿಗಳೆಂದು, ನಕಾರಾತ್ಮಕವಾದವುಗಳನ್ನು ನಿಷೇಧಗಳೆಂದು ಕರೆಯಬಹುದು. ಇಲ್ಲಿನ ಕೆಲವು ನಿಷೇಧಗಳನ್ನು ಸಮುದಾಯಗಳಲ್ಲಿ ಪಾಲಿಸದೇ ಹೋದ ವ್ಯಕ್ತಿಯನ್ನು 'ಅಪವಿತ್ರ' ಎಂದು ಕರೆಯುತ್ತಾರೆ.

ನಿಷೇಧಗಳ ಸಕಾರಾತ್ಮಕ ಕ್ರಮಗಳು

ನಿಷೇದಗಳನ್ನು ಸ್ವಾರ್ಥಕ್ಕಾಗಿ ಮಾಡಿಕೊಂಡರೂ ಹೆಚ್ಚಿನ ನಿಷೇಧಗಳು ಸಾಮಾಜಿಕ ಸಂರಕ್ಷಣೆಗಳಿಗಾಗಿ ಮಾಡಿಕೊಂಡ ನಿಷೇಧಗಳಾಗಿವೆ. ಈ ನಿಷೇಧಗಳು ಹಲವಾರು ಸಕಾರಾತ್ಮಕ ಕ್ರಮಗಳನ್ನು ನಿರ್ವಹಿಸುತ್ತವೆ.

* ಊಟದ ತಟ್ಟೆಯನ್ನು ದಾಟಬಾರದು
* ರಾತ್ರಿ ವೇಳೆ ಊಟ ಮಾಡದೆ ಮಲಗಬಾರದು
* ಗರ್ಭಿಣಿ ರಾತ್ರಿ ಹೊತ್ತು ಹೊರಗೆ ಮಲಗಬಾರದು
* ಊಟ ಮಾಡುವಾಗ ಅಳಬಾರದು
* ಮುಸ್ಸಂಜೆ ಹೊತ್ತಿನಲ್ಲಿ ಮಲಗುವುದಾಗಲಿ ಊಟಮಾಡುವುದಾಗಲಿ ಮಾಡಬಾರದು
* ಮೈಮೇಲೆ ಬಟ್ಟೆ ಧರಿಸಿಕೊಂಡು ಅದೇ ಬಟ್ಟೆಯನ್ನು ಹೊಲಿಯಬಾರದು
* ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಬಾರದು
* ರಾತ್ರಿ ದೀಪ ಶಾಂತವಾದಾಗ ಊಟ ಮಾಡಬಾರದು
* ಬೇವಿನಕಟ್ಟಿಗೆಯಿಂದ ಅಡಿಗೆ ಮಾಡಬಾರದು
* ಮನೆಯ ಎದುರಿಗೆ ಕಟಿಂಗ್ ಶಾಪ್ ಇರಬಾರದು
* ಕುಕ್ಕುರುಗಾಲಲ್ಲಿ ಕೂತು ಊಟ ಮಾಡಬಾರದು

ಕತ್ತಲಲ್ಲಿ ತೆಂಗಿನಮರ ಹತ್ತಬಾರದು. ಕತ್ತಲಲ್ಲಿ ಹುಳು ಹುಪ್ಪಟಗಳ ಕಾಟದಿಂದ ರಕ್ಷಿಸಲು ನಿಷೇಧವಿರಬೇಕು. ಊಟದ ತಟ್ಟೆಯನ್ನು ದಾಟಬಾರದು ಊಟದ ತಟ್ಟೆಯನ್ನು ದಾಟಿದರೆ ಕಾಲಿನಲ್ಲಿರುವ ಮಣ್ಣು, ಅರಳು ಊಟದ ತಟ್ಟೆಯಲ್ಲಿ ಬಿದ್ದು ಅದನ್ನು ತಿಂದಾಗ ಹೊಟ್ಟೆ ನೋವು ಬರುತ್ತದೆ ಎಂಬುದು ವೈಜ್ಞಾನಿಕ ಕಾರಣವಾದರೆ ಅದನ್ನು ದಾಟಿದರೆ ದೇವರು ಶಾಪ ಕೊಡುತ್ತಾನೆ ಎಂಬ ನಂಬಿಕೆ ನಿಷೇಧಕ್ಕೆ ಕಾರಣವಾಗಿದೆ.

ಧರ್ಮಕ್ಕೆ ಪೂರಕವಾದ ನಿಷೇಧಗಳು

* ದುರ್ಗಮ್ಮ ಜಾತ್ರೆಯಲ್ಲಿ ಕೃಷಿ ಚುಟುವಟಿಕೆ ಕುಟ್ಟುವ, ಕೇರುವ, ರೊಟ್ಟಿ ಮಾಡುವ ಕೆಲಸ ಮಾಡುವಂತಿಲ್ಲ. ಬಂಡಿ(ಚಕ್ಕಡಿ) ಜೋಡಿಗಾಲಿ ಸಮೇತ ನಿಲ್ಲಿಸುವಂತಿಲ್ಲ.
* ದೇವರು ಇರುವ ದಿಕ್ಕಿಗೆ ಕಾಲು ಮಾಡಿ ಮಲಗಬಾರದು
* ಮುಟ್ಟಾದಾಗ, ಸೂತಕ ಇದ್ದಾಗ ದೇವರನ್ನು ಮುಟ್ಟಬಾರದು
* ದೇವರಿಗೆ ಮುಡಿಸುವ ಹೂವನ್ನು ಮೂಸಿ ನೋಡಬಾರದು
* ತೆಂಗಿನಕಾಯನ್ನು ಕಾಲಿನಿಂದ ಒದೆಯಬಾರದು
* ಒಲೆ, ಒರಳು, ಬೀಸುವ ಕಲ್ಲು, ಹೊಸ್ತಿಲು ಇವುಗಳನ್ನು ಕಾಲಿನಿಂದ ಒದೆಯಬಾರದು
* ದೇವರಿಗೆ ಏರಿಸಿದ ಹೂವನ್ನು, ದೇವರ ಅಭಿಷೇಕದ ನೀರನ್ನು ತುಳಿಯಬಾರದು
* ದೇವರ ಗುಡಿಯ ಎದುರಿಗೆ ಮನೆಕಟ್ಟಬಾರದು
* ಗುಡಿಯಿಂದ ಮನೆಗೆ ಬಂದಾಗ ಕಾಲು ತೊಳೆಯಬಾರದು
* ನಾಗರ ಪಂಚಮಿಯಂದು ಹೋಳಿಗೆ ಮಾಡುವಂತಿಲ್ಲ
* ಗ್ರಾಮ ದೇವತೆ ಜಾತ್ರೆ ಉತ್ಸವಗಳಲ್ಲಿ ಊರಾಚೆ ಹೋಗುವಂತಿಲ್ಲ
* ಅಮವಾಸ್ಯೆ ದಿನದಂದು ಶುಭಕಾರ್ಯ ಮಾಡುವಂತಿಲ್ಲ

ಇಂತಹ ನೂರಾರು ನಿಷೇಧಗಳು ಕನಕಗಿರಿಯಲ್ಲಿವೆ. ಬಹುಶಃ ಇವು ಧರ್ಮದ ಬೆಳವಣಿಗೆಗಾಗಿ ಹಾಗೂ ಸಂರಕ್ಷಣೆಗಾಗಿ ಧಾರ್ಮಿಕ ನಿಷೇಧಗಳನ್ನು ಪೂರ್ವಿಕರು ಜಾರಿಗೆ ತಂದಿರಬೇಕು. ಇವುಗಳನ್ನು ನಂಬಿಕೆಯಾಗಿಯೂ, ಆಚರಣೆಯಾಗಿಯೂ ಆಚರಣೆಗೊಳಗಾಗುವುದು ಕನಕಗಿರಿಯಲ್ಲಿ ಕಂಡುಬರುತ್ತದೆ.

ಸ್ತ್ರೀ ಸಂಬಂಧಿ ನಿಷೇಧಗಳು

* ಋತುಮತಿಯಾದ ಸ್ತ್ರೀಯು ೯ ದಿನಗಳವರೆಗೆ ಹೊರಗೆ ಹೋಗಬಾರದು
* ಮುಟ್ಟಾದ ಸ್ತ್ರೀಯನ್ನು ೪-೫ ದಿವಸಗಳವರೆಗೆ ಯಾರೂ ಮುಟ್ಟುವಂತಿಲ್ಲ
* ವಿಧವೆ ಯಾವುದೇ ಶುಭ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ.
* ದೇಹದ ಯಾವುದೇ ಅಂಗ ಊನವಾದ ಸ್ತ್ರೀ ಶುಭಕಾರ್ಯ ಮಾಡುವಂತಿಲ್ಲ
* ಶುಕ್ರವಾರ ಸೊಸೆಯನ್ನು ತವರಿಗೆ, ಮಂಗಳವಾರ ಮಗಳನ್ನು ಗಂಡನ ಮನೆಗೆ ಕಳಿಸಬಾರದು
* ಗಂಡ ಊಟ ಮಾಡುವವರೆಗೆ ಹೆಂಡತಿ ಊಟ ಮಾಡಬಾರದು

* ಗರ್ಭಿಣಿ ಗ್ರಹಣ ಕಾಲದಲ್ಲಿ ಈಳಿಗೆಯಿಂದ ಏನನ್ನು ಕತ್ತರಿಸುವದಾಗಲಿ, ಹೊರ ಬರುವುದಾಗಲಿ ಮಾಡಬಾರದು

ಇಂತಹ ನೂರಾರು ಸ್ತ್ರೀ ಸಂಬಂಧಿ ನಿಷೇಧಗಳು ಕನಕಗಿರಿ ಪರಿಸರದಲ್ಲಿ ಕಂಡುಬರುತ್ತವೆ. ಇವುಗಳನ್ನು ಗಮನಿಸಿದಾಗ ನಿಷೇಧಗಳು ಹಲವು ಉದ್ದೇಶ, ಗುರಿಗಳನ್ನು ಇಟ್ಟುಕೊಂಡು ಬಳಕೆಗೆ ಬಂದಿರುವುದು ಕಂಡುಬರುತ್ತವೆ. ಸಾಮಾನ್ಯವಾಗಿ ಮುಖಂಡರು ಪೂಜಾರಿಗಳು ಮೊದಲಾದ ಪ್ರಮುಖರ ರಕ್ಷಣೆ ಮತ್ತು ಹಾನಿಗೆ ವಿರುದ್ಧವಾದ ಅಂಶಗಳು ೨. ನಿಗೂಢ ಶಕ್ತಿಗಳ ಪ್ರಭಾವದಿಂದ ಸಾಮಾನ್ಯ ಮಾನವರ ರಕ್ಷಣೆ ೩. ಕೆಲವೊಂದು ಆಹಾರ ಸೇವನೆಯ ಮೂಲಕ ಉಂಟಾಗಬಹುದಾದ ಅಪಾಯಗಳನ್ನು ನಿವಾರಿಸುವುದು. ಒಟ್ಟಿನಲ್ಲಿ ಪರಂಪರಾನುಗುತವಾಗಿ ಬಂದಿದೆ ಎನ್ನುವ ಭಾವುಕತೆಯಿಂದ ನಿಷೇಧಗಳನ್ನು ಅಪ್ಪಿಕೊಳ್ಳುವ ಕುರುಡತನ ಸಲ್ಲದು, ನಿಷೇಧವೊಂದರ ಪ್ರಸ್ತುತ ಅಗತ್ಯ, ಅರ್ಥವನ್ನು ಶೋಧಿಸಿಯೇ ಅದರ ಆಯ್ಕೆ ಹಾಗೂ ಅಳವಡಿಕೆ ಆಗಬೇಕಾಗಿದೆ.

ಅಧ್ಯಾಯ - ೬

ಭಾಷೆ ಮತ್ತು ಸಾಹಿತ್ಯ

ಭಾಷೆ ಮತ್ತು ಸಾಹಿತ್ಯ

೬.೧. ಭಾಷೆ

ಭಾಷೆ ಒಂದು ಮಾಧ್ಯಮ. ಮಾನವ ತನ್ನ ದೈನಂದಿನ ಬದುಕಿಗೆ ಸೃಷ್ಟಿಸಿಕೊಂಡಿರುವ ಸಂಪರ್ಕ ಸಾಧನ, ಜೊತೆಗೆ ಮಾನವನ ಪರಂಪರೆಯ ಲಾಂಛನವಾಗಿದೆ. ಭಾಷೆ ಸಂಸ್ಕೃತಿಯ ಪ್ರಮುಖ ಅಂಗ ಸಾಮಾಜಿಕ ಕ್ರಿಯೆ. ಅದಕ್ಕೆ ತನ್ನದೇ ಆದ ಪ್ರತ್ಯೇಕ ಸ್ಥಾನವಿಲ್ಲ. ಅದು ಬಳಸುವ ಅಭಿವ್ಯಕ್ತಿಯನ್ನು ಅವಲಂಬಿಸಿದೆ. ಹೀಗಾಗಿ ಭಾಷೆಗೂ ಅದನ್ನು ಬಳಸುವ ವ್ಯಕ್ತಿಗೂ ನಿಕಟವಾದ ಸಂಬಂಧವಿದೆ. ಭಾಷೆಯಲ್ಲಿ ಆಡು ಭಾಷೆ, ಗ್ರಾಂಥಿಕ ಭಾಷೆ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಜನರಾಡುವ ಭಾಷೆ ಆಡು ಭಾಷೆ, ಜನಪದರ ಭಾಷೆ, ದೇಸೀ ಭಾಷೆ ಎಂತಲೂ ಕರೆಯಲಾಗುತ್ತದೆ. ಲಿಪಿಬದ್ಧಗೊಳಿಸಿದುದು ಗ್ರಾಂಥಿಕ ಭಾಷೆ ಎಂದು ಕರೆಯಲಾಗುತ್ತದೆ. ಭಾಷೆ ಕಾಲ, ದೇಶ, ಪರಿಸರ, ಪ್ರದೇಶಕ್ಕನುಗುಣವಾಗಿ ವ್ಯತ್ಯಾಸವಾಗುತ್ತಾ, ಪುನರ್‌ಸೃಷ್ಟಿಗೊಳ್ಳುತ್ತಾ ಹೋಗುವುದು ಸಹಜ ಪ್ರಕ್ರಿಯೆಯಾಗಿದೆ.

ಮನದ ಅನಿಸಿಕೆಯ ಮಾಧ್ಯಮ ಪದಗಳು ಭಾಷೆಯಾಯಿತು. ಆದಿಮಾನವ ತನ್ನ ಅನಿಸಿಕೆಯನ್ನು ಕೂಗಿ, ಚೀರಿ, ಕುಣಿದು ಕುಪ್ಪಳಿಸಿ ಸನ್ನೆಯ ಮೂಲಕ ಅಭಿವ್ಯಕ್ತಿಸಿದ, ಬರಬರುತ್ತ ಸಾಮೂಹಿಕವಾಗಿ ತಮಗೆ ತಿಳಿದ ಚರಿತ್ರೆ. ಪರಾಕ್ರಮ, ಶೌರ್ಯ, ತಾವು ನೋಡಿದ ಸಾಮಾಜಿಕ, ಧಾರ್ಮಿಕ, ತ್ಯಾಗ ಬಲಿದಾನ, ಕೌಟುಂಬಿಕ ಸುಖ ದುಃಖ ಸಂದರ್ಭಗಳಿಗೆ ಸಹಜವಾಗಿಯೇ ಸ್ಪಂದಿಸಿ ಅಂತಹ ಘಟನೆಗಳನ್ನು ವಿವರವಾಗಿ ಸೆರೆ ಹಿಡಿದು ಗೀತೆ, ಕಥನ, ಕಥೆ, ಕಾವ್ಯಗಳ ಮುಖಾಂತರ ಮನಮೋಹಕವಾಗಿ ಹೃದಯ ಸ್ಪರ್ಶಿಯಾಗಿ ಮುಂದಿನ ತಲೆಮಾರಿಗೆ ಬಳುವಳಿಯಾಗಿ ಕೊಡುತ್ತಾ ಬಂದಿದ್ದಾರೆ.

ಕನಕಗಿರಿಯಲ್ಲಿ ಕನ್ನಡವೇ ಪ್ರಮುಖ ಭಾಷೆಯಾದರೂ ವಿವಿಧ ಭಾಷಿಕ ಸಮುದಾಯ, ವ್ಯವಹಾರಕ್ಕಾಗಿ ಬಹು ಭಾಷೆಗಳನ್ನಾಡುವವರಾಗಿದ್ದಾರೆ. ವಿದ್ಯಾವಂತಸಮುದಾಯ ಇಂಗ್ಲೀಷ್ ಪ್ರಭಾವಕ್ಕೆ ಒಳಗಾಗಿ ಕನ್ನಡದಲ್ಲಿ ಇಂಗ್ಲೀಷ್ ಪದಗಳನ್ನೇ ಹೆಚ್ಚಾಗಿ ಬೆರಸಿ ಮಾತನಾಡುತ್ತಾರೆ. ಒಂದು ರೀತಿಯಲ್ಲಿ ಇಂಗ್ಲೀಷ್ ಪದಗಳನ್ನು ಬೆರಸದೆ ಕನ್ನಡ ಮಾತನಾಡುವುದು ಅಸಾಧ್ಯ ಎನ್ನುವ ಸ್ಥಿತಿ ಇಲ್ಲಿದೆ. ಮಸೀದಿಗಳಲ್ಲಿ ಅರಬ್ಬಿ ಭಾಷೆ ಕಲಿಸುವುದರಿಂದ ಅರೇಬ್ಬಿಕ್ ಮಾತನಾಡುವ ಸುಶಿಕ್ಷಿತರಿದ್ದಾರೆ. ಕನ್ನಡವನ್ನು ಕಲಿತರೂ ಸಹ ಆಡು ಭಾಷೆಯಾಗಿ ಮರಾಠಿ ಭಾಷೆಯನ್ನು ಬಳಸುವ ಮರಾಠಿಗರಿದ್ದಾರೆ. ರಾಷ್ಟ್ರ ಭಾಷೆಯಾದ ಹಿಂದಿಯನ್ನು

ಕ್ಷತ್ರಿಯ ಸಮುದಾಯ ಬಳಸುತ್ತಾರೆ. ವಾಹನ ಚಾಲಕರು ಕನ್ನಡ ಬಲ್ಲವರಾಗಿದ್ದರೂ ಸಮಯಕ್ಕನುಸಾರವಾಗಿ ಹಿಂದಿ, ತೆಲುಗು ಮಾತನಾಡುತ್ತಾರೆ. ಸುತ್ತ ಮುತ್ತ ಇರುವ ಆಂದ್ರ ಕ್ಯಾಂಪಿನ ಪ್ರಭಾವದಿದಾಗಿ ತೆಲುಗು ಮಾತನಾಡುವವರು ಅನೇಕರಿದ್ದಾರೆ. ಕೊರವರು, ಲಂಬಾಣಿಗರು, ಸಾವಜಿ ಸಮುದಾಯದವರು ತಮ್ಮದೇ ಆದ ವಿಶಿಷ್ಠ ಭಾಷೆಯನ್ನು ಆಡುತ್ತಾರೆ. ಇವುಗಳಿಗೆ ಲಿಪಿ ಇರುವುದಿಲ್ಲ. ಹೀಗೆ ನಾನಾ ಭಾಷಿಕ ಸ್ಥಳ ಇದಾಗಿದೆ ಎನ್ನಬಹುದು.

ಕನ್ನಡ ಭಾಷಿಕ ಜನಪದರು ಮಹಾ ಪ್ರಾಣಾಕ್ಷರವನ್ನು ತೇಲಿಸಿ ಅಲ್ಪ ಪ್ರಾಣಾಕ್ಷರವಾಗಿ, ಅಥವಾ ವ್ಯಂಜನಾಕ್ಷರವನ್ನು ಸ್ವರಾಕ್ಷರವಾಗಿ ಬಳಸಿ ಮಾತನಾಡುತ್ತಾರೆ. ಖಡ್ಗ-ಕಡ್ಗ, ಭಾಷೆ-ಬಾಷೆ, ಝರಿ-ಜರಿ, ಹಾಲು-ಆಲು, ಹಣ್ಣು-ಅಣ್ಣು ಇತ್ಯಾದಿಯಾಗಿ ಪದ ಬಳಕೆ ಅಧಿಕವಾಗಿದೆ. ಜೊತೆಗೆ ಆತ, ಈತ, ಆಕಿ, ಈಕಿ, ಆಯಪ್ಪ, ಆಯಮ್ಮ ಎಂಬ ರೂಪಗಳು ಹೆಚ್ಚಾಗಿ ಬಳಕೆಯಲ್ಲಿವೆ.

ಇವೆಲ್ಲ ಗಮನಿಸಿದಾಗ ಕನಕಗಿರಿ ಒಂದು ಉಪಭಾಷೆಗಳ ಸಂಗಮ ಎನ್ನಬಹುದು. ಧಾರವಾಡ ಕಡೆಗೆ ಕಾಳಿಗೆ ವಗ್ಗರಣೆ ಕೊಟ್ಟು ಮಾಡಿದ್ದರೆ ಕಾಳುಪಲ್ಯ ಎನ್ನುತ್ತಾರೆ. ಅದನ್ನೆ ಇಲ್ಲಿ ರೊಟ್ಟಿ ಕಾಳು ಎನ್ನುತ್ತಾರೆ. ಇಂತಹ ನೂರಾರು ವೈಶಿಷ್ಟ್ಯತೆಗಳನ್ನು ಇಲ್ಲಿ ಕಾಣಬಹುದು.

ಆಡುಭಾಷೆ ಮತ್ತು ಶಿಷ್ಠ ಭಾಷೆಗಳಲ್ಲಿನ ವ್ಯಾತ್ಯಾಸ, ಹಾಗೂ ಆಡು ಭಾಷೆಯ ಸೊಗಡು ಇಲ್ಲಿ ಹೇಗೆ ಎಂಬುದನ್ನು ಈ ರೀತಿಯಾಗಿ ನೋಡಬಹುದಾಗಿದೆ.

ಶಿಷ್ಠ ಕನ್ನಡ	ಆಡು ಮಾತಿನ ಕನ್ನಡ
ಜೋಪಾನ	ಜ್ವಾಪಾನ, ಜತ್ನ
ಇದ್ದಾನೆ	ಅದಾನ, ಐದಾನ
ಗೆಲ್ಲು	ಗೆದಿ
ಕಲ್ಲು	ಕೊಲ್ಲು
ತೋಟ	ತ್ವಾಟ
ತಡೆ	ತಡ್ಕ, ತಡಿ
ಸಾಕಷ್ಟು ಇಲ್ಲ	ಬಾಳ ಇಲ್ಲ, ಜಗ್ಗಿ ಇಲ್ಲ
ಸಿಗುವುದಿಲ್ಲ	ಸಿಗಂಗಿಲ್ಲ,
ಇಷ್ಟು	ಈಸು, ಈಟು
ಅಷ್ಟು	ಆಸು
ಒಷ್ಟು	ಓಸು
ಎಷ್ಟು	ಏಟು

ಗಳಿಸುವುದು	ಸಂಪಾದಿಸೋದು
ಸೌಲಭ್ಯ	ಸೌಲತ್ತು
ದೋಸೆ	ದ್ವಾಸಿ
ವ್ಯವಹಾರ	ಯವಾರ
ಕನಕಗಿರಿ	ಕನಗೇರಿ, ಕನಗೀರಿ
ಕೋಟೆ	ಕ್ವಾಟಿ
ಸಂತೆ	ಸೆಂತಿ
ಶಾಲೆ	ಸಾಲಿ
ಏಣಿ	ನಿಚ್ಚಣಿಕೆ
ಕಡ್ಡಿಪೆಟ್ಟಿಗೆ	ಬೆಂಕಿ ಪಟ್ನ, ಬೆಂಕಿ ಪೆಟಿಗಿ
ಅಮ್ಮ	ಯಮ್ಮ
ಅಕ್ಕ	ಯಕ್ಕ
ಅಪ್ಪ	ಯಪ್ಪ
ತಲೆ	ತಲಿ, ತೆಲಿ
ಹೊಟ್ಟೆ	ವಟ್ಟಿ
ಯುಗಾದಿ	ಉಗಾದಿ
ತೆಂಗಿನಕಾಯಿ	ಟೆಂಗಿನಕಾಯಿ
ಬರುತ್ತೇನೆ	ಬರ್ರ್ತ್ನಿ
ಇರುತ್ತೇನೆ	ಇರ್ತೀನಿ
ಕಬ್ಬಿಣ	ಕೆಬ್ನ
ಕೊಬ್ಬರಿ	ಕೊಬ್ರಿ
ಮೆಟ್ಟಿಲು	ಪಾಂಟಣಿಗಿ
ನೇಗಿಲು	ಗಳೇವು
ಇಟ್ಟಿಗೆ	ಎಳ್ಳಿ
ಮನೆ	ಮನಿ
ಹುಚ್ಚ	ತಿಕ್ಕ

ಊಟಮಾಡು	ಉಂಬು
ತಿನ್ನು	ತಿಂಬು
ಗೂಡು	ಗುಣೇವು
ಮುದಕರು	ಮುದೇರು
ಯುವವಯಸ್ಸಿನವರು	ಹರೇದೋರು
ಉಡುಗೊರೆ	ಮುಯ್ಯ, ಆಯರ್
ಗುರುತು	ಗುರ್ತು
ಹೂ	ಉವ್ವ, ಹೂವ
ಮುಡಿದುಕೋ	ಮುಡ್ಕೊ
ನಿಲ್ಲುವುದಿಲ್ಲ	ನಿಂದ್ರಗಿಲ್ಲ
ಹೋಗುತ್ತಾನೆ	ಹೊಂಟಾನ
ಮಲಗುವುದಿಲ್ಲ	ಮಕ್ಕಣಂಗಿಲ್ಲ, ಮಲಗಂಗಿಲ್ಲ
ಮೋಡ	ಮಾಡ
ವೇಳೆ	ವ್ಯಾಳೆ, ಯಾಳ್ಯೇವು
ನೇತು ಹಾಕು	ಸಿಗ್ಯಾಕು
ಬೆಳಗಿನ ವೇಳೆ	ಬೆಳಗಾಮುಂಜಾನೆ
ಬನ್ನಿರಿ	ಬರ್ರಿ
ಬೇಗನೆ	ಜಲ್ದಿ, ಗಡಾನ
ಬೇಸಗೆ	ಬ್ಯಾಸ್ಗಿ
ಹಾಲು	ಆಲು
ತಲೆದಿಂಡು	ತಲಿಗಿಂಬು, ದಿಂಡು
ಕೆಳಗೆ	ಅಡೇಲೆ, ಅಡ್ಯಾಕ
ಚಡ್ಡಿ	ಚಣ್ಣ
ಜೋಲಿ	ಕುಬುಸ
ಮುಖ	ಮಕ
ಚೆನ್ನಾಗಿದೆ	ಬೇಸೈತಿ, ಚಲೋಐತಿ

ಬಸವಣ್ಣ	ಬಸಣ್ಣ
ವಯ್ಯಾರ	ವಗಲು
ನಾಚಿಕೆ	ನಾಚ್ಗಿ
ಅವಳು	ಆಕಿ
ಇವಳು	ಈಕಿ
ಅವನು	ಆತ, ಅವ್ನು
ಕಚ್ಚು	ಕಡಿ
ವೇಗವಾಗಿ	ಜೋರಾಗಿ
ಪೈಖಾನೆ	ಪೈಖ್ಯಾನಿ, ದೊಡ್ಡಿ
ಇದೆ	ಐತಿ
ಈಕಡೆ	ಇತ್ಲಾಗ
ಆಕಡೆ	ಅತ್ಲಾಗ
ನಡೆದಾಡು	ಅಡ್ಯಾಡು
ಬಾರ	ವಜ್ಜಿ
ಸ್ವಚ್ಛ	ವಾಣ್ಣ
ಸ್ವಲ್ಪ	ತಟಗು, ರವೊಷ್ಟು
ಬಸರು	ದಿಮ್ಮನಸೇಳು

ಹೀಗೆ ಇನ್ನೂ ಅನೇಕ ಪದಗಳು ನಮಗೆ ಸಿಗುತ್ತವೆ. ಇಲ್ಲಿ ಕೆಲವನ್ನು ಮಾತ್ರ ಪಟ್ಟಿ ಮಾಡಿದ್ದೇನೆ.

ಕನಕಗಿರಿಯ ಸಾಹಿತ್ಯವನ್ನು ಅವಲೋಕಿಸಿದಾಗ ಶಿಷ್ಟಸಾಹಿತ್ಯ ಹಾಗೂ ಜನಪದ ಸಾಹಿತ್ಯಗಳೆರಡು ನಮಗೆ ಸಿಗುತ್ತವೆ. ಹೀಗಾಗಿ ಎರಡು ಬೇರೆ ಬೇರೆ ಭಾಗಗಳಲ್ಲಿ ಸಾಹಿತ್ಯವನ್ನು ನೋಡಲು ಪ್ರಯತ್ನಿಸಿದ್ದೇನೆ.

೬.೨. ಶಿಷ್ಟ ಸಾಹಿತ್ಯ

ಕನಕಗಿರಿಯಲ್ಲಿ ದೊರೆಯುವ ಸಾಹಿತ್ಯವನ್ನು ಅವಲೋಕಿಸುವಾಗ ನಾವು ಎರಡು ದೃಷ್ಟಿಯಿಂದ ಇಲ್ಲಿನ ಸಾಹಿತ್ಯವನ್ನು ಅವಲೋಕಿಸಬೇಕಾಗುತ್ತದೆ. ಕನಕಗಿರಿಯಲ್ಲೇ ಬದುಕಿ, ಬಾಳಿದವರು ರಚಿಸಿದ ಸಾಹಿತ್ಯ ಒಂದಾದರೆ, ಕನಕಗಿರಿಗೆ ಭೇಟಿ ನೀಡಿ ಆಗ ರಚಿಸಿದ ಸಾಹಿತ್ಯ ಇನ್ನೊಂದು. ಇಲ್ಲಿ ದೊರೆಯುವ ಸಾಹಿತ್ಯದಲ್ಲಿ ಕನಕಾಚಲ ದೈವವನ್ನು ಕೊಂಡಾಡುವ, ಕನಕ ಮುನಿಯ ತಪಶ್ಯಕ್ತಿಯನ್ನು ಕೊಂಡಾಡುವ, ಕನಕಗಿರಿ ನಾಯಕರ ಭಕ್ತಿ, ಬದುಕು, ಇತಿಹಾಸವನ್ನು ನೆನಪಿಸುವ, ಅಂಶಗಳು ಅಧಿಕ ಪ್ರಮಾಣದಲ್ಲಿ

ಕಂಡು ಬರುತ್ತವೆ. ಅಲ್ಲದೆ ಇಲ್ಲಿಯ ಜನ ಜೀವನ, ಕಲೆ, ಸಂಸ್ಕೃತಿ, ಆಚಾರ-ವಿಚಾರ, ಸಂಪ್ರದಾಯಗಳನ್ನೊಳಗೊಂಡಂತೆ ಇನ್ನೂ ಅನೇಕ ವಿಚಾರಗಳನ್ನು ಅನಾವರಣಗೊಳಿಸಿಕೊಂಡು ಶಿಷ್ಟ ಸಾಹಿತ್ಯ ಜನಜನಿತವಾಗಿದೆ.

ಸ್ಕಂದ ಮಹಾ ಪುರಾಣದ ತುಂಗಾಮಹಾತ್ಮೆಯಲ್ಲಿ ಕನಕಗಿರಿ ಸ್ಥಳವರ್ಣನೆ, ಕನಕಾಚಲಪತಿ ದೇವರ ಅಷ್ಟೋತ್ತರ ಶತನಾಮ ಸ್ತೋತ್ರವಿದೆ. ಕನಕಾಚಲನನ್ನು 'ಸ್ವರ್ಣಾದೀಶ,' 'ಸ್ವರ್ಣಗಿರೀಶ್ವರ,' 'ಕನಕಾಚಲವಾಸಿ' ಎಂಬಿತ್ಯಾದಿಯಾಗಿ ಉಲ್ಲೇಖವಿದೆ.

ಶೌನಕಾದಯಃ ಊಚುಃ

ಅಸ್ಮಾಭಿಃ ಸರ್ವನಾಮಿ ಶ್ರುತಾನಿ ಜಗದೀಶಿತುಃ |

ಇದಾನೀಂ ನಾರಸಿಂಹಸ್ಯ ಕನಕಾಚಲ ವಾಸಿನಃ ||

ನಾಮಾನಿ ಸರ್ವದುಖೌ ಘಶಮಿತಾನಿ ಸುಖಾನಿಚ

ಸಹಪ್ರಾಣಿ ಅಷ್ಟೋತ್ತರ ಶತಾನಿಚ ||

ಅಶ್ಯ ಶ್ರೀ ಸ್ವರ್ಣಾದೀಶಾಷ್ಟೋತ್ತರ

ಎಂಬಿತ್ಯಾದಿಯಾಗಿ ಅಷ್ಟೋತ್ತರ ಶತನಾಮ ಸ್ತೋತ್ರಗಳನ್ನು ಸ್ಕಂದ ಪುರಾಣದಲ್ಲಿ ಕಾಣಬಹುದಾಗಿದೆ.

ನಾಯಕರು ಸಾಹಿತ್ಯಕ್ಕೂ ವಿಶೇಷ ಪ್ರೋತ್ಸಾಹವನ್ನು ನೀಡಿರುವರು. ವಿಶೇಷವಾಗಿ ಹಿರೇರಂಗಪ್ಪ ನಾಯಕನ ಕಾಲವು ಸಾಹಿತ್ಯ ಬೆಳವಣಿಗೆಯ ಕಾಲವಾಗಿದೆ. ಇವನ ಆಸ್ಥಾನದಲ್ಲಿ ಚಿದಾನಂದವದೂತರು, ಜಯವೆಂಕಟಾಚಾರ್ಯರು, ಕವಿ ಶಿರುಗುಪ್ಪಿ ಸದಾಶಿವಯ್ಯ ಮುಂತಾದವರಿದ್ದರು.

ಪ್ರಸಿದ್ಧ ದೇವೀ ಪುರಾಣದ ಕರ್ತೃ ಅವಧೂತ ಪರಂಪರೆಯಲ್ಲಿ ಅಗ್ರಗಣ್ಯರಾಗಿರುವ ಚಿದಾನಂದಾವಧೂತರು ಆಂದ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಆದವಾನಿ ತಾಲ್ಲೂಕಿನ ಹಿರೇ ಹರಿವಾಣ ಗ್ರಾಮದವರು. ಗಂಗಾವತಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ನೆಲೆಸುತ್ತಾ ಅಲ್ಲಿನ ಕೊಂಡಪ್ಪ ಎಂಬ ಗುರುಗಳ ಶ್ಲಾಘನೆಯಿಂದ ಝುಂಕಪ್ಪ ಎಂಬ ಹೆಸರು ಚಿದಾನಂದ ಎಂದು ಬದಲಾಯಿತು. ಕೊಂಡಪ್ಪನವರು ತಮ್ಮ ಯೋಗ ಶಕ್ತಿಯನ್ನು ಧಾರೆಯೆರೆದರು, ಅಂದಿನಿಂದ ಎಲ್ಲಾ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಹಂಪೆಗೆ ಬಂದರು. ಮತ್ತೆ ಕೊಂಡಪ್ಪನವರ ಅನುಗ್ರಹದಿಂದ ಅವಧೂತ ಸಿದ್ಧ ಪುರುಷರಾದರು. ಇಂದಿನ ಅಂಭಾಮಠ ಇವರು ಸಾಕ್ಷಾತ್ಕರಿಸಿಕೊಂಡ ಸ್ಥಳವಾಗಿದೆ. ಮುಂದೆ ಕನಕಗಿರಿಗೆ ಬಂದು ಸು. ಎಂಟು ಕೃತಿಗಳನ್ನು ರಚಿಸಿದರು. ಅವುಗಳೆಂದರೆ ಜ್ಞಾನಸಿಂಧು, ದೇವಿಮಹಾತ್ಮೆ ಪುರಾಣ, ಕಾಮವಿಡಂಬನೆ, ಬಗಳಂಬಾಸ್ತೋತ್ರ, ಚಿದಾನಂದರ ವಚನ, ಪಂಚೀಕರಣ, ತತ್ವ ಚಿಂತಾಮಣಿ, ನವಚಕ್ರಕಲಾರೇಖಾ ಲಕ್ಷಣ.

ಜ್ಞಾನಸಿಂಧು, ಇದು ಭಾಮಿನಿ ಷಟ್ಪದಿಯಲ್ಲಿದ್ದು ೪೯ ಅಧ್ಯಾಯದಲ್ಲಿ ೩೬೨೧ ಪದ್ಯಗಳಿವೆ. ಶಿವನು ಷಣ್ಮುಖನಿಗೆ ಆಧ್ಯಾತ್ಮ ಬೋಧನೆ ಮಾಡಿದಂತೆ ರಚನೆಯಾಗಿದೆ. ದೇವಿಮಹಾತ್ಮೆ ಇದು ಸಂಸ್ಕೃತ ಸಪ್ತಶತಿಯ ಭಾಷಾಂತರವಾಗಿದ್ದು, ಈ ಭಾಗದಲ್ಲಿ ದೇವಿ ಪುರಾಣವೆಂದು ಪ್ರಸಿದ್ಧಿಯಾಗಿದೆ. ದಸರಾ

ಹಬ್ಬದ ನವರಾತ್ರಿಗಳಂದು ಪ್ರತಿನಿತ್ಯ ಈಗಲೂ ಪುರಾಣದಲ್ಲಿ ಈ ಕೃತಿಯನ್ನು ಬಳಸಿಕೊಳ್ಳುತ್ತಾರೆ. ಕನಕಗಿರಿಯಲ್ಲಿ ಇವರ ಸಮಾದಿ ಸ್ಥಳವಾದ ಚಿದಾನಂದಾವದೂತ ಮಠವನ್ನು ಈಗಲೂ ನೋಡಬಹುದಾಗಿದೆ.

ಕನಕಗಿರಿಯವರೇ ಆದ ಜಯವೆಂಕಟಾಚಾರ್ಯರು ಸು. ೧೭೨೭ರಲ್ಲಿ ಬಾಳಿಬದುಕಿದವರು. ಇವರ ಸಾಹಿತ್ಯಕ ಸಾಧನೆ ಗಮನಾರ್ಹವಾದುದು. ವಿರಳವಾಗಿರುವ ದಂಡಕ ಹಾಗು ಭಟ್ಟಂಗಿಗಳ ಕರ್ತೃ. ಒಂದು ಘಳಿಗೆಯಲ್ಲಿ ನೂರು ಶ್ಲೋಕ ರಚಿಸಬಲ್ಲ ಶಕ್ತಿ ಇರುವುದಾಗಿ ಹೇಳಿಕೊಂಡುದ್ದಾರಾದರು ಒಂದು ದಂಡಕ ೨೮ ಭಟ್ಟಂಗಿಗಳು ಮಾತ್ರ ಈಗ ಉಪಲಬ್ಧ. ಸೋಮಾರಿಗಳು, ಚಂಚಲಚಿತ್ತರೂ ಆದ ಇವರಿಗೆ ಕನಕಗಿರಿಯ ಸಂಜೀವಮೂರ್ತಿ ಪ್ರಾಣದೇವರು ಅನುಗ್ರಹಿಸಿದನಂತೆ. ಅಂದಿನಿಂದ ಇವರು ಧೀಮಂತ ಪಂಡಿರಾದರೆಂದು ಹೇಳಲಾಗುತ್ತದೆ.

ಒಮ್ಮೆ ಮುಸ್ಲಿಂ ನ್ಯಾಯಾಧೀಶರೆದುರಿಗೆ ನಿಲ್ಲಬೇಕಾದ ಸಂದರ್ಭಬಂತು. ಸಮಯ ಸ್ಫೂರ್ತಿಯಿಂದ ದ್ವೈತ ಮತ್ತು ಇಸ್ಲಾಂ ಸಮನ್ವಯವನ್ನು ಈತ ಸಾರಿದ ರೀತಿ ಕುತೂಹಲಕಾರಿಯಾಗಿದೆ.

ಅಲ್ಲಾ ದೇವೋ ದೇವ ಪೂಜಾ ನಮಾಜಾ |
ಕಾಜೀ ವಿದ್ವಾನ್ ಪಂಡಿತಃ ತತ್ರ ಮುಲ್ಲಃ ||

ಪುರಾಣಃ ಕುರಾನಃ ಕಿತಾಬಂ ಚ ಶಾಸ್ತ್ರ
ಬಾಪಾ ಭೇದೋ ನೈವ ಸಂಸ್ತ್ರೇಷು ಭೇದಃ ||

ಈತನ ಭಟ್ಟಂಗಿಗಳಲ್ಲಿ ಕನಕಗಿರಿಯ ಅನೇಕ ದೈವಗಳನ್ನು ನೆನೆದಿರುವುದು ಕಂಡುಬರುತ್ತದೆ. ನಾಯಕರ ಭಕ್ತಿಯನ್ನು ಮೆಚ್ಚಿ ಕಾಪಾಡಿದ ದೇವರ ಮಹಿಮೆಯನ್ನು ಕೊಂಡಾಡಿರುವುದು ಭಟಂಗಿಗಳಲ್ಲಿ ಕಾಣಬಹುದಾಗಿದೆ.

ರಾವಣ ಕುಂಭಕರ್ಣ ಮೊದಲಾಗಿಹರೆಲ್ಲರ ನುಗ್ಗು ಮಾಡಿ ಆ |
ದೇವಿಗೆ ಚೂಡರತ್ನ ತೋರ್ದಿ ಸಮರ್ಥ ಬಾಪುರೇ ಸಂ ||
ಜೀವನ ಕಾಯಿದು ತಂದ ನಮ್ಮ ಕನಕಾದ್ರಿಪ ||
ರಾಮ ಪದಾಬ್ಜ ಸೇವಕಾ •

ಇಲ್ಲಿ ಕನಕಗಿರಿಯ ಪ್ರಾಣದೇವರಾದ ಸಂಜೀವ ಮೂರ್ತಿಯನ್ನು, ಕನಕಾಚಲನನ್ನು ನೆನೆಯಲಾಗಿದೆ. ಇವರ ಲಕ್ಷ್ಮೀದೇವಿ ಭಟ್ಟಂಗಿಯಲ್ಲಿ

ನಾಡೊಳು ಹಿಂದಕ್ಕೊಮ್ಮೆ ಹಿರೇಕರ್ತನಿಗೆ ನೀ ಮೊಲೆ ಹಾಲುಣಿಸಿ
ರೂಢಿಗೆ ತಂದೆ ಎಂಬ ಬಿರುದಾವಳಿ ಲೋಕವೆಲ್ಲ
ಕೊಂಡಾಡಲು ಕೇಳಿ ನಿನ್ನಪಾದ ಪದ್ಮವಾಸೇರಿದನೊಬ್ಬ ರಾಶಿಯಂ
ಮಾಡದ ಹಾಗೆ ಮಾಡು ತಾಯಿ ಕನಕಾದ್ರಿಪ ರಂಗನ ಪಟ್ಟದೊಲ್ಲಭೇ ||

ಶರಧಿ ಸಮಾನ ವರಗುಜ್ವಲ ವಂಶಖ್ಯಾತ ಬೂವ ಹಿರೇ
ಉಡಚೇಂದ್ರ ಗುಣಸಾಂದ್ರ ಸುರೇಂದ್ರ ವೈಭವ
ಹರಿಚರಣಾರವಿಂದ ಭೃಂಗ ಮದನ ಮಹೀಶನೊಳ್
ಹೃದಯಾಬ್ಜದಿ ನಿಂತು ಅಖಿಲೇಷ್ಟವಕೊಟ್ಟು ರಕ್ಷಿಸೋ

ಹೀಗೆ ಸಾಗುವ ಇವರ ಅನೇಕ ಭಟ್ಟಂಗಿಗಳನ್ನು ಕನಕಾಚಲನ ಮಹಿಮೆಯನ್ನು ಉಡಿಚ ನಾಯಕನಿಗೆ ಜೀವಕಳೆ ತುಂಬಿ ಕನಕರಾಯನು ಕಾಪಾಡಿದ ಘಟನೆಯನ್ನು ಭಕ್ತಿ ಪೂರ್ವಕವಾಗಿ ನೆನೆದಿರುವುದನ್ನು ಕಾಣಬುಹುದು.

ತಿಂಥಿಣಿ ಮೌನೇಶನು ಕನಕಗಿರಿಗೆ ಭೇಟಿ ನೀಡಿ, ಕನಕಗಿರಿಯ ವೈಭವವನ್ನು, ಕ್ಷೇತ್ರ ಮಹಿಮೆಯನ್ನು ಭಾವಪೂರ್ಣವಾಗಿ ವರ್ಣಿಸಿದ್ದಾರೆ.

ಕನಕಗಿರಿಯೆಂಬೊ ಘನದುರ್ಗ ಬಾಹ್ಯದಿ
ವನವಿರ್ದುದೆನ ಬಣ್ಣಿಪೆನು
ವೆನುತ ಸುಮಾವು ನೇರಲ ನೆಲ್ಲು ಬೆಳವಲ
ತನಿ ನೀರ ತೆಂಗು ಆಲರಳಿ

ಎಂಬ ಮೌನೇಶ್ವರ ಈ ವರ್ಣನೆಯಿಂದ ಕನಕಗಿರಿಯ ಅಂದಿನ ಪಕೃತಿ ಸಿರಿ ಸಂಪತ್ತು ಹೇಗಿತ್ತೆಂಬುದು ತಿಳಿಯುತ್ತದೆ.

ಇಲ್ಲಿಗೆ ಭೇಟಿ ನೀಡಿದ ಮೋಹನ ದಾಸರೂ ಸಹ ಕ್ಷೇತ್ರ ಮಹಿಮೆಯನ್ನು ಕೊಂಡಾಡದೆ ಬಿಟ್ಟಿಲ್ಲ.

ಕರುಣಿಸಯ್ಯ ಕಂಜಜನಯ್ಯ
ಕರುಣಿ ಹಿತವಯ್ಯ ಕನಕಾದ್ರಿ ನಿಲಯ

ಎಂಬುದಾಗಿ ವರ್ಣಿಸುತ್ತಾ ಸಾಗುತ್ತಾರೆ. ಪುರಂದರದಾಸರ ರಚನೆಯಲ್ಲೂ ಸಹ ಕನಕಗಿರಿಯ ಮಹಿಮೆ ಕಂಡುಬರುತ್ತದೆ.

ಕಾಮದೇವ ನೀನಲ್ಲದೆ ಜಗಕಿನ್ನಾವ ದೇವರುಂಟೆ
ದೇವರ ದೇವ ನೀನೆಂದು ನಂಬಿದೆ ಎನ್ನ
ಕಾಯೋ ಕನಕಾಚಲ ಕೃಷ್ಣ ಕರುಣದಿ.

ಅಶ್ರುಕವಿ ವಿ.ಸಿಂಗಾಚಾರ್ಯ "ಕನಕಮುನಿ ತಪಗೈದ ಕನಕಮಯ ಕಾಲತ್ರ ದಿನಕರ ತೇಜದಲಿ ದಿವ್ಯಕ್ಷೇತ್ರ...." ಎಂಬುದಾಗಿ ತಮ್ಮ ಕವಿತೆಯಲ್ಲಿ ಬರೆಯುತ್ತ ಕನಕಮುನಿಯ ತಪೋ ಮಹಿಮೆಯನ್ನು ನೆನಪಿಸುತ್ತಾರೆ.

ಜನಪ್ರಿಯ ಶ್ರೀ ಕೃಷ್ಣ ಪಾರಿಜಾತ ಸಾಂಗತ್ಯ ನಾಟಕದ ಮುಖಾಂತರ ಅಪರಾಳ ತಮ್ಮಣ್ಣ ವಿಶೇಷ ಗಮನ ಸೆಳೆಯುತ್ತಾರೆ. ವಿಜಯದಾಸರು ಕನಕಗಿರಿಯನ್ನು ಕಣ್ಣಾರೆ ಕಂಡ ಬಗ್ಗೆ ತಮ್ಮ ಸುಳಾದಿಗಳಲ್ಲಿ ಪ್ರಸ್ತಾಪಿಸುತ್ತಾರೆ.

ಕನಕರಾಯನ ದರುಶನ ಮಾಡಿದವರಿಗೆ

ಮನದೊಳಗಿದ್ದ ಮಹಾಭೀಷ್ಟಸಲ್ಲುವುದು - ಎನ್ನುತ್ತ

ಕನಕಗಿರಿಯ ಕ್ಷೇತ್ರ ಮಹಿಮೆಯನ್ನು ನೆನೆದಿದ್ದಾರೆ. ಇದೇ ರೀತಿಯಾಗಿ ಜಗನ್ನಾಥ ದಾಸರೂ ಸಹ ಇಲ್ಲಿನ ಕ್ಷೇತ್ರ ಮಹಿಮೆಯನ್ನು ಕೊಂಡಾಡಿದ್ದಾರೆ.

ಕನಕಗಿರಿಯವರೇ ಆದ ಜಯತೀರ್ಥ ರಾಜಪುರೋಹಿತರೂ ಸಹ ಸಾಹಿತ್ಯದ ದಿಗ್ಗಜರಲ್ಲೊಬ್ಬರು. ಕನಕಗಿರಿಯಲ್ಲಿ ಜನಿಸಿ, ಇಲ್ಲಿಯೇ ಶಿಕ್ಷಣ ಪಡೆದು ನಾಟಕರಂಗ ಕಟ್ಟಿ ಬೆಳಸಿದರು. ಬಡತನದಲ್ಲಿ ಬೆಳೆದು, ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸಿದರು. ಹೈದರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಸತ್ಯಾಗ್ರಹಿಗಳಾಗಿ, ಜೈಲುವಾಸಿಗಳಾಗಿ ಬದುಕಿನ ಸಾರ್ಥಕ ದಿನಗಳನ್ನು ಕಂಡವರು. ಗುಲ್ಬರ್ಗಾ ವಿಶ್ವವಿದ್ಯಾಲಯದ ಸ್ಥಾಪನಾ ಪೂರ್ವ ಆಡಳಿತಗಾರರಾಗಿ, ನಂತರ ಆಡಳಿತಾಧಿಕಾರಿಯಾಗಿ, ಜಿಲ್ಲಾಧಿಕಾರಿಗಳಾಗಿ ಅನೇಕ ಹುದ್ದೆಗಳನ್ನಲಂಕರಿಸಿ ಪುರೋಹಿತರು ಸಾಹಿತ್ಯ ರಚನೆಯಲ್ಲೂ ವೈಶಿಷ್ಟ್ಯತೆಯನ್ನು ಪ್ರತಿಭೆ ಪಾಂಡಿತ್ಯವನ್ನು ಮೆರೆದಿದ್ದಾರೆ. ಇವರು ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಪುರೋಹಿತರು ಸಾಹಿತ್ಯ ಪ್ರಕಾರದಲ್ಲಿ ಕೈ ಆಡಿಸದ ಕ್ಷೇತ್ರವಿಲ್ಲ ಎನ್ನಬಹುದು. ಕಥೆ, ಕಾವ್ಯ ಲೇಖನ, ವಿಮರ್ಶೆ ಸಂಪಾದನೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದರು, ಹಾಲುಚೇನು, ಸುಳಿಗಾಳಿ, ಜೊಹರಾ, ಕಡಲತೊಳ ಎಂಬ ಕಾದಂಬರಿಗಳನ್ನು, ಪಾರವ್ವನ ಪಂಚಾಯತಿ, ರೋಹಿಣಿ, ಶಿಥಿಲ ಶಿಲೆ, ಮೌಲ್ಯಗಳು ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಇವರ ಕನ್ನಡ ತೀರ್ಪುಗಳು ಕೃತಿಯು ಕೇಂದ್ರ ರಾಜ್ಯ ಭಾಷಾ ಆಯೋಗದಿಂದ ಒಂದು ಅದ್ವಿತೀಯ ಮೌಲಿಕ ಗ್ರಂಥ ಎಂದು ಪ್ರಶಂಶಿಸಲ್ಪಟ್ಟಿದೆ. ಇವಲ್ಲದೆ ನೂರಾರು ಬಿಡಿ ಲೇಖನಗಳನ್ನು, ಪ್ರಬಂಧಗಳನ್ನು ಬರೆದಿದ್ದಾರೆ. ಇವೆಲ್ಲವುಗಳಿಗಿಂತ ಮುಖ್ಯವಾಗಿ ಶ್ರೀ ಕನಕಾಚಲ ಲಕ್ಷ್ಮೀನರಸಿಂಹ ದೇವರ ಚರಿತೆ ಎಂಬ ಕೃತಿಯು ಸ್ಥಳೀಯ ದೈವಗಳ ಮಹಿಮೆಯನ್ನು ಸಾರುವ ಹಿನ್ನೆಲೆಯಲ್ಲಿ ವಿಶೇಷ ಮಹತ್ವವನ್ನು ಪಡೆದಿದೆ.

ಗಂಗಾವತಿಯ ಜಯರಾಮ್ ಸರಜೋಶಿ ಅವರು ಶ್ರೀಮತ್ ಕನಕಾಚಲ ಲಕ್ಷ್ಮೀ ನರಸಿಂಹ ಮಹಾತ್ಮ್ಯೆ ಎಂಬ ಕೃತಿಯಲ್ಲಿ ಕನಕಗಿರಿಯ ಕನಕಾಚಲಪತಿ ದೇವರ ಪೌರಾಣಿಕ, ಐತಿಹಾಸಿಕ, ಶಾಸನೋಕ್ತ ಮತ್ತು ಕರ್ನಾಟಕ ಹರಿದಾಸ ಸಾಹಿತ್ಯೋಕ್ತ ಚರಿತ್ರೆಗಳ ತೌಲನಿಕ ಅಧ್ಯಯನವನ್ನು ಮಾಡಿದ್ದಾರೆ. ಸ್ಥಳೀಯರಾದ ದುರ್ಗಾದಾಸ್‌ಯಾದವರವರು ಕನಕಗಿರಿಯ ಕುರಿತಾಗಿ ಅನೇಕ ಬಿಡಿಕವಿತೆಗಳನ್ನು ರಚಿಸಿದ್ದಾರೆ. ಡಾ.ಶರಣಬಸಪ್ಪ ಕೋಲ್ಕಾರವರು ಕನಕಗಿರಿ ಚರಿತ್ರೆ ಮತ್ತು ಕಲೆ, ವಾಸ್ತುಶಿಲ್ಪ ಎಂಬ ಎಂಫಿಲ್ ಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ. ಕನಕಗಿರಿಯವರೇ ಆದ ಪತ್ರಕರ್ತ, ಸ್ನೇಹಿತ ಅಲ್ಲಾಗಿರಿರಾಜ್‌ರವರು ಪುಣ್ಯಕ್ಷೇತ್ರ ಕನಕಗಿರಿ ಎಂಬ ಕಿರು ಹೊತ್ತಿಗೆಯನ್ನು ದುರುಗಪ್ಪ ಮಾಳೆಯವರು ಕನಕಗಿರಿ ನಾಯಕರು ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಹೀಗೆ ಇನ್ನೂ ಅನೇಕ ಬಿಡಿಲೇಖನಗಳು, ಕವಿತೆಗಳು, ಪ್ರಬಂಧಗಳು ಇನ್ನೂ ಮುಂತಾದ ಪ್ರಕಾರಗಳಲ್ಲಿ ಕನಕಗಿರಿಯು ತನ್ನದೇ ಆದ ವಿಶಿಷ್ಟ ಚಿರಸ್ಮರಣೀಯ ಕೊಡುಗೆಯನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟಿದೆ ಎನ್ನಬಹುದು.

೬.೩. ಜನಪದ ಸಾಹಿತ್ಯ

ಮನುಷ್ಯನ ಬಹುಮುಖ್ಯ ಮೂಲ ಭೂತವಾದ ಸ್ಥಾಯಿಭಾವವೇ ಪ್ರೀತಿ. ಜೀವನವಿಡೀ ಈ ಪ್ರೀತಿಯ ಆವರಣದಲ್ಲಿಯೇ ಹುದುಗಿಕೊಂಡಿದೆ. ಈ ಭೂಮಿಗೆ ತನ್ನ ಅಸ್ಥಿತ್ವ ಕಂಡುಕೊಂಡಾಗಿನಿಂದ ಮಣ್ಣಾಗಿ ಹೋಗುವವರೆಗೂ ಹಲವಾರು ಮಜಲುಗಳ ಮಧ್ಯೆ ಬದುಕುವ ಮಾನವನಿಗೆ ಹೊಸ ಹೊಸ ಅನುಭವಗಳ ಸವಿ ಅಂದರೆ ಪ್ರೀತಿ, ಪ್ರೇಮ, ಕಾಮ, ಮತ್ಸರ, ಮೋಹ ಹೀಗೆ ಹಲವಾರು ಅನುಭವಗಳನ್ನು ಪಡೆಯುತ್ತಾ ಬದುಕು ಸವೆಸುತ್ತಾನೆ. ಈ ಅನುಭವಗಳ ರಾಶಿ ಫಲವೇ ಜನಪದ ಸಾಹಿತ್ಯ, ಪ್ರತಿಯೊಬ್ಬ ಜನರ ಜೀವನಾನುಭವದ ಈ ಹಾಡನ್ನು ನಾವೀ ಸಾಹಿತ್ಯದಲ್ಲಿ ಕಾಣುತ್ತೇವೆ. ಕನಕಗಿರಿ ಪರಿಸರದಲ್ಲಿ ಜನಪದ ಗೀತೆ, ತ್ರಿಪದಿ, ಸೋಬಾನೆ ಪದಗಳು, ಕತೆ, ಗಾದೆ, ಒಗಟು, ಒಡಪು, ಶಿಶುಗೀತೆಗಳು ಹೇರಳವಾಗಿ ಸಿಗುತ್ತವೆ.

೬.೩.೧. ಜನಪದ ಗೀತೆಗಳು

ಕನಕಗಿರಿಯಲ್ಲಿ ಜನಪದ ಗೀತೆಗಳಾದ ಹೊಸಗೆ ಹಾಡು, ಹೂಮುಡಿಸುವ ಹಾಡು, ಬೀಸುವಹಾಡು, ಹಂಪಿಯ ಹಾಡು, ಮಳೆರಾಯನ ಹಾಡು, ಕನಕರಾಯ ಮತ್ತು ಪಾಳೇಗಾರರ ಮೇಲಿನ ಹಾಡು, ವಿಜಯನಗರ, ಆನೆಗುಂದಿ ಸಂಸ್ಥಾನದ ಹಾಡುಗಳು ಹೀಗೆ ಜನಪದ ಹಾಡುಗಳ ಖಣಿಯೇ ಇಲ್ಲಿದೆ. ಜನಪದ ಹಾಡುಗಳು ವಯೋವೃದ್ಧರ ಬಾಯಲ್ಲಿ ಮಾತ್ರ ಗುನುಗುತ್ತಿವೆ. "ನಮ್ಮ ಹಾಡನ್ನ ಈಗಿನೋರು ಯಾರು ಕೇಳ್ತಾರೆ, ಯಾರು ಕಲಿತಾರೆ?" ಎಂಬ ಅವರ ಮಾತಿನಲ್ಲಿ ವಿಷಾದ ಇದೆ. ಅಷ್ಟೆ ಅಲ್ಲ ಜನಪದ ಹಾಡುಗಳ ಅವನತಿಯ ಲಕ್ಷಣವೂ ಇದೆ. ಆಧುನಿಕತೆಯ ಭರಾಟೆ ಈ ಎಲ್ಲ ಅವಗಡಗಳಿಗೆ ಮೂಲ ಕಾರಣ ಎನ್ನಬಹುದು.

ಜನಪದ ತ್ರಿಪದಿಗಳು

ಕನಕಗಿರಿ ನಾಯಕರು ಹಾಗು ಕನಕಾಚಲಪತಿ ಲಕ್ಷ್ಮಿದೇವಿ ದೈವಗಳ ಕುರಿತಾದದ್ದು.

ಅಪ್ಪನ ತೇರಿಗೆ ಇಪ್ಪತ್ತು ಮಿಣಿ ಬಂದು
ಚಿಕ್ಕಿ ನಾಮದ ದೊರಿ ಬಂದು ಉಡಚಪ್ಪ ನಾಯಕ
ಚಪ್ಪಾಳೆ ಇಟ್ಟ ತೇರ ಎಳಿಸ್ಯಾನ
ಕನಕರಾಯನ ತೇರ ಕುಣಿಕುಣಿದು ಎಳಿವಾಗ
ಅಣಕಿ ನೋಡ್ಯಾಳ ಲಚಮವ್ವ ಗಂಡಗ
ಕಣಕದಾರುತಿ ಬೆಳಗ್ಯಾಳ
ಕನಗೇರಿ ಕಿಲ್ಲೇವು ಮಳ ಮಳ ತುರೇವು
ಮ್ಯಾಲ ಕಟ್ಟೈತಿ ಮಲಕೀಲೆ ಕನಕರಾಯನ
ತೇರು ಕಟ್ಟೈತಿ ಗಗನಕ

ಮಳೆಗಾಲಕ ಮಲ್ಲಿಗಿ ಚಳಿಗಾಲಕ ಚಂಡ ಹೂ
ಬೆಟ್ಟಿನ ಬೇಸಿಗಿಗಿ | ದವನದ ಕನಗೇರಿ
ಬಟ್ಟೆ ಬಯಲಾಗ ಮಾರ್‍ಯಾವ ||೪||

ಹೂವಿನ ಅಂಗಡೆಪ್ಪ ಹುಲಿಮುಖದ ಅಗಸೆಪ್ಪ
ಪಗಡಿ ಬಾಜಾರದಾಗ | ಕನಗೇರಿ ಬಜಾರದಾಗ
ಪಗಡಿ ಆಡ್ಯಾನ ಕನಕರಾಯ|| ||೫||
ದುಂಡೊಟ್ಟಿ ಕನಕರಾಯ ದಂಡೆಲ್ಲ ಇಳದೈತಿ
ತೊಂಡಿ ತೋರಪ್ಪನ | ಗುಡಿಮುಂದ ಲಚುಮಮ್ಮ
ದಂಡಿಗಾರುತಿ ಬೆಳಗ್ಯಾಳ|| ||೬||

ಹೀಗೆ ಮುಂದುವರೆಯುವ ಇಲ್ಲಿನ ತ್ರಿಪದಿಗಳಲ್ಲಿ ಅನೇಕ ಅಂಶಗಳು ನಿರೂಪಿತವಾಗಿವೆ. ಉಡಿಚಪ್ಪ ನಾಯಕ ದೈವೀ ಭಕ್ತನಾಗಿದ್ದುದರ ಬಗ್ಗೆ ಇಲ್ಲಿ ಅನೇಕ ಜನಪದ ದಂತ ಕತೆಗಳೇ ಇವೆ. ಹಾಗೆಯೇ ತ್ರಿಪದಿಗಳಲ್ಲೂ ಆತನ ಹೆಸರು ಹಾಗೂ ಆತನ ದೈವೀ ಭಕ್ತಿ ಹೇಗಿತ್ತು, ಕನಕರಾಯ ತನ್ನ ಭಕ್ತರನ್ನು ಹೇಗೆ ಸಲಹುತ್ತಿದ್ದ. ಭಕ್ತರ ಮೊರೆಯನ್ನು ಹೇಗೆ ಆಲಿಸುತ್ತಿದ್ದ ಎಂಬುದು ಕಂಡು ಬರುತ್ತದೆ. ಕನಕರಾಯನ ಜಾತ್ರೆಯೆಂದರೆ ಇಡೀ ಊರಿನ ಸಂಭ್ರಮವೇ ಆಗಿತ್ತು. ತೇರು ಬೀದಿ ಆ ದಿನ ಮಾಯಾ ಬಜಾರ್ ಆಗಿ ಜನಪದರ ಕಣ್ಣಿಗೆ ಕಾಣಿಸುತಿತ್ತು. ಗಗನೆತ್ತರಕ್ಕೆ ಕಾಣುವ ತೇರು ಜನರನ್ನು ಅಚ್ಚರಿಗೊಳಿಸಿತ್ತೆಂಬುದನ್ನು ಇಲ್ಲಿನ ತ್ರಿಪದಿಗಳು ಸಾರಿ ಹೇಳುತ್ತವೆ. ನಾಯಕರೆಂದರೆ ಜನರಿಗೆ ಅಚ್ಚುಮೆಚ್ಚು. ನಾಯಕರಿಗೂ ದೈವೀಭಕ್ತಿ ಮಾತ್ರವಲ್ಲದೆ ಪ್ರಜೆಗಳ ಯೋಗಕ್ಷೇಮ, ಗೌರವ, ಪ್ರೀತಿ ಇರುವುದನ್ನು ಈ ತ್ರಿಪದಿಗಳಿಂದ ಕಂಡುಕೊಳ್ಳಬಹುದಾಗಿದೆ.

ಕನಕರಾಯ ದೈವವು ಭಾವೈಕ್ಯತೆ ಮೂಡಿಸುವ ದೇವರೆಂದು ಎಲ್ಲರೂ ಕೊಂಡಾಡುತ್ತಾರೆ. ಹಿಂದೂ -ಮುಸ್ಲಿಂರಾದಿಯಾಗಿ ಎಲ್ಲ ಮತ ಪಂಥದವರಿಂದ ಪೂಜಿಸಲ್ಪಡುವ ದೈವವಾಗಿದ್ದಾನೆ. ಅಲ್ಲದೆ ಕನಕಗಿರಿಯ ತೇರು ಬೀದಿಯಲ್ಲಿರುವ ಅನೇಕ ದೈವಗಳು, ಜಾತ್ರೆ ಜನರ ಮನಸ್ಸನ್ನು ಸೂರೆಗೊಂಡಿವೆ. ಹೀಗಾಗಿ ದೈವಗಳು, ನಾಯಕರು, ಜಾತ್ರೆ, ಜನರ ಸಡಗರ, ಸಂಭ್ರಮ, ಆಚರಣೆಗಳು ಇಲ್ಲಿನ 'ಮಾಯಾಬಜಾರ' ಎಂಬ ಜನಪದ ಗೀತೆಯಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

ಕನಕರಾಯನ ತೇರು ದೇಶಕ ಬಲು ಜೋರು

ದಾಸಪ್ಪನೋರು ದೈವಕ್ಕ ಪಂಚಮೋರು

ಮಾಯಾ ಬಜಾರ ನೋಡೆ ಮಾತೀಲೆ ಕೊಂಡಾಡೆ

ಮೂರು ಅಗಸಿ ಊರ ನೋಡೆ

ಮೂರು ನಾಮದ ದೇವರ ನೋಡೆ

ಮಾಯಾ ಬಜಾರ ನೋಡೆ

ಗರುಡನ ಉಚ್ಚಾಯಿ ಗದ್ದುರಸಿ ಬರುವಾಗ

ಚೌರಾದ ಬಸವಿಯರು ಎಡಬಲ ಎಡಬಲ

ಮಾಯಾ ಬಜಾರ ನೋಡೆ

ಕರ್ಪೂರದ ಪಂಜಿನ ಬೆಳಕ ಗರುಡನ ಮ್ಯಾಲೆ ಕನಕ

ದಿನ ದಿನ ಸಡಗರ

ಮಾಯಾ ಬಜಾರ ನೋಡೆ.

ಕನಕರಾಯನ ತೇರು ಕುಣು ಕುಣುದು ಬರುವಾಗ

ಇಣಕಿ ನೋಡ್ಯಾಳ ಲಚುಮಮ್ಮ ಲಚುಮಮ್ಮ

ಮಾಯಾ ಬಜಾರ ನೋಡೆ

ಇಣಕಿ ನೋಡ್ಯಾಳ ಲಚುಮಮ್ಮ ತನ ಗಂಡಗ

ಕಣಕದಾರುತಿ ಬೆಳಗ್ಯಾಳ ಬೆಳಗ್ಯಾಳ

ಮಾಯಾ ಬಜಾರ ನೋಡೆ

ದೇವರ ಗುಡಿ ಮುಂದೆ ದ್ವಾರಪಾಲಕರ ಕಾವಲಿ

ಸ್ವಾಮಿಗುಡಿ ಮುಂದೆ ಸಡಗರ ಸಡಗರ

ಮಾಯಾ ಬಜಾರ ನೋಡೆ

ಪಾಪನಾಶನ ಕೊಂಡ ಪಾವನ ತೆಲಿಮುಂಡ

ಮಾಡಿದ ತೆಲಿಗುಂಡ ಆರುಗಾಲಿ ತೇರಕಂಡ

ಮಾಯಾ ಬಜಾರ ನೋಡೆ

ಬಜಾರಕ ಬಣ್ಣದ ಗುಡಿ ಚಪ್ಪರೆ ಹವಳದ ಕುಡಿ

ಸರ್ಪ ಇದ್ದಂತೆ ಸರಕಾರದ ಚಾವಡಿ

ಮಾಯ ಬಜಾರ ನೋಡೆ

ಹೊಟ್ಟೆ ಬೆನಕಪ್ಪ ಸೇರಿ ಗಟ್ಟುಳ್ಳ ನಾಯಕದಾರಿ

ಮಾಯಾಬಜಾರ ನೋಡೆ

ಹಾಲು ಆಡ ಊರು ಮಸರು ಆಡ ಊರು

ಕನಗೇರಿ ಗೊಲ್ಲರು ಆಡಕೂಸೆಲ್ಲ ಮಹಿಮರು ಮಹಿಮರು

ಮಾಯಾ ಬಜಾರ ನೋಡೆ

ರನ್ನರ ಗೊಲ್ಲರಗೇರಿ ಹನುಮ ನಿಲ್ಲದಲೆ ಮಲಿಯಮ್ಮನ

ಎಲ್ಲ ಬಲ್ಲಂತ ಕೆರಿಯ ದುರ್ಗಮ್ಮನ

ಮಾಯಾ ಬಜಾರ ನೋಡೆ

ಹೊತ್ತಲ ಹನುಮನ ನೀಟಾದ ಬಸವನ ಮಹಿಮಾ

ಪ್ಯಾಟಿ ಎಲ್ಲಮ್ಮನ ಪಂಪಾಪತಿ ಹುಣವಿ ಸೋಮ

ಮಾಯಾ ಬಜಾರ ನೋಡೆ

ಮೋನಪ್ಪಯ್ಯನ ಗಿಂಡಿ ಬಾವಿ ಜೇನ ತಿಂದಂಗ ಸವಿ

ವೆಂಕಟಪತಿ ಬಾವಿ ಹಣ್ಣು ಅಮೃತ ಕಾಯಿ

ಮಾಯಾ ಬಜಾರ ನೋಡ

ಅತಿ ಹಳ್ಳದ ಸ್ನಾನ ಚಿಕ್ಕ ಕನಕಪ್ಪನ ತೀರ್ಥದ ಪಾನ

ಲಚುಮಮ್ಮನ ಸೋಬಾನ ರಘುರಂಗ ಕೃಷ್ಣನ ಮಹಿಮ

ಮಾಯಾ ಬಜಾರ ನೋಡೆ

ಚಿದಾನಂದ ಪಾದಗಟ್ಟಿ ಸಂಜೀವ ಮೂರ್ತಿ

ಸತ್ಯ ಪ್ರತಾಪರ ಜಟ್ಟಿ

ಮಾಯಾ ಬಜಾರನೋಡೆ

ಸ್ವಾಮಿ ನಿನ ಮದವಿಗೆ ಏನೇನ ತರಬೇಕ

ಹೊನ್ನಿನ ಐರಾಣಿ ಪಟಗಳ ಪಟಗಳ

ಮಾಯಾ ಬಜಾರ ನೋಡೆ

ಹೊನ್ನಿನ ಐರಾಣಿ ಪಟಗಳ ದ್ಯಾಮಮ್ಮ

ಬಂಗಾರದ ಕಳಸ ಬೆಳಿಗ್ಯಾಳ ಬೆಳಿಗೆಗ್ಯಾಳ

ಮಾಯಾ ಬಜಾರ ನೋಡೆ

ಸುದ್ದಿ ಸುಂಕ್ಲಮ್ಮನ ದ್ಯಾನ ಯಮನೂರು ತೇರು ದಿನ

ಸಂಕಟ ಬಂದಾಗ ಯಂಕಟರಮಣ

ಮಾಯಾ ಬಜಾರ ನೋಡೆ

ಚಂದುಳ್ಳ ಗೋಪಿಗಂಡ ಹೋಳಿಗಿ ಉಂಡ

ನಂದಿಯ ಕೋಲು ಕಂಡ

ಮಾಯಾ ಬಜಾರ ನೋಡ

ತೊಂಡಿ ತೋರಪ್ಪನ ಕಂಟಿ ತೊಡಕೀಲಿ ಬಾಲಗಂಟಿ

ತೂಗತಲಿರವು ತೊಟ್ಟಿಲ ಕಣ್ಣಕಟ್ಟಿ,

ಮಾಯಾ ಬಜಾರ ನೋಡ

ದೈವೀ ಭಕ್ತಿಯನ್ನು ಮೆರೆಯುವ ಇತಿಹಾಸವನ್ನು ನೆನಪಿಸುವ ಸಾಂಸ್ಕೃತಿಕ ಬದುಕಿನ ಸಿರಿಯನ್ನು ನಿರೂಪಿಸುವ ಇಂತಹ ಅನೇಕ ಜನಪದ ಗೀತೆಗಳು ಇಲ್ಲಿ ಕಂಡುಬರುತ್ತವೆ.

ಹುಡುಗಿ ಮೈನೆರೆದಾಗ ಐದು ಅಥವಾ ಹನ್ನೊಂದು ಅಥವಾ ಹದಿನಾರು ದಿನಗಳವರೆಗೆ ಕೂಡಿಸಿ ಆರತಿ ಮಾಡಿ ಹೂ ಮುಡಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ

ಮೈನೆರತೆ ಮೈನೆರತೆ
ಏನುಂಡು ಮೈನೆರತೆ
ತುಪ್ಪಾ ಬಾನುಂಡು ಮೈಯ್ಯನೆರತೆ ಸೋ||

ತುಪ್ಪಾ ಬಾನುಂಡಿದ್ದೆ ಮತ್ತೀಳ್ಯೇವ
ಮೆಲದಿದ್ದೆ ಪುತ್ರಮ್ಮನ
ಫಲವ ಪಡೆದಿದ್ದೆ ಸೊ||

ಎಂದು ಹಾಡುವ ಸೋಬಾನೆ ಹಾಡುಗಳು ಇಲ್ಲಿ ಸಮೃದ್ಧವಾಗಿ ಸಿಗುತ್ತವೆ. ಮದುವೆ ಸಂದರ್ಭದಲ್ಲಿ ಹಾಡುವ ಸೋಬಾನೆ ಹಾಡುಗಳಿಗೂ ಇಲ್ಲಿ ಕೊರತೆಯೇನಿಲ್ಲ.

ಏರು ರನ್ನದೀರು ಏರು ಚಿನ್ನದೀರು
ಏರಿನ ತೆಳಗ ಎಲಿದ್ವಾಟ ಇರುವ ಮಾವಾ
ಕೇಳ್ಯಾನ ಹೊಸ ಸುದ್ದಿ ಸೋ||

ಹೊಸ ಸುದ್ದಿ ಕೇಳ್ಯಾನೆ ಮುಸಿನಗೆ ನಕ್ಕಾನೆ
ಎಸಳ ಕ್ಯಾದೀಗಿ ಕೊಯ್ಯ್ಯಾನೆ ಸೋ||

ಎಸಳ ಕ್ಯಾದಿಗೆ ಕೊಯ್ಸಿ ಸೂಸಗ ಕಟ್ಟಿ
ಸೊಸಿ ಇದ್ದ ಮನಿಗೆ ಕಳುವ್ಯಾನ ಸೋ||
ಕಟ್ಟಿ ರನ್ನದ ಕಟ್ಟಿ ಕಟ್ಟಿ ಚಿನ್ನದ ಕಟ್ಟಿ
ಕಟ್ಟೆಯ ತೆಳಗ ಎಲಿದ್ವಾಟ ಸೋ||

ಕಟ್ಟೆಯ ಎಲಿದ್ವಾಟದಾಗಿರುವ
ಅವರತ್ತಿ ಕೇಳ್ಯಾಳೆ ಹೊಸಸುದ್ದಿ ಸೋ||

ಹೊಸ ಸುದ್ದಿ ಕೇಳ್ಯಾಳೆ ಮುಸಿ ನಗಿ ನಕ್ಕಾಳೆ
ಮರಸ ಮಲ್ಲೀಗಿ ಕೊಯ್ಸಾಳ ಸೋ||

ಮಸರ ಮಲ್ಲಿಗಿ ಕಟ್ಟಿ ಕೊಯ್ಸಿ ಸೂಸಗ ಕಟ್ಟಿ
ಸೊಸಿ ಇದ್ದ ಮನಿಗೆ ಕಳುವ್ಯಾಳ ಸೋ||

ಅಂಡಬಂಡದ ಕುದುರಿ ಗೊಂಡೇದು ಲಗಾಮ
ದಂಡಿನ್ಯಾಗಿರುವ ದರಬಾರ ಸೋ||

ದಂಡಿನ್ಯಾಗಿರುವ ದರಬಾರ ಆಯಮ್ಮನ
ಗಂಡ ಕೇಳ್ಯಾನ ಹೊಸ ಸುದ್ದಿ ಸೋ||

ಹೊಸ ಸುದ್ದಿ ಕೇಳ್ಯಾನೆ ಮುಸನಗಿ ನಕ್ಕಾನೆ
ಮಸ್ಗಿ ಮುಂಡಾಸು ತರಿಸ್ಯಾನೆ ಸೋ||

ಮಸಗೀಯ ಮುಂಡಾಸು ತರಿಸ್ಯಾನ ಆ ಊರ
ತಳವಾರನ ಕೊಟ್ಟು ಕಳಿವ್ಯಾನ ಸೋ||

ಹೀಗೆ ಸಮೃದ್ಧವಾಗಿ ಕಂಡುಬರುವ ಮದುವೆಯ ಸಂದರ್ಭದ ಸೋಬಾನ ಹಾಡುಗಳನ್ನು ಚಲುವಾದೇರು, ಹರಿಜನರು ಹಾಗೂ ಇತರೆ ಶ್ರಮಿಕ ವರ್ಗದವರು ವೀರಶೈವರು, ಬ್ರಾಹ್ಮಣರ ಮದುವೆಗಳಲ್ಲಿ ಹೆಚ್ಚಾಗಿ ಹಾಡುತ್ತಾರೆ. ಸೋಬಾನೆ ಪದಗಳು ಮದುವೆಯ ರೀತಿ-ನೀತಿಗಳನ್ನು ನಿಯಂತ್ರಿಸುವ ವಿಧಿಗಳೂ ಹೌದು. ಇವು ಮಂತ್ರಪೂರ್ವಕ ನುಡಿಗಳಿದ್ದಂತೆ ಇಂಪಾದ ಸಂಗೀತವನ್ನು ಒದಗಿಸುವುದರ ಜೊತೆಗೆ ಮದುವೆ

ಆಚರಣೆಗಳ ಕ್ರಮತಪ್ಪದಂತೆ ಈ ಹಾಡುಗಳಲ್ಲಿ ವರ್ಣನೆಗಳು ಬರುತ್ತವೆ (ಪರಮಶಿವಯ್ಯ, ೧೯೭೮-೭೦) ಎಂಬ ವಿವರಣೆ ಇವೆ.

ಹೊಸ್ತಿಲ ಸಾರಿಸಿ ಮುತ್ತನೇರಿಸಿ
ಇಂದಿನೇನಾ ಇವರ ಮನಿಯಾಗ ಸೋ
ಇಂದು ಏನ ಇವರ ಮನಿಯಾಗ
ಮನೆಯ ರಂಬೇರ ಮೈನೆರೆದ ಸಡಗರ
ಎತ್ತ ಎರೆಯದ ಮುನ್ನ
ಪುತ್ರನ್ನೆರೆಯುವ ಮುನ್ನ
ತಾಯವ್ವ ನೀರ ಎರೆದಾಳೆ.

ಸಾಂಪ್ರದಾಯಿಕ ಪದಗಳನ್ನೂ ಸಹ ಇಲ್ಲಿ ವೈವಿಧ್ಯಮಯವಾಗಿ ಹಾಡುವವರಿದ್ದಾರೆ. ಬ್ಯಾಡರ ಈರಮ್ಮ, ಹೊನ್ನೂರಮ್ಮ ಕನಕಗಿರಿಯ ಪ್ರಮುಖ ಜನಪದ ಗಾಯಕರೆಂದೇ ಹೇಳಬೇಕಾಗುತ್ತದೆ. ಇದರಿಂದ ಸಾಕಷ್ಟು ಜನ ಮಹಿಳೆಯರು ಹಾಡುಗಳನ್ನು ಕಲಿತುಕೊಂಡಿದ್ದಾರೆ. ಇವರು ಹಾಡುವ ಹೂ ಮುಡಿಸುವ ಹಾಡುಗಳಲ್ಲಿ ರಾಮಾಯಣ ಮಹಾಭಾರತದ ಪಾತ್ರಗಳು, ಪತಿವೃತಾ ಸ್ತ್ರೀಯರ ಪಾತ್ರಗಳು ಇಣಕಿ ಹೋಗುತ್ತವೆ.

ಮುಡಸಿರಿ ಮಲ್ಲಿಗಿ ಸರಸಿಜಾಕ್ಷಿಗೆ ಬೇಗ
ಧರೆಯೊಳು ರಾಯಗಿರಿ ವರರಾಮಚಂದ್ರಗ
ವನಪ್ಪ ಸೀತಗ್ಹೂವಾ ಮುಡಿಸಿರೀಗಾ
ಮರಗು ಮಲ್ಲಿಗಿ ಜಾಜಿ ಸುರಗು ಸ್ಯಾವಂತೀಗಿ
ಸುರಿ ಪಾರಿಜಾತದೂವಾ ಮುಡಿಸಿರೀಗಾ
ಅತ್ತಿ ಕೌಶಲ್ಯದೇವಿ ಉತ್ತಮ ಸಾವಿತ್ರ
ಚಿಕ್ಕ ಜಾನಕಿಗೀಗ ಹೂವ ಮುಡಿಸಿರೀಗ

ಆರತಿ ಹಾಡು

ಸೀಮಂತ ಅಥವಾ ಸೀರಿ ಮಾಡುವ ಕಾರ್ಯಗಳಲ್ಲಿ ಗರ್ಭಿಣಿಗೆ ಕೊನೆಯಲ್ಲಿ ಆರತಿ ಬೆಳಗುವ ಪದ್ಧತಿ ಇದೆ. ಇಂತಹ ಸಂದರ್ಭಗಳಲ್ಲಿ ಯಾರಾದರು ಹಾಡು ಹಾಡಲೇಬೇಕು. ಈ ಹಾಡುಗಳಿಗೆ ಆರತಿ ಹಾಡು ಎಂದು ಕರೆಯುತ್ತಾರೆ. ಈ ಹಾಡುಗಳಲ್ಲಿ ದೈವೀಸ್ಮರಣೆ, ರಾಮಾಯಣ, ಮಹಾಭಾರತ, ಪುರಾಣ ಪುಣ್ಯಕತೆಗಳನ್ನು ನೆನಪಿಸುವ ಅಂಶಗಳನ್ನು ಹೆಚ್ಚಾಗಿ ಕಾಣಬಹುದು. ಧಾರ್ಮಿಕ ಸಮಾರಂಭಗಳಲ್ಲಿ ನಡೆಯುವ ಆರತಿ ಸಂದರ್ಭದಲ್ಲೂ ಇಂತಹ ಹಾಡುಗಳನ್ನು ಬಳಸುವುದುಂಟು. ಕನಕಗಿರಿಯ ಬೇಡರ ಈರಮ್ಮ ಇಂತಹ ಹಾಡುಗಳನ್ನು ಹಾಡುವುದರಲ್ಲಿ ಒಬ್ಬರು.

ಆರುತಿ ಎತ್ತಿರೆ ವಾರಿಜಾಮುಖಿ
ಸೀತ ದೇವಿಗೆ
ಹದಿನಾಲ್ಕುಲೋಕನಾಳುವಂತ
ರಾಮಚಂದ್ರಗೆ - ||ಪ||

ಗೊಂಡೆರಾಗಟಿ ಚೌರಿ ಚಂದ

ಹೊಳಪು ಬಂಗಾರ

ದುಂಡು ಮಲ್ಲಿಗಿ ದವನ

ಕ್ಯಾದಿಗಿ ಪಾರಿಜಾತವೋ - ೧

ಕಡಲ ಕಂಕಣ ಕಮಲದಳ

ಸರಗಿ ಸರದೊಳೆ

ವಂಕಿ ಬಾಪುರಿನಿಟ್ಟ ತೋಳಿಗೆ

ಚಂದ್ರಕಾಳಿ ಕುಪ್ಪಸ - ೨

ಅಕ್ಕ ಕೇಳೆ ಚಿಕ್ಕವೆರಡ

ಗಿಳಿಯ ಸಾಕಿದೆ

ಪಕ್ಕಿ ಬಲತು ರಾಮಚಂದ್ರ

ಹಾರಿಹೋದನೆ - ೩

ಭೂಮಿಯಾಳೊ ರಾಜ್ಯ

ದೊರಿಯೆ ರಾಮಚಂದ್ರಗೆ

ಕ್ಷೇಮದಿಂದ ಬೆಳಗಿರಾರುತಿ

ರಾಘವೇಂದ್ರಗೆ - ೪

ರಾಮಲಕ್ಷ್ಮಣರು ಲವಕುಶರು

ಸೀತ ದೇವಿಗೆ

ಲಂಕಪುರಕೆ ಹಾರಿದಂತ

ಹನುಮಂತಗೆ - ೫

ರಾಮಾಯಣದ ಪಾತ್ರಗಳು, ಘಟನೆಗಳು ಜನಪದರ ಸಂಪ್ರದಾಯದ ಹಾಡುಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಇಂತಹ ಹಾಡುಗಳಿಂದ ಕಂಡುಕೊಳ್ಳಬುದಾಗಿದೆ. ಮದುವಣಗಿತ್ತಿ ಅಥವಾ ಮದುಮಗ ಹಸೆಮಣೆಗೆ ಏರುವಾಗ ಹಾಡುವ ಇಲ್ಲಿನ ಹಾಡುಗಳಲ್ಲಿಯೂ ಸಹ ಗ್ರಾಮದ ದೈವ, ಗ್ರಾಮದ ಹೆಸರುಗಳು, ಸೊಗಸಾದ ವರ್ಣನೆಯಿಂದ ಕೂಡಿದ ಹಾಡುಗಳನ್ನು ಇಲ್ಲಿ ಕೇಳಬಹುದಾಗಿದೆ.

ಕಮಲಾಕ್ಷಿ ಹಸೆಯ ಮ್ಯಾಲೆ ನೀ ಬೇಗನೆ ಬಾ

ಪಲ್ಲಪಾದದ ಗೆಜ್ಜಿ ಗಿಲ್ಲ ಗಿಲ್ಲೆನಿಸುತ

ಮೆಲ್ಲನೆ ಹೆಜ್ಜೆ ಇಡುತ ಜಲ್ಲುಜಲ್ಲನೆ ಬೇಗನೆ ಬಾ

ಸೆರಗಿನಲ್ಲಾಡುತ ಕಿರಿ ನಗಿ ನಗುವುತ

ನಿಲಿಗೀಯ ಚಿಮ್ಮುತ ಮದುವಣಿ ನೀ ಬೇಗನೆ ಬಾ

ದೊರಿಯ ಸುವರ್ಣಗಿರಿ ವರನರಸಿಂಹನ

ವರಲಕ್ಷ್ಮಿ ದೇವಿ ಹರುಷದಿಂದಲಿ ನೀ ಬೇಗನೆ ಬಾ

ಪರಮ ಪುರುಷ ಶ್ರೀ ಗಿರಿ ವೆಂಕಟೇಶನ

ಹರಸುವೆ ಬೇಗನೆ ಸರಸದಿಂದಲಿ ನೀ ಬೇಗನೆ ಬಾ

ಜೋಗುಳ ಹಾಡು

ಜೋಗುಳ ಹಾಡುಗಳಲ್ಲಿಯೂ ವೈವಿಧ್ಯತೆಯನ್ನು ಕಾಣಬಹುದು. ಹಂಪೆಯ ವಿರೂಪಾಕ್ಷ, ಆನೆಗುಂದಿ ಅರಸರಾದ ಹರಿಕೃಷ್ಣರಾಯ, ಹರಿಹರದಯ್ಯ, ಪಂಚಲಿಂಗಗಳನ್ನು ಜೋಗುಳದ ಹಾಡಿನಲ್ಲಿ ನೆನೆಯುವುದಾಗಿದೆ. ಅರಸರು ಈ ಭಾಗದ ದೈವಗಳೂ ಸಹ ಇಲ್ಲಿನ ಜನರಿಗೆ ಅಚ್ಚುಮೆಚ್ಚು ಎಂಬುದು ಈ ಹಾಡಿನಿಂದ ತಿಳಿಯಬಹುದಾಗಿದೆ.

ತೂಗಿರೆ ಚಿನ್ನನ ತೂಗಿರೆ ರನ್ನನ

ಗುಡಿಯಯ್ಯನ ತೂಗಿರೆ

ಚಿನ್ನದ ಗುಡಿಯಯ್ಯನ ತೂಗಿರೆ

ಸಣ್ಣ ಮಲಕೋಜಿನ ಹರಿಯೆಂದು ತೂಗಿರೆ

ಹರನೆಂದು ತೂಗಿರೆ ಹರಿಹರದಯ್ಯನ ತೂಗಿರೆ

ಹರಿಕೃಷ್ಣರಾಯನ ಹರದಿ ಹರಿಹರದಯ್ಯನ

ಮಾನ್ಯರು ಬಂದು ತೂಗಿರೆ

ದುಂಡು ಬಟ್ಟಲದಾಗ ಗೊಂಡೇವದ ಹಾಸಿಗೆ

ಗಂಗಾಧರನೆಂದು ತೂಗಿರೆ

ಗಂಗಾಧರನೆಂದು ನಂದಿಕೇಶ್ವರನೆಂದು

ಜಂಬುಲಿಂಗನೆಂದು ತೂಗಿರೆ

ಜಂಬುಲಿಂಗನೆಂದು ತೂಗಿರೆ

ಕಬ್ಬುಣದ ತೊಟ್ಟಿಲಕ ಜಗಮಿಣಿಗಳಾರೆ

ಇಬ್ಬರು ತೂಗಿದರೆ ಮಲಗವನೆ

ಇಬ್ಬರು ತೂಗಿದರೆ ಮಲಗವನೆ

ಹಂಪಿಯ ವಿರೂಪಾಕ್ಷನೆಂದು ತೂಗಿರೆ

ಹಂಪಿಯ ವಿರೂಪಾಕ್ಷನೆಂದು ತೂಗಿರೆ

ಹರಿನೊನ್ನುಂಗುರ ಬೆರಳಿಗೂನ್ನುಂಗುರ

ಬೆರಳ ಚೀಪ್ಸಿ ಚೀಪ್ಸಿ ಪಾಡಿರೆ

ಸರಳ ಬೈತಲೇರು ತೂಗಿರೆ

ಸರಳ ಬೈತಲೇರು ತೂಗಿರೆ

ಸಾಂಪ್ರದಾಯಿಕ ಪದಗಳನ್ನು ನಾವು ಹೆಂಗಸರ ಪದಗಳೆಂದೇ ಕರೆಯಬಹುದು. ಏಕೆಂದರೆ ಸಾಮಾನ್ಯವಾಗಿ ಇವು ಮಹಿಳೆಗೆ ಮೀಸಲಾದ ಗೀತೆಗಳಾಗಿವೆ. ಅಂದರೆ ಮನೆಯಲ್ಲಿ ಮಗು ಹುಟ್ಟುವ ಪೂರ್ವದಿಂದ ಹಿಡಿದು. ಅಂದರೆ ಹೆಣ್ಣು ಚೊಚ್ಚಲ ಗರ್ಭಿಣಿಯಾದಾಗ ಆಕೆಯ ಜೀವನದಲ್ಲಿ ಹೊಸ ಹೊಸ ಅನುಭವಗಳು ಮೈದಳೆಯುತ್ತವೆ. ಏನೇನೋ ತಿನ್ನಬೇಕೆನಿಸುತ್ತದೆ. ಆಗ ಆಕೆಗೆ ಮೂರು ತಿಂಗಳಲ್ಲಿ ಕಳ್ಳ ಕುಬುಸ ಮಾಡುವುದರ ಮೂಲಕ ಆಕೆಯ ಬಯಕೆ ತೀರಿಸಲು ಕಳ್ಳ ಬುತ್ತಿ ಕೊಡುತ್ತಾರೆ. ೮-೯ನೇ ತಿಂಗಳಿಗೆ ದೊಡ್ಡ ಕುಬುಸ ಮಾಡಿ ಬಯಕೆ ಬುತ್ತಿ ಕೊಟ್ಟು ಉಡಿಗೆ-ತೊಡಿಗೆಗಳನ್ನು ಇಟ್ಟು ಹೂ ಮುಡಿಸಿ ಆರತಿ ಮಾಡುತ್ತಾ ಹಾಡು ಹಾಡುತ್ತಾರೆ.

ಎಳ್ಳು ಹಚ್ಚಿದ ರೊಟ್ಟಿ

ಎಣ್ಣೆ ಬದನೆಕಾಯಿ

ಹೊಳೆದಂಡೀಲಿ ಕುಳಿತು ಉಂಡೇನಂತಾಳೆ

ಬಾಲಿನ ಬಯಕೇಲಿ ಬಯಸೇನಂತಾಳೆ ||೧||

ಮೊಸರು ಅನ್ನದ ಬುತ್ತಿ
ಹಸಿರು ನಿಂಬಿಯ ಹೋಳು
ಬೆಳದಿಂಗಳಿಗೆ ಕುಂತು ಊಟ ಮಾಡತೇನಂತಾಳೆ
ಕಂದನ ಬಯಕೇಲಿ ಬಯಸೇತನಂತಾಳೆ ||೨||

ಕಾಲಿಗೆ ಕಾಲು ಪಿಲ್ಲೆ
ನಡುವಿನಾಗ ಪಟ್ಟಿ ಡಾಬ,
ಮುಂದಾಕ ಮೂರು ಹೆಜ್ಜೆ ನಡದೇನಂತಾಳೆ
ಬಾಲಿನ ಬಯಕೇಲಿ ಬಯಸೇನಂತಾಳೆ ||೩||

ಮ್ಯಾಣದೊಳು ತವರು ಮನಿ
ಲಿಂಗಕ ಮುದ್ರಿಕೆ ಸೀರೆಯನುಟ್ಟ
ಟೋಪ ಸೆರಗು ಮ್ಯಾಲ ಮಾಡಿ ಉಟ್ಟೇನಂತಾಳೆ
ಕಂದನ ಬಯಕೇಲಿ ಬಯಸೇನಂತಾಳೆ.

ಇಂತಹ ಅನೇಕ ಹಾಡುಗಳು ಇಲ್ಲಿ ಸಮೃದ್ಧವಾಗಿ ಸಿಗುತ್ತವೆ.

ಶಿಶುಗೀತೆ

ಕನಕಗಿರಿ ಪರಿಸರದಲ್ಲಿ ಪ್ರಚಲಿತವಿರುವ ಹಾಡು ಇದಾಗಿದೆ.

ಆನಿ ಬಂತ್ ಆನಿ
ಯಾವೂರ ಆನಿ
ಬಿಜಾಪೂರ ಆನಿ
ಇಲ್ಲಿಗ್ಯಾಕ ಬಂತು
ಹಾದಿ ತಪ್ಪಿ ಬಂತು
ಹಾದಿಗೊಂದುಡ್ಡು
ಬೀದಿಗೊಂದುಡ್ಡು
ಸೇರ ಕೊಬ್ರಿ ತಂದು
ಲಟ ಲಟ ಮುರುದು
ಹುಡುಗರ ಕೈಯಾಗ ಕೊಟ್ಟು

ಮಕ್ಕಳನ್ನು ಆಡಿಸುವಾಗ ಹಾಡುವ ಈ ಹಾಡಿನಲ್ಲಿ ಇತಿಹಾಸದ ಚಿತ್ರಣ ಇದೆ. ಹಿಂದೆ ರಜಾಕರರು

ಮನೆ ಮನೆಗೆ ಹೊಕ್ಕು ಲೂಟಿ ಮಾಡಿ ಜನರ ಸಂಪತ್ತನ್ನು ಆನೆಗಳ ಮೇಲೆ, ಕುದುರೆಗಳ ಮೇಲೆ ಸಾಗಿಸುವ ಸಂದರ್ಭವನ್ನು ಈ ಹಾಡು ನೆನಪಿಸುತ್ತದೆ.

ಹುಯ್ಯೋ ಹುಯ್ಯೋ ಮಳೆರಾಯ

ಹೂವಿನ ತ್ವಾಟಕ ನೀರಿಲ್ಲ

ಬಾರೋ ಬಾರೋ ಮಳೆರಾಯ

ಬಾಳೆತ್ವಾಟಕೆ ನೀರಿಲ್ಲ

ಚಚ್ಚೊ ಚಚ್ಚೊ ಮಳೆರಾಯ

ಪಚ್ಚೆ ಪೈರಿಗೆ ನೀರಿಲ್ಲ

ಕೊಚ್ಚೊ ಕೊಚ್ಚೊ ಮಳೆರಾಯ

ಕುಡಿಯೋ ಬಾವಿಗೆ ನೀರಿಲ್ಲ

ಮಳೆ ಬಾರದೆ ಬರಗಾಲ ಬಿದ್ದಂತ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಹಾಡುಗಳನ್ನು ಮಕ್ಕಳು ಕೈ ಕೈ ಹಿಡಿದುಕೊಂಡು ಎದಿರು ಬದಿರು ನಿಂತು ಸುತ್ತು ಹಾಕುತ್ತಾ ಹಾಡುತ್ತಾರೆ. ಇದೇ ರೀತಿಯಾಗಿ

ರತ್ತೊ ರತ್ತೊ

ರಾಯನ ಮಗಳೆ

ಬಿತ್ತೊ ಬಿತ್ತೊ

ಭೀಮನ ಮಗಳೆ

ಹದಿನಾರೆಂಬೆ

ಕಾಸಾಲಾರೆ

ಕಡಿಯಲಾರೆ

ಬೈಟ್ಕಂಬ

ಬಾಳೆಕಂಬ

ಕುಕ್ಕನೆ ಕೂತ್ಕೊ

ಕೂರೇ ಬಸವಿ

ಎಂದು ಹೆಣ್ಣು ಮಕ್ಕಳು ಹಾಡುತ್ತಾರೆ. ಇದನ್ನೂ ಸಹ ಆಟದ ಜೊತೆ ಜೊತೆಗೆ ಹಾಡುತ್ತಾರೆ.

ಬೀಸುವ ಹಾಡು

ಯಂತ್ರ ಜಗತ್ತಿನ ದಾಳಿಯಿಂದಾಗಿ ಬೀಸುವ, ಕುಟ್ಟುನ ಕೆಲಸ ಕಡಿಮೆಯಾಗತೊಡಗಿದೆ. ಅದರ ಜೊತೆ ಜೊತೆಗೆ ಬೀಸುವ ಕುಟ್ಟುವ ಹಾಡುಗಳೂ ಸಹ ಮರೆಯಾಗತೊಡಗಿವೆ. ಇಂತಹ ಪರಿಸ್ಥಿತಿಯ

ಮಧ್ಯದಲ್ಲೂ ಬೀಸುವುದು ನಿಂತರೂ ಬೀಸುವ ಹಾಡುಗಳು ನಿಂತಿಲ್ಲ ಎಂಬುವುದಕ್ಕೆ ಇಲ್ಲಿನ ಬೇಡರ ಈರಮ್ಮ, ಹೊನ್ನೂರಮನವರ ಹಾಡುಗಳೇ ಸಾಕ್ಷಿ, ಅವರು ಹಾಡುವ ಹಾಡುಗಳಲ್ಲಿ ಈ ರೀತಿ ಇದೆ.

ನಾಳೇನೆ ಬರುವುದು ನಾಗರ ಪಂಚಮಿ

ದೊರಿಯೆ ನಮ್ಮಣ್ಣ ಕರಿಯಾಕ ಬಂದಾನ

ದೇವಾ ಹಿಡಿ ಧಾನ್ಯವ

ಬಂದಂತ ಅಣ್ಣಾಗ ಗಿಂಡೀಲಿ ನೀರಕೊಟ್ಟು

ಕಂಬ ಮರೆ ಮಾಡಿ ಅಳುತಾಳ

ದೇವಾ ಹಿಡಿದಾನ್ಯವ

ಮಾನ್ಯದ ಹೊಲ ಕಡಲಿ ಬೆಳದದ ತಂಗೆಮ್ಮ

ಮಾಡನು ಮಗನ ಮದುವೀಯ

ದೇವಾ ಹಿಡಿ ದಾನ್ಯವ

ಕರೆ ಸೀರಿ ಉಟಗಂಡು ಕೆರೆ ನೀರಿಗೆ ನಾನೋದೆ

ಕೇರ್‍ಯಾಳ ಗಂಗವ್ವ ಸೆರಗಿಡದ ಕೇಳ್ಯಾಳ

ದೇವಾ ಹಿಡಿದಾನ್ಯವ

ಮಳೆರಾಯನ ಹಾಡು

ಊರಿಗೆ ಮಳೆ ಬಾರದೆ ಬರಗಾಲ ಬಂದು ಜನ-ದನ, ಪ್ರಾಣಿ-ಪಕ್ಷಿಗಳು ಸಂಕಷ್ಟಕ್ಕೀಡಾದಾಗ ಜನಪದರು ತುಂಬಾ ದೈನ್ಯಾವಸ್ಥೆಯಿಂದ ಮಳೆರಾಯನನ್ನು ಆಹ್ವಾನಿಸುತ್ತಾರೆ. ಬಾಡಿ ಹೋದ ಬೆಳೆಗಳನ್ನು ಬತ್ತಿ ಹೋದ ಕೆರೆ, ಬಾವಿ, ನದಿಗಳನ್ನು ರಕ್ಷಿಸು, ಅವುಗಳನ್ನೇ ನಂಬಿದ ನಮ್ಮನ್ನು ಉಳಿಸಿ ಕಾಪಾಡು ಎಂದು ಮಳೆರಾಯನಲ್ಲಿ ಮೊರೆ ಹೋಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಹುಟ್ಟಿಕೊಂಡ ಅನೇಕ ಹಾಡುಗಳು ಈಗಲೂ ಇಲ್ಲಿ ಜೀವಂತವಾಗಿ ಉಳಿದಿವೆ.

ಬತ್ತಿದ ಫಲಗಳ ಬತ್ತಿ ಹೋಗಲಿತಾವೊ

ಅಪ್ಪಯ್ಯ ಮಳೆಯ ಕರುಣಿಸೊ

ಕೋಲೆನ್ನಿರೊ ಕೋಲುಕೋಲ

ಅಪ್ಪಯ್ಯ ಮಳೆಯ ಕರುಣಿಸೊ

ಬತ್ತಕ ಬಾಯಿ ಬಿಡುತದ

ಕೋಲೆನ್ನಿರೋ ಕೋಲು ಕೊಲ

ಮಾಡಿದ ಫಲಗಳ ಬಾಡಿಹೋಗಲಿತಾವೊ

ಅನ್ನಕ್ಕ ಬಾಯಿ ಬಿಡತದ

ಕೋಲೆನ್ನಿರೋ ಕೋಲು ಕೋಲ

ಮಾದೇವ ಮಳೆಯ ಕರುಣಿಸೋ ಈ ಲೋಕ

ಅನ್ನಕ್ಕ ಬಾಯಿ ಬಿಡತದ

ಕೋಲೆನ್ನಿರೋ ಕೋಲು ಕೋಲ

ಮುದಿ ಎತ್ತು ಮುದಿ ಆಕಳ ಮುಗಲ ನೋಡಲಿತ್ಯಾವ

ಗ್ಯಾನಣ್ಣ ಮಳೆಯ ಕರುಣಿಸೋ

ಕೋಲೆನ್ನಿರೋ ಕೋಲು ಕೋಲ

ಹೀಗೆ ಹಾಡು ಸಾಗುತ್ತದೆ. ಜನಪದರ ಕಷ್ಟವನ್ನು ನೋಡಿ ಮೊರೆಯನ್ನು ಆಲಿಸಿ ಕೊನೆಗೆ ಮಳೆರಾಯ ಬಂದು ಸಮುದ್ರದಂತೆ ನದಿಗಳು ಉಕ್ಕೇರುವಂತೆ ಮಾಡಿದ ಘಟನೆ ಹಾಡಿನ ಕೊನೆಯಲ್ಲಿ ಕಾಣಬಹುದು.

ಹಂತಿಯ ಹಾಡು

ಜೋಳ, ಸೆಜ್ಜೆ, ನವಣಿ ಈ ಭಾಗದಲ್ಲಿ ಹೆಚ್ಚಾಗಿ ಬೆಳೆಯುವುದರಿಂದಾಗಿ ರಾಶಿಮಾಡಲು ಹಂತಿ ಹೊಡಿಯಲೇಬೇಕು. ಇಂತಹ ಸಂದರ್ಭಗಳಲ್ಲಿ ಹಾಡುವ ಹಾಡು ಹಂತಿಯ ಹಾಡು.

ಒಕ್ಕಲಿಗರೆರಡೆತ್ತು ಒಕ್ಕಲ ಮೇಯ್ವಾವ
ಹಳ್ಳೆದ ನೀರ ಕುಡದಾವ | ನಮ್ಮ ಬಸವ
ಬೆಳಕ್ಕಿ ಹಿಂಡು ಬೆದೆರಾವ
ಹಬ್ಬೆಳ್ಳಿ ಹುಬ್ಬಳ್ಳಿ ಹಬ್ಬೆತೊ ರಸಬಳ್ಳಿ
ತೆಗ್ಗಿನ್ಯಾಗೈತೊ ಕನಗೀರಿ | ಕನಕನ
ಹುಬ್ಬಿನಾಗೈತೋ ಎಳಿನಾಮ
ಮೂರು ನಾಮ ಮುತ್ತಿನ ಗೋಪಾಳ
ಹೊತ್ತೇರಿ ಬರುವ ಅವರ್‍ಯಾರೊ | ಕನಗೇರಿ
ಗಚ್ಚಿನ ಗುಡಿಯ ಕನಕಪ್ಪ

ಇಂತಹ ಅನೇಕ ಹಂತಿಯ ಹಾಡುಗಳು ಇಲ್ಲಿ ಲಭ್ಯ. ಜನಪದರು ಹಾಡುವ ಬಹುತೇಕ ಹಾಡುಗಳಲ್ಲಿ ಕನಕಗಿರಿಯ ಆದಿದೈವ ಕಾಣಿಸಿಕೊಂಡಿರುವುದನ್ನು ನೋಡಿದರೆ ಕನಕರಾಯನ ಮೇಲಿರುವ ಜನರ ಪ್ರೀತಿ, ಭಕ್ತಿ, ಗೌರವ, ಅಭಿಮಾನ ಹೇಗಿತ್ತು ಎಂಬುದನ್ನು ಅರಿತುಕೊಳ್ಳಬಹುದಾಗಿದೆ.

ಕೋಲಾಟದ ಹಾಡುಗಳು

ಗೌರಿಹುಣ್ಣಿಮೆಯ ಸಂದರ್ಭದಲ್ಲಿ ಕನಕಗಿರಿಯ ಕಂಬಾರ ನಾಗಪ್ಪನ ಮನೆಯಲ್ಲಿ, ಪಂಚಾಳ ರಾಮಣ್ಣನವರ ಮನೆಯಲ್ಲಿ ಇನ್ನೂ ಮುಂತಾದವರ ಮನೆಯಲ್ಲಿ ಗೌರಮ್ಮನನ್ನು ಕೂಡಿಸುವ ಪದ್ಧತಿ ಇದೆ. ಇಲ್ಲಿಗೆ ಆರತಿ ಮಾಡಲು ಬರುವ ಹೆಂಗಳೆಯರು ದೊಡ್ಡ ದೊಡ್ಡ ಕೋಲಾಟದ ಹಾಡುಗಳನ್ನು ಸಾಮೂಹಿಕವಾಗಿ ಹಾಡುತ್ತಾರೆ.

ಮಂಗಳ ಗೌರಿ ಮಂದೀಗಿ ಸ್ವರ್ಣಗೌರಿ

ಶಂಬೋ ಶಂಕರನ ಸತಿಗೌರಿ

ರನ್ನದ ಕೋಲೆ ಹೂವಿನ ಕೋಲೆ

ಸೂರ್ಯ ಚಂದ್ರಮನ ಬೆಳಕೀಲೆ ಹೊಂಟಾಳ

ರನ್ನದ ಕೋಲೆ ಹೂವಿನ ಕೋಲೆ

ಕಂಬಾರ ನಾಗಪ್ಪನ ಮನಿ ಗೌರಿ ಹೊರಟಾಳ

ರನ್ನದ ಕೋಲೆ ಹೂವಿನ ಕೋಲೆ

ಪಂಚ ಮುಖದ ಗೌರಿ ಉಟ್ಟಾಳ ಕಂಚಿನ ಸೀರಿ

ಪಂಚಾಳ ರಾಮಣ್ಣನ ಮನಿಗೌರಿ

ರನ್ನದ ಕೋಲೆ ಹೂವಿನ ಕೋಲೆ

ಮುತ್ತಿನ ಸೆರಗ ಮುಗದಿಲ್ಲ ಶಿವರಾಯ

ಹುಣ್ಣಿಮೆ ಮಾಡಿ ಕಳಿವೇವೋ

ರನ್ನದ ಕೋಲೆ ಹೂವಿನ ಕೋಲೆ

ಕಳುವಿ ಬಂದೇವ ನಮ್ಮ ಕಳವುಳ್ಳ ಗೌರನ

ಕೌಳಿ ಹೂವಿಗಿನ್ನ ಚಲುವೀನ

ರನ್ನದ ಕೋಲೆ ಹೂವಿನ ಕೊಲೆ

ಸೃಷ್ಟ್ಯಾಳ್ಳ ಶಿವನ ಸತಿ ಗೌರಿ ನಾ ಹೊಯ್ದು

ಶಿವನ ಅರಮನೆಗೆ

ರನ್ನದ ಕೋಲೆ ಹೂವಿನ ಕೋಲೆ

ಇಂತಹ ಇನ್ನೂ ಅನೇಕ ಹಾಡುಗಳು ಇಲ್ಲಿ ಸಿಗುತ್ತವೆ.

ಜೋಕುಮಾರನ ಹಾಡು

ಈ ಭಾಗದಲ್ಲಿ ಭಾದ್ರಪದ ಮಾಸದಲ್ಲಿ ಕಂಡು ಬರುವ ಜೋಕುಮಾರನ ಹಾಡು ಮತ್ತು ಆಚರಣೆಗಳು ತುಂಬಾ ವಿಶಿಷ್ಟವಾದವುಗಳಾಗಿವೆ. ಒಂದು ಪುಟ್ಟಿಯಲ್ಲಿ ಕಪ್ಪಗಿನ ಮುಖವುಳ್ಳ ಬರೀ ತಲೆ ಭಾಗವನ್ನಷ್ಟೆ ಹೊಂದಿದ್ದ ಮೂರ್ತಿಯನ್ನು ಬಿದಿರು ಪುಟ್ಟಿಯಲ್ಲಿ ಇಟ್ಟು ಮುಖಕ್ಕೆ ಎಣ್ಣೆಸವರಿ, ಬಾಯಲ್ಲಿ ಬೆಣ್ಣೆ ಇಟ್ಟು ಪುಟ್ಟಿಯೊಳಗೆ ಬೇವಿನ ಎಲೆಗಳನ್ನಿಟ್ಟು ಮಾತಂಗಿಯರು ಸಿಂಗರಿಸುತ್ತಾರೆ. ನಾಲ್ಕಾರು ಜನ ಹೆಣ್ಣುಮಕ್ಕಳು ಸೇರಿ ಜೋಕುಮಾರನನ್ನು ಹೊತ್ತುಕೊಂಡು ಮನೆ ಮನೆಗೆ ತಿರುಗಿ ಮನೆಯಂಗಳದಲ್ಲಿ ಜೋಕುಮಾರನನ್ನು ಇಟ್ಟು ಜೋಕುಮಾರನ ಹಾಡನ್ನು ಹಾಡುತ್ತಾರೆ. ಮೊದಲು ಒಬ್ಬರು ಹಾಡಿದರೆ ಉಳಿದವರು ಅದೇ ಹಾಡನ್ನು ಅನುಸರಿಸಿ ಸಾಮೂಹಿಕವಾಗಿ ಹಾಡುತ್ತಾರೆ.

ಉಪ್ಪುತಾರವ್ವ ನನ್ನ ಒಪ್ಪುಳ್ಳ
ಕೊಮರಾಗ | ಸುತ್ತ ಮಾಳಿಗಿ ಮನಿಯವ್ವ
ಹುಲಿಗೆವ್ವ ಉಪ್ಪು ತಾರವ್ವ ನನ್ನ ಕೊಮರಗ - ೧
ಬೆಣ್ಣೆ ತಾರವ್ವ ನನ್ನ ಚಂದುಳ್ಳ ಕೊಮರಾಗ
ಸಾಲ ಮಾಳಿಗಿ ಮನಿಯವ್ವ | ಮಾದೇವಮ್ಮ
ಬೆಣ್ಣೆ ತಾರ ನನ್ನ ಕೊಮರಗ - ೨
ಹುಟ್ಟಿದೇಳ ದಿನಕೆ ಪಟ್ನವ ತಿರುಗಿದ
ದುಷ್ಟಲ ದೇವಿ ನನ ಮಗ | ಚಂಡಾಡಿದಲ್ಲಿ
ಹೊಕ್ಕ ರಾಜ್ಯವು ಬೆಳೆಯಲಿ - ೩
ಆದ ಏಳ ದಿನಕ ರಾಜ್ಯವ ತಿರುಗಿದ
ದ್ರಾಯಲದೇವಿ ನಿನ್ನ ಮಗ | ಚಂಡಾಡಿದಲ್ಲಿ
ಸಜ್ಜಿ ಜೋಳವ ಬೆಳೆಯಲಿ - ೪
ಕಲ್ಲು ಕಂಬಕ ಕಟ್ಯಾರ ತೊಟ್ಟಿಲು
ಹತ್ತು ಮಂದಿ ತೂಗಿದರ ಮಲಗವಲ್ಲ | ಜೋಕುಮಾರ
ನನ್ನೂರ ಜೋಳ ಬೆಳೆಯಲಿ
ಕಂದನ ತಾಯಿ ಬಂದು ನಿತಾಳವ್ವ ತಲಬಾಗಲ್ಲಾಗ
ಕಂದಗ ಬೆಣ್ಣೆ ಕೊಡಿರವ್ವ | ಗಂಗಮ್ಮ
ತಂದಾರ ಬೆಣ್ಣೆ ಕೂಡಿರವ್ವ

ಹೀಗೆ ಹಾಡು ಮುಂದುವರೆಯುತ್ತಾ ಸಾಗುತ್ತದೆ. ಹಾಡು ಮುಗಿದ ನಂತರ ಯಾವ ಮನೆಯ ಮುಂದೆ ಕುಳಿತುಕೊಂಡು ಹಾಡಿರುತ್ತಾರೋ ಆ ಮನೆಯವರು. ಅಕ್ಕಿ, ಜೋಳ, ಸಜ್ಜೆ ಹೀಗೆ ತಮ್ಮಲ್ಲಿದ್ದ ಯಾವುದಾದರೊಂದು ಧಾನ್ಯವನ್ನು ನೀಡುತ್ತಾರೆ. ಕೊನೆಯಲ್ಲಿ ಕಾಳು ಕಡಿ ನೀಡಿದವರಿಗೆ ಒಳ್ಳೆಯದಾಗಲಿ ಎನ್ನುತ್ತ ಹರಕೆಯ ಹಾಡನ್ನು ಹಾಡುತ್ತಾರೆ.

ಬಾಳಿಯ ಹೂ ಎಂದ ಬಾಳೆಯ ಕಾಯಂದ
ವರ್ಷಕ್ಕೊಂದದ ಫಲವಾಗಿ | ಜೋಕುಮಾರನ
ರಂಬೇರು ಕೊಟ್ಟ ಹರಕಿಲೆ
ಮಾವಿನ ಹೂವೆಂದ ಮಾವಿನ ಕಾಯಂದ
ದಿನಕ್ಕೊಂದಂದ ಫಲವಾಗಿ | ಜೋಕುಮಾರನ
ರಂಬೇರು ಕೊಟ್ಟ ಹರಕಿಲೆ

ಹೀಗೆ ವರ್ಷ, ತಿಂಗಳು, ದಿನ, ತಾಸಿನ ಲೆಕ್ಕಾಚಾರದಲ್ಲಿ ಹರಕೆ ಸಲ್ಲಿಸಿ ಶುಭ ಹಾರೈಸುತ್ತಾರೆ. ಹರಿಜನ ಸಮುದಾಯದಲ್ಲಿ ಇಂತಹ ಹಾಡುಗಳು ಹೆಚ್ಚಾಗಿವೆ. ಈಗೀಗ ಜೋಕುಮಾರನನ್ನು ಹೊತ್ತು ಮನೆಮನೆಗೆ ತಿರುಗಾಡಲು ಯಾರು ಬರುವುದಿಲ್ಲ ಎಂಬ ಆರೋಪ ಇವರಿಂದ ಕೇಳಿಬರುತ್ತದೆ.

೬.೩.೨. ಜನಪದ ಕತೆಗಳು

ಕನಕಗಿರಿಯ ಪರಿಸದಲ್ಲಿ ವೈವಿಧ್ಯಮಯ ಕತೆಗಳು ಪ್ರಚಲಿತದಲ್ಲಿವೆ. ಮನರಂಜನೆಯ ಸಾರ್ವಭೌಮ ಎನಿಸಿಕೊಂಡಿರುವ ಟಿ.ವಿ., ಸಿನೆಮಾಗಳ ಪ್ರಭಾವದ ಮಧ್ಯದಲ್ಲೂ ಕತೆಗಳು ಇಂದಿಗೂ ತಮ್ಮ ಆಕರ್ಷಣೆಯನ್ನು ಉಳಿಸಿಕೊಂಡು ಜೀವಂತವಾಗಿರುವುದು ಆಶ್ಚರ್ಯವೇ ಸರಿ. ಇಲ್ಲಿ ದೊರೆಯುವ ಕತೆಗಳಲ್ಲಿ ಹೆಚ್ಚಾಗಿ ನೀತಿ ಕತೆಗಳು, ಬುದ್ಧಿವಂತಿಕೆಯ ಕತೆಗಳು, ರಮ್ಯಕತೆಗಳು, ಐತಿಹಾಸಿಕ ಕತೆಗಳು, ಪ್ರಾಮಾಣಿಕ ಕತೆಗಳು, ಕನಕಾಚಲನಮಹಿಮೆ ಸಾರುವ, ನಾಯಕರ ಭಕ್ತಿ-ಭಾವವನ್ನು ಬಿಂಬಿಸುವ ಕತೆಗಳು ಹೆಚ್ಚಾಗಿ ಕಂಡುಬರುತ್ತವೆ. ಪುರಾಣ ಪ್ರವಚನಗಳ ಪ್ರಭಾವದಿಂದಾಗಿ ಅನೇಕ ಕತೆಗಳೂ ಈಗಲೂ ಚಾಲ್ತಿಯಲ್ಲಿವೆ.

ಜನರು ಗದ್ದೆಗಳಲ್ಲಿ ಕೆಲಸ ಮಾಡಿ ಬಂದ ಮೇಲೆ ಹಾಗೂ ಬಿಡುವಿನ ವೇಳೆಗಳಲ್ಲಿ ಮಕ್ಕಳು ಗಲಾಟೆ ಮಾಡುತ್ತಿದ್ದಾಗ ಕೆಲವೊಂದು ಹಾಸ್ಯ ಕತೆಗಳನ್ನು ಹೇಳಿ ಮಕ್ಕಳಿಗೆ ಖುಷಿ ಪಡಿಸುತ್ತಾರೆ. ಕೆಲವೊಮ್ಮೆ ಬುದ್ಧಿವಂತಿಕೆಯ ಕತೆಯನ್ನು ಹೇಳಿ ಮಕ್ಕಳು ಆಪತ್ತಿನಲ್ಲಿ ಸಿಕ್ಕಾಗ ಚಾಣಾಕ್ಷತನದಿಂದ ತಪ್ಪಿಸಿಕೊಳ್ಳುವಂತಹ ಕತೆಗಳನ್ನು ಹೇಳುತ್ತಾರೆ. ಆಪತ್ತಿನಲ್ಲಿ ಎದುರಾಗುವ ಅಪಾಯಗಳನ್ನು ಜಾಣ್ಮೆಯಿಂದ ಹೇಗೆ ಎದುರಿಸಬೇಕೆಂಬುದನ್ನು ಕತೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಕೆಲವರು ಕತೆ ಹೇಳ ಹೊರಟರೆ ಎರಡು ಮೂರು ದಿನಗಳವರಗೆ ಹೇಳುತ್ತಲೇ ಹೋಗುತ್ತಾರೆ. ಎಷ್ಟೇ ಹೇಳಿದರೂ ಕೇಳುಗರಿಗೆ ಆಸಕ್ತಿ

ಕಡಿಮೆಯಾಗಿರುವುದಿಲ್ಲ. ಮೈ ಬಿಗಿಯಾಗಿ ಹಿಡಿದುಕೊಂಡು ಕುತೂಹಲದಿಂದ ಮೈಮರೆತು ಕತೆಯನ್ನು ಕೇಳುವಂತಹ ಕತೆಗಳು ಇಲ್ಲಿವೆ. ವೀರಪುರುಷರ ಸಾಹಸದ ಕತೆಗಳು, ಪತಿವ್ರತೆಯರ ಕತೆಗಳು, ಮಾಟ-ಮಂತ್ರದ ಕತೆಗಳು, ಪ್ರಾಣಿಕತೆಗಳು ಮಕ್ಕಳ ಕುತೂಹಲವನ್ನು ಕೆರಳಿಸುವಷ್ಟರ ಮಟ್ಟಿಗೆ ಆಕರ್ಷಕವಾಗಿವೆ. ಇಲ್ಲಿನ ಕತೆಗಳಲ್ಲಿ ಬರುವ ಪ್ರಾಣಿ ಪಕ್ಷಿಗಳ ಸ್ವಭಾವ ಮನುಷ್ಯ ಸ್ವಭಾವಕ್ಕಿಂತ ಎಷ್ಟೋ ವಾಸಿ ಎಂಬಂತಿರುತ್ತವೆ.

ಒಟ್ಟಾರೆ ಎಲ್ಲ ಕತೆಗಳನ್ನು ಗಮನಿಸಿದಾಗ ಇಲ್ಲಿ ಸಿಗುವ ಕತೆಗಳು ಮಕ್ಕಳಲ್ಲಿ ಉತ್ತಮ ಅಭಿರುಚಿಯನ್ನು ಧೈರ್ಯ, ಸ್ಥೈರ್ಯವನ್ನು ಬೆಳೆಸಲು ಸಹಕಾರಿಯಾಗಿವೆ ಎಂದು ಹೇಳಬಹುದು. ವಯೋವೃದ್ಧರಲ್ಲಿ ಇಂತಹ ಕತೆಗಳು ಹೆಚ್ಚಾಗಿ ಕಂಡುಬರುವುದರಿಂದ, ಬಹುಶಃ ಅವರೊಂದಿಗೆ ಈ ಕತೆಗಳು ಎಲ್ಲಿ ಕೊನೆಗೊಳ್ಳುತ್ತವೋ ಏನೋ ಎಂಬ ಅನುಮಾನ ಅನೇಕರಲ್ಲಿದೆ. ಈ ಕತೆಗಳನ್ನು ಕೇಳಬೇಕು. ಮುಂದಿನ ಪೀಳಿಗೆಗೆ ಹೇಳಬೇಕು ಎಂಬ ಪ್ರಜ್ಞೆಯಾಗಲಿ, ಆಸಕ್ತಿಯಾಗಲಿ ಈಗಿನವರಿಗಿಲ್ಲ ಎಂಬ ಕೊರಗು ಕತೆ ಹೇಳುವ ಅಜ್ಜಿಯರದು. ಹಿಂದೆ ಅಜ್ಜಿಯರು, ತಾಯಂದಿರು ರಾತ್ರಿ ಹೊತ್ತಿನಲ್ಲಿ ಮಕ್ಕಳಿಗೆ ಕತೆ ಹೇಳುತ್ತಾ ಮಕ್ಕಳನ್ನು ಮಲಗಿಸುವ ಪ್ರಯತ್ನ ಮಾಡುತ್ತಿದ್ದರು. ಈಗ ಆ ಕೆಲಸವನ್ನು ಮನೆಯ ಟಿ.ವಿ.ಮಾಡತೊಡಗಿದೆ. ಇಂತಹ ಕೆಟ್ಟ ಪರಿವರ್ತನೆಯನ್ನು ತಡೆದು ನಮ್ಮ ಸಂಸ್ಕೃತಿಯನ್ನು ರಕ್ಷಿಸುವತ್ತ ಪ್ರತಿಯೊಬ್ಬರು ಹೆಜ್ಜೆ ಇಡಬೇಕಿದೆ.

೬.೩.೩. ಕಥನ ಕಾವ್ಯಗಳು

ಕನಕಗಿರಿ ಪರಿಸರದಲ್ಲಿ ಕಥನ ಕವನ ಹೇಳುವ ನಿರೂಪಕರಿದ್ದಾರೆ. ಚೌಡಿಕೆಯವರು, ಗೊಂದಲಿಗರು, ದೊಡ್ಡಾಟ ಪ್ರದರ್ಶಿಸುವ ಕಲಾವಿದರು, ಜನಪದ ಗಾಯಕರಾದ ಹೊನ್ನೂರಮ್ಮ, ಬೇಡರ ಈರಮ್ಮ ಮುಂತಾದವರಲ್ಲಿ ಕಥನ ಕವನಗಳು ಕೇಳಿಬರುತ್ತವೆ. ಪಾಳೇಗಾರರ ಕಾಲದಲ್ಲಿ ನಿರ್ಮಿಸಿದೆನ್ನಲಾದ ಮತ್ತು ಪಾಳೆಯಗಾರರ ಖಜಾನೆ ಎಂದ್ಹೇಳಲಾಗುವ ಹೇಮಗುಡ್ಡ ಅಥವಾ ಇಂದಿನ ಜನಪದರಿಂದ ಕರೆಸಿಕೊಳ್ಳುವ ಎಮ್ಮಿಗುಡ್ಡವು ಕುಮಾರರಾಮನ ಬೆಟ್ಟಕ್ಕೆ ತೀರಾ ಹತ್ತಿರದಲ್ಲಿದೆ. ಹೀಗಾಗಿ ಕನಕಗಿರಿ ಪರಿಸರಕ್ಕೆ ಹೊಂದಿಕೊಂಡ ಕುಮಾರಾಮನ ಚರಿತ್ರೆಯು ಇತಿಹಾಸದ ಪುಟಗಳಲ್ಲಷ್ಟೆ ದಾಖಲಾಗದೆ, ಜನಪದರ ಕತೆಗಳಲ್ಲಿ, ಕಥನಕಾವ್ಯಗಳಲ್ಲಿ ಹಾಸುಹೊಕ್ಕಾಗಿ ನೆಲೆಸಿದೆ. ಕಥನ ಕವನಗಳ ನಿರೂಪಕರು ಕನಕಗಿರಿ, ಕಂಪ್ಲಿ, ಮಲ್ಲಾಪುರ ಆನೆಗುಂದಿ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

ಕೈಯ್ಯಲ್ಲಿ ಚೌಡಕಿ ಹಿಡಿದುಕೊಂಡು ಇಡಿ ರಾತ್ರಿಯಿಂದ ಬೆಳಗಿನವರೆಗೂ ಕಥನ ಕವನಗಳನ್ನು ಹಾಡುವವರಿದ್ದಾರೆ. ಇವರು ಹಾಡುವ ಹಾಡುಗಳಲ್ಲಿ, ಕತೆಗಳಲ್ಲಿ ಐತಿಹಾಸಿಕ, ಜಾನಪದೀಯ ಸೊಗಡು ಸೇರಿಕೊಂಡು ಜನಪದರನ್ನು ಆಕರ್ಷಿಸುವಂತಿರುತ್ತದೆ. ಇವರು ಹೇಳುವ ಕಥನಕವನಗಳಲ್ಲಿ ಹೇಮರೆಡ್ಡಿ ಮಲ್ಲಮ್ಮ, ಸತಿ ಸಾವಿತ್ರಿ, ಸತಿ ಸುಲೋಚನ, ಬಂಗಾರಕೂದಲ ರಾಜಕುಮಾರಿ, ಕುಮಾರರಾಮ, ಪಾಳೇಗಾರರು ಹೀಗೆ ಇನ್ನೂ ಮುಂತಾದ ಐತಿಹಾಸಿಕ, ಪೌರಾಣಿಕ ವಸ್ತುಗಳು ಕಂಡುಬರುತ್ತವೆ.

ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕುಮಾರರಾಮನ ಕಥನ ಕವನದ ಧ್ವನಿ ಸುರುಳಿಯನ್ನಾಧರಿಸಿ, ಸ್ಥಳೀಯರ ಅಭಿಪ್ರಾಯವನ್ನು ಸಂಗ್ರಹಿಸಿ ಹೇಳುವುದಾದರೆ ಕುಮಾರಾಮನ ಕಥನ ಕವನಗಳನ್ನು ಸು. ೧೦ ತಾಸುಗಳವರೆಗೆ ಹಾಡುತ್ತಿದ್ದರು, "ಆ ಚೂರ್ಣರವಾರಿದು ಪಠಣಮದ್ದಾಲು ಗಜವಳಗ ಅದು ಎಂಥ ಪಠಣ ಸುಂದರವಾದ ಪಠಣದೊಳಗ ಈ ಕಂಪಲಿರಾಜನಯ್ಯ....." ಎಂದು ಪ್ರಾರಂಭಿಸುತ್ತಾರೆ ಕಂಪಲಿ ಪಟ್ಟಣದ ಗತವೈಭವವನ್ನು ಆತನ ಗುಣಗಾನವನ್ನು ಮಾಡುತ್ತಾರೆ.

ಹಳೆ ಕುಮ್ಮಟದಲ್ಲಿ ಕಂಪಿಲರಾಯನು ಬಲು ಪುಣ್ಯಾತ್ಮ ಮತ್ತು ಬಲು ಧರ್ಮಿಷ್ಟ. ರಾಜ ಗುಡಿ ಮಂದಿರಗಳನ್ನು ಕಟ್ಟಿಸುತ್ತಾರೆ. ಧರ್ಮ ಲಗುನ ಮಾಡ್ತಾನ ಧರ್ಮ ಬಿಕ್ಷಾ ಕೊಡ್ತಾನ ರಾಜ ಎಂಥಾ ಭಿಕ್ಷೆ ಕೊಡ್ತಾನೆಂದರೆ.

ಬಂಧನದ ಜೋಗಿ ಜಂಗಮ ಹಾಗಿರಬಾಗಿರೆ

ತೊಲೆ ತಾಪಡಿ ತಂದು ಬಾಗಲೆ ಭಿಕ್ಷೆ ಬೇಡತಾನ

ಅವರಗ ರಾಜ ಏನ್ ಭಿಕ್ಷೆ ಕೊಡ್ತಾನ (ಮುಮ್ಮೇಳ)

ಹೌದ್ರಿ (ಹಿಮ್ಮೇಳ)

ಕಂಪಿಲರಾಯ

ಜಾಯಿದಾನ, ಬಾಗಿದಾನ, ಹೊನ್ನದಾನ, ಚಿನ್ನದಾನ,

ಅನ್ನದಾನ ವಸ್ತ್ರದಾನ, ದಾನ ಧರ್ಮ ಮಾಡ್ತಾನ

ಯಾರು ಧೀರ ಕಂಪಲಿರಾಯ (ಮು)

ಹೌದ್ರಿ (ಹಿ)

ಕಣ್ಣಾಟ ಅಣ್ಣಾ ಎರ್ ಹೋಲಿಕೆ ರಾಮ ಚನ್ನಿಗರಾಮ

ನಾವು ಗರಡಿ ಮನೆಗೆ ಹೋಗಬೇಕು (ಮು)

ಹರನೆಂದ ಮಾದೇವ (ಹಿ)

ಇವರೆಲ್ಲಾ ಗರಡಿ ಮನೆಗೆ ಹೊರಟಾರೆ ಕುಮಾರ ರಾಮ ಏನ್ ಮಾಡ್ತ್ಯಾನೆ. ಒಂದು ಟಗರು ಸಾಕ್ಯಾನ ಆ ಟಗರು ಮ್ಯಾಲೆ ಕುಂತು ಕುಮಾರರಾಮ ಗರಡಿ ಮನೆಗೆ ಹೊರಟಾನ, ಗರಡಿ ಮನೆಗೆ ಹೋಗಿ ಅವಾಗ ಜರತಾರಿ ಮಾಲೆ, ಉತ್ತತ್ತಿ ಮಾಲೆ ನಡುವಿಗೆ ನಾಲ್ಕು ಮಂದಿ ಕೊಡಂಗಿ ಹಾಕ್ಕೊಂಡಾರೆ ಮಕ್ಕು ಅವಾಗ ಅವರು ಗರಡಿ ಮನಿ ಒಳಗ ನಾಲ್ಕು ಮಂದಿ ಸಾಮ್ನತಗೀತಾರೆ.

ನಿನ ಮಗ ಬಂದೀನವ್ವ (ಮು)

ರಾಮರಾಮ ಹಾದಿ ಗೆದ್ದಿ (ಹಿ)

ನಿನ್ನ ಪಾದಕ್ಕ ಬಿಳ್ತೀನಿ (ಮು)

ರಾಮ ರಾಮ ಹಾದಿಗೆದ್ದಿ (ಹಿ)

ನೀನು ಮಹಾತಾಯಿ (ಮು)

ನಿನ್ನ ಮಗಾನಾನು (ಮು)

ರಾಮ ರಾಮ ಹಾದಿಗೆಡ್ಡಿ

ಚಂಡು ಕೊಡೆ ತಾಯಿ

ರಾಮ ರಾಮ ಹಾದಿಗಿದ್ದಿ

ಕುಮಾರ ರಾಮನನ್ನು ನೆಲ ಮಾಳಿಗೆಯಲ್ಲಿ ಬಚ್ಚಿಟ್ಟಾಗ ದಿಲ್ಲಿಯರ ದುಂಡು ಮುತ್ತಿಗೆ ಹಾಕಿದಾಗ ಕುಮಾರರಾಮನನ್ನು ತಂದೆಯ ಒಪ್ಪಿಗೆ ಮೇಲೆ ಬೈಚಪ್ಪ ಕರೆದುಕೊಂಡು ಬರಲು ಹೊಗ್ತಾನೆ. ಕುಮಾರರಾಮ ಕುಮಾರ ರಾಮ ದಿಲ್ಲೇರ ದಂಡು ಬಂದೈತಿ, ಎಲ್ಲೆದಿಯೆ ಕುಮಾರರಾಮ ನೀಬಾರೋ ಬಯಲಿಗೆ ಹೌದ್ರಿ ಅವಾಗ ಅಷ್ಟಾಂದಾಕ್ಷಣ ಕುಮಾರರಾಮ ನೆಲಬೊರದಾಗಿಂದ ಕ್ಯಾಕೆ ಹೊಡಿತಾನ ಆಗ ಬೈಚಪ್ಪ ನೀ ಹರವಿ ಹಾವಿನಗುರಡ, ಹೌರಿ ಕಚೋರ ಗಂಡ, ಮೀಸಿ ತಿರವೊರಿ ಮಿಂಡ, ದಿಲ್ಲಿ ದಿಲ್ಲೋರ ಗಂಡ ದಿಲ್ಲಿ ಬಾದ್ಯಾನ ಗಂಡ

ದಿಲ್ಲೋರು ಗರಡಿ ಕೊಮರಾಮ (ಮು)

ಆಹಾ ರಾಮದೇವಾ (ಹಿ)

ನಿನಗ ಮೋಸ ಆಗತೈತೆ (ಮು)

ಹರನನ್ನ ಮಾದೇವ (ಹಿ)

ಹೀಗೆ ಈ ಕಾವ್ಯವು ಕುಮಾರ ರಾಮನು ದಿಲ್ಲಿ ಸುಲ್ತಾನರೊಂದಿಗೆ ಯುದ್ಧ ಮಾಡುವ ವೈಖರಿಯನ್ನು ವರ್ಣನೆ ಮಾಡುತ್ತಾ ಕೊನೆಗೆ ಕುಮಾರರಾಮ ಮಡಿದ ವಿವರಣೆ ನೀಡುತ್ತದೆ. ಈ ಕಾವ್ಯ ಸಂಪೂರ್ಣವಾಗಿ ಪಾಂಚಾಳ ಗಂಗನ ಸಾಂಗತ್ಯವನ್ನು ಹೋಲುತ್ತದೆ. ಒಟ್ಟಿನಲ್ಲಿ ಕುಮಾರರಾಮ ಕನಕಗಿರಿ ಪರಿಸರದಲ್ಲಿ ಈಗಲೂ ನೈತಿಕತೆಗೆ ಸಂಕೇತವಾಗಿ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ಸಾಹಸಿಯಾಗಿ, ದೈವವಾಗಿ ನೆಲೆಗೊಂಡಿದ್ದಾನೆ.

ಇದಲ್ಲದೆ ಹೊನ್ನೂರಮ್ಮ ಎಂಬುವವರು ಹೇಮರಡ್ಡಿ ಮಲ್ಲಮನ ಮಹಿಮೆಯನ್ನು ತಾಸುಗಟ್ಟಲೆ ಹಾಡುತ್ತಾರೆ. ಹೇಮರಡ್ಡಿ ಮಲ್ಲಮ್ಮ ರಾಶಿ ರಾಶಿ ಧಾನ್ಯ ಬೀಸಲು ಕುಳಿತದ್ದು, ಬೀಸಿದಂತೆಲ್ಲ ಮತ್ತೆ ಮತ್ತೆ ಧಾನ್ಯ ತಂದು ಹಾಕುವುದು, ಮಲ್ಲಮ್ಮನ ಭಕ್ತಿಗೆ ಮಲ್ಲಿಕಾರ್ಜುನ ಮೆಚ್ಚಿ ಮಲ್ಲಮ್ಮನ ಕೆಲಸವನ್ನು ತಾನೇ ಮಾಡುವುದು ಕಣ್ಣಿಗೆ ಕಟ್ಟುವಂತೆ ಹಾಡುತ್ತಾರೆ.

೬.೩.೪. ಗಾದೆಗಳು

ಗಾದೆ ಅತ್ಯಂತ ಪ್ರಾಚೀನವೂ ವಿಶಿಷ್ಟವೂ, ಮಹತ್ವಪೂರ್ಣವೂ, ಆದ ಪ್ರಕಾರವೆನ್ನಬಹುದು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ವೇದಕ್ಕೂ ಮಿಗಿಲಾದದ್ದು ಎನಿಸುತ್ತದೆ. ಗಾದೆಗೂ ಜೀವನಕ್ಕೂ ಅವಿನಾಭಾವ ಸಂಬಂಧ ಉಂಟು. ಅಪ್ರಜ್ಞಾಪೂರ್ವಕವೋ ಪ್ರಜ್ಞಾಪೂರ್ವಕವಾಗಿಯೋ ಜನರಲ್ಲಿದೆ. ಗಾದೆ ಮಾತುಗಳನ್ನು ಉಪಯೋಗಿಸದೆ ಬದುಕಲು ಇರಲಾರರು. ಜನಪದ ಎಲ್ಲ ಪ್ರಕಾರಗಳಿಗಿಂತಲೂ ಹೆಚ್ಚು ಪ್ರಚಲಿತದಲ್ಲಿರುವ ಪ್ರಕಾರವೆಂದರೆ ಗಾದೆ ಮಾತು. ಗಾದೆ ಜನಭಾಷೆಯ ಕೆನೆ. ಜನವಾಣಿ ಬಿಟ್ಟ ಹಣ್ಣು, ಒಗಟು ಬುದ್ಧಿ ಪ್ರಧಾನವಾದರೆ ಗಾದೆ ಬುದ್ಧಿ ಭಾವಗಳ ಸಮತೋಲನ, ಸಮಯದ ಪರಿಜ್ಞಾನವಿಲ್ಲದೆ ಯಾವಾಗಲಾದರೂ ಗಾದೆಯನ್ನು ಸಾಂದರ್ಭಿಕವಾಗಿ ಬಳಸಬಹುದಾದ್ದು, ಸರ್ವಕಾಲಿಕ ಭಾಷೆಯ ಅನಿವಾರ್ಯ ಅಂಗವಾಗಿದೆ. ಜನರು ಇವುಗಳ ಕಡೆಗೆ ವಾಲುವುದಕ್ಕೆ ಪ್ರಮುಖವಾಗಿ ಅನುಭವವೇ ಸಾಕು. ಇವುಗಳ ಸಂಕ್ಷಿಪ್ತತೆ, ಅರ್ಥಪೂರ್ಣತೆ, ಕಲಾತ್ಮಕತೆ, ಲೋಕಾನುಭವ, ಮೊದಲಾದ ಕಾರಣಕ್ಕೆ ಜನರಿಗೆ ಸರಳಭಾಷೆಯಲ್ಲಿರುವ ಗಾದೆಯನ್ನು ತಮ್ಮ ಮಾತಿಗೊಮ್ಮೆ ಸಮಯಕ್ಕೆ ತಕ್ಕಂತೆ ತಮಗರಿವಿಲ್ಲದಂತೆ ಉಪಯೋಗಿಸುತ್ತಾರೆ. ಕನಕಗಿರಿ ಪರಿಸರದಲ್ಲಿ ಗಾದೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಇಂತಹವರೇ ಹೆಚ್ಚಾಗಿ ಗಾದೆಗಳನ್ನು ಹೇಳುತ್ತಾರೆ ಎನ್ನುವ ಹಾಗಿಲ್ಲ. ಎಲ್ಲರಲ್ಲೂ ಈ ಗಾದೆಗಳು ಬಳಕೆಯಲ್ಲಿವೆ. ಜಾತಿ, ಮತ, ಧರ್ಮಗಳೆನ್ನದೆ ಎಲ್ಲಾ ಸಮುದಾಯದವರು ಬಳಸುತ್ತಾರೆ. ಆಡು ಮುಟ್ಟ ಗಿಡವಿಲ್ಲ ಗಾದೆ ಇಲ್ಲದ ಭಾಷೆಯಿಲ್ಲ ಎಂದು ಅದಕ್ಕೆ ಹೇಳುವುದು. ಎಲ್ಲಾ ಭಾಷೆಗಳಲ್ಲಿರುವ ಗಾದೆಗಳು ಒಂದೇ ಅರ್ಥವನ್ನು ಹೇಳುತ್ತವೆ. ಉದಾಹರಣೆಗೆ "What Happens it happens for good" ಎಂದಾದರೆ ಕನ್ನಡದಲ್ಲಿ "ಆಗೋದೆಲ್ಲ ಒಳ್ಳೆಯದಕ್ಕೆ." "Work is worship" ಕಾಯಕವೇ ಕೈಲಾಸ ಎನ್ನುತ್ತಾರೆ. ಹೀಗೆ ಆಯಾ ಭಾಷೆಗೆ ತಕ್ಕಂತೆ ಗಾದೆಗಳಿವೆ. ಗಾದೆಗಳು ಒಂದೇ ವಿಷಯಕ್ಕೆ ಸಂಬಂಧಿಸಿಲ್ಲ.

ಮಾನವನ ಪ್ರತಿದಿನದ ರೀತಿ-ನೀತಿಗಳನ್ನು ಅವು ಒಳಗೊಂಡಿವೆ. ಇವುಗಳಲ್ಲಿ ಎಚ್ಚರಿಕೆಯ ಕರೆಗಂಟೆ ಇದೆ. ಉದಾ: ಮೀಸೆ ಬಂದಾಗ ದೇಶ ಕಾಣಲ್ಲ, ಮಲಿ ಬಂದಾಗ ನೆಲ ಕಾಣಲ್ಲ, ಎನ್ನುವಂತೆ, "ತಾಯಿಯಂತೆ ಮಗಳು, ನೂಲಿನಂತೆ ಸೀರೆ," "ಹಿರೇ ಅಕ್ಕನ ಚಾಳಿ ಮನೆಮಂದಿಗೆಲ್ಲ" ಎಂಬ ಗಾದೆಗಳು ಉಪಯುಕ್ತ ಮಾರ್ಗದರ್ಶಕ ಸೂತ್ರಗಳಾಗಿವೆ.

"ಹೆಣ್‌ಮಕ್ಕಳ ಬುದ್ದಿ ಮೊಳಕಾಲ ಕೆಳಗೆ," "ಮೀನಿನ ಹೆಜ್ಜೆ, ಹೆಣ್ಣು ಮಕ್ಕಳ ಮನಸ್ಸು ಅರ್ಥ ಮಾಡಿಕೊಳ್ಳೋಕೆ ಆಗಲ್ಲ" ಹೆಣ್ಣಿನ ಮನಸ್ಸಿಗೆ, ಬುದ್ದಿಗೆ ಸಂಬಂಧಿಸಿದ ಗಾದೆಗಳು ಇಲ್ಲಿ ಹೇರಳವಾಗಿವೆ. ಅದೇ ರೀತಿ ಗಂಡಸಿನ ಗುಣ ಸ್ವಭಾವಗಳನ್ನು ಬಿಂಬಿಸುವ "ನೆಲಕ್ಕೆ ಬಿದ್ರು ಮೀಸೆ ಮಣ್ಣಾಗಲಿಲ್ಲ," "ಸಾವಿರ ಕುದುರೆ ಸರದಾರ ಮನೆ ಹೆಂಡತಿಗೆ ಪಿಂಜಾರ" ಎಂಬ ಅನೇಕ ಗಾದೆಗಳು ಪ್ರಚಲಿತದಲ್ಲಿವೆ. ಆನೆಗುಂದಿ ಸಂಸ್ಥಾನ ಹತ್ತಿರವಿರುವುದರಿಂದ "ಉಂಡೂಟ, ಆನೆಗುಂದಿ ಸಂಬಳ" ಎಂಬ ಮಾತು ಪ್ರಚಲಿತ. ಅದೇ ರೀತಿ "ಕಣ್ಣಿದ್ದೋರ ಕನಗೀರಿ ನೋಡ್ಬೇಕು, ಕಾಲಿದ್ದೋರು ಹಂಪೆ ನೋಡ್ಬೇಕು" ಎಂಬ ಪ್ರಚಲಿತ

ಮಾತೊಂದು ಈ ಭಾಗದ ಪ್ರತಿಯೊಬ್ಬ ಜನಪದರಲ್ಲಿ ಕಂಡು ಬರುತ್ತದೆ. ಇದು ಗಾದೆ ಮಾತಲ್ಲದಿದ್ದರೂ ಗಾದೆಯಂತೆ ಬಳಕೆಯಾಗುತ್ತಿದೆ.

"ಮಾಡೋದು ಮಾಡಂದ್ರೆ ಆಡೋ ದಾಸ್ರಿಂದೆ ಹೋಗಿದ್ರಂತೆ" "ಹಾಸಿಗೆ ಇದ್ದಷ್ಟು ಕಾಲುಚಾಚು," "ಸರಿ ಮನ್ಯಾಕಿ ಸೀರೆ ತಂದರೆ ನೆರಿ ಮನ್ಯಾಕಿ ಉರುಲು ಹಾಕ್ಕೊಂಡ್ಲಂತೆ," "ಅಜ್ಜಿಗೆ ಅರಿವೆ ಚಿಂತ್ಯಾದ್ರೆ ಮೊಮ್ಮಗಳಿಗೆ ಮಿಂಡನ ಚಿಂತೆ" -ಇಂತಹ ನೂರಾರು ವೈವಿಧ್ಯಮಯ ಅನುಭವಗಳಿಂದ ಕೂಡಿದ ಗಾದೆ ಮಾತುಗಳು ಇಲ್ಲಿ ಸಿಗುತ್ತವೆ.

೬.೩.೫. ಒಡಪುಗಳು

ಒಡಬು ಅಥವಾ ಒಡಪು ಎಂದು ಕರೆಸಿಕೊಳ್ಳುವ ವಿಶಿಷ್ಟ ಪ್ರಕಾರ ಇದಾಗಿದೆ. ಧಾರ್ಮಿಕ ಸಮಾರಂಭಗಳಲ್ಲಿ ಅದರಲ್ಲೂ ವಿಶೇಷವಾಗಿ ವೀರಶೈವರ ಧಾರ್ಮಿಕ ಸಮಾರಂಭಗಳಲ್ಲಿ, ವೀರಭದ್ರೇಶ್ವರ ಉತ್ಸವದ ಸಂದರ್ಭಗಳಲ್ಲಿ ಇವುಗಳನ್ನು ಹೆಚ್ಚಾಗಿ ಹೇಳುವುದುಂಟು. ಒಡಬುಗಳು ಶರಣರ ಬೆಡಗಿನ ವಚನಗಳೇ ಆಗಿದ್ದರೂ ಜನಸಂಪರ್ಕದಲ್ಲಿ ಜಾನಪದೀಯವಾದುದು. ಗಮನಾರ್ಹವಾದುದಾಗಿದೆ. ಒಡಬು ಹೇಳುವವನ ಮೈಯಲ್ಲಿ ವೀರಭದ್ರ ದೇವನೇ ಬಂದು ಅವನಿಂದ ಮಾತಾಡಿಸುತ್ತಾನೆಂಬ ತಿಳುವಳಿಕೆಯೂ ಜನರಲ್ಲಿದ್ದು, ಹೇಳುವವನೂ ಹಾಗೆಯೇ ನಟಿಸುತ್ತಾನೆ. ಈ ಸಂದರ್ಭದಲ್ಲಿ ಶಸ್ತ್ರ ಹಾಕಿಕೊಳ್ಳುವುದಂತೂ ಅಚ್ಚರಿ ಮೂಡಿಸುತ್ತದೆ. ಹಾಕಿಕೊಂಡವರಿಗೆ ಎಳ್ಳಷ್ಟು ನೋವಿರುವುದಿಲ್ಲ. ಕನಕಗಿರಿಯಲ್ಲಿ ವಿಶ್ವಕರ್ಮ ಸಮುದಾಯದಲ್ಲಿ ಕಂಡುಬರುವ ಪುರವಂತರು ಶಸ್ತ್ರ ಹಾಕುವ, ಒಡಬು ಹೇಳುವುದನ್ನು ಕಾಯಕವನ್ನಾಗಿ ಮಾಡಿಕೊಂಡವರೂ ಇದ್ದಾರೆ, ಪ್ರತಿವಾಕ್ಯಕ್ಕೂ ನಿಂತು ನಿಂತು ಹೇಳುವಲ್ಲಿ ಭಕ್ತವೃಂದ ಖಡೇ ಖಡೇ (ಖರೇ ಖರೇ) ಎಂಬ ಪಲ್ಲವಿಯನ್ನು ಕೂಡಿಸಬೇಕು. ಅಂದಾಗ್ಯೆ ಹೇಳುವವನ ಉತ್ಸಾಹ ಇಮ್ಮಡಿಗೊಳ್ಳುತ್ತದೆ. ಸಾಮಾನ್ಯವಾಗಿ ಅಂಬಿಗರ ಚೌಡಯ್ಯನ ಬೆಡಗಿನ ವಚನಗನ್ನು ಹೇಳುವುದುಂಟು.

ಆಹಾ ವೀರಾ ಆಹಾ ಸರ್ಪಾ ||ಖಡೇ ಖಡೇ||

ಕೋಣನ ಕೊಂಬಿನ ಮೇಲೆ

ಕಠೋರ ಎಂಬ ಪಟ್ಟಣ ಹುಟ್ಟಿತ್ತು

ಆ ಪಟ್ಟಣದಲ್ಲಿ ಹಾಯ್ ಹಾಯ್ ಎಂಬ ಗೌಡ ಹೂಯ್ ಹೂಯ್ ಎಂಬ ಕುಲಕರ್ಣಿ

ಮ್ಯೆಯ್ ಮ್ಯೆಯ್ ಎಂಬ ತಳವಾರ

ತಳವಾರನ ಹೆಂಡತಿಯು

ತಳವಿಲ್ಲದ ಕೊಡವನ್ನು ತೆಗೆದುಕೊಂಡು

ಜಲವಿಲ್ಲದ ಬಾವಿಗೆ ಹೋದಳು ||ಖಡೇ ಖಡೇ||

ಆ ಜಲವಿಲ್ಲದ ಬಾವಿಯ ಮೇಲೆ

ಬೇರಿಲ್ಲದ ಬೇವಿನ ಮರ ಹುಟ್ಟಿತ್ತು ||ಖಡೇ||

ಬೇರಿಲ್ಲದ ಬೇವಿನ ಮರದ ಮೇಲೆ

ರೆಕ್ಕೆಯಿಲ್ಲದ ಹಕ್ಕಿ ಕುಂತಿತ್ತು ||ಖಡೇ ಖಡೇ||

ಆ ರೆಕ್ಕೆಯಿಲ್ಲದ ಹಕ್ಕಿಯನ್ನು ಕಂಡು

ಕಣ್ಣಿಲ್ಲದವನು ಕೈಯಿಲ್ಲದವನಿಗೆ ಹೇಳಲು ||ಖಡೇ ಖಡೇ||

ಕೈಯಿಲ್ಲದವನು ತುದಿ ಇಲ್ಲದ ಬಾಣವನ್ನು

ತೆಗೆದುಕೊಂಡು ಹೊಡೆಯಲಾಗಿ

ಅದು ಹಕ್ಕಿಗೆ ಬಿತ್ತೊ ಬೀಳಲಿಲ್ಲವೋ ಎಂದಾತ

ನಮ್ಮ ಅಂಬಿಗರ ಚೌಡಯ್ಯ ||ಖಡೇ ಖಡೇ||

ಇಂತಹ ಅನೇಕ ಒಡಬುಗಳು ಇಲ್ಲಿ ಸಿಗುತ್ತವೆ. ಒಟ್ಟಿನಲ್ಲಿ ಒಡಬು ಶಬ್ದೋತ್ಪತ್ತಿಯಲ್ಲಿ ಒಡಪುಗಳಿಗೂ | ಸ್ವರೂಪದಲ್ಲಿ ಒಗಟಿಗೂ ಸಂಬಂಧ ಸಾಧಿಸಿದ ವಿಶಿಷ್ಟ ಪ್ರಕಾರ.

೬.೩.೬. ಒಗಟುಗಳು

ಜನಪದ ಸಾಹಿತ್ಯ ಪ್ರಕಾರಗಳ ಪರಂಪರೆಯಂದರೆ ಪುರಾತನ ಮನಸ್ಸಿನ ಪಳೆಯುಳಿಕೆಗಳೇ ಸರಿ. ಆದ್ದರಿಂದ ಅವುಗಳ ಅಧ್ಯಯನವೆಂದರೆ ಮತ್ತು ನಿಜಕ್ಕೂ ಒಂದರ್ಥದಲ್ಲಿ ಜನಾಂಗದ ಬದುಕಿನಿತಿಹಾಸವೇ ಆಗಿದೆ. ಗೀತೆ, ಕತೆ, ಗಾದೆಗಳ ನಂತರ ಬರುವ ಮತ್ತೊಂದು ಪ್ರಮುಖ ಪ್ರಕಾರವೆಂದರೆ ಒಗಟು. ಯಾವುದೇ ಜನಾಂಗವೊಂದರ ಪ್ರಾಚೀನತೆ ಮತ್ತು ಸಾಂಸ್ಕೃತಿಕ ಬದುಕಿನ ತರತಮ ಘಟ್ಟಗಳ ಅಧ್ಯಯನಕ್ಕೆ ಪೂರಕವಾಗಿ ನಿಲ್ಲಬಹುದಾದ ಪ್ರಕಾರ ಇದಾಗಿದೆ. ಒಗಟುಗಳ ಕಲ್ಪನೆ ಅತ್ಯಂತ ರಂಜನೀಯ. ಇಲ್ಲಿ ಕಲ್ಪನೆಯೆಂದರೆ ಕೇವಲ ಕಲ್ಪನೆಯಲ್ಲ ಬದುಕಿನ ನಾನಾ ಅನುಭವಗಳ ಅವ್ಯಕ್ತ ಅನಿಸಿಕೆಗಳಿಗೆ ವ್ಯಕ್ತರೂಪ ಅವುಗಳಲ್ಲಿ ಅವರವರ ಆಚಾರ-ವಿಚಾರ, ನಡೆ-ನುಡಿ, ನಂಬಿಕೆಗಳು ಮುಂತಾಗಿ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಹೇಳುವ ಎಳೆಗಳೂ ಉಂಟು. ಕನಕಗಿರಿ ಪರಿಸರದಲ್ಲಿ ಇಂತಹ ಮಹತ್ವಪೂರ್ಣ ಒಗಟುಗಳು ಎಲ್ಲ ವರ್ಗಗಳಲ್ಲೂ, ಎಲ್ಲ ವಯೋಮಾನದವರಲ್ಲಿ ಲಿಂಗ ಭೇದವಿಲ್ಲದೆ ಆವರಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಚೋಟುದ್ದ ಹುಡುಗಿಗೆ ಮಾರುದ್ದ ಜಡೆ (ಸೂಜಿ, ದಾರ), ಚಿಕ್ಕಮನೆಗೆ ಚಿನ್ನದ ಬೀಗ (ಮೂಗುತಿ), ತಲೆಗೊಂದು ಕಾಯಿ, ಎಲಿಗೊಂದು ಕಾಯಿ, ಆಟಕೊಂದು ಕಾಯಿ, ದೇವರಿಗೊಂದು ಕಾಯಿ (ಸೀಗೆಕಾಯಿ, ಉಪ್ಪಿನಕಾಯಿ, ಪಾಗದ ಕಾಯಿ, ತೆಂಗಿನ ಕಾಯಿ), ಅಕ್ಕ ತಂಗಿ ಮನಿಗೆ ಹೋಗಂಗಿಲ್ಲ, ತಂಗಿ ಅಕ್ಕನ ಮನಿಗಿ ಹೋಗ್ತಾಳ (ಸೇರು, ಪಾವು), ಬೆಳ್ಳಿ ಚಡಿ ನೆಲಕ್ಕ ಹೊಡಿ (ಸಿಂಬಳ), ಅಪ್ಪನ ರೊಕ್ಕ ಎಣಿಸಲಾರೆ, ಅವ್ವನ ಸೀರೆ ಮಡಚಲಾರೆ (ನಕ್ಷತ್ರ, ಆಕಾಶ) ಹೀಗೆ ಮಾನವನ ವಿವಿಧ ಭಾವನೆಗಳು, ಅಭಿರುಚಿಗಳು, ವಿವಿಧ ಆಲೋಚನೆಗಳು ಕಲ್ಪನಾ ವೈಖರಿಯ ವೈಭವಗಳು ಇಲ್ಲಿನ ಒಗಟುಗಳಲ್ಲಿ ಕಂಡುಬರುತ್ತವೆ.

ಮನೆ ಮಂದಿಗೆಲ್ಲ ಒಂದೇ ಕುಂಡಿ (ಬಚ್ಚಲ), ಜುಟ್ಟಾ ಬಿಟಗೊಂಡು ರೊಟ್ಟಿಗೆ ಬಂದಾನ (ಹಸೆ ಉಳ್ಳಾಗಡ್ಡಿ), ಅಟ್ಟಂಬರಣ್ಯದಾಗ ಚಿಟಗುಬ್ಬಿ ತಲಿ ಒಡದೈತಿ (ಹತ್ತಿ), ಹತ್ತು ತಲೆಯುಂಟು ರಾವಣನಲ್ಲ, ಕಿರೀಟ ಉಂಟು ಕೃಷ್ಣನಲ್ಲ, ಬಾಲ ಉಂಟು ಹನುಮನಲ್ಲ (ಈರೇಕಾಯಿ), ಈಟೆ ಹೊಲ, ಹೊಲಕ್ಕ ನೀರು, ನೀರಿಗೆ ಬೇರು, ಬೇರಿಗೆ ಬೆಂಕಿ (ದೀಪ), ಅಂಕು ಡೊಂಕಿನ ಬಾವಿ, ಶಂಖು ಚಕ್ರದ ಬಾವಿ ಇಣಕಿ ನೋಡಿದರೆ ಒಂದು ಹನಿ ನೀರಿಲ್ಲ (ಕಿವಿ), ಊರೆಲ್ಲ ಸುತ್ತಾಡಿ ಮನಿಗಿ ಬಂದು ಮೂಲ್ಯಾಗ್ ಕುಂದರತೈತಿ (ಚಪ್ಪಲಿ), ಸಂತ್ಯಾಗ ತರ್ತಾರ ಮುಂದಿಟಗೊಂಡು ಅಳತಾರ (ಉಳ್ಳಾಗಡ್ಡಿ) ಗುಡ್ಡದ ನಡಕ ಗೂಗೆ ಗೂಕ್ ಅಂತೈತಿ (ಹೂಸು), ಕಲ್ಲು ಬಸವಣ್ಣಗ ಮರದ ಮೂಗುದಾರ (ಬೀಸುವ ಕಲ್ಲು), ತೇರು ತಿರುಗುತ್ತೈತಿ, ಕುಂಕುಮ ಸುರಿತೈತೆ (ಬೀಸುಕಲ್ಲು),

ಇಂತಹ ಸಾವಿರಾರು ಒಗಟುಗಳು ಇಲ್ಲಿನ ಜನರ ನಾಲಿಗೆಯ ಮೇಲೆ ನಲಿದಾಡುವುದನ್ನು ಕಾಣಬಹುದಾಗಿದೆ. ವಿಶ್ರಾಂತಿ ಸಮಯದಲ್ಲಿ, ಅಥವಾ ಕಾಲಕಳೆಯಲೆಂದು ಇಂತಹ ಒಗಟುಗಳನ್ನು ಹೇಳುವುದು ಸಹಜವಾಗಿ ಕಾಣುತ್ತೇವೆ. ಟಿ.ವಿ. ಜಗತ್ತಿನ ದಾಳಿಗೆ ಒಗಟೂ ಸಹ ಮಾಯವಾಗತೊಡಗಿರುವುದನ್ನು ಕಾಣಬಹುದಾಗಿದೆ.

ಅಧ್ಯಾಯ - ೭

ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳು

ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳು

ಮಂಡಲ ಪಂಚಾಯತಿ ಮಟ್ಟದಲ್ಲಿದ್ದ ಕನಕಗಿರಿ ಗ್ರಾಮವು ಇಂದು ನಗರದ ಬಹುತೇಕ ಲಕ್ಷಣಗಳನ್ನು ಮೈಗೂಡಿಸಿಕೊಂಡು ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತಗಳಿಗೆ ಕಾರಣವಾಗಿದೆ. ಗ್ರಾಮದ ಭೌಗೋಳಿಕ ವಿಸ್ತಾರ ಎರಡು ಪಟ್ಟು ವಿಸ್ತರಿಸಿದೆ. ಮಣ್ಣಿನ ರಸ್ತೆಗಳ ಬದಲಾಗಿ ಕಾಂಕ್ರೀಟ್, ಡಾಂಬರು ರಸ್ತೆಗಳು ಕಾಣಿಸಿಕೊಳ್ಳತೊಡಗಿವೆ. ಟಿ.ವಿ., ಸಿನಿಮಾ, ಸಂಪರ್ಕ ಸಾಧನಗಳಾದ ಸಾರಿಗೆ, ಫೋನ್, ಮೊಬೈಲ್‌ಗಳು ಜನಪದರ ಮೇಲೆ ಗಾಢ ಪ್ರಭಾವ ಬೀರಿವೆ. ಸುತ್ತ ಹತ್ತಾರು ಹಳ್ಳಿಗಳಿಗೆ ವ್ಯಾಪಾರಿ ಕೇಂದ್ರವಾಗಿ ಮಾರ್ಪಟ್ಟಿದೆ. ಕೇವಲ ಕೃಷಿ, ಕುರಿ, ಕೋಳಿ ಸಾಕಾಣಿಕೆ, ಹೈನುಗಾರಿಕೆ, ಗುಡಿಕೈಗಾರಿಕೆ, ಸಣ್ಣಪುಟ್ಟ ವ್ಯಾಪಾರಿಗಳಿಂದ ಜೀವನ ಸಾಗಿಸುತ್ತಾ ಬಂದಿರುವ ಜನರಿಗೆ ಇಂದು ಪ್ರಮುಖ ವ್ಯಾಪಾರೀ ಕೇಂದ್ರವಾಗಿ ಬೆಳೆದಿರುವ ಕನಕಗಿರಿಯು ನೂರಾರು ವ್ಯಾಪಾರ ಉದ್ಯೋಗಿಗಳಿಗೆ ದಾರಿ ಮಾಡಿಕೊಟ್ಟಿದೆ. ಪೋಲೀಸ್ ಸ್ಟೇಷನ್, ನೂತನ ಬಸ್ಟ್ಯಾಂಡ್, ಕೃಷಿ ಮಾರುಕಟ್ಟೆ, ಶಾಲಾ ಕಾಲೇಜುಗಳು, ಪ್ರಥಮದರ್ಜೆ ಕಾಲೇಜು, ಕನಕಾಚಲ ದೇವಸ್ಥಾನದ ಬೃಹತ್ ಕಾಂಪ್ಲೆಕ್ಸ್‌ಗಳು, ಕೃಷಿ ಮಾರುಕಟ್ಟೆ ಕಾಂಪ್ಲೆಕ್ಸ್‌ಗಳು, ಹೊಸ ಮಾದರಿಯ ಮನೆಗಳು ಇನ್ನು ಅನೇಕ ವಿಚಾರಗಳಲ್ಲಿ ಕನಕಗಿರಿಯು ತನ್ನ ಮೂಲ ಸ್ವರೂಪವನ್ನೇ ಬದಲಾಯಿಸಿಕೊಂಡಿದೆ. ಒಟ್ಟಾರೆಯಾಗಿ ಕನಕಗಿರಿಯು ಈಗ ಹಳ್ಳಿಯೂ ಅಲ್ಲದ, ನಗರವೂ ಅಲ್ಲದ ಸಂಕೀರ್ಣಾವಸ್ಥೆಯಲ್ಲಿರುವ ಪ್ರದೇಶವಾಗಿದೆ.

ಸಾಮಾನ್ಯವಾಗಿ ನಗರಗಳ ಉಗಮ ಮಾನವನ ಬುದ್ಧಿವಂತಿಕೆಯ ಬೆಳವಣಿಗೆಯೊಂದಿಗೆ ನಾಗರೀಕತೆ ಮತ್ತು ಸಾಂಸ್ಕೃತಿಕ ಬೆಳವಣಿಗೆಯೂ ಆಗಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಎ.ಇ.ಸ್ಟೆಲ್ಸ್ ಅವರ ಪ್ರಕಾರ ನಗರೀಕರಣ ಎಂದರೆ, ನಗರಗಳಲ್ಲಿ ಮಾನವ ಸಮಾಜಗಳ ಬೆಳವಣಿಗೆಯ ಕ್ರಿಯೆ. "ಒಂದು ಪ್ರದೇಶದಲ್ಲಿನ ಜನಸಂಖ್ಯೆಯ ಒತ್ತಡ ಅತಿಯಾದಾಗ ವಾಸಿಸುವ ಸ್ಥಳಗಳು ವಿಸ್ತಾರವಾಗಿ ವ್ಯಾಪಿಸುತ್ತಾ ಹಳ್ಳಿಯು ನಗರವಾಗಿ ಮಾರ್ಪಾಡಾಗುತ್ತದೆ. ಆಗ ಜನರು ದೈಹಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸ್ಥಿತ್ಯಂತರಕ್ಕೆ ಒಳಪಡುತ್ತಾರೆ. ಹೀಗಿರುವುದರಿಂದಲೇ ಅನೇಕ 'ನಗರ ಜನಪದ ಸಮೂಹ'ಗಳ (Towns Folk Community) ಬೆಳವಣಿಗೆ ಪಡೆಯುತ್ತದೆ. ಇವರ ಹೇಳಿಕೆಯ ಪ್ರಕಾರ ನಗರೀಕರಣಕ್ಕೆ ಎರಡು ಕಾರಣಗಳು ಸಿಗುತ್ತವೆ. ೧. ಭೌಗೋಳಿಕವಾದುದು ೨. ಸಾಮಾಜಿಕವಾದುದು. ಮೊದಲನೆಯದು

ಸ್ಥಳಕ್ಕೆ ಅನ್ವಯಿಸಿದರೆ ಎರಡನೆಯದು ಜನಕ್ಕೆ ಅನ್ವಯಿಸುತ್ತದೆ. ಕನಕಗಿರಿಯು ಸಾಮಾಜಿಕವಾಗಿ ಸ್ಥಿತ್ಯಂತರಗೊಳ್ಳಲು ಪ್ರಮುಖ ಕಾರಣ ಆಧುನಿಕತೆಯ ಪ್ರಭಾವ, ನಗರೀಕರಣ ಮತ್ತು ಭೌಗೋಳಿಕತೆ.

ಮಂಡಲ ಮಟ್ಟದ ಪ್ರದೇಶವಾಗುವ ಎಲ್ಲಾ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ತಾಲೂಕಾ ರಚನೆ ಕೃಷ್ಣಾ ಬಿ.ಸ್ಕೀಂ ನೀರಿನಯೋಜನೆ ಕುರಿತು ಅನೇಕ ವರ್ಷಗಳಿಂದಲೂ ಪಕ್ಷಾತೀತವಾದ ಹೋರಾಟ ಇಲ್ಲಿ ನಡೆಯುತ್ತಲೇ ಬಂದಿದೆ. ಅದರ ಫಲವಾಗಿಯೇ ಎಂಬಂತೆ ಈಗಿನ ಬಿ.ಜೆ.ಪಿ. ಸರ್ಕಾರವು ಕನಕಗಿರಿಯನ್ನು ತಾಲೂಕಾ ಕೇಂದ್ರವಾಗಿ ಮಾಡಲು ಸಮ್ಮತಿ ಸೂಚಿಸಿದೆ. ಪ್ರಾದೇಶಿಕವಾಗಿ ಮಧ್ಯದ ಪ್ರದೇಶವೆಂಬ ದೃಷ್ಟಿಯಿಂದ ಇದನ್ನು ೨-೩ ದಶಕಗಳ ಹಿಂದೆಯೇ ಶಾಸಕರ ಕ್ಷೇತ್ರವನ್ನಾಗಿ ಮಾಡಲಾಗಿದೆ.

ಇಲ್ಲಿನ ವ್ಯವಸಾಯವು ಮಳೆಯಾಧಾರಿತವಾಗಿದೆ. ಇತ್ತೀಚೆಗೆ ರೈತರಿಗೆ ಉಚಿತ ವಿದ್ಯುತ್, ಬೋರ್‌ವೆಲ್, ಎತ್ತು-ಬಂಡಿ ಸಾಲ, ಕೃಷಿ ಸಾಲ, ಉಚಿತ ಬೀಜ ವಿತರಣೆ, ಟ್ರ್ಯಾಕ್ಟರ್ ಸಾಲ ಮುಂತಾದ ನೆರವುಗಳು ಸರಕಾರದಿಂದ ದೊರೆಯುತ್ತಿರುವುದರಿಂದ ಕೃಷಿಕರ ಬದುಕು ತಕ್ಕಮಟ್ಟಿಗೆ ಸುಧಾರಿಸಿದೆ ಎನ್ನಬಹುದು. ಈಗೀಗ ಬೋರ್‌ವೆಲ್ ನೀರಾವರಿ ಹೆಚ್ಚಾಗತೊಡಗಿದೆ. ಕೃಷಿ ಉತ್ಪನ್ನಗಳಿಗೆ ಈಗೀಗ ಸರಿಯಾದ ಬೆಲೆ ಬರುತ್ತಿರುವುದರಿಂದ ರೈತನ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ ಎನ್ನಬಹುದು. ಮೊದಲು ಹೊಲವನ್ನು ಊಳಲು, ದಿಂಡು ಹೊಡೆಯಲು ಮಡಿಕೆ, ಕುಂಟೆಯನ್ನು ಅವಲಂಬಿಸಿದ್ದರು. ಈಗ ಈ ಕೆಲಸಕ್ಕೆ ಹೆಚ್ಚಾಗಿ ಟ್ರ್ಯಾಕ್ಟರನ್ನು ಅವಲಂಬಿಸತೊಡಗಿದ್ದಾರೆ. ಜವಾರಿ ಬೀಜಗಳ ಬದಲಾಗಿ ಹೈಬ್ರೀಡ್ ಬೀಜಗಳ ಬಳಕೆ ಹೆಚ್ಚಾಗಿದೆ. ಕಾಂಪೋಸ್ಟ್ (ಸೆಗಣಿ ಗೊಬ್ಬರ)ಗೊಬ್ಬರದ ಬದಲಾಗಿ ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಾಗತೊಡಗಿದೆ. ಜೋಳ, ಮೆಕ್ಕೆಜೋಳ, ಸಜ್ಜೆ, ಸೂರ್ಯಪಾನಗಳ ರಾಶಿ ಮಾಡಲು ಇಂದು ಯಂತ್ರಗಳನ್ನು ಬಳಸತೊಡಗಿದ್ದಾರೆ. ಹಂತಿ ಹೊಡೆಯುವುದು ಕಡಿಮೆಯಾಗತೊಡಗಿವೆ. ಹಿಂದೆ ರಾಶಿ ತುಂಬುವಾಗ ಟವಲ್‌ನ್ನು ತಲೆಗೆ ಸುತ್ತಿಕೊಳ್ಳುವುದು, ವಿವಿಧ ಅಡುಗೆ ಮಾಡಿ ಚರಗ ಚಲ್ಲುವುದನ್ನು ಮಾಡುತ್ತಿದ್ದರು. ಅದು ಈಗ ನಿಂತುಹೋಗಿದೆ. ಕಾಳು ಕಡಿಗಳನ್ನು ಸಂಗ್ರಹಿಸಲು ಹಿಂದೆ ಕೈರಸಿ, ಹಗೇವು ಬಳಸುತ್ತಿದ್ದರು. ಆದರೆ ಈಗ ಮನೆಯಲ್ಲಿ ಸಂಗ್ರಹಿಸುವುದು ಅಥವಾ ಕೃಷಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿಬರುವ ಪರಿಪಾಠ ಜಾರಿಗೆ ಬಂದಿದೆ.

ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಕೆಲಸ ಬೇಗ ಸಾಗಲು ಜನಪದ ಹಾಡುಗಳನ್ನು ಹಾಡುತ್ತಿದ್ದರು. ಈಗ ಟಿ.ವಿ. ಸಿನಿಮಾ ಹಾಡಿಗೆ ಮನಸೋತು ಅವುಗಳನ್ನೇ ಹಾಡತೊಡಗಿದ್ದಾರೆ. ಹಿಂದೆ ಊರಿಂದ ಊರಿಗೆ ಹೋಗಲು ಅಥವಾ ಸಂತೆಗೆಂದು ಹಳ್ಳಿಯ ಜನರು ಕನಕಗಿರಿಗೆ ಬರಲು ತುಂಬಾ ಕಷ್ಟ ಪಡಬೇಕಾಗುತ್ತಿತ್ತು. ಈಗ ಬಸ್‌ಗಳು, ಜೀಪ್, ಟ್ರ್ಯಾಕ್ಸ್, ಟಂಟಂ ಗಾಡಿಗಳು ಕುಗ್ರಾಮದಂತಹ ಹಳ್ಳಿಗೂ ಹೋಗತೊಡಗಿವೆ. ಹೀಗಾಗಿ ಜನರು ಸಣ್ಣಪುಟ್ಟ ಕೆಲಸಗಳಿಗೂ ಪಟ್ಟಣಕ್ಕೆ ಓಡಿ ಬರುವ ಮಟ್ಟಕ್ಕೆ ಬೆಳೆದಿದ್ದಾರೆ. ಹಿಂದೆ ಫೋನ್‌ಗಳಲ್ಲಿ ಮಾತನಾಡಲು ಭಯಪಡುವ ಜನರು ಇಂದು ಪೋನ್, ಮೊಬೈಲ್‌ಗಳಿಲ್ಲದೆ ಬದುಕಲು ಆಗುವುದಿಲ್ಲ ಎಂಬಂತಾಗಿದ್ದಾರೆ. ಮನೆ ಮನೆಗೆ ಬಣ್ಣದ ಟಿ.ವಿ. ಜೇಬು

ಜೇಬಿಗೆ ಮೊಬೈಲ್‌ಗಳು ನವನಾಗರೀಕತೆಯ ಸಂಕೇತಗಳಾಗಿವೆ. ವ್ಯಾಪಾರ, ವಹಿವಾಟು, ಸಂಬಂಧಿಕರ ಉಭಯ ಕುಶಲೋಪರಿ ಇತ್ಯಾದಿ ವಿಷಯಗಳು ಫೋನ್, ಮೊಬೈಲ್‌ಗಳಲ್ಲಿ ನಡೆಯತೊಡಗಿವೆ. ನೂತನ ಬಸ್ಟ್ಯಾಂಡ್, ಕೃಷಿ ಮಾರುಕಟ್ಟೆ ಆದಾಗಿನಿಂದ ಊರಿನ ಸ್ವರೂಪ ಬದಲಾಗಿದೆ. ದಿಢೀರನೆ ಊರು ವಿಸ್ತಾರಗೊಂಡಿದೆ. ರಿಕ್ಷಾಗಳೇ ಇಲ್ಲದ ಇಲ್ಲಿ ಈಗ ಆಟೋಗಳು ಓಡಾಡ ತೊಡಗಿವೆ. ಕನಕನಾಲೆಗೆ ಹೊಸ ವಿಸ್ತರಿತ ಸೇತುವೆ, ಹೊಸ ಸ್ವಾಗತ ಕಮಾನು ಮೂಲ ಸ್ವರೂಪದ ಬದಲಾವಣೆಗೆ ಕಾರಣಗಳಾಗಿವೆ. ಕಾಲೇಜು ಮಟ್ಟದ ಶಿಕ್ಷಣಕ್ಕೆ ಗಂಗಾವತಿಯನ್ನು ಅವಲಂಬಿಸಿದ ಜನರೀಗ ಇಲ್ಲಿಯೇ ಪದವಿವರೆಗಿನ ಶಿಕ್ಷಣ ಪಡೆಯುವ ಸೌಲಭ್ಯ ಹೊಂದಿದ್ದಾರೆ. ಕಂಪ್ಯೂಟರ್ ಕೇಂದ್ರಗಳು ತಲೆ ಎತ್ತಿವೆ. ಹೆಣ್ಣುಮಕ್ಕಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ಗಂಡಸರನ್ನು ಮೀರಿಸಿ ಈ ಹಿಂದಿನ ಪರಂಪರೆಯನ್ನೇ ಬದಲಾಯಿಸಿದ್ದಾರೆ. ಇತ್ತೀಚಿನ ಪ್ಲಾಸ್ಟಿಕ್ ಮತ್ತು ನೈಲಾನ್ ವಸ್ತುಗಳ ಕ್ರಾಂತಿಯಿಂದಾಗಿ ಕುಂಬಾರರ ಮಡಿಕೆ ಕುಡಿಕೆಗಳನ್ನು ಜನಪದರು ಮೂಲೆಗೆ ತಳ್ಳಿದ್ದಾರೆ. ಮೌಲ್ಡಿಂಗ್ ಚಪ್ಪಲಿಗಳು ಸೇರಿದಂತೆ ನೂತನ ಮಾದರಿಯ ಆಕರ್ಷಕ ಚಪ್ಪಲಿಗಳು ಮಾರುಕಟ್ಟೆಗೆ ಬಂದಾಗಿನಿಂದ ಮುಚ್ಚಿಗರು ತಮ್ಮ ಕುಲಕಸುಬನ್ನು ಕೈಬಿಟ್ಟು ಬೇರೆ ಕೆಲಸಕ್ಕೆ ಹೋಗತೊಡಗಿದ್ದಾರೆ. ಪ್ಲಾಸ್ಟಿಕ್, ಲೋಹದ ಪುಟ್ಟಿಗಳು ಬಂದಾಗಿನಿಂದ ಕೊರವರು ತಯಾರಿಸುವ ಪುಟ್ಟಿ, ಮರ, ಕಸಬರಿಗೆ ಕೊಳ್ಳುವವರಿಲ್ಲದಾಗಿ ಕೊರವರು ಆರ್ಥಿಕ ಸಂಕಷ್ಟಕ್ಕೊಳಗಾಗುವಂತಾಗಿದೆ. ಒಟ್ಟಾರೆಯಾಗಿ ಜಾಗತೀಕರಣದ, ನಗರೀಕರಣದ ಬಿಸಿ ಇಲ್ಲಿನ ಕುಂಬಾರ, ಕೊರವ, ಮುಚ್ಚಿಗ, ಕಂಬಾರ, ಮಡಿವಾಳ, ನೇಕಾರ ಮುಂತಾದ ಗುಡಿ ಕೈಗಾರಿಕೆಯನ್ನು ಅವಲಂಬಿಸಿದ ಜನರಿಗೆ ತಟ್ಟದೇ ಇಲ್ಲ.

ಹಿಂದೆ ಜಾತಿ, ಅಸ್ಪೃಶ್ಯತೆಯ ಆಚರಣೆ ಹೆಚ್ಚಾಗಿ ಕಂಡು ಬರುತ್ತಿತ್ತು. ಬದಲಾದ ಸನ್ನಿವೇಶದಲ್ಲಿ ಇದು ಕಡಿಮೆಯಾಗತೊಡಗಿದೆ. ಇಲ್ಲಿನ ಕನಕಾಚಲ ದೇವಸ್ಥಾನದಲ್ಲಿ ಜಾತಿ, ಮತ, ಧರ್ಮದ ಯಾವುದೇ ನಿಷೇಧಗಳು ಇಲ್ಲ. ಹೋಟೆಲ್, ಬಾವಿ, ಮುಂತಾದ ನಿರ್ಬಂಧಿತ ಸ್ಥಳಗಳು ಈಗ ಇವರಿಗೆ ಅನಿರ್ಬಂಧಿತ ಸ್ಥಳಗಳಾಗಿವೆ. ಹಿಂದುಳಿದ ಸಮುದಾಯಗಳು ಸಹ ಊಟ-ಉಪಚಾರ ಉಡುಗೆ-ತೊಡುಗೆ, ಆಚಾರ-ವಿಚಾರ, ಮುಂತಾದ ವಿಷಯಗಳಲ್ಲಿ ಆಧುನಿಕತೆಯತ್ತ ವಾಲತೊಡಗಿರುವುದು ಕಂಡುಬರುತ್ತದೆ. ಮೇಲ್ವರ್ಗಗಳಲ್ಲಿ, ಶ್ರೀಮಂತರಲ್ಲಿ ಮಾತ್ರ ಕಂಡುಬರುತ್ತಿದ್ದ ಶಿಕ್ಷಣ ಈಗ ಸರಕಾರದ ಎಲ್ಲ ರೀತಿಯ ನೆರವಿನ ಪ್ರಭಾವದಿಂದಾಗಿ ಎಲ್ಲಾ ವರ್ಗಗಳಲ್ಲಿಯೂ ಕಂಡುಬರುತ್ತಿದೆ.

ಹಿಂದೆ ಶಿವರಾತ್ರಿಯಂದು ದೇವಸ್ಥಾನದಲ್ಲಿ ಜಾಗರಣೆ, ಕೀರ್ತನೆ, ಭಜನೆ, ಪುರಾಣ, ಪ್ರವಚನ ನಡೆಯುತ್ತಿತ್ತು. ಆದರೆ ಇಂದು ಇಂತಹ ಪದ್ಧತಿಯು ಕಡಿಮೆಯಾಗಿ ಟಿ.ವಿ.ಯಲ್ಲಿ ಸಿನೆಮಾ, ದಾರವಾಹಿಗಳನ್ನು ನೋಡುತ್ತ ಜಾಗರಣೆ ಆಚರಿಸುತ್ತಾರೆ. ಮನರಂಜನೆಯ ಸಾರ್ವಭೌಮ ಎನಿಸಿಕೊಂಡ ಟಿ.ವಿ. ಬಂದಾಗಿನಿಂದ ದೇವಸ್ಥಾನದಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವವರೂ ಸಹ ಕಡಿಮೆ ಯಾಗತೊಡಗಿದ್ದಾರೆ.

ಇಲ್ಲಿನ ಬಹುತೇಕ ಜನಪದ ವರ್ಗಗಳ ಮದುವೆ ಆಚರಣೆಗಳ ಬಗ್ಗೆ ಪ್ರಶ್ನಿಸಿದಾಗ, ಎಲ್ಲರಲ್ಲೂ ಬರುವ ಒಂದೇ ಉತ್ತರವೆಂದರೆ "ಹಿಂದೆ ಒಂದು ವಾರದವರೆಗೆ ಮದುವೆ ಕಾರ್ಯಗಳು ನಡೆಯುತ್ತಿದ್ದವು. ಈಗ ಎರಡು ದಿನಗಳಿಗೆ ಸೀಮಿತವಾಗಿದೆ" ಎಂಬುದು. ಹಿಂದೆ ವರೋಪಚಾರವನ್ನು ಸ್ವ-ಇಚ್ಛೆಯಿಂದ ಮಾಡುತ್ತಿದ್ದರೆ ಈಗ ಅದು ಖಡ್ಡಾಯವಾಗಿದೆ. ಬೀಗರನ್ನು ಹೇಗೆ ನೋಡಿಕೊಳ್ಳಬೇಕು ಎಂಬುದರ ಬಗ್ಗೆ, ಊಟೋಪಚಾರಗಳ ಬಗ್ಗೆ ಪಟ್ಟಿ ತಯಾರಿಸಿ ಕೊಡುವ ಕಾಲ ಬಂದಿದೆ. ಅಂದರೆ ಮದುವೆಗಳು ಪ್ರೀತಿ, ವಿಶ್ವಾಸದ ಚೌಕಟ್ಟಿನ ಮೇಲೆ ನಡೆಯದೆ ವ್ಯವಹಾರಿಕ ಚಟುವಟಿಕಯಾದಂತಾಗಿದೆ. ಮದುವೆಯ ಸಂದರ್ಭದಲ್ಲಿ ಹಲವು ಹೊಸ ಆಚರಣೆಗಳು ರೂಢಿಗೆ ಬರತೊಡಗಿವೆ. ಹಿಂದೆ ಇಲ್ಲದಂತಹ ಹೊಸ ಬ್ಯಾಂಡ್ ಸಿಸ್ಟಮ್‌ಗಳು, ಆರ್ಕೆಸ್ಟ್ರಾಗಳು, ವಿವಿಧ ಅಲಂಕಾರಗಳನ್ನು ಹೊಂದಿರುವ ಮದುವೆಯ ಚಪ್ಪರಗಳು, ದೀಪಾಲಂಕಾರ ವ್ಯವಸ್ಥೆ, ಮದುವೆಯ ಜೋಡಿಗಳನ್ನು ಕೂಡಿಸಲು ಹೊಸ ಮಾದರಿಯ ಅಲಂಕಾರ ಖುರ್ಚಿಗಳು, ಮದುಮಗಳಿಗೆ ಹಾಕುವ ಮದರಂಗಿಯ ಅಲಂಕಾರಿಕ ಚಿತ್ತಾರಗಳು, ಆಭರಣೆಗಳಲ್ಲೂ ನವೀನತೆ, ಬಟ್ಟೆ ಉಡುಗೆ-ತೊಡುಗೆಗಳಲ್ಲಿ, ಫೋಟೋ, ವಿಡಿಯೋಗಳಲ್ಲಿ ಇನ್ನೂ ಮುಂತಾದವುಗಳಲ್ಲಿ ಆಧುನೀಕತೆಯ ಛಾಪನ್ನು ಗುರುತಿಸಬಹುದು. ಮೊದಲು ಮದುವೆ ಬಟ್ಟೆಗಳನ್ನು ತರಲು ಹಿರಿಯರು ಹೋಗುತ್ತಿದ್ದರು. ಆದರೆ ಇಂದು ಮದುಮಕ್ಕಳೆ ಹಿರಿಯರೊಂದಿಗೆ ಹೋಗುತ್ತಾರೆ. ಹಿಂದೆ ಮದುಮಕ್ಕಳು ತಾಳಿಯ ಸಮಯದಲ್ಲಿಯೇ ನೋಡುತ್ತಿದ್ದರು. ಆದರೆ ಈಗ ನಿಶ್ಚಿತಾರ್ಥವಾದ ಕೂಡಲೆ ಮದುಮಕ್ಕಳು ಹೊರಗಡೆ ತಿರುಗಾಡುವುದು, ಸಿನಿಮಾ ನೋಡಲು ಹೋಗುವ ರೂಢಿ ಹೆಚ್ಚಾಗತೊಡಗಿದೆ. ಹಿಂದಿನ ಮದುವೆಯ ಆಚರಣೆಗಳಲ್ಲಿ ಪ್ರತಿಯೊಂದು ಕಾರ್ಯಕ್ಕೂ ಸೋಬಾನೆ ಪದಗಳು ಬಳಕೆಯಲ್ಲಿದ್ದವು. ಆದರೆ ಸಂಸ್ಕೃತಿಯ ಸ್ಥಿತ್ಯಂತರದಿಂದಾಗಿ ಅವುಗಳನ್ನು ಹೇಳುವವರೂ, ಕೇಳುವವರೂ ಇಲ್ಲದಂತಾಗಿದೆ. ಮದುವೆಗಳಲ್ಲಿ ಹುತ್ತಿನಮಣ್ಣು ತರುವ ಪದ್ಧತಿ, ಐರಾಣಿ ಪದ್ಧತಿ, ಮದುಮಗಳನ್ನು ಬಚ್ಚಿಡುವ ಪದ್ಧತಿ, ಇಂತಹ ಅನೇಕ ಆಚರಣೆಗಳು ಕಡಿಮೆಯಾಗತೊಡಗಿವೆ. ಹಿಂದೆ ಮದುವೆಯಾಗಲು ಜಾತಕ ಖಡ್ಡಾಯವಾಗಿ ಕೂಡಿ ಬರಬೇಕಾಗಿತ್ತು. ಈಗ ಈ ಕ್ರಮ ಸಡಿಲಗೊಂಡಿದೆ. ಹಿಂದೆ ಅನೇಕ ಸಮುದಾಯಗಳಲ್ಲಿ ಇರುವ ಉಪಜಾತಿಗಳ ಮಧ್ಯ ಮದುವೆ ನಡೆಯುತ್ತಿರಲಿಲ್ಲ. ಈಗ ನಡೆಯತೊಡಗಿವೆ. ಹಿಂದೆ ಹೆಂಡತಿಯಾಗಿ ಬರುವವಳು ಗೃಹಿಣಿಯಾಗಿದ್ದರೆ ಸಾಕೆನ್ನುತ್ತಿದ್ದರು. ಆದರೆ ಅತಿಯಾದ ಬೆಲೆ ಏರಿಕೆಯಿಂದಾಗಿ ಇಬ್ಬರೂ ದುಡಿಯಬೇಕಾದ ಅನಿವಾರ್ಯತೆಯಿಂದಾಗಿ ನೌಕರಸ್ಥ ಹುಡುಗಿಯನ್ನೇ ಮದುವೆಯಾಗಲು ಬಯಸುತ್ತಾರೆ, ಅಥವಾ ಹೆಂಡತಿಯನ್ನು ಹೊರಗೆ ದುಡಿಯಲು ಕಳಿಸುತ್ತಾರೆ.

ಹೆಣ್ಣುಮಕ್ಕಳು ಅಲಂಕಾರಕ್ಕಾಗಿ ಬ್ಯೂಟಿಪಾರ್ಲರ್‌ಗಳಿಗೆ ಹೋಗುವುದು ಸಾಮಾನ್ಯವಾಗಿದೆ. ಪ್ಯಾಂಟ್, ಶರ್ಟ್, ಮಿಡಿ, ನೈಟಿ ಮುಂತಾದ ಆಧುನಿಕ ರೀತಿಯ ಡಿಸೈನ್ ಸೀರೆಗಳನ್ನು ಬಳಸಿದರೆ, ಯುವಕರು ಶರ್ಟ್, ಪ್ಯಾಂಟ್, ಬನಿಯನ್, ಟೀಶರ್ಟ್, ಬರ್ಮುಡಾ, ಹಾಫ್‌ಫ್ಯಾಟ್, ನೈಟ್‌ಪ್ಯಾಂಟ್ ಹೀಗೆ ಸಿನಿಮಾ ಶೈಲಿಯ ಉಡುಪುಗಳನ್ನು ತೊಡುವುದನ್ನು ಕಾಣಬಹುದಾಗಿದೆ.

ಕನಕಾಚಲನ ತೇರಿಗಿಂತ ಎತ್ತರದ ಮನೆಗಳು ಇರಬಾರದು ಎಂಬ ಕಾರಣದಿಂದ ಮೇಲಂತಸ್ತಿನ ಮನೆ ಕಟ್ಟುವ ಬಗ್ಗೆ ಸಾಂಪ್ರದಾಯಕ ನಿಷೇಧವಿತ್ತೆಂದು ಹೇಳಲಾಗುತ್ತದೆ. ಆದರೆ ಇಂದು ಈ ನಿಷೇಧದ ಹೊರತಾಗಿಯೂ ಅಂತಸ್ತಿನ ನವ ನವೀನ, ಆಧುನಿಕ ಶೈಲಿಯ ಆರ್.ಸಿ.ಸಿ.ಮನೆಗಳು ನಿರ್ಮಾಣವಾಗಿವೆ. ಮನೆಯ ರಚನೆಗಳಲ್ಲೂ ಹೊಸ ಮಾದರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಮನೆಯ ಒಳಗಡೆ, ಪಡಸಾಲೆಯಲ್ಲಿ ಸೋಫಾ, ಖುರ್ಚಿಗಳು, ನಡುಮನೆಯಲ್ಲಿ ಅಲಂಕಾರಿಕ ವಸ್ತುಗಳು, ಷೋಕೇಸ್‌ಗಳು, ಟೈಲ್ಸ್‌ನ ನೆಲಹಾಸು, ಕಾಂಪೌಂಡ್, ಬೋರ್‌ವೆಲ್, ಟಿ.ವಿ., ಸೋಲಾರ್ ಹೀಟರ್‌ಗಳು, ಸೋಲಾರ್ ಲ್ಯಾಂಪ್‌ಗಳು ಇಂತಹ ವಸ್ತುಗಳಿಂದ ಬದಲಾಗಿದೆ. ಮನೆಯ ಪೂಜಾ ವಿಧಾನಗಳಲ್ಲೂ, ದೇವರುಗಳ ವಿಷಯದಲ್ಲೂ ಸಾಕಷ್ಟು ಬಲಾವಣೆಗಳಾಗಿರುವುದನ್ನು ಕಾಣಬಹುದು. ಉದಾ: ಅಭಿಷೇಕ ಮಾಡಿಸುವುದು, ಕುಂಕುಮಾರ್ಚನೆ, ಅಯ್ಯಪ್ಪಸ್ವಾಮಿ, ಶಿರಿಡಿ ಸಾಯಿಬಾಬಾ, ಗಣೇಶ, ತಿರುಪತಿ, ಸತ್ಯನಾರಾಯಣ ಪೂಜಾ ಹೀಗೆ ಹಲವು ದೇವರುಗಳನ್ನು ಪೂಜಿಸುವ ಪದ್ಧತಿ ಕಂಡುಬರುತ್ತದೆ. ಇವೆಲ್ಲ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಗಮನ ಸೆಳೆಯುತ್ತವೆ.

ಹಿಂದೆ ವಿಶ್ರಾಂತಿ ಸಮಯದಲ್ಲಿ ಕಬಡ್ಡಿ, ಮುಂಗೈ ಆಟ, ಗುಂಡು ಎತ್ತುವುದು, ಬಂಡಿಗಾಲಿ ಎತ್ತುವುದು ಇನ್ನು ಮುಂತಾದ ಆಟಗಳು ಕಂಡುಬರುತ್ತಿದ್ದವು. ಈಗ ಟಿ.ವಿ.ಯ ಪ್ರಭಾವದಿಂದಾಗಿ ಇವುಗಳು ಮರೆಯಾಗತೊಡಗಿವೆ. ಶಾಲಾಮಕ್ಕಳಲ್ಲಿ ಕ್ರಿಕೆಟ್ ಆಟದ ಹುಚ್ಚುಹೆಚ್ಚಾಗತೊಡಗಿದೆ. ಜಾನಪದೀಯ ಆಹಾರ ಪದ್ಧತಿಯ ಜೊತೆ ಜೊತೆಗೆ ಬೇಕರಿ ತಿಂಡಿಗಳಾದ ಬ್ರೆಡ್, ಕೇಕ್, ಪಫ್, ಚಾಕೋಲೇಟ್, ಕುರ್‌ಕುರೆಯಂತಹ ಪದಾರ್ಥಗಳು ಜನರಲ್ಲಿ ಬೆರೆತು ಹೋಗಿವೆ.

ಹಿಂದೆ ದೈವ ಪಂಚಾಯತಿಗಳಲ್ಲಿ ನ್ಯಾಯತೀರ್ಮಾನವಾಗುತ್ತಿದ್ದರೆ, ಈಗ ಅದು ಕಡಿಮೆಯಾಗಿ ಸರ್ಕಾರದ ಕಾನೂನುಗಳಾದ ಪೋಲೀಸ್, ಕೋರ್ಟ್, ಕಛೇರಿಗಳ ಮೆಟ್ಟಿಲು ಹತ್ತುವುದು ಕಂಡುಬರುತ್ತದೆ. ಈ ರೀತಿ ನ್ಯಾಯವ್ಯವಸ್ಥೆಯಲ್ಲಿ ಬದಲಾಗಿರುವುದು ಕಂಡುಬರುತ್ತದೆ. ಆಧುನೀಕರಣದಿಂದ ಕುಟುಂಬ ಮತ್ತು ಸಾಮಾಜಿಕ ಮೌಲ್ಯಗಳ ಮೇಲೆ ಗಾಢ ಪರಿಣಾಮ ಬೀರಿವೆ. ಇಲ್ಲಿ ಎಲ್ಲಾ ಜನಪದ ವರ್ಗಗಳಲ್ಲಿ ಅವಿಭಕ್ತ ಕುಟುಂಬಗಳಿದ್ದವು. ಅವುಗಳಿಂದ ಪರಸ್ಪರ ಸುಖ ದುಃಖದಲ್ಲಿ ಸಮಪಾಲು ಎಲ್ಲರಿಗೂ ದೊರೆಯುತಿತ್ತು. ಆದರೆ ಇಂದು ನಗರೀಕರಣದ ಬೆಳವಣಿಗೆಯಿಂದಾಗಿ ಉದ್ಯೋಗಗಳನ್ನು ಹುಡುಕಿಕೊಂಡು ಹೋಗುವವರು ಕೆಲವರಾದರೆ, ಹಿರಿಯರೊಂದಿಗೆ ಹೊಂದಾಣಿಕೆಯಿಂದ ಬದುಕಲಾರದೆ ಸ್ವತಂತ್ರವಾಗಿ ಬದುಕುವ ಆಸೆಯಿಂದ ಅವಿಭಕ್ತ ಕುಟುಂಬಗಳು ಒಡೆದು ಹೋಗಿ ಪರಸ್ಪರ ನೈತಿಕ ಹಕ್ಕುಗಳನ್ನು ಕಳೆದುಕೊಂಡು ವಿಭಕ್ತ ಕುಟುಂಬಗಳಾಗಿವೆ.

ಅಡುಗೆಗೆ ಹಿಂದೆ ಮಡಿಕೆ, ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆಗಳನ್ನು ಬಳಸುತ್ತಿದ್ದರೆ, ಇಂದು ಕುಕ್ಕರ್, ಫಿಲ್ಟರ್, ಮಿಕ್ಸಿ, ಒವೆನ್, ಫ್ರಿಜ್, ಗ್ಯಾಸ್‌ಒಲೆ ಇತ್ಯಾದಿ ಬಳಕೆಯಲ್ಲಿದೆ. ಕೆಲವೊಂದು ಹಬ್ಬಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಜನಪದ ಪ್ರದರ್ಶನ ಕಲೆಗಳಾದ ನಾಟಕ, ಬಯಲಾಟ, ಗೊಂದಲಿಗರ

ಆಟ, ತೊಗಲು ಗೊಂಬೆ, ಸೂತ್ರದ ಗೊಂಬೆಯಾಟ, ಡಪ್ಪಿನಾಟ, ಡೊಂಬರಾಟಗಳು ಪ್ರದರ್ಶನಗೊಳ್ಳುತ್ತಿದ್ದವು. ಇಂದು ದೂರದರ್ಶನ, ಸಿನಿಮಾದ ಪ್ರಭಾವದಿಂದ ಇವು ನಶಿಸತೊಡಗಿವೆ.

ಅತಿಯಾದ ಆಧುನೀಕರಣ ಜಾನಪದಕ್ಕೆ ಮಾರಕ ಎಂದು ಕೆಲವರು ಹೇಳುತ್ತಾರೆ. ಅದೆಷ್ಟು ಸತ್ಯವೋ ತಿಳಿಯದು. ಆದರೆ ತೀರಾ ಮುಂದುವರೆದ ದೇಶಗಳಾದ ಚೀನಾ, ಜಪಾನ್, ಅಮೇರಿಕಾಗಳು ಕರ್ನಾಟಕದಿಂದ ತೊಗಲುಗೊಂಬೆಯಾಟದಂತಹ ಜನಪದ ಕಲೆಗಾರರನ್ನು ಕರೆಸಿಕೊಂಡು ಪ್ರೋತ್ಸಾಹಿಸುತ್ತಿದೆ. ಆ ದೇಶದ ಜನರೆಲ್ಲ ಜಾನಪದಕ್ಕೆ ತೋರಿಸಿದ ಆಸಕ್ತಿಯನ್ನು ನೋಡಿದರೆ ನಮ್ಮ ಜನಕ್ಕೆ ಏನಾಗಿದೆಯೋ ಏನೋ ಅನ್ನಿಸುತ್ತದೆ. ಆಧುನಿಕತೆಗೆ ಒಳಗಾದ ಜನರು ಜಾನಪದವನ್ನು ಉಪೇಕ್ಷಿಸುತ್ತಿದ್ದಾರೆ. ಇದು ಹಳ್ಳಿಗರಿಗೆ ಸಂಬಂಧಿಸಿದ್ದು, ಅವಿದ್ಯಾವಂತರ, ಕೆಳಸ್ತರದ ಸಮಾಜದ ವ್ಯಕ್ತಿಗಳ ಆಚಾರ-ವಿಚಾರ, ಸಂಪ್ರದಾಯ, ನಂಬಿಕೆ, ಸಾಹಿತ್ಯಗಳು ಮಾತ್ರ ಎಂಬ ತಪ್ಪು ತಿಳುವಳಿಕೆಯಿರುವುದರಿಂದ ಈ ತಪ್ಪು ಗ್ರಹಿಕೆ. ಆದರೆ ಯಾವುದೇ ಒಂದು ಜನಪದ ಆಚರಣೆ, ಸಂಪ್ರದಾಯ ಕಲೆಗಳ ಹಿಂದೆ ಒಂದು ವೈಜ್ಞಾನಿಕ ದೃಷ್ಟಿಕೋನ ಇದ್ದೇ ಇದೆ. (ಅಧ್ಯಾಯ ಐದರ ವಿಧಿನಿಷೇಧಗಳ ಶೀರ್ಷಿಕೆಯಡಿ ಈ ಬಗೆಗಿನ ವಿವರ ನೋಡಬಹುದು).

ಹೀಗೆಯೇ ಹಿರಿಯರಿಂದ ಬಂದ ಸಂಪ್ರದಾಯ, ಆಚರಣೆ, ಪದ್ಧತಿಗಳು ಬಳುವಳಿ ಎಂದು ಭಾವಿಸಿ ಅಂಧಶ್ರದ್ಧೆಯಿಂದ ಅನುಭವಿಸದೆ ಅವುಗಳ ಸಾರಾ-ಸಾರ ವಿಚಾರಗಳನ್ನು ಅರಿತುಕೊಳ್ಳಬೇಕು. ಪಳೆಯುಳಿಕೆಗಳು ಅವೈಜ್ಞಾನಿಕ ಸಂಗತಿಗಳು ನಶಿಸಿದರೂ ನಷ್ಟವಿಲ್ಲ. ಜಾನಪದ ಚಾರಿತ್ರಿಕ ಅರಿವು ಅವು ವರ್ತಮಾನದಲ್ಲಿ ಪಡೆಯುತ್ತಿರುವ ಸ್ಥಿತ್ಯಂತರ, ಬದಲಾಗುತ್ತಿರುವ ಬದುಕಿನ ಸಂದರ್ಭದಲ್ಲಿ ಜಾನಪದದ ಮೌಲ್ಯಮಾಪನ ಇವು ನಮ್ಮ ಜಾನಪದದ ಅಧ್ಯಯನದ ನಿರ್ದೇಶನ ತತ್ವಗಳಾಗಿರಬೇಕು.

ಸ್ವತಂತ್ರಪೂರ್ವಕ್ಕೂ ಮೊದಲು ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ಇರಲಿಲ್ಲ. ಆಗ ಇಲ್ಲಿರುವಂತಹ ಆಚರಣೆಗಳೆಲ್ಲಾ ಜಾನಪದವೇ ಆಗಿದ್ದಿತು. ಮುಂದೆ ಅಕ್ಷರ ಕಲಿತ ನಂತರ ಜನರ ಆಚಾರ-ವಿಚಾರ ಆಲೋಚನಾ ಕ್ರಮಗಳೆಲ್ಲಾ ಬದಲಾವಣೆಗಳಾದವು. ನಾಗರೀಕತೆ ಮತ್ತು ವೈಜ್ಞಾನಿಕ ಸವಲತ್ತುಗಳು ಜೀವನ ವಿಧಾನವನ್ನೇ ಬದಲಿಸಿದಾಗ, ಜೀವನ ವಿಧಾನದ ಒಂದು ಅಂಗವಾದ ಜಾನಪದವು ಬದಲಾಗುತ್ತದೆ. ನಾಗರೀಕತೆಯ ಚೌಕಟ್ಟಿನಲ್ಲಿ ನಾಗರೀಕತೆಯನ್ನು ಮೈಗೂಡಿಸಿಕೊಂಡ ಜನರು ಸಂಕೀರ್ಣವಸ್ಥೆಯಲ್ಲಿದ್ದಾರೆ. ಹೀಗಾಗಿ ಅಸಲಿ ಜಾನಪದ ಅಂಗಗಳಾದ ಕಲೆ, ಸಾಹಿತ್ಯಗಳನ್ನು ಬದಿಗೊತ್ತುತ್ತಾ ಹೋಗುತ್ತಾರೆ. ಮ್ಯಥೂ ಅರ್ನಾಲ್ಡ್‌ರ ಪ್ರಕಾರ "ಸಂಸ್ಕೃತಿಯು ಸಮಾಜ ಜೀವನದ ಉಪಸೃಷ್ಟಿ". ಇ.ಬಿ. ಟೈಲರ್ ಪ್ರಕಾರ "ಸಂಸ್ಕೃತಿ ಅಥವಾ ನಾಗರೀಕತೆ ಎಂಬುದು ಜ್ಞಾನ, ನಂಬಿಕೆ ಕಲೆ, ನೀತಿ, ಕಾನೂನು, ಸಂಪ್ರದಾಯಗಳು ಹಾಗೂ ಮನುಷ್ಯ ತನ್ನ ಸಮಾಜದ ಸದಸ್ಯನಾಗಿ ಗಳಿಸಿರಬಹುದಾದ ಬೇರೆ ಯಾವುದೇ ಅರ್ಹತೆಗಳ ಮತ್ತು ಅಭ್ಯಾಸಗಳ ಸಂಕೀರ್ಣ ಮೊತ್ತ" ಹೊಸದೊಂದನ್ನು ಕಲಿಯುವುದು ಕೂಡ ಒಂದು ಸಂಸ್ಕೃತಿಯೇ ಆಗುತ್ತದೆ. ಅದು ನಿರಂತರ ಪರಿವರ್ತನೆಗೂ ಒಳಗಾಗುತ್ತಿರುತ್ತದೆ. ತೀವ್ರಗತಿಯಲ್ಲಿ ಬದಲಾಗುತ್ತಿರುವ ಸಾಮಾಜಿಕ ಜೀವನದ ಸಂದರ್ಭದಲ್ಲಿ ಜಾನಪದಕ್ಕೆ ವಿಶೇಷ ಆದ್ಯತೆ ಕೊಡಲೇಬೇಕು.

ಆದ್ದರಿಂದ ಮಂದಗತಿಯಲ್ಲಿ ಬದಲಾಗುತ್ತಿರುವ ಕನಕಗಿರಿಯ ಜನಪದರ ಅಧ್ಯಯನದ ವಿಧಾನಗಳನ್ನು ನಾವಿಲ್ಲಿ ರೂಪಿಸುವಾಗ ಪ್ರಸ್ತುತ ಜನಪದರ ಜನಪದ ಅಂಶಗಳನ್ನು ಕ್ರಿಯಾತ್ಮಕ ಮೌಲ್ಯಗಳನ್ನು (Fanctional value) ಗಮನಿಸಿದ್ದೇನೆ. ಕನಕಗಿರಿಯ ಸಾಂಸ್ಕೃತೀಕರಣವನ್ನು ಚಿತ್ರಿಸುವರೊಂದಿಗೆ ಇಲ್ಲಿನ ಐತಿಹಾಸಿಕ ಸ್ವರೂಪ ಗುರುತಿಸಿ, ಪಾಳೇಗಾರರ ಧಾರ್ಮಿಕ, ಸಾಂಸ್ಕೃತಿಕ ಐತಿಹಾಸಿಕ ಮೌಲ್ಯಾಧಾರಿತ ಜೀವನ ಶೈಲಿ ಜನಪದರ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂಬುದನ್ನು ಖಚಿತಪಡಿಸಿಕೊಂಡಿದ್ದೇನೆ. ಭಿನ್ನ ಸಂಸ್ಕೃತೀಕರಣ, ವರ್ಣಭೇದ ವ್ಯವಸ್ಥೆ ಕಂಡುಕೊಂಡಿದ್ದೇನೆ.

ಅಧ್ಯಾಯ - ೮

ಉಪಸಂಹಾರ ಮತ್ತು ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳು

ಉಪಸಂಹಾರ ಮತ್ತು ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳು

ಸಮಾಜವು ನಿತ್ಯ ಪರಿವರ್ತನಾಶೀಲವಾದುದು. ಅದು ದಿನದಿಂದ ದಿನಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಮುಂದೆ ಅನೇಕ ಭಾಗ ವಿಭಾಗಗಳಾಗಿ ಅಧ್ಯಯನಕ್ಕೆ ಒಳಪಡುತ್ತದೆ. ಪ್ರಸ್ತುತ ಕನಕಗಿರಿಯ ಜಾನಪದ ಅಧ್ಯಯನವು ಕನಕಗಿರಿಯ ಒಡಲಲ್ಲಿ ತುಂಬಿಕೊಂಡಿರುವ ಗ್ರಾಮ ಜೀವನ, ಗ್ರಾಮಸ್ಥರ ಬದುಕು ಬವಣೆ ಕನಕಗಿರಿಯ ಇತಿಹಾಸಪೂರ್ವ ಮತ್ತು ಇತಿಹಾಸ ಅನೇಕ ಪಳೆಯುಳಿಕೆಗಳು, ಅಲ್ಲಿಯ ಮೌಲ್ಯಯುತವಾದ ಸಂಸ್ಕೃತಿ, ಒಂದು ಗ್ರಾಮವು ಮೇಲ್ನೋಟಕ್ಕೆ ಸಹಜವಾಗಿ ಕಂಡರೂ ಅದು ತನ್ನ ಒಡಲೊಳಗೆ ಅಖಂಡವಾದ ಸಂಸ್ಕೃತಿಯ ಪರಿಮಿತಿಯನ್ನು ಒಳಗೊಂಡಿರುತ್ತದೆ. ಅಧ್ಯಯನದ ಮೂಲಕ ಕೈಗೊಂಡಾಗ ಮಾತ್ರ ಅದು ಹೊರಜಗತ್ತಿಗೆ ಕಾಣಲ್ಪಡುತ್ತದೆ. ಕನಕಗಿರಿಯು ಗ್ರಾಮೀಣ ಮತ್ತು ನಗರೀಕರಣದ ಸಂಕೀರ್ಣಾವಸ್ಥೆಯಲ್ಲಿದ್ದರೂ ಸಂಪೂರ್ಣವಾಗಿ ಗ್ರಾಮ ಸಂಸ್ಕೃತಿಯನ್ನು ಅಥವಾ ಜನಪದ ಸಂಸ್ಕೃತಿಯನ್ನು ಬಿಟ್ಟುಕೊಡದೆ, ಅತ್ತ ಆಧುನಿಕ ಸಂಸ್ಕೃತಿಯನ್ನು ತಿರಸ್ಕರಿಸದೆ ವಿವಿಧ ದೃಷ್ಟಿಕೋನಗಳಿಂದ ಅಭಿವೃದ್ಧಿ ಹೊಂದುತ್ತಿರುವ ಗ್ರಾಮವಾಗಿದೆ. ಇಲ್ಲಿನ ಚರ್ಚೆಯನ್ನು ಎಂಟು ಅಧ್ಯಾಯಗಳಾಗಿ ಮಾಡಿಕೊಳ್ಳಲಾಗಿದೆ. ಒಂದೊಂದು ಅಧ್ಯಾಯದಲ್ಲಿ ಅದರ ವ್ಯಾಪ್ತಿಗೆ ಸಂಬಂಧಿಸಿದ ವಿಷಯದ ಪದರಗಳನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಒಂದನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಖಚಿತವಾಗಿ ಹೇಳುವುದರೊಂದಿಗೆ ಅಧ್ಯಾಯ ಎರಡರಲ್ಲಿ ಭೌಗೋಳಿಕ ಹಿನ್ನೆಲೆ, ನೈಸರ್ಗಿಕ ಹಿನ್ನೆಲೆ, ಗ್ರಾಮದ ಒಟ್ಟು ಜನಸಂಖ್ಯೆ, ಗ್ರಾಮದ ಸಾಕ್ಷರತೆ, ಕನಕಗಿರಿಯ ಹೆಸರಿನ ಮೂಲವನ್ನು ಪುರಾಣಗಳಲ್ಲಿ, ಐತಿಹ್ಯಗಳಲ್ಲಿ, ಶಾಸನಗಳಲ್ಲಿ ಕಂಡುಕೊಳ್ಳುವುದರೊಂದಿಗೆ, ಕನಕಗಿರಿಯಲ್ಲಿ ವಿಜಯನಗರ ಪೂರ್ವದ ಅವಶೇಷಗಳು ಈ ಎಲ್ಲ ವಿಷಯಗಳ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಮೂರನೆಯ ಅಧ್ಯಾಯದ ಗ್ರಾಮದ ಚಾರಿತ್ರಿಕ ಹಿನ್ನೆಲೆಯಲ್ಲಿ ಕನಕಗಿರಿ ಪ್ರದೇಶದ ಇತಿಹಾಸಪೂರ್ವ ಹಾಗೂ ಇತಿಹಾಸವನ್ನು, ಪಾಳೇಗಾರರ ಇತಿಹಾಸವನ್ನು, ಪಾಳೆಯಗಾರ ಕಾಲದ ಶಾಸನಗಳನ್ನು, ಕೋಟೆ-ಕೊತ್ತಲುಗಳನ್ನು, ಪಾಳೇಗಾರರ ಧರ್ಮ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಜನಪದ ವರ್ಗಗಳ ಸಾಮಾಜಿಕ ಜೀವನದ ಬಗ್ಗೆ ವಿವರಿಸಿ, ಜನಪದರ ಕುಟುಂಬ ಪದ್ಧತಿ, ಆಹಾರ ಪದ್ಧತಿ, ಉಡುಗೆ-ತೊಡುಗೆ, ಬೇಟೆ ವಿಧಾನ, ವೈದ್ಯ ಪದ್ಧತಿ, ಮನೆಗಳ ನಿರ್ಮಾಣ, ಗೃಹ ಪ್ರವೇಶ, ಜಾತಿ

ಪದ್ಧತಿ, ನ್ಯಾಯಪದ್ಧತಿ, ಅತಿಥಿ ಸತ್ಕಾರ ಹಾಗೂ ಕಲೆಗಳ ನಾಡಾದ ಕನಕಗಿರಿಯಲ್ಲಿ ಕಲೆಗಳು, ಜನಪದ ಒಳಾಂಗಣ ಹಾಗೂ ಹೊರಾಂಗಣ ಆಟಗಳ ಬಗ್ಗೆ, ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ದೀರ್ಘವಾಗಿ ಅಧ್ಯಯನ ಮಾಡಿ ಜನರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಗುರುತಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಬದುಕಿನ ಪ್ರಮುಖ ಆಚರಣೆಗಳಾದ ಹುಟ್ಟು, ನಾಮಕರಣ, ಋತುಮತಿ ಸಂಪ್ರದಾಯ, ಸೀಮಂತ, ಶವಸಂಸ್ಕಾರ ಪದ್ಧತಿ, ಹಬ್ಬ ಹರಿದಿನಗಳು, ಧರ್ಮ, ದೇವಾಲಯುಗಳು, ಜಾತ್ರೆಗಳು, ಮಠಗಳು, ನಂಬಿಕೆ ಮತ್ತು ವಿಧಿ ನಿಷೇಧಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಇಲ್ಲಿ ದೊರೆಯುವ ಸಾಹಿತ್ಯವನ್ನು ಶಿಷ್ಟ ಸಾಹಿತ್ಯ ಹಾಗೂ ಜನಪದ ಸಾಹಿತ್ಯ ಎಂದು ವಿಭಾಗಿಸಿಕೊಂಡು ಶಿಷ್ಟ ಸಾಹಿತ್ಯದಲ್ಲಿ ಭಾಷೆ, ಸಾಹಿತ್ಯದ ವಿವರಗಳನ್ನು, ಜನಪದ ಸಾಹಿತ್ಯದಲ್ಲಿ ಕತೆ, ಕಥನಕಾವ್ಯ, ಜನಪದ ಗೀತೆಗಳು, ಒಗಟು, ಒಡಪು, ಗಾದೆಗಳನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಏಳನೇ ಅಧ್ಯಾಯದಲ್ಲಿ ಕನಕಗಿರಿಯು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಒಳಗಾದ ಬಗೆಯನ್ನು ಗುರುತಿಸಲಾಗಿದೆ.

ಅನುಬಂಧದ ಈ ಭಾಗದಲ್ಲಿ ಹಿಂದಿನ ಅಧ್ಯಯನಗಳಲ್ಲಿ ಅಲ್ಲಲ್ಲಿ ಬಳಸಿಕೊಳ್ಳಲಾಗದಂತಹ ಹೆಚ್ಚಿನ ಹಾಗೂ ಸಾಂದರ್ಭಿಕ ವಿಷಯಗಳ ಉಳಿದ ಭಾಗಗಳಾದ ಜನಪದ ಹಾಡು, ಒಡಪು, ಒಗಟು, ಗಾದೆಗಳು, ಸಾಂಸ್ಕೃತಿಕ ಪದಕೋಶ ನನ್ನ ಅಧ್ಯಯನಕ್ಕೆ ಸಹಾಯಕವಾದ ಪುಸ್ತಕಗಳಪಟ್ಟಿ, ವಕ್ತೃಗಳ ಪಟ್ಟಿ ಹಾಗೂ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಒಟ್ಟಿನಲ್ಲಿ ಈ ಕೃತಿಯು ಸಾಂಸ್ಕೃತಿಕ ಅಧ್ಯಯನದಿಂದ ಕೂಡಿದೆ.

ಅಧ್ಯಯನದಲ್ಲಿ ಕಂಡುಬರುವ ಅಂಶಗಳು

೧. ಹೋಬಳಿ ಅಥವಾ ಮಂಡಲ ಕೇಂದ್ರವಾದ ಕನಕಗಿರಿಯು ನಗರೀಕರಣದತ್ತ ನಿಧಾನವಾಗಿ ಸಾಗತೊಡಗಿದೆ.

೨. ಕನಕಾಚಲನ ತೇರು ಆರು ಗಾಲಿಗಳಿಂದ, ಅತಿ ಎತ್ತರದ ವಿನ್ಯಾಸದಿಂದ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ.

೩. ಕನಕಗಿರಿಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

೪. ಕನಕಗಿರಿಯ ಬಹುಪಾಲು ಸಾಂಸ್ಕೃತಿಕ ಜೀವನವನ್ನು ವಿವರವಾಗಿ ನೋಡಲಾಗಿದೆ.

೫. ಕನಕಗಿರಿಯ ಜನಪದರು ಆಧುನಿಕ ಸ್ಥಿತ್ಯಂತರಕ್ಕೆ ಒಳಗಾದರೂ ಮೂಲವನ್ನು ಬಿಡದೆ ಆಧುನಿಕತೆಯನ್ನು ತಿರಸ್ಕರಿಸದೆ ಸಮನ್ವಯ ಧೋರಣೆ ತಾಳಿರುವರು.

೬. ಒಂದು ಕಾಲದಲ್ಲಿ ಪಾಳೇಗಾರರು ಆಳಿದ ಈ ಪ್ರದೇಶವು ಈಗ ಜನತೆಯ ಕೈಯಲ್ಲಿ ಪ್ರಜಾಪ್ರಭುತ್ವ ಆಳ್ವಿಕೆಗೊಳಪಟ್ಟಿದೆ.

೭. ಕನಕಗಿರಿಯ ಜಾತ್ರೆಗಳು, ಉತ್ಸವಗಳು, ಹಬ್ಬ-ಹರಿದಿನಗಳು, ಸಾಂಸ್ಕೃತಿಕ ಅನನ್ಯತೆಯಿಂದ ಕೂಡಿವೆ.

೮. ಇಲ್ಲಿ ಕಾವ್ಯಗಳು, ಕೋಲಾಟ, ಸೋಬಾನ, ಜೋಗುಳ ಪದಗಳು, ತ್ರಿಪದಿಗಳು ಇತ್ಯಾದಿ ಜನಪದ ಹಾಡುಗಳನ್ನಾಡುವ ಹಾಗೂ ದಾಸರ ಪದಗಳನ್ನು ರಾಜ್ಯ ಮಟ್ಟದಲ್ಲಿ ಟಿ.ವಿ.ಆಕಾಶವಾಣಿಯಲ್ಲಿ ಹಾಡಿದಂತಹ ಕಲಾವಿದರಿದ್ದಾರೆ.

೯. ಇತಿಹಾಸ ಕಾಲದಲ್ಲಿ ಇದ್ದ ದೇವದಾಸಿ ಪದ್ಧತಿ ಈಗ ಇಲ್ಲವಾಗಿದೆ.

೧೦. ಇವರು ತಮ್ಮದೇ ಆದ ಜನಪದ ವೈದ್ಯಪದ್ಧತಿಯನ್ನು ಈಗಲೂ ಅಳವಡಿಸಿಕೊಂಡಿದ್ದಾರೆ.

೧೧. ಇಲ್ಲಿ ಸುಮಾರು ೫೦ ದೇವಸ್ಥಾನಗಳು ಇತಿಹಾಸ ಕಾಲದವುಗಳು. ಇವುಗಳು ಅನೇಕ ಸಮುದಾಯಗಳ ಉಸ್ತುವರಿಯಲ್ಲಿ ವಿಜೃಂಭಣೆಯ ಜಾತ್ರೆ, ಉತ್ಸವ, ಭಜನೆ, ನಿತ್ಯಪೂಜೆ, ವಿಶೇಷ ಪೂಜೆಗೊಳ್ಳುತ್ತವೆ.

೧೨. ಇತಿಹಾಸದಲ್ಲಿ ಮಹತ್ವ ಪಡೆದಿರುವ ಜಯಂತಿ, ಪುಷ್ಪಾ, ಗೋಪಿಕಾ ನದಿಗಳು ಇಂದು ನಾಲೆಗಳಾಗಿ ಪರಿವರ್ತನೆಗೊಂಡಿವೆ.

೧೩. ಎಲ್ಲ ಸಮುದಾಯದ ಮಹಿಳೆಯರು ಬದಲಾದ ಕಾಲಕ್ಕೆ ತಕ್ಕಂತೆ ಸ್ಥಾನಮಾನವನ್ನು ಕಂಡುಕೊಂಡಿದ್ದಾರೆ.

೧೪. 'ಕಣ್ಣಿದ್ದವರು ಕನಕಗಿರಿ, ಕಾಲಿದ್ದವರು ಹಂಪೆ ನೋಡಬೇಕು' ಎಂಬ ಜನಜನಿತ ವಾಣಿಯೊಂದು ಕನಕಗಿರಿ ಹಾಗೂ ಹಂಪೆ ಪರಿಸರದಲ್ಲಿ ಪ್ರಚಲಿತದಲ್ಲಿದೆ.

೧೫. ಹಂಪೆ ವಿರೂಪಾಕ್ಷ ದೇವಸ್ಥಾನದ ಉತ್ತರ ಗೋಪುರವನ್ನು ಕನಕಗಿರಿ ಗೋಪುರ ಎಂದು ಈಗಲೂ ಕರೆಯುವ ಮೂಲಕ ಐತಿಹಾಸಿಕ ಸಂಬಂಧವನ್ನು ಖಚಿತಪಡಿಸುತ್ತದೆ.

೧೬. ಸಮುದಾಯ-ಉಪಸಮುದಾಯ ಮದುವೆಯಂತಹ ಸಂದರ್ಭಗಳಲ್ಲಿ ಎಲ್ಲ ಪಂಗಡದವರೂ ಸೇರುತ್ತಾರೆ.

೧೭. ಕೆಳವರ್ಗದ ಸಮುದಾಯದವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಸ್ವಲ್ಪಮಟ್ಟಿನ ಸುಧಾರಣೆ ಕಾಣತೊಡಗಿದ್ದಾರೆ.

೧೮. ಇಲ್ಲಿ ಸಮುದಾಯಗಳಿಗನುಗುಣವಾಗಿ ಪಂಚಾಯತಿ (ನ್ಯಾಯ ಪಂಚಾಯತಿ) ನಡೆದರೂ ಬೇರೆ ಸಮುದಾಯದ ಮುಖ್ಯಸ್ಥರು ಅದರಲ್ಲಿ ಭಾಗವಹಿಸುತ್ತಾರೆ.

೧೯. ವಿಭಕ್ತ ಕುಟುಂಬಗಳೇ ಜಾಸ್ತಿ.

೨೦. ಕ್ರಿಯಾಶೀಲ ಸಂಘ-ಸಂಸ್ಥೆಗಳು, ಮಠ-ಮಾನ್ಯಗಳಿವೆ.

೨೧. ಕನಕಾಚಲ ಜಾತ್ರೆ, ಗೊರಾಳಕೇರಿ ದುರ್ಗಮ್ಮನ ಜಾತ್ರೆ, ತೊಂಡಿ ತೆವರಪ್ಪನ ಜಾತ್ರೆ, ಯಮನೂರು ಸಾಬಿ ಉರುಸುಗಳು ಜಾತಿ, ಮತ, ಧರ್ಮವನ್ನು ಮೀರಿ ಭಾವೈಕ್ಯತೆಯನ್ನು ಸಾರುವ ಉತ್ಸವಗಳಾಗಿವೆ.

೨೨. ಆಂಜನೇಯನ ದೇವಾಲಯಗಳು ಈ ಗ್ರಾಮದಲ್ಲಿ ಸಾಕಷ್ಟಿವೆ.

೨೩. ಶಾಸಕರ ಕ್ಷೇತ್ರವಾಗಿದೆ.

೨೪. ಪಕ್ಷೇತರವಾಗಿ ಎಂ.ಎಲ್.ಎ. ಆಗಿ ಗೆದ್ದು ಬಂದ ವ್ಯಕ್ತಿ ಈ ಅವಧಿಯಲ್ಲಿ ಬಿ.ಜೆ.ಪಿ. ಸರ್ಕಾರ ರಚನೆಯಲ್ಲಿ ವಿಶೇಷ ಪಾತ್ರವಹಿಸಿ ಇಡಿ ರಾಜ್ಯದ ಗಮನ ಸೆಳೆದಿದ್ದಾರೆ.

೨೫. ತಾಲೂಕಾ ಕೇಂದ್ರವಾಗಲು ಇತ್ತೀಚೆಗೆ ಸರ್ಕಾರ ಸಹಮತ ಸೂಚಿಸಿದೆ.

೨೬. ಪಿಂಜಾರರ ಮದುವೆಗಳು ವಿಶಿಷ್ಟವಾದವುಗಳು. ಹಿಂದೂ ಪದ್ಧತಿಯ ಸಾಮ್ಯತೆ ಇವರ ಆಚರಣೆಯಲ್ಲಿ ಕಂಡುಬರುತ್ತದೆ.

೨೭. ಗೊಲ್ಲರ ಮದುವೆ ಪದ್ಧತಿ-ವಿಶಿಷ್ಟವಾದುದಾಗಿದೆ.

೨೮. ನಾಟಕ, ಬಯಲಾಟಗಳು, ಜಾತ್ರೆ, ಉತ್ಸವ ಮತ್ತು ಹಬ್ಬ ಹರಿದಿಗಳಲ್ಲಿ ಪ್ರದರ್ಶನಗೊಳ್ಳುತ್ತವೆ.

೨೯. ಪಾಳೇಗಾರರು (ನಾಯಕರು) ಕಟ್ಟಿಸಿದ ದೇವಾಲಯಗಳೆಲ್ಲವು ಇಂದಿಗೂ ಜನಪ್ರಿಯ. ಜಾತ್ರೆ, ಉತ್ಸವ, ನಿತ್ಯಪೂಜೆ ಇತ್ಯಾದಿಗಳು ಹಂಪೆಯ ದೇವಾಲಯಗಳನ್ನು ಮೀರಿಸಿವೆ ಎನ್ನಬಹುದು.

೩೦. ಇಲ್ಲಿ ಐತಿಹಾಸಿಕ ದೇವಾಲಯಗಳೆಲ್ಲವು ವಿಜಯನಗರ ಶೈಲಿಯಲ್ಲಿವೆ.

೩೧. ಕನಕಾಚಲ ದೇವಸ್ಥಾನವು ಎರಡನೇ ತಿರುಪತಿ ಎನಿಸಿಕೊಂಡಿದೆ. ಈ ದೇವಸ್ಥಾನದ ಬಗೆಗೆ ಕತೆಗಳು ಪ್ರಚಲಿತದಲ್ಲಿವೆ.

೩೨. ದಸರಾ ಉತ್ಸವವು ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯಿಂದ ಕೂಡಿದೆ.

೩೩. ೭೦೧ ದೇವಸ್ಥಾನ, ೭೦೧ ಬಾವಿಗಳು, ೭೦೧ ಗೊಲ್ಲರ ಮನೆಗಳು ಇಲ್ಲಿ ಈ ಹಿಂದೆ ಇದ್ದವು ಎಂಬುದು ಪ್ರಚಲಿತ ಮಾತು.

೩೪. ಜನಸಾಮಾನ್ಯರ ಚಾರಿತ್ರಿಕ ಪೌರಾಣಿಕ ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳಲು ಮಹತ್ವದ್ದಾಗಿದೆ.

೩೫. ಮೌಖಿಕ ಇತಿಹಾಸದ ರೀತಿ ನೀತಿ ಸ್ವಭಾವಗಳನ್ನು ತಿಳಿಯಲು ಸಹಾಯವಾಗುತ್ತದೆ.

೩೬. ಲಿಖಿತ ಇತಿಹಾಸವನ್ನು ವಿಸ್ತರಿಸಲು ಪೂರಕವಾಗುತ್ತದೆ.

೩೭. ಇತಿಹಾಸವನ್ನು ಕಥನ ಮಾಡುವ, ಪುರಾಣವಾಗಿಸುವ, ಐತಿಹ್ಯವಾಗಿಸುವ ಮನಸ್ಥಿತಿಯು ಗೊತ್ತಾಗುತ್ತದೆ.

ಅನುಬಂಧಗಳು

೧. ವಕ್ತೃ ವಿವರ

೨. ಸಾಂಸ್ಕೃತಿಕ ಪದಕೋಶ

೩. ಗ್ರಂಥಋಣ

೪. ಜನಪದ ಗೀತೆಗಳು

೫. ಒಗಟುಗಳು

೬. ಗಾದೆಗಳು

೭. ಒಡಪುಗಳು

ವಕ್ತೃ ವಿವರ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ
೦೧.	ಶಿವರಾಜ್ ತಂಗಡಗಿ	೪೦	ವಡ್ಡರು	ಸಚಿವರು
೦೨.	ದೇವಪ್ಪ ತೋಳದ, ಗ್ರಾ.ಪಂ.ಅಧ್ಯಕ್ಷ	೩೫	ಕುರುಬರು	ವ್ಯಾಪಾರ
೦೩.	ನೂರಸಾಬ್ ಗಡ್ಡಿಗಾಲ, ಟಿ.ಪಿ.ಸದಸ್ಯರು	೩೬	ಮುಸ್ಲಿಂ	ಕಂಕರ್‌ಮಿಷನ್
೦೪.	ಗಂಗಮ್ಮ ಗಂಗಣ್ಣ ಸಮಗಂಡಿ ಟಿ.ಪಿ. ಸದಸ್ಯಸ್ಯೆ	೬೦	ಕುರುಹೀನಶೆಟ್ಟಿ	ಗೃಹಿಣಿ
೦೫.	ಸವಿತಾ ಗಂಗಾಧರಸ್ವಾಮಿ, ಜೆಡ್.ಪಿ. ಸದಸ್ಯರು	೩೦	ಜಂಗಮ	ಗೃಹಿಣಿ
೦೬.	ಜೀರ್ ಕಂಠೀರಂಗಪ್ಪ	೪೦	ಜೀರ್	ಹೂವಿನ ವ್ಯಾಪಾರ
೦೭.	ಮಹಾಬಳೇಶ್ವರ ಸ್ವಾಮಿ	೭೦	ಜಂಗಮ	ವಿಶ್ರಾಂತಿ
೦೮.	ಶೇಷಾಚಾರ್ಯ	೫೫	ಶ್ರೀವೈಷ್ಣವ	ಕನಕಾಚಲ ದೇವಾಲಯದ ಅರ್ಚಕರು
೦೯.	ಯಂಕಣ್ಣ ಜನಾದ್ರಿ	೬೫	ವೈಶ್ಯ	ವ್ಯಾಪಾರ
೧೦.	ಅಲ್ಲಾ ಗಿರಿರಾಜ್	೪೦	ಮುಸ್ಲಿಂ	ಪತ್ರಕರ್ತ
೧೧.	ಮೈಬೂ ಹುಸೇನ್	೩೫	ಮುಸ್ಲಿಂ	ಪತ್ರಕರ್ತ
೧೨.	ದುರ್ಗಾದಾಸ್ ಯಾದವ್	೫೦	ಗೊಲ್ಲರು	ರಾಜಕೀಯ ಮುಖಂಡರು
೧೩.	ನಾಗಭೂಷಣ ಜನಾದ್ರಿ	೫೦	ವೈಶ್ಯ	ವ್ಯಾಪಾರ
೧೪.	ಡಾ.ದುರುಗಪ್ಪ ಎಂ.ಕೆ.	೪೫	ನಾಯಕ	ಉಪನ್ಯಾಸಕ
೧೫.	ಅಪ್ಪಯ್ಯ ಧಣಿ ಪಾಳೇಗಾರ ವಂಶಸ್ಥರು	೮೦	ನಾಯಕ	ವಿಶ್ರಾಂತಿ
೧೬.	ಛಾಯಾದೇವಿ ಕನಕಾಚಲ, ಜೆಡ್‌ಪಿ ಸದಸ್ಯರು	೬೦	ಶ್ರೀ ವೈಷ್ಣವ	ಅರ್ಚಕರು
೧೭.	ಯೋಗೇಂದ್ರಸ್ವಾಮಿ	೬೦	ವಿಶ್ವಕರ್ಮ	ಅರ್ಚಕರು
೧೮.	ಮಲೆಪ್ಪ	೫೫	ನಾಯಕ	ಕೃಷಿ

೧೯.	ಬೇಡರ ಈರಮ್ಮ ನೈನದಾರಿ	೮೦	ನಾಯಕ	ವಿಶ್ರಾಂತಿ
೨೦.	ಹೊನ್ನೂರಮ್ಮ	೮೫	ಮುಸ್ಲಿಂ	ವಿಶ್ರಾಂತಿ
೨೧.	ದುರ್ಗಮ್ಮ ತೊಂಡೆಪ್ಪ ದಾಸರು	೮೦	ಗೊಲ್ಲರು	ವಿಶ್ರಾಂತಿ
೨೨.	ರಾಜದರಖಾನ್	೪೫	ಮುಸ್ಲಿಂ	ರಾಜಕಾರಣಿ
೨೩.	ಶೇಖ್ಇಸ್ಮಾಯಿಲ್	೮೦	ಮುಸ್ಲಿಂ	ವಿಶ್ರಾಂತಿ
೨೪.	ನಾಗಪ್ಪ	೭೦	ಮುಚ್ಚಿಗೇರ	ಬಡಗಿ, ಕೃಷಿ
೨೫.	ಸತ್ಯಪ್ಪ ಚಲುವಾದಿ	೬೫	ಚಲುವಾದಿ	ಕೃಷಿ
೨೬.	ಕೆ.ಲಕ್ಷ್ಮಿನಾರಾಯಣರಾವ್	೮೫	ಬ್ರಾಹ್ಮಣ	ಗೃಹಿಣಿ
೨೭.	ಕೇಶವರಾವ್ ಬಂಕಾಪುರ	೮೦	ಬ್ರಾಹ್ಮಣ	ವ್ಯಾಪಾರ
೨೮.	ಗೋಪಾಲರೆಡ್ಡಿ ಮಹಲಿಮನಿ			
೨೯.	ಗುಂಡಪ್ಪ ಚಿತ್ರಗಾರ			
೩೦.	ಪಶುಪತಿ-ಪಾಟೀಲ್	೩೫		ವ್ಯಾಪಾರ
೩೧.	ಸೀತಾರಾಮ್ ಬೊಂದಾಡೆ	೬೫	ಸಿಂಪಿಗ	ಸಿಂಪಿ
೩೨.	ಬಿಡೇದಾರ್ ಮಾಬೂಸಾಬ್	೫೮	ಮುಸ್ಲಿಂ	ಕೃಷಿ
೩೩.	ಶಿವಪ್ಪ	೬೫	ಗಂಗಾಮತಸ್ಥ	ಕೃಷಿ
೩೪.	ಸಿ.ಚಂದ್ರರೆಡ್ಡಿ	೫೦	ರೆಡ್ಡಿ	ಕೃಷಿ
೩೫	ವೀರಭದ್ರಪ್ಪ ಜಿ.	೨೫	ಬಣಜಿಗ	ಸಿಮೆಂಟ್‌ವ್ಯಾಪಾರ
೩೬.	ಬಿ.ವಿ.ಜೋಷಿ	೪೦	ಬ್ರಾಹ್ಮಣ	ಎಲ್‌ಐಸಿ ಏಜೆಂಟ್
೩೭.	ರಮೇಶ್ ಚಿತ್ರಗಾರ	೪೫	ಆರ್ಯಕ್ಷತ್ರಿಯ	ಕಾರ್ಪೆಂಟರ್
೩೮.	ಭೀಮಣ್ಣ ಮಡಿವಾಳ	೬೫	ಮಡಿವಾಳ	ಮಡಿವಾಳ
೩೯.	ತೊಂಡೆಪ್ಪ	೬೦	ಮರಾಠ	SBH ಕ್ಲರ್ಕ್
೪೦.	ಪಶುಪತಿ ಪಾಟೀಲ್	೩೫		ವ್ಯಾಪಾರ
೪೧.	ಮನೋಹರ್ ಬೋಂದಾಡೆ	೩೫	ಸಿಂಪಿಗ	ಪತ್ರಕರ್ತ
೪೨.	ಲಕ್ಷ್ಮೀನಾರಾಯಣ ಕಂದಗಲ್	೩೫	ವೈಶ್ಯ	ವ್ಯಾಪಾರ
೪೩.	ಲಾಲ್‌ಸಾಬ್	೬೫	ಮುಸ್ಲಿಂ	ಹಮಾಲಿ
೪೪.	ಇಮಾಮ್‌ಸಾಬ್	೪೫	ಮುಸ್ಲಿಂ	ವ್ಯಾಪಾರ
೪೫.	ಯಂಕಪ್ಪ ಚಿಂಚಲ	೮೫	ಗೊಲ್ಲರು	ವಿಶ್ರಾಂತಿ
೪೬.	ನಾಗೇಶ್ ವಾಲ್ಮೀಕಿ	೪೫	ವಾಲ್ಮೀಕಿ	ಕೃಷಿ
೪೭.	ಟಾಕಪ್ಪ ಜನಾದ್ರಿ	೭೫	ವೈಶ್ಯ	ವಿಶ್ರಾಂತಿ

೪೮. ಕನಕಪ್ಪ ದಂಡಿನ್	೪೦	ನಾಯಕ	ಉಪನ್ಯಾಸಕ
೪೯. ದತ್ತಪ್ಪ ಅಚ್ಚಲಕೆರೆ	೮೦		ವಿಶ್ರಾಂತಿ
೫೦. ಶಾರದಾ ಟಿ.ರಾಜಪುರೋಹಿತ, ಗಂಗಾವತಿ	೪೫	ಬ್ರಾಹ್ಮಣ	ಮುಖ್ಯಶಿಕ್ಷಕರು
೫೧. ಜಯಶ್ರೀ ದುರ್ಗಾದಾಸ್	೪೫	ಗೊಲ್ಲರು	ಶಿಕ್ಷಕರು
೫೨. ವೆಂಕೋಬ ಬೋವಿ	೩೫	ವಡ್ಡರು	ಕಂಟ್ರ್ಯಾಕ್ಟರ್
೫೩. ನರಸಿಂಹ ಚಿತ್ರಗಾರ್	೫೦	ಆರ್ಯಕ್ಷತ್ರಿಯ	ಕಾರ್ಪೆಂಟರ್
೫೪. ನಾಗೇಶ್ ಬಡಿಗೇರ್	೩೩	ಬ್ಯಾಗಾರ್	ನೌಕರ
೫೫. ಹನುಮೇಶ್	೩೫	ಆರ್ಯರು	ಲಾಯರ್
೫೬. ದೇವನಾಳ ಯಂಕಪ್ಪ	೭೦		ಕೃಷಿ
೫೭. ಗೋಪಾಲಕೃಷ್ಣ ಜನಾದ್ರಿ	೫೫	ವೈಶ್ಯ	ವ್ಯಾಪಾರ
೫೮. ರಾಧಾ ಜಿ.ಜನಾದ್ರಿ	೪೫	ವೈಶ್ಯ	ಗೃಹಿಣಿ
೫೯. ಸಿದ್ದಲಿಂಗಯ್ಯಸ್ವಾಮಿ ಮಳಿಮಠ	೬೫	ಲಿಂಗಾಯತ್	ವಿಶ್ರಾಂತಿ
೬೦. ಲಕ್ಷ್ಮೀ ಎಲ್.ಕಂದಗಲ್	೩೫	ವೈಶ್ಯ	ಗೃಹಿಣಿ
೬೧. ಸ್ಮಿತಾ ಎ.ಸಜ್ಜನ	೩೩	ಗಾಣಿಗರು	ಶಿಕ್ಷಕಿ
೬೨. ಜಲಜಾಕ್ಷಮ್ಮ	೫೦	ಜೀರ್	ಮನೆಗೆಲಸ
೬೩. ಲಕ್ಷ್ಮೀ	೨೫	ಪಂಚಮಶಾಲಿ	ವಿದ್ಯಾರ್ಥಿನಿ
೬೪. ಸಾವಿತ್ರಿ	೨೧	ಸಂಪಮಶಾಲಿ	ವಿದ್ಯಾರ್ಥಿನಿ
೬೫. ಮಲ್ಲಿಕಾರ್ಜುನ ಕುಷ್ಟಗಿ	೩೫	ಲಿಂಗಾಯತ	ಶಿಕ್ಷಕರು
೬೬. ಸಂಪತ್‌ಲಕ್ಷ್ಮೀ ಚಿತ್ರಗಾಲ್	೪೫	ಚಿತ್ರಗಾರ್	ಕರಕುಶಕಲೆ
೬೭. ಅಂಬಾಜಿರಾವ್	೨೫	ಮರಾಠಿ	ಬಟ್ಟೆವ್ಯಾಪಾರ
೬೮. ಈರಣ್ಣ ಸೌದಿ	೩೨	ವೈಸ್ಯ	ಕಿರಾಣಿ ಅಂಗಡಿ
೬೯. ಸೋಮಶೇಖರ್	೩೬	ಲಿಂಗಾಯತ	ಪೆಂಡಾಲ್‌ವ್ಯಾಪಾರ

ಅಂಬಲಿ	-	ಜೋಳದ ನುಚ್ಚಿನ ಅನ್ನ
ಅಗಸಿ	-	ಕೋಟೆಯ ಪ್ರವೇಶ ದ್ವಾರಗಳು
ಅಖಂಡ ಭಜನೆ	-	ದಿನದ ೨೪ ತಾಸುಗಳವರೆಗೆ ಮಾಡುವ ಭಜನೆ
ಕರ್ಜಿಕಾಯಿ	-	ಪುಟಾಣಿ ಹಿಟ್ಟು, ಬೀಸಿದ ಸಕ್ಕರೆ ಸೇರಿಸಿ ಮೈದಾಹಿಟ್ಟಿನ ಪದರು ಮಾಡಿ, ಮುಚ್ಚಿ ಎಣ್ಣೆಯಲ್ಲಿ ಕರಿಯುವ ತಿಂಡಿ.
ಕಾಡಾಟ	-	ಕಷ್ಟಗಳ ಮೇಲೆ ಕಷ್ಟ ಬರುವುದು.
ಕುಳ್ಳು	-	ಕುರುಳು, ಒಣಗಿದ ಅಂಗೈ ಅಗಲದಷ್ಟಿರುವ ಸೆಗಣಿ.
ಕೊಬ್ಬರಿಕಾರ	-	ಇದನ್ನು ಹಡೆದ ಬಾಣಂತಿಗೆ ಕೊಡುತ್ತಾರೆ. ಕೊಬ್ಬರಿ, ಬೆಲ್ಲ, ಕಾರದಚ್ಚು, ಚಾಲಿಅಂಟು ಇವುಗಳಿಂದ ಮಾಡಿದ ಸಿಹಿ ಪದಾರ್ಥ.
ಕೂಡ್ಲಿ	-	ಕಬ್ಬಿಣದ ಕೊಡಲಿ
ಗುಟಿಗಿ	-	ಸತ್ತವರನ್ನು ಕೂಡಿಸಿ ಎದುರು ಬದುರು ಬಿದಿರು ಇಟ್ಟ ಸ್ಥಿತಿ.
ಚರಿಗೆ	-	ಚಂಬು, ತಂಬಿಗೆ
ಚರಗ	-	ಸರಗ
ಚಟ್ಟು	-	ಋತುಮತಿಯಾದವಳು ಆರತಿ ಮಾಡುವ ಸಮಯದಲ್ಲಿ ಹಿಂದಕ್ಕೆ ನೋಡದೆ ಹರಿಶಿಣ ನೀರು ಹಚ್ಚಿಕೊಂಡ ಕೈಯಿಂದ ಬಡಿಯುವುದು.
ಜೀರ್	-	ಹೂಗಾರರು
ಜಿಗುಟು	-	ಜಿಡ್ಡು
ತಾಟು	-	ತಟ್ಟೆ, ಗಂಗಾಳ
ಧ್ವಜಪಟ	-	ದೇವರ ಕೇಸರೀ ಧ್ವಜ
ನಡುಮನೆ	-	ಇದು ದೇವರ ಮನೆ ಮತ್ತು ಅಡುಗೆ ಮಾಡುವುದರ ಮಧ್ಯ ಇರುತ್ತದೆ. ಸಾಮಾನ್ಯವಾಗಿ ಊಟಮಾಡಲು ಉಪಯೋಗಿಸುತ್ತಾರೆ.
ನೀವಾಳಿಸು	-	ಮುಖದ ಮೇಲೆ ೩ ಸಾರಿ ದೃಷ್ಟಿ ತೆಗೆಯುವುದು.
ನೆಲುವು	-	ಆಹಾರ ಪದಾರ್ಥಕಾಪಾಡಲು ನಾರಿನಿಂದ ಮಾಡಿದ ಹಗ್ಗದ ಸಾಧನ.

ಪಲಾವ್	-	ಅಕ್ಕಿ, ಎಲ್ಲಾ ತರಕಾರಿ, ಮಸಾಲೆ ಸೇರಿಸಿ ಬೇಯಿಸಿದ ಅನ್ನ.
ಪರಂಗಿ	-	ವಿದೇಶಿಗರು
ಪಾಟ್ಲಿ	-	ಕೈಗಳಿಗೆ ಹಾಕುವ ತಾಮ್ರ ಅಥವಾ ಬಂಗಾರದ ಅಗಲದ ಬಳೆ.
ಪೈರು	-	ಬೆಳೆ.
ಪಾದಗಟ್ಟೆ	-	ದೇವಸ್ಥಾನದ ಮುಂದೆ ಇರುವ ಪಾದಗಳ ಕೆತ್ತನೆ ಕಟ್ಟೆ.
ಪೇಟ	-	ಮದುಮಕ್ಕಳಿಗೆ ತೊಡಿಸುವ ಟೊಪ್ಪಿಗೆ
ಬರ್ತ	-	ಎಲ್ಲ ತರಕಾರಿಗಳನ್ನು ಬೆಲ್ಲವನ್ನು ಸೇರಿಸಿ ಬೇಯಿಸಿದ ಪದಾರ್ಥ.
ಬಂಡಿಗಾಲಿ	-	ಚಕ್ಕಡಿ ಗಾಲಿ, ಚಕ್ರ
ಬಲ್ಲೀಸು	-	ಬಿದಿರು, ಗಳ.
ಬಾಸಿಂಗ	-	ಮದುಮಗನ/ಳ ಹಣೆಗೆ ಕಟ್ಟುವ ಸಾಧನ.
ಬಾನ	-	ಅನ್ನ.
ಬೆಳಗಿನ ಜಾವ	-	ಮುಂಜಾವಿನ ವೇಳೆ
ಬೆಡಗು	-	ಗೋತ್ರ
ಬೆಂಡುಬತ್ತಾಸ್	-	ಸಕ್ಕರೆ ಪಾಕದಿಂದ ಮಾಡಿದ ಸಿಹಿ ತಿನಿಸು.
ಬೆಳಸು	-	ಎಳೆಯ ಕಾಳಿನ ತೆನೆ.
ಮುಡುದಾಸ	-	ಮುಟ್ಟಿನ ದೋಷ
ಮೋಜಿನಾಟ	-	ಸಂತೋಷದ ಆಟ.
ಮಾದ್ಲಿ	-	ದಪ್ಪನೆಯ ಬೇಯಿಸಿದ ಚಪಾತಿಯನ್ನು ತುರಿಯುವ ಮಣೆಗೆ ಹಾಕಿ ತುರಿದು ಅದಕ್ಕೆ ಕೆಂಪು ಸಕ್ಕರೆ ಸೇರಿಸಿ ಕುಟ್ಟಿ ತಯಾರಿಸಿದ ಸಿಹಿ ಪದಾರ್ಥ.
ಯಾಳಿ	-	ಸಿಂಹದ ಮುಖವುಳ್ಳ ಶಿಲ್ಪಗಳು
ರಿದ್ದಿ	-	ಸೂತಕ
ಚರಗ	-	ಊರ ಸುತ್ತಲೂ ಚೆಲ್ಲುವ ಅನ್ನ.
ಸೂಸಗ	-	ದಂಡೆ
ಸ್ಯಾಸೆ	-	ಅಕ್ಷತೆ
ಹೂಣು	-	ತಗ್ಗಿನಲ್ಲಿ ಮುಚ್ಚಿಹಾಕುವುದು.
ಹೊಳ್ಳೆ	-	ಮೂಗಿನರಂಧ್ರ

ಗ್ರಂಥ ಸೂಚಿ

೧. ಅಮರೇಶ್ ಯತಗಲ್, 'ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಲ್ಲಮಪ್ರಭು, 'ಬೆಟ್ಟದೂರು-ಕೊಪ್ಪಳ ಜಿಲ್ಲಾದರ್ಶನ', ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ೨೦೦೫.

೩. ಅಲ್ಲಾಗಿರಿರಾಜ್, 'ಪುಣ್ಯಕ್ಷೇತ್ರ ಕನಕಗಿರಿ', ಶ್ರೀರಾಮ ಪ್ರಕಾಶನ, ೨೦೦೬.

೪. ಅರವಿಂದ ಮಾಲಗತ್ತಿ, 'ಉತ್ತರ ಕರ್ನಾಟಕದ ಜನಪದ ಆಟಗಳು', ಪಿಎಚ್.ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.

೫. ಇಟ್ಟಣ್ಣವರ್ ಆರ್.ಬಿ. 'ಶ್ರೀಕೃಷ್ಣ ಪಾರಿಜಾತ ಒಂದು ಅಧ್ಯಯನ', ಪಿಎಚ್.ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ೧೯೮೪.

೬. ಇರ್ನಿರಾಯ ಕೆ.ವಿ. 'ತುಂಗಭದ್ರ ಪ್ರದೇಶ ಕಲೆಯ ಕಣಜ ತುಂಗಾಂತರಂಗ', ಜಯತೀರ್ಥ ರಾಜಪುರೋಹಿತ ಕಲಬುರ್ಗಿ ತುಂಗಾಯೋಜನೆಯ ಆಡಳಿತಾಧಿಕಾರಿಗಳು, ೧೯೯೮.

೭. ಎಪಿಗ್ರಾಫಿಕಾ ಕರ್ನಾಟಕ, ಸಂಪುಟ ೧೨

೮. ಕಲಬುರ್ಗಿ ಎಂ.ಎಂ, 'ಕರ್ನಾಟಕದ ಕೈಫಿಯತ್ತುಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕೃಷ್ಣಕುಮಾರ ಸಿ.ಪಿ, 'ಜನಪದ ಸಾಹಿತ್ಯ ಪ್ರವೇಶಿಕೆ', ಭಾರತೀ ಸರಸ್ವತಿಪುರಂ, ಮೈಸೂರು, ೧೯೮೯.

೧೦. ಕೃಷ್ಣಶರ್ಮ ಬೆಟಗೇರಿ, 'ಕರ್ನಾಟಕ ಜನಜೀವನ', ಧಾರವಾಡ ಸಮಾಜ ಪುಸ್ತಕಾಲಯ, ಧಾರವಾಡ, ೧೯೩೯.

೧೧. ಕೃಷ್ಣಮೂರ್ತಿ ಚೇಕೂರು, 'ಹಂಪಿಯ ಇತಿಹಾಸದ ಕತೆಗಳು', ಬಳ್ಳಾರಿ ೨೪ನೇ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನ.

೧೨. ಕೃಷ್ಣರಾವ್ ಎಂ.ವಿ. ಮತ್ತು ಕೇಶವ ಭಟ್ ಎಂ., 'ಕರ್ನಾಟಕ ಇತಿಹಾಸ ದರ್ಶನ', ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ ಬೆಂಗಳೂರು, ೧೯೭೦.

೧೩. ಗದ್ದಗಿಮಠ ಬಿ.ಎಸ್., 'ಮಠದ ಬರಹಗಳು', ೧೯೯೮.

೧೪. ಡಾ.ಟಿ.ಗೋವಿಂದರಾಜು, 'ಚಿನ್ನಾದೇವಿ ಅಗ್ರಹಾರ ಜಾನಪದ ಅಧ್ಯಯನ', ೧೯೯೩.

೧೫. ಗಿರಡ್ಡಿ ಗೋವಿಂದರಾಜ, 'ಜನಪದ ಕಾವ್ಯ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೧೬. ಗೋಕುಲನಾಥ ಕೆ., 'ಶ್ರೀ ವಿಜಯದಾಸರು ಜೀವನ ಮತ್ತು ಕೃತಿ ಸಮೀಕ್ಷೆ', ಸಿಂಧುಶಯ ಪ್ರಕಾಶನ, ಬೆಂಗಳೂರು, ೧೯೭೮.

೧೭. ಗೊರಬಾಳ ಹನ್ಮಂತರಾವ್ ಕೆ, 'ವಿಜಯದಾಸರ ತೀರ್ಥಕ್ಷೇತ್ರ ಮಹಿಮಾಪದ', ಸುಳಾದಿಗಳು, ವರದೇಂದ್ರ ಹರಿದಾಸ ಸಾಹಿತ್ಯ ಮಂಡಳಿ ಕೇಂದ್ರ ಲಿಂಗಸ್ಗೂರು, ೧೯೪೯.

೧೮. ಚನ್ನಣ್ಣ ವಾಲಿಕಾರ, 'ಒಂದು ಗ್ರಾಮದ ಜನಪದೀಯ ಅಧ್ಯಯನ', ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೧.

೧೯. ಚನ್ನಕ್ಕ ಎಲಿಗಾರ, 'ಪ್ರಾಚೀನ ಕರ್ನಾಟಕ ರಾಣಿಯರು', ಧಾರವಾಡ ಗೌರೀಶ್ ಮುದ್ರಣಾಲಯ.

೨೦. ಡಾ.ಚಿದಾನಂದಮೂರ್ತಿ, 'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ', ಸಾಹಿತಿಗಳ ಕಲಾವಿದರ ಬಳಗ, ಬೆಂಗಳೂರು, ೧೯೮೭.

೨೧. ಡಾ.ಚಂದ್ರಶೇಖರ ಕಂಬಾರ, 'ಕನ್ನಡ ಜಾನಪದ ವಿಶ್ವಕೋಶ', ಸಂಪುಟ ೧೨೧, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು, ೧೯೮೫.

೨೨. ಡಾ.ಚಲುವರಾಜು, 'ಹಂಪಿ ಮೌಖಿಕ ಚರಿತ್ರೆ ಅಂದು-ಇಂದು'.

೨೩. ಡಾ.ಚಿನ್ನಸ್ವಾಮಿ ಸೋಸಲೆ, 'ಸಾಮ್ರಾಜ್ಯ ಮತ್ತು ಸಂಸ್ಥಾನ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೪. ಚಲುವೇಗೌಡ ತ.ಚಿ, 'ಕೆಲವು ಜನಪದ ಸಂಪ್ರದಾಯಗಳು'.

೨೫. ಚಿದಾನಂದ ಅವಧೂತರು, 'ದೇವಿ ಮಹಾತ್ಮೆ'.

೨೬. ಜಗನ್ನಾಥ ಶಾಸ್ತ್ರಿ ಕೆ., 'ಚಿದಾನಂದವದೂತರು', ಇಂಡಿಯಾ ಬುಕ್ ಹೌಸ್, ಬೆಂಗಳೂರು, ೧೯೮೪.

೨೭. ದುರ್ಗಾದಾಸ್ ಯಾಧವ್, 'ಕನಕಾಚಲ ಸ್ತೋತ್ರಮಾಲಾ', ಕನಕಾಚಲ ದಾಸೋಹ ಸಮಿತಿ, ಕನಕಗಿರಿ, ೨೦೦೮.

೨೮. ದುರುಗಪ್ಪ ಎಂ.ಕೆ, 'ಕನಕಗಿರಿ ನಾಯಕರು', ಪವಿತ್ರ ಪಬ್ಲಿಕೇಶನ್ ಬೆಂಗಳೂರು, ೨೦೦೭.

೨೯. ದೇಸಾಯಿ ಪಿ.ಬಿ, 'ಶಾಸನ ಪರಿಚಯ', ಕರ್ನಾಟಕ ಇತಿಹಾಸ ಸಂಶೋಧಕ

೩೦. ಜಯರಾಮ ಸರಜೋಷಿ, 'ಶ್ರೀ ಲಕ್ಷ್ಮೀನರಸಿಂಹ ಮಹಾತ್ಮೆ', ಕನಕಗಿರಿ ಕನಕಾಚಲಪತಿ ಬಗೆಗಿನ ಕೃತಿ, ಸುಂಕದ ಕಟ್ಟಿ, ಪ್ರಾಣೇಶ ಮಂದಿರ, ಗಂಗಾವತಿ, ೨೦೦೪.

೩೧. ಜವರೇಗೌಡ ದೇ, 'ಗಂಡುಗಲಿ ಕುಮಾರರಾಮ', ನರೇಶ್ ಅಂಡ್ ಕಂಪನಿ, ಬೆಂಗಳೂರು, ೧೯೬೧.

೩೨. ಪುರುಷೋತ್ತಮ ಬಿಳಿಮಲೆ, 'ಹಂಪಿ ಜಾನಪದ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

೩೩. ಬಸವರಾಜು ವಿ.ಮೂಲಿಮನಿ, 'ಕೊಪ್ಪಳ ಜಿಲ್ಲೆಯ ಜನಪದ ಸಂಸ್ಕೃತಿ', ಕನ್ನಡ ಸಾಹಿತ್ಯ ಪರಿಷತ್ತು, ೨೦೦೭.

೩೪. ಬೆನಗಲ್ ರಾಮರಾವ್, 'ಪುರಾಣ ಚೂಡಾಮಣಿ', ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೯.

೩೫. ಬೋರಲಿಂಗಯ್ಯ ಹಿ.ಚಿ., 'ಕರ್ನಾಟಕ ಜಾನಪದ ಕಲೆಗಳ ಕೋಶ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

೩೬. ಮಂಜುನಾಥ ಬೇವಿನಕಟ್ಟಿ, 'ವಿಜಯನಗರ ಸಾಂಸ್ಕೃತಿಕ ಆಯಾಮಗಳು', ಶ್ರೀವಿದ್ಯಾವಿಜಯನಗರ, ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೭.

೩೭. ಮಂಜುನಾಥ ಬೇವಿನಕಟ್ಟಿ, 'ಜಾನಪದ ಕರ್ನಾಟಕ', ಸಂಚಿಕೆ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೩೮. ಮಂಜುನಾಥ ಬೇವಿನಕಟ್ಟಿ, 'ಮಾತಂಗಿ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

೩೯. ಮಲ್ಲಿಕಾ ಸಂ.ಮೇತ್ರಿ, 'ಜಾನಪದ ಆಟಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೪೦. ರಾಜಪುರೋಹಿತ ಶೇಷಾಚಾರ್ಯ, 'ಶ್ರೀ ಕನಕಾಚಲಪತಿ ಲಕ್ಷ್ಮೀನರಸಿಂಹ ದೇವರ ಚರಿತೆ', ೧೯೫೨.

೪೧. ರಾಜಪುರೋಹಿತ ಜಯತೀರ್ಥ, 'ಕನಕಗಿರಿ' ಇಂಡಿಯಾ ಬುಕ್ ಹೌಸ್, ಬೆಂಗಳೂರು, ೧೯೭೭.

೪೨. ರಾಮಚಂದ್ರರಾವ್, 'ಪುರಂದರ ಸಾಹಿತ್ಯ ದರ್ಶನ', ಸಂ.೧, ಜೀವನ ದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೪೩. ಶ್ರೀರಾಮ ಇಟ್ಟಣ್ಣವರ್, 'ಹಲಗಲಿ ಗ್ರಾಮ' ಜಾನಪದ ವೀರಶೈವ ಅಧ್ಯಯನ ಆಕಾಡೆಮಿ, ಶ್ರೀ ನಾಗೂರು ರುದ್ರಾಕ್ಷಿಮಠ, ಬೆಳಗಾಂ.

೪೪. ಲಕ್ಷ್ಮಣ ತೆಲಗಾವಿ, 'ಕೆ.ರಾಮಸ್ವಾಮಯ್ಯಂಗಾರವರ ಜೀರ್ಣ ವಿಜಯನಗರಾದರ್ಶಂ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೫. ಲಕ್ಕಪ್ಪಗೌಡ ಎಚ್.ಜೆ, 'ಒಗಟುಗಳು', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೬. ವರದರಾಜ್‌ರಾವ್ ಜೆ, 'ಕುಮಾರರಾಮನ ಸಾಂಗತ್ಯಗಳು', ಮೈಸೂರು ವಿ.ವಿ, ಮೈಸೂರು, ೧೯೬೬.

೪೭. ವಿಷ್ಣುತೀರ್ಥ ಪಿ., 'ಶ್ರೀ ಕೂಡಲಿ ಶೃಂಗೇರಿ ಶಾರದಾ ಮಹಾಪೀಠದ ಸಂಕ್ಷಿಪ್ತ ಇತಿಹಾಸ', ಶೃಂಗೇರಿ ಶಾರದಾ ಮಹಾಪೀಠ ಶೃಂಗೇರಿ, ೧೯೮೬.

೪೮. ಶರಣಬಸಪ್ಪ ಕೋಲ್ಕಾರ, 'ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು', ಎಂ.ಫಿಲ್ ಪದವಿಗಾಗಿ ಕರ್ನಾಟಕ ವಿ.ವಿಗೆ ಸಲ್ಲಿಸಿದ ಪ್ರಬಂಧ, ೧೯೯೪.

೪೯. ಶರಣ ಬಸಪ್ಪ ಪಿ, 'ಪ್ರಾದೇಶಿಕ ಪುರಾತತ್ವ ಅನ್ವೇಷಣೆ ಹಾಗೂ ಮಧ್ಯಕಾಲೀನ ಸ್ಮಾರಕಗಳು', ಒಂದು ಅಧ್ಯಯನ ಲೇಖನ ಕನ್ನಡ ವಿಶ್ವವಿದ್ಯಾಕ್ಕೆ ಸಲ್ಲಿಸಿದ್ದು, ೧೯೯೦.

೫೦. ಶ್ರೀನಿವಾಸರೆಡ್ಡಿ ಕೆ., 'ಆನೆಗೊಂದಿ ಸ್ಥಳ ಮಹಿಮೆ ಹಾಗೂ ಇತಿಹಾಸ ದರ್ಶನ', ೨೦೦೭.

೫೧. ಸುರೇಶ ಕೆ.ಎಂ. ಮಾಡಲಗೇರಿ ಕೊಟ್ರೇಶ್, 'ಕರ್ನಾಟಕ ದೇವಾಲಯ ಕೋಶ', ಕೊಪ್ಪಳ ಜಿಲ್ಲೆ, ಕನ್ನಡ ವಿ.ವಿ. ಹಂಪಿ, ೨೦೦೧.

೫೨. ಹುಣಸಗಿ ಪ್ರಕಾಶ್, 'ಗಂಗಾವತಿ ತಾಲೂಕು ದರ್ಶನ', ಇಂಡಿಯಾ ಬುಕ್ ಹೌಸ್, ಬೆಂಗಳೂರು, ೧೯೮೭.

೫೩. ಸುಜಾತಾ ಮಲ್ಲನಗೌಡರ್, 'ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು ಒಂದು ಅಧ್ಯಯನ', ಕನ್ನಡ ವಿ.ವಿ.ಹಂಪಿ.

೫೪. ಹನುಮಂತಪ್ಪ ತಾರೀಹಳ್ಳಿ, 'ಹೊಸಪೇಟೆ ನಾಯಕರು ಏಳು ಕೇರಿಗಳ ಸಾಂಸ್ಕೃತಿಕ ಅಧ್ಯಯನ,' ಕನ್ನಡ ವಿ.ವಿ. ಹಂಪಿ, ೨೦೦೧.

೫೫. ಹಿರೇಮಠ ಎಸ್.ಎಸ್. 'ಜಾತ್ರೆಗಳು' ಸಮತಾ ಪ್ರಕಾಶನ, ಹೊಸಪೇಟೆ, ೧೯೯೩.

೫೬. Subramanyam R **Vijayanagara in History of Midivial** Deccan vol No.1 ED. by H.K. Shivani and P.M. Joshi.

೫೬. Gazetter of India, Mysore state Bellary District.

ಸೋಬಾನೆ ಹಾಡು

ಅರಮನೆ ಅಂಗಳಾದ ಸರಿ ಹಂದರವಾಕಿ
ತಳಿರು ತೋರಣವ ಕಟ್ಟಿದರಮ್ಮ ಸೋಬಾನವೇ || ೨ ಸಲ ||

ಹಸಿರು ಸೀರಿಯನುಟ್ಟು ನಡವೀಗೆ ಒಡ್ಯಾಣಿಟ್ಟು
ಗಾಜಿನ ಬಳಿಯ ಇಟ್ಟಾಳಮ್ಮ ಸೋಬಾನವೇ

ಪಟ್ಟೇದ ಮಂಚದ ಮ್ಯಾಗೆ ಸೃಷ್ಟಿ ದಂಪತಿಗಳು
ಬಟ್ಟೇಲೆಣ್ಣೆರಿಶಿಣ ಧರಿಸಿದರಮ್ಮ ಸೋಬಾನವೇ

ಶರಣರು ಶರಣರು ಕೂಡಿ ಅನುಭಾವದಡಿಗೆಯ ಮಾಡಿ
ಶರಣರೆಲ್ಲ ಹೊಗಳಿದರಮ್ಮ ಸೋಬಾನವೇ

ಆನಿ ಅಂಬಾರಿ ಸಾಲು ಮೇಲ ಮಂಟಪಗಳು
ಮುತ್ತಿನ ಮುಯ್ಯ ಮಾಡಿದರಮ್ಮ ಸೋಬಾನವೆ.

ಆರತಿ ಪದ

ಆರತಿ ಮಾಡನು ಬಾರೆ ಸಖಿ
ಬಾರೆ ಸಖಿ ಉಡುರಾಜ ಮುಖಿ

ಬಾಲಗೋಪಾಲಕೃಷ್ಣ ಕೊಳಲೂದುತಲಿ
ನಳಿನಾಕ್ಷಿಯರು ಮನ ಕಾಯ್ದುತಲಿ
ಕಾಯ್ದುತಲಿ ಮುದ ತೋರುತಲಿ - ೧

ಕೊಳಲೂದಲಿ ಕಡಲಾಲ್ದ ಮರನೇರಿ
ಎಳತುಳಸೀವನ ಮಾಲೆ ಕೊರಳೊಳು
ಸೆಳೆಯುವನು ಕ್ಲೇಶ ಕಳೆಯುವನು - ೨

ಬೀಸುವ ಹಾಡು

ನಾಳೇನೆ ಬರುವದು ನಾಗರಪಂಚಮಿ
ದೊರೆಯೆ ನಮ್ಮಣ್ಣ ಕರಿಯ ಬಂದಾನ
ದೇವಾ ಹಿಡಿ ದಾನ್ಯವ

ಬಂದಂತ ಅಣ್ಣಾಗ ಗಿಂಡಿಲಿ ನೀರ ಕೊಟ್ಟು
ಕಂಬ ಮರಿ ಮಾಡಿ ಅಳತಾಳ
ದೇವಾ ಹಿಡಿ ದಾನ್ಯವ

ಅಕ್ಕೆನ್ನ ಕುದಿವಾಗ ಮಲ್ಲಿಗೂವ ಅರಳುವಾಗ
ಮನಿದೂಲ ಕಡಲಿ ಬೆಳದವ
ದೇವಾ ಹಿಡಿ ದಾನ್ಯವ

ಮನ್ಯದ ಹೊಲ ಕಡಲಿ ಬೆಳದದ ತಂಗೆಮ್ಮ
ಮಾಡನು ಮಗನ ಮದವೀಯ
ದೇವಾ ಹಿಡಿ ದಾನ್ಯವ

ಕರೆ ಸೀರಿ ಉಟಗೊಂಡು ಕೆರಿ ನೀರಿಗೆ ನಾನೋದೆ
ಕೇರಿಯಾಳ ಗಂಗಾ ಸೆರಗಿಡದ
ದೇವಾ ಹಿಡಿ ದಾನ್ಯವ

ಕೇರಿಯಾಳ ಗಂಗಾ ಸೆರಗಿಡಿದ ಕೇಳ್ಯಾಳೆ
ಕರದೆಷ್ಟವ್ ಇದ ಬಿಳಿದೆಷ್ಟವ್
ದೇವಾ ಹಿಡಿ ದಾನ್ಯವ

ಕರದವ್ವ ಕಂಪಲಿ ಬಿಳಿದವ್ವ ಬಳ್ಳಾರಿ
ಸೆರಗಿನ ಬಣ್ಣ ಕಾವತಾಳ
ದೇವಾ ಹಿಡಿ ದಾನ್ಯವ

ಸೆರಗಿನ ಬಣ್ಣ ಕಾವತಾಳ ಕನಗೀರಿ
ದೊರೆಯೇ ನಮ್ಮಣ್ಣ ಬಡಿಸ್ಯಾನ
ದೇವಾ ಹಿಡಿ ದಾನ್ಯವ

ಮಳೆರಾಯ ಹಾಡು

ಬಿತ್ತಿದ ಫಲಗಳ ಬತ್ತಿ ಹೋಗಲಿತಾವೊ
ಅಪ್ಪಯ್ಯ ಮಳೆಯ ಕರಣಿಸೋ

ಕೋಲೆನ್ನಿರೋ ಕೋಲು ಕೋಲ
ಅಪ್ಪಯ್ಯ ಮಳೆಯ ಕರಣಿಸೋ

ಬತ್ತಕ ಬಾಯಿ ಬಿಡುತಾರ ಕೋ....
ಮಾಡಿದ ಫಲಗಳ ಬಾಡಿ ಹೋಗಲಿತಾವೊ

ಮಾದೇವ ಮಳಿಯ ಕರಣಿಸೋ ಕೋ...
ಮಾದೇವ ಮಳಿಯ ಕರಣಿಸೋ ಈ ಲೋಕ

ಅನ್ನಕ ಬಾಯಿ ಬಿಡತದ ಕೋ....
ನಾಟಿದ ಫಲಗಳ ದಾಟಿ ಹೋಗಲಿತ್ಯಾವೊ

ಗ್ಯಾನಣ್ಣ ಮಳಿಯ ಕರಣಿಸೋ ಕೋ...
ಕಟ್ಟಲಾರದ ಮಣಕ ಕೈಕಾಲ ಬಿಡತಾವೊ

ಅಪ್ಪಯ್ಯ ಮಳಿಯ ಕರಣಿಸೋ ಕೋ....
ಅಪ್ಪಯ್ಯ ಮಳಿಯ ಕರಣಿಸೋ ಈ ಲೋಕ

ಬತ್ತಕ ಬಾಯಿ ಬಿಡುತಾರ ಕೋ...
ಮುದಿ ಎತ್ತು ಮುದಿ ಆಕಳ ಮುಗಲ ನೋಡಲಿತ್ಯಾವ

ಗ್ಯಾನಣ್ಣ ಮಳಿಯ ಕರಣಿಸೋ ಕೋ...
ಬಣ್ಣದ ಎಳಿಯಂತೆ ಕಣ್ಣಿಗೆ ನೆರಿಬಂದು

ಅಣ್ಣ ಸಂಜೀವನ ಗುಡಿ ಮುಂದೆ ಕೋ
ಅಂಬಾರದ ನಿಚ್ಚಣಿಕಿ ಹೊಂದೀಲಿ ಬಂದ್ಯೆದಾವ

ತುಂಬಿ ಬಂದಾದ ಸಮುದ್ರವ ಕೋ...
ಆವರಿಗಿ ಮನಿಯಾಗ ಹಾಲಿಗೆ ನುಗ್ಗಾಕಿ
ಹಾಲುಕ್ಕಿ ಹಳ್ಳ ಹರದವ ಕೋ....
ಹಾಲುಕ್ಕಿ ಹಳ್ಳ ಹರದವ
ಮೋಹದ ಮಗನು ಶಿವನಾದ ಕೋ...
ಉಪ್ಪರಿಗಿ ಮನಿಯಾಗ ತುಪ್ಪಕ ಒಗಣ್ಯಾಕಿ
ತುಪ್ಪುಕ್ಕಿ ಹಳ್ಳ ಹರುದಾವ ಕೋ..
ಟೋಪಿನ ಹಚ್ಚಡದ ಗ್ಯಾನಪ್ಪಯ್ಯನ ಆಕಳಿಸಿ
ಮರೆಯ ಕರದಾನ ಕೋ...

ಮಾಯಾಬಜಾರ ನೋಡ

ಮಾಯಾ ಬಜಾರ ನೋಡ
ಮಾತೀಲೆ ಕೊಂಡಾಡಿ ಮೂರಗಸಿ ನೋಡ
ಮೂರು ನಾಮದ ದೇವರ ನೋಡ
ಮಾಯಾ ಬಜಾರ ನೋಡ

ಚದುರನ ಪಾದಗಟ್ಟಿ
ಚಿದಾನಂದ ಸ್ವಾಮಿ ಬೆಟ್ಟಿ
ಸಂಜೀವ ಮೂರುತಿ ಸತ್ಯ ಪ್ರತಾಪ ಜಟ್ಟಿ
ಮಾಯಾ ಬಜಾರ ನೋಡ

ತೊಂಡಿ ತೇರಪ್ಪನ ಕಂಠಿ
ತೊಡಕಿನ ಬಾಲಗಂಟಿ
ತೂಗುತ್ತಿರುವ ತೊಟ್ಟಿಲ ಕಣ್ಣಿಕಟ್ಟಿ
ಮಾಯಾ ಬಜಾರ ನೋಡ

ವೆಂಕಟಪತಿ ಮಾನಪ್ಪಯನ ಗಿಂಡಿಬಾವಿ
ಜೇನ ತಿಂದಂಗ ಸವಿ
ಜೈ ವೆಂಕಟ ಕವಿ ಅಮೃತಕ್ಕೆ ಹಣ್ಣು ಕಾಯಿ
ಮಾಯಾ ಬಜಾರ ನೋಡ

ಗೊರ್‍ಯಾಳ ದುರ್ಗದ್ಯಾಮ
ಕೇರ್‍ಯಾನ ಮಾಟೂರು ಪಾಮ
ಹಲಗಿ ಕೈ ದಿಮದಿಮ ಹಗಲಿ ರಾತ್ರಿ ಸಮಸಮ
ಮಾಯಾ ಬಜಾರ ನೋಡ

ಚೆಂದುಳ್ಳ ಗೋವಿನ ಗಂಡ
ಹೋಳಗಿ ಉಂಡ ನಂದಿ ಕೋಲಕಂಡ
ಮಾಯಾ ಬಜಾರ ನೋಡ
ಕಲ್ಲಕಂಬ ಕಲ್ಮಠ

ಕೊಪ್ಪಳದಗಸಿ ದಿಟ
ಮಲ್ಲಾಪುರ ಅಗಸಿ ದೊರೆ ಪಟ
ಮಾಯಾ ಬಜಾರ ನೋಡ
ತಾಯಿ ಸುಂಕ್ಲಮ್ಮನ ಗಾನ

ಯಮನೂರು ಪೀರ ದೀನ
ಸಂಕಟ ಬಂದಾಗ ವೆಂಕಟರಮಣ
ಮಾಯಾ ಬಜಾರ ನೋಡ

ಮರಿಮಾಯಿ ಮಾತಂಗಿ
ಕರಿವೀರನ ಜಂಗಿ
ಜತಿಗೌರಿ ಗಂಗಿ ಜಗತ್ತಕ್ಕ ಅಕ್ಕತಂಗಿ
ಮಾಯಾ ಬಜಾರ ನೋಡ

ಕೋಟಿ ಕೊತ್ತಲ ಹನುಮ
ನೀಟಾದ ಬಸವನ ಮಹಿಮ
ಪ್ಯಾಟಿಯಲ್ಲಮ್ಮನ ಪಂಪಾಪತಿ ಹುಣ್ಣಿಮೆ ನೋಡ
ಮಾಯಾ ಬಜಾರ ನೋಡ

ಪುಷ್ಪ ಜಯಂತಿ ಜಳಕ
ಕರ್ಪೂರ ದೀವಣಿಗಿ ಬೆಳಕ
ಗರುಡನ ಮೇಲೆ ಕನಕ ಸಡಗರ ದಿನ ದಿನಕ
ಮಾಯಾ ಬಜಾರ ನೋಡ

ಪಾಪನಾಶನ ಕೊಂಡ
ಆಪಿನ ತೆನಿಮಂಡ
ಆತನ ತೆಲಿದುಂಡ ಆರಗಾಲಿ ತೇರ ಕಂಡ
ಮಾಯಾ ಬಜಾರ ನೋಡ

ಹಂತಿಯ ಹಾಡು

ಒಕ್ಕಲಿಗ್ಯಾರೆರಡೆತ್ತು ಒಕ್ಕಲ ಮೇಯ್ವಾವ
ಹಳ್ಳದ ನೀರ ಕುಡದಾವ | ನಮ್ಮ ಬಸವ
ಬೆಳ್ಳಕ್ಕಿ ಹಿಂಡು ಬೆದರಾವ ||

ಹಬ್ಬೆಳ್ಳಿ ಹುಬ್ಬಳ್ಳಿ ಹಬ್ಯೆತೊ ರಸಬಳ್ಳಿ
ತಗ್ಗಿನಾಗ್ಯೆತೊ ಕನಗೀರಿ | ಕನಕನ
ಹುಬ್ಬಿನಾಗ್ಯೆತೊ ಎಳಿನಾಮ ||

ಮೂರುನಾಮ ಮುತ್ತಿನ ಗೋಪಾಳ
ಹೊತ್ತೇರಿ ಬರುವ ಅವರ್ಯಾರೊ | ಕನಗೀರಿ
ಗಚ್ಚಿನ ಗುಡಿಯ ಕನಕಪ್ಪ

ಮುತ್ತಿನ ಮೂಗುತಿ ನಕ್ಕರ ಸುಲಿಪಲ್ಲ
ಅಕ್ಕ ನೀನ್ಯಾರ ಮಗಳಮ್ಮ | ಕನಗೀರಿ
ಗಚ್ಚಿನ ಗುಡಿಯ ದುರುಗಮ್ಮ

ಕೆಂದೆತ್ತು ಕಟಿಗೆಂಡು ಕಂದನ ಮುಂದಿಟಗಂಡು
ಬಂದಿದ್ದಳೇನು ಜಾತರಿಗೆ | ಆ ಬಾಲೆ
ತಂದಿದ್ದಳೇನು ಕರಿಗಡಬು

ಕೋಲಾಟದ ಹಾಡು

ಮಂಗಳಗೌರಿ ಮಂದೀಗಿ ಸ್ವರ್ಣ ಗೌರಿ
ಶಂಬೋ ಶಂಕರನ ಸತಿಗೌರಿ | ರನ್ನದ ಕೋಲೆ
ಸೂರ್ಯ ಚಂದ್ರಮನ ಬೆಳಕೀಲೆ ಹೊರಟಾಳ ಕೋಲೆ

ಕಂಬಾರ ನಾಗಪ್ಪನ ಮನಿಗೌರಿ ಹೊಂಟಾಳ
ಪಂಚಮುಖದ ಗೌರಿ ಉಟ್ಟಾಳ ಕಂಚಿನ ಸೀರಿ
ಪಂಚಾಳ ರಾಮಣ್ಣನ ಮನಿಗೌರಿ ರನ್ನದ ಕೋಲೆ
ಹೂವಿನ ಕೋಲೆ

ನಿತ್ರಿ ಗೌರಮ್ಮನ ಅತ್ತಿ ಕರಿಯಲಿ ಬಂದು
ಮುತ್ತಿನ ಸೆರಗ ಮುಗಿದಿಲ್ಲೆ ರನ್ನದ ಕೋಲೆ
ಹೂವಿನ ಕೋಲೆ

ಮುತ್ತಿನ ಸೆರಗ ಮುಗದಿಲ್ಲ ಶಿವರಾಯ
ಹುಣ್ಣಿಮೆ ಮಾಡಿ ಕಳಿವ್ಯಾವೊ
ರನ್ನದ ಕೋಲೆ ಹೂವಿನ ಕೋಲೆ

ತಾಯಿ ಗೌರಮ್ಮನ ಮಾವನ ಮನೀಗೆ ಕಳುವಿ
ಬಾಗಿಲಿನ್ಯಾಗ ಹೊಗ್ಸನೆ
ರನ್ನದ ಕೋಲೆ ಹೂವಿನ ಕೋಲೆ

ಕಳುವಿ ಬಂದೇವ ನಮ್ಮ ಕಳವುಳ್ಳ ಗೌರನ
ಕೌಳಿ ಹೂವಿಗಿನ್ನ ಚಲುವೀನ
ರನ್ನದ ಕೋಲೆ ಹೂವಿನ ಕೋಲೆ

ಕೌಳಿ ಹೂವಿಗಿನ್ನ ಚಲುವಿ ಗೌರಮ್ಮನ
ಕಳುವಿ ಬಂದೇವ ಶಿವನ ಅರಮನೆಗೆ
ರನ್ನದ ಕೋಲೆ ಹೂವಿನ ಕೋಲೆ

ದಿಟ್ಟ ಬಂದೇವ್ ತಮ್ಮ ಮಟ್ಟದ ಮರಿಗೌಡ
ಸೃಷ್ಟ್ಯವುಳ್ಳ ಶಿವನ ಸತಿ ಗೌರಿ
ರನ್ನದ ಕೋಲೆ ಹೂವಿನ ಕೋಲೆ

ಬಸುರಿ ಬಯಕೆ ಹಾಡು

ಎಳ್ಳು ಹಚ್ಚಿದ ರೊಟ್ಟಿ
ಎಣ್ಣೆ ಬದನೆಕಾಯಿ
ಹೊಳೆಯ ದಂಡೇಲಿ ಕುಂತು
ಉಂಡೇನಂತಾಳೆ
ಬಾಲನ ಬಯಕೇಲಿ ಬಯಸೇನಂತಾಳೆ - ೧

ಮೊಸರು ಅನ್ನದ ಬುತ್ತಿ
ಹಸುರು ನಿಂಬಿಯ ಹೋಳು
ಬೆಳದಿಂಗಳಿಗೆ ಕುಂತು
ಊಟ ಮಾಡೇನಂತಾಳೆ
ಕಂದನ ಬಯಕೆಲಿ ಬಯಸೇನಂತಾಳೆ - ೨

ಕಾಲಾಗ ಕಾಲುಪಿಲ್ಲೆ
ನಡುವಿನ್ಯಾಗ ಪಟ್ಟಿಡಾಬು
ಮುಂದಾಕ ಮೂರು ಹೆಜ್ಜೆ ನಡದೇನಂತಾಳೆ
ಬಾಲನ ಬಯಕೇಲಿ ಬಯಸೇನಂತಾಳೆ - ೩

ಮ್ಯಾಣದೋಳು ತವರು ಮನಿ
ಲಿಂಗ ಮುದ್ರಿಕೆ ಸೀರೆಯನುಟ್ಟು
ಟೋಪ ಸೆರಗ ಮೇಲಮಾಡಿ
ಉಟ್ಟೇನಂತಾಳೆ
ಬಾಲನ ಬಯಕೇಲಿ ಬಯಸೇನಂತಾಳೆ - ೪

ಒಗಟುಗಳು

೧. ಸುತ್ತಮುತ್ತ ಸುಣ್ಣದ ಗೋಡೆ, ಎಲ್ಲಿಯೂ ಬಾಗಿಲು ಇಲ್ಲ - ತತ್ತಿ, ಮೊಟ್ಟೆ

೨. ಗಿಡಗಿಡಕ್ಕ ಕುಡುಗೋಲು ಕಟ್ಟೇನಿ - ಹುಣಸಿಕಾಯಿ

೩. ಬಂಡೀ ಹೋಗತೈತಿ ಭಂಡಾರ ಚಲ್ಲತೈತಿ - ಬೀಸುವ ಕಲ್ಲು

೪. ಚೋಟುದ್ದ ಹುಡುಗಿಗೆ ಮಾರುದ್ದ ಜಡೆ - ಸೂಜಿ, ದಾರ

೫. ಗಿಡ್ಡೀನ ಗುದ್ದಿದರೆ ಮನೆ ತುಂಬಾ ಮಕ್ಳು - ಬೆಳ್ಳುಳ್ಳಿ

೬. ಮನೆಯಲ್ಲ ತಿರುಗುತ್ತೆ ಮೂಲ್ಯಾಗ ಕೂರುತ್ತೆ - ಕಸಬರಿಗೆ

೭. ಊರೆಲ್ಲ ತಿರುಗುತ್ತೆ ಮೂಲ್ಯಾಗ ಕೂಡುತ್ತೆ - ಚಪ್ಪಲಿ

೮. ಕೀರಿಟ ಉಂಟು ಕೃಷ್ಣನಲ್ಲ, ಬಾಲ ಉಂಟು ಹನುಮನಲ್ಲ, ಹತ್ತು ತಲೆ ಉಂಟು ರಾವಣನಲ್ಲ, ಹಾಗಾದ್ರೆ ನಾನ್ಯರು - ಈರೇಕಾಯಿ

೯. ಊರಿಗೆ ಒಕ್ಕಲುದಾರ, ಜಂತಿಗೆ ಜಮೀನ್ದಾರ, ಬಚ್ಚಲ ಬಹದ್ದೂರ - ನಾಯಿ, ಇಲಿ, ಕಪ್ಪೆ

೧೦. ಅಂಕುಡೊಂಕಿನ ಬಾವಿ, ಶಂಬು ಚಕ್ರದ ಬಾವಿ ಇಣುಕಿ ನೋಡಿದರೆ ಒಂದು ಹನಿ ನೀರಿಲ್ಲ - ಕಿವಿ

೧೧. ಬೆಳ್ಳಿ ಚಡಿ, ನೆಲಕ್ಕೆ ಹೊಡಿ - ಸಿಂಬಳ

೧೨. ಗಿಡ ಗಿಡಕ್ಕೆ ಗುಂಡಕಲ್ಲು ಕಟ್ಟೇನಿ - ಮಾವಿನಕಾಯಿ

೧೩. ಅಪ್ಪನ ದುಡ್ಡು ಎಣಿಸಲಾರೆ, ಅಮ್ಮನ ಸೀರೆ ಮಡಚಲಾರೆ - ನಕ್ಷತ್ರ, ಆಕಾಶ.

೧೪. ಕರಿ ಸೀರೆ ಉಟ್ಟಾಳ, ಕಾಲುಂಗ್ರ ತೊಟ್ಟಾಳ ಮೇಲೆ ಕೆಳಗೆ ಓಡಾಡ್ತಾಳ - ಒನಕೆ

೧೫. ಹೋಗುವಾಗ ಒಂದು ಬರುವಾಗ ಎರಡು - ತೆಂಗಿನಕಾಯಿ

೧೬. ಕತ್ತಲಲ್ಲಿ ಕರೆಮ್ಮ ಕುಂತಾಳ - ಅಂಚು

೧೭. ಸಂತ್ಯಾಗ ತರತಾರ, ಮುಂದಿಟಗಂಡು ಅಳತಾರ - ಉಳ್ಳಾಗಡ್ಡಿ

೧೮. ತಾರೆ ಗಿಂಡಿ ತತ್ತರೆ ಗಿಂಡಿ ಮುಚ್ಚುಳ ತೆಗೆದರೆ ಮುನ್ನೂರು ಗಿಂಡಿ - ದಾಳಿಂಬೆ

೧೯. ಮನೆಲ್ಲರಿಗೆ ಒಂದೇ ಕುಂಡಿ - ಬಚ್ಚಲಮೋರಿ

೨೦. ಕಟ್ಟೆ ಇಲ್ಲದ ಕೆರೇಲಿ ತಟ್ಟೆ ತೇಲಿಕೆಂಡು ಹೋಗತದೆ - ಚಂದ್ರ

೨೧. ಒಂದು ತೇಲುತ್ತೆ, ಒಂದು ಮುಳುಗುತ್ತೆ, ಒಂದು ಕರಗುತ್ತೆ - ಎಲೆ, ಅಡಿಕೆ, ಸುಣ್ಣ

೨೨. ಹಸಿರು ಕಮಾನ, ಬೆಳ್ಳಿ ವಿಮಾನ ಅದರಾಗ ಕುಂತಾನ ಕರೆಬಟ್ಟೆ ಜವಾನ - ಸೀತಾಫಲ

೨೩. ಸುತ್ತಲು ಸುರಿಯುವುದು, ನೆತ್ತಿಯಲಿ ಉಂಬುವುದು, ಎತ್ತಿದರೆ ಎರಡು ಓಳಾಗುವುದು - ಬೀಸುವ ಕಲ್ಲು

೨೪. ಕರದರೆ ಬರಂಗಿಲ್ಲ, ಹಿಡಿದರೆ ಬರತ್ತಾಳೆ - ತಂಬಿಗೆ

೨೫. ಮೂಲೇಲಿ ಇರೋ ಮುದುಕಿಗೆ ಮೈಯಲ್ಲಾ ಕಣ್ಣು - ಜರಡಿ

೨೬. ಗಿಡಕ್ಕ ನೀರು, ನೀರಿಗೆ ಬೇರು, ಬೇರಿಗೆ ಬೆಂಕಿ - ಪ್ರಣತಿ

೨೭. ಬಡ ಬಡ ಬಂದ, ಅಂಗಿ ಬಿಚ್ಚಿದ, ಬಾಯಕ ಬಿದ್ದ - ಬಾಳೆಹಣ್ಣು

೨೮. ಸಂತ್ಯಾಗ ಎರಡು ಎತ್ತು ತಂದೀನಿ ಬಲಗಡೇದು ಎಡಕ್ಕ ಬರಂಗಿಲ್ಲ ಎಡಗಡೇದು ಬಲಗಡೆ ಬರಂಗಿಲ್ಲ - ಚಪ್ಪಲಿ

೨೯. ಮೇಲೆ ಬಂಗಾರ ಒಳಗೆ ಬೆಳ್ಳಿ - ತೆಂಗಿನಕಾಯಿ

ಗಾದೆಗಳು

೧. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ

೨. ಬೆಳೆಯುವ ಸಿರಿ ಮೊಳಕೆಯಲ್ಲಿ

೩. ಸಾವಿರ ಹೆಂಡತಿ ಸರದಾರ ಮನೆ ಹೆಂಡತಿ ಪಿಂಜಾರ

೪. ಕೈಗೆಟುಕದ ದ್ರಾಕ್ಷಿ ಉಳಿಯಾದಂತೆ

೫. ನಾಳೆ ಅಂದವನ ಮನೆ ಹಾಳು

೬. ಹುಣಸೆ ಮುಪ್ಪಾದರೂ ಉಳಿ ಮುಪ್ಪೆ

೭. ಹೂವಿನ ಜೊತೆ ನಾರು ಸ್ವರ್ಗ ಸೇರಿದಂತೆ

೮. ಬೆಂಕಿ ಇರದೆ ಹೊಗೆ ಬರಲ್ಲ

೯. ಬೆಳ್ಳಗಿರೋದೆಲ್ಲ ಹಾಲಲ್ಲ

೧೦. ಆಯ ನೋಡಿ ಪಾಯ ಹಾಕು

೧೧. ಮಾಡಿದುಣ್ಣೋ ಮಹರಾಯ

೧೨. ಹರಿಕೆ ಹನ್ನೆರಡು ವರ್ಷ ಮುಡುಪು ಮೂವತ್ತು ವರ್ಷ

೧೩. ಹೋಯಿತಲ್ಲ ಪೀಡೆ ಎಂದರೆ ಬಂದೆ ನಾ ಗವಾಕ್ಷಿಯಲ್ಲಿ ಅಂದಂಗೆ

೧೪. ಎಲ್ಲರ ಮನೆ ದೋಸೆ ತೂತು

೧೫. ಎತ್ತು ಏರೆಗೆ ಎಳೆದರೆ ಕೋಣ ಕೆರೆಗೆ ಎಳದಂಗೆ

೧೬. ಎದ್ದರೆ ಕಾಲು ಇಡಿತಾರೆ ಬಿದ್ದರೆ ಜುಟ್ಟು ಇಡೀತಾರೆ

೧೭. ಮಾತು ಮನೆ ಹಾಳು ಮಾಡ್ತು ತೂತು ಹೊಲೆ ಹಾಳು ಮಾಡ್ತು

೧೮. ಊರು ಚಿಂತಿ ಮಾಡಿ ಮುಲ್ಲಾ ಸೊರಗಿದನಂತೆ

೧೯. ತೋಳ ಹಳ್ಳಕ್ಕೆ ಬಿದ್ರೆ ಆಳಿಗೊಂದು ಕಲ್ಲು

೨೦. ಹಿಟ್ಟು ಇದ್ದಷ್ಟು ರೊಟ್ಟಿ

೨೧. ಹಾಡ್ತಾ ಹಾಡ್ತಾ ರಾಗ ಉಗುಳ್ತಾ ಉಗುಳ್ತಾ ರೋಗ

೨೨. ಬೇಲಿ ಎದ್ದು ಹೊಲ ಮೇಯ್ದಂತೆ

೨೩. ನೆಲಕ್ಕೆ ಬಿದ್ರೂ ಮೀಸೆ ಮಣ್ಣಾಗಲಿಲ್ಲ ಅಂದ್ರಂತೆ

೨೪. ನಾಯಿಬಾಲ ಡೊಂಕು

೨೫. ಹೊಟ್ಟೆಗೆ ಇಟ್ಟಿಲ್ಲದಿದ್ರು ಜುಟ್ಟಿಗೆ ಮಲ್ಲಿಗೆ ಕೇಳಿದ್ರಂತೆ

೨೬. ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂಗೆ

೨೭. ಅಳಿಯ ಮನೆ ತೊಳೆದಂತೆ

೨೮. ತಿರ್‍ಕೊಂಡು ತಿಂದ್ರು ಕರಕೊಂಡು ತಿನ್ನು

೨೯. ಜಾತಿ ಬಿಟ್ಟರೂ ನೀತಿ ಬಿಡಬಾರದು

೩೦. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ.

೩೧. ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂದುವಿಲ್ಲ

೩೨. ಬಯಸಿ ಬಾಳೆಹಣ್ಣು ತಿಂದ್ರೆ ಕಿಸಗಾಲಂತ ಮಗ ಹುಟ್ಟಿದ್ನಂತೆ

೩೩. ನಾಲಿಗೆ ಒಳ್ಳೆಯದಾದ್ರೆ ನಾಡೆಲ್ಲ ಒಳ್ಳೆಯದೇ

೩೪. ಇಬ್ಬರ ಜಗಳ ಮೂರನೇಯವನಿಗೆ ಲಾಭ

೩೫. ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳುಮುಳ್ಳು

೩೬. ಕಳ್ಳನಿಗೊಂದು ಪಿಳ್ಳೆನೆವ

೩೭. ಕುಣಿಲಾರದೆ ನೆಲ ಡೊಂಕು ಅಂದ್ರಂತೆ

೩೮. ಜಾಣರಿಗೆ ಮಾತಿನ ಪೆಟ್ಟು ಕೋಣನಿಗೆ ಲತ್ತೆಯ ಪೆಟ್ಟು

೩೯. ಮುಲ್ಲಾನಿಗೂ ಗೋಕುಲಸ್ವಾಮಿಗೂ ಏನು ಸಂಬಂಧ

೪೦. ಕಬ್ಬಿಣದಂಗಡ್ಯಾಗ ಇಲಿಗೇನು ಕೆಲಸ

೪೧. ಹಿರೆ ಅಕ್ಕನ ಚಾಳಿ ಮನಿಮಂದೀಗೆಲ್ಲ

೪೨. ತಾಯಿಯಂತೆ ಮಗಳು, ನೂಲಿನಂತೆ ಸೀರೆ.

೪೩. ನಗಡಿಯಂತ ರೋಗ ಇಲ್ಲ ಬುಗುಡಿಯಂತ ವಸ್ತು ಇಲ್ಲ

೪೪. ಬೊಗಳೊ ನಾಯಿ ಕಚ್ಚಂಗಿಲ್ಲ, ಕಚ್ಚೊನಾಯಿ ಬೊಗಳೊಂಗಿಲ್ಲ

೪೫. ಬಡವನ ಸಿಟ್ಟು ದವಡೆಗೆ ಮೂಲ

೪೬. ದಾನಕ್ಕೆ ಎಮ್ಮೆ ಕೊಟ್ರೆ ಹಲ್ಲು ಎಣಿಸಿದ್ನಂತೆ

೪೭. ಮೀಸೆ ಬಂದೋನಿಗೆ ದೇಶ ಕಾಣಲ್ಲ, ಮೊಲೆ ಬಂದೋಳಿಗೆ ನೆಲ ಕಾಣಲ್ಲ

೪೮. ಊರ ಸುಟ್ರು ಹನುಮಪ್ಪ ಹೊರಗ

೪೯. ಮಾಡಿದೋರು ಉಣತಾರೆ ಮಣದಂತ ಕಡುಬು

೫೦. ಕೈ ಕೆಸರಾದರೆ ಬಾಯಿ ಮೊಸರು

೫೧. ಹಾಸಿಗೆ ಇದ್ದಷ್ಟು ಕಾಲು ಚಾಚು

೫೨. ಮಾತು ಮನಿ ಹಾಳು ಮಾಡ್ತು, ತೂತು ಒಲಿ ಕೆಡಿಸ್ತು

೫೩. ಗಂಡ ಸತ್ಮೇಲೆ ಹೆಂಡತಿಗೆ ಬುದ್ದಿ ಬಂತಂತೆ

೫೪. ಉಗುರು ಉಪ್ಪು ಜಾಡ್ಸೋನಲ್ಲ

೫೫. ಉಂಡ ಕೈಲೆ ಕಾಗೆ ಹೊಡಯೋನಲ್ಲ

೫೬. ಗಂಡ ಸೇರದೆ ಇದ್ರೆ ಗುಂಡ ಕಲ್ಲು ಸೇರಲ್ಲ

೫೭. ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು

೫೮. ಎತ್ತಿಗೆ ಜ್ವರ ಬಂದ್ರೆ, ಎಮ್ಮೆಗೆ ಬರೆ ಹಾಕಿದ್ರಂತೆ

೫೯. ಅತಿಯಾದರೆ ಅಮೃತವೂ ವಿಷ

೬೦. ಗಂಡು ಕೂತು ಕೆಟ್ಟ, ಹೆಣ್ಣು ತಿರುಗಿ ಕೆಟ್ಟಳು

೬೧. ಅಳೋ ಗಂಡಸನ್ನು, ನಗೋ ಹೆಂಗಸನ್ನು ನಂಬಬಾರದು

೬೨. ಗದ್ದಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಿದನಂತೆ

೬೩. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ

೬೪. ಅಕ್ಕ ಸತ್ರೆ ಅಮವಾಸೆ ನಿಲ್ಲಲ್ಲ

೬೫. ತಾಯಿ ಇದ್ದರೆ ತವರು ಹೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

೬೬. ಆಚಾರ ಹೇಳೋದು ಬದ್ನಿಕಾಯಿ ತಿನ್ನೋದು

೬೭. ಮಾಡೋದು ಅನಾಚಾರ, ಮನೆ ಮುಂದೆ ಬೃಂದಾವನ

೬೮. ಸಾಯ್ತೀನಿ ಸಾಯ್ತೀನಿ ಅಂತ ಸಾವಿರ ಕೋಳಿ ತಿಂದ್ನಂತೆ

೬೯. ಗಂಡ ಹೆಂಡಿರ ಜಗಳ ಉಂಡು ಮಲಗೋ ತನಕ

೭೦. ಅಜ್ಜಿಗೆ ಮೊಮ್ಮಗಳ ಚಿಂತೆ, ಮೊಮ್ಮಗಳಿಗೆ ಮಿಂಡನ ಚಿಂತೆ

೭೧. ಕುಲ ಕೆಟ್ರೂ ಸುಖ ಪಡಬೇಕು

೭೨. ಊರ ದೆವ್ವ ಬಂದು ಮನೆ ದೆವ್ವನ್ನ ಓಡಿಸಿತಂತೆ

೭೩. ಊರಾಗಿಂದು ತಂದು ಸೀರ್‍ಯಾ ಬಿಟಗೊಂಡಂಗಾತು

೭೪. ಆಡೋ ದಾಸ್ರಿಂದೆ ಹೋದಂತೆ

೭೫. ಆಡಿದ್ದಾಡೋ ಕಿಸಬಾಯಿ ದಾಸ

೭೬. ಮನೆ ಕಟ್ಟಿ ನೋಡು ಮದುವೆ ಮಾಡಿ ನೋಡು

೭೭. ಮುಲಾಜಿಗೆ ಮದುವಿ ಆಗಿ ಹಡಿಲಾರದೆ ಸತ್ತಳಂತೆ

೭೮. ಮುಖನೋಡಿ ಮಣೆ ಹಾಕ್ತಾರ

೭೯. ಗುಬ್ಬಿ ಮೇಲೆ ಬ್ರಾಹ್ಮಸ್ತ್ರ

೮೦. ಬೆರಳು ಕೊಟ್ರೆ ಹಸ್ತಾನೆ ನುಂಗ್ತಾರೆ

೮೧. ಹೆಣ್ಣು ಮಕ್ಕಳ ಬುದ್ದಿ ಮೊಣಕಾಲು ಕೆಳಗೆ

೮೨. ಉಗುರು ಸುತ್ತಾಗೈತೆ ಉಚ್ಚವಯ್ಯಿ ಅಂದ್ರೆ, ಕಾಲ್ಮಡಿ ಕಟ್ಟಾಗಿ ಮೂರು ತಿಂಗಳು ಆಯ್ತಂದ್ರಂತೆ.

೮೩. ಶಂಖದಿಂದ ಬಂದ್ರೆ ತೀರ್ಥ

೮೪. ಹಣ್ಣು ತಿಂದೋನು ಪಾರಾದ, ಸಿಪ್ಪೆ ತಿಂದೋನು ಸಿಗೆಬಿದ್ದ

೮೫. ಸಂಕಟ ಬಂದಾಗ ವೆಂಕಟ ರಮಣ

೮೬. ಮೇಲೆಲ್ಲ ತಳಕ ಒಳಗೆಲ್ಲ ಉಳುಕು

೮೭. ವಿನಾಶ ಕಾಲಕ್ಕೆ ವಿಪರೀತ ಬುದ್ದಿ

೮೮. ಸದಾಶಿವನಿಗೆ ಅದೇ ಧ್ಯಾನ

೮೯. ಮಧ್ಯ ರಾತ್ರೀಲಿ ಸಿರಿ ಬಂದ್ರೆ, ಅರ್ಧ ರಾತ್ರೀಲಿ ಕೊಡೆ ಹಿಡಿದ್ನಂತೆ

೯೦. ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ

೯೧. ತೊಂಡೇಕಾಟಕ್ಕೆ ಬೇಲಿ ಸಾಕ್ಷಿ

೯೨. ಹೊಸ ನೀರು ಬಂದು ಹಳೆ ನೀರ್ನ ಕೊಚ್ಕೊಂಡೋಯ್ತು

೯೩. ಹುಟ್ಟುಗುಣ ಸುಟ್ರು ಹೋಗಲ್ಲ

೯೪. ಮೂರು ವರುಷದ ಬುದ್ದಿ ನೂರು ವರುಷದ ತನಕ

೯೫. ಅಟ್ಟ ಮೇಲೆ ಒಲೆ ಉರಿತು, ಕೆಟ್ಟ ಮೇಲೆ ಬುದ್ದಿ ಬಂತು

೯೬. ಹೆತ್ತೋರಿಗೆ ಹೆಗ್ಗಣ ಮುದ್ದು

೯೭. ಈಚಲಗಿಡದ ಕೆಳ ಕುಂತು ಮಜ್ಜಿಗೆ ಕುಡದರೂ ಸರಾಯಿ ಕುಡದಂಗೆ

೯೮. ಆಳಿಗೆ ಆಳಿದ್ರೆ ಮೇಲಾಳಿಗೆ ತಲೆನೋವು

೯೯. ಕತ್ತೆ ಮರಿ ಚಂದ, ಹೊಸದ್ರಲ್ಲಿ ಅತ್ತೆ ಚಂದ

೧೦೦. ವಯಸ್ಸ್ಯಾಗ ಕತ್ತೇನು ಸುಂದರವಾಗಿ ಕಾಣುತ್ತೆ

ಒಡಪುಗಳು

೧. ಹಗ್ಗತಗಂಡು ಬಡದರ ಮಗ್ಗಲಿಗೆ ಬರ್ತಾಳೆ - ಹೆಂಡ್ತಿ ಹೆಸರು

೨. ತಿಪ್ಪಿಮ್ಯಾಲೆ ಕುಂತು ಉಪ್ಪಿಟ್ಟು ತಿಂತಾಳ - ಹೆಂಡತಿ ಹೆಸರು

೩. ಕರಿಕುದರಿ ತಗೊಂಡು ಕರ್‍ಯಾಕ ಹೋದರೆ ಮೈನೆರದಿಲ್ಲ ಅಂತ ನ್ಯಾಯ ಮಾಡ್ತಾಳ - ಹೆಂಡತಿ ಹೆಸರು

೪. ಬರಬರಾಟ ಬಂಗಾರ, ತಾಟ ನಮ್ಮವರು ಬಂದ್ರು ಉಣ್ಣಾಕ, ನಾಹೋದೆ ನೀಡಾಕ, ನತ್ತ ಬಿತ್ತ ಪಟಕ್ಕ ಮುದ್ದು ಕೊಟ್ಟ ಲಟಕ್ - ಗಂಡನ ಹೆಸರು

೫. ಎಡಕ್ಕೆ ಎಣೆ ದೀಪ, ಬಲಕ್ಕೆ ತುಪ್ಪದ ದೀಪ, ಶೃಂಗಾರ ಗದ್ದಿ ಮ್ಯಾಲೆ ಕುಂತು ಶಿವಪೂಜೆ ಮಾಡತಾಳ - ಹೆಂಡತಿ ಹೆಸರು

೬. ಕತ್ತೆ ಅಂತ ಬೈತಾರೆ ಮತ್ತೆ ಮುಂದೆ ಕರಿತಾರೆ ಸುತ್ತ ಮುತ್ತ ನೋಡುತರೆ ಮುತ್ತು ಕೊಟ್ಟು ಹೋಗುತಾರೆ - ಗಂಡನ ಹೆಸರು

೭. ಒಣಕಿಲೆ ಹೊಡದರೆ ಕುಣಕಂತ ಬರ್ತಾಳೆ - ಹೆಂಡತಿ ಹೆಸರು

೮. ಬಾಳೆಪಟ್ಟೆ ಸೀರೆ ಬಾದಾಮಿ ಬಣ್ಣದ ಕುಬುಸ, ಬಾವಿ ನೀರಿಗೆ ಹೋದ್ರೆ ಬಾಯಿ ಬಿಟಗಂಡ ಕುಂದ್ರುತಾರ - ಗಂಡನ ಹೆಸರು

೯. ಮಳಿಗೆ ಬಗ್ಗೊಳಲ್ಲ, ಬಿಸಿಲಿಗೆ ತಗ್ಗೊಳಲ್ಲ, ಎಷ್ಟೆ ಕಷ್ಟ ಬಂದು ಸಹಿಸ್ತಾಳೆ - ಹೆಂಡತಿ ಹೆಸರು

೧೦. ಕುಚ್ಚ ಕಡಬು ಬೆಲ್ಲದ ಬೇಳೆ, ಹೆಚ್ಚಾಗಂಗ ತಿಂದು ಬೆಚ್ಚಗ ಮಲಿಕ್ಕೆಂತಾಳ - ಹೆಂಡತಿ ಹೆಸರು

೧೧. ಉಂಗುರು ಕೂದಲು, ಬಂಗಾರ ಬೈತಲೆ, ಅಂಗಳದಾಗ ಕುಂತು ರಂಗೋಲಿ ಹಾಕ್ತಾಳೆ - ಹೆಂಡತಿ ಹೆಸರು

೧೨. ಗುಲಾಬಿ ಗುಂಪು ಮಲ್ಲಿಗೆ ಕಂಪು ನಮಗಿಂತ ನಮರಾಯ ತಂಪು - ಗಂಡನ ಹೆಸರು

೧೩. ದ್ರುಪದ ರಾಜನು ದ್ರೌಪತಿ ಸ್ವಯಂವರ ಮಾಡಿ ಪಡೆದ ಯಶಸ್ಸು, ರಾಯರ ಹೆಸರು ಹೇಳುವೆನು ಇತ್ತಕೊಡಿರಿ ನಿಮ್ಮ ಮನಸ್ಸು - ಗಂಡನ ಹೆಸರು

೧೪. ವಿಘ್ನೇಶ್ವರನಿಗೆ ಬೇಡಿಕೊಳ್ಳುವೆನು ಕೊಡು ಎಂದು ಮತಿ, ಲಗ್ನವಾಗಿ ನಾನಾದೆನು ರಾಯರ ಸತಿ - ಗಂಡನ ಹೆಸರು

೧೫. ಕೆರೆ ಮೇಲೆ ಕೆರೆ ನನ ಗಂಡನ ಹೆಸರ ಕೇಳೇರು ಮೈಮೇಲೆ ಮೂರು ಬರೆ - ಗಂಡನ ಹೆಸರು


೧೬. ಹಂಪಿಯಲಿರುವದು ಪಂಪಾಪತಿ ತೇರು, ಅದರ ಮುಂದೆ ಹರಿಯುವುದು ತುಂಗಾಭದ್ರ ನೀರು, ರಾಯರಿಗೆ ಹಾಕುವೆನು ಪರಿಮಳದ ಪನ್ನೀರು - ಗಂಡನ ಹೆಸರು

೧೭. ಸತ್ಯಹರಿಶ್ಚಂದ್ರನು ಸತಿ ಸುತರನ್ನು ಮಾರಿದ್ದು ಸತ್ಯಕ್ಕಾಗಿ, ನಮ ರಾಯರ ಹೆಸರು ಹೇಳುವೆನು ನಿಮ್ಮ ಅಪೇಕ್ಷೆಗಾಗಿ - ಗಂಡನಹೆಸರು

೧೮. ಊರೆಲ್ಲಾ ಸಾರುವೆನು ಡಂಗುರ, ರಾಯರ ಕೈಯಲ್ಲಿ ಇಡುವೆನು ಉಂಗುರ - ಗಂಡನ ಹೆಸರು


೧೯. ಕೊಲ್ಲಾಪುರದ ಮಹಾಲಕ್ಷ್ಮಿಯ ಬಾಗಿಲಿಗೆ ಕಟ್ಟಿರುವುದು ತೋರಣ, ರಾಯರ ಹೆಸರು ಹೇಳುವೆನು ಆರತಿ ಮಾಡಿದ ಕಾರಣ - ಗಂಡನ ಹೆಸರು

೨೦. ಗಚ್ಚಿನ ಕಟ್ಟಿ ಮುತ್ತಿನ ಬಜಾರ, ಬಜಾರದೊಳಗ ಹೋಗಿ ಡಾಬು ಬಂಧಿ ಕೊಳ್ತಾರ - ಗಂಡನ ಹೆಸರು


(ಈ)
ಗಂಗಾವತಿ ತಾಲೂಕು
(ಕೊಪ್ಪಳ ಜಿಲ್ಲೆ)
ಹುಲಿಹೈದರ
ನವಲಿ
ಹನಮನಹಾಳ
ಕನಕಗಿರಿ
ಕರಡಿಗುಡ್ಡ
ಹಿರೇ ಮಾದಿನಾಳ
ಬಂಕಾಪುರ
ಚಿಕ್ಕಮಾದಿನಾಳ
ಹೇಮಗುಡ್ಡ
ಹಿರೇಬೆಣಕಲ್
ಗಂಗಾವತಿ
ತುಂಗಭದ್ರಾ ನದಿ

ಕನಕಗಿರಿಯ ಅಂದಾಜು ತಲನಕ್ಷೆ

(2)



ಕನಕಗಿರಿ ನಕಾಶೆಯ ವಿವರಣೆ

೧) ಕನಕಾಚಲಪತಿ ದೇವಾಲಯ
೨) ಶಂಕರಲಿಂಗ ಮತ್ತು ಅಷ್ಟಮಹಿಷಿ ಕೃಷ್ಣ ದೇವಾಲಯ.
೩) ನೀಲಕಂಠೇಶ್ವರ ದೇವಾಲಯ.
೪) ನಗರೇಶ್ವರ ದೇವಾಲಯ.
೫) ಪಂಪಾಪತಿ ದೇವಾಲಯ.
೬) ಮಲ್ಲಿಕಾರ್ಜುನ ದೇವಾಲಯ
೭) ಬಸವಣ್ಣ ದೇವಾಲಯ.
೮) ಯಲ್ಲಮ್ಮ ದೇವಾಲಯ.
೯) ಮಹಿಷಾಸುರ ಮರ್ದಿನಿ (ಅಂಬಮ್ಮ) ದೇವಾಲಯ.
೧೦) ಗಜಲಕ್ಷ್ಮೀ ದೇವಾಲಯ
೧೧) ಸಂಜೀವಮೂರ್ತಿ (ಎದುರು ಹನುಮಪ್ಪ) ದೇವಾಲಯ.
೧೨) ಗೊಲ್ಲಗೇರಿ ಆಂಜನೇಯ ದೇವಾಲಯ.
೧೩) ಹಿರೇಹಳ್ಳದ ಆಂಜನೇಯ ದೇವಾಲಯ.
೧೪) ಹಿರೇಹಳ್ಳದ ಬಸವಣ್ಣ ದೇವಾಲಯ.
೧೫) ಅಚ್ಚಮ್ಮ ಬಾವಿ.
೧೬) ಹಿರೇಹಳ್ಳದ ಶಿವ ದೇವಾಲಯ.
೧೭) ಸಭಾ ಮಂದಿರ (ವೆಂಕಟರಮಣ ದೇವಾಲಯ?)
೧೮) ಮೌನೇಶ್ವರ ಮಠ.
೧೯) ರಾಮದೇವರ ದೇವಾಲಯ.
೨೦) ಆನೆಗುಂದಿ ಅಗಸಿ.
೨೧) ಚಿದಾನಂದಾವಧೂತರ ಮಠ.
೨೨) ಕನಕಾಚಲಪತಿ ದೇವಾಲಯದ ಮುಂದಿನ ಕೋಟೆ ದ್ವಾರ.
೨೩) ಕನಕನಾಲಾ (ಜಯಂತಿ, ಪುಷ್ಪಾ, ಗೋಪಿಕಾ ಸಂಗಮ ಸ್ಥಾನ)
೨೪) ಶಿವ ಮಂಟಪ.
೨೫) ಅನಂತಶಯನ ದೇವಾಲಯ.
೨೬) ನರಸಿಂಹ ತೀರ್ಥ (ಪುಷ್ಕರಣಿ)
೨೭) ವಿಷ್ಣು ದೇವಾಲಯ.
೨೮) ಸೂರ್ಯ ದೇವಾಲಯ.
೨೯) ವೆಂಕಟಪತಿ ಬಾವಿ.
೩೦) ತೊಂಡೆ ತೆವರಪ್ಪ (ಆಂಜನೇಯ) ದೇವಾಲಯ.
೩೧) ವುಡಚಲಮ್ಮ ದೇವಾಲಯ.
೩೨) ಖಾದರ್ ಭಾಷಾ (ಸಂಭಾಜಿ?) ನ ಗೋರಿ.
೩೩) ರಂಗನಾಥ ದೇವಾಲಯ ಮತ್ತು ಪುಷ್ಕರಣಿ.
೩೪) ಚಿಕ್ಕ ಕನಕಪ್ಪ ಪ್ರತಿಮಾಗೃಹ.
೩೫) ವೀರಭದ್ರ ದೇವಾಲಯ.

ಕನಕಾಚಲ ದೇವಸ್ಥಾನ



ಶ್ರೀ ಕನಕಾಚಲಪತಿ ಲಕ್ಷ್ಮೀನರಸಿಂಹ



ಕನಕಾಚಲ ದೇವಾಲಯದ ರಂಗಮಂಟಪ



ರಂಗಮಂಟಪದ ಗಿರಿಜಾಕಲ್ಯಾಣ ದೃಶ್ಯದ
ಗಾರೆ ಶಿಲ್ಪ ಕಲೆಗಳು



ಕನಕಾಚಲ ದೇವಾಲಯದ ಶಾಸನಗಳು




ಕನಕಾಚಲ ದೇವಾಲಯದ ಮೇಲ್ನೋಟ



ಸಂಜೀವಮೂರ್ತಿ ದೇವಾಲಯ ಮತ್ತು ಕನಕಾಚಲ
ದೇವಾಲಯದ ಮುಖ್ಯ ದ್ವಾರ ಗೋಪುರ



ನಾಯಕ ಅರಸರು ಮತ್ತು ಕುಟುಂಬ ಸದಸ್ಯರು



ಗರುಡೋತ್ಸವ



ಕನಕಾಚಲ ಜಾತ್ರೆ

ಕನಕಗಿರಿ ದೇವಾಲಯಗಳು


ಕೋಟೆಯ ಉತ್ತರ ಅಗಸಿ, ಆಧುನಿಕ ಸ್ವಾಗತ ಕಮಾನು


ಚಿದಾನಂದ ಅವಧೂತ ಮಠ


ಶಂಕರಲಿಂಗ / ಗೋಪಿಕೃಷ್ಣ ದೇವಾಲಯ


ನಗರೇಶ್ವರ ದೇವಸ್ಥಾನ


ನೀಲಕಂಠೇಶ್ವರ ದೇವಾಲಯ


ಮಹಿಷಾಸುರಮರ್ಧಿನಿ ದೇವಾಲಯ


ಪಂಪಾಪತಿ ದೇವಾಲಯ


ವೀರಭದ್ರೇಶ್ವರ ದೇವಾಲಯ


ಗಜಲಕ್ಷ್ಮೀ ದೇವಾಲಯ


ಮಲ್ಲಿಕಾರ್ಜುನ ದೇವಾಲಯ


ಪೇಟೆ ಬಸವೇಶ್ವರ ದೇವಾಲಯ


ಯಲ್ಲಮ್ಮದೇವಿ ದೇವಾಲಯ


ಸುವರ್ಣಗಿರಿ ಸಂಸ್ಥಾನ ಮಠ (ಕಲ್ಮಠ)


ಸುವರ್ಣಗಿರಿ ಸಂಸ್ಥಾನ ಮಠದ ಸಾಮೂಹಿಕ ವಿವಾಹದ ಮೆರವಣಿಗೆ


ಎದುರು ಹನುಮಪ್ಪ ದೇವಾಲಯ

ಕನಕಗಿರಿ ದೇವಾಲಯಗಳು



ಹಿರೇಹಳ್ಳದ ಬಸವೇಶ್ವರ ದೇವಾಲಯ



ರಂಗನಾಥ ದೇವಾಲಯ



ಕಾಳಿಕಾದೇವಿ / ಗೊರಳಕೇರಿ
ದುರ್ಗಮ್ಮದೇವಿ



ಪುಷ್ಕರಣಿ (ನರಸಿಂಹ ತೀರ್ಥಕೊಂಡ)



ಸೂರ್ಯ ದೇವಾಲಯ



ವೆಂಕಟಪತಿ ಬಾವಿ



ವೆಂಕಟಪತಿ ಬಾವಿಯಲ್ಲಿನ ಸಂಗೀತ ವೃಂದ
ಹಾಗೂ ಕುಸ್ತಿಯ ಉಬ್ಬು ಶಿಲ್ಪಗಳು



ಗಿಂಡಿ ಬಾವಿಯಲ್ಲಿನ ಬೇಟೆ ದೃಶ್ಯದ
ಉಬ್ಬು ಶಿಲ್ಪ



ತೊಂಡಿತೇರಪ್ಪ (ಕಂಠಿರಂಗ) ದೇವಾಲಯ



ಮಹಾಂತರ (ಮೌನೇಶ್ವರ) ಮಠ
ಗಿಂಡಿಬಾವಿ

ಛಾಯಾ ಚಿತ್ರಗಳು.



ಮದುವೆ: ಮಧುಮಗನನ್ನು ಮಾಡುವುದು



ಮದುವೆ: ಸುರಗಿ ನೀರು



ಮದುವೆ: ವೈಶ್ಯ ಪದ್ಧತಿಯ ಕಾಶಿಯಾತ್ರೆ



ಮುಸ್ಲಿಂ ಮದುವೆ ಪದ್ಧತಿ:
ವರನು-ವಧುವಿಗೆ ಅಕ್ಕಿ ಹಾಕುವುದು



ಮದುವೆ: ಹೈರಾಣಿ ತರುವುದು



ಮದುವೆ: ವೈಶ್ಯ ಪದ್ಧತಿಯ ಹಂದ್ರಗರಿ
ತರುವುದು



ಮದುವೆ:ಬೀಸುವಕಲ್ಲು, ಒಳ್ಳುಕಲ್ಲು ಪೂಜೆ



ನಾಮಕರಣ



ಋತುಮತಿ ಸಂಪ್ರದಾಯ



ಕಲಾವಿದ ನರಸಿಂಹ ಚಿತ್ರಗಾರ



ಗೋಪಿಕಾ ಸ್ತ್ರೀಯರೊಂದಿಗೆ
ಶ್ರೀ ಕೃಷ್ಣ: ಮಧ್ಯರಂಗದ ಗಾರೆ ಶಿಲ್ಪಗಳು



ಕಲಾಕೃತಿಗಳೊಂದಿಗೆ
ಕಲಾವಿದೆ ಶ್ರೀಮತಿ ಸಂಪತ್ ಲಕ್ಷ್ಮೀ



ಕಾರಹುಣ್ಣಿಮೆ: ಕರಿ ಅರಿಯಲು ಸಿದ್ಧವಾದ
ಎತ್ತಿನ ಅಲಂಕಾರ



ಪುರವಂತರು



ಕಬಡ್ಡಿ ಆಟ

049243

AKSHARA GRANTHALAYA

ACC.NO.049243